"ತಿದ್ದುಪಡಿಯಾಗದ ಪ್ರತಿ/unedited copy/ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಕರ್ನಾಟಕ ವಿಧಾನ ಪರಿಷತ್ತು**

**ನೂರ ಐವತ್ತನಾಲ್ಕನೆಯ ಅಧಿವೇಶನ**

**18ನೇ ಡಿಸೆಂಬರ್ 2024**
**ಬುಧವಾರ**

## ವಿಷಯಾನುಕ್ರಮಣಿಕೆ (INDEX)

1. ಉತ್ತರ ಕರ್ನಾಟಕ ಭಾಗದ ಜ್ವಲಂತ ಸಮಸ್ಯೆಗಳ ಬಗ್ಗೆ ಚರ್ಚೆ ಮಾಡಲು ಅನುಕೂಲವಾಗುವಂತೆ ಸದನದ ಕಲಾಪಗಳನ್ನು ಒಂದು ವಾರದವರೆಗೆ ವಿಸ್ತರಿಸಬೇಕೆನ್ನುವ ಬಗ್ಗೆ.

- ಶ್ರೀ ಸುನೀಲ್ ವಲ್ಯಾಪುರ್
- ಶ್ರೀ ಟಿ.ಎ.ಶರವಣ
- ಶ್ರೀ ಎನ್.ರವಿಕುಮಾರ್
- ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು)
- ಡಾ: ತಳವಾರ್ ಸಾಬಣ್ಣ
- ಶ್ರೀ ಕೃಷ್ಣ ಭೈರೇಗೌಡ (ಕಂದಾಯ ಸಚಿವರು)
- ಶ್ರೀ ಹೆಚ್.ಕೆ.ಪಾಟೀಲ್ (ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು, ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು)

2. ಪ್ರಕಟಣೆ

**"ವಿಧಾನಸಭೆಯು ಅಂಗೀಕರಿಸಿರುವ ವಿಧೇಯಕಗಳಿಗೆ ವಿಧಾನ ಪರಿಷತ್ತಿನ ವಿಧಾನ ಪರಿಷತ್ತಿನ ಸಹಮತಿ ಕೋರಿರುವ ಬಗ್ಗೆ.**

3. ಅಧಿವೇಶನದ ಸಂದರ್ಭದಲ್ಲಿ ಆಯೋಜಿಸಲ್ಪಡುವ ಕಾರ್ಯಕ್ರಮಗಳಿಗೆ ಮಾನ್ಯ ಸದಸ್ಯರನ್ನು ಸಹ ಆಹ್ವಾನಿಸಬೇಕೆನ್ನುವ ಕುರಿತು.

- **ಶ್ರೀ ಕೇಶವ ಪ್ರಸಾದ್ ಎಸ್.**
- **ಶ್ರೀ ಡಿ.ಎಸ್.ಅರುಣ್**

4. ಪ್ರಶ್ನೋತ್ತರಗಳು

**ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು**

**1015 – ರಂಗನಾಥಸ್ವಾಮಿ ದೇವಸ್ಥಾನಕ್ಕೆ ದಾನವಾಗಿ ನೀಡಿರುವ ಜಾಗದ ಕುರಿತು**

- ಶ್ರೀ ಎನ್.ರವಿಕುಮಾರ್
- ಶ್ರೀ ಕೃಷ್ಣ ಭೈರೇಗೌಡ (ಕಂದಾಯ ಸಚಿವರು) (ಸಾರಿಗೆ ಮತ್ತು ಮುಜರಾಯಿ ಸಚಿವರ ಪರವಾಗಿ)

**1083- ರಾಜ್ಯದ ಉಪನೋಂದಣಿ ಕಛೇರಿಗಳ ಇ-ಖಾತಾ ಸಮಸ್ಯೆ ಕುರಿತು**

- ಶ್ರೀ ಶಶೀಲ್ ಜಿ.ನಮೋಶಿ
- ಶ್ರೀ ಕೃಷ್ಣ ಭೈರೇಗೌಡ (ಕಂದಾಯ ಸಚಿವರು)

**1098+1121 – ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಲ್ಲಿ ಸಿ ಅಂಡ್ ಆರ್ ಪರಿಷ್ಕರಣೆ ಆಗದಿರುವ ಕುರಿತು**

- ಶ್ರೀಮತಿ ಹೇಮಲತಾ ನಾಯಕ್
- ಶ್ರೀ ಡಿ.ಎಸ್.ಅರುಣ್
- ಶ್ರೀ ಕೃಷ್ಣ ಬೈರೇಗೌಡ (ಕಂದಾಯ ಸಚಿವರು) (ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರ ಪರವಾಗಿ)

**1073 – ಕಂದಾಯ ಇಲಾಖೆಯಲ್ಲಿ ನಕಲಿ ದಾಖಲೆ ಸೃಷ್ಟಿಸಿ ಅಕ್ರಮ ಎಸಗಿರುವ ಬಗ್ಗೆ**

- ಶ್ರೀ ಎಂ.ಎಲ್.ಅನಿಲ್ ಕುಮಾರ್
- ಶ್ರೀ ಕೃಷ್ಣ ಬೈರೇಗೌಡ (ಕಂದಾಯ ಸಚಿವರು)

**1102 – ರಾಜ್ಯದ ವಿವಿಧ ಜಿಲ್ಲೆ ಹಾಗೂ ತಾಲ್ಲೂಕುಗಳಲ್ಲಿ ಬಸ್ಸುಗಳ ಕೊರತೆ ಕುರಿತು**

- ಶ್ರೀ ಎಸ್.ವ್ಹಿ.ಸಂಕನೂರ
- ಶ್ರೀ ಸಂತೋಷ್ ಎಸ್.ಲಾಡ್ (ಕಾರ್ಮಿಕ ಸಚಿವರು) (ಸಾರಿಗೆ ಮತ್ತು ಮುಜರಾಯಿ ಸಚಿವರ ಪರವಾಗಿ)

**1046 – ಕಾಳಗಿ ತಾಲ್ಲೂಕು ರಚನೆಯಾದ ಮೇಲೆ ಸ್ಥಳಾಂತರಗೊಂಡಿರುವ ಸರ್ಕಾರಿ ಕಛೇರಿಗಳ ಬಗ್ಗೆ**

- ಶ್ರೀ ಜಗದೇವ್ ಗುತ್ತೇದಾರ್
- ಶ್ರೀ ಕೃಷ್ಣ ಬೈರೇಗೌಡ (ಕಂದಾಯ ಸಚಿವರು)

**1009 – ರಾಜ್ಯದಲ್ಲಿರುವ ಒಟ್ಟು ಗೋಶಾಲೆ ಮತ್ತು ಗೋವುಗಳ ಕುರಿತು**

- ಶ್ರೀ ನಿರಾಣಿ ಹಣಮಂತ್ ರುದ್ರಪ್ಪ
- ಶ್ರೀ ಕೆ.ವೆಂಕಟೇಶ್ (ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು)

**1019 – ಮಾಜಿ ಸೈನಿಕರಿಗೆ ಭೂ ಮಂಜೂರಾತಿ ಕುರಿತು**

- ಶ್ರೀ ಸಿ.ಎನ್.ಮಂಜೇಗೌಡ
- ಶ್ರೀ ಕೃಷ್ಣ ಬೈರೇಗೌಡ (ಕಂದಾಯ ಸಚಿವರು)

**1107 – ಕರ್ನಾಟಕ ರಾಜ್ಯದಲ್ಲಿನ ಟೋಲ್ ಕೇಂದ್ರಗಳ ಕುರಿತು**

- ಶ್ರೀ ಮಂಜುನಾಥ ಭಂಡಾರಿ
- ಶ್ರೀ ಸತೀಶ ಜಾರಕಿಹೊಳಿ (ಲೋಕೋಪಯೋಗಿ ಸಚಿವರು)

**1057 – ಕುಮ್ಕಿ ಭೂಮಿಯನ್ನು ಸಕ್ರಮೀಕರಣಗೊಳಿಸುವ ಕುರಿತು**

- ಶ್ರೀ ಪ್ರತಾಪ ಸಿಂಹ ನಾಯಕ್ ಕೆ.
- ಶ್ರೀ ಕೃಷ್ಣ ಬೈರೇಗೌಡ (ಕಂದಾಯ ಸಚಿವರು)

**1112 – ದೇಶಿಯ ಕುರಿ ತಳಿಗಳ ಸಂರಕ್ಷಣೆ ಕುರಿತು**

- ಡಾ: ಯತೀಂದ್ರ ಎಸ್.
- ಶ್ರೀ ಕೆ.ವೆಂಕಟೇಶ್ (ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು)

**1067 – ಪೋಡಿಗಾಗಿ ಸ್ವೀಕರಿಸಿರುವ ಅರ್ಜಿಗಳ ಬಗ್ಗೆ**

- ಶ್ರೀ ರಾಮೋಜಿಗೌಡ
- ಶ್ರೀ ಕೃಷ್ಣ ಭೈರೇಗೌಡ (ಕಂದಾಯ ಸಚಿವರು)

**1093 – ಸ್ವಮಿತ್ವ ಯೋಜನೆಯ ಹಳೆಯ ದಾಖಲಾತಿಗಳು ಕಾಣೆಯಾಗುತ್ತಿರುವ ಕುರಿತು**

- ಶ್ರೀ ಸುನೀಲ್ ವಲ್ಯಾಪುರ್
- ಶ್ರೀ ಕೃಷ್ಣ ಭೈರೇಗೌಡ (ಕಂದಾಯ ಸಚಿವರು)

**ಆ) ತಡೆಹಿಡಿಯಲಾದ ಪ್ರಶ್ನೆಗಳು**

**25– ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಮಂಜೂರಾದ ಭೂಮಿಯ ಕುರಿತು**

- ಶ್ರೀ ಸುನೀಲ್ ವಲ್ಯಾಪುರ್
- ಶ್ರೀ ಕೃಷ್ಣ ಭೈರೇಗೌಡ (ಕಂದಾಯ ಸಚಿವರು)

**951 – ಬಳ್ಳಾರಿಯಲ್ಲಿ ಒಣ ಮೆಣಸಿನಕಾಯಿ ಮಾರುಕಟ್ಟೆ ಸ್ಥಾಪಿಸುವ ಕುರಿತು**

- ಶ್ರೀ ವೈ.ಎಂ.ಸತೀಶ್
- ಶ್ರೀ ಶಿವಾನಂದ ಪಾಟೀಲ (ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ, ಕೃಷಿ ಮಾರುಕಟ್ಟೆ ಸಚಿವರು)

**896 – ಸ್ಥಳೀಯ ಸಂಸ್ಥೆಗಳ ಚುನಾವಣೆ ಕುರಿತು**

- ಶ್ರೀ ಕಿಶೋರ್ ಕುಮಾರ್ ಪುತ್ತೂರ್
- ಶ್ರೀ ರಹೀಂ ಖಾನ್ (ಪೌರಾಡಳಿತ ಹಾಗೂ ಹಜ್ ಸಚಿವರು)

**928 – ಹಾಸನ ಜಿಲ್ಲಾ ಸಹಕಾರಿ ಕೇಂದ್ರ ಬ್ಯಾಂಕ್‌ನ ಸಾಲ ವಿತರಣೆ ಬಗ್ಗೆ**

- ಶ್ರೀ ಎಸ್.ರವಿ
- ಶ್ರೀ ಕ್ಯಾತ್ಸಂದ್ರ ಎನ್. ರಾಜಣ್ಣ (ಸಹಕಾರ ಸಚಿವರು)

**ಇ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು**

**5. ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳು**

**ಅ) ಶಾಲಾ ಮಕ್ಕಳನ್ನು ಕರೆದೊಯ್ಯುವ ವಾಹನಗಳಲ್ಲಿ ಅಗತ್ಯ ಸುರಕ್ಷತಾ ಕ್ರಮ ಕೈಗೊಳ್ಳದಿರುವ ಕುರಿತು.**

- ಶ್ರೀ ಗೋವಿಂದರಾಜು
- ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು)

**ಆ) ನಕಲಿ ಚಿನ್ನಾಭರಣಗಳನ್ನು ಅಡವಿಟ್ಟು, ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್‌ಗೆ ವಂಚಿಸುತ್ತಿರುವವರ ವಿರುದ್ಧ ಕಾನೂನು ಕ್ರಮ ಜರುಗಿಸುವ ಕುರಿತು.**

- ಶ್ರೀ ಕುಶಾಲಪ್ಪ ಎಂ.ಪಿ. (ಸುಜಾ)
- ಶ್ರೀ ಕ್ಯಾತ್ಸಂದ ಎನ್. ರಾಜಣ್ಣ

**ಇ) ಕಾಳಗಿ ಹಾಗೂ ಅಂಕಲಗಾ ಏತ ನೀರಾವರಿ ಯೋಜನೆಗಳಿಗೆ ಅನುದಾನ ಬಿಡುಗಡೆ ಮಾಡುವ ಕುರಿತು.**

- ಶ್ರೀ ಜಗದೇವ್ ಗುತ್ತೇದಾರ್
- ಶ್ರೀ ಎನ್.ಎಸ್.ಬೋಸರಾಜು (ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು)

ಈ) **ಮೂಲಗೇಣಿದಾರರು ಸಲ್ಲಿಸಿರುವ ಅರ್ಜಿಗಳನ್ನು ಇತ್ಯರ್ಥಪಡಿಸಲು ವಿಶೇಷ ಅಭಿಯೋಜಕರನ್ನು ನೇಮಿಸುವ ಕುರಿತು.**

- ಶ್ರೀ ಐವನ್ ಡಿ'ಸೋಜಾ
- ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು)

**ಉ) ಆರೋಗ್ಯ ಇಲಾಖೆಯ ಆಯುಷ್ಮಾನ್ ಯೋಜನೆಯಡಿಯಲ್ಲಿ ಹಿರಿಯ ನಾಗರಿಕರಿಗೆ ಸೂಕ್ತ ಸೇವೆಯನ್ನು ಒದಗಿಸುವ ಕುರಿತು.**

- ಶ್ರೀ ಪಿ.ಹೆಚ್. ಪೂಜಾರ್
- ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು)

**ಊ) ಕಲಬುರಗಿ ಜಿಲ್ಲೆಯ ಮಲ್ಲಾಬಾದ್ ಏತ ನೀರಾವರಿ ಯೋಜನೆಯ ಕಾಮಗಾರಿಯನ್ನು ಪೂರ್ಣಗೊಳಿಸುವ ಕುರಿತು.**

- ಡಾ: ಬಿ.ಜಿ. ಪಾಟೀಲ
- ಶ್ರೀ ಡಿ.ಕೆ. ಶಿವಕುಮಾರ್ (ಉಪ ಮುಖ್ಯಮಂತ್ರಿಗಳು)

**ಋ) ಅಂಗವೈಕಲ್ಯದ ಆಧಾರದ ಮೇಲೆ ಪಾಠ ಬೋಧನೆ ಮಾಡುವ ತರಬೇತಿ ಪಡೆದ ವಿಶೇಷ ಶಿಕ್ಷಕರ ನೇಮಕಾತಿ ಮಾಡಿಕೊಳ್ಳುವ ಬಗ್ಗೆ.**

- ಶ್ರೀ ರಾಮೋಜಿಗೌಡ
- ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು)

**ಎ) ನಡಿಪಟ್ಣ-ಕಾಡಿಪಟ್ಣದ ಅರಬ್ಬಿ ಸಮುದ್ರ ಮತ್ತು ಕಾಮಿನಿ ಹೊಳೆ ನಡುವಿನ ನಿವಾಸಿಗಳಿಗೆ ಹಕ್ಕು ಪತ್ರ ನೀಡುವ ಕುರಿತು.**

- ಶ್ರೀ ಮಂಜುನಾಥ ಭಂಡಾರಿ
- ಶ್ರೀ ಕೆ.ವೆಂಕಟೇಶ್ (ಪಶುಸಂಗೋಪನಾ ಸಚಿವರು)

**ಏ) "ಕ್ಷೀರಧಾರೆ ಯೋಜನೆ" ಯಡಿ ಹೈನುಗಾರರಿಗೆ ನೀಡಬೇಕಾಗಿರುವ ಪ್ರೋತ್ಸಾಹ ಧನ ಮೊತ್ತವನ್ನು ಬಿಡುಗಡೆ ಮಾಡುವ ಬಗ್ಗೆ.**

- ಶ್ರೀ ಸಿ.ಎನ್.ಮಂಜೇಗೌಡ
- ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು)

**ಐ) ಪೌರಕಾರ್ಮಿಕರುಗಳ ವೇತನವನ್ನು ಎಸ್.ಎಫ್.ಸಿ. ಮುಕ್ತ ನಿಧಿಯಿಂದ ಕೂಡಲೇ ವೇತನ ಪಾವತಿಸುವ ಬಗ್ಗೆ.**

- ಶ್ರೀಮತಿ ಉಮಾಶ್ರೀ
- ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು)

**ಒ) ಧರಣಿ ನಿರತರಿಗೆ ಧರಣಿ ನಡೆಯುವ ಸ್ಥಳಗಳಲ್ಲಿ ಶೌಚಾಲಯ, ಕುಡಿಯುವ ನೀರು ಅಗತ್ಯ ಮೂಲಭೂತ ಸೌಲಭ್ಯಗಳನ್ನು ಒದಗಿಸುವ ಬಗ್ಗೆ.**

- ಡಾ॥ ಧನಂಜಯ ಸರ್ಜಿ
- ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು)

**ಓ) ರಾಯಚೂರು, ಬಳ್ಳಾರಿ, ಕೊಪ್ಪಳ ಮತ್ತು ವಿಜಯನಗರದ ಹಾಲು ಒಕ್ಕೂಟದ ಆಡಳಿತ ಮಂಡಳಿ ಚುನಾವಣೆಯನ್ನು ತುರ್ತಾಗಿ ನಡೆಸುವ ಕುರಿತು.**

- ಶ್ರೀ ವೈ.ಎಂ. ಸತೀಶ್
- ಶ್ರೀ ಕ್ಯಾತ್ಸಂದ್ರ ಎನ್.ರಾಜಣ್ಣ (ಸಹಕಾರ ಸಚಿವರು)

## 6. ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳಿಗೆ ಸಂಬಂಧಿಸಿದಂತೆ ಸಚಿವರ ಹೇಳಿಕೆಗಳು

**ಅ) ರಾಜ್ಯದ ರಾಜ್ಯ ಪಠ್ಯಕ್ರಮದ ವಿದ್ಯಾರ್ಥಿಗಳಿಗೆ ಆಗುತ್ತಿರುವ ತಾರತಮ್ಯ ಸರಿಪಡಿಸಲು ಪಠ್ಯಕ್ರಮ ಪರಿಷ್ಕರಿಸುವ ಕುರಿತು.**

- ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು) (ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ಸಚಿವರ ಪರವಾಗಿ)

**ಆ) ನ್ಯಾ. ಸದಾಶಿವ ಆಯೋಗದ ವರದಿಯನ್ನು ಅಂಗೀಕರಿಸಿ, ಒಳ ಮೀಸಲು ಜಾರಿಗೆ ತರಲು ಕ್ರಮ ಕೈಗೊಳ್ಳುವ ಕುರಿತು.**

- ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು) (ಸಮಾಜ ಕಲ್ಯಾಣ ಸಚಿವರ ಪರವಾಗಿ)

**ಇ) UPCMC ಸರ್ವರ್‌ನಿಂದಾಗಿ ವಿದ್ಯಾರ್ಥಿಗಳು ಪಾವತಿಸಿರುವ ಪರೀಕ್ಷಾ ಶುಲ್ಕವು ವಿಶ್ವವಿದ್ಯಾಲಯಕ್ಕೆ ಸಂದಾಯವಾಗದಿರುವುದರಿಂದ ವಿದ್ಯಾರ್ಥಿಗಳಿಗೆ ತೊಂದರೆಯಾಗಿದ್ದು, ಈಗಾಗಲೇ ಭರ್ತಿ ಮಾಡಿದ ಅರ್ಜಿ ಮತ್ತು ಶುಲ್ಕವನ್ನು ಪರಿಗಣಿಸುವ ಬಗ್ಗೆ.**

- ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು) (ಉನ್ನತ ಶಿಕ್ಷಣ ಸಚಿವರ ಪರವಾಗಿ)

**ಈ) 1955ರ ನಂತರ ಪ್ರಾರಂಭವಾಗಿರುವ ಅನುದಾನ ರಹಿತ ಶಾಲಾ ಕಾಲೇಜುಗಳನ್ನು ಅನುದಾನಕ್ಕೆ ಒಳಪಡಿಸುವ ಬಗ್ಗೆ.**

- ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು) (ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ಸಚಿವರ ಪರವಾಗಿ)

**ಉ) ಬೆಳಗಾವಿ ತಾಲ್ಲೂಕಿನ ಬಸ್ತವಾಡ ಗ್ರಾಮದಲ್ಲಿ ಪ್ರೌಢಶಾಲೆಯನ್ನು ಪ್ರಾರಂಭಿಸುವ ಕುರಿತು.**

- ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು) (ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ಸಚಿವರ ಪರವಾಗಿ)

**ಊ) ಕಂಬಳ ಕ್ರೀಡೆಗಳಿಗೆ 2024-25ನೇ ಸಾಲಿನಲ್ಲಿ ತಲಾ ರೂ. 5 ಲಕ್ಷ ಸಹಾಯಧನ ನೀಡುವ ಹಾಗೂ ಕರ್ನಾಟಕ ಕ್ರೀಡಾ ಪ್ರಾಧಿಕಾರದಿಂದ ಮಾನ್ಯತೆ ನೀಡುವ ಬಗ್ಗೆ.**

- ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು) (ಮುಖ್ಯಮಂತ್ರಿಗಳ ಪರವಾಗಿ)

**ಋ) ಮಲೆನಾಡು ಗಿಡ್ಡ ತಳ ಸಂಶೋಧನೆಗಾಗಿ ಮಾಹಿತಿ ಕೇಂದ್ರವನ್ನು ಪುನರಾರಂಭಿಸಿ ಅಗತ್ಯವಿರುವ ಅನುದಾನ ಬಿಡುಗಡೆ ಮಾಡುವ ಕುರಿತು.**

- ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು) (ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರ ಪರವಾಗಿ)

**ಎ) ಬಿ.ಬಿ.ಎಂ.ಪಿ. ಸೇರಿದಂತೆ ಎಲ್ಲಾ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯ ಬಡಾವಣೆಗಳು ಇ-ಖಾತೆ ಸಂಬಂಧ ರಿಲಿಂಕ್ವಿಶ್ ಡೀಡ್‌ಗೆ ಅವಕಾಶ ಕಲ್ಪಿಸದಿರುವ ಕುರಿತು.**

- ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು) (ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರ ಪರವಾಗಿ)

**ಏ) ಗೆಜೆಟೆಡ್ ಪ್ರೊಬೆಷನರಿ ಪರೀಕ್ಷೆಯ ಪ್ರಶ್ನೆ ಪತ್ರಿಕೆಯ ದೋಷಕ್ಕೆ ಕಾರಣರಾದವರನ್ನು ಕಂಡುಹಿಡಿಯದಿರುವ ಬಗ್ಗೆ.**

- ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು) (ಮುಖ್ಯಮಂತ್ರಿಗಳ ಪರವಾಗಿ)

## 7. ಕಾರ್ಯದರ್ಶಿಯವರ ವರದಿ

ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ ವಿಧೇಯಕಗಳ ಮಂಡನೆ.

## 8. ನಿಯಮ 59ರ ಮೇರೆಗೆ ನಿಲುವಳಿ ಸೂಚನೆ ಮಂಡಿಸಲು ಅನುಮತಿ ಕೋರಿ ಪ್ರಸ್ತಾವ

**"ರಾಯಚೂರು ಶಾಖೋತ್ಪನ್ನ ವಿದ್ಯುತ್ ಕೇಂದ್ರದಲ್ಲಿ ಘಟಕಗಳ ನಿರ್ಮಾಣಕ್ಕೆ ಕರೆದಿರುವ ಟೆಂಡರ್ ಆದೇಶವನ್ನು ರದ್ದುಪಡಿಸಿ ಕಾಮಗಾರಿಗಳ ಅಂದಾಜು ದರಗಳನ್ನು ಮರುಪರಿಶೀಲಿಸಿ ಅವಶ್ಯವಿರುವ ಕಾಮಗಾರಿಗಳಿಗೆ ಮರುಟೆಂಡರ್ ಆಹ್ವಾನಿಸುವ ಕುರಿತು"**

- ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು)
- ಶ್ರೀ ಸಲೀಂ ಅಹಮದ್ (ಸರ್ಕಾರದ ಮುಖ್ಯ ಸಚೇತಕರು)
- ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು)

(ಪ್ರಸ್ತಾವವನ್ನು ತಿರಸ್ಕರಿಸಲಾಯಿತು)

## 9. ಶಾಸನ ರಚನೆ

i) **ವಿಧೇಯಕಗಳ ಪರ್ಯಾಲೋಚನೆ ಹಾಗೂ ಅಂಗೀಕಾರ**

**ಅ) ಕರ್ನಾಟಕ ಧನವಿನಿಯೋಗ (ಸಂಖ್ಯೆ-5) ವಿಧೇಯಕ, 2024**

- ಶ್ರೀ ಸಿದ್ದರಾಮಯ್ಯ (ಮುಖ್ಯಮಂತ್ರಿಗಳು)
- ಶ್ರೀ ಶಶೀಲ್ ಜಿ.ನಮೋಶಿ
- ಶ್ರೀ ಕೆ.ಎ.ತಿಪ್ಪೇಸ್ವಾಮಿ
- ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು)

(ವಿಧೇಯಕ ಅಂಗೀಕರಿಸಲ್ಪಟ್ಟಿತು)

**ii) ವಿಧೇಯಕವನ್ನು ಹಿಂಪಡೆಯುವುದು.**

**ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ (ತಿದ್ದುಪಡಿ) ವಿಧೇಯಕ, 2024**

– ಶ್ರೀ ಬಿ.ಎಸ್.ಸುರೇಶ್ (ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು)

(ವಿಧೇಯಕವನ್ನು ಹಿಂಪಡೆಯಲಾಯಿತು)

**iii) ವಿಧೇಯಕಗಳ ಪರ್ಯಾಲೋಚನೆ ಹಾಗೂ ಅಂಗೀಕಾರ(ಮುಂದುವರೆದುದು)**

**ಆ) ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ (ತಿದ್ದುಪಡಿ) ವಿಧೇಯಕ, 2024**

– ಶ್ರೀ ಪ್ರಿಯಾಂಕ್ ಖರ್ಗೆ (ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು)
– ಶ್ರೀ ಟಿ.ಎ.ಶರವಣ
– ಶ್ರೀ ಕೆ.ಎಸ್.ನವೀನ್
– ಶ್ರೀ ಸಿ.ಟಿ.ರವಿ
– ಶ್ರೀ ಶಶೀಲ್ ಜಿ.ನಮೋಶಿ
– ಶ್ರೀ ಎಸ್.ವ್ಹಿ.ಸಂಕನೂರ
– ಶ್ರೀ ತಳವಾರ್ ಸಾಬಣ್ಣ
– ಶ್ರೀ ಐವನ್ ಡಿ'ಸೋಜಾ
– ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ.
– ಶ್ರೀ ಎನ್.ರವಿಕುಮಾರ್
– ಶ್ರೀಮತಿ ಬಲ್ಕೀಸ್ ಬಾನು
– ಶ್ರೀ ಕೇಶವ ಪ್ರಸಾದ್ ಎಸ್.
– ಶ್ರೀ ಪುಟ್ಟಣ್ಣ
– ಶ್ರೀಮತಿ ಭಾರತಿ ಶೆಟ್ಟಿ
– ಡಾ: ಎಂ.ಸಿ.ಸುಧಾಕರ್ (ಉನ್ನತ ಶಿಕ್ಷಣ)
– ಶ್ರೀ ಬಿ.ಕೆ.ಹರಿಪ್ರಸಾದ್
– ಶ್ರೀ ಹಣಮಂತ್ ರುದ್ರಪ್ಪ ನಿರಾಣಿ
– ಶ್ರೀ ಹೆಚ್.ಕೆ.ಪಾಟೀಲ್ (ಕಾನೂನು, ನ್ಯಾಯ, ಮಾನವ ಹಕ್ಕುಗಳು ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪ್ರವಾಸೋದ್ಯಮ ಸಚಿವರು)
– ಶ್ರೀ ಚಿದಾನಂದ್ ಎಂ.ಗೌಡ
– ಶ್ರೀ ಗೋವಿಂದರಾಜು
– ಶ್ರೀ ಎಂ.ನಾಗರಾಜು
– ಶ್ರೀ ಡಿ.ಎಸ್.ಅರುಣ್
– ಶ್ರೀ ಕೆ.ಎ.ತಿಪ್ಪೇಸ್ವಾಮಿ
– ಶ್ರೀ ಪಿ.ಹೆಚ್.ಪೂಜಾರ್

(ವಿಧೇಯಕ ಅಂಗೀಕರಿಸಲ್ಪಟ್ಟಿತು)

ಇ) **ಕರ್ನಾಟಕ (ಖನಿಜ ಹಕ್ಕುಗಳು ಮತ್ತು ಖನಿಜ ಹೊಂದಿರುವ ಭೂಮಿ) ತೆರಿಗೆ ವಿಧೇಯಕ, 2024**

– ಶ್ರೀ ಎಸ್.ಎಸ್.ಮಲ್ಲಿಕಾರ್ಜುನ (ಗಣಿ ಮತ್ತು ಭೂವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು)

– ಶ್ರೀ ಕೆ.ಎ.ತಿಪ್ಪೇಸ್ವಾಮಿ

– ಶ್ರೀ ವೈ.ಎಂ.ಸತೀಶ್

– ಶ್ರೀ ಪಿ.ಹೆಚ್.ಪೂಜಾರ್

– ಶ್ರೀ ಕೆ.ಎಸ್.ನವೀನ್

– ಶ್ರೀ ನಿರಾಣಿ ಹಣಮಂತ್ ರುದ್ರಪ್ಪ

– ಶ್ರೀ ಸಿ.ಟಿ.ರವಿ

– ಶ್ರೀ ಎನ್.ರವಿಕುಮಾರ್

(ವಿಧೇಯಕ ಅಂಗೀಕರಿಸಲ್ಪಟ್ಟಿತು)

**10. ಚುನಾವಣಾ ಪ್ರಸ್ತಾವ**

**"ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಸೆನೆಟ್‌ಗೆ ಹಾಗೂ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಪ್ರಶಾಸನ ಸಭೆಗೆ ಚುನಾವಣೆ ನಡೆಸುವ ಬದಲು ಮಾನ್ಯ ಶಾಸಕರುಗಳನ್ನು ನಾಮನಿರ್ದೇಶಿಸುವ ಪ್ರಸ್ತಾವ"**

– ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು)

(ಪ್ರಸ್ತಾವ ಅಂಗೀಕೃತವಾಯಿತು)

**11. ಶಾಸನ ರಚನೆ**

**ವಿಧೇಯಕಗಳ ಪರ್ಯಾಲೋಚನೆ ಹಾಗೂ ಅಂಗೀಕಾರ(ಮುಂದುವರೆದುದು)**

**ಈ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಎರಡನೇ ತಿದ್ದುಪಡಿ) ವಿಧೇಯಕ, 2024**

– ಶ್ರೀ ಡಿ.ಕೆ.ಶಿವಕುಮಾರ್ (ಉಪ ಮುಖ್ಯಮಂತ್ರಿಗಳು; ಬೃಹತ್ ಮತ್ತು ಮಧ್ಯಮ ನೀರಾವರಿ, ಬೆಂಗಳೂರು ನಗರಾಭಿವೃದ್ಧಿ ಸಚಿವರು)

– ಶ್ರೀ ಟಿ.ಎ.ಶರವಣ

– ಶ್ರೀ ಸಿ.ಟಿ.ರವಿ

– ಶ್ರೀ ಕೇಶವ ಪ್ರಸಾದ್ ಎಸ್.

(ವಿಧೇಯಕ ಅಂಗೀಕರಿಸಲ್ಪಟ್ಟಿತು)

**ಉ) ಕರ್ನಾಟಕ ಪ್ರವಾಸೋದ್ಯಮ ರೋಪ್‌ವೇಗಳ ವಿಧೇಯಕ, 2024**

– ಶ್ರೀ ಹೆಚ್.ಕೆ.ಪಾಟೀಲ್ (ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪ್ರವಾಸೋದ್ಯಮ ಸಚಿವರು)

– ಶ್ರೀ ಕೆ.ಎ.ತಿಪ್ಪೇಸ್ವಾಮಿ

– ಶ್ರೀ ಕೇಶವ ಪ್ರಸಾದ್ ಎಸ್.

– ಶ್ರೀಮತಿ ಹೇಮಲತಾ ನಾಯಕ್

– ಶ್ರೀ ಸಿ.ಟಿ. ರವಿ

(ವಿಧೇಯಕ ಅಂಗೀಕರಿಸಲ್ಪಟ್ಟಿತು)

**ಊ) ಕರ್ನಾಟಕ ಕಾರ್ಮಿಕ ಕಲ್ಯಾಣ ನಿಧಿ (ತಿದ್ದುಪಡಿ) ವಿಧೇಯಕ, 2024**

- ಶ್ರೀ ಸಂತೋಷ್ ಎಸ್.ಲಾಡ್ (ಕಾರ್ಮಿಕ ಸಚಿವರು)
- ಶ್ರೀ ಕೆ.ಎ.ತಿಪ್ಪೇಸ್ವಾಮಿ
- ಶ್ರೀ ಟಿ.ಎ.ಶರವಣ
- ಶ್ರೀ ಕೇಶವ ಪ್ರಸಾದ್ ಎಸ್.
- ಶ್ರೀ ಐವನ್ ಡಿ'ಸೋಜಾ

(ವಿಧೇಯಕ ಅಂಗೀಕರಿಸಲ್ಪಟ್ಟಿತು)

**ಋ) ಸಿವಿಲ್ ಪ್ರಕ್ರಿಯಾ ಸಂಹಿತೆ (ಕರ್ನಾಟಕ ತಿದ್ದುಪಡಿ) ವಿಧೇಯಕ, 2024**

- ಶ್ರೀ ಹೆಚ್.ಕೆ.ಪಾಟೀಲ್ (ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪ್ರವಾಸೋದ್ಯಮ ಸಚಿವರು)
- ಶ್ರೀ ಪಿ.ಹೆಚ್.ಪೂಜಾರ್
- ಶ್ರೀ ಕೇಶವ ಪ್ರಸಾದ್ ಎಸ್.
- ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ.
- ಶ್ರೀ ಕೆ.ಎ.ತಿಪ್ಪೇಸ್ವಾಮಿ

**(ವಿಧೇಯಕ ಅಂಗೀಕರಿಸಲ್ಪಟ್ಟಿತು)**

**ಎ) ಕರ್ನಾಟಕ ಮೋಟಾರು ವಾಹನಗಳ ತೆರಿಗೆ ನಿರ್ಧರಣೆ (ಎರಡನೆಯ ತಿದ್ದುಪಡಿ) ವಿಧೇಯಕ, 2024**

- ಶ್ರೀ ಸಂತೋಷ್ ಎಸ್.ಲಾಡ್ (ಕಾರ್ಮಿಕ ಸಚಿವರು)
- ಶ್ರೀ ಕೆ.ಎ.ತಿಪ್ಪೇಸ್ವಾಮಿ
- ಶ್ರೀ ಐವನ್ ಡಿ'ಸೋಜಾ
- ಶ್ರೀ ಕೆ.ಎಸ್.ನವೀನ್
- ಶ್ರೀ ಎನ್.ರವಿಕುಮಾರ್
- ಶ್ರೀ ಎಂ.ನಾಗರಾಜು
- ಶ್ರೀ ಬಿ.ಕೆ.ಹರಿಪ್ರಸಾದ್
- ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು)
- ಶ್ರೀಮತಿ ಭಾರತಿ ಶೆಟ್ಟಿ

(ವಿಧೇಯಕ ಅಂಗೀಕರಿಸಲ್ಪಟ್ಟಿತು)

## 12. ಪ್ರಕಟಣೆ

"ಕರ್ನಾಟಕ ವಿಧಾನಸಭೆಯು ಅಂಗೀಕರಿಸಿರುವ 2024ನೇ ಸಾಲಿನ ಮೈಸೂರು ಅಭಿವೃದ್ಧಿ ಪ್ರಾಧಿಕಾರ ವಿಧೇಯಕಕ್ಕೆ ವಿಧಾನ ಪರಿಷತ್ತಿನ ಸಹಮತಿ ಕೋರಿರುವ ಬಗ್ಗೆವುದು"

## 13. ಶಾಸನ ರಚನೆ

**ವಿಧೇಯಕಗಳ ಪರ್ಯಾಲೋಚನೆ ಹಾಗೂ ಅಂಗೀಕಾರ (ಮುಂದುವರೆದುದು)**

**ಏ) ಬಸವನ ಬಾಗೇವಾಡಿ ಅಭಿವೃದ್ಧಿ ಪ್ರಾಧಿಕಾರ ವಿಧೇಯಕ, 2024**

- ಶ್ರೀ ಕೃಷ್ಣ ಭೈರೇಗೌಡ (ಕಂದಾಯ ಸಚಿವರು)
- ಶ್ರೀ ಕೆ.ಎ.ತಿಪ್ಪೇಸ್ವಾಮಿ

- ಶ್ರೀ ಪಿ.ಹೆಚ್.ಪೂಜಾರ್
- ಶ್ರೀ ಕೇಶವ ಪ್ರಸಾದ್ ಎಸ್.
- ಶ್ರೀಮತಿ ಭಾರತಿ ಶೆಟ್ಟಿ

(ವಿಧೇಯಕ ಅಂಗೀಕರಿಸಲ್ಪಟ್ಟಿತು)

**ಐ) ಕರ್ನಾಟಕ ಭೂ ಕಂದಾಯ (ಮೂರನೇ ತಿದ್ದುಪಡಿ ವಿಧೇಯಕ, 2024**

- ಶ್ರೀ ಕೃಷ್ಣ ಭೈರೇಗೌಡ (ಕಂದಾಯ ಸಚಿವರು)

(ವಿಧೇಯಕ ಅಂಗೀಕರಿಸಲ್ಪಟ್ಟಿತು)

## 14. ಗಮನ ಸೆಳೆಯುವ ಸೂಚನೆಗಳು

**ಅ) ಸಿಂಧನೂರು ತಾಲ್ಲೂಕನ್ನು ಜಿಲ್ಲಾ ಕೇಂದ್ರ ಸ್ಥಾನವನ್ನಾಗಿ ಮೇಲ್ದರ್ಜೆಗೇರಿಸಲು ಸಮಿತಿ ರಚಿಸುವ ಕುರಿತು.**

- ಶ್ರೀ ಬಸನಗೌಡ ಬಾದರ್ಲಿ
- ಶ್ರೀ ಕೃಷ್ಣ ಭೈರೇಗೌಡ (ಕಂದಾಯ ಸಚಿವರು)

**ಆ) ಕೇಂದ್ರ ಮತ್ತು ರಾಜ್ಯ ಸರ್ಕಾರ ಸಾರ್ವಜನಿಕರಿಗೆ ವಿವಿಧ ಪಿಂಚಣಿ ಯೋಜನೆಗಾಗಿ ನಿಗದಿಪಡಿಸಿದ ಮಾನದಂಡಗಳ ವ್ಯವಸ್ಥೆಯಿಂದ ಲಕ್ಷಾಂತರ ಪಿಂಚಣಿ ಅರ್ಹರಿರುವ ಕುಟುಂಬಗಳಿಗೆ ಪಿಂಚಣಿ ಪಡೆಯಲು ಅಸಾಧ್ಯವಾಗಿರುವ ಕುರಿತು.**

- ಶ್ರೀ ಐವನ್ ಡಿ'ಸೋಜಾ
- ಶ್ರೀ ಕೃಷ್ಣ ಭೈರೇಗೌಡ (ಕಂದಾಯ ಸಚಿವರು)

## 15. ಮಕ್ಕಳ ಹಕ್ಕುಗಳ ಬಗ್ಗೆ ವಿಶೇಷ ಚರ್ಚೆ

**"ಮಕ್ಕಳಲ್ಲಿ ಪೌಷ್ಟಿಕಾಂಶ ಕೊರತೆ, ಶಿಕ್ಷಣ ಮತ್ತು ಹದಿ ಹರೆಯದ ಮಕ್ಕಳು ಅನುಭವಿಸುತ್ತಿರುವ ಸವಾಲುಗಳು ಹಾಗೂ ಪರಿಹಾರೋಪಾಯಗಳ ಕುರಿತು."**

- ಶ್ರೀ ಐವನ್ ಡಿ'ಸೋಜಾ
- ಶ್ರೀಮತಿ ಭಾರತಿ ಶೆಟ್ಟಿ
- ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು)
- ಶ್ರೀ ಎನ್.ಎಸ್.ಬೋಸರಾಜು
- ಶ್ರೀ ಎನ್.ರವಿಕುಮಾರ್
- ಶ್ರೀ ಕೇಶವ ಪ್ರಸಾದ್ ಎಸ್.
- ಶ್ರೀ ಡಿ.ಟಿ.ಶ್ರೀನಿವಾಸ್(ಡಿಟಿಎಸ್)

~ ~ ~ ~ ~ ~ ~

(941) 18.12.2024 11.40 ಕೆಜಿ-ಆರ್ಎನ್

# ಕರ್ನಾಟಕ ವಿಧಾನ ಪರಿಷತ್ತು

**ಬುಧವಾರ, ದಿನಾಂಕ 18ನೇ ಡಿಸೆಂಬರ್ 2024**

**ಸದನವು ಬೆಳಗಾವಿಯ ಸುವರ್ಣ ವಿಧಾನಸೌಧದಲ್ಲಿರುವ ವಿಧಾನ ಪರಿಷತ್ತಿನ ಸಭಾಂಗಣದಲ್ಲಿ ಬೆಳಗ್ಗೆ 11 ಗಂಟೆ 39 ನಿಮಿಷಗಳಿಗೆ ಸಮಾವೇಶಗೊಂಡಿತು.**

**ಸಭಾಪತಿಯವರಾದ ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರು ಪೀಠದಲ್ಲಿ ಉಪಸ್ಥಿತರಾದರು.**

**1. ಉತ್ತರ ಕರ್ನಾಟಕ ಭಾಗದ ಜ್ವಲಂತ ಸಮಸ್ಯೆಗಳ ಬಗ್ಗೆ ಚರ್ಚೆ ಮಾಡಲು ಅನುಕೂಲವಾಗುವಂತೆ ಸದನದ ಕಲಾಪಗಳನ್ನು ಒಂದು ವಾರದವರೆಗೆ ವಿಸ್ತರಿಸಬೇಕೆನ್ನುವ ಬಗ್ಗೆ.**

**- - - - -**

**ಶ್ರೀ ಸುನೀಲ್ ವಲ್ಯಾಪುರ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಇವತ್ತು ಸದನ ಪ್ರಾರಂಭವಾಗುವುದಕ್ಕೆ ಬೆಳಗ್ಗೆ 10.30 ಗಂಟೆಗೆ ಸಮಯವನ್ನು ಕೊಟ್ಟಿದ್ದೀರಿ. ಆದರೆ, ಇಂದು 12 ಗಂಟೆಗೆ ಅಧಿವೇಶನದ ಬೆಲ್ ಆಗಿದೆ. ನಮಗೆ ಮಾತನಾಡುವುದಕ್ಕೆ ಹೆಚ್ಚಿಗೆ 5 ನಿಮಿಷ ಕೊಡಿ ಎಂದರೆ, ತಾವು ಕೊಡುವುದಿಲ್ಲ. ಈ ಎರಡೆರಡು ಗಂಟೆ ಕಾಯುವುದು, ...

**ಸಭಾಪತಿಯವರು:-** ಮಾನ್ಯ ಸದಸ್ಯರಾದ ಶ್ರೀ ಸುನೀಲ್ ವಲ್ಯಾಪುರ್‌ರವರೇ, ಇಂದು ಬೆಳಗ್ಗೆ 10.30 ಗಂಟೆಗೆ ಅಧಿವೇಶನ ಇತ್ತು. ಆದರೆ, ಇಂದು ಬೆಳಗ್ಗೆ ನನ್ನದೇ ಒಂದು ಕಾರ್ಯಕ್ರಮ ಇತ್ತು. ಹಾಗಾಗಿ, ಅದರ ಸಲುವಾಗಿ ಸದಸ್ಯರು ಬಂದಿದ್ದರು. ಅದಕ್ಕೆ ದಯಮಾಡಿ ಎಲ್ಲರೂ ಕ್ಷಮೆ ಮಾಡಿ.

**ಶ್ರೀ ಸುನೀಲ್ ವಲ್ಯಾಪುರ್:-** ಮಾನ್ಯ ಸಭಾಪತಿಯವರೇ, ನಮಗೂ ಹೇಳಿದ್ದರೆ, ನಾವು ಸಹ ಆ ಕಾರ್ಯಕ್ರಮದಲ್ಲಿ ಭಾಗವಹಿಸುತ್ತಿದ್ದೇವು.

**ಶ್ರೀ ಟಿ.ಎ.ಶರವಣ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ತಾವು ನಮಗೂ ಹೇಳಿದ್ದರೆ, ನಾವು ಸಹ ತಮ್ಮ ಕಾರ್ಯಕ್ರಮವನ್ನು ನೋಡುತ್ತಿದ್ದೇವು. ನಮಗೆ ಮಾಹಿತಿ ಇರಲಿಲ್ಲ.

(ಮುಂದು)

**(942) 18.12.2024 11.50 ಎಂವಿ-ವಿಕೆ** **(ಸಭಾಪತಿಯವರ ಉಪಸ್ಥಿತಿ)**

**ಸಭಾಪತಿಯವರು:-** ಕಾರ್ಯಕ್ರಮವನ್ನು organise ಮಾಡಿದಂತಹವರು ಬೇರೆಯವರು. ಆದುದರಿಂದ, ದಯಮಾಡಿ ಕ್ಷಮಿಸಬೇಕು.

**(ಗೊಂದಲ)**

**ಶ್ರೀ ಎನ್.ರವಿಕುಮಾರ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಆಯಿತು, ತೊಂದರೆ ಇಲ್ಲ. ಆದರೆ, ಸದನವನ್ನು ಒಂದು ವಾರ extend ಮಾಡಿಸಿ. ಏಕೆಂದರೆ, ಸದನದಲ್ಲಿ ಉತ್ತರ ಕರ್ನಾಟಕದ ವಿಷಯಗಳ ಬಗ್ಗೆ ಚರ್ಚೆಯೇ ಆಗಿಲ್ಲ.

**(ಗೊಂದಲ)**

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದ ಸದಸ್ಯರು ವಿರೋಧ ಮಾಡುತ್ತಿದ್ದಾರೆ. ಈ ರೀತಿಯಾದರೆ ಏನಿದು?

**(ಗೊಂದಲ)**

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಅಧಿವೇಶನದ ಮಧ್ಯಭಾಗದಲ್ಲಿ ರಜೆಗಳು ಬಂದಿರುವುದರಿಂದ, ಅಧಿವೇಶನವನ್ನು ಒಂದು ವಾರ extend ಮಾಡಿಸಿ.

**(ಗೊಂದಲ)**

**ಡಾ:ತಳವಾರ್ ಸಾಬಣ್ಣ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಉತ್ತರ ಕರ್ನಾಟಕದ ಬಗ್ಗೆ ಚರ್ಚೆಯೇ ನಡೆಯುತ್ತಿಲ್ಲ.

**(ಗೊಂದಲ)**

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಅಧಿವೇಶನವನ್ನು ಚರ್ಚೆ ಮಾಡುವುದಕ್ಕೆ ಕರೆದಿರುವುದು. ಮಾನ್ಯ ಸದಸ್ಯರುಗಳು ಉತ್ತರ ಕರ್ನಾಟಕದ ಬಗ್ಗೆ ಚರ್ಚೆ ಮಾಡಬೇಕು.

**(ಗೊಂದಲ)**

**ಶ್ರೀ ಶರವಣ ಟಿ.ಎ. (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಸೋಮವಾರದಿಂದ ಒಂದು ವಾರ ಸದನ ನಡೆಯುವುದಕ್ಕೆ ಅವಕಾಶ ಮಾಡಿಕೊಡಿ.

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಜನರ ಅಹವಾಲು ತುಂಬಾ ಇದೆ. ಸಾಕಷ್ಟು ವಿಷಯಗಳ ಬಗ್ಗೆ ಚರ್ಚೆಯಾಗಬೇಕಾಗಿದೆ. ಆದುದರಿಂದ, ಒಂದು ವಾರ ಅಂದರೆ ಸೋಮವಾರದಿಂದ ಶುಕ್ರವಾರದವರೆಗೆ ಅವಕಾಶ ಮಾಡಿಕೊಡಿ.

**(ಗೊಂದಲ)**

**ಶ್ರೀ ಶರವಣ ಟಿ.ಎ.:-** ಮಾನ್ಯ ಸಭಾಪತಿಯವರೇ, ಹೋದ ವಾರ ನಾಲ್ಕು ದಿವಸ ಮುಗಿದು ಹೋಗಿದೆ. ಇವತ್ತು ಅರ್ಧ ದಿವಸ ಮುಗಿದು ಹೋಗಿದೆ. ನಾಳೆ ಅರ್ಧ ದಿವಸವಾಗುವುದರಿಂದ ಏನೂ ಕೆಲಸವಾಗುವುದಿಲ್ಲ. ಇಲ್ಲಿ ಏನೂ ಚರ್ಚೆಯೇ ಪ್ರಾರಂಭವಾಗಿಲ್ಲ. ನಾವು ಉತ್ತರ ಕರ್ನಾಟಕ ಭಾಗದ ಬಗ್ಗೆ ಚರ್ಚೆ ಮಾಡಬೇಕಾಗಿತ್ತು.

**(ಗೊಂದಲ)**

**ಡಾ:ತಳವಾರ್ ಸಾಬಣ್ಣ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಉತ್ತರ ಕರ್ನಾಟಕ ಭಾಗದ ಬಗ್ಗೆ ಚರ್ಚೆ ನಡೆಯುತ್ತಿಲ್ಲ.

**(ಗೊಂದಲ)**

**ಶ್ರೀ ಸುನೀಲ್ ವಲ್ಯಾಪುರ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಸಭಾನಾಯಕರು ಸಮರ್ಥನೆ ಮಾಡುತ್ತಿದ್ದಾರೆ. ಆದರೆ, ಉತ್ತರ ಕರ್ನಾಟಕದ ಬಗ್ಗೆ ಚರ್ಚೆಯೇ ಆಗಿಲ್ಲ.

**(ಗೊಂದಲ)**

**ಶ್ರೀ ಕೃಷ್ಣ ಭೈರೇಗೌಡ (ಕಂದಾಯ ಸಚಿವರು):-** ಮಾನ್ಯ ಸಭಾಪತಿಯವರೇ, ನಾನು ತಮ್ಮಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ, ತಾವು ಅವರನ್ನು ಕರೆದು ತಮ್ಮ ಕಚೇರಿಯಲ್ಲಿ ಚರ್ಚೆ ಮಾಡಿ. ಈಗ ಇರುವ ಸಮಯವನ್ನು ಏಕೆ ವ್ಯರ್ಥ ಮಾಡುವುದು?

**(ಗೊಂದಲ)**

**ಶ್ರೀ ಸುನೀಲ್ ವಲ್ಯಾಪುರ್:-** ಮಾನ್ಯ ಸಭಾಪತಿಯವರೇ, ಕಾರ್ಯಕಲಾಪಗಳ ಸಲಹಾ ಸಮಿತಿ (ಬಿ.ಎ.ಸಿ.) ಸಭೆಯನ್ನು ಕರೆಯಲಿ.

**(ಗೊಂದಲ)**

**ಶ್ರೀ ಕೃಷ್ಣ ಭೈರೇಗೌಡ:-** ಮಾನ್ಯ ಸಭಾಪತಿಯವರೇ, ಈಗ ಸದನ ಪ್ರಾರಂಭವಾಗುವ ಸಮಯ ಸ್ವಲ್ಪ ತಡವಾಗಿದೆ. ಈಗ ತಡವಾಗಿರುವುದರಿಂದ ಮತ್ತೆ ಏಕೆ ಸಮಯವನ್ನು ಹಾಳು ಮಾಡುವುದು? ಮತ್ತೆ ಬಿ.ಎ.ಸಿ. ಸಭೆ ಏಕೆ?

**(ಗೊಂದಲ)**

**ಶ್ರೀ ಶರವಣ ಟಿ.ಎ.:-** ಮಾನ್ಯ ಸಭಾಪತಿಯವರೇ, ನಾವು ಹಾಳು ಮಾಡುತ್ತಿಲ್ಲ. ಮಾನ್ಯ ಸಚಿವರು ಏಕೆ ಹಾಳು ಎಂದು ಹೇಳುತ್ತಾರೆ. ನಾವು ಪೀಠಕ್ಕೆ ಮನವಿ ಮಾಡಿಕೊಂಡು ಕೇಳುತ್ತಿದ್ದೇವೆ. ಮತ್ತೆ ಪ್ರಾರ್ಥನೆ ಮಾಡಿಕೊಳ್ಳುತ್ತಿದ್ದೇವೆ. ಮಾನ್ಯ ಸಚಿವರು ಹಾಳು ಮಾಡುತ್ತಿದ್ದೇವೆಂದು ಏಕೆ ಹೇಳುತ್ತಾರೆ?

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಶರವಣರವರೆ, ಒಂದು ನಿಮಿಷ ಕುಳಿತುಕೊಳ್ಳಿ. ಮಾನ್ಯ ಕಾನೂನು ಸಚಿವರು ಉತ್ತರ ನೀಡುತ್ತಾರೆ.

**(ಗೊಂದಲ)**

**ಶ್ರೀ ಹೆಚ್.ಕೆ.ಪಾಟೀಲ್ (ಕಾನೂನು, ಸಂಸದೀಯ ವ್ಯವಹಾರಗಳ ಮತ್ತು ಶಾಸನ ರಚನಾ ಹಾಗೂ ಪ್ರವಾಸೋದ್ಯಮ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರುಗಳು ಏನು ವಿಷಯವನ್ನು ಪ್ರಸ್ತಾಪಿಸಿದ್ದಾರೆ, ಅದನ್ನು ನಾವು ಯಾರೂ ಅಲ್ಲಗಳೆಯುವುದಿಲ್ಲ. ಅದು ಹಾಗೆ ಆಯಿತು, ಹೀಗೆ ಆಯಿತು ಎನ್ನುವ ಪ್ರಶ್ನೆ ಇಲ್ಲ. ನಾನು ಮತ್ತು ವಿರೋಧ ಪಕ್ಷದ ನಾಯಕರು, ಸರ್ಕಾರದ ಮುಖ್ಯ ಸಚೇತಕರು, ಸನ್ಮಾನ್ಯ ಸಭಾನಾಯಕರು ನಾವೆಲ್ಲರೂ ಸಹ ಮಾನ್ಯ ಸಭಾಪತಿಯವರಿಗೆ ಸಂಬಂಧಪಟ್ಟಂತೆ ಒಂದು ಕಾರ್ಯಕ್ರಮವಿತ್ತು. ಅಂದರೆ, 'ಸೋಲಿಲ್ಲದ ಸರದಾರ' ಎಂಬ ಚಿತ್ರವನ್ನು ಬಿಡುಗಡೆ ಮಾಡಿದರು. ನಾವು ಆ ಕಾರ್ಯಕ್ರಮದಲ್ಲಿ ಸ್ವಲ್ಪ ಸಮಯಪ್ರಜ್ಞೆಯನ್ನು ಕಳೆದುಕೊಂಡು ಹತ್ತರಿಂದ ಇಪ್ಪತ್ತು ನಿಮಿಷ ಹೆಚ್ಚಿಗೆ ಭಾಷಣ ಮಾಡಿದ್ದೆವು. ಹಾಗಾಗಿ, ನಾವು ಏನು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದೆವು. ನಾವು ಆ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರಿಂದ ಸ್ವಲ್ಪ ಚ್ಯುತಿಯಾಗಿದೆ. ಇದನ್ನು ತಾವು ಮನ್ನಿಸಿ. ಮತ್ತೆ ಸಮಯವನ್ನು ಹಾಳು ಮಾಡುವುದು ಬೇಡ. ನಾವು ಈಗ ಒಂದು ಗಂಟೆ ಹೆಚ್ಚಿಗೆ ಚರ್ಚೆ ಮಾಡೋಣ. ನಮಸ್ಕಾರ.

**(ಗೊಂದಲ)**

**ಶ್ರೀ ಡಿ.ಟಿ.ಶ್ರೀನಿವಾಸ್ (ಡಿ.ಟಿ.ಎಸ್.) (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಮಗೆ ಅವಕಾಶ ಮಾಡಿಕೊಟ್ಟಿಲ್ಲವೆಂದು ಬೇಸರವಾಗಿದೆ.

**(ಗೊಂದಲ)**

**ಶ್ರೀ ಸುನೀಲ್ ವಲ್ಯಾಪುರ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ತಾವು ಉತ್ತರ ಕರ್ನಾಟಕ ಭಾಗದವರು. ಉತ್ತರ ಕರ್ನಾಟಕದ ಬಗ್ಗೆ ಚರ್ಚೆಯಾಗಿಲ್ಲವೆಂದು ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ.

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಸುನೀಲ್ ವಲ್ಯಾಪುರ್ ರವರೆ, ಮೊದಲು ತಾವು ಪ್ರತಿದಿನ ಸದನದಲ್ಲಿ ಬಂದು ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಸುನೀಲ್ ವಲ್ಯಾಪುರ್:-** ಮಾನ್ಯ ಸಭಾಪತಿಯವರೇ, ಉತ್ತರ ಕರ್ನಾಟಕದ ಬಗ್ಗೆ ಏನೂ ಚರ್ಚೆಯಾಗಿಲ್ಲ. ಬೆಳಗಾವಿ ಜಿಲ್ಲೆಯಲ್ಲಿ ಸದನ ನಡೆದರೂ ಸಹ ಚರ್ಚೆಯಾಗಿಲ್ಲವೆಂದು ಅನಿಸುತ್ತಿದೆ. ಈ ಭಾಗದ ಜನರು ನಮ್ಮನ್ನು ಕೇಳುತ್ತಿದ್ದಾರೆ.

**(ಗೊಂದಲ)**

**ಸಭಾಪತಿಯವರು:-** ಈಗ ನನ್ನ ಕೆಲಸ ಸದನವನ್ನು ನಡೆಸುವುದು. ಸರ್ಕಾರ ಏನು ತೀರ್ಮಾನ ಮಾಡುತ್ತದೆ, ಆ ತೀರ್ಮಾನದಂತೆ ಸದನ ನಡೆಸುವ ಜವಾಬ್ದಾರಿ ನನ್ನದು. ಈಗಾಗಲೇ ಸರ್ಕಾರ ಅದಕ್ಕೆ ಉತ್ತರ ಹೇಳಿದೆ. ನಾನು ಸದನ ನಡೆಸುವ ಕೆಲಸವನ್ನು ಮಾಡುತ್ತೇನೆ. ತಾವು ಏನು ಹೇಳುತ್ತೀರಿ ಅದನ್ನು ಹೇಳಿ.

**(ಗೊಂದಲ)**

**ಶ್ರೀ ಸುನೀಲ್ ವಲ್ಯಾಪುರ್:-** ಮಾನ್ಯ ಸಭಾಪತಿಯವರೇ, ಎಲ್ಲಾ ಮಾನ್ಯ ಸದಸ್ಯರ ವಿನಂತಿ ಏನೆಂದರೆ, ಸದನವನ್ನು ಇನ್ನು ಒಂದು ವಾರ extension ಮಾಡಿ ಎಂದು ಕೇಳಿಕೊಳ್ಳುತ್ತೇವೆ.

**ಸಭಾಪತಿಯವರು:-** ಸರ್ಕಾರಕ್ಕೆ ತಮ್ಮ ವಿನಂತಿ ಮುಟ್ಟಿದೆ.

**ಶ್ರೀ ಕೇಶವ ಪ್ರಸಾದ್ ಎಸ್. (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಾನು ಒಂದು ನಿಮಿಷ ಮಾತನಾಡುತ್ತೇನೆ.

## 2. <u>ಪ್ರಕಟಣೆ</u>

**"ವಿಧಾನ ಸಭೆಯು ಅಂಗೀಕರಿಸಿರುವ ವಿಧೇಯಕಗಳಿಗೆ ವಿಧಾನ ಪರಿಷತ್ತಿನ ಸಹಮತಿ ಕೋರಿರುವ ಬಗ್ಗೆ."**

**ಸಭಾಪತಿಯವರು:-** ಮಾನ್ಯ ಸಭಾಧ್ಯಕ್ಷರಿಂದ ಈ ಮುಂದಿನ ಸಂದೇಶ ಬಂದಿರುತ್ತದೆ. ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಗಳ 104ನೇ ನಿಯಮದ ಮೇರೆಗೆ ವಿಧಾನ ಸಭೆಯು "ಕರ್ನಾಟಕ ಪ್ರವಾಸೋದ್ಯಮ ರೋಪ್‌ವೇಗಳ ವಿಧೇಯಕ, 2024" ಅನ್ನು ತಿದ್ದುಪಡಿಯೊಂದಿಗೆ ಹಾಗೂ ಈ ಕೆಳಕಂಡ ವಿಧೇಯಕಗಳನ್ನು ಯಾವುದೇ ತಿದ್ದುಪಡಿಗಳಿಲ್ಲದೆ ಅಂಗೀಕರಿಸಿರುತ್ತದೆಂದು ಮತ್ತು ಸದರಿ ವಿಧೇಯಕಗಳಿಗೆ ವಿಧಾನ ಪರಿಷತ್ತಿನ ಸಹಮತಿ ನೀಡಬೇಕೆಂದು ಕೋರಿರುತ್ತಾರೆ.

1. ಕರ್ನಾಟಕ ಭೂ ಕಂದಾಯ (ಮೂರನೇ ತಿದ್ದುಪಡಿ) ವಿಧೇಯಕ, 2024
2. ಕರ್ನಾಟಕ (ಖನಿಜ ಹಕ್ಕುಗಳು ಮತ್ತು ಖನಿಜ ಹೊಂದಿರುವ ಭೂಮಿ) ತೆರಿಗೆ ವಿಧೇಯಕ, 2024
3. ಕರ್ನಾಟಕ ಕಾರ್ಮಿಕ ಕಲ್ಯಾಣ ನಿಧಿ (ತಿದ್ದುಪಡಿ) ವಿಧೇಯಕ, 2024
4. ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ (ತಿದ್ದುಪಡಿ) ವಿಧೇಯಕ, 2024
5. ಕರ್ನಾಟಕ ಧನವಿನಿಯೋಗ (ಸಂ.5) ವಿಧೇಯಕ, 2024
6. ಸಿವಿಲ್ ಪ್ರಕ್ರಿಯಾ ಸಂಹಿತೆ (ಕರ್ನಾಟಕ ತಿದ್ದುಪಡಿ) ವಿಧೇಯಕ, 2024
7. ಕರ್ನಾಟಕ ಮೋಟಾರು ವಾಹನಗಳ ತೆರಿಗೆ ನಿರ್ಧರಣೆ (ಎರಡನೇ ತಿದ್ದುಪಡಿ) ವಿಧೇಯಕ, 2024.

ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮ 104ರ ಮೇರೆಗೆ ವಿಧಾನ ಸಭೆಯು ದಿನಾಂಕ: 16.12.2024ರಂದು "2024ನೇ ಸಾಲಿನ ಕರ್ನಾಟಕ ಪ್ರವಾಸೋದ್ಯಮ ರೋಪ್‌ವೇಗಳ ವಿಧೇಯಕ" ವನ್ನು ತಿದ್ದುಪಡಿಗಳೊಂದಿಗೆ ಅಂಗೀಕರಿಸಿರುತ್ತದೆಂದು ತಿಳಿಸುತ್ತಿದ್ದೇನೆ.

ಈ ವಿಧೇಯಕಕ್ಕೆ ವಿಧಾನ ಪರಿಷತ್ತಿನ ಸಹಮತಿಯನ್ನು ನೀಡಬೇಕೆಂದು ಕೋರುತ್ತೇನೆ. ಅದಕ್ಕೆ ಸದನವು ಒಪ್ಪುತ್ತದೆಂದು ಭಾವಿಸಿದ್ದೇನೆ.

ಮಾನ್ಯ ಕೇಶವ ಪ್ರಸಾದ್.ಎಸ್ ರವರೆ ಈಗ ತಾವು ಮಾತನಾಡಿ.

**3. ಅಧಿವೇಶನದ ಸಂದರ್ಭದಲ್ಲಿ ಆಯೋಜಿಸಲ್ಪಡುವ ಕಾರ್ಯಕ್ರಮಗಳಿಗೆ ಮಾನ್ಯ ಸದಸ್ಯರನ್ನು ಸಹ ಆಹ್ವಾನಿಸಬೇಕೆನ್ನುವ ಕುರಿತು.**

- - - - -

**ಶ್ರೀ ಕೇಶವ ಪ್ರಸಾದ್ ಎಸ್. (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈ ರೀತಿಯ ಕಾರ್ಯಕ್ರಮವಾದಾಗ ತಾರತಮ್ಯ ಸರಿಯಿಲ್ಲ. ನಮಗೆ ಆಹ್ವಾನವೂ ಇರುವುದಿಲ್ಲ ಮತ್ತೆ ಏನು ಕಾರ್ಯಕ್ರಮವೆಂದು ಗೊತ್ತಾಗುವುದಿಲ್ಲ. ಆ ರೀತಿಯ ಕಾರ್ಯಕ್ರಮಗಳಾದಾಗ ನಾವೂ ಸಹ ಕಾರ್ಯಕ್ರಮದಲ್ಲಿ ಭಾಗವಹಿಸುತ್ತೇವೆ. ಹಾಗಾದರೆ, ನಾವು ಇಲ್ಲಿ ಏನು ಎರಡನೇ ದರ್ಜೆಯ ಸದಸ್ಯರೇ?

**ಸಭಾಪತಿಯವರು:-** ಮಾನ್ಯ ಕೇಶವ ಪ್ರಸಾದ್‌ರವರೆ, ಬೇರೆಯವರು ಆ ಕಾರ್ಯಕ್ರಮವನ್ನು ಮಾಡಿದ್ದು. ನನಗೂ ಅದಕ್ಕೂ ಸಂಬಂಧವಿಲ್ಲ.

**ಶ್ರೀ ಕೇಶವ ಪ್ರಸಾದ್ ಎಸ್. (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಾನು ತಮ್ಮ ಮೂಲಕ ಸರ್ಕಾರವನ್ನು ಕೇಳುವುದು. ತಮ್ಮನ್ನು ವಿನಂತಿ ಮಾಡದೇ, ಸರ್ಕಾರಕ್ಕೆ ಮಾಡುವುದಕ್ಕೆ ಆಗುತ್ತದೆಯೇ?

**ಸಭಾಪತಿಯವರು:-** ಆ ಕಾರ್ಯಕ್ರಮವನ್ನು ಸರ್ಕಾರದವರು ಮಾಡಿದ್ದಲ್ಲ. ಅದನ್ನು ಬೇರೆಯವರು ಮಾಡಿದ್ದು. ಮಾನ್ಯ ಮುಖ್ಯಮಂತ್ರಿಗಳು ಒಪ್ಪಿಕೊಂಡಿದ್ದರು ಎಂದು, ಆ ಸಮಯದಲ್ಲಿ ಮಾಡಿದ್ದು. ಅದಕ್ಕೆ ನಾನು ದಯಮಾಡಿ ಕ್ಷಮೆ ನೀಡಬೇಕೆಂದು ಕೇಳಿದ್ದೇನೆ.

**ಶ್ರೀ ಡಿ.ಟಿ.ಶ್ರೀನಿವಾಸ್ (ಡಿ.ಟಿ.ಎಸ್.):-** ಮಾನ್ಯ ಸಭಾಪತಿಯವರೇ, ನಮಗೂ ಕಾರ್ಯಕ್ರಮದಲ್ಲಿ ಅವಕಾಶ ಕಲ್ಪಿಸಿಕೊಟ್ಟಿದ್ದರೆ ಚೆನ್ನಾಗಿರುತ್ತಿತ್ತು.

**ಶ್ರೀ ಡಿ.ಎಸ್.ಅರುಣ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಾವು ಈ ಬಾರಿ lounge ನಲ್ಲಿ ಒಂದೂವರೆ ಗಂಟೆಯಿಂದ ಎರಡು ಗಂಟೆ ಇದ್ದೆವು. ನಾವು ಯಾವಾಗಲೂ ಸಹ lounge ನಲ್ಲಿ ಹೋಗಿ ಕುಳಿತುಕೊಳ್ಳುತ್ತೇವೆ. ನಮಗೆ ಇಲ್ಲಿ ಕಾಫಿ ಮತ್ತು ಟೀ ಬಿಟ್ಟರೆ, ಬೇರೆ ಏನೂ ಸಿಗುವುದಿಲ್ಲ. ನಾನು ನಿನ್ನೆಯ ದಿವಸ ವಿಧಾನ ಸಭೆಗೆ ಹೋಗಿದ್ದೆ. ಅಲ್ಲಿ ಪಾನಿಪುರಿಯಿಂದ ಹಿಡಿದು ಆಮ್ಲೇಟ್ ತನಕ ಎಲ್ಲವೂ ಸಹ ಇತ್ತು. ನಮಗೆ ಇಲ್ಲಿ ಏನೂ facilities ಇಲ್ಲ. ನಾವು ಬೆಳಗ್ಗೆ ಬಂದರೆ ರಾತ್ರಿಯವರೆಗೆ ಎಲ್ಲೂ ಹೋಗುವುದಿಲ್ಲ.

**ಸಭಾಪತಿಯವರು:-** ಅದನ್ನು ಮುಂದಿನ ಬಾರಿ ಸರಿಪಡಿಸೋಣ.

## 4. ಪ್ರಶ್ನೋತ್ತರಗಳು

### ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು

**ಪ್ರಶ್ನೆ ಸಂಖ್ಯೆ: 1015**

**(ಉತ್ತರವನ್ನು ಲಗತ್ತಿಸಿದೆ)**

**ಶ್ರೀ ಎನ್.ರವಿಕುಮಾರ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ನಾನು ಈ ಹಿಂದೆಯೂ ಇದೇ ಪ್ರಶ್ನೆಯನ್ನು ಕೇಳಿದ್ದೆ. ಆಗ ಸಮರ್ಪಕವಾದಂತಹ ಉತ್ತರ ಬಂದಿರಲಿಲ್ಲ. ಈ ಪ್ರಶ್ನೆ ಇರತಕ್ಕಂಥದ್ದು ಒಂದು ದೇವಸ್ಥಾನದ ಜಮೀನಿಗೆ ಸಂಬಂಧಪಟ್ಟಿರುವುದು. ಅದು ಶ್ರೀರಂಗಪಟ್ಟಣದ ಶ್ರೀ ರಂಗನಾಥಸ್ವಾಮಿ ದೇವಸ್ಥಾನ. ಆ ದೇವಸ್ಥಾನದ ಒಟ್ಟು ಜಮೀನು 1,198.34 ಎಕರೆ ಜಾಗ. ಈ ಜಮೀನನ್ನು ಸಾಮಾಜಿಕ, ಧಾರ್ಮಿಕ ಮತ್ತು ಶೈಕ್ಷಣಿಕ ಉದ್ದೇಶಗಳಿಗೆ ಬಳಕೆಯಾಗಬೇಕೆಂದು ದೇವಸ್ಥಾನಕ್ಕೆ ದಾನವನ್ನು ನೀಡಿರುತ್ತಾರೆ. ಆದರೆ, ಈ ದೇವಸ್ಥಾನದ ಜಮೀನನ್ನು ಸರ್ಕಾರ ಬೇರೆಯವರಿಗೆ ಹಂಚಿಕೆ ಮಾಡಿದೆ. ದೇವಸ್ಥಾನದ ಜಮೀನನ್ನು ಜಮೀನು ಇಲ್ಲದೇ ಇರುವಂತಹವರಿಗೆ ಹಂಚಿಕೆ ಮಾಡುವುದಕ್ಕೆ ಬರುತ್ತದೆಯೇ? ಈಗ ಯಾರು ದಾನಿಗಳಿದ್ದಾರೆ, ಅಂದರೆ ಶ್ರೀಮತಿ ದ್ವಾರಕ ಬಾಯಿ ವೇದಾಂತ ರವರು ಧಾರ್ಮಿಕ ಮತ್ತು ಶೈಕ್ಷಣಿಕ ಉದ್ದೇಶಗಳಿಗೆ ಕೊಟ್ಟಿರುವಂತಹ ಜಮೀನನ್ನು ಯಾರೋ ಬಡವರಿಗೆ ಕೊಟ್ಟುಬಿಟ್ಟಿದ್ದೇವೆ ಎಂದರೆ ಅದು ಹೇಗೆ? ಅವರ ಉದ್ದೇಶವೇ ಧಾರ್ಮಿಕ ಮತ್ತು ಶೈಕ್ಷಣಿಕ ಉದ್ದೇಶವಾಗಿದೆ. ಈ ಜಮೀನನ್ನು ಏಕೆ ಹಂಚಿದರು ಎಂಬ ಪ್ರಶ್ನೆಯನ್ನು ಕೇಳುವುದಕ್ಕೆ ಬಯಸುತ್ತೇನೆ.

**ಶ್ರೀ ಕೃಷ್ಣ ಭೈರೇಗೌಡ (ಕಂದಾಯ ಸಚಿವರು) (ಸಾರಿಗೆ ಮತ್ತು ಮುಜರಾಯಿ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಇದನ್ನು ದಾನಿಗಳು ಶ್ರೀ ರಂಗನಾಥಸ್ವಾಮಿ ದೇವಸ್ಥಾನಕ್ಕೆ 1,198.34 ಎಕರೆಯನ್ನು 1939ರಲ್ಲಿ ದಾನವಾಗಿ ನೀಡಿದ್ದಾರೆ. ಇದೆಲ್ಲಾ ತಪ್ಪಾಗಿದ್ದು ಎಲ್ಲಿ ಎಂದರೆ, ಮಾನ್ಯ ಸದಸ್ಯರು ಹೇಳುವುದು ಸರಿಯಿದೆ. ಅದು ಯಾವುದೂ ಇಲ್ಲವೆಂದು ಹೇಳುವಂತಿಲ್ಲ. ಆದರೆ, ತಪ್ಪಾಗಿರುವುದು ಎಲ್ಲಿ ಎಂದರೆ, ಅರಣ್ಯ ಜಮೀನು, ಮುಜರಾಯಿ ಜಮೀನು ಮತ್ತು ವಕ್ಫ್ ಜಮೀನುಗಳು ಈ ಮೂರಕ್ಕೆ ಸಮಸ್ಯೆಯ ಮೂಲ ಎಲ್ಲಿ ಎಂದರೆ, ಕಾಲದಿಂದ ಕಾಲಕ್ಕೆ ಅವುಗಳೆಲ್ಲವೂ ಕೂಡ ಪಹಣಿಗಳಲ್ಲಿ ಅವರವರ ಸಂಸ್ಥೆಯ ಹೆಸರಿನಲ್ಲಿ ಖಾತೆ ಆಗಲಿಲ್ಲ. 1939ನೇ ಇಸವಿಯಲ್ಲಿ ದಾನವನ್ನು ಕೊಟ್ಟಾಗ, ದೇವಸ್ಥಾನದವರಾಗಲಿ ಅಥವಾ ಕಂದಾಯ ಇಲಾಖೆಯವರಾಗಲಿ ಅಥವಾ ಮುಜರಾಯಿ ಇಲಾಖೆಯವರಾಗಲಿ ಇದನ್ನು ಆ ದೇವರ ಹೆಸರಿಗೆ ಖಾತೆ ಮಾಡಿಬಿಟ್ಟಿದ್ದರೆ, ಈ ರೀತಿಯ ಸಮಸ್ಯೆಯಾಗುತ್ತಿರಲಿಲ್ಲ. ಅರಣ್ಯ ಜಮೀನು ಸಹ ಕಾಲದಿಂದ ಕಾಲಕ್ಕೆ ಅರಣ್ಯವೆಂದು ಆದೇಶ ಬಂದ ಮೇಲೆ ಅವುಗಳೆಲ್ಲಾ ಅರಣ್ಯವೆಂದು ಬಂದುಬಿಟ್ಟಿದ್ದರೆ, ಅವುಗಳು ಯಾವುದೂ ಸಹ ಮಂಜೂರಾಗುತ್ತಿರಲಿಲ್ಲ. ಖಾತೆಯಲ್ಲಿ ಅರಣ್ಯ ಎಂದು ಎಂಟ್ರಿ ಮಾಡಲಿಲ್ಲ. ಅದು ಸರ್ಕಾರವೆಂದು ಇತ್ತು, ಅದನ್ನು ಮಂಜೂರು ಮಾಡಿಕೊಂಡು ಬಂದಿದ್ದಾರೆ. ವಕ್ಫ್ ಆಸ್ತಿಯನ್ನು

ಕೂಡ ನೋಟಿಫಿಕೇಶನ್ ಪ್ರಕಾರ ವಕ್ಫ್ ಎಂದು ಹೆಸರನ್ನು ಎಂಟ್ರಿ ಮಾಡಲಿಲ್ಲ. ಅದು ಸರ್ಕಾರ ಅಥವಾ ಇನಾಂ ಎಂದು ಉಳಿಯಿತು. ಅದನ್ನು ಗ್ರ್ಯಾಂಟ್ ಮಾಡಿಕೊಂಡು ಬಂದಿದ್ದಾರೆ. ಈ ಮೂರಕ್ಕೂ ಮೂಲ ಇದೇ ಆಗಿದೆ. ಆದರೆ, ಒಂದು ಸಮಸ್ಯೆ ಏನಾಗಿದೆ ಎಂದರೆ, ಮಾನ್ಯ ಸುಪ್ರೀಂ ಕೋರ್ಟ್ ಮತ್ತು ದೇಶದ ಪಾರ್ಲಿಮೆಂಟಿನ ಕಾನೂನುಗಳು ಏನಿವೆ ಎಂದರೆ, 'once a forest, always a forest', 'once a waqf, always a waqf' ಎಂದು ಸುಪ್ರೀಂ ಕೋರ್ಟ್‌ನಲ್ಲಿ 98 ruling ಸಹ ಬಂದಿದೆ. 'Unless it is denotified and that denotification proceeding is duly complied.'

(ಮುಂದು)

**(943) 18.12.2024 12.00 LL-VK** **(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಕೃಷ್ಣ ಭೈರೇಗೌಡ (ಮುಂದು)**

ಅವರು ಏನು ಹೇಳುತ್ತಾರೆಂದರೆ, compensatory afforestation ಗೆ ಅವರು ಬದಲಿ ಜಾಗ ಕೊಟ್ಟು ಮಾಡಬೇಕೆಂದು ಹೇಳುತ್ತಾರೆ. ಈ ವಿಷಯವನ್ನು ಇಲ್ಲಿಗೆ ಬಿಡೋಣ. ಈಗ ಪ್ರಸ್ತುತ ಇರುವಂತಹ ಪ್ರಶ್ನೆಗೆ ಬರೋಣ. ಇಲ್ಲಿ ಏನಾಗಿದೆಯೆಂದರೆ, ಮಂಚನಬೇಲಿಯಲ್ಲಿ ಜಲಾಶಯ ನಿರ್ಮಾಣ ಆದಾಗ, ಅಲ್ಲಿ ನಿರಾಶ್ರಿತರು ಯಾರು ಜಮೀನು ಕಳೆದುಕೊಂಡರು, ಅದರಲ್ಲಿ 79 ಕುಟುಂಬಗಳಿದ್ದು, ಪ್ರತಿ ಕುಟುಂಬಕ್ಕೆ ತಲಾ 2 ಎಕರೆ 20 ಗುಂಟೆ ಜಮೀನು ಎಂದು ಸುಮಾರು 198 ಎಕರೆ ಜಾಗದಲ್ಲಿ ಜಮೀನನ್ನು ಪುನರ್ ವಸತಿಗಾಗಿ ಮಂಜೂರು ಮಾಡಲಾಗಿರುತ್ತದೆ. ಈಗ ಅದನ್ನು ಹೊರತುಪಡಿಸಿದರೂ ಕೂಡ, ಈ ದೇವಸ್ಥಾನಕ್ಕೆ ಇನ್ನು ಸುಮಾರು 1,000 ಎಕರೆ ಜಮೀನು ಉಳಿಯಬೇಕು. ಈಗ ಮಾನ್ಯ ಸದಸ್ಯರಾದ ಶ್ರೀ ಎನ್ ರವಿಕುಮಾರ್‌ರವರು, "ದೇವಸ್ಥಾನದ ಆಸ್ತಿಯನ್ನು ಜನರಿಗೆ ಹಂಚಿದ್ದು ಸರಿಯೇ" ಎಂದು ಪ್ರಶ್ನೆ ಕೇಳಿರುತ್ತಾರೆ. ನಾನು ಸ್ಪಷ್ಟವಾಗಿ ಉತ್ತರ ಹೇಳುವುದಾದರೆ, ದೇವರ ಆಸ್ತಿಯನ್ನು ಜನರಿಗೆ ಕೊಡುವುದಕ್ಕೆ ಸರ್ಕಾರಕ್ಕೆ ಅಧಿಕಾರ ಇಲ್ಲ. ಆದರೆ, ಅವೊತ್ತಿನ ದಿವಸ ಮಾಹಿತಿ ಕೊರತೆಯಿಂದಲೋ, ತಿಳುವಳಿಕೆ ಕೊರತೆಯಿಂದಲೋ ಅಥವಾ ಸಮರ್ಪಕವಾದ ದಾಖಲಾತಿಗಳು ಇಲ್ಲದೇ ಇರುವಂತಹ ಕಾರಣಕ್ಕಾಗಿ ಪುನರ್ ವಸತಿದಾರರಿಗೆ ಜಮೀನು ಮಂಜೂರು ಮಾಡಲಾಗಿರುತ್ತದೆ. ಸದರಿಯವರಿಗೆ ಜಮೀನು ಹಂಚಿದರೂ ಸಹ, ದೇವಸ್ಥಾನದ ಸುಮಾರು 1,000 ಎಕರೆ ಜಮೀನು ಉಳಿಯುತ್ತದೆ. ಈಗ ಆ 1,000 ಸಾವಿರ ಎಕರೆ ಜಮೀನನ್ನು ದೇವಸ್ಥಾನಕ್ಕೆ ಉಳಿಸುವುದಕ್ಕೆ ಯಾವ ಕ್ರಮ ತೆಗೆದುಕೊಳ್ಳುತ್ತಿದ್ದೇವೆಂದು ಮಾನ್ಯ ಸದಸ್ಯರು ಪರೋಕ್ಷವಾಗಿ ಕೇಳಿರುತ್ತಾರೆ. ಬಹುಶಃ ಅವರ ಪ್ರಶ್ನೆಯ ಸಾರಾಂಶವೇನೆಂದರೆ, "ಆಯಿತು, ಈ ಹಿಂದೆ ಕೊಟ್ಟವರಿಗೆ ಕೊಟ್ಟಿದ್ದೀರಿ, ಉಳಿದ ಜಮೀನಿನ ಸ್ಥಿತಿ ಏನು" ಎಂಬುದು ಅವರ ಮೂಲ ಉದ್ದೇಶವೆಂದು ನಾನು ಅರ್ಥೈಯಿಸಿಕೊಳ್ಳುತ್ತಿದ್ದೇನೆ. ಈಗ ಕನಿಷ್ಠ 1,000 ಎಕರೆ ಜಮೀನನ್ನಾದರೂ ನಾವು ಕಾಲಕ್ರಮೇಣ ಸರ್ಕಾರಕ್ಕೆ ಅಂದರೆ, ಆ ದೇವರ ಹೆಸರಿಗೆ ತೆಗೆದುಕೊಳ್ಳಬೇಕು. ಈ ವಿಷಯ 2016ರಲ್ಲಿ ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಅಲ್ಲಿಂದ ಇಲ್ಲಿಯವರೆಗೂ ಸುಮಾರು 155 ಎಕರೆ ಜಮೀನನ್ನು ದೇವರ ಹೆಸರಿಗೆ ಖಾತೆಯನ್ನು ಮಾಡಿರುತ್ತೇವೆ. ಅದರಲ್ಲಿ, ಕಳೆದ ಸೆಪ್ಟೆಂಬರ್ ತಿಂಗಳಿನಿಂದ ಈಚೆಗೆ ಸುಮಾರು 50 ಎಕರೆ ಜಮೀನನ್ನು ವಶಕ್ಕೂ ಕೂಡ

ತೆಗೆದುಕೊಂಡಿರುತ್ತೇವೆ. ಚೋಳನಾಯಕನಹಳ್ಳಿಗೆ ಮಾಡಿದ್ದು ಅಷ್ಟೇ ಅಲ್ಲದೇ, ಪೆದ್ದನಪಾಳ್ಯ, ದೊಡ್ಡಮಾರನಹಳ್ಳಿ, ಕಾಡುಮಾರನಹಳ್ಳಿ ಮತ್ತು ಬ್ಯಾಲಾಳು ಗ್ರಾಮ ಈ 5 ಗ್ರಾಮಗಳಲ್ಲಿ ದೇವರ ಜಮೀನು ಇದೆ. ಅಲ್ಲಿಯೂ ಕೂಡ one by one ನಾವು ವಶಕ್ಕೆ ತೆಗೆದುಕೊಳ್ಳುತ್ತಿದ್ದೇವೆ. ಇಲ್ಲಿಯವರೆಗೂ ಮಾಡಿರುವುದು ಏನು? ಈ ದೇವರ ಜಮೀನನ್ನು ವಶಪಡಿಸಿಕೊಳ್ಳುವುದಕ್ಕೆ ಇಷ್ಟು ವರ್ಷಗಳ ಕಾಲ ಬೇಕೇ ಎಂದು ಬಹುಶಃ ಮಾನ್ಯ ಸದಸ್ಯರು ಕೇಳಬಹುದೆಂದು ನಾನು ಊಹೆ ಮಾಡುತ್ತಿದ್ದೇನೆ. ಅಲ್ಲದೇ, ಮಾನ್ಯ ಸದಸ್ಯರು ಕೇಳುವುದು ಸರಿಯಾಗಿದೆ. ಎಲ್ಲಾ ಅಧಿಕಾರ ಸರ್ಕಾರದ ಬಳಿ ಇದ್ದರೂ ಸಹ, ದೇವರ ಆಸ್ತಿ ತೆಗೆದುಕೊಳ್ಳುವುದಕ್ಕೆ ಇಷ್ಟು ವರ್ಷ ಸಮಯ ಬೇಕೇ ಎಂದು ಕೇಳುವುದು ಸರಿಯಾಗಿದೆ. ಹಾಗಾಗಿ, ನಾನು ಕೂಡ ಈಗಾಗಲೇ ಮುಜರಾಯಿ ಇಲಾಖೆಯ ಆಯುಕ್ತರಿಗೆ ಹೇಳಿದ್ದೇನೆ. ಇದು ಇಷ್ಟು ಸಮಯ ತೆಗೆದುಕೊಳ್ಳುವುದು ನನಗೆ ಸರಿಯಾಗಿ ಕಾಣುತ್ತಿಲ್ಲ.

ಈ ವಿಷಯದಲ್ಲಿ ಕಂದಾಯ ಇಲಾಖೆಯಿಂದ ಯಾವ ಸಹಕಾರ ಬೇಕೋ ಅದನ್ನು ಮಾಡುತ್ತೇವೆ. ಆದುದರಿಂದ, ಈ ವಿಷಯದಲ್ಲಿ ತಕ್ಷಣವೇ ಕ್ರಮ ತೆಗೆದುಕೊಂಡು, ಮುಂದಿನ ಒಂದು ತಿಂಗಳೊಳಗಡೆ ಉಳಿದ 1,000 ಎಕರೆ ದೇವರ ಜಮೀನಿನ audit ಮಾಡಬೇಕು ಮತ್ತು ಆ ಜಮೀನಿನಲ್ಲಿ ಯಾರು ದಾಖಲೆ ಸಮೇತ ಅನುಭವದಲ್ಲಿದ್ದಾರೆ ಅಥವಾ ಯಾರು ದಾಖಲೆ ಇಲ್ಲದೇ ಅನುಭವದಲ್ಲಿರುತ್ತಾರೆ ಅದನ್ನು ವರ್ಗೀಕರಣ ಮಾಡಿ, ದಾಖಲೆ ಇಲ್ಲದೇ ಜಮೀನು ಒತ್ತುವರಿ ಮಾಡಿರುವವರನ್ನು ತಕ್ಷಣವೇ ಒತ್ತುವರಿ ತೆರವುಗೊಳಿಸಿ, ದೇವರ ಹೆಸರಿಗೆ ಖಾತೆ ಮಾಡಬೇಕು. ಒಂದು ವೇಳೆ ಬೇರೆ ಯಾರಿಗಾದರೂ, ಯಾವುದಾದರೂ ಮೂಲಗಳಿಂದ ದಾಖಲೆಗಳು ಬಂದಿದ್ದರೆ, ಅದನ್ನು ಕಾನೂನಾತ್ಮಕವಾಗಿ ಇತ್ಯರ್ಥಪಡಿಸಬೇಕು ಎಂದು ನಾನು ಸೂಚನೆಯನ್ನು ಕೊಟ್ಟಿದ್ದೇನೆ. ಈ ವಿಷಯವನ್ನು ಮುಜರಾಯಿ ಇಲಾಖೆ ಗಂಭಿರವಾಗಿ ತೆಗೆದುಕೊಂಡಿರುತ್ತದೆ. ಈ ವಿಷಯದಲ್ಲಿ ಕಂದಾಯ ಇಲಾಖೆಯೂ ಸಹ ಅವರಿಗೆ ಅಗತ್ಯವಿರುವ ಸಹಕಾರವನ್ನು ಕೊಟ್ಟು, ಎಷ್ಟು ಸಾಧ್ಯವಾದರೆ ಅಷ್ಟು ಜಮೀನನ್ನು ವಾಪಸ್ಸು ಪಡೆದುಕೊಂಡು ದೇವಸ್ಥಾನಕ್ಕೆ ಸಮರ್ಪಣೆ ಮಾಡುವುದನ್ನು ಮಾಡುತ್ತೇವೆ. ಈ ಜಮೀನನ್ನು ದಾನ ಕೊಟ್ಟಂತಹ ದಾನಿಗಳು ಬಹಳ ಸ್ಪಷ್ಟವಾಗಿ ಹೇಳಿರುವುದೇನೆಂದರೆ, "ತುಲಾ ಮಾಸದಲ್ಲಿ ನಡೆಯುವ ಪೂಜಾ ಕೈಕಂರ್ಯಗಳ ಸಂದರ್ಭದಲ್ಲಿ ಆಗಮಿಸುವ ಭಕ್ತಾದಿಗಳಿಗೆ ಅನ್ನ ಸಂತರ್ಪಣೆಗಾಗಿ ಮತ್ತು ವೈದ್ಯಕೀಯ ಶಿಕ್ಷಣ ಮಾಡುವ ಮಹಿಳಾ ವಿದ್ಯಾರ್ಥಿಗಳಿಗೆ ಉಪಯೋಗ ಮಾಡುವ ಉದ್ದೇಶಕ್ಕೆ ಬಳಸಬೇಕೆಂದು" ಎಂದು ಆ ಕಾಲದಲ್ಲಿಯೇ ದೇವಸ್ಥಾನಕ್ಕೆ ಬಿಟ್ಟು ಹೋಗಿರುತ್ತಾರೆ. ಅವರು ಯಾರೋ ಪುಣ್ಯಾತ್ಮರು ಸುಮಾರು 1,198 ಎಕರೆ ಜಮೀನನ್ನು ದೇವಸ್ಥಾನಕ್ಕೆ ಕೊಟ್ಟು ಹೋಗಿರುತ್ತಾರೆ. ಆದರೆ, ನಮ್ಮ ಬೇಜವಾಬ್ದಾರಿತನದಿಂದ ನಾವು ಅದನ್ನು ಕಳೆದುಕೊಂಡಿದ್ದೇವೆ. ಆದರೆ, ಈಗ ಎಷ್ಟು ಸಾಧ್ಯವಾಗುತ್ತದೆ, ಅಷ್ಟು ಜಮೀನನ್ನು ವಶಪಡಿಸಿಕೊಳ್ಳುವಂತಹ ಕೆಲಸವನ್ನು ಬಹಳ ಗಂಭೀರವಾಗಿ ಮಾಡುತ್ತೇವೆ.

**ಶ್ರೀ ಎನ್. ರವಿಕುಮಾರ್:-** ಮಾನ್ಯ ಸಭಾಪತಿಯವರೇ, ನನ್ನ ಪ್ರಶ್ನೆಗೆ ಮಾನ್ಯ ಸಚಿವರು ಸವಿಸ್ತಾರವಾಗಿ ಉತ್ತರವನ್ನು ಕೊಟ್ಟಿದ್ದಾರೆ. ಆದರೆ, ನಾನು ಕೇಳುವುದೇನೆಂದರೆ, 197.20 ಎಕರೆ ಜಮೀನನ್ನು 79 ಕುಟುಂಬಗಳಿಗೆ ಪುನರ್ ವಸತಿಗಾಗಿ ಹಂಚಿದ್ದಾರೆಂದು ಉತ್ತರ ನೀಡಿರುತ್ತಾರೆ. ಆ ಜಮೀನನ್ನು ಏತಕ್ಕೆ ಹಂಚಿರುತ್ತಾರೆ? ಏಕೆಂದರೆ, ಸರ್ಕಾರಕ್ಕೆ ಹಂಚುವುದಕ್ಕೆ ಬೇರೆ ಜಮೀನು ಇರಲಿಲ್ಲವೇ? ಈ ಜಮೀನು ಮಾತ್ರವೇ ಬೇಕಾಗಿತ್ತೇ? ಹಾಗಾಗಿ, ಆ

ಜಮೀನನ್ನು ವಶಪಡಿಸಿಕೊಂಡು, ಅವರಿಗೆ ಬೇರೆ ಜಮೀನನ್ನು ಕೊಡಬೇಕೆಂದು ನಾನು ಆಗ್ರಹಪಡಿಸುತ್ತೇನೆ. ಮಾನ್ಯ ಸಚಿವರು, ದಾನ ಕೊಟ್ಟಂತಹವರು ಪುಣ್ಯಾತ್ಮರು ಎಂದು ಹೇಳಿರುತ್ತಾರೆ. ಆ ಪುಣ್ಯಾತ್ಮರ ಆತ್ಮ ಸ್ವರ್ಗವಾಗಿ ಶಾಂತಿಯುತವಾಗಿ ಇರಬೇಕಾದರೆ, ಆ 197.20 ಎಕರೆ ಜಮೀನನ್ನು ಸಹ ವಶಪಡಿಸಿಕೊಳ್ಳಬೇಕು. ನಂತರ, ಆ ಜಮೀನಿನಲ್ಲಿ ದಾನಿಗಳ ಹೆಸರಿನಲ್ಲಿ ಮಹಿಳೆಯರಿಗೆ ಉಚಿತವಾದ ಶಿಕ್ಷಣ ಕೊಡುವುದಕ್ಕೆ, ಹಾಸ್ಟೆಲ್‌ಗಳ ನಿರ್ಮಾಣಕ್ಕೆ ಉಪಯೋಗ ಮಾಡಿಕೊಳ್ಳಬೇಕು. ಮತ್ತೊಂದು ಉಪ ಪ್ರಶ್ನೆ ಏನೆಂದರೆ, ಸುಮಾರು 921 ಎಕರೆ ಜಮೀನು ಸರ್ಕಾರದ ಹೆಸರಿನಲ್ಲಿ ಉಳಿಯಬೇಕಾಗಿತ್ತು, ಅದರಲ್ಲಿ ವಶಪಡಿಸಿಕೊಂಡಿರುವುದು ಕೇವಲ 155 ಎಕರೆ ಜಮೀನು ಎಂದು ಹೇಳಿರುತ್ತಾರೆ. ಹಾಗಾದರೆ, ಉಳಿದ ಜಮೀನು ಯಾರ ಹೆಸರಿನಲ್ಲಿದೆ? ಅದಕ್ಕೆ ಉತ್ತರ ಕೊಡುವವರು ಯಾರು? ಉಳಿದಿರುವ ಜಮೀನು ಸಹ ಶ್ರೀ ರಂಗನಾಥಸ್ವಾಮಿ ದೇವಸ್ಥಾನದ ಹೆಸರಿನಲ್ಲಿ ಇರಬೇಕು. ಶ್ರೀ ರಂಗನಾಥಸ್ವಾಮಿ ದೇವಸ್ಥಾನ ಮತ್ತು ಧಾರ್ಮಿಕ ದತ್ತಿ ಇಲಾಖೆ ಈ ಎರಡೂ ಹೆಸರಿನಲ್ಲಿ ಜಂಟಿಯಾಗಿ ಆ ಜಮೀನು ಇರಬೇಕು. ಕೇವಲ ಶ್ರೀ ರಂಗನಾಥಸ್ವಾಮಿ ದೇವಸ್ಥಾನ ಹೆಸರಿನಲ್ಲಿ ಇದ್ದರೆ, ಆ ಜಮೀನನ್ನು ಸಹ ಮುಂದೆ ಯಾರಾದರೂ ಕಬಳಿಸಬಹುದು. ಹಾಗಾಗಿ, ಶ್ರೀ ರಂಗನಾಥಸ್ವಾಮಿ ದೇವಸ್ಥಾನ ಮತ್ತು ಧಾರ್ಮಿಕ ದತ್ತಿ ಇಲಾಖೆ ಎಂದು ಖಾತೆಯಾಗಬೇಕು ಉದಾಹರಣೆಗೆ, ಮಾನ್ಯ ಸಚಿವರು, 'once a forest, always a forest', 'once a waqf, always a waqf' ಎಂದು ಹೇಳಿರುತ್ತಾರೆ. ಆ ರೀತಿಯಾದರೆ, 'once a temple asset, always a temple asset' ಎಂದು ಏತಕ್ಕೆ ಆಗುವುದಿಲ್ಲ? ಆದುದರಿಂದ, 1,198.34 ಎಕರೆ ಜಾಗ ಏನಿದೆ, ಅದು ದೇವಸ್ಥಾನದ ಹೆಸರಿನಲ್ಲಿ ಖಾತೆಯಾಗಬೇಕು. ಅದಕ್ಕಾಗಿ, ನಾನು ಹೇಳುವುದೇನೆಂದರೆ, ಈ ವಿಷಯಕ್ಕೆ ಸಂಬಂಧಿಸಿದಂತೆ, ಒಂದು ಸದನ ಸಮಿತಿಯನ್ನು ರಚನೆ ಮಾಡಿ ಹಾಗೂ ಒಂದು ಸಭೆ ನಡೆಸಿ, ಆ ಸಭೆಗೆ ನಮ್ಮನ್ನು ಸಹ ಆಹ್ವಾನಿಸಿ. ಹಾಗಾಗಿ, ಈ ಬಗ್ಗೆ ಸದನ ಸಮಿತಿ ರಚನೆ ಮಾಡಬೇಕೆಂದು ವಿನಂತಿ ಮಾಡುತ್ತಾ, ಇದಕ್ಕೆ ಒಂದು ಬೋರ್ಡ್ ಅನ್ನು ರಚನೆ ಮಾಡಬೇಕೆಂದು ಸರ್ಕಾರವನ್ನು ಒತ್ತಾಯಿಸುತ್ತೇನೆ.

**ಶ್ರೀ ಕೃಷ್ಣ ಭೈರೇಗೌಡ:-** ಮಾನ್ಯ ಸಭಾಪತಿಯವರೇ, ಈ ಜಮೀನನ್ನು ರೈತರಿಗೆ ಏತಕ್ಕೆ ಹಂಚಲಾಗಿದೆ ಎಂದು ಹೇಳಿದರೆ, ಈ ಜಮೀನಿನ ಖಾತೆಯಲ್ಲಿ ದೇವಸ್ಥಾನದ ಹೆಸರು ಬರಲಿಲ್ಲವಾದ್ದರಿಂದ, ಅದು ಸರ್ಕಾರದ ಹೆಸರಿನಲ್ಲಿತ್ತು. ಹಾಗಾಗಿ, ಈ ಹಿಂದೆ ಜಮೀನನ್ನು ಪುನರ್ ವಸತಿಗಾಗಿ ಹಂಚಿಕೆ ಮಾಡಲಾಗಿರುತ್ತದೆ. ಈಗ ಆ ಜಾಗದಲ್ಲಿರುವ ಕುಟುಂಬಗಳನ್ನು ಎತ್ತುವಳಿ ಮಾಡುವುದಕ್ಕೆ ಹೋದರೆ, ಅಲ್ಲಿ ಬೇರೆ ಬೇರೆ ಸಮಸ್ಯೆಗಳು ಬರುತ್ತವೆ. ಆದುದರಿಂದ, ಇನ್ನು ಉಳಿದಿರುವ ಜಮೀನನ್ನಾದರೂ ನಾವು ವಶಕ್ಕೆ ತೆಗೆದುಕೊಳ್ಳುವುದಕ್ಕೆ ನಾವು ಆದ್ಯತೆ ಕೊಡಬೇಕು. ಹಾಗಾಗಿ, ನಾನು ಮಾನ್ಯ ಸದಸ್ಯರಿಗೆ ಹೇಳುವುದೇನೆಂದರೆ, ಸರ್ಕಾರದಲ್ಲಿ ಇದಕ್ಕೆ ಯಾವುದೇ ಮುಲಾಜಿಲ್ಲ ಅಥವಾ ಬೇರೆ ಏನೂ ಇರುವುದಿಲ್ಲ. ಈ ವಿಷಯದಲ್ಲಿ ನಾವು ನೂರಕ್ಕೆ ನೂರರಷ್ಟು ಅವರ ಜೊತೆ ಇದ್ದೇವೆ. ಮಾನ್ಯ ಸದಸ್ಯರು ಕಳೆದ ಬಾರಿಯೂ ಸಹ ಇದೇ ಪ್ರಶ್ನೆಯನ್ನು ಕೇಳಿದ್ದು, ಆಗ ಮುಜರಾಯಿ ಸಚಿವರು ಉತ್ತರ ಕೊಡುವಾಗ, ನಾನು ಕೂಡ ಸದನದಲ್ಲಿ ಉಪಸ್ಥಿತನಿದ್ದೆನು. ಆದರೆ, ಕಳೆದ ಮೂರು ತಿಂಗಳಿನಿಂದೀಚೆಗೆ ಸುಮಾರು 55 ಎಕರೆ ಜಮೀನನ್ನು ವಶಕ್ಕೆ ಪಡೆದಿರುತ್ತೇವೆ. ಜೊತೆಗೆ, ಇನ್ನು ಮುಂದೆ ಹಂತ ಹಂತವಾಗಿ ಜಮೀನನ್ನು ವಶಕ್ಕೆ ಪಡೆದುಕೊಳ್ಳುತ್ತೇವೆ. ಹಾಗಾಗಿ, ಈ

ವಿಷಯದಲ್ಲಿ ಖಂಡಿತವಾಗಿ ಯಾರಿಗೂ ಯಾವುದೇ ಅನುಮಾನ ಬೇಡ. ಅದು ದೇವಸ್ಥಾನದ ಆಸ್ತಿಯೇ ಆಗಿರುತ್ತದೆ. ಅದನ್ನು ನಾನು ಹೇಳಿದರೂ ಅಥವಾ ಹೇಳದೇ ಹೋದರೂ ಸಹ ಅದು ದೇವಸ್ಥಾನದ ಆಸ್ತಿಯೇ ಆಗಿರುತ್ತದೆ. It is a temple land, it cannot be tampered with. ಹಾಗಾಗಿ, ಈ ವಿಷಯದಲ್ಲಿ ಸರ್ಕಾರ ಬದ್ಧವಾಗಿದೆ. ಆದುದರಿಂದ, ಈ ವಿಷಯದಲ್ಲಿ ಕಂದಾಯ ಇಲಾಖೆಯಿಂದ ಮುಜರಾಯಿ ಇಲಾಖೆಗೆ ಅಗತ್ಯವಿರುವ ಎಲ್ಲಾ ಸಹಕಾರವನ್ನು ನೀಡಿ, ಈ ದೇವಸ್ಥಾನದ ಜಾಗವನ್ನು ಎಷ್ಟು ಸಾಧ್ಯವೋ ಅಷ್ಟನ್ನು ವಶಪಡಿಸಿಕೊಳ್ಳುತ್ತೇವೆ. ಆದಾಗ್ಯೂ, ಈಗಾಗಲೇ ನಾನು ಮುಜರಾಯಿ ಇಲಾಖೆಯ ಆಯುಕ್ತರಿಗೆ, "ಬಾಕಿ ಉಳಿದಿರುವ 1,000 ಎಕರೆ ಜಮೀನಿನ audit ಆಗಬೇಕೆಂದು" ಹೇಳಿರುತ್ತೇನೆ.

**ಶ್ರೀ ಎನ್. ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಆ ಸಭೆಗೆ ನನ್ನನ್ನು ಸಹ ಆಹ್ವಾನಿಸಬೇಕು.

**ಶ್ರೀ ಕೃಷ್ಣ ಭೈರೇಗೌಡ:-** ಮಾನ್ಯ ಸಭಾಪತಿಯವರೇ, ಆ ಸಭೆಗೆ ಖಂಡಿತವಾಗಿ ಮಾನ್ಯ ಸದಸ್ಯರಿಗೆ ಆಹ್ವಾನ ನೀಡುತ್ತೇನೆ. ಮಾನ್ಯ ಸದಸ್ಯರು ಈ ಹಿಂದೆಯೂ ಸಹ ಪ್ರಶ್ನೆ ಕೇಳಿದ್ದು, ಈಗಲೂ ಸಹ ಪ್ರಶ್ನೆ ಕೇಳಿರುತ್ತಾರೆ. ಇನ್ನು 6 ತಿಂಗಳು ಬಿಟ್ಟು ನಂತರ ಕೂಡ ಇದೇ ಪ್ರಶ್ನೆಯನ್ನು ಕೇಳಲಿ. ಅವರು ಕೇಳುವುದು ಸರಿಯಾಗಿದ್ದು, ಯಾವುದೇ ತಪ್ಪು ಇರುವುದಿಲ್ಲ. ಒಳ್ಳೆಯ ಕೆಲಸಕ್ಕಾಗಿ ಅವರು ಈ ಪ್ರಶ್ನೆಯನ್ನು ಕೇಳಿರುತ್ತಾರೆ. ಈ ವಿಷಯದಲ್ಲಿ ಅವರ ಜೊತೆ ನಾವು ಕೂಡ ಇದ್ದೇವೆ. ಈ ಬಗ್ಗೆ ಸದನ ಸಮಿತಿ ರಚನೆ ಮಾಡಬೇಕು ಎಂದು ಹೇಳುವುದಾದರೆ, ಒಂದು ದೇವಸ್ಥಾನದ ವಿಷಯಕ್ಕೆ ಸದನ ಸಮಿತಿ ಅವಶ್ಯಕತೆ ಇಲ್ಲವೆಂಬುದು ನಮ್ಮ ಅಭಿಪ್ರಾಯವಾಗಿದೆ.

**ಶ್ರೀ ಎನ್. ರವಿಕುಮಾರ್:-** ಮಾನ್ಯ ಸಭಾಪತಿಯವರೇ, ರಾಜ್ಯದಲ್ಲಿರುವ ಎಲ್ಲಾ ದೇವಸ್ಥಾನಗಳಿಗೆ ಸಂಬಂಧಪಟ್ಟಂತೆ, ಸದನ ಸಮಿತಿ ರಚನೆ ಮಾಡಬೇಕೆಂದು ಕೋರುತ್ತೇನೆ. ಸುಮಾರು ಸಾವಿರಾರು ಎಕರೆ, ಲಕ್ಷಾಂತರ ಎಕರೆ ದೇವಸ್ಥಾನದ ಜಮೀನನ್ನು ಇವೊತ್ತಿನ ದಿವಸ ಬೇರೆಯವರು ವಶಪಡಿಸಿಕೊಂಡಿರುತ್ತಾರೆ.

**ಶ್ರೀ ಕೃಷ್ಣ ಭೈರೇಗೌಡ:-** ಮಾನ್ಯ ಸಭಾಪತಿಯವರೇ, ಇಲ್ಲಿ ಬೇರೆ ಬೇರೆ ವಿಷಯಗಳು ಚರ್ಚೆಯಾಗಿದೆ. ಈ ವರ್ಷ ಸುಮಾರು 5,022 ಆಸ್ತಿಗಳನ್ನು ಹೊಸದಾಗಿ ನಾವು ಮುಜರಾಯಿಗೆ ಖಾತೆ ಮಾಡಿಕೊಟ್ಟಿರುತ್ತೇವೆ. ಈ ಬಗ್ಗೆ ವರ್ಷವಾರು ಪಟ್ಟಿಯನ್ನು ಸಹ ಕೊಡುತ್ತೇನೆ. ನಮ್ಮ ಸರ್ಕಾರ ಅಧಿಕಾರಕ್ಕೆ ಬಂದಾಗಿನಿಂದ, ಹೆಚ್ಚು ಕಡಿಮೆ ಆರೇಳು ಸಾವಿರ ದೇವಸ್ಥಾನದ ಆಸ್ತಿಗಳು ಮುಜರಾಯಿಗೆ ಖಾತೆ ಆಗದೇ ಇದ್ದಂತಹವುಗಳನ್ನು ಮುಜರಾಯಿಗೆ ಈಗ ಖಾತೆ ಮಾಡಿಸಿರುತ್ತೇವೆ.

**(ಈ ಹಂತದಲ್ಲಿ ಆಡಳಿತ ಪಕ್ಷದ ಸದಸ್ಯರು ಮೇಜು ತಟ್ಟುವ ಮೂಲಕ ತಮ್ಮ ಹರ್ಷವನ್ನು ವ್ಯಕ್ತಪಡಿಸಿದರು)**

ಬೇಕಾದರೆ, ನಾನು ವರ್ಷವಾರು ಮಾಹಿತಿಯನ್ನು ಕೊಡುತ್ತೇನೆ. ಆದರೆ, ಇಲ್ಲಿ ಈಗ ಬೇರೆ ಯಾವುದೋ ವಿಷಯ ಚರ್ಚೆಯಾಗುತ್ತಿದೆ. ಅದಕ್ಕೆ ಹತ್ತು ಪಟ್ಟು ಆಸ್ತಿಗಳನ್ನು ಮುಜರಾಯಿ ಸಂಸ್ಥೆಗೆ ಖಾತೆ ಮಾಡಿಸಿಕೊಟ್ಟಿರುತ್ತೇವೆ.

**ಶ್ರೀ ಎನ್. ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಅದಕ್ಕಾಗಿ ನಾನು ಮಾನ್ಯ ಸಚಿವರನ್ನು ಅಭಿನಂದಿಸುತ್ತೇನೆ.

**ಶ್ರೀ ಕೃಷ್ಣ ಭೈರೇಗೌಡ:-** ಮಾನ್ಯ ಸಭಾಪತಿಯವರೇ, we are at it. ಮುಜರಾಯಿ ಆಸ್ತಿಗಳನ್ನು ಸಂರಕ್ಷಣೆ ಮಾಡುವಂತಹ ಕೆಲಸ ಬಹಳ ಪ್ರಬಲವಾಗಿ ಮಿಷನ್ ಮೋಡ್‌ನಲ್ಲಿ, ಡ್ರೈವ್ ಮೋಡ್‌ನಲ್ಲಿ ಸರ್ಕಾರ ಮಾಡುತ್ತಿದೆ. ಬೇಕಾದರೆ ನಾನು ಯಾವ ಜಿಲ್ಲೆ, ಯಾವ ತಾಲ್ಲೂಕು ಎಂಬುದನ್ನು ಮುಂದಿನ 2-3 ಗಂಟೆಗಳಲ್ಲಿ, ಮಧ್ಯಾಹ್ನದ ನಂತರ ಅಥವಾ ನಾಳೆಯ ಒಳಗಡೆ ಪಟ್ಟಿಯನ್ನು ಸಹ ಕೊಡುತ್ತೇನೆ. ಎಲ್ಲಾ ಮುಜರಾಯಿ ಆಸ್ತಿಗಳನ್ನು ವಶಪಡಿಸಿಕೊಂಡು, 20-30 ವರ್ಷಗಳಿಂದ ಆ ದೇವಸ್ಥಾನದ ಹೆಸರಿಗೆ ಖಾತೆ ಆಗದೇ ಇರುವಂತಹ ಜಮೀನುಗಳನ್ನು ದೇವಸ್ಥಾನದ ಹೆಸರಿಗೆ ಖಾತೆ ಮಾಡಿಸುತ್ತಿದ್ದೇವೆ. ಹಾಗಾಗಿ, ಈ ವಿಷಯದಲ್ಲಿ ದಯಮಾಡಿ ಯಾವುದೇ ಅನುಮಾನಗಳು ಬೇಡ. ನನಗಂತೂ ಈ ವಿಷಯದಲ್ಲಿ ಬೇರೆ ಏನೂ ಇರುವುದಿಲ್ಲ. ಅಲ್ಲದೇ, ಈ ವಿಷಯದಲ್ಲಿ ನಾವು ಮಾನ್ಯ ಸದಸ್ಯರು ಜೊತೆಯಲ್ಲಿದ್ದೇವೆ. ಇದರಲ್ಲಿ ಮಂಜೂರಾಗಿರುವ ಜಮೀನನ್ನು ಹೊರತುಪಡಿಸಿ ಉಳಿದಿರುವ ಜಮೀನನ್ನು ವಶಪಡಿಸಿಕೊಂಡಿರುವುದರ ಬಗ್ಗೆ ನಾನು ವರದಿ ಕೊಡುತ್ತೇನೆ. ಇನ್ನು ಮುಂದಿನ ವಿಚಾರದಲ್ಲಿ ನಾವು ನಿಮ್ಮ ಜೊತೆ ಇದ್ದೇ ಇರುತ್ತವೆ. ಹಾಗಾಗಿ, ಈ ಬಗ್ಗೆ ನಂತರ ಮಾತನಾಡೋಣ.

**(ಗೊಂದಲ)**

**ಶ್ರೀ ಎನ್. ರವಿಕುಮಾರ್:-** ಮಾನ್ಯ ಸಭಾಪತಿಯವರೇ, ದೇವರ ಆಸ್ತಿಯನ್ನು ದೇವರ ಹೆಸರಿನಲ್ಲಿ ಖಾತೆ ಮಾಡಿಕೊಡಲು ಸರ್ಕಾರ ತಯಾರಿದೆಯೇ?

**(ಗೊಂದಲ)**

**ಸಭಾಪತಿಯವರು:-** ಒಂದು ನಿಮಿಷ. ದಯಮಾಡಿ ಯಾರೂ ಮಾತನಾಡಬೇಡಿ.

**(ಗೊಂದಲ)**

**ಶ್ರೀ ಎನ್.ಎಸ್. ಬೋಸರಾಜು:-** ಮಾನ್ಯ ಸಭಾಪತಿಯವರೇ, ಒಂದು ಪ್ರಶ್ನೆಗೆ ಸುಮಾರು ಅರ್ಧ ಗಂಟೆ ಸಮಯ ತೆಗೆದುಕೊಂಡರೆ ಹೇಗೆ?

**ಸಭಾಪತಿಯವರು:-** ಈ ಪ್ರಶ್ನೆ ಕೇಳಲು ಪ್ರಾರಂಭ ಮಾಡಿ, 13 ನಿಮಿಷ ಆಗಿದೆ. ಹಾಗಾಗಿ, ನಾನು ಪ್ರಶ್ನೋತ್ತರ ಅವಧಿಯನ್ನು 1 ಗಂಟೆ 15 ನಿಮಿಷಕ್ಕೆ ಮುಕ್ತಾಯಗೊಳಿಸುತ್ತೇನೆ. ಪ್ರಶ್ನೋತ್ತರ ಅವಧಿಗೆ ಒಂದು ಮಿತಿಯಿಲ್ಲವೇ?

**(ಗೊಂದಲ)**

**ಶ್ರೀ ಪಿ.ಹೆಚ್. ಪೂಜಾರ್:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ.

**(ಗೊಂದಲ)**

**ಸಭಾಪತಿಯವರು:-** ನಾನು ಯಾರಿಗೂ ಅವಕಾಶ ಕೊಡುವುದಿಲ್ಲ. ಏತಕ್ಕೆ ತಾವು ಮಾತನಾಡುತ್ತೀರಿ? ಒಬ್ಬ ಸದಸ್ಯರಿಗೆ ಒಂದು ಪ್ರಶ್ನೆ ಕೇಳಲು 5 ನಿಮಿಷ ಕಾಲಾವಕಾಶ ನೀಡುತ್ತೇನೆ. ನಾನು ಬೆಲ್ ಮಾಡಿದ ತಕ್ಷಣ ತಾವು ತಮ್ಮ ಪ್ರಶ್ನೆಯನ್ನು ಪೂರ್ಣಗೊಳಿಸಬೇಕು.

(ಮುಂದು)

**(944) 18.12.2024 12.10 ವೈಎಲ್-ಬಿಎನ್ಎಸ್** **(ಸಭಾಪತಿಯವರ ಉಪಸ್ಥಿತಿ)**

**ಪ್ರಶ್ನೆ ಸಂಖ್ಯೆ: 1083**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಶಶೀಲ್ ಜಿ.ನಮೋಶಿ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ರಾಜ್ಯದ ಉಪ ನೋಂದಣಾಧಿಕಾರಿ ಕಛೇರಿಗಳಲ್ಲಿ ಸ್ಥಿರಾಸ್ತಿ ದಸ್ತಾವೇಜುಗಳ ನೋಂದಣಿಗೆ ಡಿಜಿಟಲ್ ಖಾತಾ (ಇ-ಖಾತಾ) ಆಗಬೇಕೆಂದು ಸರ್ಕಾರದಿಂದ ಸುಮಾರು ಎರಡ್ಮೂರು ತಿಂಗಳ ಹಿಂದೆ ಆದೇಶ ಹೊರಡಿಸಲಾಗಿರುವುದು ಸರಿ. ಮಾನ್ಯ ಸಚಿವರು ಬಹಳ ಒಳ್ಳೆಯವರಾಗಿದ್ದು, ಅದರಲ್ಲಿ ಎರಡನೇ ಮಾತಿಲ್ಲ, ಒಳ್ಳೆಯ ಕೆಲಸವನ್ನು ಸಹ ಮಾಡುತ್ತಿದ್ದಾರೆ. ಆದರೆ, ಇ-ಖಾತಾವನ್ನು ಪಡೆಯಬೇಕೆಂದರೆ, at the lower level ಸಾಕಷ್ಟು ಹಣವನ್ನು ಕೊಟ್ಟು, ಇ-ಖಾತಾವನ್ನು ಪಡೆಯಬೇಕಾಗಿದೆ. ಹಣ ಕೊಡಲಿಲ್ಲವೆಂದರೆ, ಸರ್ವರ್ ಡೌನ್ ಅಥವಾ ಮತ್ತೇನಾದರೂ ನೆಪ ಹೇಳಿ, ಮುಂದಕ್ಕೆ ಹಾಕುತ್ತಾರೆ. ನಾನು ದಿನಪತ್ರಿಕೆಯಲ್ಲಿ ಪ್ರಕಟವಾಗಿರುವುದನ್ನು ನೋಡಿದ ಹಾಗೆ "ವಿಶೇಷವಾಗಿ ಕರ್ನಾಟಕದ ರಾಜಧಾನಿಯಾದ ಬೆಂಗಳೂರಿನಲ್ಲಿ ರಿಯಲ್ ಎಸ್ಟೇಟ್ ಬ್ಯುಸಿನೆಸ್ ಸುಮಾರು ಎರಡು-ಮೂರು ತಿಂಗಳಿನಿಂದ ಸುಮಾರು ಶೇಕಡ 60 ರಷ್ಟು ಇಳಿಕೆಯಾಗಿದೆ" ಎಂದು ವರದಿಯಾಗಿರುವ ವಿಚಾರವನ್ನು ಗಮನಕ್ಕೆ ತರಬಯಸುತ್ತೇನೆ. ಒಟ್ಟಾರೆಯಾಗಿ ಹೇಳುವುದೇನೆಂದರೆ, ಪೂರ್ವಸಿದ್ಧತೆ ಏನಾಗಬೇಕಿತ್ತು, ಅದು ಎಲ್ಲಿಯೋ ಒಂದು ಕಡೆ ಆಗಿಲ್ಲ ಎನ್ನುವಂಥ ಸಮಸ್ಯೆಯನ್ನು ಎಲ್ಲಾ ಕಡೆ ತೋರಿಸುತ್ತಿದ್ದಾರೆ ಮತ್ತು ಕಾವೇರಿ ತಂತ್ರಾಂಶದಲ್ಲಿ ಹಕ್ಕುಪತ್ರ ಬಿಡುಗಡೆ ಮಾಡುವ ಅವಕಾಶವಿಲ್ಲ ಎನ್ನುವಂಥ ವಿಚಾರವನ್ನು ಹೇಳುತ್ತಿದ್ದು, ಅದಕ್ಕೆ ಮಾನ್ಯ ಸಚಿವರು ಸ್ಪಷ್ಟೀಕರಣವನ್ನು ನೀಡಬೇಕೆಂದು ತಮ್ಮ ಮೂಲಕ ಕೇಳಬಯಸುತ್ತೇವೆ.

**ಶ್ರೀ ಕೃಷ್ಣ ಭೈರೇಗೌಡ (ಕಂದಾಯ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಸಾರ್ವಜನಿಕ ಹಿತ ದೃಷ್ಟಿಯಿಂದ ಮಾಹಿತಿ ಕೇಳಿದ್ದು, ಅದಕ್ಕೆ ಉತ್ತರವನ್ನು ಕೊಡಬಯಸುತ್ತೇನೆ. ಉಪ ನೋಂದಣಾಧಿಕಾರಿ ಕಛೇರಿಗಳಲ್ಲಿ ಸ್ಥಿರಾಸ್ತಿ ದಸ್ತಾವೇಜುಗಳ ನೋಂದಣಿಗೆ ಡಿಜಿಟಲ್ ಖಾತಾ (ಇ-ಖಾತಾ) ಆಗಬೇಕೆಂಬುದು ತಕ್ಷಣವೇ ಜಾರಿಗೆ ತಂದಿರುವಂಥ ಕೆಲಸವಾಗಿಲ್ಲ. ಇದರ ಇತಿಹಾಸವೇನೆಂಬುದನ್ನು ಮೊದಲು ತಿಳಿಸುತ್ತೇನೆ. ಪೇಪರ್ ಖಾತೆಯನ್ನು ತಂದುಕೊಡುತ್ತಿದರು, ಅದರ ಮೇಲೆ ನೋಂದಣಿಯಾಗುತ್ತಿತ್ತು. ಸುಮಾರು 20 ವರ್ಷಗಳಿಂದ ಸರ್ಕಾರದ ಉದ್ದೇಶವೇನೆಂದರೆ, ಪೇಪರ್ ಖಾತಾ ಬದಲಾವಣೆ ಮಾಡುವ ಸಲುವಾಗಿ, ಗ್ರಾಮ ಪಂಚಾಯಿತಿ, ಮುನಿಸಿಪಾಲಟಿ, ಬಿ.ಬಿ.ಎಂ.ಪಿ. ಯವರು ಖಾತಾ ಕೊಡುತ್ತಾರೆ. ಆ ಖಾತಾ ಡೇಟಾ ಬೇಸ್ ಕಾವೇರಿ ತಂತ್ರಾಂಶದೊಂದಿಗೆ ಸಮ್ಮಿಲನವಾಗಿ ಯಾರ ಹೆಸರಿನಲ್ಲಿ ಖಾತಾ ಇದೆ, ಅದು ನೋಂದಣಿಯಾಗಬೇಕು

ಎನ್ನುವಂಥದ್ದಾಗಿದೆ. ಇದನ್ನು ಇವತ್ತು ಜಾರಿಗೆ ತಂದಿಲ್ಲ. ಇವತ್ತು ನಾವು ಇ-ಖಾತಾವನ್ನು ಏನು integration ಮಾಡಿದ್ದೇವೆ, ಅದನ್ನು 2006ನೇ ಸಾಲಿನಲ್ಲಿಯೇ ಕೃಷಿ ಭೂಮಿಗೆ ಜಾರಿಯಾಗಿದೆ. "ಭೂಮಿ" ಎನ್ನುವಂಥ ಡೇಟಾ ಬೇಸ್‌ನೊಳಗೆ ಏನು ಆರ್.ಟಿ.ಸಿ. generate ಮಾಡುತ್ತೇವೆ, ಅದರಲ್ಲಿ ಇದ್ದರೆ ಮಾತ್ರ ಕೃಷಿ ಭೂಮಿ ಎಂದು ಪರಿಗಣಿಸಲಾಗುವುದು. 2006ನೇ ಸಾಲಿನಲ್ಲಿಯೇ first integration ಆಗಿತ್ತು. 2014ರಲ್ಲಿ ಗ್ರಾಮ ಪಂಚಾಯಿತಿಗಳ ಇ-ಆಸ್ತಿ integration ಆಗಿದೆ. 2016ನೇ ಸಾಲಿನಲ್ಲಿ "Mojini" ಅಂದರೆ, 11E sketch ಮಾಡುತ್ತೇವೆ. ಅದು ಸಹ integration ಆಗಿದೆ. 2020ನೇ ಸಾಲಿನಲ್ಲಿ ಇ-ಆಸ್ತಿ ನೋಂದಣಿಯನ್ನು ಮುನಿಸಿಪಾಲಿಟಿಯಲ್ಲಿ ಮಾಡಲಾಗಿದ್ದು, ಅದೇ ರೀತಿ 2020ನೇ ಸಾಲಿನಲ್ಲಿ ಬಿ.ಬಿ.ಎಂ.ಪಿ. ಯಲ್ಲಿ ಸಹ ಶುರು ಮಾಡಲಾಗಿದೆ. Phased manner ನಲ್ಲಿ ಮಾಡಿಕೊಂಡು ಬರಲಾಗಿದೆ. ಈಗ ಏನಾಗಿದೆ ಎಂದರೆ, ಪರ್ಯಾಯ ವ್ಯವಸ್ಥೆ ಇರುವುದನ್ನು ತೆಗೆದು ಹಾಕಲಾಗಿದೆ. ಇಷ್ಟು ದಿವಸ ಇದೆಲ್ಲವೂ integration ಆಗಿದ್ದರೂ ಕೂಡ 'others' ಎನ್ನುವ option ನೀಡಲಾಗಿತ್ತು. ಆದರೆ, 'others' ನಲ್ಲಿ ಎಲ್ಲವೂ fake ಆಗುತ್ತಿತ್ತು. Fake ಎಂದರೆ, ಏನೆಂಬುದನ್ನು ತಾವು ಪ್ರಶ್ನಿಸಬಹುದು. ಏಕೆಂದರೆ, fake ಎಂಬುದರ ಬಗ್ಗೆ ನಾನು ಎಷ್ಟೇ ಹೇಳಿದರೂ ಕೂಡ ಯಾರಿಗೂ ಅರ್ಥವಾಗುವುದಿಲ್ಲ. ಅದಕ್ಕಾಗಿ ಅದರ ಒಂದು ಪ್ರತಿಯನ್ನು ತರಿಸಿದ್ದೇನೆ.

**(ಈ ಹಂತದಲ್ಲಿ fake ಪ್ರತಿಯನ್ನು ಮಾನ್ಯ ಸದಸ್ಯರು ಸದನದಲ್ಲಿ ಪ್ರದರ್ಶಿಸಿದರು)**

ಇದೊಂದು ಖಾತಾ ಪ್ರತಿಯಾಗಿದ್ದು, ನೋಡಲು ಅಸಲಿ ತರ ಇದೆ. ಆದರೆ, ಇದು ಶೇಕಡ ನೂರಕ್ಕೆ ನೂರರಷ್ಟು ನಕಲಿ ಪ್ರತಿಯಾಗಿದೆ. ಈ ರೀತಿಯಾಗಿ ಲಕ್ಷಾಂತರ ಖಾತಾ ನಡೆದಿದೆ. ಬಿ.ಬಿ.ಎಂ.ಪಿ. ವ್ಯಾಪ್ತಿಯಲ್ಲಾಗಲೀ ಅಥವಾ ಪಂಚಾಯಿತಿ ವ್ಯಾಪ್ತಿಯಲ್ಲಾಗಲೀ ಅಥವಾ ಮುನಿಸಿಪಾಲಿಟಿಯಲ್ಲಿ ಯಾವುದೇ ಖಾತಾ ಇರುವುದಿಲ್ಲ. ಕಂಪ್ಯೂಟರ್ ಶಾಪ್‌ನಲ್ಲಿ ಈ ರೀತಿ ಪ್ರತಿಯನ್ನು ಪಡೆದುಕೊಂಡು ಬರುತ್ತಾರೆ. ಇದರ ಆಧಾರದ ಮೇಲೆ ನೋಂದಣಿಯಾಗುತ್ತಿತ್ತು.

**(ಈ ಹಂತದಲ್ಲಿ ಉಪ ಸಭಾಪತಿಯವರು ಪೀಠವನ್ನು ಅಲಂಕರಿಸಿದರು)**

ಇಂತಹ ಆಸ್ತಿಗಳು ಎಷ್ಟಿವೆ ಎಂದು ಕೇಳುವುದಾದರೆ, ಬೆಂಗಳೂರಿನಲ್ಲಿಯೇ ಸುಮಾರು 10 ರಿಂದ 15 ಲಕ್ಷಗಳಷ್ಟು ಹಾಗೂ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಸಂಬಂಧಿಸಿದಂತೆ ಅಧಿಕೃತಾ ಡೇಟಾ ಪಡೆದುಕೊಂಡಿದ್ದು, 90 ಲಕ್ಷಗಳಷ್ಟು, ಮುನಿಸಿಪಾಲಿಟಿ ವ್ಯಾಪ್ತಿಯಲ್ಲಿ ಸುಮಾರು 30 ಲಕ್ಷಗಳಷ್ಟು ಆಸ್ತಿಗಳು ಇವತ್ತಿಗೂ ಖಾತೆಗೆ ಬಂದಿಲ್ಲ. ಆದರೆ, ಇವೆಲ್ಲವೂ ನೋಂದಣಿಯಾಗಿದೆ. ಅದು ಹೇಗೆ ಸಾಧ್ಯವೆಂದರೆ, ಕೇವಲ ನಕಲು ದಾಖಲೆ ಮೇಲೆ ಮಾಡಲಾಗಿದೆ. ಮಾನ್ಯ ಸದಸ್ಯರು ಸಹ ಮಧ್ಯವರ್ತಿಗಳ ಹಾವಳಿಯಿಂದ ಎನ್ನುವಂಥ ಮಾತನ್ನು ಹೇಳಿದರು. ಆದರೆ, ಇಂತಹ ನಕಲು ಖಾತಾ ಪ್ರತಿಯನ್ನು ಮಾಡಿಕೊಡುವವರು ಯಾರು? ಅದೇ ಮಧ್ಯವರ್ತಿಗಳೆ ಮಾಡುವುದು. ಒಂದು ಆಸ್ತಿಯ ನೋಂದಣಿಗೆ

ಸುಮಾರು ರೂ.40,000 ದಿಂದ ರೂ.50,000 ತೆಗೆದುಕೊಳ್ಳುತ್ತಾರೆ ಎಂದರೆ, ಇಂತಹ ನಕಲು ಪ್ರತಿಯನ್ನು ತಯಾರು ಮಾಡಿಕೊಡುವ ಸಲುವಾಗಿ ತೆಗೆದುಕೊಳ್ಳುವುದು. ಅದಕ್ಕಾಗಿ 'others' ಎನ್ನುವಂಥ option ಅನ್ನು ತೆಗೆದು ಹಾಕಲಾಗಿದೆ. ಪಂಚಾಯಿತಿಯಲ್ಲಿ ಖಾತಾ ಇದ್ದರೆ ನಮ್ಮದು, ಅವರದ್ದು automatically integrate ಆಗುವುದರಿಂದ ಅಲ್ಲಿ ಖಾತಾ ಇದ್ದರೆ ಇಲ್ಲಿ ರಿಜಿಸ್ಟ್ರೇಷನ್ ಆಗುತ್ತದೆ. ಪೇಪರ್ ಖಾತೆ ಮೇಲೆ ರಿಜಿಸ್ಟ್ರೇಷನ್ ಮಾಡುವುದಿಲ್ಲ ಎನ್ನುವಂಥ ಕೆಲಸ ಮಾಡಲಾಗಿದೆ. ಈಗಾಗಲೇ ಮಾನ್ಯ ಸದಸ್ಯರು ಹೇಳಿದ ಹಾಗೆ ಇದನ್ನು ಬಿ.ಬಿ.ಎಂ.ಪಿ. ಯಲ್ಲಿ roll out ಮಾಡಿದಾಗ ಆರಂಭದಲ್ಲಿ ಬಹಳ ಸಮಸ್ಯೆಯಾಗಿತ್ತು. ಆರಂಭದಲ್ಲಿ ಸುಮಾರು 15,000 ಅರ್ಜಿ ಬಂದಿದ್ದು, ಒಂದು ದಿನಕ್ಕೆ ವಿಲೇವಾರಿ ಮಾಡಲು ಸಾಧ್ಯವಾಗಿದ್ದು, ಕೇವಲ 200 ರಿಂದ 300 ಅರ್ಜಿಗಳು ಮಾತ್ರ.

ಆದರೆ, ಇವತ್ತಿನ ದಿವಸ ಬಿ.ಬಿ.ಎಂ.ಪಿ. ಲಿಮಿಟ್‌ನಲ್ಲಿ ಕೂಡ ಒಂದು ದಿನಕ್ಕೆ ಸುಮಾರು 2,000 ಗಳಷ್ಟು ಅರ್ಜಿ ಬರುತ್ತಿದ್ದು, ಒಂದು ದಿನಕ್ಕೆ ಸುಮಾರು 3,000 ಗಳಷ್ಟು ಇ-ಖಾತಾವನ್ನು ಇಶ್ಯೂ ಮಾಡುವಂಥ ಪರಿಸ್ಥಿತಿ ಬಂದಿದೆ. ಆರಂಭದಲ್ಲಿ ಬಹಳ ಸಮಸ್ಯೆಯಾಗಿರುವುದು ನಿಜ, ಇಲ್ಲವೆಂದು ಹೇಳಲ್ಲ. ಆದರೆ, ಮಾನ್ಯ ಸದಸ್ಯರು ಸಹ ಅರ್ಥ ಮಾಡಿಕೊಳ್ಳಬೇಕು. Almost within one and a half months ನಾವು system ಅನ್ನು stabilise ಮಾಡಿದ್ದೇವೆ. ಇವತ್ತು ಸುಮಾರು ಹತ್ತಾರು ಲಕ್ಷ ನಕಲು ನೋಂದಣಿಯನ್ನು ನಿಲ್ಲಿಸಿದ್ದರೂ ಕೂಡ within a matter of two months ಸಿಸ್ಟಂ ಅನ್ನು stabilise ಮಾಡಿ, ಬಹುತೇಕವಾಗಿ transitional ಸಮಸ್ಯೆಯನ್ನು ಶೇಕಡ 90 ರಷ್ಟು ಬಗೆಹರಿಸಿದ್ದು, ಇನ್ನು ಸಮಸ್ಯೆ ಇದೆ, ಇಲ್ಲವೆಂದು ಹೇಳುವುದಿಲ್ಲ. ದಿನನಿತ್ಯ ಸಮಸ್ಯೆಯನ್ನು ಬಗೆಹರಿಸಲಾಗುತ್ತಿದೆ. ಹಾಗಾಗಿ, ಸುಮಾರು 54,000 ಖಾತಾಗಳು ಬಿ.ಬಿ.ಎಂ.ಪಿ. ಯಿಂದ ಇಶ್ಯೂ ಆಗಿದೆ. ಪ್ರತಿ ದಿನ ಖಾತಾವನ್ನು ಇಶ್ಯೂ ಮಾಡುವಂಥ capacity ಬಿ.ಬಿ.ಎಂ.ಪಿ. ಯಲ್ಲಿ ದಿನಕ್ಕೆ ಸುಮಾರು 3,000 ಕ್ಕೆ ತಲುಪಿದೆ. ಬಿ.ಬಿ.ಎಂ.ಪಿ. ಯವರೇ ಮನೆ ಬಾಗಿಲಿಗೆ ಹೋಗಿ ಖಾತಾವನ್ನು ಮಾಡಿಕೊಡುವಂಥ ಅಭಿಯಾನ ಮಾಡುತ್ತಿದ್ದಾರೆ. ಆರಂಭದಲ್ಲಿ ಸುಲಿಗೆ ನಡೆದಿರುವುದು ನಿಜ, ಇಲ್ಲವೆಂದು ಹೇಳುವುದಿಲ್ಲ. ಪ್ರಾರಂಭದಲ್ಲಿ ಇಂತಹ ಸಮಸ್ಯೆಗಳಿರುತ್ತವೆ. ಮಾನ್ಯ ಸದಸ್ಯರು ರೆವಿನ್ಯೂ ಬಗ್ಗೆ ಸಹ ಕೇಳಿದ್ದಾರೆ. ನಾನು ಒಂದು ವಿಚಾರವನ್ನು ಹೇಳಬಯಸುವುದೇನೆಂದರೆ, ಅಕ್ರಮದಿಂದ ಸರ್ಕಾರ ಹಣ ಮಾಡಬೇಕೇ? ಅಕ್ರಮದಿಂದ ಆದಾಯ ಸಂಪಾದನೆ ಮಾಡಬೇಕೇ?

**ಶ್ರೀ ಎಸ್.ಎಲ್.ಭೋಜೇಗೌಡ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅಧಿಕಾರಿಗಳು ಹಣ ಸಂಪಾದನೆ ಮಾಡುತ್ತಿದ್ದಾರೆ ಅಲ್ಲವೇ?

**ಶ್ರೀಮತಿ ಭಾರತಿ ಶೆಟ್ಟಿ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಈಗ ಆಗಿರುವುದು ಏನು?

**ಶ್ರೀ ಕೃಷ್ಣ ಭೈರೇಗೌಡ:-** ಮಾನ್ಯ ಸಭಾಪತಿಯವರೇ, ಆಗಿರುವುದನ್ನು ನಾನು ಹುಡುಕಿಕೊಂಡು ಕುಳಿತರೆ, ಮುಂದಿನ ಕೆಲಸ ಏನು ಮಾಡಲು ಆಗುವುದಿಲ್ಲ. ಕೊನೆಪಕ್ಷ ಆಗುತ್ತಿದ್ದ ಅಕ್ರಮಗಳಿಗೆ ತಡೆ ಹಾಕಿದ್ದೇನೆ. ಹಿಂದೆ ನಡೆದಂಥ ಅಕ್ರಮಗಳನ್ನು ಹುಡುಕಿಕೊಂಡು ಕುಳಿತರೆ, ಅದು millions ನಲ್ಲಿದೆ.

**ಶ್ರೀಮತಿ ಭಾರತಿ ಶೆಟ್ಟಿ:-** ಮಾನ್ಯ ಸಭಾಪತಿಯವರೇ, ಈಗ ಸಹ ಅಕ್ರಮ ನಡೆಯುತ್ತಿದೆ.

**ಉಪ ಸಭಾಪತಿಯವರು:-** ಮಾನ್ಯ ಸದಸ್ಯರು ಕೇಳಿರುವ ಪ್ರಶ್ನೆಗೆ ಮಾತ್ರ ಉತ್ತರ ಕೊಡಿ.

**ಶ್ರೀ ಕೃಷ್ಣ ಭೈರೇಗೌಡ:-** ಮಾನ್ಯ ಸಭಾಪತಿಯವರೇ, ಈಗ ಅಕ್ರಮವು ಶೇಕಡ 5 ರಷ್ಟಕ್ಕೆ ಇಳಿಕೆಯಾಗಿದೆ. ಇಲ್ಲವೆಂದು ಹೇಳುವುದಿಲ್ಲ. ಒಂದು ವಿಚಾರವನ್ನು ಸ್ಪಷ್ಟವಾಗಿ ತಿಳಿಸುವುದೇನೆಂದರೆ, ಸರ್ಕಾರ ಕಾನೂನುಬಾಹಿರವಾಗಿ ತಪ್ಪೆಂದು ಗೊತ್ತಿದ್ದರೂ ಸಹ ಹಣ ಸಂಪಾದನೆ ಮಾಡಬಾರದು, ಗೊತ್ತಿಲ್ಲದೇ ಆಗುವುದು ಬೇರೆ ವಿಚಾರ. ಕಾನೂನುಬಾಹಿರವಾಗಿ ಹಣ ಸಂಪಾದನೆ ಮಾಡಲು ಹೋಗಬಾರದು ಎಂಬುದು ನನ್ನ ನಂಬಿಕೆಯಾಗಿದ್ದು, ಅದರ ಪ್ರಕಾರ ಮಾಡುತ್ತಿದ್ದೇವೆ. ಅಷ್ಟಕ್ಕೂ ಮೀರಿ ಹೇಳುವುದೇನೆಂದರೆ, ಕಳೆದ ವರ್ಷಕ್ಕಿಂತ ಈ ವರ್ಷ ಸ್ಟ್ಯಾಂಪ್ಸ್ ಅಂಡ್ ರಿಜಿಸ್ಟ್ರೇಷನ್‌ನಲ್ಲಿ ಅಕ್ಟೋಬರ್ ಕೊನೆಯವರೆಗೂ ಶೇಕಡ 21 ರಷ್ಟು growth ಅನ್ನು ನೋಂದಾಯಿಸಲಾಗಿದೆ. ಕಳೆದ ವರ್ಷ ಅಕ್ಟೋಬರ್‌ನಲ್ಲಿಯೇ ಜಾಸ್ತಿ ಮಾಡಿದ್ದೇವೆ. ನೋಂದಣಿಯಿಂದ ಬರುವಂಥ ಆದಾಯ by the end of October ಗೆ ಶೇಕಡ 21 ರಷ್ಟಿದೆ.

**ಶ್ರೀ ಎಸ್.ಎಲ್.ಭೋಜೇಗೌಡ:-** ಮಾನ್ಯ ಸಭಾಪತಿಯವರೇ, number of documents…

**ಶ್ರೀ ಕೃಷ್ಣ ಭೈರೇಗೌಡ:-** ಮಾನ್ಯ ಸಭಾಪತಿಯವರೇ, number of documents ಕಡಿಮೆಯಾಗಿರಬಹುದು. ಏತಕ್ಕೆ ಕಡಿಮೆಯಾಗಿದೆ ಎಂದರೆ, ಅಕ್ರಮ ನಡೆಸಲು ಅವಕಾಶ ಇಲ್ಲದ ಪ್ರಯುಕ್ತ ನಂಬರ್ ಆಫ್ ಡಾಕ್ಯೂಮೆಂಟ್ಸ್ ಕಡಿಮೆಯಾಗಿದೆ. ಹಾಗಾದರೆ, ಅಕ್ರಮ ತಡೆಗಟ್ಟುವುದನ್ನು ನಿಲ್ಲಿಸಬೇಕೇ? ಕೇಂದ್ರ ಸರ್ಕಾರದವರು "integration mode" ನಲ್ಲಿ ಮಾಡಬೇಕೆಂದು recommend ಮಾಡಿದ್ದಾರೆ, ಅವಶ್ಯಕತೆ ಇದ್ದರೆ ಅದರ ಪ್ರತಿ ಸಹ ಕೊಡುತ್ತೇನೆ. ಒಂದು ವೇಳೆ "integration mode" ನಲ್ಲಿ ಮಾಡಲಿಲ್ಲವೆಂದರೆ, incentive ಕೊಡುವುದಿಲ್ಲ ಎಂದು ಸಹ ಹೇಳಿರುವುದರಿಂದ ಅದನ್ನು ನಾನು ಅನುಷ್ಠಾನ ಮಾಡಿದ್ದೇನೆ. Non-registrable stamp duty ಗೆ ಸಂಬಂಧಿಸಿದಂತೆ ಕಳೆದ ಅಧಿವೇಶನದಲ್ಲಿ rate revise ಮಾಡಿಕೊಟ್ಟಿದ್ದು, ಅದರ ಜೊತೆಗೆ ಸೋರಿಕೆಯನ್ನು ತಡೆಗಟ್ಟುತ್ತೇನೆ ಎನ್ನುವಂಥ ಮಾತನ್ನು ಹೇಳಿದ್ದೆನು. ಕಳೆದ ವರ್ಷ Non-registrable stamp duty ಯಲ್ಲಿ ಇಲ್ಲಿಯವರೆಗೂ ರೆವಿನ್ಯೂ ರೂ.1,400 ಕೋಟಿಗಳಿದ್ದು, ಈಗ ಸುಮಾರು ರೂ.2,300 ಕೋಟಿ

ಬಂದಿದೆ. ಅಕ್ರಮ ತಡೆಗಟ್ಟಿರುವ ಪ್ರಯುಕ್ತ ಇಲ್ಲಿ ನಷ್ಟವಾಗುತ್ತಿದ್ದು, ಬೇರೆ ಮೂಲದಿಂದ ಅದನ್ನು make up ಮಾಡಿ ಅಕ್ರಮ ತಡೆಗಟ್ಟುವಂಥ ಕೆಲಸ ಮಾಡಿ ಒಟ್ಟಾರೆಯಾಗಿ ಶೇಕಡ 20 ರಷ್ಟು stamps and registration ನಲ್ಲಿ growth rate register ಮಾಡಲಾಗುವುದು. ಬೇರೆ ಆದಾಯ ಇಲಾಖೆಗಳಲ್ಲಿ growth ಶೇಕಡ 11 ರಷ್ಟು ಇದೆ. ನಾನು ಅಕ್ರಮ ಬಂದ್ ಮಾಡಿ by the end of the year, 20% growth achieve ಮಾಡಬೇಕೆಂದು target ಇಟ್ಟುಕೊಂಡಿದ್ದೇನೆ. ಅದನ್ನು ಸಾಧಿಸುತ್ತೇವೆ.

**ಶ್ರೀ ಶಶೀಲ್ ಜಿ.ನಮೋಶಿ:-** ಮಾನ್ಯ ಸಭಾಪತಿಯವರೇ, ...

**ಉಪ ಸಭಾಪತಿಯವರು:-** ಮಾನ್ಯ ಸದಸ್ಯರೇ, ಆಡಳಿತ ಪಕ್ಷವಾಗಲೀ, ವಿರೋಧ ಪಕ್ಷದವರಾಗಲೀ ಒಂದು ಪ್ರಶ್ನೆಗೆ 5 ರಿಂದ 8 ನಿಮಿಷ ಮಾತ್ರ ಸಮಯ ನೀಡಲಾಗುವುದು. ನಿನ್ನೆ ದಿವಸ ಹೆಚ್ಚು ಸಮಯ ಪ್ರಶ್ನೋತ್ತರ ನಡೆದ ಪ್ರಯುಕ್ತ ಹಲವಾರು ಸದಸ್ಯರಿಗೆ ಪ್ರಶ್ನೆ ಕೇಳಲು ಅವಕಾಶ ಸಿಕ್ಕಿಲ್ಲ. ಹಾಗಾಗಿ, ಸಂಬಂಧಪಟ್ಟ ಸಚಿವರು ಹಾಗೂ ಪ್ರಶ್ನೆ ಕೇಳುವ ಸದಸ್ಯರು ಅದನ್ನು ಅರ್ಥ ಮಾಡಿಕೊಳ್ಳಬೇಕು. ನಾನು ಒಂದು ಪ್ರಶ್ನೆಗೆ 5 ರಿಂದ 6 ನಿಮಿಷಕ್ಕೂ ಹೆಚ್ಚು ಸಮಯ ಕೊಡುವುದಿಲ್ಲ. ದಯವಿಟ್ಟು ತಮ್ಮ ಮಾತನ್ನು ಬೇಗ ಮುಗಿಸಿ.

**ಶ್ರೀ ಶಶೀಲ್ ಜಿ.ನಮೋಶಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರೇ ಬೋಗಸ್ ಆಸ್ತಿಗಳು ಅಥವಾ ಸರ್ಕಾರಿ ಆಸ್ತಿಗಳು ಸಹ ಬೋಗಸ್ ಆಗಿ ರಿಜಿಸ್ಟ್ರೇಷನ್ ಆಗಿದೆಯೇ ಹಾಗೂ ಇ-ಖಾತಾ ನೋಂದಣಿಯಾದ ಮೇಲೆ ಅವೆಲ್ಲವನ್ನೂ ತಕ್ಷಣವೇ ರದ್ದುಗೊಳಿಸಲಾಗುತ್ತದೆಯೇ ಎನ್ನುವುದು ಮೊದಲ ಪ್ರಶ್ನೆಯಾಗಿದೆ. ಎರಡನೆಯದಾಗಿ, ಇ-ಖಾತಾ ಶುರುವಾದ ನಂತರ ಸಬ್ ರಿಜಿಸ್ಟ್ರಾರ್ ಆಫೀಸ್‌ನಲ್ಲಿ corruption ಕಡಿಮೆಯಾಗುತ್ತದೆಯೇ? ಜೊತೆಗೆ ಮೂರು ವರ್ಷಗಳ ಬಳಿಕ ಅಲ್ಲಿದ್ದ ಯಾವುದೇ ಅಧಿಕಾರಿ ಕಾರ್ಯನಿರ್ವಹಿಸಬಾರದು ಎನ್ನುವಂಥ ಕಾನೂನು ಜಾರಿ ಮಾಡಲಾಗಿದೆ. ಆದರೆ, ಅಲ್ಲಿರುವಂಥ daily wage employees ಸುಮಾರು 15 ರಿಂದ 20 ವರ್ಷಗಳಿಂದ ಕೆಲಸ ಮಾಡುತ್ತಿದ್ದಾರೆ. ಅದಲ್ಲದೇ ನಮ್ಮನ್ನು ಯಾರೂ ಸಹ ಕೆಲಸದಿಂದ ತೆಗೆಯುವುದಿಲ್ಲ ಎನ್ನುವಂಥ ಮಟ್ಟಕ್ಕೆ ಮಾತನಾಡುತ್ತಾರೆ. ಹಾಗಾಗಿ, ಆ daily wage employees ಬಗ್ಗೆ ಏನು ವಿಚಾರ ಮಾಡಲಾಗಿದೆ and what about the corruption in Sub Registrar's office?

(ಮುಂದು)

**ಶ್ರೀ ಕೃಷ್ಣ ಭೈರೇಗೌಡ (ಕಂದಾಯ ಸಚಿವರು):-** ಮಾನ್ಯ ಸಭಾಪತಿಯವರೇ, ಮೊದಲನೇ ಪ್ರಶ್ನೆ ಇರುವುದೇನೆಂದರೆ, ಹಳೆಯದೆನ್ನೆಲ್ಲಾ ಕ್ಯಾನ್ಸಲ್ ಮಾಡುತ್ತೀರಾ ಎನ್ನುವುದು. ಅದಕ್ಕೆ ಸಂಬಂಧಪಟ್ಟ ಸ್ಥಳೀಯ ಸಂಸ್ಥೆಗಳು ಕ್ಯಾನ್ಸಲ್ ಮಾಡುವಂತಹದ್ದನ್ನು ಮಾಡಬೇಕು. ನಾನು ಅದರಲ್ಲಿ ನೋಂದಣಿ ಮಾಡಿದ್ದೇನೆ. ಈಗ ಅದನ್ನು ಕೇಳುವುದಕ್ಕೆ ಹೋದರೆ, ಹಿಂದಿನ ಕಾನೂನಿನಲ್ಲಿ ಇದಕ್ಕೆ ಏನೇನು ಬೇಕೋ, ಅದೆಲ್ಲವನ್ನು ಕಾನೂನಿನಲ್ಲಿ set ಮಾಡಿಕೊಂಡಿದ್ದರು. So that, ಏನೇ ಕಾನೂನುಬಾಹಿರವಾದರೂ ಕೂಡ ಯಾರಿಗೂ ತೊಂದರೆಯಾಗದಾಗೇ ಅಧಿಕಾರಿಗಳಿಗೆ ಇತ್ತು. Fake ಖಾತೆ ಮೇಲೆ ಮಾಡಿರುವಂತಹದ್ದನ್ನು, ಈಗ ಕ್ಯಾನ್ಸಲ್ ಮಾಡುವುದು ಬಿಡುವುದು ಮುನಿಸಿಪಾಲಿಟಿಯವರಿಗೆ ಬಿಟ್ಟಿರುವಂತಹದ್ದು. ನಾವು ಹಳೆಯದನ್ನು ನೋಡುವುದಕ್ಕೆ ಹೋಗುವುದಿಲ್ಲ ಎಂದು ಈಗಾಗಲೇ ಹೇಳಿದ್ದೇನೆ. ಇದು ಇನ್ನು ಮುಂದೆ ಆಗಬಾರದು ಎಂಬುದು ನಮ್ಮ ಉದ್ದೇಶವಾಗಿದೆ. ಅವರಿಗೆ one time ನಲ್ಲಿ municipal limits ನಲ್ಲಿ "ಬಿ" ಖಾತಾ ಮಾಡಿಕೊಡಬೇಕು ಎನ್ನುವ ಅಲೋಚನೆ ಸರ್ಕಾರದಲ್ಲಿದೆ. ಇನ್ನು ಒಂದೂವರೆ ತಿಂಗಳಲ್ಲಿ "ಬಿ" ಖಾತೆಗೆ ಅವಕಾಶ ಮಾಡಿಕೊಟ್ಟು, ಅವರನ್ನೆಲ್ಲಾ ಖಾತಾ fold ಗೆ ತರುವಂತಹ ಒಂದು ಕೆಲಸವನ್ನು municipal administration ನವರು ಮಾಡುವುದಕ್ಕೆ ಹೊರಟಿದ್ದಾರೆ. ಆರ್.ಡಿ.ಪಿ.ಎ.ಆರ್., ನವರಲ್ಲಿ ಕೂಡ ಚರ್ಚೆ ನಡೆಯುತ್ತಿದೆ. ಎರಡನೆಯದಾಗಿ, corruption ಕಡಿಮೆಯಾಗುತ್ತದೆ. ಅದನ್ನು ಮಾಡಬೇಕು ಎನ್ನುವ ಉದ್ದೇಶದಿಂದ ಅಕ್ರಮಗಳಿಗೆ ಕಡಿವಾಣ ಹಾಕಿದ್ದೇವೆ. ನಾನು ಹೋಗಿಬಿಟ್ಟು, corruption ಮಾಡಿದವರನ್ನು ಹಿಡಿಯುತ್ತೇವೆ ಎಂದು ಹೇಳಿದರೆ, ಅದು ಆಗದೇ ಇರುವಂತಹ ಕೆಲಸ. Corruption ನ ಮೂಲವನ್ನು ಬಂದ್ ಮಾಡಿದರೆ, ಎಲ್ಲೋ ಒಂದು ಕಡೆ corruption ಗೂ ಕಡಿವಾಣ ಬೀಳುತ್ತದೆ ಎನ್ನುವ ನಂಬಿಕೆಯ ಮೇಲೆ ಮಾಡಿದ್ದೇವೆ. ಅದು ಆಗುತ್ತದೆಯೋ, ಬಿಡುತ್ತದೆಯೋ ಎಂಬುದನ್ನು ನೋಡೋಣ. ಮೂರನೆಯದಾಗಿ, ಹೊರ ಗುತ್ತಿಗೆಯ ಸಿಬ್ಬಂದಿಯವರಿಗೂ ಖಂಡಿತವಾಗಿಯೂ ಗಮನ ಕೊಡುತ್ತೇವೆ. ಅವರನ್ನು ಸರಿ ದಾರಿಗೆ ತರುವಂತಹ ಕೆಲಸವನ್ನು ಮಾಡುತ್ತೇವೆ.

**ಪ್ರಶ್ನೆ ಸಂಖ್ಯೆ: 1098+1121**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀಮತಿ ಹೇಮಲತಾ ನಾಯಕ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿಕೊಟ್ಟಿದ್ದಾರೆ. ಸದನದಲ್ಲಿ ಮಾನ್ಯ ಸಚಿವರು ಇದ್ದರೆ ಒಳ್ಳೆಯದಾಗುತ್ತಿತ್ತು. ಕಳೆದ ಒಂದು ವರ್ಷದಿಂದ ಈ ಇಲಾಖೆಯಲ್ಲಿರುವ ಸಮಸ್ಯೆಗಳ ಬಗ್ಗೆ ನಾನು ಮಾತನಾಡಿದ್ದೇನೆ. ಮಾನ್ಯ ಸಚಿವರಿಂದ ಉತ್ತರ ಬಂದರೆ ಚೆನ್ನಾಗಿ ಇರುತ್ತಿತ್ತು. ಮಾನ್ಯ ಸಚಿವರು ಸ್ಪಷ್ಟನೆ ಕೊಡುತ್ತೇನೆಂದು ಹೇಳಿದ್ದಾರೆ. ನಾನು ಈ ಇಲಾಖೆಗೆ ಸಂಬಂಧಪಟ್ಟಂತೆ, ಪ್ರಶ್ನೆಯನ್ನು ಕೇಳಿದ್ದೆ. ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ನಾನು ಮೂಲ ಪ್ರಶ್ನೆಗಳ ಬಗ್ಗೆ ಕೇಳುವುದಾದರೆ, ಇವತ್ತಿನ ದಿನ ಸಿ ಅಂಡ್ ಆರ್ ನಿಯಮದ ಬಗ್ಗೆ ಹೇಳಬಯಸುತ್ತೇನೆ. 2014ರ ಅಧಿಸೂಚನೆಯಂತೆ, ನಿಲಯ ಪಾಲಕರು ಮತ್ತು ಪ್ರಥಮ ದರ್ಜೆ ಸಹಾಯಕರು ಒಂದೇ. ಅಧಿಸೂಚನೆಯಲ್ಲಿರುವಂತಹ ಹುದ್ದೆಗಳಾಗಿವೆ. 2011ರ ಸಿ ಅಂಡ್ ಆರ್ ನಿಯಮದಲ್ಲಿ ಎಫ್.ಡಿ.ಸಿ. ಪದನಾಮಗಳನ್ನು ಸೇರ್ಪಡೆಗೊಳಿಸಿರುವುದಿಲ್ಲ. ಸಿ ಅಂಡ್ ಆರ್ ನಿಯಮದಲ್ಲಿ ನಿಲಯ ಪಾಲಕರ ಹುದ್ದೆಗಳು ಹಳೆಯ ಹುದ್ದೆಗಳಾಗಿವೆ. ಒಂದೇ ಅಧಿಸೂಚನೆಯಲ್ಲಿರುವ ಎರಡು ಹುದ್ದೆಗಳು ಮುಂಬಡ್ತಿಯಲ್ಲಿ ಪರಿಗಣಿಸಬೇಕಾಗಿತ್ತು. ಆದರೆ ಹಳೆಯ ಸಿ ಅಂಡ್ ಆರ್ ನಿಯಮಗಳನ್ನು ಪರಿಗಣಿಸುವುದರಿಂದ, ಎಫ್.ಡಿ.ಸಿ., ಶಿಕ್ಷಕರು, ಉಪನ್ಯಾಸಕರಿಗೆ ಅನ್ಯಾಯ ಸರಿಪಡಿಸುವುದು ಹೇಗೆ? ಮುಂಬಡ್ತಿಯಲ್ಲಿರುವಂತಹದ್ದನ್ನು ಮುಂದೆ ಹೇಗೆ ಸರಿಪಡಿಸುತ್ತೀರಾ? ನಾನು ತಮ್ಮ ಮೂಲಕ ಮಾನ್ಯ ಸಚಿವರಿಗೆ ಕೇಳಬಯಸುತ್ತೇನೆ.

**ಉಪ ಸಭಾಪತಿಯವರು:-** ಮಾನ್ಯ ಅರುಣ್‌ರವರೇ, ಮಾನ್ಯ ಸದಸ್ಯರು ಕೇಳಿರುವ ಪ್ರಶ್ನೆಯನ್ನು ಬಿಟ್ಟು, ಏನಾದರೂ ಪ್ರಶ್ನೆ ಕೇಳುವುದಾದರೆ ಕೇಳಿ.

**ಶ್ರೀಮತಿ ಹೇಮಲತಾ ನಾಯಕ್:-** ಈ ಇಲಾಖೆಯಲ್ಲಿ ಯಾವುದು ಸರಿಯಿಲ್ಲ ಎಂಬುದು ನನ್ನ ಅನಿಸಿಕೆಯಾಗಿದೆ.

**ಉಪ ಸಭಾಪತಿಯವರು:-** ಮಾನ್ಯ ಸದಸ್ಯರೇ, ಅದರ ಬಗ್ಗೆ ಮಾನ್ಯ ಸಚಿವರಿಂದ ಉತ್ತರ ಕೇಳೋಣ. ಮಾನ್ಯ ಅರುಣ್‌ರವರೇ, ತಾವು ಪ್ರಶ್ನೆ ಕೇಳಿ.

**ಶ್ರೀ ಡಿ.ಎಸ್. ಅರುಣ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ಧನ್ಯವಾದಗಳನ್ನರ್ಪಿಸುತ್ತೇನೆ. ಈ ಮುಂಬಡ್ತಿ ವಿಚಾರದಲ್ಲಿ 2011 ರ ಸಿ ಅಂಡ್ ಆರ್ ನಿಯಮ ಇತ್ತು. ಈಗ 2024ರಲ್ಲಿ ಅದಕ್ಕೊಂದು ಪರಿಷ್ಕರಣೆ ಮಾಡಬೇಕು ಎನ್ನುವ ಪ್ರಯತ್ನವೇನಿದೆ, ಅದು ತುಂಬಾ ವಿಳಂಬವಾಗಿದೆ. ವಿಶೇಷವಾಗಿ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಲ್ಲಿ ಮುಂಬಡ್ತಿ ಮಾಡಬೇಕಾದರೆ, ನಮ್ಮ ಪ್ರಶ್ನೆ ಏನೆಂದರೆ, ಕರ್ತವ್ಯ ಸ್ವರೂಪದ ಪ್ರಕಾರ ಡಿಪಿಆರ್ 2020 ಏನು ಹೇಳುತ್ತದೆ ಎಂದರೆ, ಅಲ್ಲಿರುವವರಿಗೆ ಮುಂಬಡ್ತಿ ಕೊಡುವುದಾದರೆ, ಒಟ್ಟು ಯೋಜನೆಗಳ implementation ಗೆ ಅವರು ನಮಗೆ ಸಹಕಾರಿಯಾಗುತ್ತಾರೆ. ನೇಮಕಾತಿ ಮಾಡಬೇಕಾದರೆ, ಅಲ್ಲಿ ಇಲ್ಲದೇ ಇರುವವರಿಗೆ ನೇರವಾಗಿ ತೆಗೆದುಕೊಂಡು ಬಂದು ಕೂರಿಸಿದರೆ, ಈ

ಮುಂಬಡ್ತಿಯವರನ್ನು ಇಲಾಖೆಯಲ್ಲಿ ಇರುವಂತಹ ತಾಲ್ಲೂಕು ವಿಸ್ತರಣಾ ಅಧಿಕಾರಿಗಳು ಆಗ ಇರಲಿಲ್ಲ. ಇದು ಹೊಸದಾಗಿ ಸೃಷ್ಟಿಯಾಗಿರುವುದು. ನಮ್ಮ ಯೋಜನೆಗಳ implementation ಕುರಿತು ಅವರಿಗೆ awareness ಇರುತ್ತದೆ.

**ಉಪ ಸಭಾಪತಿಯವರು:-** ಮಾನ್ಯ ಸದಸ್ಯರೇ, ಕುಳಿತುಕೊಳ್ಳಿ. ಮಾನ್ಯ ಸಚಿವರೇ, ಉತ್ತರ ಹೇಳಿ.

**ಶ್ರೀ ಕೃಷ್ಣ ಭೈರೇಗೌಡ (ಕಂದಾಯ ಸಚಿವರು) (ವಸತಿ ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕಳೆದ ಬಾರಿ ಪ್ರಶ್ನೆಯನ್ನು ಕೇಳಿದ್ದರಿಂದ, ನಾವು ಈಗ ಅದನ್ನು ಬಹಳ speed up ಆಗಿ ಮಾಡಿ, ಈಗಾಗಲೇ ನಾವು ಹೊಸ ಸಿ ಅಂಡ್ ಆರ್ ಅನ್ನು revise ಮಾಡಿ, ಆರ್ಥಿಕ ಇಲಾಖೆ ಅನುಮೋದನೆಗೆ ಕಡತ ಹೋಗಿದೆ. ಅದು ಅಲ್ಲಿಂದ ಡಿ.ಪಿ.ಎ.ಆರ್., ಗೆ ಹೋಗಿ ಬರುತ್ತದೆ. ಅದು ಬಂದ ಕೂಡಲೇ ನಾವು ಅದನ್ನು ಅನುಷ್ಠಾನ ಮಾಡುತ್ತೇವೆ. ಈಗ ಪರಿಷ್ಕೃತ ಮಾಡಿರುವುದರಲ್ಲೂ ಕೆಲವು ಪಾಯಿಂಟ್‌ಗಳನ್ನು ಮಾನ್ಯ ಸದಸ್ಯರು point out ಮಾಡಿದ್ದಾರೆ.

ಮಾನ್ಯ ಸಭಾಪತಿಯವರೇ, ತಮಗೆ ಗೊತ್ತಿರುವ ಹಾಗೆ, ನಾವು ಇದನ್ನೆಲ್ಲಾ draft ಮಾಡಿ, objections call ಮಾಡಿಯೇ, finalise ಮಾಡುವಂತಹದ್ದು. ಆ objections ಏನೇನು ಬಂದಿದೆ, ಅದನ್ನು hear ಮಾಡಿ, ಮಾಡುವಂತಹದ್ದು. Objections ಯಾವಾಗಲೂ ಇದ್ದೇ ಇರುತ್ತದೆ. ಆದರೆ ಕಾನೂನು ಚೌಕಟ್ಟಿನೊಳಗಡೆ ಮಾಡುತ್ತಿದ್ದೇವೆ. ಅವರದು revise ಆಗಬೇಕು ಎನ್ನುವಂತಹದ್ದನ್ನು ನಾವು ಖಂಡಿತವಾಗಿ revise ಮಾಡುತ್ತಿದ್ದೇವೆ. ಇದು final stage ನಲ್ಲಿ ಇದೆ. ಎಲ್ಲಾ ಸಮಸ್ಯೆಗಳಿಗೂ ಪರಿಹಾರ ಕೊಡುವುದಕ್ಕಾಗುತ್ತದೆ ಎನ್ನುವ ಬಗ್ಗೆ ತಾವು ಕೂಡ ವಿಚಾರ ಮಾಡಬೇಕು. ಇವತ್ತಿನ ಅವಶ್ಯಕತೆಗೆ ಅನುಗುಣವಾಗಿ ಸಿ ಅಂಡ್ ಆರ್‌ನ್ನು revise ಮಾಡಿ, ಅದರಲ್ಲಿ by and large ಅವರ ಬೇಡಿಕೆ ಏನಿತ್ತು, majority ಅದರಲ್ಲಿ ಎಲ್ಲವೂ solve ಆಗುತ್ತದೆ. ಈಗಾಗಲೇ ನಮ್ಮ ಇಲಾಖೆಯಿಂದ ಕಡತ ಆರ್ಥಿಕ ಇಲಾಖೆಗೆ ಹೋಗಿದೆ. ಆರ್ಥಿಕ ಇಲಾಖೆಯಲ್ಲಿ follow up ಮಾಡಿ, ಅದನ್ನು ಬೇಗ ತರಿಸಿಕೊಂಡು, ಅದನ್ನು final notification ಮಾಡಿ, ಪ್ರಮೋಷನ್‌ನಲ್ಲಿ ಕೆಲವರಿಗೆ ಏನೊಂದು ತಾರತಮ್ಯವಾಗಿದೆ ಎಂದು ಮಾನ್ಯ ಸದಸ್ಯರುಗಳು ಹೇಳುತ್ತಿದ್ದಾರೆ. ಅದನ್ನು ಬಗೆಹರಿಸುವುದಕ್ಕೆ ಸರ್ಕಾರ ಬದ್ಧವಾಗಿದೆ. ನಾವು ಕೆಲಸವನ್ನು ಮಾಡಿದ್ದೇವೆ ಮತ್ತು ಅದನ್ನು final stage ಗೂ ತಂದಿದ್ದೇವೆ.

**ಉಪ ಸಭಾಪತಿಯವರು:-** ಮಾನ್ಯ ಸದಸ್ಯರೇ, ತಮ್ಮ ಉಪ ಪ್ರಶ್ನೆ ಏನಾದರೂ ಇದ್ದರೆ, ಅದರಲ್ಲಿ ಒಂದು ಪ್ರಶ್ನೆ ಕೇಳಿ.

**ಶ್ರೀಮತಿ ಹೇಮಲತಾ ನಾಯಕ್:-** ಮಾನ್ಯ ಸಭಾಪತಿಯವರೇ, ಉಪ ಪ್ರಶ್ನೆ ಇದೆ. ಈಗ ಹೆಚ್ಚು ಸೇವೆ ಸಲ್ಲಿಸಿದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಹಿಂದುಳಿದ ವರ್ಗದ ಪ್ರಥಮ ದರ್ಜೆ ಸಹಾಯಕರಿಗೆ, ಶಿಕ್ಷಕರಿಗೆ, ಉಪನ್ಯಾಸಕರಿಗೆ ಮುಂಬಡ್ತಿಯಲ್ಲಿ ಅನ್ಯಾಯವಾಗಿರುವುದು ಗಮನಕ್ಕೆ ಬಂದಿದೆಯೇ? ಇದ್ಯಾವುದೂ ಪಾಲನೆಯಾಗಿ ಬರುತ್ತಿಲ್ಲ. ಇದನ್ನು ಪರಿಶೀಲನೆ ಮಾಡುತ್ತೇವೆ ಎಂದು ಮಾನ್ಯ ಸಚಿವರು ಹೇಳುತ್ತಿದ್ದಾರೆ. ಇನ್ನೂ ಎಷ್ಟು ದಿನ ಪರಿಶೀಲನೆ ಮಾಡುತ್ತೀರಾ? ಕಳೆದ ಒಂದು ವರ್ಷದಿಂದ....

**ಉಪ ಸಭಾಪತಿಯವರು:-** ಮಾನ್ಯ ಸದಸ್ಯರೇ ಕುಳಿತುಕೊಳ್ಳಿ. ಮಾನ್ಯ ಸಚಿವರೇ ಹೇಳಿ.

**ಶ್ರೀ ಕೃಷ್ಣಭೈರೇಗೌಡ:-** ಮಾನ್ಯ ಸಭಾಪತಿಯವರೇ, ಈಗ revise ಮಾಡಿ, ಅದರ ಅನುಮೋದನೆಗಾಗಿ ಆರ್ಥಿಕ ಇಲಾಖೆ ಮತ್ತು ಡಿ.ಪಿ.ಎ.ಆರ್.ಗೆ ಹೋಗಿದೆ. ಎಲ್ಲಾ ಪ್ರೋಸೆಸ್ ಆಗಿ ಹೋಗಿದೆ. ಆರ್ಥಿಕ ಇಲಾಖೆ ಮತ್ತು ಡಿ.ಪಿ.ಎ.ಆರ್., ಇವೆರಡು ಇಲಾಖೆಗಳ concurrence ತೆಗೆದುಕೊಳ್ಳಬೇಕಾಗುತ್ತದೆ. ಆ stage ನಲ್ಲಿ ಇದೆ. ಮಾನ್ಯ ಸದಸ್ಯರಿಗೆ ಹೇಳುವುದೇನೆಂದರೆ, ಅವರೆಲ್ಲರೂ ಈ ವಿಷಯವನ್ನು ಪದೇ ಪದೇ ಎತ್ತಿದ್ದಾರೆ. ಅವರಿಗೆ ಗೌರವವನ್ನು ಕೊಟ್ಟು, ನಾವು ಇದನ್ನು ವೇಗವಾಗಿ ಅಂತಿಮ ಹಂತಕ್ಕೆ ತರುತ್ತಿದ್ದೇವೆ. ನಮ್ಮ ಇಲಾಖೆಯಿಂದ ಆರ್ಥಿಕ ಇಲಾಖೆಗೆ ಹೋಗಿದೆ. ಅಲ್ಲಿ ಕೂಡ follow up ಮಾಡಿ, ಅದನ್ನು ಬೇಗ ತರಿಸಿಕೊಳ್ಳುತ್ತೇವೆ. We are with them. ಆ ವಿಷಯದಲ್ಲಿ ಬೇಗ ಇದನ್ನು ತಾರ್ಕಿಕ ಅಂತ್ಯಕ್ಕೆ ತೆಗೆದುಕೊಂಡು ಹೋಗುತ್ತೇವೆ.

**ಪ್ರಶ್ನೆ ಸಂಖ್ಯೆ: 1073**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಎಂ.ಎಲ್. ಅನಿಲ್ ಕುಮಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿಕೊಟ್ಟಿದ್ದಾರೆ. ಕೋಲಾರ ಜಿಲ್ಲೆಯಲ್ಲಿ ಸರ್ವೆ ಇಲಾಖೆಯಲ್ಲಿ ಅಕ್ರಮಗಳ ಬಗ್ಗೆ ಮಾನ್ಯ ಸಚಿವರು ಸದನದಲ್ಲಿ ಬೆಳಕು ಚೆಲ್ಲಬೇಕು. ಮಾಲೂರು ತಾಲ್ಲೂಕಿನ ನಾಲ್ಕು ಪ್ರಕರಣಗಳ ಬಗ್ಗೆ ಪ್ರಶ್ನೆ ಮಾಡಿದ್ದೆ. ಮಾಲೂರು ತಾಲ್ಲೂಕು ಒಂದೇ ಅಲ್ಲ. ಕೋಲಾರ ಜಿಲ್ಲೆಯ ಕೋಲಾರ, ಬಂಗಾರಪೇಟೆ ಎಲ್ಲಾ ತಾಲ್ಲೂಕುಗಳಲ್ಲಿ ಇವತ್ತು ಸರ್ವೆ ಇಲಾಖೆಯ ಮುಖಾಂತರ ದಾಖಲೆಗಳನ್ನು ಸೃಷ್ಟಿ ಮಾಡಿ, ಅದನ್ನು ಕಂದಾಯ ಇಲಾಖೆಯ ಮುಖಾಂತರ ಕಂದಾಯ ದಾಖಲೆಗಳನ್ನು ಮಾಡುವಂತಹದ್ದು, ಅದೊಂದು ದಂಧೆಯಾಗಿ ಬಿಟ್ಟಿದೆ. ಇದರಲ್ಲಿ ಯಾರು ಪ್ರಮುಖವಾಗಿದ್ದಾರೆ ಎಂದರೆ, ಸರ್ವೆ ಇಲಾಖೆಯಲ್ಲಿರುವಂತಹ ಒಬ್ಬ ಸರ್ವೆಯರ್ ಆಗಿದ್ದು, ಇತ್ತೀಚೆಗೆ Supervisor ಆಗಿ ಬಡ್ತಿ ಹೊಂದಿರುವಂತಹ ಸುರೇಶ್ ಬಾಬುರವರು ಎಲ್ಲಾ ಪ್ರಕರಣಗಳಲ್ಲಿಯೂ ಕೂಡ ಭಾಗಿಯಾಗಿದ್ದು, ಇವತ್ತು ಸಾಕಷ್ಟು ಅಕ್ರಮಗಳನ್ನು ಮಾಡುತ್ತಿದ್ದಾರೆ. ಮೊದಲನೇ ಪ್ರಕರಣದಲ್ಲಿ ಮಾಲೂರು ತಾಲ್ಲೂಕಿನಲ್ಲಿ ಸ.ನಂ.112 ಅಂದರೆ ಮಾಲೂರು ನಗರಕ್ಕೆ ಹೊಂದಿಕೊಂಡಿರುವ 2 ಎಕರೆ 20 ಗುಂಟೆ ಗೋಮಾಳ ಜಮೀನನ್ನು ನಕಲಿ ದಾಖಲೆ ಸೃಷ್ಟಿ ಮಾಡುತ್ತಾರೆ. ಆ ನಕಲಿ ದಾಖಲೆಯನ್ನು ಯಾರ ಹೆಸರಿಗೆ ಸೃಷ್ಟಿ ಮಾಡುತ್ತಾರೆಂದರೆ, ಒಬ್ಬ ವೆಂಕಟರಮಣಪ್ಪ ಎನ್ನುವವರ ಹೆಸರಿಗೆ ನಕಲಿ ದಾಖಲೆಯನ್ನು ಸೃಷ್ಟಿ ಮಾಡಿ, ವೆಂಕಟರಮಣಪ್ಪನವರಿಂದ ಚಿನ್ನಪ್ಪನಿಗೆ ಕ್ರಯವಾಗಿರುವಂತೆ ನಕಲಿ ದಾಖಲೆಯನ್ನು ಸೃಷ್ಟಿ ಮಾಡಿ. ಚಿನ್ನಪ್ಪನ ನಂತರ ಪೌತಿ ವಾರಸುದಾರರ ಮುಖಾಂತರ ರತ್ನಮ್ಮ ಎನ್ನುವವರಿಗೆ ಪೌತಿ ವಾರಸುದಾರರಾಗಿ ಖಾತೆ ಮಾಡಿ, ಅದನ್ನು ಸುರೇಶ್‌ಬಾಬುರವರ ತಾಯಿಯವರಿಗೆ sale agreement ಮಾಡಿಕೊಳ್ಳುತ್ತಾರೆ.

**ಉಪ ಸಭಾಪತಿಯವರು:-** ಮಾನ್ಯ ಸದಸ್ಯರೇ, ಇದರ ಬಗ್ಗೆ ಮಾನ್ಯ ಸಚಿವರು ಏನು ಮಾಡಬೇಕೆಂಬುದರ ಬಗ್ಗೆ ಮಾತ್ರ ಹೇಳಿ. ಇದೆಲ್ಲಾ ಆಗಿದೆ ಎಂದು ಮಾನ್ಯ ಸಚಿವರಿಗೆ ಹೇಳಿ.

**ಶ್ರೀ ಎಂ.ಎಲ್. ಅನಿಲ್ ಕುಮಾರ್:-** ಮಾನ್ಯ ಸಭಾಪತಿಯವರೇ, ಈ ಜಮೀನು ಸುಮಾರು 12 ಕೋಟಿ ರೂಪಾಯಿಗಳಷ್ಟು ಬೆಳೆ ಬಾಳುವಂತಹ ಜಮೀನು. ಇದು ಮೊದಲನೇ ಪ್ರಕರಣ ಆಗಿರುವಂತಹದ್ದು. ಈಗಾಗಲೇ ಇದರ ಬಗ್ಗೆ ಮಾನ್ಯ ಜಿಲ್ಲಾಧಿಕಾರಿಗಳಿಗೆ ದೂರು ಕೊಟ್ಟು, ಅವರು ಎ.ಸಿ., ಅವರ ವರದಿಯನ್ನು ಕೇಳಿದಾಗ, ಎ.ಸಿ., ಅವರು ಕೂಡ ಮೇಲ್ನೋಟಕ್ಕೆ ಅಕ್ರಮವಾಗಿರುವುದು ಸಾಬೀತಾಗಿದೆ ಎಂದು ಹೇಳಿದ್ದಾರೆ. ಇದರ ಬಗ್ಗೆ ಯಾವುದೇ ರೀತಿಯ ಕ್ರಮ ತೆಗೆದುಕೊಂಡಿಲ್ಲ ಮತ್ತು ಸರ್ಕಾರದ ವಶಕ್ಕೆ ತೆಗೆದುಕೊಂಡಿಲ್ಲ. ಈ ಅಕ್ರಮಗಳಲ್ಲಿ ಯಾರೆಲ್ಲಾ ಭಾಗಿಯಾಗಿದ್ದಾರೆ. ಇವರ ಮೇಲೆ ಯಾವುದೇ ರೀತಿಯ ಕ್ರಿಮಿನಲ್ ಮೊಕದ್ದಮೆ ಹೂಡಿಲ್ಲ ಎಂಬುದು ಮೊದಲನೇ ಪ್ರಕರಣವಾಗಿದೆ. ಎರಡನೇ ಪ್ರಕರಣವೇನೆಂದರೆ, ಮಾರಸಂದ್ರ ಗ್ರಾಮದ ಸ.ನಂ. 10 ರ ಪೈಕಿ ರೀ.ಸ.ನಂ.160 ರಲ್ಲಿ 4 ಎಕರೆ ಮತ್ತು ರೀ.ಸ.ನಂ. 161 ರಲ್ಲಿ 2 ಎಕರೆ 22 ಗುಂಟೆಯನ್ನು 1998 ರಲ್ಲಿ ದುರಸ್ತಿ ಆಗಿದೆ. ಆಗ ಈ ಪೋಡಿ ಮಾಡಿರುವಂತಹದ್ದಕ್ಕೆ 1 to 5 ಇರಲಿಲ್ಲ. ಆಗ ದುರಸ್ತಿಯಾಗಿತ್ತು. ಅದರ ಮೇಲೆ ಜಿಲ್ಲಾಧಿಕಾರಿಗಳ ಹತ್ತಿರ ದಾವೆ

ಹೂಡಿದಾಗ, ಅವೊತ್ತಿನ ದಿನ ಇದ್ದಂತಹ ಜಿಲ್ಲಾಧಿಕಾರಿಗಳು 2009ರಲ್ಲಿ ಆ ದುರಸ್ತಿಯನ್ನು ರದ್ದು ಮಾಡುತ್ತಾರೆ. ಘನ ಸಿವಿಲ್ ನ್ಯಾಯಾಲಯದಲ್ಲಿರುವ ಮೊಕದ್ದಮೆಯ ತೀರ್ಪು ನಂತರ ಬಂದ ನಂತರ ಸಿವಿಲ್ ನ್ಯಾಯಾಲಯದ ಪ್ರಕಾರ ಮಾಡಬೇಕು ಎಂದು ಆಗುತ್ತದೆ. ನಂತರ ಸುರೇಶ್ ಬಾಬು ಎನ್ನುವವರು 2020ರಲ್ಲಿ ಜಿಲ್ಲಾಧಿಕಾರಿಗಳ ಮೇಲೆ ಪ್ರಭಾವ ಬೀರಿ, resurvey ಮಾಡಬೇಕಾದರೆ, ಒಂದು ಸಾರಿ ಜಿಲ್ಲಾಧಿಕಾರಿಗಳು ದುರಸ್ತಿಯನ್ನು ರದ್ದು ಮಾಡಿದರೆ, ಮತ್ತೆ ಜಿಲ್ಲಾಧಿಕಾರಿಗಳಿಗೆ ಅಧಿಕಾರ ಇರುವುದಿಲ್ಲ. ಅದು Commissioner ರವರ ಹತ್ತಿರ appeal ಹೋಗಬೇಕಾಗುತ್ತದೆ.

**ಉಪ ಸಭಾಪತಿಯವರು:–** ಮಾನ್ಯ ಅನಿಲ್ ಕುಮಾರ್‌ರವರೇ, ಮಾನ್ಯ ಸಚಿವರು ಅದಕ್ಕೆ ಏನು ಮಾಡಬೇಕು ಎಂಬುದನ್ನು ಹೇಳಿ.

**ಶ್ರೀ ಎಂ.ಎಲ್. ಅನಿಲ್ ಕುಮಾರ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ನೀಡಿರುವ ಉತ್ತರದಲ್ಲಿರುವಂತೆ, ಸಿವಿಲ್ ನ್ಯಾಯಾಲಯದಲ್ಲಿ ಮೊಕದ್ದಮೆಯ ಪ್ರಕಾರ ದುರಸ್ತಿ ಮಾಡಿದ್ದೇವೆಂದು ಹೇಳುತ್ತಾರೆ. ಅದನ್ನು ಮತ್ತೆ ದುರಸ್ತಿ ಮಾಡುವುದಕ್ಕೆ ಜಿಲ್ಲಾಧಿಕಾರಿಗಳಿಗೆ ಅಧಿಕಾರ ಇರುವುದಿಲ್ಲ. Title Deed ಗೆ ಸಂಬಂಧಪಟ್ಟಂತೆ ಸಿವಿಲ್ ನ್ಯಾಯಾಲಯದಲ್ಲಿ ಮೊಕದ್ದಮೆ ಇರುವಂತಹದ್ದು. ಇವತ್ತು ಇದು ಕೂಡ ದುರಸ್ತಿ ಮಾಡಿ, ಮತ್ತೆ ಜಿಲ್ಲಾಧಿಕಾರಿಗಳ ಹೆಸರಿನಲ್ಲಿ ಎರಡನೇ ಬಾರಿ ದುರಸ್ತಿ ಮಾಡಿದ್ದಾರೆ. ಎರಡನೇ ಬಾರಿ ದುರಸ್ತಿ ಮಾಡುವ ಅಧಿಕಾರ ಜಿಲ್ಲಾಧಿಕಾರಿಗಳಿಗೆ ಇರುವುದಿಲ್ಲ. ಅದು Commissioner ಗೆ ಅಪೀಲು ಹೋಗಬೇಕಾಗುತ್ತದೆ.

(ಮುಂದು)

**(946) 18.12.2024 12.30 TCH-KS** **(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಎಂ.ಎಲ್.ಅನಿಲ್‌ಕುಮಾರ್ (ಮುಂದು):**

ಮತ್ತೆ 3ನೇ ಪ್ರಕರಣ ಮಾಲೂರು ತಾಲ್ಲೂಕು, ನಿದರಮಂಗಲ ಗ್ರಾಮದ 155 ರ ಪೈಕಿ, ಸುಮಾರು 12 ಎಕರೆ ಜಮೀನಿಗೆ ಸಂಬಂಧಿಸಿದಂತೆ ಪೋಡಿ ದುರಸ್ತು ಕ್ರಮ ಜರುಗಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಪ್ರಶ್ನೆ ಕೇಳಿದ್ದರೆ, ಪೋಡಿ ದುರಸ್ತು ಆಗಿರುವುದಿಲ್ಲವೆಂದು ಉತ್ತರದಲ್ಲಿ ಹೇಳಿದ್ದಾರೆ. ಆದರೆ ನನ್ನ ಹತ್ತಿರ ದಾಖಲೆಗಳಿವೆ. ಪೋಡಿ ಮಾಡುವುದಕ್ಕೆ ಎಲ್ಲಾ ರೀತಿಯ ಪ್ರಕ್ರಿಯೆಗಳನ್ನು ಮಾಡುತ್ತಾರೆ. ಕಾಲಂ 1 ರಿಂದ 5 ನಮೂದು ಆಗಿರುವುದಿಲ್ಲ. ಕಾಲಂ 1 ರಿಂದ 5 ನಮೂದು ಆಗದೆಯೇ ದುರಸ್ತು ಆಗಬೇಕೆಂದು ಅಲ್ಲಿದ್ದಂತಹ ಶ್ರೀಮತಿ ಅಶ್ವಿನಿ ಎಂಬುವರ ಮೇಲೆ ಒತ್ತಡ ತರುತ್ತಾರೆ. ಆಗ ಅವರು ರಜೆ ಹಾಕಿ ಹೊರಟು ಹೋಗುತ್ತಾರೆ. ಅವರು ರಜೆ ಹಾಕಿ ಹೋದನಂತರ ಶ್ರೀನಿವಾಸಪುರದ ಎ.ಡಿ.ಎಲ್.ಆರ್. (Assistant Director of Land Records) ಆದ ಶ್ರೀಮತಿ ಅಖಿತ ಎಂಬುವರನ್ನು ಅಲ್ಲಿಗೆ incharge ಹಾಕಿಸಿ, ಅವರ ಮೂಲಕ ಕಾಲಂ 1 ರಿಂದ 5 ನಮೂದು ಆಗದೇ ಇದ್ದರೂ ಕೂಡ ದುರಸ್ತಿ ಮಾಡುವುದಕ್ಕೆ ಎಲ್ಲಾ ರೀತಿಯ ದಾಖಲೆಗಳನ್ನು ಸೃಷ್ಟಿ ಮಾಡಿದ ನಂತರ ಅದು ಡಿ.ಡಿ.ಎಲ್.ಆರ್ (Deputy Director of Land Records) ರವರಿಗೆ ಬರುತ್ತದೆ.

**ಉಪ ಸಭಾಪತಿಯವರು:-** ಮಾನ್ಯ ಎಂ.ಎಲ್.ಅನಿಲ್‌ಕುಮಾರ್‌ರವರೇ, ಏನು ಕ್ರಮ ತೆಗೆದುಕೊಂಡಿದ್ದಾರೆಂದು ನೀವು ಹೇಳಬಿಡಿ. ಅದನ್ನು brief ಮಾಡುವುದು ಬೇಡ. ಮಾನ್ಯ ಸಚಿವರು ಉತ್ತರ ಕೊಡಲಿ. ಇದನ್ನು ತುಂಬಾ drag ಮಾಡಿದರೆ ಆಗುವುದಿಲ್ಲ.

**ಶ್ರೀ ಎಂ.ಎಲ್.ಅನಿಲ್ ಕುಮಾರ್:-** ಮಾನ್ಯ ಸಭಾಪತಿಯವರೇ, ದಯಮಾಡಿ ಈ ವಿಚಾರ ಬಹಳ ಗಂಭೀರವಾಗಿರತಕ್ಕಂಥದ್ದು. ಇವತ್ತಿನ ದಿವಸ ಅಲ್ಲಿ ಅವ್ಯಾಹತವಾಗಿ ಒಂದು ದಂಧೆಯಾಗಿ ನಡೆಯುತ್ತಿದೆ. ಅದಾದ ನಂತರ ಡಿ.ಡಿ.ಎಲ್.ಆರ್‌ರವರು ಅಲ್ಲಿ original lien ಇರತಕ್ಕಂಥ ಶ್ರೀಮತಿ ಅಶ್ವಿನಿ ಎಂಬುವರನ್ನು ಮತ್ತೆ duty ಗೆ ಕರೆಸಿಕೊಂಡು ಸ್ಥಳ ಪರಿಶೀಲನೆ ಮಾಡಿ ವರದಿ ಕೊಡಬೇಕೆಂದು ಹೇಳಿದ್ದಾರೆ. ಆದರೆ ಅವರು ವರದಿಯನ್ನೇ ಕೊಟ್ಟಿರುವುದಿಲ್ಲ. ಇಲ್ಲಿ ಕೂಡ ದುರಸ್ತು ಆಗುವುದಕ್ಕೆ ಎಲ್ಲಾ ಕ್ರಮಗಳನ್ನು ತೆಗೆದುಕೊಂಡಿದ್ದಾರೆ. ದುರಸ್ತು ಆಗಿಲ್ಲ ನಿಜ. ಆದರೆ ದುರಸ್ತು ಮಾಡುವುದಕ್ಕೆ ಎಲ್ಲಾ ರೀತಿಯ ಪ್ರಕ್ರಿಯೆಗಳನ್ನು ಮುಗಿಸಿ ಕೊನೆಗೆ ಅದು ಡಿ.ಡಿ.ಎಲ್.ಆರ್. ರವರ ಹತ್ತಿರ pending ಇದೆ. ಮತ್ತೆ 4ನೇ ಪ್ರಕರಣವಾದ ಮಾಲೂರು ತಾಲ್ಲೂಕು, ತೋರ್ನಹಳ್ಳಿ ಅಗ್ರಹಾರ ಗ್ರಾಮದ ಸರ್ವೇ ನಂಬರ್ 21ರ ಪೈಕಿ, ಖಾಲಿ ಇದ್ದ ಸುಮಾರು 7.00 ಎಕರೆ ಜಮೀನಿಗೆ ಸಂಬಂಧಿಸಿದಂತೆ, ಭೂದಾಖಲೆಗಳ ಉಪ ನಿರ್ದೇಶಕರ ಕಚೇರಿ ಕೋಲಾರ ಇಲ್ಲಿ ಆದೇಶವನ್ನು ಮಾಡಿರುವುದಿಲ್ಲವೆಂದು ಹೇಳಿದ್ದಾರೆ. ಆದರೆ ನನ್ನ ಹತ್ತಿರ ದಾಖಲೆಗಳಿವೆ. ಈ ಹಿಂದೆ ಶ್ರೀ ಗೋಪಾಲಯ್ಯ ಎಂಬುವರು ಡಿ.ಡಿ.ಎಲ್.ಆರ್. ಆಗಿದ್ದಾಗ ಇದನ್ನು ಏನು ಪೋಡಿ ಮಾಡಿ, ಹೊಸ ಸರ್ವೇ ನಂಬರ್ 77 ಎಂದು ಮಾಡಿ ಸುಮಾರು 7 ಎಕರೆಯನ್ನು ದುರಸ್ತು ಮಾಡಿರತಕ್ಕಂಥ ದಾಖಲೆ ಇದೆ. ಆದರೆ ಮಾನ್ಯ ಸಚಿವರ ಹತ್ತಿರ ಡಿ.ಡಿ.ಎಲ್.ಆರ್. ರವರಿಂದ ದುರಸ್ತು ಆಗಿಲ್ಲವೆಂದು ಹೇಳಿಸುತ್ತಾರೆ.

**ಉಪ ಸಭಾಪತಿಯರು:-** ಶ್ರೀ ಎಂ.ಎಲ್.ಅನಿಲ್‌ಕುಮಾರ್‌ರವರೇ, ಮಾನ್ಯ ಸಚಿವರ ಹತ್ತಿರ ಹೇಳಿಸುತ್ತಾರೆ ಎಂದು ಹೇಳುತ್ತಿದ್ದೀರಿ. ಆದರೆ ಮಾನ್ಯ ಸಚಿವರು ಈಗ ಉತ್ತರ ಕೊಡುತ್ತಾರೆ. ಆದ್ದರಿಂದ ತಾವು ದಯವಿಟ್ಟು ಪ್ರಶ್ನೆಗಳನ್ನು ಸರಿಯಾಗಿ ಕೇಳಿ. ತುಂಬಾ brief ಮಾಡಬೇಡಿ, late ಆಗುತ್ತಿದೆ ನಮಗೆ ಸಮಯ ಇಲ್ಲ.

**ಶ್ರೀ ಎಂ.ಎಲ್.ಅನಿಲ್ ಕುಮಾರ್:-** ಮಾನ್ಯ ಸಭಾಪತಿಯವರೇ, ದಯಮಾಡಿ ಈ ರೀತಿಯ ಪ್ರಕರಣಗಳು ಯಾವ ರೀತಿ ನಡೆಯುತ್ತಿವೆ ಎಂದು ಉದಾಹರಣೆಗೆ ಹೇಳುವುದಾದರೆ ಮಾಲೂರು ತಾಲ್ಲೂಕು, ಯಶವಂತಪುರದಲ್ಲಿ ಲೇಔಟ್‌ಗೆ ಒಂದು ಜಮೀನು conversion ಆಗುತ್ತದೆ. ಆ ಜಮೀನು conversion ಆದ ನಂತರ, ಒಟ್ಟು ಎಲ್ಲಾ ನಂಬರ್‌ಗಳನ್ನು ಸೇರಿಸಿ ಒಂದು survey sketch ಕೊಡಿ ಎಂದು ಎ.ಡಿ.ಎಲ್.ಆರ್ ರವರಿಗೆ ಕಳುಹಿಸಿಕೊಡುತ್ತಾರೆ. ಆ ಎ.ಡಿ.ಎಲ್.ಆರ್ ರವರ sign ಅನ್ನು fake ಮಾಡಿಬಿಡುತ್ತಾರೆ. ಸರ್ವೇಯರ್‌ನ sign ಅನ್ನು fake ಮಾಡಿಬಿಡುತ್ತಾರೆ. ಮುಳಬಾಗಿಲಿನಲ್ಲಿ incharge ಇದ್ದಂತಹ ಎ.ಡಿ.ಎಲ್.ಆರ್. ರವರಿಗೆ ಗೊತ್ತೇ ಇಲ್ಲ. ಅವರ ಗಮನಕ್ಕೇ ಬಂದಿಲ್ಲ.

**ಉಪ ಸಭಾಪತಿಯರು:-** ಮಾನ್ಯ ಸಚಿವರೇ, ನೀವು ಅದಕ್ಕೆ ಉತ್ತರ ಕೊಡಿ.

**ಶ್ರೀ ಎಂ.ಎಲ್.ಅನಿಲ್ ಕುಮಾರ್:-** ಮಾನ್ಯ ಸಭಾಪತಿಯವರೇ, ಆಮೇಲೆ ಅವರು complaint ಮಾಡುತ್ತಾರೆ, ಅವರ ಮೇಲೆ ಎಫ್.ಐ.ಆರ್. ದಾಖಲಾಗುತ್ತದೆ.

**ಉಪ ಸಭಾಪತಿಯರು:-** ಶ್ರೀ ಎಂ.ಎಲ್.ಅನಿಲ್‌ಕುಮಾರ್‌ರವರೇ, ತಾವು ಕೊಟ್ಟಿದ್ದೀರಿ. ತಾವು ದಯವಿಟ್ಟು ಕುಳಿತುಕೊಳ್ಳಿ. ಮಾನ್ಯ ಸಚಿವರು ಉತ್ತರ ಕೊಡುತ್ತಾರೆ. ಅವರು ಮಾತನಾಡಿದ ನಂತರ ನೀವು ಮಾತನಾಡಿ.

**ಶ್ರೀ ಎಂ.ಎಲ್.ಅನಿಲ್ ಕುಮಾರ್:-** ಮಾನ್ಯ ಸಭಾಪತಿಯವರೇ, ಈ ಎಲ್ಲಾ ಪ್ರಕರಣಗಳಲ್ಲೂ ಕೂಡ ಶ್ರೀ ಸುರೇಶ್ ಬಾಬುರವರ ಕೈವಾಡವಿದೆ. ಅವರ ಮೇಲೆ ಸರ್ಕಾರ ಯಾವುದೇ ರೀತಿಯಿಂದ ಕ್ರಮ ತೆಗೆದುಕೊಳ್ಳುತ್ತಿಲ್ಲ.

**ಶ್ರೀ ಕೃಷ್ಣಭೈರೇಗೌಡ (ಕಂದಾಯ ಸಚಿವರು):-** ಮಾನ್ಯ ಸಭಾಪತಿಯವರೇ, ಮೊದಲನೇ ಪ್ರಕರಣದಲ್ಲಿ ಕಣ್ಣಿಗೆ ಕಾಣುವ ಹಾಗೆ ತಪ್ಪುಗಳಾಗಿದೆ. ಪ್ರಾಥಮಿಕ ತನಿಖೆಯಿಂದ ಅದು ತಪ್ಪಾಗಿದೆಯೆಂದು ಸರ್ಕಾರವೇ ಹೇಳಿದೆ. ಇದರಲ್ಲಿ ನಾನು ಬೆಂಗಳೂರಿನ ಪ್ರಾದೇಶಿಕ ಆಯುಕ್ತರ ಕಡೆಯಿಂದ ತನಿಖೆ ಮಾಡಿಸಿ, ಯಾರ್ಯಾರು ತಪ್ಪು ಮಾಡಿದ್ದಾರೋ ಅವರಿಗೆ ಸೂಕ್ತ ಶಿಕ್ಷೆ ಆಗುವಂತಹ ಒಂದು ತೀರ್ಮಾನವನ್ನು ಇವತ್ತಿನ ದಿವಸ ತೆಗೆದುಕೊಂಡಿದ್ದೇನೆ. ಅದನ್ನು ಮಾನ್ಯ ಸದಸ್ಯರಿಗೆ ಹೇಳುತ್ತೇನೆ. ಮೊದಲನೇ ಪ್ರಕರಣವನ್ನು ನಾವು ಮೇಲೆ further enquiry ಮಾಡಿ ಯಾರು ತಪ್ಪಿತಸ್ಥರು ಇದ್ದಾರೋ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ. ಇದನ್ನು ಇಲ್ಲಿಗೆ ಬಿಡುವ ಪ್ರಶ್ನೆಯೇ ಇಲ್ಲ. 2ನೇ ಪ್ರಕರಣದಲ್ಲಿ ಮಾನ್ಯ ಸದಸ್ಯರು ಏನು ಹೇಳಿದರೆಂದರೆ, ಡಿ.ಸಿ.ಯವರು ಪೋಡಿ ಮತ್ತು ದುರಸ್ತು ಅನ್ನು cancel ಮಾಡಿದ್ದರು. ಅವರು ಸಿವಿಲ್ ಕೋರ್ಟ್‌ನಿಂದ ಒಂದು directions ತೆಗೆದುಕೊಂಡು ಬಂದು ಆಮೇಲೆ ಡಿ.ಸಿ.ಯವರು ಅದನ್ನು uphold ಮಾಡಿದ್ದಾರೆ. ಈಗ ಸಿವಿಲ್ ಕೋರ್ಟ್‌ನಲ್ಲಿ ಏನು direction ಕೊಟ್ಟಿದ್ದರೋ ಅದನ್ನು ನೀವು misinterpret ಮಾಡಿ, ಡಿ.ಸಿ.ಯವರು ಮಾಡಿದ್ದಾರೆ ಎಂಬ ಅರ್ಥದಲ್ಲಿ ಮಾನ್ಯ ಸದಸ್ಯರು ಹೇಳಿದ್ದಾರೆ. ಇದನ್ನು ಕೂಡ ನಾನು R.C. (Regional Commissioner) ರವರಿಗೆ entrust ಮಾಡುತ್ತೇನೆ. ಸಿವಿಲ್ ಕೋರ್ಟ್ ಆದೇಶ ಮಾಡಿರುವುದೇ ಬೇರೆ. ಇವರು ತೆಗೆದುಕೊಂಡಿರುವ ಕ್ರಮವೇ ಬೇರೆ ಆದಲ್ಲಿ ಆಗ ನಮ್ಮಿಂದ ತಪ್ಪಾಗುತ್ತದೆ. ಆದರೆ ಸಿವಿಲ್ ಕೋರ್ಟ್ ಆದೇಶದ ಮೇಲೆ ಏನಾದರೂ ದುರಸ್ತನ್ನು restore ಮಾಡಿದ್ದರೆ ಅಲ್ಲಿಗೆ ತಪ್ಪು ಕಾಣುವುದಿಲ್ಲ. ಅದನ್ನೂ ಕೂಡ ನಾನು R.C. ಯವರಿಗೆ enquiry ಮಾಡುವುದಕ್ಕೆ ಹೇಳುತ್ತೇನೆ. 3ನೇ ಪ್ರಕರಣದಲ್ಲಿ ದುರಸ್ತು ಆಗಿಲ್ಲವೆಂದು ಹೇಳಿದ್ದೇವೆ. ಅದನ್ನೂ ಕೂಡ ಅವರು ಒಪ್ಪಿಕೊಂಡಿದ್ದಾರೆ. ಅವರು ದುರಸ್ತು ಮಾಡುವುದಕ್ಕೆ ಹೊರಟಿದ್ದರು. ಆದರೆ ಆಗಿಲ್ಲ ಎನ್ನುವಂಥದ್ದನ್ನು ಕೂಡ ಅವರು ಒಪ್ಪಿಕೊಂಡಿದ್ದಾರೆ.

ಇನ್ನು 4ನೇ ಪ್ರಕರಣದಲ್ಲಿ ಅದು ಆಗಿಲ್ಲವೆಂದು ಉತ್ತರ ಕೊಟ್ಟಿದ್ದೀರಿ. ಆದರೆ, ಆಗಿದೆ ಎಂದು ಅವರು ಹೇಳುತ್ತಿದ್ದಾರೆ. ಅದಕ್ಕೆ ದಯವಿಟ್ಟು ತಮ್ಮ ಮುಖಾಂತರ ದಾಖಲೆಗಳನ್ನು ಕೊಟ್ಟರೆ ಅದನ್ನೂ ಕೂಡ ನಾನು R.C. ಯವರಿಗೆ ಕೊಟ್ಟು, ಅದನ್ನೂ enquiry ಮಾಡುವುದಕ್ಕೆ ಹೇಳುತ್ತೇನೆ. ಈ ಹಿಂದೆ 5ನೇ ಭಾಗದಲ್ಲಿ ಇಂತಹ ಅಧಿಕಾರಿ ಮೇಲೆ ಏನು ಮಾಡಿದ್ದೀರಿ ಎಂದು 2021ರಲ್ಲಿ ಅವರಿಗೆ ಒಂದು ಎಚ್ಚರಿಕೆಯನ್ನು ಕೊಟ್ಟಿದ್ದೇವೆ. ಅದು ಬೇರೆ ಪ್ರಕರಣ. ಅದು ಬಂಗಾರಪೇಟೆ ತಾಲ್ಲೂಕು, ತೊರಹಳ್ಳಿ ಗ್ರಾಮದ ಪ್ರಕರಣದಲ್ಲಿ ಅವರಿಗೆ ಒಂದು ಎಚ್ಚರಿಕೆಯ ನೋಟೀಸ್‌ನ್ನು ಕೊಟ್ಟು close ಮಾಡಿದ್ದೇವೆ. ಈಗ ಈ ಒಂದು ಪ್ರಕರಣಗಳ ಆಧಾರದ ಮೇಲೆ ಪ್ರಾಥಮಿಕ ತನಿಖೆಗೆ ಈಗ ಕೆಲವು ಮಾಹಿತಿಗಳನ್ನು ಕೊಟ್ಟಿದ್ದೇವೆ. ಅಂತಿಮ ತನಿಖೆ ಮಾಡಿ ಅವರೇನಾದರೂ ತಪ್ಪು ಮಾಡಿದ್ದರೆ ಖಂಡಿತವಾಗಿಯು

ನಾವು ಕ್ರಮ ತೆಗೆದುಕೊಳ್ಳುತ್ತೇವೆ. ಮಾನ್ಯ ಸದಸ್ಯರ ಹತ್ತಿರ ಇನ್ನೂ ಏನಾದರೂ additional ಮಾಹಿತಿ ಇದ್ದರೆ, ಟಿಪ್ಪಣಿಯೊಂದಿಗೆ ನನಗೆ ಕೊಟ್ಟರೆ, ಅದನ್ನೂ ಕೂಡ R.C. ಅವರಿಗೆ ಕೊಟ್ಟು ಮಾಡಿಸುತ್ತೇನೆ.

**ಶ್ರೀ ಎಂ.ಎಲ್.ಅನಿಲ್ ಕುಮಾರ್:-** ಮಾನ್ಯ ಸಭಾಪತಿಯವರೇ, ದಯಮಾಡಿ ಮಾನ್ಯ ಸಚಿವರು ಕೂಡ . .

**ಉಪ ಸಭಾಪತಿಯವರು:-** ಮಾನ್ಯ ಎಂ.ಎಲ್.ಅನಿಲ್‌ಕುಮಾರ್‌ರವರೇ, ಒಂದು ನಿಮಿಷ. ಮಾನ್ಯ ಸಚಿವರು ನಿಮ್ಮ ಹತ್ತಿರ ಏನು ದಾಖಲೆಗಳಿವೆ, ಆ ದಾಖಲೆಗಳನ್ನು ನನಗೆ ಕೊಡಿ ಎಂದು ಕೇಳುತ್ತಿದ್ದಾರೆ. ಅದನ್ನು ಅವರಿಗೆ ಕೊಟ್ಟುಬಿಡಿ. ಅದು ಆಗದಿದ್ದರೆ ನೋಡೋಣ.

**ಶ್ರೀ ಎಂ.ಎಲ್.ಅನಿಲ್ ಕುಮಾರ್:-** ಮಾನ್ಯ ಸಭಾಪತಿಯವರೇ, ಮಾನ್ಯ ಕಂದಾಯ ಸಚಿವರು ಕೂಡ ನಮ್ಮ ಜಿಲ್ಲೆಯವರೇ ಆಗಿದ್ದಾರೆ. ಅವರಿಗೆ ನಮ್ಮ ಜಿಲ್ಲೆಯ ಬಗ್ಗೆ ಬಹಳಷ್ಟು ಅರಿವಿದೆ. ಪ್ರತಿಯೊಂದು ಗ್ರಾಮದ ಬಗ್ಗೆ ಸಹ ಅವರಿಗೆ ಅರಿವಿದೆ. ಅವರು ಈ ಹಿಂದೆ ಏನು ವೇಮಗಲ್ ಕ್ಷೇತ್ರದಿಂದ ಪ್ರತಿನಿಧಿಸಿದ್ದರು, ಆ ಕ್ಷೇತ್ರದ ವ್ಯಾಪ್ತಿಯಲ್ಲಿ ಬರತಕ್ಕಂಥ ರಾಮಸಂದ್ರ ಮತ್ತು ಚೆಲುವನಹಳ್ಳಿ ಇದೆ. ಆ ಎರಡೂ ವಿಷಯದ ಬಗ್ಗೆ ಕೂಡ ನಾನು ಈ ಹಿಂದೆ ಪ್ರಶ್ನೆಯನ್ನು ಕೇಳಿದ್ದೆನು. ಆದರೆ ಅದು unstarred question ಆಗಿತ್ತು. ಮಾನ್ಯ ಸಚಿವರ ಕೈಯಲ್ಲಿ ಉತ್ತರ ಕೊಡಿಸಿದ್ದಾರೆ. ಮಾನ್ಯ ಸಚಿವರಿಗೇ ಗೊತ್ತಿದೆ. ಚೆಲುವನಹಳ್ಳಿ ಗ್ರಾಮದ ಸರ್ವೇ ನಂಬರ್‌ನಲ್ಲಿ bogus document ಅನ್ನು create ಮಾಡಿ ಸುಮಾರು 40 ಎಕರೆ ಜಮೀನನ್ನು ಬೇರೆ ಬೇರೆಯವರಿಗೆ ದುರಸ್ತು ಮಾಡಿ ಖಾತೆ ಮಾಡಿದ್ದರು. ಈಗ ಮಾನ್ಯ ಕೃಷ್ಣ ಭೈರೇಗೌಡ ರವರು ಕಂದಾಯ ಸಚಿವರಾಗಿ ಬಂದ ನಂತರ, ಅವರು ಪ್ರತ್ಯೇಕವಾಗಿ ಜಿಲ್ಲಾಧಿಕಾರಿಗಳನ್ನೆಲ್ಲಾ ಕರೆದು ಮಾತನಾಡಿದ ನಂತರ, ಆ ಎಲ್ಲಾ ದಾಖಲೆಗಳನ್ನು ರದ್ದುಪಡಿಸಿ, ಈಗ ಅದನ್ನು APMC ಗೆ ಕೊಡಬೇಕೆಂದು ಮಾನ್ಯ ಸಚಿವರೇ ತೀರ್ಮಾನ ಮಾಡಿದ್ದಾರೆ. ಈ ರೀತಿಯ ಪ್ರಕರಣಗಳು ಅವ್ಯಾಹತವಾಗಿ ನಡೆಯುತ್ತಿವೆ. ಆದ್ದರಿಂದ ಮಾನ್ಯ ಸಚಿವರೇ, ಕೋಲಾರ ಜಿಲ್ಲೆಯಲ್ಲಿ ಈ ರೀತಿಯ ಪ್ರಕರಣಗಳಾಗುತ್ತಿವೆ ಎಂದು ತಮ್ಮಲ್ಲಿ ಈ ವಿಚಾರದಲ್ಲಿ ಹಲವಾರು ಬಾರಿ ಖಾಸಗಿಯಾಗಿ ಕೂಡ ಮಾತನಾಡಿದ್ದೇನೆ. ಇವತ್ತಿನ ದಿವಸ ಅದರ ಬಗ್ಗೆ ಉನ್ನತ ಮಟ್ಟದ ಅಧಿಕಾರಿಗಳೊಂದಿಗೆ ತನಿಖೆ ಮಾಡಿಸಿ. ಯಾರು ತಪ್ಪಿತಸ್ಥರಿದ್ದಾರೋ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಈಗ ತಾವು ಈ ಹಿಂದೆ ಆಗಿರುವಂತಹ ತೋರ್ನಹಳ್ಳಿ ಪ್ರಕರಣದಲ್ಲಿ ತುಮಕೂರು ಡಿ.ಡಿ.ಎಲ್.ಆರ್. ರವರಿಂದ ವರದಿಯನ್ನು ತರಿಸಿಕೊಂಡಿದ್ದೇವೆಂದು ಹೇಳಿದ್ದಿರಿ. ಮಾನ್ಯ ಸಚಿವರೇ, ಇತ್ತೀಚೆಗೆ ಒಂದು ಪ್ರಕರಣ ಆಗಿದೆ. ಮಾಲೂರು ತಾಲ್ಲೂಕು, ಯಶವಂತಪುರದಲ್ಲಿ ಲೇಔಟ್ ಮಾಡುವ ವಿಚಾರದಲ್ಲಿ ಎ.ಡಿ.ಎಲ್.ಆರ್. ಮತ್ತು supervisor ಇವರೆಲ್ಲರ sign ಅನ್ನು fake ಮಾಡಿದ್ದಾರೆ. ಕೊನೆಗೆ ಎ.ಡಿ.ಎಲ್.ಆರ್ ರವರು ಮಾಲೂರು ತಾಲ್ಲೂಕಿನಲ್ಲಿ incharge ಇದ್ದಾಗ, ಅವರೇ complaint ಕೊಟ್ಟಿದ್ದಾರೆ. ಆ complaint ಮೇಲೆ F.I.R. ಕೂಡ ದಾಖಲಾಗಿದೆ. ಅದರೆ ಇವತ್ತಿನ ದಿವಸ ಅವರ ಮೇಲೆ ಏನೂ ಕ್ರಮ ಆಗುತ್ತಿಲ್ಲ.

**ಉಪ ಸಭಾಪತಿಯವರು:-** ಮಾನ್ಯ ಕಂದಾಯ ಸಚಿವರೇ, ಇದು ತುಂಬಾ ಗಂಭೀರವಾದ ವಿಚಾರ. ಇದನ್ನು ತಾವು ಗಂಭೀರವಾಗಿ ಪರಿಗಣಿಸಿ.

**ಶ್ರೀ ಕೃಷ್ಣಭೈರೇಗೌಡ:-** ಮಾನ್ಯ ಸಭಾಪತಿಯವರೇ, ನಾನೇ ಮಾನ್ಯ ಸದಸ್ಯರಿಗೆ ನಿರ್ದಿಷ್ಟ ಪ್ರಕರಣ ಇದ್ದರೆ ಕೊಡಿ ತನಿಖೆ ಮಾಡೋಣವೆಂದು ಕೇಳಿದ್ದೇನೆ. ಈಗ ಮಾನ್ಯ ಸದಸ್ಯರು ಈಗ ಕೊಟ್ಟಿದ್ದಾರೆ. ಅದನ್ನು ತನಿಖೆ ಮಾಡಲು ಒಳ್ಳೆಯ ಅಧಿಕಾರಿಗೆ ಕೊಡುತ್ತೇವೆ. ನಾನು ಉನ್ನತ ಅಧಿಕಾರಿಯಿಂದ ತನಿಖೆ ಮಾಡಿಸಿ, ಏನು ವರದಿ ಬರುತ್ತದೋ ಅದರ ಮೇಲೆ ನಿಷ್ಪಕ್ಷಪಾತವಾಗಿ ಕ್ರಮ ತೆಗೆದುಕೊಳ್ಳುತ್ತೇವೆ. ಮಾನ್ಯ ಸದಸ್ಯರು ಹೇಳುತ್ತಿರುವುದು ನಿಜ ಇದೆ. ತುಂಬಾ ನಡೆಯುತ್ತಿದೆ, ನಡೆದು ಹೋಗಿದೆ. ರೆವಿನ್ಯೂನಲ್ಲಿ ಮತ್ತು ಸರ್ವೇಯಲ್ಲಿ ಎರಡೂ ಕಡೆ ಅವ್ಯಾಹತವಾಗಿ ತಪ್ಪುಗಳಾಗಿವೆ. ನಾನು ಜನರಲ್ ಆಗಿ ಏನು ಹೇಳಿದರೂ ಕೂಡ ಇಂತಹ specific case ಬಂದಾಗ ಅದರಲ್ಲಿ ನಾವು ಕ್ರಮ ತೆಗೆದುಕೊಂಡರೆ ಎಲ್ಲರಿಗೂ ಅದು ಸ್ಪಷ್ಟವಾಗಿ ಅರ್ಥವಾಗುತ್ತದೆ. ಆ ಕೆಲಸವನ್ನು ಸರ್ಕಾರ ಮಾಡುತ್ತದೆ.

**ಉಪ ಸಭಾಪತಿಯವರು:-** ಸರಿ.

**ಪ್ರಶ್ನೆ ಸಂಖ್ಯೆ: 1102**
**(ಉತ್ತರವನ್ನು ಲಗತ್ತಿಸಿದೆ)**

**ಶ್ರೀ ಎಸ್.ವ್ಹಿ.ಸಂಕನೂರ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ರಾಜ್ಯದ ವಿವಿಧ ಜಿಲ್ಲೆ ಮತ್ತು ತಾಲ್ಲೂಕುಗಳಲ್ಲಿ ಬಸ್‌ಗಳ ಕೊರತೆಯ ಬಗ್ಗೆ ನಾನು ಪ್ರಶ್ನೆ ಕೇಳಿದ್ದೆನು. ಮಾನ್ಯ ಸಚಿವರು ಅದಕ್ಕೆ ಸುಮಾರು 13 pages ಗಳಷ್ಟು ವಿವರವಾದ ಉತ್ತರವನ್ನು ಕೊಟ್ಟಿದ್ದಾರೆ. ಇತ್ತೀಚಿನ ದಿನಗಳಲ್ಲಿ ಬಸ್‌ಗಳಲ್ಲಿ ಪ್ರಯಾಣಿಕರ ಸಂಖ್ಯೆ ಹೆಚ್ಚಾದ ಹಿನ್ನೆಲೆಯಲ್ಲಿ, ಪ್ರಯಾಣಿಕರ ಅನುಕೂಲಕ್ಕಾಗಿ ಹೆಚ್ಚಿನ ಬಸ್‌ಗಳನ್ನು ಖರೀದಿಸಲಾಗಿದೆಯೇ ಎಂದು ಪ್ರಶ್ನೆ ಕೇಳಿದ್ದೆನು. ಸುಮಾರು 4,304 ಹೊಸ ಬಸ್‌ಗಳನ್ನು ಖರೀದಿ ಮಾಡಿದ್ದೇವೆಂದು ಉತ್ತರ ಕೊಟ್ಟಿದ್ದಾರೆ. ಮತ್ತೆ ಬೇರೆ ಬೇರೆ ನಿಗಮಗಳಿಗೆ, ವಿಭಾಗ ಮತ್ತು ಘಟಕಗಳಿಗೆ ನಾವು ಹಂಚಿಕೆ ಮಾಡಿದ್ದೇವೆಂದು ಹೇಳಿದ್ದಾರೆ. ಆದರೆ ನನ್ನ ಪ್ರಶ್ನೆ ಏನೆಂದರೆ, ಇವತ್ತಿನ ದಿವಸ ನಾವೆಲ್ಲಾ ನೋಡುತ್ತಿದ್ದೇವೆ. ಇವತ್ತಿನ ದಿವಸ ಎಲ್ಲಾ ಬಸ್‌ಗಳು ತುಂಬಿ ತುಳುಕುತ್ತಿವೆ. ಈಗ ಏನು 4,304 ಹೊಸ ಬಸ್‌ಗಳನ್ನು ಖರೀದಿ ಮಾಡಿದ್ದಾರೋ ಅದು ಸಾಲದು. ಇನ್ನೂ ಹೆಚ್ಚಿನ ಬಸ್‌ಗಳನ್ನು ಖರೀದಿ ಮಾಡತಕ್ಕಂಥ ಅವಶ್ಯಕತೆ ಇದೆ. ಏಕೆಂದರೆ, ಯಾವ ಬಸ್ ನೋಡಿದರೂ ಕೂಡ ತುಂಬಿ ತುಳುಕುತ್ತಿವೆ. ಇತ್ತೀಚೆಗೆ ಎಲ್ಲಾ ಪತ್ರಿಕೆಗಳಲ್ಲೂ ಕೂಡ ಸಾಕಷ್ಟು ವರದಿಯಾಗಿದೆ. "ಸಂಯುಕ್ತ ಕರ್ನಾಟಕ" ದಿನ ಪತ್ರಿಕೆಯಲ್ಲಿ "ಬಸ್ ಸೌಕರ್ಯ ಸಮಸ್ಯೆ, ಮಕ್ಕಳ ವೃದ್ಧರ ಪರದಾಟ, ನಿತ್ಯ ಗೋಳಾಟ ಮತ್ತು ಪ್ರತಿಭಟನೆ" ಎಂದು ವರದಿಯಾಗಿದೆ. ವಿಜಯವಾಣಿ ದಿನಪತ್ರಿಕೆಯಲ್ಲಿ "ಬಸ್ ಸೌಲಭ್ಯಕ್ಕಾಗಿ ವಿದ್ಯಾರ್ಥಿಗಳ ಪ್ರತಿಭಟನೆ" ಎಂದು ವರದಿಯಾಗಿದೆ. ಪ್ರಜಾವಾಣಿ ದಿನಪತ್ರಿಕೆಯಲ್ಲಿ "ಬಸ್‌ಗಳಿಗಾಗಿ ವಿದ್ಯಾರ್ಥಿಗಳ ಪ್ರತಿಭಟನೆ" ಎಂದು ವರದಿಯಾಗಿದೆ. ಇದನ್ನು ನಾನು ಏಕೆ ಮಾನ್ಯ ಸಚಿವರ ಗಮನಕ್ಕೆ ತರುತ್ತಿದ್ದೇನೆಂದರೆ, ವಿಶೇಷವಾಗಿ ನಮ್ಮ ಭಾಗದ ಲಕ್ಷ್ಮೇಶ್ವರ ಶಿರಹಟ್ಟಿಯಲ್ಲಿ ಬಸ್‌ಗಳ ಕೊರತೆಯಿಂದ ವಿದ್ಯಾರ್ಥಿಗಳಿಗೆ ತೊಂದರೆಯಾಗಿ ಅವರು ಟ್ರಾಕ್ಟರ್‌ಗಳಲ್ಲಿ ಹೋಗುತ್ತಿದ್ದಾರೆ. ಇಂತಹ ವಿಷಯಗಳು ಸಾಕಷ್ಟು ದಿನ ಪತ್ರಿಕೆಗಳಲ್ಲಿ ಬಂದಿದೆ. ಹಾಗಾಗಿ, ನಾನು ಮಾನ್ಯ ಸಚಿವರಲ್ಲಿ ವಿನಂತಿ ಮಾಡುವುದೇನೆಂದರೆ, ಈಗ ನೀವೇನು ಬಸ್ ಖರೀದಿ ಮಾಡಿದ್ದೀರಿ, ನೀವು ಇನ್ನೂ ಹೆಚ್ಚಿನ ಬಸ್ ಖರೀದಿ ಮಾಡುತ್ತೀರೋ ಇಲ್ಲವೋ. ಆದರೆ ನಿಮ್ಮಲ್ಲಿ ಇನ್ನೂ 1,346 ಬಸ್‌ಗಳನ್ನು ಖರೀದಿ ಮಾಡುತ್ತೇವೆಂದು ಹೇಳಿದ್ದೀರಿ. 1,346 ಹೆಚ್ಚಿನ ಬಸ್‌ಗಳನ್ನು ಯಾವಾಗ ಖರೀದಿ ಮಾಡುತ್ತೀರಿ? ನಿಗದಿತವಾದ ದಿನಾಂಕವನ್ನು ಹೇಳಿ. ಒಂದು ತಿಂಗಳು ಅಥವಾ ಎಷ್ಟು ತಿಂಗಳೊಳಗೆ ಬಸ್ ಖರೀದಿ ಮಾಡುತ್ತೀರಿ ಎಂದು ದಯವಿಟ್ಟು ಮಾನ್ಯ ಸಚಿವರು ಉತ್ತರ ಕೊಡಬೇಕು.

**ಶ್ರೀ ಸಂತೋಷ್ ಎಸ್. ಲಾಡ್ (ಕಾರ್ಮಿಕ ಸಚಿವರು) (ಸಾರಿಗೆ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಎಸ್.ವ್ಹಿ.ಸಂಕನೂರ ರವರು ಕೇಳಿರತಕ್ಕಂಥ ಪ್ರಶ್ನೆಗೆ ನಾನು ಸ್ವಲ್ಪ ಬೆಳಕು ಚೆಲ್ಲುವುದಕ್ಕೆ ಬಯಸುತ್ತೇನೆ. ಇವತ್ತಿನ ದಿವಸ ತಾವೆಲ್ಲಾ ಶಕ್ತಿ ಯೋಜನೆ ಬಗ್ಗೆ ಕೇಳಿದ್ದೀರಿ. ಶಕ್ತಿ ಯೋಜನೆ ಜಾರಿಗೆ ಬರುವುದಕ್ಕಿಂತ ಮುಂಚೆ ಸುಮಾರು 96,46,000 ಜನ ಬಸ್‌ನಲ್ಲಿ ಪ್ರಯಾಣ ಮಾಡುತ್ತಿದ್ದರು. ಆದರೆ ಈಗ 1,16,00,000 ಜನ ಬಸ್‌ನಲ್ಲಿ ಪ್ರಯಾಣ ಮಾಡುತ್ತಿದ್ದಾರೆ. ಪ್ರಯಾಣಿಕರ ಸಂಖ್ಯೆ ಒಂದು ದಿನಕ್ಕೆ ಸುಮಾರು 23 ಲಕ್ಷದಷ್ಟು ಹೆಚ್ಚಾಗಿದೆ. ಇವತ್ತಿನ ದಿವಸ 1,63,00,000 ಪ್ರಯಾಣಿಕರಲ್ಲಿ ಹೆಮ್ಮೆಪಡತಕ್ಕಂಥ ವಿಚಾರವೇನೆಂದರೆ, 65

ಲಕ್ಷ ಹೆಣ್ಣುಮಕ್ಕಳು ಬಸ್‌ನಲ್ಲಿ ಪ್ರಯಾಣ ಮಾಡುತ್ತಿದ್ದಾರೆ. ಇದರಿಂದ ಒಂದು ದಿನಕ್ಕೆ ನಮಗೆ ಸುಮಾರು ರೂ.16 ಕೋಟಿ ರೂಪಾಯಿಗಳಷ್ಟು ರೆವಿನ್ಯೂ ಜಾಸ್ತಿ generate ಆಗುತ್ತಿದೆ.

**(ಮುಂದು)**

(947)18.12.2024/12.40/ಎಂ.ಎಂ-ಕೆ.ಎಸ್ (ಉಪ ಸಭಾಪತಿಯವರ ಉಪಸ್ಥಿತಿ)

**ಶ್ರೀ ಸಂತೋಸ್ ಎಸ್. ಲಾಡ್ (ಮುಂದು):**

'ಶಕ್ತಿ ಯೋಜನೆ' ಅಡಿಯಲ್ಲಿ ಸುಮಾರು 1.55 ಲಕ್ಷ ಟ್ರಿಪ್ಸ್ ಏನು ಪ್ರಾರಂಭವಾಗಿತ್ತು, ಶಕ್ತಿ ಯೋಜನೆ ಬಂದ ನಂತರ ಸುಮಾರು 1,74,000 ಟ್ರಿಪ್ಸ್ ಆಗಿವೆ. ಅಂದರೆ ದಿನಕ್ಕೆ ಸುಮಾರು 19,500 ಟ್ರಿಪ್‌ಗಳು ಜಾಸ್ತಿಯಾಗಿವೆ. ನಾವು ನಿಮಗೆ ವಾಹನಗಳ ವಿವರಗಳನ್ನು ಕೊಟ್ಟಿದ್ದೇವೆ. 2023-24ನೇ ಸಾಲಿನಲ್ಲಿ ಸುಮಾರು 4304 ಬಸ್ಸುಗಳನ್ನು ಖರೀದಿ ಮಾಡಿದ್ದೇವೆ ಹಾಗೂ ಹೆಚ್ಚುವರಿಯಾಗಿ ಸುಮಾರು 1346 ಬಸ್ಸುಗಳನ್ನು ಇನ್ನೊಂದು ವರ್ಷದಲ್ಲಿ ಆರ್ಥಿಕ ವರ್ಷದೊಳಗಡೆ ಖರೀದಿ ಮಾಡುತ್ತೇವೆ ಎಂದು ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. ಎಲ್ಲಕ್ಕಿಂತ ಹೆಚ್ಚಾಗಿ ಸರ್ವಿಸ್‌ಗಳು ಏನು ಪ್ರಾರಂಭವಾಗಿವೆ; ಟ್ರಿಪ್ಸ್ ಬೇರೆ ಸರ್ವಿಸ್ ಬೇರೆ. ಮೊದಲು ಸುಮಾರು 21,569 ಸರ್ವಿಸ್‌ಗಳಿದ್ದರೆ ಈಗ 23,164 ಸರ್ವಿಸ್‌ಗಳು ಜಾಸ್ತಿಯಾಗಿವೆ. 1,55,000 ಟ್ರಿಪ್ಸ್ ಇದ್ದದ್ದು ಈಗ 1,74,000 ಟ್ರಿಪ್ಸ್ ಆಗಿವೆ. Kilometer wise ಹೇಳುವುದಾದರೆ ಹಿಂದೆ ಒಂದು ದಿನಕ್ಕೆ 65,00,000 ಕಿ.ಮೀ. ಪ್ರಯಾಣ ಮಾಡುತ್ತಿದ್ದರೆ ಇವತ್ತು ಒಂದು ದಿನಕ್ಕೆ 71,00,000 ಕಿ.ಮೀ. ಪ್ರಯಾಣ ಮಾಡುತ್ತಿದ್ದೇವೆ. ಇದರಿಂದ ಸುಮಾರು ಶೇ.41 ರಷ್ಟು revenue ಜಾಸ್ತಿಯಾಗಿದೆ. All over India ಬೇರೆ ರಾಜ್ಯಗಳಿಗೆ ನಮ್ಮ ರಾಜ್ಯದ ಸಂಸ್ಥೆ ಹಾಗೂ ಇಲಾಖೆಯನ್ನು ಹೋಲಿಸಿ ನೋಡಿದರೆ, ರೈಲ್ವೆ ಇಲಾಖೆಯಲ್ಲಿ ಸುಮಾರು 2.3 ಮಿಲಿಯನ್ ಜನರು ಪ್ರಯಾಣ ಮಾಡುತ್ತಿದ್ದಾರೆ, ವರ್ಷದಲ್ಲಿ ಸುಮಾರು 600 ಕೋಟಿಗೂ ಹೆಚ್ಚು ಜನರು ರೈಲಿನಲ್ಲಿ ಪ್ರಯಾಣ ಮಾಡುತ್ತಿದ್ದಾರೆ. ಕರ್ನಾಟಕ ರಾಜ್ಯದಲ್ಲಿ ವರ್ಷದಲ್ಲಿ ಸುಮಾರು 300 ಕೋಟಿವರೆಗೆ ಜನರು ಪ್ರಯಾಣಿಸುತ್ತಿದ್ದಾರೆ. ದಿನಕ್ಕೆ 1,16,00,000 ಜನರು ಪ್ರಯಾಣ ಮಾಡುತ್ತಿದ್ದಾರೆ. ತಮಿಳುನಾಡು ಹಾಗೂ ಬೇರೆ ರಾಜ್ಯಗಳಿಗೆ ಹೋಲಿಸಿ ನೋಡಿದರೆ ತಮಿಳುನಾಡಿನಲ್ಲಿ ಸುಮಾರು 8 ಕೋಟಿ ಜನಸಂಖ್ಯೆ ಇದ್ದರೆ ಸುಮಾರು 20,000 ಬಸ್‌ಗಳಿವೆ. ಮಹಾರಾಷ್ಟ್ರದಲ್ಲಿ ಸುಮಾರು 23,000 ಬಸ್‌ಗಳಿವೆ. ನಮ್ಮಲ್ಲಿ 25,000 ಬಸ್ಸುಗಳಿವೆ. ಇಡೀ ದೇಶದಲ್ಲಿ ಹೋಲಿಸಿ ನೋಡಿದರೆ ಕರ್ನಾಟಕ ರಾಜ್ಯದ ಸಾರಿಗೆ ಇಲಾಖೆ ನಂಬರ್ ಒನ್ ಸ್ಥಾನದಲ್ಲಿದೆ. ತಾವು ಕೇಳಿರುವಂತಹ ಪ್ರಶ್ನೆಗೆ ಸಂಬಂಧಪಟ್ಟಂತೆ ನನ್ನ ಹತ್ತಿರ ಕೂಡ ಹಲವಾರು ಪೇಪರ್ ಕಟಿಂಗ್ ಮಾಹಿತಿಗಳಿವೆ. ನನ್ನ ಕಲಘಟಗಿ ಕ್ಷೇತ್ರದಲ್ಲಿಯೂ ಕೂಡ ಈ ರೀತಿಯ ಸಮಸ್ಯೆಗಳಿವೆ.

ಎಲ್ಲಾ ಕಡೆಯು ಕೂಡ ಸಹಜವಾಗಿ ಆಗುತ್ತವೆ. ಇವತ್ತು ಸುಮಾರು 23,00,000 ಮಕ್ಕಳಿಗೆ ಉಚಿತವಾಗಿ ಬಸ್ ಪಾಸ್ ಸೌಲಭ್ಯ ಕೊಟ್ಟಿದ್ದೇವೆ. ಶಕ್ತಿ ಯೋಜನೆ ಆದಂತಹ ಸಂದರ್ಭದಲ್ಲಿ ಸ್ವಲ್ಪಮಟ್ಟಿಗೆ ಸಮಸ್ಯೆಯಾಗಿದ್ದು ನಿಜ. ನಾವು number of trips ಅನ್ನು ಏನು ಮಾಡುತ್ತಿದ್ದೇವೆ ಅದರಲ್ಲಿ maintenance breakdown ನೋಡಿದರೆ ಕೇವಲ ಒಂದು ಪರ್ಸೆಂಟ್‌ಗಿಂತ ಕಡಿಮೆ ಇರುವುದು ಕರ್ನಾಟಕ ರಾಜ್ಯ ಸಾರಿಗೆ ಸಂಸ್ಥೆಯ ಎಲ್ಲಾ ಕಾರ್ಪೊರೇಷನ್‌ನಲ್ಲಿದೆ. ಬಸ್‌ಗಳ ಸಂಖ್ಯೆಯನ್ನು ಹಂತ ಹಂತವಾಗಿ ಜಾಸ್ತಿ ಮಾಡುತ್ತೇವೆ. ಇನ್ನೊಂದು ಬಹಳ

ಖುಷಿಯ ವಿಚಾರವನ್ನು ಸದನದ ಮುಂದಿಡಬಯಸುತ್ತೇನೆ. 'ಶಕ್ತಿ ಯೋಜನೆ' ಪ್ರಾರಂಭವಾದ ನಂತರ ಕರ್ನಾಟಕದ Fiscal Policy Institute (FPI) ನ study ರಲ್ಲಿ ಸುಮಾರು 371.57 ಕೋಟಿ ರೂಪಾಯಿಗಳು ಜಿ.ಎಸ್.ಟಿ. ಗೆ ಅನುಕೂಲವಾಗಿದೆ. ಇನ್ನೊಂದು ಪ್ರಮುಖವಾದ ಮಾತನ್ನು ಸದನಕ್ಕೆ ಹೇಳಬೇಕಾಗುತ್ತದೆ. ಇವತ್ತು ಇನ್ನೊಂದು Just Jobs Network in collaboration with FPI ಒಂದು study ಮಾಡಿದೆ. ಅದರಲ್ಲಿ womenfolk ಅಂದರೆ, ಮಹಿಳಾ ಕಾರ್ಮಿಕರ ಅದರ ಉದ್ಯೋಗ ಸಂಖ್ಯೆ ಶೇ.5ರಷ್ಟು ಜಾಸ್ತಿಯಾಗಿದೆ. ಅದರ ಜೊತೆಗೆ ಶಕ್ತಿ ಯೋಜನೆಯಡಿ ಬೆಂಗಳೂರು ಭಾಗದ ಹೆಣ್ಣುಮಕ್ಕಳು ಏನು ಪ್ರಯಾಣ ಮಾಡುತ್ತಿದ್ದಾರೆ ಅವರಿಗೆ ತಿಂಗಳಿಗೆ ಸುಮಾರು ರೂ. 1,100 ರಿಂದ 1,200/- ಲಾಭವಾಗುತ್ತಿದೆ. Tier II cities ನಲ್ಲಿ ಸುಮಾರು ರೂ. ೮೦೦ ರಿಂದ ೯೦೦ ರೂಪಾಯಿಗಳವರೆಗೆ ಅವರಿಗೆ ಲಾಭವಾಗುತ್ತಿದೆ. ಒಟ್ಟಾರೆ ತಮ್ಮ ಪ್ರಶ್ನೆಗೆ ಉತ್ತರ ಕೊಡುವುದು ಇಷ್ಟೇ, ತಮ್ಮ ಪ್ರಶ್ನೆ ಸರಿಯಾಗಿದೆ. ಕೆಲವಾರು ಸಂದರ್ಭಗಳಲ್ಲಿ ತೊಂದರೆಗಳಾಗಿರುವುದು ನನ್ನ ಮತಕ್ಷೇತ್ರದಲ್ಲಿಯೂ ಸಹ ತೊಂದರೆಯಾಗಿದೆ. ಇಷ್ಟು ಜನರು ಒಮ್ಮೆಲೇ ಪ್ರಯಾಣ ಮಾಡುವುದರಿಂದ ಸ್ವಲ್ಪ ಸಮಸ್ಯೆಗಳಿದೆ. ತಾವು ಕೇಳುತ್ತಿರುವ ಮೂಲ ಪ್ರಶ್ನೆ ಬಸ್‌ಗಳನ್ನು ತೆಗೆದುಕೊಳ್ಳುತ್ತಿಲ್ಲವೇ ಎಂಬುದಕ್ಕೆ, ಇನ್ನೊಂದು ವರ್ಷದ ಅವಧಿಯಲ್ಲಿ ಆರ್ಥಿಕ ವರ್ಷದಲ್ಲಿ ನಾವು ಬಾಕಿ ಉಳಿದಿರುವ ಬಸ್‌ಗಳನ್ನು ಖರೀದಿ ಮಾಡುತ್ತೇವೆ. ಮುಂದೆಯೂ ಸಹ ಖರೀದಿ ಮಾಡುತ್ತೇವೆ ಎಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

**ಶ್ರೀ ಎಸ್.ವ್ಹಿ. ಸಂಕನೂರ:-** ಮಾನ್ಯ ಸಚಿವರೇ, ನಾನು ನಿಗದಿತ ಅವಧಿಯನ್ನು ಕೇಳಿದ್ದೇನೆ.

**ಶ್ರೀ ಸಂತೋಷ್ ಎಸ್. ಲಾಡ್:-** ಮಾನ್ಯ ಸಭಾಪತಿಯವರೇ, ನಾನು ಬರುವ ಆರ್ಥಿಕ ವರ್ಷ ಎಂದು ಹೇಳಿದೆನಲ್ಲವೇ. 16 ತಿಂಗಳಿನಲ್ಲಿ ಈಗಾಗಲೇ ನಾವು 4,304 ಬಸ್‌ಗಳನ್ನು ಖರೀದಿ ಮಾಡಿದ್ದೇವೆ. ಬಸ್‌ಗಳು ಸಂಚಾರ ಮಾಡುತ್ತಿವೆ.

**ಶ್ರೀ ಎಸ್.ವ್ಹಿ. ಸಂಕನೂರ:-** ಮಾರ್ಚ್ ತಿಂಗಳಿನೊಳಗಡೆ ಖರೀದಿ ಮಾಡುತ್ತೀರಾ?

**ಶ್ರೀ ಸಂತೋಷ್ ಎಸ್. ಲಾಡ್:-** ಹೌದು, ಮುಂಬರುವ ಆರ್ಥಿಕ ವರ್ಷದಲ್ಲಿ ಎಂದು ಹೇಳಿದ್ದೇವೆ.

**ಶ್ರೀ ಎಸ್.ವ್ಹಿ. ಸಂಕನೂರ:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ.

**ಉಪ ಸಭಾಪತಿಯವರು:-** ಉಪ ಪ್ರಶ್ನೆಗಳು ಬೇಡ, ಈಗಾಗಲೇ ಸಮಯವಾಯಿತು. ನಾನು 5-6 ನಿಮಿಷ ಮಾತ್ರ ಎಂದು ಹೇಳಿದ್ದೇನೆ. ಇನ್ನೂ 12 ಜನರಿದ್ದಾರೆ.

**ಶ್ರೀ ಎಸ್.ವ್ಹಿ. ಸಂಕನೂರ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಬಹಳ lengthy ಆಗಿ ಉತ್ತರವನ್ನು ಕೊಟ್ಟಿದ್ದಾರೆ.

**ಉಪ ಸಭಾಪತಿಯವರು:-** ಮಾನ್ಯ ಸಂಕನೂರರವರೇ, ನಿನ್ನೆ ಆಗಿರುವುದಕ್ಕೆ ಮತ್ತೆ ಅವಕಾಶ ಕೊಡುವುದಿಲ್ಲ.

**ಶ್ರೀ ಎಸ್.ವ್ಹಿ. ಸಂಕನೂರ:-** ಮಾನ್ಯ ಸಚಿವರು ದೀರ್ಘ ಉತ್ತರವನ್ನು ಕೊಟ್ಟಿದ್ದಾರೆ. ಎರಡು ಉಪ ಪ್ರಶ್ನೆಗಳನ್ನು ಕೇಳುತ್ತೇನೆ.

**ಉಪ ಸಭಾಪತಿಯವರು:-** ಉಪಪ್ರಶ್ನೆ ಕೇಳಿ ಮುಗಿಸಿ.

**ಶ್ರೀ ಎಸ್.ವ್ಹಿ. ಸಂಕನೂರ:-** ಮಾನ್ಯ ಸಭಾಪತಿಯವರೇ, ಸಿಬ್ಬಂದಿಗಳ ಕೊರತೆ ಇದೆ. ಡ್ರೈವರ್‌ಗಳನ್ನು private agency ಗಳ ಮೂಲಕ ತೆಗೆದುಕೊಳ್ಳುತ್ತೇವೆಂದು ಹೇಳಿದರು. ಡ್ರೈವರ್‌ಗಳನ್ನು private agency ಗಳ ಮೂಲಕ ತೆಗೆದುಕೊಂಡರೆ ತೊಂದರೆಯೇನೆಂದರೆ, ನೀವು ಅವರಿಗೆ ರೂ. 23,000/- ವೇತನ ಕೊಡುತ್ತೀರಿ ಆದರೆ private agency ಗಳು ಅವರಿಗೆ ರೂ. 23,000/- ಕೊಡುವುದಿಲ್ಲ. ಬರೀ 12,000 ರೂಪಾಯಿಗಳನ್ನು ಕೊಡುತ್ತಾರೆ. ಆಗ ಏನು ಮಾಡುತ್ತೀರಿ? ಮರು ದಿನ ಅವರು ಕರ್ತವ್ಯಕ್ಕೆ ಬರಬೇಕು. Private agency ಗಳ ಮೂಲಕ ತೆಗೆದುಕೊಳ್ಳುವುದರಿಂದ ಸಾರಿಗೆ ವ್ಯವಸ್ಥೆಗೆ ತೊಂದರೆಯಾಗುತ್ತದೆ. ಅವರ ಮೇಲೆ ಡಿಪೋ ಮ್ಯಾನೇಜರ್‌ನ ನಿಯಂತ್ರಣ ಇರುವುದಿಲ್ಲ. ಕೆಲಸಕ್ಕೆ ಒಂದು ದಿನ suddenly ತಪ್ಪಿಸಿಕೊಂಡು ಬಿಡುತ್ತಾನೆ. ಆಗ ಆ route bus ಗಳು ರದ್ದಾಗುತ್ತದೆ. ನಾನು ಇಷ್ಟೆಲ್ಲವನ್ನೂ ಪತ್ರಿಕೆಯಲ್ಲಿ ಓದಿದ್ದೇನೆ. ದಯವಿಟ್ಟು ಡ್ರೈವರ್‌ಗಳನ್ನು private agency ಗಳ ಮೂಲಕ ತೆಗೆದುಕೊಳ್ಳುವುದನ್ನು ನಿಲ್ಲಿಸಿ permanent appointment ಮಾಡಿಕೊಳ್ಳಿ. ಇದು ಮೊದಲನೆಯದು. ಎರಡನೆಯದಾಗಿ, ನಾನು ಬಸ್ಸುಗಳ ನಿರ್ವಹಣೆ ಬಗ್ಗೆ ಕೇಳಿದ್ದೇನೆ. ಸಚಿವರು ನಿರ್ವಹಣೆ ಬಗ್ಗೆ ಉತ್ತರ ಕೊಟ್ಟಿದ್ದಾರೆ. ಯೋಗ್ಯವಾದ ಬಸ್‌ಗಳನ್ನು ಸಂಚಾರಕ್ಕೆ ಬಿಡುತ್ತೇವೆ, ವಿಶೇಷವಾಗಿ ಸಾರಿಗೆ ಪ್ರಾಧಿಕಾರದಿಂದ ಅರ್ಹತಾ ಪ್ರಮಾಣ ಪತ್ರ ಹೊಂದಿದ ಬಸ್‌ಗಳನ್ನು ಮಾತ್ರ ಬಿಡುತ್ತೇವೆ ಎಂದು ಹೇಳಿದ್ದಾರೆ. ಆದರೆ ನಿಜ ಪರಿಸ್ಥಿತಿ ಏನೆಂದರೆ, ಎಷ್ಟೋ ಕಡೆಗಳಲ್ಲಿ ಬಸ್ ಕೆಟ್ಟು ನಿಂತಿದ್ದನ್ನು ನೋಡಿದ್ದೇವೆ? ಇನ್ನೊಂದು ವಿಚಾರ ಪತ್ರಿಕೆಯಲ್ಲಿ ಬಂದಿದೆ, "ಸೋರುವ ಬಸ್ ಛಾವಣಿ, ಛತ್ರಿ ಹಿಡಿದು ಪ್ರಯಾಣ". ಬಸ್‌ನೊಳಗೆ ಛತ್ರಿ ಹಿಡಿದು ಪ್ರಯಾಣ ಮಾಡುವಂತಹ ಸ್ಥಿತಿ ಇದೆ. ಅಂದರೆ ನಿರ್ವಹಣೆ ಸರಿಯಾಗಿಲ್ಲ. ಇದನ್ನು ಸರಿಯಾಗಿ ನಿರ್ವಹಣೆ ಮಾಡಬೇಕೆಂದು ಕೇಳಬಯಸುತ್ತೇನೆ.

**ಶ್ರೀ ಸಂತೋಷ್ ಎಸ್. ಲಾಡ್:-** ಮಾನ್ಯ ಸಭಾಪತಿಯವರೇ, ಮೊನ್ನೆ ದಿವಸ financial approval ಪಡೆದು ಸುಮಾರು 9,000 ಜನರ ನೇಮಕಾತಿಗೆ ಆರ್ಥಿಕ ಇಲಾಖೆ ಅನುಮೋದನೆ ನೀಡಿದೆ. ಈಗಾಗಲೇ ಸುಮಾರು 4,000 ಜನರನ್ನು ನೇಮಕಾತಿ ಮಾಡಿಕೊಂಡಿದ್ದೇವೆ. ಇನ್ನೂ ಹಂತ ಹಂತವಾಗಿ ನೇಮಕಾತಿ ಮಾಡಿಕೊಳ್ಳುತ್ತೇವೆ. ಇದು ತಾವು ಕೇಳಿರುವ ಪ್ರಶ್ನೆಗೆ ಉತ್ತರ. ಎರಡನೆಯದಾಗಿ ಇಷ್ಟು ದೊಡ್ಡ ವ್ಯವಸ್ಥೆಯಲ್ಲಿ ಎಲ್ಲಾ ಸರ್ಕಾರಗಳ ಪ್ರಯತ್ನದಿಂದ ಕರ್ನಾಟಕ ರಾಜ್ಯ ಸಾರಿಗೆ ವ್ಯವಸ್ಥೆ ಈ ಮಟ್ಟಕ್ಕೆ ಬೆಳೆದಿದೆ. We should appreciate the entire Sector. ಕರ್ನಾಟಕ ರಾಜ್ಯ ಈಗ ಏನು ವ್ಯವಸ್ಥೆಯನ್ನು ಮಾಡುತ್ತಿದೆ ಎಂಬುದನ್ನು ನಿಜಕ್ಕೂ ಬೇರೆ ರಾಜ್ಯಗಳಿಗೆ ಹೋಲಿಸಿ ನೋಡಿದರೆ all over India, 'ಕರ್ನಾಟಕ ರಾಜ್ಯವೇ ಎಲ್ಲದಕ್ಕಿಂತ ಹೆಚ್ಚಾಗಿ ಈ ಸಾರಿಗೆ ಸಂಸ್ಥೆ ನಂಬರ್ ಒನ್ ಸ್ಥಾನದಲ್ಲಿದ್ದು ಸಂಸ್ಥೆ ಈ ಮಟ್ಟಕ್ಕೆ ಬೆಳೆಯಬೇಕಾದರೆ ಅಲ್ಲಿ ಕೆಲಸ ಮಾಡುತ್ತಿರುವ ಎಲ್ಲಾ ಕಾರ್ಮಿಕ ವರ್ಗದವರಿಂದ ಕಾರಣವಾಗಿದೆ. ತಾವು ಕೇಳಿರುವ ಪ್ರಶ್ನೆಯಂತೆ ಮಂಜೂರಾಗಿರುವ 9,000 ಹುದ್ದೆಗಳಲ್ಲಿ ಈಗಾಗಲೇ 4,000 ಹುದ್ದೆಗಳನ್ನು ತೆಗೆದುಕೊಂಡಿದ್ದೇವೆ. ಇನ್ನು ಮುಂದೆಯೂ ತೆಗೆದುಕೊಳ್ಳುತ್ತೇವೆ. ಕೆಲವು ಸಣ್ಣ ಪುಟ್ಟ ತೊಂದರೆಗಳಿವೆ. ಲಕ್ಷಾಂತರ ಟ್ರಿಪ್ ಮಾಡುವಂತಹ ಸಂದರ್ಭದಲ್ಲಿ one percent

breakdown ಆಗುವಂತಹ ಸಾಧ್ಯತೆಗಳಿದೆ. ಖಂಡಿತವಾಗಿಯೂ, ಪತ್ರಿಕಾ ಮಾಧ್ಯಮದಲ್ಲಿ ತೋರಿಸಿರುವುದು ನಿಜವಿದೆ. ಅದನ್ನು ಸಹ ಸರಿಪಡಿಸುತ್ತೇವೆಂದು ಈ ಸಂದರ್ಭದಲ್ಲಿ ಹೇಳಲಿಚ್ಛಿಸುತ್ತೇನೆ.

**ಪ್ರಶ್ನೆ ಸಂಖ್ಯೆ: 1046**
**(ಉತ್ತರವನ್ನು ಲಗತ್ತಿಸಿದೆ)**

**ಶ್ರೀ ಜಗದೇವ್ ಗುತ್ತೇದಾರ್ (ವಿಧಾನಸಭಾ ಕ್ಷೇತ್ರ)**:- ಮಾನ್ಯ ಸಭಾಪತಿಯವರೇ, ಗುಲ್ಬರ್ಗಾ ಜಿಲ್ಲೆಯ ಕಾಳಗಿ ತಾಲ್ಲೂಕು ರಚನೆಯಾದ ಮೇಲೆ ಈ ತಾಲ್ಲೂಕಿಗೆ ಎಷ್ಟು ಸರ್ಕಾರಿ ಕಛೇರಿಗಳ ಅಗತ್ಯತೆ ಇದೆ, ಎಷ್ಟು ಸರ್ಕಾರಿ ಕಛೇರಿಗಳು ಅಲ್ಲಿಗೆ ಸ್ಥಳಾಂತರಗೊಂಡಿವೆ ಎಂದು ಪ್ರಶ್ನೆ ಕೇಳಿದ್ದೆ. ಮಾನ್ಯ ಸಚಿವರು ಕಾಳಗಿ ತಾಲ್ಲೂಕಿಗೆ ಆರು ಕಛೇರಿಗಳು ಸ್ಥಳಾಂತರಗೊಂಡಿವೆ, ಇನ್ನೂ 29 ಸರ್ಕಾರಿ ಕಛೇರಿಗಳು ಬೇಕು ಎಂದು ಉತ್ತರ ಕೊಟ್ಟಿದ್ದಾರೆ. ಕಾಳಗಿ ತಾಲ್ಲೂಕಿಗೆ ಕೇವಲ ಆರು ಕಛೇರಿಗಳು ಬಂದಿವೆ. ಆದರೆ ಇನ್ನೂ 23 ಕಛೇರಿಗಳು ಬಂದಿಲ್ಲ. 40 ವರ್ಷಗಳಿಂದ ಕಾಳಗಿ ತಾಲ್ಲೂಕು ಮಾಡಬೇಕೆಂದು ಹೋರಾಟ ಮಾಡಿ ಕಾಳಗಿ ತಾಲ್ಲೂಕು ಆಗಿದೆ. ಮೊದಲು ಕಾಳಗಿ ಒಂದು ವಿಧಾನಸಭಾ ಕ್ಷೇತ್ರವಾಗಿತ್ತು. ನಾವು 40 ಕಿ.ಮೀ. ಚಿತ್ತಾಪುರಕ್ಕೆ ಹೋಗಿ ಅಲ್ಲಿ ಕೆಲಸ ಮಾಡಬೇಕಾಗಿತ್ತು. ಇದರಿಂದ ರೈತರು ಸೇರಿದಂತೆ ಎಲ್ಲರಿಗೂ ಬಹಳ ಕಷ್ಟವಾಗಿದೆ. ಕಾಳಗಿ ಮತ್ತು ಷಹಾಬಾದ್ ಆ ಚಿತ್ತಾಪುರ ತಾಲ್ಲೂಕಿಗೆ ಅವಲಂಬನೆಯಾಗಿವೆ. ಷಹಾಬಾದ್ ಮತ್ತು ಕಾಳಗಿ ತಾಲ್ಲೂಕಿನವರು ನೋಂದಣಿ ಮಾಡುವುದಕ್ಕೆ ಎಲ್ಲರೂ ಚಿತ್ತಾಪುರ ತಾಲ್ಲೂಕಿಗೆ ಹೋಗಬೇಕಾಗುತ್ತದೆ. ಅದಕ್ಕೋಸ್ಕರ ಬಹಳ ತೊಂದರೆಯಾಗುತ್ತಿದೆ. ಆದ್ದರಿಂದ ಕಾಳಗಿ ತಾಲ್ಲೂಕಿಗೆ ಎಲ್ಲಾ 23 ಕಛೇರಿಗಳು ಬರಬೇಕು. ಅದಿನ್ನೂ ಬಂದಿಲ್ಲ.

**ಶ್ರೀ ಕೃಷ್ಣಭೈರೇಗೌಡ (ಕಂದಾಯ ಸಚಿವರು)**:- ಮಾನ್ಯ ಸಭಾಪತಿಯವರೇ, ಸರ್ಕಾರದ ತೀರ್ಮಾನದಲ್ಲಿ ಹೊಸ ತಾಲ್ಲೂಕುಗಳಿಗೆ ಆದೇಶವಾಗಿರುವುದು ಆರು ಕಛೇರಿಗಳು ಮಾತ್ರ. ಹಾಗಾಗಿ ಸರ್ಕಾರಿ ಆದೇಶದಲ್ಲಿ ಎಷ್ಟು ಸೇರಿಕೊಂಡಿದೆ ಅಷ್ಟನ್ನು ಮಾತ್ರ ಸ್ಥಾಪನೆ ಮಾಡಿದ್ದೇವೆ. ಉಳಿದವುಗಳನ್ನು ಕಾಲ ಕಾಲಕ್ಕೆ ನಾವು ಪರಿಶೀಲನೆ ಮಾಡುತ್ತೇವೆ. ಅದು ಆಯಾ ಇಲಾಖೆಗಳಿಗೂ ಸಂಬಂಧಿಸಿದೆ. ಬರೀ ನಮ್ಮ ಕಂದಾಯ ಇಲಾಖೆಯದ್ದೇ ಅಲ್ಲ. ಬೇರೆ ಇಲಾಖೆಗಳ ಬಗ್ಗೆ ಅವರವರ ಇಲಾಖೆಗಳು ತೀರ್ಮಾನ ಮಾಡಬೇಕಾಗುತ್ತದೆ. ಅದನ್ನು ತಕ್ಷಣಕ್ಕೆ ಮಾಡುವುದು ಕಷ್ಟಸಾಧ್ಯವಾದಂತಹ ಕೆಲಸ. ಕಾಲಕ್ರಮೇಣವಾಗಿ ಅಲ್ಲಿ ವ್ಯವಹಾರ ವಹಿವಾಟುಗಳು ಬೆಳೆದ ಹಾಗೆ ಉಳಿದವುಗಳನ್ನೂ ಕೂಡ ಮಾಡುತ್ತೇವೆ. ಆದರೆ ನಾನು ಮಾನ್ಯ ಸದಸ್ಯರಿಗೆ ತಿಳಿಸಬಯಸುವುದೇನೆಂದರೆ, 65 ಹೊಸ ತಾಲ್ಲೂಕುಗಳು ರಚನೆಯಾದವು. 65 ತಾಲ್ಲೂಕಿಗೆ ಇಲ್ಲಿಯವರೆಗೂ ತಾಲ್ಲೂಕು ಕಛೇರಿಯ ಕಟ್ಟಡವೇ ಇರಲಿಲ್ಲ. ಕಳೆದ ಸರ್ಕಾರದಲ್ಲಿ 65 ಹೊಸ ತಾಲ್ಲೂಕುಗಳಿಗೆ ಕೇವಲ 14 ಕಟ್ಟಡಗಳು ಮಾತ್ರ ಮಂಜೂರಾಗಿತ್ತು.

(ಮುಂದು)

**(948) 18.12.2024 12.50 ಹೆಚ್‌ವಿ-ಎಂಡಿ** **(ಉಪ ಸಭಾಪತಿಯವರ ಉಪಸ್ಥಿತಿ)**

**ಶ್ರೀ ಕೃಷ್ಣ ಭೈರೇಗೌಡ(ಮುಂದುವರಿದಿದೆ):**

ಸನ್ಮಾನ್ಯ ಸಭಾಪತಿಯವರೇ, ನಮ್ಮ ಪಕ್ಷದ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಅಂದರೇ, ಒಂದು ವರ್ಷದಿಂದೀಚೆಗೆ ಸುಮಾರು 27 ಹೊಸ ತಾಲ್ಲೂಕುಗಳಿಗೆ ಕಟ್ಟಡಗಳನ್ನು ಮಂಜೂರು ಮಾಡಿದ್ದೇವೆ. ಕಲ್ಯಾಣ

ಕರ್ನಾಟಕ ಭಾಗದಲ್ಲಿ ಬಾಕಿ ಉಳಿದಿದ್ದ 16 ಹೊಸ ತಾಲ್ಲೂಕುಗಳಿಗೆ 16 ಕಟ್ಟಡಗಳನ್ನು ಮಂಜೂರು ಮಾಡಿದ್ದೇವೆ. ಕಳೆದ 5 ವರ್ಷಗಳ ಅವಧಿಯಲ್ಲಿ 14 ಹೊಸ ಕಟ್ಟಡಗಳನ್ನು ಮಾತ್ರ ಮಂಜೂರು ಮಾಡಿದ್ದರು. ನಾವು ಒಂದು ವರ್ಷದಲ್ಲಿ 27 ಹೊಸ ಕಟ್ಟಡಗಳನ್ನು ಮಂಜೂರು ಮಾಡಿ, ಅಲ್ಲಿ ಕಟ್ಟಡಗಳನ್ನು ಕಟ್ಟಿಕೊಡುತ್ತೇವೆ. ಮಾನ್ಯ ಕೇಳಿರುವ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಮುಂದಿನ ದಿನಗಳಲ್ಲಿ ಅದನ್ನು ಸಹ ಮಂಜೂರು ಮಾಡುತ್ತೇವೆಂದು ಹೇಳುವುದಕ್ಕೆ ಬಯಸುತ್ತೇನೆ.

**ಶ್ರೀ ಜಗದೇವ್ ಗುತ್ತೇದಾರ್:-** ಸನ್ಮಾನ್ಯ ಸಭಾಪತಿಯವರೇ, ಎಲ್ಲ ಕಾರ್ಯದರ್ಶಿಗಳ ಮೀಟಿಂಗ್ ಮಾಡಿ ಮಾನ್ಯ ಸಚಿವರು ನಿರ್ದೇಶನವನ್ನು ಕೊಟ್ಟು ಒಂದು ವರ್ಷವಾದರೂ ಸಹ ಇಲ್ಲಿಯವರೆಗೆ ಯಾವುದೇ ಕೆಲಸವಾಗಿಲ್ಲ. ಹೊಸದಾಗಿ ಕಾಳಗಿ ತಾಲ್ಲೂಕಿನಲ್ಲಿ ಪ್ರಜಾಸೌಧ ಕಟ್ಟುವ ಸಲುವಾಗಿ ನಮ್ಮದೇ ಆಗಿರುವ ನಾಲ್ಕು ಎಕರೆ ಜಮೀನನ್ನು ಉಚಿತವಾಗಿ ಜಿಲ್ಲಾಡಳಿತಕ್ಕೆ ಹಸ್ತಾಂತರ ಮಾಡಲಾಗಿದೆ. ಅದಕ್ಕೆ ಸರ್ಕಾರದವರು ಅನುಮೋದನೆಯನ್ನು ನೀಡಿದ್ದಾರೆಂದು ಮಾನ್ಯ ಸಚಿವರು ತಿಳಿಸಿದ್ದಾರೆ. ಅದಕ್ಕಾಗಿ ಅವರಿಗೆ ಧನ್ಯವಾದಗಳನ್ನು ಅರ್ಪಿಸುತ್ತಿದ್ದೇನೆ. ಪ್ರಜಾಸೌಧದ ಅಡಿಗಲ್ಲು ಸಮಾರಂಭವನ್ನು ಜನವರಿ 25ರಂದು ನೆರವೇರಿಸುವಂತೆ ಕಾರ್ಯವನ್ನು ಪೂರ್ಣಗೊಳಿಸಿಕೊಡಬೇಕೆನ್ನುವುದು ನನ್ನ ಮನವಿಯಾಗಿದೆ. ಇದರ ಜೊತೆಗೆ ಕಾಳಗಿಯಲ್ಲಿ ಉಪ ನೋಂದಣಾಧಿಕಾರಿಗಳ ಕಛೇರಿ ಮತ್ತು ಭೂ ದಾಖಲೆಗಳ ಕಛೇರಿ ಉದ್ಘಾಟನಾ ಸಮಾರಂಭವನ್ನು ಹಮ್ಮಿಕೊಳ್ಳಬೇಕೆಂದು ನಾನು ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ.

**ಶ್ರೀ ಕೃಷ್ಣಭೈರೇಗೌಡ:-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕೇಳಿರುವಂತಹ ಪ್ರಶ್ನೆಗೆ ಈಗಾಗಲೇ ಉತ್ತರವನ್ನು ಹೇಳಿದ್ದೇನೆ. ಕಾಳಗಿ ತಾಲ್ಲೂಕಿಗೂ ಪ್ರಜಾಸೌಧ ಕಟ್ಟಡವನ್ನು ಈಗಾಗಲೇ ಮಂಜೂರು ಮಾಡಿದ್ದೇವೆ. ಆದೇಶವನ್ನು ನೀಡಲಾಗಿದೆ. ಮುಂದಿನ 15-20 ದಿನಗಳಲ್ಲಿ ಟೆಂಡರ್ ಅನ್ನು ಸಹ ಕರೆಯುತ್ತೇವೆ. ಆದಷ್ಟು ಫೆಬ್ರವರಿ ತಿಂಗಳೊಳಗಾಗಿ ಟೆಂಡರ್ ಕ್ಲೋಸ್ ಮಾಡಿ ಟೆಂಡರ್ ನಾರ್ಮ್ಸ್ ಪ್ರಕಾರವಾಗಿ ಆದಷ್ಟೂ ಫೆಬ್ರವರಿ ತಿಂಗಳನಲ್ಲಿ ಟೆಂಡರ್ ಅನ್ನು ಅವಾರ್ಡ್ ಮಾಡುವ ಗುರಿಯನ್ನು ಇಟ್ಟುಕೊಂಡು ನಾವು ಕೆಲಸ ಮಾಡುತ್ತಿದ್ದೇವೆ. ಮುಂದಿನ 15-20 ದಿನಗಳಲ್ಲಿ ಟೆಂಡರ್ ಅನ್ನು ಕರೆಯುತ್ತೇವೆ. ಜನವರಿ ಅಥವಾ ಫೆಬ್ರವರಿ ತಿಂಗಳ ಅಂತ್ಯದಲ್ಲಿ ಕೆಲಸವನ್ನು ಪ್ರಾರಂಭ ಮಾಡುತ್ತೇವೆ. ಕಾಳಗಿ ತಾಲ್ಲೂಕಿಗೆ ಮಾತ್ರವಲ್ಲ ಎಲ್ಲ 27 ಹೊಸ ತಾಲ್ಲೂಕುಗಳಿಗೂ ಪ್ರಜಾಸೌಧವನ್ನು ಮಂಜೂರು ಮಾಡಲಾಗಿದೆ.

ಸನ್ಮಾನ್ಯ ಸಭಾಪತಿಯವರೇ, 65 ಹೊಸ ತಾಲ್ಲೂಕುಗಳಿದ್ದವು, ಅವುಗಳ ಪೈಕಿ ಹಿಂದಿನ ಸರ್ಕಾರದಲ್ಲಿ 14 ಪ್ರಜಾಸೌಧಗಳನ್ನು ಮಂಜೂರು ಮಾಡಲಾಗಿತ್ತು. ಈ ಒಂದು ವರ್ಷದಲ್ಲಿ ನಾವು 27 ಹೊಸ ಪ್ರಜಾಸೌಧಗಳಿಗೆ ಮಂಜೂರಾತಿಯನ್ನು ನೀಡಲಾಗಿದೆ. ಇನ್ನುಳಿದಂತೆ ಮುಂದಿನ ಏಪ್ರಿಲ್ ತಿಂಗಳೊಳಗಾಗಿ ಬಾಕಿ ಉಳಿದಿರುವ ಎಲ್ಲ ಹೊಸ ತಾಲ್ಲೂಕುಗಳಿಗೂ ಪ್ರಜಾಸೌಧವನ್ನು ಮಂಜೂರು ಮಾಡಿಕೊಡಲಾಗುತ್ತದೆ. ಮುಂದಿನ ಎರಡು ವರ್ಷಗಳಲ್ಲಿ ಎಲ್ಲ ತಾಲ್ಲೂಕಿಗಳಿಗೂ ಪ್ರಜಾಸೌಧವನ್ನು ಮಾಡಿಕೊಡುತ್ತೇವೆ.

**ಪ್ರಶ್ನೆ ಸಂಖ್ಯೆ: 1009**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ (ಪದವೀಧರರ ಕ್ಷೇತ್ರ):-** ಸನ್ಮಾನ್ಯ ಸಭಾಪತಿಯವರೇ, "ಕರ್ನಾಟಕ ರಾಜ್ಯದಲ್ಲಿರುವ ಒಟ್ಟು ಗೋಶಾಲೆಗಳ ಸಂಖ್ಯೆ ಎಷ್ಟು ಹಾಗೂ ಸದರಿ ಗೋಶಾಲೆಗಳಲ್ಲಿ ಪ್ರಸ್ತುತ ಇರುವ ಗೋವುಗಳ ಸಂಖ್ಯೆ ಎಷ್ಟು" ಎನ್ನುವ ನನ್ನ ಪ್ರಶ್ನೆಗೆ ಮಾನ್ಯ ಸಚಿವರು, "ಕರ್ನಾಟಕ ರಾಜ್ಯದಲ್ಲಿ 30 ಸರ್ಕಾರಿ ಗೋಶಾಲೆಗಳಿವೆ ಹಾಗೂ 248 ಖಾಸಗಿ ಗೋಶಾಲೆಗಳೂ ಒಟ್ಟು 278 ಗೋಶಾಲೆಗಳು ಕಾರ್ಯನಿರ್ವಹಿಸುತ್ತಿವೆ" ಎನ್ನುವ ಉತ್ತರವನ್ನು ಕೊಟ್ಟಿದ್ದಾರೆ. ಸರ್ಕಾರದ 30 ಗೋಶಾಲೆಗಳ ಪೈಕಿ 6 ಗೋಶಾಲೆಗಳಲ್ಲಿ ಒಂದೇ ಒಂದು ಹಸು ಇಲ್ಲ. 5 ಜಿಲ್ಲೆಗೆ ಸಂಬಂಧಪಟ್ಟಂತೆ ಗೋಶಾಲೆಗಳ ಸಂಖ್ಯೆ ಮತ್ತು ಬಿಡುಗಡೆಯಾಗಿರುವ ಅನುದಾನದ ಮಾಹಿತಿಯನ್ನು ಮಾನ್ಯ ಸಚಿವರು ಒದಗಿಸಿರುವುದಿಲ್ಲ. ಎಲ್ಲ 30 ಸರ್ಕಾರಿ ಶಾಲೆಗಳಲ್ಲಿರುವ ಗೋವುಗಳ ಸಂಖ್ಯೆ 1014 ಆಗಿದೆ. ಒಟ್ಟಾರೆಯಾಗಿ ರಾಜ್ಯದಲ್ಲಿರುವಂತಹ 248 ಖಾಸಗಿ ಗೋಶಾಲೆಗಳಲ್ಲಿ ಒಟ್ಟು 43,796 ಜಾನುವಾರುಗಳು ಇವೆ. ಕೇವಲ ಶೇಕಡಾ 3ರಷ್ಟು ಮಾತ್ರ ಸರ್ಕಾರಿ ಗೋಶಾಲೆಗಳಲ್ಲಿ ಜಾನುವಾರುಗಳು ಇವೆ. ಇದನ್ನು ನೋಡಿದರೆ ಸರ್ಕಾರಿ ಗೋಶಾಲೆಗಳು ಬಿಳಿ ಆನೆಯಂತಾಗಿವೆ ಎನ್ನುವ ಚಿಂತನೆ ಮೂಡುತ್ತದೆ. ಸರ್ಕಾರದ ಗೋಶಾಲೆಗಳಿಗೆ ಏತಕ್ಕೋಸ್ಕರ ಜಾನುವಾರುಗಳು ಬರುತ್ತಿಲ್ಲ; ಯಾಕೆ ಇಲ್ಲಿ ಜಾನುವಾರುಗಳ ಸಾಕಾಣಿಕೆ ಆಗುತ್ತಿಲ್ಲ ಎನ್ನುವುದನ್ನು ನಾವೆಲ್ಲರೂ ಯೋಚನೆ ಮಾಡಬೇಕಾಗುತ್ತದೆ. ಸರ್ಕಾರದ 30 ಗೋಶಾಲೆಗಳ ಪೈಕಿ 6 ಗೋಶಾಲೆಗಳಲ್ಲಿ ಜಾನುವಾರುಗಳೇ ಇಲ್ಲ. ಇಲ್ಲಿ ನಿರ್ವಹಣೆಯ ಕೊರತೆಯುಂಟಾಗಿದೆಯೇ ಅಥವಾ ಸರ್ಕಾರ ಈ ಬಗ್ಗೆ ಗಮನಹರಿಸಿಲ್ಲವೇ ಅಥವಾ ಇಲ್ಲಿ ಸರಿಯಾದಂತಹ ವ್ಯವಸ್ಥೆ ಇಲ್ಲದೇ ಜಾನುವಾರುಗಳು ಇಲ್ಲಿಗೆ ಬರುತ್ತಿಲ್ಲವೇ ಎನ್ನುವುದು ನನ್ನ ಪ್ರಶ್ನೆಯಾಗಿದೆ.

ಸನ್ಮಾನ್ಯ ಸಭಾಪತಿಯವರೇ, ಒಂದು ಗೋವಿಗೆ ಒಂದು ದಿನಕ್ಕೆ 17.50 ರೂಪಾಯಿಗಳನ್ನು ಮಾತ್ರ ಖರ್ಚು ಮಾಡಲಾಗುತ್ತಿದೆ. ಒಂದು ಜಾನುವಾರಿನ ನಿರ್ವಹಣೆಗೆ 17.50 ರೂಪಾಯಿಗಳು ಯಾವುದಕ್ಕೂ ಸಾಕಾಗುವುದಿಲ್ಲ. ಈ ಮೊತ್ತವನ್ನು ಹೆಚ್ಚು ಮಾಡಬೇಕೆನ್ನುವುದು ನನ್ನ ಒತ್ತಾಯವಾಗಿದೆ. ಬಹಳಷ್ಟು ದಿನಗಳ ಹಿಂದೆ ಈ ದರವನ್ನು ನಿಗದಿ ಮಾಡಲಾಗಿದೆ. ಎಸ್.ಆರ್., ದರವನ್ನು ಯಾವ ರೀತಿಯಲ್ಲಿ ಪ್ರತಿ ವರ್ಷ ಪರಿಷ್ಕರಣೆ ಮಾಡಲಾಗುತ್ತದೆಯೋ ಅದೇ ರೀತಿಯಲ್ಲಿ ಇದನ್ನೂ ಸಹ ಬದಲಾವಣೆ ಮಾಡಿ ಹೆಚ್ಚಿನ ಅನುದಾನವನ್ನು ಜಾನುವಾರುಗಳ ನಿರ್ವಹಣೆಗೆ ಒದಗಿಸಿಕೊಡಬೇಕೆನ್ನುವುದು ನನ್ನ ಕಳಕಳಿಯ ಮನವಿಯಾಗಿದೆ.

ಇಡೀ ರಾಜ್ಯದಲ್ಲಿರುವ ಒಟ್ಟು 248 ಖಾಸಗಿ ಗೋಶಾಲೆಗಳ ಪೈಕಿ 121 ಖಾಸಗಿ ಗೋಶಾಲೆಗಳಿಗೆ ಒಟ್ಟು 1,27,80,670 ರೂಪಾಯಿಗಳ ಅನುದಾನವನ್ನು ಬಿಡುಗಡೆ ಮಾಡಲಾಗಿದೆ. ಇನ್ನುಳಿದ 127 ಖಾಸಗಿ ಗೋಶಾಲೆಗಳಿಗೆ ಯಾವುದೇ ಅನುದಾನವನ್ನು ಸರ್ಕಾರ ವಿತರಣೆ ಮಾಡಿಲ್ಲ. ಏತಕ್ಕೋಸ್ಕರ ಇವುಗಳಿಗೆ ಅನುದಾನವನ್ನು ಬಿಡುಗಡೆ ಮಾಡಿಲ್ಲ; ಅನುದಾನವನ್ನು ಬಿಡುಗಡೆ ಮಾಡುವುದಕ್ಕೆ ಅನುಸರಿಸಲಾಗುತ್ತಿರುವ ಮಾನದಂಡಗಳೇನು ಎನ್ನುವುದರ ಬಗ್ಗೆ ಮಾನ್ಯ ಸಚಿವರು ಬೆಳಕು ಚೆಲ್ಲಬೇಕಾಗಿದೆ.

**ಶ್ರೀ ಕೆ.ವೆಂಕಟೇಶ್ (ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು):-** ಸನ್ಮಾನ್ಯ ಸಭಾಪತಿಯವರೇ, ಹಿಂದಿನ ಸರ್ಕಾರ ಎಲ್ಲ ರಾಜ್ಯಗಳಲ್ಲಿ ಒಂದೊಂದು ಗೋಶಾಲೆಗಳನ್ನು ತೆರೆಯಬೇಕೆನ್ನುವ ತೀರ್ಮಾನವಾಗಿತ್ತು. ಅದರಂತೆ ಎಲ್ಲ ಜಿಲ್ಲೆಗಳಲ್ಲಿ ಗೋಶಾಲೆಗಳನ್ನು ಪ್ರಾರಂಭ ಮಾಡಲಾಗಿದೆ. ಸರ್ಕಾರದ ಗೋಶಾಲೆಗಳಿಗೆ ಯಾಕೆ ಜಾನುವಾರುಗಳು ಹೋಗುತ್ತಿಲ್ಲ ಎಂದರೆ, ಜನರು ಜಾನುವಾರುಗಳನ್ನು ಕರೆದುಕೊಂಡು ಬರುತ್ತಿಲ್ಲ. ಈಗ ಬಳ್ಳಾರಿ ಜಿಲ್ಲೆಯಲ್ಲಿ ಮಾತ್ರ ಒಂದು ಗೋಶಾಲೆಯನ್ನು ಮಾಡಬೇಕಾಗಿದೆ. ಬಳ್ಳಾರಿ ಜಿಲ್ಲೆ ವಿಭಜನೆಗೊಂಡ ಮೇಲೆ ಅಲ್ಲಿದ್ದ ಗೋಶಾಲೆ ವಿಜಯಪುರಕ್ಕೆ ಹೋಗಿದೆ. ಒಂದು ದಿನದಲ್ಲಿ ಒಂದು ಜಾನುವಾರಿನ ನಿರ್ವಹಣೆಯ ವೆಚ್ಚ 17.50 ಆಗಿದ್ದು; ಇದು ಯಾವುದಕ್ಕೂ ಸಾಕಾಗುವುದಿಲ್ಲ ಇದನ್ನು ಹೆಚ್ಚು ಮಾಡಬೇಕೆನ್ನುವುದು ಮಾನ್ಯ ಸದಸ್ಯರ ಕಳಕಳಿಯ ಮನವಿಯಾಗಿದೆ, ಇದರ ಬಗ್ಗೆ ಪರಿಶೀಲಿಸಲಾಗುವುದು.

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ:-** ಸನ್ಮಾನ್ಯ ಸಭಾಪತಿಯವರೇ, ಸರ್ಕಾರಿ ಗೋಶಾಲೆಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಗೋವುಗಳು ಬರುವುದಕ್ಕೆ ಸರ್ಕಾರ ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕಾಗಿದೆ.

**ಶ್ರೀ ಕೆ.ವೆಂಕಟೇಶ್:-** ಸರ್ಕಾರಿ ಗೋಶಾಲೆಗಳಲ್ಲಿ ಎಲ್ಲ ವ್ಯವಸ್ಥೆ ಇದೆ. ಹೆಚ್ಚಿನ ಸಂಖ್ಯೆಯಲ್ಲಿ ಜಾನುವಾರುಗಳು ಬಂದರೇ ಅವುಗಳಿಗೂ ವ್ಯವಸ್ಥೆ ಮಾಡಲಾಗುತ್ತದೆ.

**ಶ್ರೀ ನಿರಾಣಿ ಹಣಮಂತ ರುದ್ರಪ್ಪ:-** ಸನ್ಮಾನ್ಯ ಸಭಾಪತಿಯವರೇ, ಸರ್ಕಾರದ ಗೋಶಾಲೆಗಳಲ್ಲಿ ಮೇವಿನ ವ್ಯವಸ್ಥೆಯನ್ನು ಹೆಚ್ಚು ಮಾಡಿದರೆ ಜನರು ದನಕರುಗಳನ್ನು ತಂದು ಬಿಡುತ್ತಾರೆ. ಒಟ್ಟು 248 ಖಾಸಗಿ ಗೋಶಾಲೆಗಳ ಪೈಕಿ 121 ಖಾಸಗಿ ಗೋಶಾಲೆಗಳಿಗೆ ಮಾತ್ರ ಅನುದಾನವನ್ನು ಬಿಡುಗಡೆ ಮಾಡಲಾಗಿದೆ. ಉಳಿದಿರುವ 127 ಖಾಸಗಿ ಗೋಶಾಲೆಗಳಿಗೆ ಯಾವಾಗ ಅನುದಾನ ಬಿಡುಗಡೆ ಮಾಡಲಾಗುತ್ತದೆ ಎನ್ನುವುದನ್ನು ಮಾನ್ಯ ಸಚಿವರು ಹೇಳಬೇಕಾಗುತ್ತದೆ.

**ಶ್ರೀ ಕೆ.ವೆಂಕಟೇಶ್:-** ಸನ್ಮಾನ್ಯ ಸಭಾಪತಿಯವರೇ, ಯಾವಯಾವ ಖಾಸಗಿ ಗೋಶಾಲೆಗಳು ಹಣವನ್ನು ಕೇಳುತ್ತವೆ ಅವರುಗಳ ಬೇಡಿಕೆಗೆ ಅನುಗುಣವಾಗಿ ನಾವು ಅನುದಾನವನ್ನು ನೀಡುತ್ತಿದ್ದೇವೆ. ನಮ್ಮಲ್ಲಿ ಲಭ್ಯವಿರುವ ಹಣದ ಪ್ರಮಾಣವನ್ನು ನೋಡಿಕೊಂಡು ಎಲ್ಲರಿಗೂ ಹಂಚಿಕೆ ಮಾಡುವಂತಹ ಕೆಲಸ ಮಾಡುತ್ತೇವೆ.

**ಪ್ರಶ್ನೆ ಸಂಖ್ಯೆ:1019**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಸಿ.ಎನ್.ಮಂಜೇಗೌಡ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಸನ್ಮಾನ್ಯ ಸಭಾಪತಿಯವರೇ, ಈ ದೇಶದ ಒಟ್ಟಾರೆ ಜನಸಂಖ್ಯೆ 146.86 ಕೋಟಿ ಆಗಿದೆ. ಇದರಲ್ಲಿ ಸುಮಾರು 14,46,693 ಜನ ಸೈನಿಕರಿದ್ದಾರೆ. ನಮ್ಮ ರಾಜ್ಯದಲ್ಲಿ ಸುಮಾರು 6 ಕೋಟಿ 76 ಲಕ್ಷ ಜನಸಂಖ್ಯೆ ಇದೆ. ಇದರಲ್ಲಿ ಮಾಜಿ ಸೈನಿಕರ ಸಂಖ್ಯೆ 60 ಸಾವಿರವಾಗಿದೆ. ಇವರ ಪೈಕಿ ಸುಮಾರು 16,065 ಮಾಜಿ ಸೈನಿಕರು ಭೂ ಮಂಜೂರಾತಿಗಾಗಿ ಅರ್ಜಿ ಹಾಕಿಕೊಂಡಿದ್ದಾರೆ. ನಮಗೆ ಎರಡು ಎಕರೆ ಜಮೀನು ಬೇಕು ಅದನ್ನು ಮಂಜೂರು ಮಾಡಿಕೊಡಿ ಎಂದು ಕೇಳುತ್ತಿದ್ದಾರೆ. ಸರ್ಕಾರದ ಆದೇಶಗಳನ್ನು ಉಲ್ಲೇಖ ಮಾಡಿ ಮಾನ್ಯ ಕಂದಾಯ ಸಚಿವರು ಈ ರೀತಿ ಇರುವ ಅರ್ಜಿಗಳಿಗೆ ಭೂಮಿಯನ್ನು ಕೊಡುವುದಕ್ಕೆ ಅವಕಾಶವಿದೆ ಎನ್ನುವುದನ್ನು ತಿಳಿಸಿದ್ದಾರೆ. ಆದರೇ, ಯಾವ ಅರ್ಜಿಗಳನ್ನು ತಿರಸ್ಕರಿಸಿದ್ದಾರೆ ಅವುಗಳಿಗೆಲ್ಲ ಕಾರಣವನ್ನು ಕೊಟ್ಟು ಕ್ಲೋಸ್ ಮಾಡಿದ್ದಾರೆಯೇ ಹೊರತು ಯಾವುದೇ ರೀತಿಯ ಪರಿಹಾರವನ್ನು ಅವರಿಗೆ ಕೊಟ್ಟಿಲ್ಲ. "ಜೈ ಜವಾನ್; ಜೈ ಕಿಸಾನ್" ಎಂದು ಹೇಳುತ್ತೇವೆ ನಾವು ಇಲ್ಲಿ ಕುಳಿತುಕೊಂಡು ಧೈರ್ಯವಾಗಿ ಅಧಿವೇಶನವನ್ನು ನಡೆಸುವುದಕ್ಕೆ ಸೈನಿಕರು ಮತ್ತು ಪೋಲೀಸರೇ ಕಾರಣರಾಗಿದ್ದಾರೆ. ಅವರ ರಕ್ಷಣೆ ಇದೆಯೆಂದು ಧೈರ್ಯವಾಗಿ ಕುಳಿತುಕೊಂಡಿದ್ದೇವೆ.

ಸನ್ಮಾನ್ಯ ಸಭಾಪತಿಯವರೇ, ಬಂಡೆ ಕಲ್ಲನ್ನು ಕೆತ್ತಿ ಸುಂದರ ವಿಗ್ರಹ ಮಾಡುವ ಶಿಲ್ಪಿ; ತನ್ನ ಜೀವನವನ್ನು ಕೆತ್ತಿ ಸುಂದರ ಮಾಡಿಕೊಳ್ಳುವುದರಲ್ಲಿ ಸೋಲುತ್ತಾನೆ. ಕೊನೆಗೆ ತಾನೇ ಕೆತ್ತಿದ ವಿಗ್ರಹದ ಮುಂದೆ ನಿಂತು ಕಾಪಾಡು ದೇವರೇ ಎಂದು ಕೈ ಮುಗಿಯುತ್ತಾನೆ. ದೇಶವನ್ನು ಕಾಯುವ ಸೈನಿಕ ಆ ವಿಗ್ರಹದ ಮುಂದೆ ನಿಂತು ಕೈ ಮುಗಿದು ಕಾಪಾಡು ಎಂದು ಕೇಳಿಕೊಳ್ಳುತ್ತಾನೆ. ಇದು ಯಾವ ನ್ಯಾಯ?

ಸನ್ಮಾನ್ಯ ಸಭಾಪತಿಯವರೇ, ಮೈಸೂರಿನಲ್ಲಿ ಒಟ್ಟಾರೆಯಾಗಿ ಸುಮಾರು 1,.049 ಜನ ಸೈನಿಕರಿದ್ದಾರೆಂದು ಅವರು ನೀಡಿರುವ ಲಿಖಿತರೂಪದ ಅರ್ಜಿಯಲ್ಲಿ ತಿಳಿಸಿದ್ದಾರೆ. ನಾನು ಸಹ ಮೈಸೂರು ಜಿಲ್ಲೆಯವನು. ನಾನು ಭೂ ಮಂಜೂರಾತಿಗಾಗಿ ಅರ್ಜಿಯನ್ನು ಹಾಕಿಕೊಂಡಿಲ್ಲ. ಅಲ್ಲಿಗೆ ಆ ಸಂಖ್ಯೆ 1,048 ಆಗಬೇಕಾಗಿತ್ತು.

**ಉಪ ಸಭಾಪತಿಯವರು:-** ಮಾನ್ಯ ಮಂಜೇಗೌಡರೇ, ತಮ್ಮ ಪ್ರಶ್ನೆಗೆ ಮಾನ್ಯ ಸಚಿವರು ಉತ್ತರವನ್ನು ಹೇಳುತ್ತಾರೆ, ಅನಂತರ ತಾವು ಉಪ ಪ್ರಶ್ನೆಯನ್ನು ಕೇಳಬಹುದು. ಈಗ ಮಾನ್ಯ ಸಚಿವರು ಉತ್ತರವನ್ನು ಹೇಳಬೇಕು.

**ಶ್ರೀ ಕೃಷ್ಣ ಭೈರೇಗೌಡ:-** ಸನ್ಮಾನ್ಯ ಸಭಾಪತಿಯವರೇ, ಮಾಜಿ ಸೈನಿಕರಿಗೆ ಭೂಮಿಯನ್ನು ಕೊಡುವುದಕ್ಕೆ ಕಾನೂನಿನಲ್ಲಿ ಅವಕಾಶವಿದೆ. ಅವರು ಭೂಮಿಗಾಗಿ ಅರ್ಜಿಗಳನ್ನು ಹಾಕುತ್ತಿದ್ದಾರೆ. ಆದರೇ, ನಾನಾ ಕಾರಣಗಳಿಂದಾಗಿ ಅವರಿಗೆ ಭೂಮಿ ಸಿಗುತ್ತಿಲ್ಲ. ಅವರಿಗೆ ನ್ಯಾಯ ಒದಗಿಸಿಕೊಡಬೇಕೆಂದು ಮಾನ್ಯ ಸದಸ್ಯರು ಕೇಳುತ್ತಿದ್ದಾರೆ. ಅವರು ಹೇಳುತ್ತಿರುವುದು ನಿಜ. ಕೆಲವೊಮ್ಮೆ ಊರಿನವರು ಇದು ನಮ್ಮೂರಿನ ಜಾಗ ಎಂದು ತಕರಾರು ಮಾಡುತ್ತಾರೆ; ಇನ್ನು ಕೆಲವು ಕಡೆಗಳಲ್ಲಿ ಗೋಮಾಳವಿದೆ, ಅದನ್ನು ಹಂಚಿಕೆ ಮಾಡುವುದಕ್ಕೆ ಸಾಧ್ಯವಿಲ್ಲ. ಕೆಲವು ಕಡೆಗಳಲ್ಲಿ ಅರಣ್ಯವಿದೆ. ಹಿಂದೆ ಮಂಜೂರು ಆಗಿರುವ ಅರಣ್ಯ ಭೂಮಿಗೆ ನಾವು ಈಗ ಬದಲಿ ಜಾಗವನ್ನು ಕೊಡಬೇಕಾಗಿದೆ. ಅದಕ್ಕೆ

ಸರ್ಕಾರದ ಹತ್ತಿರ ಜಾಗವಿಲ್ಲ. ಇಲ್ಲದಿದ್ದರೆ ಅರಣ್ಯ ಜಾಗದಲ್ಲಿರುವವರನ್ನು ಒಕ್ಕಲೆಬ್ಬಿಸಬೇಕಾಗುತ್ತದೆ. ಈ ರೀತಿ ಪ್ರಸ್ತುತ ಜಾಗದ ತೀವ್ರ ಕೊರತೆ ಉದ್ಭವವಾಗಿದೆ.

(ಮುಂದು)

(949) 18.12.2024 1.00 ಪಿಕೆ:ಎಂಡಿ (ಉಪ ಸಭಾಪತಿಯವರ ಉಪಸ್ಥಿತಿ)

**ಶ್ರೀ ಕೃಷ್ಣ ಭೈರೇಗೌಡ(ಮುಂದುವರೆದಿದೆ)**

**27** ತಾಲ್ಲೂಕುಗಳಲ್ಲಿ ಪ್ರಜಾಸೌಧ ಕಟ್ಟಲು ಏನು ಅನುಮತಿ ಕೊಡಲಾಗಿದೆಯೋ ಆ ಪೈಕಿ 4 ಕಡೆಗಳಲ್ಲಿ ಜಾಗ ಸಿಕ್ಕಿಲ್ಲ. ಲ್ಯಾಂಡ್ ಓನರ್ ಕಂದಾಯ ಇಲಾಖೆಯಾಗಿದ್ದರೂ ತಾಲ್ಲೂಕು ಕಛೇರಿ ಕಟ್ಟುವುದಕ್ಕೆ ಜಾಗ ಸಿಗುತ್ತಿಲ್ಲ; ಖರೀದಿ ಮಾಡುವಂತಹ ಸ್ಥಿತಿಗೆ ಬಂದು ನಿಂತಿದ್ದೇವೆ. ಬಡವರಿಗೆ ನಿವೇಶನ ಕೊಡುವುದಕ್ಕೆ ಜಾಗ ಇಲ್ಲ. ಹಾಗಾಗಿ ಮಾಜಿ ಸೈನಿಕರಿಗೂ ಕೂಡ ಸರಿಯಾದ ಸಮಯದಲ್ಲಿ ಜಾಗ ಕೊಡುವುದಕ್ಕೆ ಆಗುತ್ತಿಲ್ಲ. ಹಿಂದಿನ ಸರ್ಕಾರದಲ್ಲಿ, 2021 ರಲ್ಲಿ ಕಾನೂನು ತಿದ್ದುಪಡಿ ಮಾಡಿ ಕನಿಷ್ಠ ನಿವೇಶನವನ್ನಾದರೂ ಕೊಡಬೇಕಂದು ತೀರ್ಮಾನ ಮಾಡಿದ್ದಾರೆ. ನಾನು ಅಧಿಕಾರಿಗಳ ಜೊತೆ ಮಾತನಾಡಿದ್ದೇನೆ. ಪ್ರತಿ ಜಿಲ್ಲೆಯಲ್ಲೂ ಕೂಡ ಮಾಜಿ ಸೈನಿಕರಿಗೆ "ಜವಾನ್ ಸಮ್ಮಾನ್" ಎನ್ನುವ ಲೇ ಔಟ್ ಮಾಡಿ ಅವರಿಗೆ ಕನಿಷ್ಠ ಒಂದು ನಿವೇಶನವನ್ನಾದರೂ ಕೊಡಬೇಕು ಎಂದು ತೀರ್ಮಾನ ಮಾಡಿದ್ದೇವೆ. ಅದನ್ನು ಆದಷ್ಟು ಶೀಘ್ರವಾಗಿ ಅನುಷ್ಠಾನ ಮಾಡುತ್ತೇವೆ. ಎಷ್ಟು ಜನ ಸೈನಿಕರು ಅರ್ಜಿ ಕೊಟ್ಟಿದ್ದಾರೋ ಅವರಿಗೆ ಭೂಮಿ ಕೊಡುವುದಕ್ಕೆ ಆಗದೇ ಇದ್ದರೂ ಸರ್ಕಾರದ ವತಿಯಿಂದ ಲೇ ಔಟ್ ಮಾಡಿ ನಿವೇಶನಗಳನ್ನು ಕೊಡುವ ಕೆಲಸವನ್ನು ಮಾಡುತ್ತೇವೆ.

**ಶ್ರೀ ಸಿ.ಎನ್.ಮಂಜೇಗೌಡ:-** ಮಾನ್ಯ ಸಭಾಪತಿಗಳೆ, 1964ನೇ ಇಸವಿಯಲ್ಲಿ ಒಂದು ಕೋರ್ಟ್ ಆರ್ಡರ್ ಆಗುತ್ತದೆ.

**ಉಪ ಸಭಾಪತಿಯವರು:-** ನಿಮ್ಮ ಉಪಪ್ರಶ್ನೆ ಏನಿದೆ ಅದನ್ನು ಕೇಳಿ. ಮಾನ್ಯ ಸಚಿವರು ಪರಿಹಾರಾತ್ಮಕವಾಗಿ ಏನೇನು ಮಾಡುತ್ತಿದ್ದೇವೆ ಎಂಬುದನ್ನು ಹೇಳಿದ್ದಾರೆ.

**ಶ್ರೀ ಸಿ.ಎನ್.ಮಂಜೇಗೌಡ:-** ಮಾನ್ಯ ಸಭಾಪತಿಗಳೆ, ಮಾಜಿ ಸೈನಿಕರಿಗೆ ಆಸ್ತಿ ತೆರಿಗೆಯಲ್ಲಿ ಶೇಕಡ 50 ರಷ್ಟು ರಿಯಾಯಿತಿ ಕೊಡಬೇಕು ಎಂದು ಸರ್ಕಾರ ಆದೇಶ ಹೊರಡಿಸಿದೆ. ಆದರೆ ಇದುವರೆಗೆ ಅದು ಕಾರ್ಯಗತವಾಗಿಲ್ಲ. ಸರ್ಕಾರ ಇವತ್ತು ಗ್ಯಾರಂಟಿ ಯೋಜನೆಗಳನ್ನು ಕೊಡುತ್ತಿದ್ದೆ.

**ಶ್ರೀ ಕೃಷ್ಣ ಭೈರೇಗೌಡ:-** ಮಾನ್ಯ ಸಭಾಪತಿಗಳೆ, ಮಾನ್ಯ ಸದಸ್ಯರು ಕೇಳುತ್ತಿರುವ ವಿಷಯವನ್ನು ಬೇರೆ ಪ್ರಶ್ನೆಯ ಮುಖಾಂತರ ಕೇಳಲಿ. ನಾನು ಉತ್ತರ ಕೊಡುತ್ತೇನೆ. ಇವತ್ತು ಅವರು ಹಾಕಿರುವ ಪ್ರಶ್ನೆಗೂ ಅವರು ಕೇಳುತ್ತಿರುವುದಕ್ಕೂ ಸಂಬಂಧ ಇಲ್ಲ. ಅವರು ತಮ್ಮ ಪ್ರಶ್ನೆಯನ್ನು ಪ್ರತ್ಯೇಕವಾಗಿ ಕೇಳಿದರೆ ಅದು ಯಾವ ಇಲಾಖೆಯ ವ್ಯಾಪ್ತಿಗೆ ಬರುತ್ತದೆ ಎನ್ನುವುದನ್ನು ನೋಡಿ ಉತ್ತರ ಕೊಡಿಸುವ ವ್ಯವಸ್ಥೆ ಮಾಡಿಸುತ್ತೇವೆ.

**ಉಪ ಸಭಾಪತಿಯವರು:-** ಮಾನ್ಯ ಸದಸ್ಯರೇ, ನೀವು ಇವತ್ತು ಕೇಳಿರುವಂತಹ ಪ್ರಶ್ನೆಗಳಲ್ಲಿ ಆ ವಿಚಾರ ಇಲ್ಲ. ಅದರ ಬಗ್ಗೆ ಪ್ರತ್ಯೇಕವಾಗಿ ಪ್ರಶ್ನೆ ಕೇಳಿ. ಆಗ ಮಾತನಾಡುವುದಕ್ಕೆ ಅವಕಾಶ ಮಾಡಿಕೊಡುತ್ತೇವೆ.

**ಶ್ರೀ ಸಿ.ಎನ್.ಮಂಜೇಗೌಡ:-** ಮಾನ್ಯ ಸಭಾಪತಿಗಳೆ, ಅದನ್ನು ಕೊಡುವುದಕ್ಕೆ ಆಗುವುದಿಲ್ಲ ಎಂದರೆ ತಾವು ದಯಮಾಡಿ . . . .

**ಶ್ರೀ ಕೃಷ್ಣ ಭೈರೇಗೌಡ:-** ಕೊಡಲಿಕ್ಕೆ ಬರುವುದಿಲ್ಲ ಎಂದಲ್ಲ. ಸಮಸ್ಯೆಗೊಂದು ಪರಿಹಾರ ಕೊಡಬೇಕು. ಸೈನಿಕರ ಗೌರವ ಕಾಪಾಡುವುದಕ್ಕೆ ಪ್ರತಿಯೊಂದು ಜಿಲ್ಲೆಯಲ್ಲಿ ಒಂದು ಲೇ ಔಟ್ ಮಾಡಿ ಅವರಿಗೆ ಉಚಿತವಾಗಿ ನಿವೇಶನ ಕೊಡುವಂತಹ ಕೆಲಸ ಮಾಡಿದರೆ, ಆ ಮೂಲಕ ಅವರಿಗೆ ಧನ್ಯವಾದಗಳನ್ನು ಸಮರ್ಪಿಸಿದಂತಾಗುತ್ತದೆ, ಗೌರವ ಕೊಡುವಂಥದ್ದು ಆಗುತ್ತದೆ. ಆ ಕೆಲಸವನ್ನು ತಕ್ಷಣದಿಂದ ಪ್ರಾರಂಭ ಮಾಡುತ್ತೇವೆ. ಈ ಅಧಿವೇಶನ ಮುಗಿದ ನಂತರ ಡಿಸಿ ಯವರಿಗೆ ಒಂದು ನಿರ್ದೇಶನ ಕೊಡುತ್ತೇವೆ. ಪ್ರತಿ ಜಿಲ್ಲೆಯಲ್ಲಿ ಒಂದು ಜಾಗ ಹುಡುಕಬೇಕು, ಸರ್ಕಾರದಿಂದಲೇ ಲೇ ಔಟ್ ಮಾಡಬೇಕು, ಆ ಖರ್ಚನ್ನು ನಾವೇ ಕೊಡುತ್ತೇವೆ. ಅವರಿಗೊಂದು ನಿವೇಶನ ಕೊಟ್ಟು ಅವರು ಅಲೆಯುವಂಥದ್ದನ್ನು ತಪ್ಪಿಸಬೇಕು. ತಕ್ಷಣ ಈ ನಿಟ್ಟಿನಲ್ಲಿ ಏನು ಮಾಡುವುದಕ್ಕಾಗುತ್ತದೆಯೋ ಅದನ್ನಾದರೂ ಮಾಡಿ ಅವರಿಗೆ ಗೌರವ ಕೊಡುವಂತಹ ಕೆಲಸವನ್ನು ಮಾಡುತ್ತೇವೆ.

**ಪ್ರಶ್ನೆ ಸಂಖ್ಯೆ: 1107**
**(ಉತ್ತರ ಲಗತ್ತಿಸಲಾಗಿದೆ)**

**ಶ್ರೀ ಮಂಜುನಾಥ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಗಳೆ, ಮಾನ್ಯ ಸಚಿವರು ತಮ್ಮ ಉತ್ತರದಲ್ಲಿ, ಯಾರಿಂದ ಟೋಲ್ ತೆಗೆದುಕೊಳ್ಳಬೇಕು, ಯಾರಿಂದ ಟೋಲ್ ತೆಗೆದುಕೊಳ್ಳಬಾರದು ಎನ್ನುವುದನ್ನು ಹೇಳಿದ್ದಾರೆ. ಆದರೆ ಇವತ್ತು, ಟೋಲ್‌ಗೆ ಹೋದರೆ ನಾವೇ 5-10 ನಿಮಿಷಗಳ ಕಾಲ ಕಾಯುವಂಥಾಗಿದೆ. ಪಾಸ್ ಕೇಳುತ್ತಾರೆ, ಫೋಟೋ ತೆಗೆಯುತ್ತಾರೆ, ಐಡಿ ಕೇಳುತ್ತಾರೆ, ಒಂದೆರಡು ಸಲ ನೋಡುತ್ತಾರೆ, ಟಾರ್ಚ್ ಹಾಕಿ ನೋಡುತ್ತಾರೆ. ಇದು ಒಂದು ರೀತಿಯ ಹಿಂಸೆಯಾಗಿದೆ. ಮತ್ತೆ, ನನ್ನ ಎರಡನೆ ಪ್ರಶ್ನೆಗೆ ನೀಡಿರುವ ಉತ್ತರದಲ್ಲಿ, ಟೋಲ್ ಪ್ಲಾಜಾಗಳಲ್ಲಿ ಏನೇನು ಇರಬೇಕು ಎಂಬುದನ್ನು ಹೇಳಿದ್ದಾರೆ. ಎಷ್ಟು ಟೋಲ್‌ಗಳಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಇದೆ? ಶೌಚಾಲಯದ ವ್ಯವಸ್ಥೆ ಇದೆ? ಯಾವ ಟೋಲ್‌ನಲ್ಲಿ ಆಸ್ಪತ್ರೆಯ ವ್ಯವಸ್ಥೆ ಇದೆ? ಇವು ಯಾವುದೇ ಇಲ್ಲದೇ ಟೋಲ್ ಅನ್ನು ಸಂಗ್ರಹ ಮಾಡುತ್ತಿರುತ್ತಾರೆ. ಇಂಥದ್ದನ್ನು ಯಾರು ಪರಿಶೀಲನೆ ಮಾಡುತ್ತಾರೆ?

ಉಡುಪಿ-ಕುಂದಾಪುರಕ್ಕೆ ಹೋಗಬೇಕಾದರೆ ಅಲ್ಲೆಲ್ಲೂ ಸೂಚನಾ ಫಲಕಗಳು ಇಲ್ಲ. ಸೀದಾ ಹೋಗಲೇ ಬೇಕು. ಎಷ್ಟೋ ಜನ ಉಡುಪಿಯನ್ನು ದಾಟಿ ಅರ್ಧ ಕುಂದಾಪುರ ಬಂದಮೇಲೆ ತಾವು ಉಡುಪಿಯನ್ನು ಪಾಸ್ ಮಾಡಿದ್ದೇವೆ ಎನ್ನುವುದು ಗೊತ್ತಾಗುತ್ತದೆ. ಕುಂದಾಪುರ ಸಿಟಿಗೆ ಹೋಗಬೇಕಾದರೆ ಅಲ್ಲಿ ಸೂಚನಾ ಫಲಕಗಳನ್ನು ಅಳವಡಿಸಿಲ್ಲ ಎನ್ನುವುದನ್ನು ನಿಮ್ಮ ಉತ್ತರದಲ್ಲೇ ಹೇಳಿದ್ದೀರಿ. ದೊಡ್ಡ ದೊಡ್ಡ ಸಿಟಿಗಳಿಗೆ ಹೋಗಬೇಕಾದರೆ ಸೂಚನಾ ಫಲಕಗಳನ್ನು ಅಳವಡಿಸಬೇಕು. ಮಂಗಳೂರು ಮತ್ತು ಉಡುಪಿ ಮಧ್ಯದ 100 ಕಿ.ಮೀ. ದಾರಿಯಲ್ಲಿ 3 ಟೋಲ್ ಪ್ಲಾಜಾಗಳು ಇವೆ. ಒಂದನೆಯ ಟೋಲ್ ಹೆಜಮಾಡಿಯಲ್ಲಿದೆ, ಇನ್ನೊಂದು ಟೋಲ್ ಗುಂಡ್ಮಿಯಲ್ಲಿದೆ. ಇವೆರಡಕ್ಕೂ 47 ಕಿ.ಮೀ. ಅಂತರವಿದ್ದು ಇವೆರಡೂ ಉಡುಪಿ ಒಂದೇ ಜಿಲ್ಲೆಯಲ್ಲಿ ಬರುತ್ತವೆ. ಮಂಗಳೂರಿನಿಂದ ಗುಂಡ್ಮಿಗೆ ಇರುವಂತಹ ಅಂತರ ಕೇವಲ 53 ಕಿಮೀ ಆಗಿದೆ. ಅಂದರೆ 100 ಕಿಮೀ ರಸ್ತೆಯಲ್ಲಿ ಮೂರು ಟೋಲ್ ಪ್ಲಾಜಾಗಳಿವೆ. ಯಾವ ಆಧಾರದ ಮೇಲೆ ಟೋಲ್ ಪ್ಲಾಜಾಗಳನ್ನು ಮಾಡುತ್ತಾರೆ? ಬಾಕಿಯದ್ದೆಲ್ಲವನ್ನೂ ನೋಡಬೇಕಾದರೆ ಇಂಥದ್ದನ್ನೇಕೆ ನೋಡುವುದಿಲ್ಲ ಎಂಬ ಪ್ರಶ್ನೆಯನ್ನು ಕೇಳಬಯಸುತ್ತೇನೆ.

**ಶ್ರೀ ಸತೀಶ ಜಾರಕಿಹೊಳಿ (ಲೋಕೋಪಯೋಗಿ ಸಚಿವರು):-** ಮಾನ್ಯ ಸಭಾಪತಿಗಳೆ, ಮಾನ್ಯ ಸದಸ್ಯರು ಕೇಳಿರುವಂತಹ ಪ್ರಶ್ನೆಗಳಿಗೆ ವಿವರವಾದ ಉತ್ತರವನ್ನು ಕೊಟ್ಟಿದ್ದೇವೆ. ಟೋಲ್‌ಗಳಲ್ಲಿ ಇರಬೇಕಾದ ಸೌಲಭ್ಯಗಳ ಬಗ್ಗೆ ಮಾನ್ಯ ಸದಸ್ಯರು ಪ್ರಶ್ನೆ ಎತ್ತಿದ್ದಾರೆ. ಸೌಲಭ್ಯಗಳನ್ನು ಯಾರು ಕೊಟ್ಟಿದ್ದಾರೆ, ಯಾರು ಕೊಟ್ಟಿಲ್ಲ ಎನ್ನುವುದನ್ನು ಪರಿಶೀಲನೆ ಮಾಡುತ್ತೇವೆ. ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರು, ಕೆಲವು ಕಡೆ ಸೂಚನಾ ಫಲಕಗಳನ್ನು ಅಳವಡಿಸಿಲ್ಲ ಎನ್ನುವುದನ್ನು ತಾವೇ ಒಪ್ಪಿಕೊಂಡಿದ್ದಾರೆ. ಅವರಿಗೆ ಈ ಕುರಿತು ಮಾಹಿತಿ ಕೊಡುವಂತಹ ಕೆಲಸವನ್ನು ಮಾಡುತ್ತೇವೆ.

ಟೋಲ್ ರಸ್ತೆಗಳಲ್ಲಿ ವಾಹನ ಸಂಚರಿಸಿದ ದೂರಕ್ಕನುಗುಣವಾಗಿ ಟೋಲ್ ಸಂಗ್ರಹಿಸುವ ವ್ಯವಸ್ಥೆಗೆ ಸಂಬಂಧಪಟ್ಟಂತೆ ಹೇಳುವುದಾದರೆ, ಜಿಪಿಎಸ್ ಮೂಲಕ ಟೋಲ್ ಸಂಗ್ರಹಿಸುವ ಪೈಲಟ್ ಪ್ರಾಜೆಕ್ಟನ್ನು ಸದ್ಯ

ಮೈಸೂರು ರಸ್ತೆಯಲ್ಲಿ ಮಾತ್ರ ಇದೆ. ಮುಂದಿನ ದಿನಗಳಲ್ಲಿ ಹಂತ ಹಂತವಾಗಿ ಬೇರೆ ಕಡೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

**ಶ್ರೀ ಮಂಜುನಾಥ ಭಂಡಾರಿ:-** ಮಾನ್ಯ ಸಭಾಪತಿಗಳೆ, 100 ಕಿಮೀ ಅಂತರದಲ್ಲಿ ಮೂರು ಟೋಲ್ ಪ್ಲಾಜಾಗಳಿವೆ. ಅದನ್ನು ಹೇಗೆ ಜೆಸ್ಟಿಫೈ ಮಾಡುತ್ತೀರಿ?

**ಶ್ರೀ ಸತೀಶ ಜಾರಕಿಹೊಳಿ:-** ಮಾನ್ಯ ಸದಸ್ಯರು ಏನು ಪ್ರಸ್ತಾಪ ಮಾಡಿದರೋ ಅದರಲ್ಲಿ ಒಂದನ್ನು ಸ್ಥಗಿತಗೊಳಿಸಿದ್ದೇವೆ.

**ಶ್ರೀ ಮಂಜುನಾಥ ಭಂಡಾರಿ:-** ಮಾನ್ಯ ಸಭಾಪತಿಗಳೆ, ಉಡುಪಿಯ ಹೆಜಮಾಡಿಯಿಂದ ಗುಂಡ್ಮಿ ಮಧ್ಯೆ 43 ಕಿ.ಮೀ ಅಂತರ ಇದೆ. ಒಂದೇ ಜಿಲ್ಲೆಯಲ್ಲಿ ಎರಡು ಟೋಲ್ ಪ್ಲಾಜಾಗಳಿವೆ. ತಾವು, ಸುರತ್ಕಲ್‌ನಲ್ಲಿ ಸ್ಥಗಿತಗೊಳಿಸಿರುವುದನ್ನು ಹೇಳುತ್ತಿದ್ದೀರಿ. 53 ಕಿ.ಮೀ ದೂರದಲ್ಲಿರುವ ತಲಪ್ಪಾಡಿಯಲ್ಲಿ ಇನ್ನೊಂದು ಟೋಲ್ ಪ್ಲಾಜಾ ಇದೆ.

**ಶ್ರೀ ಸತೀಶ ಜಾರಕಿಹೊಳಿ:-** ಮಾನ್ಯ ಸಭಾಪತಿಗಳೆ, ಇದು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರಕ್ಕೆ ಸಂಬಂಧಪಡುತ್ತದೆ. ಈ ಕುರಿತು ಅವರ ಜೊತೆ ಚರ್ಚೆ ಮಾಡಿ ಪರಿಹಾರ ಕಂಡುಕೊಳ್ಳುವಂತಹ ಕೆಲಸ ಮಾಡುತ್ತೇವೆ.

**ಶ್ರೀ ಮಂಜುನಾಥ ಭಂಡಾರಿ:-** ಮಾನ್ಯ ಸಭಾಪತಿಗಳೆ, ನಮ್ಮ ಪಾಸ್‌ಗಳನ್ನು ಚೆಕ್ ಮಾಡಬೇಕಾದರೆ 5 ನಿಮಿಷ ನಿಲ್ಲಿಸಿಕೊಳ್ಳುತ್ತಾರೆ. ಅದೊಂದು ರೀತಿಯ ಹಿಂಸೆಯಾಗಿರುತ್ತದೆ.

**ಉಪ ಸಭಾಪತಿಯವರು:-** ಮಾನ್ಯ ಸಚಿವರೇ, ನಮ್ಮ ಚುನಾಯಿತ ಪ್ರತಿನಿಧಿಗಳು ಬಹಳ ಹಿಂದಿನಿಂದಲೂ ಇಂತಹ ದೂರನ್ನು ಕೊಡುತ್ತಿದ್ದಾರೆ. ಅದು ಇಲ್ಲಿಯವರೆಗೂ ಪರಿಹಾರವಾಗಿಲ್ಲ. ಮಾನ್ಯ ಸದಸ್ಯರು ಹೇಳುತ್ತಿರುವುದು ಸತ್ಯವಾಗಿದೆ. ತುಂಬಾ ಜನ ಸದಸ್ಯರು ಈ ಸಮಸ್ಯೆಯನ್ನು ಅನುಭವಿಸಿದ್ದಾರೆ. ಈ ನಿಟ್ಟಿನಲ್ಲಿ ಗಂಭೀರವಾಗಿ ಆಲೋಚನೆ ಮಾಡಿ ಕ್ರಮ ತೆಗೆದುಕೊಳ್ಳಿ.

**ಶ್ರೀ ಸತೀಶ ಜಾರಕಿಹೊಳಿ:-** ಮಾನ್ಯ ಸಭಾಪತಿಗಳೆ, ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಮತ್ತು ನಮ್ಮವರ ಜೊತೆ ಚರ್ಚೆ ಮಾಡಿ ಇದಕ್ಕೆ ಪರಿಹಾರ ಕಂಡುಕೊಳ್ಳುವ ಕೆಲಸ ಮಾಡುತ್ತೇನೆ.

**ಪ್ರಶ್ನೆ ಸಂಖ್ಯೆ: 1057**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ. :-** ಮಾನ್ಯ ಸಭಾಪತಿಗಳೆ, ಚೀಟಿ ಹಾಕುವುದರ ಮೂಲಕ ಬರುವಂತಹ ಚುಕ್ಕೆ ಗುರುತಿನ ಪ್ರಶ್ನೆಯನ್ನು ನಿಗದಿತ ಸಮಯದೊಳಗೆ ಕೇಳುವ ಅವಕಾಶ ಸಿಕ್ಕಿದ್ದಕ್ಕೆ ನಾನು ಆನಂದವನ್ನು ವ್ಯಕ್ತಪಡಿಸುತ್ತೇನೆ. ಯಾರ ಪ್ರಶ್ನೆ ಮೊದಲು ಬರುತ್ತದೆ ಎಂಬುವುದಕ್ಕೆ ಸಂಬಂಧಪಟ್ಟಂತೆಯೂ ಚೀಟಿ ಹಾಕಿದರೆ ಒಳ್ಳೆಯದಾಗಬಹುದು ಎನ್ನುವ ವಿನಂತಿ ಮಾಡುತ್ತೇನೆ.

ಮಾನ್ಯ ಸಭಾಪತಿಗಳೆ, ನಾನು ನನ್ನ ಪ್ರಶ್ನೆಯಲ್ಲಿ ದಶಕಗಳ ಕಾಲದಿಂದ ಜ್ವಲಂತವಾಗಿ ಉಳಿಸಿಕೊಂಡು ಬಂದಿರುವಂತಹ ಸಮಸ್ಯೆ ಬಗ್ಗೆ ಕೇಳಿದ್ದೇನೆ. ಕರಾವಳಿ ಭಾಗದ ಸುಮಾರು 50,000 ಜನ ರೈತರಿಗೆ ಸಂಬಂಧಪಟ್ಟ ಸಮಸ್ಯೆಯಾಗಿದೆ. ಪ್ರತಿ ಬಾರಿ ಒಂದಲ್ಲ ಒಂದು ರೀತಿ ಬೇರೆ ಬೇರೆ ಸರ್ಕಾರಗಳು ಬಂದ ಕಾರಣಕ್ಕೆ ಈ ವಿಚಾರ ಮುಂದೆ ಹೋಗುತ್ತಿದೆ. 2013ರಲ್ಲಿ ಮಾನ್ಯ ವಿ.ಎಸ್.ಆಚಾರ್ಯ ಅವರು ಇರುವಂತಹ ಸಂದರ್ಭದಲ್ಲಿ ರಾಜ್ಯಪಾಲರ ಅಂಕಿತಕ್ಕೆ ಮಾತ್ರ ಬಾಕಿ ಇದ್ದು, ಈ ಸಮಸ್ಯೆಗೆ ಪರಿಹಾರ ಸಿಗದೇ ಉಳಿದುಕೊಂಡಿತು. ಆದರೆ ನಂತರದ ಬೆಳವಣಿಗೆಯಲ್ಲಿ ಸುಪ್ರೀಂ ಕೋರ್ಟ್‌ಗೆ ಅಫಿಡವಿಟ್ ಸಲ್ಲಿಸುವಂತಹ ಸಂದರ್ಭದಲ್ಲಿ, ಡೀಮ್ಡ್ ಫಾರೆಸ್ಟ್‌ನ ಅಡಿಯಲ್ಲಿ ಈ ಭೂಮಿ ಸೇರುತ್ತದೆ ಎನ್ನುವ ಕಾರಣಕ್ಕೆ ಅದು ಮುಂದೆ ಹೋಯಿತು. ಅದರ ನಂತರ, ಸದರಿ ಭೂಮಿಯನ್ನು ಡೀಮ್ಡ್ ಫಾರೆಸ್ಟ್‌ನಿಂದ ಹೊರತುಪಡಿಸಿ ಅದನ್ನು ಕೊಡುವ ಸ್ಥಿತಿಯಲ್ಲಿರುವಾಗ ಹಿಂದಿನ ಸರ್ಕಾರ ಇದಕ್ಕೊಂದು ಉಪ ಸಮಿತಿ ಮಾಡಿ, 30 ವರ್ಷಗಳ ಲೀಜ್‌ಗೆ ಕೊಡಬೇಕು ಎಂದು ಯೋಚನೆಗಳಾಗಿ ಪೆಂಡಿಂಗ್ ಆಗಿ ಉಳಿದಿದೆ. ಮಾನ್ಯ ಕಂದಾಯ ಸಚಿವರು ಮಾತಾಡುತ್ತಾ, ಕೊಡುವುದಕ್ಕೆ ಭೂಮಿಯೇ ಇಲ್ಲ ಎನ್ನುವ ಮಾತನ್ನು ಹೇಳಿದರು. ಕರಾವಳಿ ಭಾಗದ ಈ ಸಮಸ್ಯೆಯನ್ನು ಪರಿಹಾರ ಮಾಡಿದರೆ ಸರ್ಕಾರಕ್ಕೆ ಆದಾಯ ಕೂಡ ಬರುತ್ತದೆ. ದಶಕಗಳ ಕಾಲದಿಂದ ಕೃಷಿಯನ್ನು ಮಾಡಿ ಅದರ ಸ್ವಾಧೀನ ಅನುಭವಿಸಿಕೊಂಡು ಬರುತ್ತಿದ್ದಾರೆ, ಅವರಿಗೆ ವಿಶೇಷ ಹಕ್ಕು ಕೂಡ ಇದೆ. ಹಾಗಾಗಿ, ಆ ವಿಶೇಷ ಹಕ್ಕನ್ನು ಪೂರ್ಣ ಪ್ರಮಾಣದ ಮಾಲೀಕತ್ವ ಕೊಡುವುದರ ಮೂಲಕ ಈಡೇರಿಸಬೇಕು. ಆ ಭೂಮಿಗೆ ಮಾಲೀಕತ್ವ ಕೊಡುತ್ತೇವೆ ಎಂದು ಹೇಳಿದರೆ ರೈತರು ಬೇಕಾದರೆ ಅದಕ್ಕೆ ಹಣ ಕಟ್ಟುವುದಕ್ಕೆ ತಯಾರಾಗಿದ್ದಾರೆ. 5 ಎಕರೆಗಿಂತ ಹೆಚ್ಚು ಜಾಗವನ್ನು ಸ್ವಾಧೀನಪಡಿಸಿಕೊಂಡಿರುವಂತಹ ರೈತರೂ ಇದ್ದಾರೆ. 5 ಎಕರೆ ಜಾಗಕ್ಕೆ ಮಾಲೀಕತ್ವವನ್ನು ಕೊಡುವುದಕ್ಕೆ ನಿಶ್ಚಯ ಮಾಡಿದರೆ ಉಳಿದ ಭೂಮಿಯ ಕುರಿತು ಸರ್ಕಾರ ಏನು ಮಾಡಬಹುದು ಎಂದು ನಿರ್ಣಯ ತೆಗೆದುಕೊಳ್ಳಬಹುದು. ಈ ಸಮಸ್ಯೆಗೆ ಪರಿಹಾರ ನೀಡುವ ಸಲುವಾಗಿ ಈ ಭೂಮಿಯ ಮಾಲೀಕತ್ವ ಕೊಡುವ ದೃಷ್ಟಿಯಲ್ಲಿ ಸರ್ಕಾರ ಗಂಭೀರವಾಗಿ ಪರಿಶೀಲಿಸಬೇಕು. ಈ ವಿಚಾರ ಉಪ ಸಮಿತಿಯ ಮುಂದಿದೆ ಎನ್ನುವ ಕಾರಣಕ್ಕೆ ಇದು ಪೆಂಡಿಂಗ್ ಆಗಿ ಇರಬಾರದು.

(ಮುಂದು)

**ಶ್ರೀ ಕೃಷ್ಣಭೈರೇಗೌಡ (ಕಂದಾಯ ಸಚಿವರು):-** ಮಾನ್ಯ ಸಭಾಪತಿಯವರೇ, ಕಾನೂನಿನಲ್ಲಿ ಏನು ಹೇಳುತ್ತದೆಂದರೆ, ಅನುಭೋಗ ಮಾತ್ರ ಕೊಡಬಹುದು. ಅನುಭೋಗ ಎಂದರೆ ಅಲ್ಲಿ ಸೌದೆ, ಸೊಪ್ಪನ್ನು ತೆಗೆದುಕೊಳ್ಳುವುದಕ್ಕೆ ಅವರಿಗೆ ಹಕ್ಕನ್ನು ಕೊಡಬಹುದು. ಅಂದರೆ 'privilege' ಎನ್ನುವ ಪದ ಉಪಯೋಗಿಸಿದ್ದಾರೆ. ಇವೆಲ್ಲವುಗಳು 'privileged lands'. ಆದರೆ ಮೂಲ ಇವು ಅರಣ್ಯ ಇಲಾಖೆಗೆ ಸೇರುವಂಥದ್ದು. ಶರಾವತಿ ನಿರಾಶ್ರಿತರ ಒಂದು ಪ್ರಕರಣದಲ್ಲಿ ನ್ಯಾಯಾಲಯದಲ್ಲಿ ಈ ರೀತಿ ತೀರ್ಮಾನವಾಗಿದೆ. ಅರಣ್ಯ ಇಲಾಖೆಯವರು ಇದು 'ಅರಣ್ಯ ಭೂಮಿ' ಎಂದು ಹೇಳಿಕೊಂಡು ಬಂದಿದ್ದಾರೆ. ಅವರು ಲೀಸ್‌ಗೆ ಕೊಡುವುದಕ್ಕೆ ತಕರಾರು ಮಾಡಿದ್ದಾರೆ. ಅರಣ್ಯ ಇಲಾಖೆಯವರು ಲೀಸ್‌ಗೆ ಕೊಡುವುದಕ್ಕೆ ಒಪ್ಪಿಲ್ಲ. ಹಾಗಾಗಿ ಹಿಂದೆ ರಾಜ್ಯಪಾಲರಿಗೆ ಹೋಗಿ ವಾಪಸ್ ಬಂದಿದೆ. ಕಾಲದಿಂದ ಕಾಲಕ್ಕೆ ಪ್ರಯತ್ನಗಳು ಆಗಿವೆ. ಆದರೆ, ಕಾನೂನಿನಲ್ಲಿ ಅವಕಾಶವಿಲ್ಲದಿರುವುದರಿಂದ ಸಮಸ್ಯೆ ಹಾಗೆಯೇ ಉಳಿದಿದೆ. ಈಗ ಅವರು ಪ್ರಿವಿಲೇಜಸ್ ಮಾತ್ರ ಎಂಜಾಯ್ ಮಾಡಬಹುದು ಎಂದು ಸೆಕ್ಷನ್ 79 ರಲ್ಲೂ ಕೂಡ ಇದನ್ನೇ ಹೇಳುತ್ತದೆ. ಹಾಗಾಗಿ ಇದು ಹಾಗೆಯೇ ಇದೆ. ಇದು ಗೋಧವರ್ಮನ್ ಪ್ರಕರಣದಲ್ಲೂ ಕವರ್ ಆಗಿದೆ, ಡೀಮ್ಡ್ ಫಾರೆಸ್ಟ್‌ನಲ್ಲೂ ಕವರ್ ಆಗಿದೆ. ಮೂಲ ಕರ್ನಾಟಕ ಲ್ಯಾಂಡ್ ರೆವಿನ್ಯೂ ಆಕ್ಟ್‌ನಲ್ಲೂ ಕೂಡ privilege ಮಾತ್ರ ಇದಕ್ಕೆ ಪರ್ಮಿಟೆಡ್ ಇದೆ. ಈ ರೀತಿ ಇರುವಾಗ ಮುಂದೆ ಇನ್ನೇನು ಮಾಡಬೇಕು ಎಂದು ಹಿಂದಿನ ಸರ್ಕಾರದ ಸಚಿವ ಸಂಪುಟದ ಉಪ ಸಮಿತಿಯವರು ಸಭೆಯನ್ನು ಮಾಡಿದಾಗ ಅವತ್ತು ಅರಣ್ಯ ಇಲಾಖೆಯವರು ಇದಕ್ಕೆ ಒಪ್ಪಿಲ್ಲ. ಇದು ಕೊಡುವುದಕ್ಕೆ ಬರುವುದಿಲ್ಲ, ಇದು 'ಅರಣ್ಯ ಭೂಮಿ' ಎಂದು ತಕರಾರು ಮಾಡಿ ನಿಂತಿದೆ. ನಾವು ಕೂಡ ಆ ಕಡತವನ್ನು ಅರಣ್ಯ ಇಲಾಖೆಗೆ ಕಳುಹಿಸಿದ್ದೇವೆ. ಆದರೆ, ಅರಣ್ಯ ಇಲಾಖೆಯವರು ಇದಕ್ಕೆ ಒಪ್ಪಿಲ್ಲ. ಹೀಗಿರುವಾಗ ಸುಮ್ಮನೆ ನಾವು ಏನೋ ಮಾಡಿದರೆ ಏನು ಪ್ರಯೋಜನವಾಗುತ್ತದೆ ಎನ್ನುವುದನ್ನು ವಿಚಾರ ಮಾಡಬೇಕಾಗುತ್ತದೆ. ಇದನ್ನು ನಾನು ಮಾನ್ಯ ಸದಸ್ಯರ ಗಮನಕ್ಕೆ ತರುತ್ತಿದ್ದೇನೆ.

**ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ.:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರಿಗೆ ನಾನು ಸ್ಪಷ್ಟೀಕರಣವನ್ನು ಕೇಳುವುದಕ್ಕೆ ಬಯಸುತ್ತೇನೆ. ಅದು ಮದ್ರಾಸ್ ಸರ್ಕಾರದ ಅವಧಿಯಲ್ಲಿ ಆಗಿರುವಂತಹ ಸ್ಟ್ಯಾಂಡಿಂಗ್ ಆರ್ಡರ್. ವಿಶೇಷಾಧಿಕಾರ ಸರಿ, ಅದನ್ನು ಒಪ್ಪುತ್ತೇವೆ. ಅಲ್ಲಿ ತಾತ್ಕಾಲಿಕವಾಗಿ ಕೃಷಿಯನ್ನು ಮಾಡಬಹುದು ಎಂದು ಆ ಆದೇಶದಲ್ಲೇ ಇದೆ. ಅಕ್ರಮ-ಸಕ್ರಮದಲ್ಲಿ ನಾವು ಬೇರೆಯವರಿಗೆ ಭೂಮಿಯನ್ನು ಕೊಡುತ್ತೇವೆ, ಇದನ್ನು ಕೊಟ್ಟರೆ ಈ ಸಮಸ್ಯೆ ಪರಿಹಾರವಾಗುತ್ತದೆ. ಸರ್ಕಾರ ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಅದರೆ, ಅದರಲ್ಲಿ ಕೃಷಿ ಇದೆ. ಕುಮ್ಕಿದಾರರು ಹೈಕೋರ್ಟ್, ಸುಪ್ರೀಂ ಕೋರ್ಟ್‌ಗಳಿಗೆ ಹೋಗಿ ಈ ಭೂಮಿಯನ್ನು ಸರ್ಕಾರ ತೆಗೆದುಕೊಳ್ಳಬಾರದು ಎಂದು ತಡೆಯಾಜ್ಞೆಯನ್ನು ಕೂಡ ತೆಗೆದುಕೊಂಡು ಬಂದಿದ್ದಾರೆ. ಅದು ಕೋರ್ಟ್‌ನಲ್ಲಿ ಈಗಲೂ ಪೆಂಡಿಂಗ್ ಇದೆ. ಶ್ರೀ ಡಿ.ವಿ.ಸದಾನಂದಗೌಡರವರು ಮುಖ್ಯಮಂತ್ರಿಗಳಾಗಿದ್ದಾಗ ಇದು ಸೆಟಲ್‌ಮೆಂಟ್ ಎಂದು ಹೇಳುವ ಕಾರಣಕ್ಕೆ ಕೋರ್ಟ್‌ನಲ್ಲಿರುವಂಥದ್ದನ್ನು ವಾಪಸ್ ಪಡೆದುಕೊಂಡು ಇನ್ನೇನು ರಾಜ್ಯಪಾಲರ ಅಂಕಿತ ಶ್ರೀ ಜಗದೀಶ್ ಶೆಟ್ಟರ್‌ರವರ ಕಾಲದಲ್ಲಿ ಆಗುತ್ತದೆ ಎಂದು ಹೇಳುವಾಗ ಅಂಕಿತ ಆಗದ ಕಾರಣಕ್ಕೆ ಈ ಸಮಸ್ಯೆ ಬಾಕಿಯಾಗಿ ಉಳಿದಿದೆ. ನಂತರ ಸಚಿವರೇ ಹೇಳಿರುವ ರೀತಿಯಲ್ಲಿ ಇದು ಅರಣ್ಯ ಭೂಮಿ

ಎಂದು ಹೇಳುವ ಕಾರಣ ಕೊಟ್ಟು ಅಫಿಡವಿಟ್ ಸಲ್ಲಿಸಿದ ಕಾರಣಕ್ಕೆ ಮುಂದಿನ ಸರ್ಕಾರದಲ್ಲಿ ಪೆಂಡಿಂಗ್ ಉಳಿದಿತ್ತು. ಈಗ ನನ್ನ ಮಾಹಿತಿಯ ಪ್ರಕಾರ ಇದು ಅದರಿಂದ ಹೊರಗೆ ಬಂದಿದೆ. ವಿಶೇಷಾಧಿಕಾರ ಎಂದು ಹೇಳುವಂಥದ್ದನ್ನು ನಾವು ಒಪ್ಪುತ್ತೇವೆ. ಆದರೆ, ಇದು ಸಮಸ್ಯೆಗೆ ಪರಿಹಾರವಾಗುವುದಿಲ್ಲ. ಅಲ್ಲಿ ಅವರು ಕೃಷಿ ಮಾಡಿಕೊಂಡಿದ್ದಾರೆ. ರೈತರಿಗೆ ಕೊಟ್ಟರೆ ಸರ್ಕಾರಕ್ಕೆ ಅವರು ಕೃತಜ್ಞತೆಯನ್ನು ಸಲ್ಲಿಸುತ್ತಾರೆ.

**ಶ್ರೀ ಕೃಷ್ಣ ಭೈರೇಗೌಡ:-** ಮಾನ್ಯ ಸಭಾಪತಿಯವರೇ, ಈಗಾಗಲೇ ಮಾನ್ಯ ಸದಸ್ಯರು ಕೇಳಿರುವ ಪ್ರಶ್ನೆಗೆ ಉತ್ತರ ಕೊಟ್ಟಿದ್ದೇನೆ. ಮಾನ್ಯ ಸದಸ್ಯರು ಈಗ ಪದೇಪದೇ ಕೇಳುತ್ತಿರುವುದರಿಂದ ನಾನು ಓದಿ ಹೇಳುತ್ತೇನೆ. 1964 ರಲ್ಲಿ ಕರ್ನಾಟಕ ಭೂ ಕಂದಾಯ ಕಾನೂನು ಬಂದಿರುವಂಥದ್ದು. ಅದರಲ್ಲಿ ಸೆಕ್ಷನ್-79 ರಲ್ಲಿ "privileges of the villagers or of certain classes of persons to cut fire-wood or timber for domestic or other purposes" ಎಂದು ಹೇಳುತ್ತಾರೆ. Timber ಮತ್ತು fire-wood ತೆಗೆದುಕೊಳ್ಳಬಹುದು ಎಂದು ಹಕ್ಕನ್ನು ಕೊಟ್ಟಿದ್ದಾರೆ. ಇದನ್ನೇ ಆಧಾರವಾಗಿಟ್ಟುಕೊಂಡು ಅದು ಇಲ್ಲಿಯವರೆವಿಗೂ ಹಾಗೆಯೇ ಉಳಿದಿದೆ. ಈಗಲೂ ಕೂಡ ಅರಣ್ಯ ಇಲಾಖೆಯವರು ಇದಕ್ಕೆ ಒಪ್ಪಿಗೆ ಕೊಟ್ಟರೆ ನಾವು ಖುಷಿಯಾಗಿ ಕೊಡುತ್ತೇವೆ. ಮಾನ್ಯ ಸದಸ್ಯರು ಹೇಳಿರುವ ರೀತಿಯಲ್ಲಿ ಅದು ಕ್ಲಿಯರ್ ಆಗಿಲ್ಲ. ಇವತ್ತಿಗೂ ಆ ಕಡತ ಅರಣ್ಯ ಇಲಾಖೆಯಲ್ಲಿದೆ. ಅವರು ಇದಕ್ಕೆ ಒಪ್ಪಿಗೆಯನ್ನು ಕೊಟ್ಟಿಲ್ಲ. ಅವರ ಒಪ್ಪಿಗೆ ಇಲ್ಲದೆ ಮುಂದುವರೆಯುವುದು ಪ್ರಯೋಜನವಿಲ್ಲ.

**ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ.:-** ಮಾನ್ಯ ಸಭಾಪತಿಯವರೇ, ಇದು ಅರಣ್ಯ ಇಲಾಖೆಯ ಭೂಮಿ ಎಂದು ಇಲ್ಲ.

**ಉಪ ಸಭಾಪತಿಯವರು:-** ಒಂದು ಸಲ ನೀವು ಮತ್ತು ಅವರು ಡೌಟನ್ನು ಕ್ಲಿಯರ್ ಮಾಡಿಕೊಳ್ಳಿ.

**ಪ್ರಶ್ನೆ ಸಂಖ್ಯೆ: 1112**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಡಾ॥ ಯತೀಂದ್ರ ಎಸ್. (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ದೇಶಿಯ ಕುರಿ ಮತ್ತು ಮೇಕೆ ತಳಿಗಳನ್ನು ಸಂವರ್ಧನೆ ಮಾಡುವುದಕ್ಕೋಸ್ಕರ ಈ ತಳಿಗಳನ್ನು ರಿಯಾಯಿತಿ ದರದಲ್ಲಿ ಕೊಡುತ್ತಿದ್ದಾರೆ ಎಂದು ಹೇಳುತ್ತಿದ್ದಾರೆ. ಆದರೆ, ಎಷ್ಟು ರಿಯಾಯಿತಿ ದರದಲ್ಲಿ ಕೊಡುತ್ತಿದ್ದಾರೆಂದು ಮಾಹಿತಿಯನ್ನು ಕೊಡಬೇಕು. ರಿಯಾಯಿತಿ ದರ ಹೆಚ್ಚು ಮಾಡಬೇಕು. ಸಾಧ್ಯವಾದರೆ ಉಚಿತವಾಗಿ ಈ ದೇಶಿಯ ತಳಿಗಳನ್ನು ರೈತರಿಗೆ ಕೊಡಬೇಕು. ಈ ದೇಶಿ ತಳಿಗಳನ್ನು ಸಂರಕ್ಷಣೆ ಮಾಡುವುದಕ್ಕೆ ವಿಶೇಷ ಅನುದಾನವನ್ನು ಕೊಡಿ ಎಂದು ಪ್ರಶ್ನೆ ಕೇಳಿದ್ದೇನೆ. ಆದರೆ, ಈ ಕುರಿತು ಯಾವುದೇ ಪ್ರಸ್ತಾಪ ಇರುವುದಿಲ್ಲ ಎಂದು ಉತ್ತರದಲ್ಲಿ ಹೇಳಿದ್ದಾರೆ. ಕಳೆದ 2016-17ರ ಬಜೆಟ್‌ನಲ್ಲಿ ನಮ್ಮ ಸರ್ಕಾರ ಇದ್ದಾಗ ಅದಕ್ಕೆ ವಿಶೇಷ ಅನುದಾನವನ್ನು ಕೊಟ್ಟಿತ್ತು. ಈ ಬಾರಿಯೂ ಕೂಡ ತಳಿಗಳ ಸಂರಕ್ಷಣೆಗೋಸ್ಕರ ಏನಾದರೂ ಆರ್ಥಿಕ ಸಹಾಯ ಮಾಡಬೇಕು, ಆ ಹಣವನ್ನು earmark ಮಾಡಬೇಕೆಂದು ನಾನು ಮಾನ್ಯ ಸಚಿವರಿಗೆ ಕೇಳಿಕೊಳ್ಳುತ್ತಿದ್ದೇನೆ. ರೈತರು ಕೂಡ ದೇಶಿಯ ತಳಿಗಳನ್ನು ಬೆಳೆಸಲು ಪ್ರೋತ್ಸಾಹ ಮಾಡುವುದಕ್ಕೆ ಪ್ರಚಾರ ಕಾರ್ಯಕ್ರಮಗಳನ್ನು ಮಾಡಬೇಕು. ದೇಶಿಯ ತಳಿಗಳಿಂದ ಬಹಳಷ್ಟು ಅನುಕೂಲವಿದೆ ಎನ್ನುವುದು ಎಲ್ಲರಿಗೂ ಗೊತ್ತಿದೆ. ಮಾಂಸ ಹೆಚ್ಚಿಗೆ ಬರುತ್ತದೆ, ಒಳ್ಳೆಯ ಗುಣಮಟ್ಟದ ಉಣ್ಣೆ ಬರುತ್ತದೆ, drought resistant ಇದೆ. ಹಾಗಾಗಿ ಈ ತಳಿಗಳನ್ನು ರೈತರು ಬೆಳೆಸುವುದಕ್ಕೆ ಪ್ರೋತ್ಸಾಹ ಮಾಡುವುದಕ್ಕೆ ಪ್ರಚಾರ ಕಾರ್ಯಕ್ರಮವನ್ನು ಮಾಡಬೇಕು. ಗ್ರಾಹಕರು ಕೂಡ ಈ ತಳಿಗಳ ಮಾಂಸವನ್ನು ಬಳಸುವುದಕ್ಕೆ ಪ್ರಚಾರ ಕಾರ್ಯಕ್ರಮವನ್ನು ಮಾಡಬೇಕೆಂದು ನಾನು ಮಾನ್ಯ ಸಚಿವರಿಗೆ ಕೇಳುತ್ತಿದ್ದೇನೆ.

**ಶ್ರೀ ಕೆ.ವೆಂಕಟೇಶ್ (ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು):-** ಮಾನ್ಯ ಸಭಾಪತಿಯವರೇ, ಕುರಿ/ಮೇಕೆ ತಳಿ ಸಂವರ್ಧನಾ ಕೇಂದ್ರಗಳನ್ನು ಸುಮಾರು ಐದು ಕಡೆ ತೆರೆಯಲಾಗಿದೆ. ಒಂದನೆಯದು, ಬಂಡೂರು ಕುರಿ ಸಂವರ್ಧನಾ ಕೇಂದ್ರ, ಧನಗೂರು, ಮಳವಳ್ಳಿ ತಾಲ್ಲೂಕು, ಮಂಡ್ಯ ಜಿಲ್ಲೆ. ಇಲ್ಲಿ ಬಂಡೂರು ಕುರಿ ಸಂವರ್ಧನಾ ಮಾಡುವಂತಹ ಕೇಂದ್ರ ಇದೆ. ಎರಡನೆಯದು, ಕುರಿ ಸಂವರ್ಧನಾ ಕೇಂದ್ರ, ಕುಧಾಪುರ, ಚಳ್ಳಕೆರೆ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ, ಇಲ್ಲಿ ಡೆಕ್ಕನಿ/ಬಳ್ಳಾರಿ ತಳಿಗಳ ಸಂವರ್ಧನಾ ಕೇಂದ್ರವಿದೆ. ಕುರಿ ಸಂವರ್ಧನಾ ಕೇಂದ್ರ ಗುತ್ತಲು, ಹಾವೇರಿ ಜಿಲ್ಲೆ. ಇಲ್ಲಿ ಕೆಂಗುರಿ ತಳಿಯ ಸಂವರ್ಧನಾ ಕೇಂದ್ರವಿದೆ. ನಾಲ್ಕನೆಯದು, ಕುರಿ ಸಂವರ್ಧನಾ ಕೇಂದ್ರ ಸುಟ್ಟಟ್ಟಿ, ಅಥಣಿ ತಾಲ್ಲೂಕು, ಬೆಳಗಾವಿ ಜಿಲ್ಲೆ. ಇಲ್ಲಿ ಯಳಗಾ/ಡೆಕ್ಕನಿ ತಳಿಗಳ ಸಂವರ್ಧನಾ ಕೇಂದ್ರವಿದೆ. ಐದನೆಯದು, ಮೇಕೆ ಸಂವರ್ಧನಾ ಕೇಂದ್ರ ಅನಗವಾಡಿ, ಬಾಗಲಕೋಟೆ ಜಿಲ್ಲೆ. ಇಲ್ಲಿ ಉಸ್ಮಾನಾಬಾದಿ ತಳಿಗಳ

ಸಂವರ್ಧನಾ ಕೇಂದ್ರವಿದೆ. ಪ್ರತಿ ವರ್ಷ ನಮ್ಮಲ್ಲಿ ಎಷ್ಟು ಉತ್ಪಾದನೆಯಾಗುತ್ತದೆ ಅದನ್ನು ನಾವು ರೈತರಿಗೆ ಸುಮಾರು ನಾಲ್ಕೂವರೆ ಸಾವಿರ ರೂಪಾಯಿಗಳ ದರದಲ್ಲಿ ಕೊಡುತ್ತಿದ್ದೇವೆ. ಸಂವರ್ಧನಾ ಕೇಂದ್ರಕ್ಕೆ ಹಣ ಬೇಕೆಂದು ಮಾನ್ಯ ಸದಸ್ಯರು ಹೇಳಿದ್ದಾರೆ. ನಾನು ಸರ್ಕಾರಕ್ಕೆ ಪ್ರಸ್ತಾವನೆ ಕೊಟ್ಟು ಮುಂದಿನ ದಿನಗಳಲ್ಲಿ ಇನ್ನು ಹೆಚ್ಚು ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

**ಪ್ರಶ್ನೆ ಸಂಖ್ಯೆ: 1067**

**(ಉತ್ತರ ಲಗತ್ತಿಸಲಾಗಿದೆ)**

**ಶ್ರೀ ರಾಮೋಜಿಗೌಡ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಪೋಡಿಗಾಗಿ ಸಲ್ಲಿಕೆಯಾಗುವ ಅರ್ಜಿಗಳನ್ನು ಇತ್ಯರ್ಥಪಡಿಸಲು ಕಾಲಮಿತಿ ಇದೆಯೇ; ಯಾವ ಕಾಲಮಿತಿಯೊಳಗೆ ವಿಲೇ ಮಾಡದ ಎಷ್ಟು ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಲಾಗಿದೆ ಎಂದು ನಾನು ಪ್ರಶ್ನೆ ಕೇಳಿದ್ದೇನೆ. ಅದಕ್ಕೆ ಮಾನ್ಯ ಸಚಿವರು ನಾಲ್ಕರಿಂದ ಆರು ತಿಂಗಳವರೆಗೆ ಕಾಲಾವಕಾಶದಲ್ಲಿ ಇತ್ಯರ್ಥ ಮಾಡುತ್ತಿದ್ದೆವು. ಈಗ ಒಂದು ತಿಂಗಳ ಅವಧಿಯಲ್ಲಿ ಪೂರೈಸಲಾಗುತ್ತಿದೆ ಎಂದು ಹೇಳಿದ್ದಾರೆ. ಅದಕ್ಕಾಗಿ ನಾನು ಸರ್ಕಾರಕ್ಕೂ ಮಾನ್ಯ ಸಚಿವರಿಗೂ ಅಭಿನಂದಿಸುತ್ತಿದ್ದೇನೆ. ಆದರೆ, ನನ್ನ ಪ್ರಶ್ನೆ ಈಗ ಸುಮಾರು ಅಧಿಕಾರಿಗಳು ಸರಿಯಾಗಿ ಸರ್ವೆ ಮಾಡುತ್ತಿಲ್ಲ, ಪೋಡಿಯಾಗುತ್ತಿಲ್ಲ, ಹಾಗಾಗಿ ಏನು ಕ್ರಮ ತೆಗೆದುಕೊಂಡಿದ್ದೀರಿ ಎಂದು ಕೇಳಿದರೆ, ಒಂದು ವರ್ಷದಿಂದ ಯಾವುದೇ ಕ್ರಮ ತೆಗೆದುಕೊಂಡಿಲ್ಲ ಎಂದು ಹೇಳಿದ್ದಾರೆ. ಆದರೆ, ಈಗ ಮಾಲೂರು ತಾಲ್ಲೂಕಿನಲ್ಲಿ ಮಾನ್ಯ ಅನಿಲ್‌ಕುಮಾರ್‌ರವರು 4-5 ಪ್ರಕರಣಗಳಲ್ಲಿ ಸರ್ವೆ ಇಲಾಖೆಯಲ್ಲಿ ಅವ್ಯವಹಾರ ನಡೆಯುತ್ತಿದೆ, ದಂಧೆ ನಡೆಯುತ್ತಿದೆ ಎಂದು ಹೇಳಿದರು. ಆದರೆ, ಮೊನ್ನೆ ನೂತನವಾಗಿ ಸುತ್ತೋಲೆಯನ್ನು ಹೊರಡಿಸಿದ್ದಾರೆ. ಆ ಸುತ್ತೋಲೆಯಲ್ಲಿ ಮಾಲೂರು ತಾಲ್ಲೂಕಿನಲ್ಲಿ ತುಂಬಾ ಚೆನ್ನಾಗಿ ನಡೆಯುತ್ತಿದೆ, ಹಾಗಾಗಿ ಅದನ್ನು ಮಾದರಿಯಾಗಿಟ್ಟುಕೊಂಡು ಮಾಡಿದ್ದಾರೆ. ನಾನು ಏಕೆ ಕ್ರಮ ಕೈಗೊಳ್ಳಬೇಕೆಂದು ಹೇಳುತ್ತಿದ್ದೇನೆಂದರೆ, ಇಲ್ಲಿ ಸುಮಾರು 6,62,825 ಅರ್ಜಿಗಳು ಬಂದಿವೆ, ವಿಲೇಗೊಳಿಸಿದ ಅರ್ಜಿಗಳ ಸಂಖ್ಯೆ 5,33,545, ಬಾಕಿ ಇರುವ ಅರ್ಜಿಗಳ ಸಂಖ್ಯೆ 1,29,280. ನನ್ನ ಹತ್ತಿರ 8-9 ದೂರುಗಳು ಬಂದಿವೆ. ಐದಾರು ವರ್ಷಗಳಿಂದ ಸರಿಯಾದ ದಾಖಲಾತಿಗಳಿವೆ. ಆದರೆ, ನಮ್ಮಲ್ಲಿ ಇದುವರೆವಿಗೂ ಸರ್ವೆಯಾಗಿಲ್ಲ, ಪೋಡಿಯಾಗಿಲ್ಲ ಎಂದು ಹೇಳುತ್ತಿದ್ದಾರೆ. ಆದರೆ, ಇಲ್ಲಿ ಏನು ನಡೆಯುತ್ತಿದೆ ಎಂದರೆ, ಸರ್ವೆ ಮಾಡಿಸಬೇಕು, ಪೋಡಿ ಮಾಡಿಸಬೇಕು, ದುರಸ್ತಿ ಮಾಡಿಸಬೇಕು ಎಂದು ರೈತರು ಹೋಗುತ್ತಿದ್ದಾರೆ. ಆದರೆ ರೈತರದ್ದು ಆಗುತ್ತಿಲ್ಲ. 5,33,545 ಅರ್ಜಿಗಳನ್ನು ವಿಲೇಗೊಳಿಸಿದ್ದಾರೆ. ಇದರ ಹಿಂದೆ ರಿಯಲ್ ಎಸ್ಟೇಟ್‌ನವರದ್ದು ಮತ್ತು ಮಧ್ಯವರ್ತಿಗಳದ್ದು ಷಡ್ಯಂತರ ನಡೆಯುತ್ತಿದೆ. ಒಂದು ಜಮೀನನ್ನು ಅಗ್ರಿಮೆಂಟ್ ಮಾಡಿಕೊಳ್ಳುತ್ತಾರೆ, ಅಲ್ಲಿ ಒಂದು ಕೋಟಿ ಬೆಲೆ ಇರುತ್ತದೆ, ಆದರೆ 50 ಲಕ್ಷ ರೂಪಾಯಿಗಳಿಗೆ ಅಗ್ರಿಮೆಂಟ್ ಮಾಡಿಕೊಳ್ಳುತ್ತಾರೆ. ಆ ಪೋಡಿಯಾಗುವಷ್ಟರಲ್ಲಿ ಮತ್ತೆ 2-3 ವರ್ಷಗಳಾಗಿರುತ್ತದೆ. ಅದರ ಬೆಲೆ ಮೂರು ಕೋಟಿ ಬೆಲೆಯಾಗಿರುತ್ತದೆ. ಒಂದು ಕೋಟಿ ರೂಪಾಯಿಗಳಿಗೆ ರಿಜಿಸ್ಟ್ರೇಷನ್ ಮಾಡಿಕೊಳ್ಳುತ್ತಿದ್ದಾರೆ. 5,33,545 ಅರ್ಜಿಗಳನ್ನು ವಿಲೇಗೊಳಿಸಿದ್ದಾರೆ. ಅದರಲ್ಲಿ ಶೇಕಡ 90 ರಷ್ಟು ಈ ರೀತಿಯಾಗುತ್ತಿದೆ. ಹಾಗಾಗಿ ನಾನು ಮಾನ್ಯ ಸಚಿವರಿಗೆ ವಿನಂತಿ ಮಾಡುತ್ತೇನೆ, ಇದಕ್ಕೇನಾದರೂ PTCL Act

[Karnataka Scheduled Castes and Scheduled Tribes (Prohibition of Transfer of Certain Lands) Act, 1978] ನಲ್ಲಿ ಏನು land grant ಮಾಡುತ್ತೇವೆ, ಕನಿಷ್ಠ ಹದಿನೈದು ವರ್ಷ ಪರಭಾರೆ ಮಾಡಬಾರದು ಎಂದು ಇದೆ. ಆ ರೀತಿ ಮಾಡುವುದಕ್ಕಾಗುತ್ತದೆಯೇ? ಈ ರೀತಿಯ ಅಕ್ರಮಗಳು ನಡೆಯುತ್ತಿವೆ. ಈಗ ಬರೀ ಮಾಲೂರು ತಾಲ್ಲೂಕಿನಲ್ಲಿ 5-6 ಪ್ರಕರಣಳ ಬಗ್ಗೆ ಮಾನ್ಯ ಅನಿಲ್‌ಕುಮಾರ್‌ರವರು ಹೇಳಿದರು. ನಾನು ಮಾನ್ಯ ಸಚಿವರಲ್ಲಿ ಕೇಳುತ್ತಿದ್ದೇನೆ, ಒಂದು ವರ್ಷದಲ್ಲಿ ಎಷ್ಟು ಅಧಿಕಾರಿಗಳಿಗೆ ಶಿಕ್ಷೆಯನ್ನು ಕೊಟ್ಟಿದ್ದಾರೆ? ಸರ್ವೆ ಇಲಾಖೆಯಲ್ಲಿ ಪೋಡಿ ಮಾಡುವುದಕ್ಕೆ ತುಂಬಾ ದೊಡ್ಡ ಮಟ್ಟದಲ್ಲಿ ದಂಧೆ ನಡೆಯುತ್ತಿದೆ. ಈಗಿನ ಸರ್ಕಾರದಿಂದ ಅಲ್ಲ, ಹಿಂದಿನ ಸರ್ಕಾರದಿಂದಲೂ ದಂಧೆ ನಡೆಯುತ್ತಿದೆ. ಹಾಗಾಗಿ ಮಾನ್ಯ ಸಚಿವರು ಇದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು.

(ಮುಂದು)

**(951) 18/12/2024 1:20 ಎಸ್‌ಪಿಆರ್/ಎಕೆ** **(ಉಪ ಸಭಾಪತಿಯವರ ಉಪಸ್ಥಿತಿ)**

**ಶ್ರೀ ಕೃಷ್ಣಭೈರೇಗೌಡ (ಕಂದಾಯ ಸಚಿವರು):-** ಮಾನ್ಯ ಸಭಾಪತಿಯವರೆ, ಹಿಂದಿನ ಸರ್ಕಾರದ ಅವಧಿಯಲ್ಲಿ ನಡೆದಿತ್ತು; ಈಗಲೂ ಸಹ ನಡೆಯುತ್ತಿದೆ; ಇದಕ್ಕೆ ಏನೂ ಮಾಡುವುದಕ್ಕಾಗುವುದಿಲ್ಲ. ಇಲಾಖೆಯ ಕೆಳ ಹಂತದಲ್ಲಿ ಭ್ರಷ್ಟಾಚಾರ ನಿಯಂತ್ರಣ ಮಾಡುವುದು ಅಷ್ಟು ಸುಲಭವಾದುದಲ್ಲ. ಆದರೆ ನಾವು ಎಲ್ಲಾ ರೀತಿಯ ಪ್ರಯತ್ನಗಳನ್ನು ಮಾಡುತ್ತಿದ್ದೇವೆ. ಪೋಡಿಯಲ್ಲಿ ಎರಡು ವಿಧಗಳಿವೆ. ಆ ಪೈಕಿ ಮೊದಲನೆಯದು ಸರ್ಕಾರಿ ಜಾಗದಲ್ಲಿ ಮಂಜೂರಾಗಿರುವುದನ್ನು "ದುರಸ್ತ್ ಪೋಡಿ" ಎಂದು ಕರೆಯುತ್ತಾರೆ. ಮತ್ತೊಂದು ಖಾಸಗಿ ಜಮೀನಿನ ಪೋಡಿ, ಇದನ್ನು ಸಾಮಾನ್ಯವಾಗಿ "ಪೋಡಿ" ಎಂದಷ್ಟೇ ಕರೆಯುತ್ತಾರೆ. ಖಾಸಗಿ ಜಮೀನಿಗೆ ಸಂಬಂಧಪಟ್ಟಂತೆ ಕಾಯ್ದೆಯ ಕಲಂ 11 ಇ ರಡಿ ಸ್ಕೆಚ್ ಮಾಡಿ ಕೊಡುತ್ತೇವೆ; ನಂತರದಲ್ಲಿ ಅದು ಪೋಡಿಯಾಗುತ್ತದೆ. ಇದು ಸರಳವಾಗಿ ಆಗುತ್ತಿದೆ. ಮತ್ತೊಂದರಲ್ಲಿ ಯಾವ ಕಾರಣಕ್ಕಾಗಿ ವಿಳಂಬವಾಗುತ್ತದೆ ಎಂದರೆ, ಖಾಸಗಿ ನಂಬರಿನಲ್ಲಿ ಕೇವಲ 20 ಎರಕೆಯಷ್ಟೇ ಜಮೀನು ಇರುತ್ತದೆ; ಆದರೆ ಪಹಣಿಗಳು 23 ಎಕರೆಯಷ್ಟಿರುತ್ತವೆ. ಹೀಗಾಗಿ ಇಲ್ಲಿ ಹೊಂದಾಣಿಕೆಯಾಗುವುದಿಲ್ಲ. ಇಲ್ಲಿ ಎ ಖರಾಬ್ ಮತ್ತು ಬಿ ಖರಾಬ್ ಗಳು ಸೇರಿಕೊಂಡಿದ್ದರೂ ಸಹ ಅವುಗಳು ಹೊಂದಾಣಿಕೆಯಾಗುವುದಿಲ್ಲ. ಈ ರೀತಿಯ ಹೊಂದಾಣಿಕೆಯಾಗದಿರುವ ಪ್ರಕರಣಗಳನ್ನು ತಹಸೀಲ್ದಾರ್, ಸಹಾಯಕ ಆಯುಕ್ತರ ನ್ಯಾಯಾಲಯಗಳಿಗೆ ಸಲ್ಲಿಸಿ, ಇತ್ಯರ್ಥ ಪಡಿಸಿಕೊಳ್ಳಬೇಕಾಗುತ್ತದೆ. ಈ ಹಿಂದೆ ದಾಖಲೆಗಳಲ್ಲಿ ಹೆಚ್ಚು ಕಡಿಮೆಯಾಗಿರುವುದರಿಂದ ಅಲ್ಲಿನ ಪ್ರಕ್ರಿಯೆಯಲ್ಲಿ ಸ್ವಲ್ಪ ವಿಳಂಬವಾಗುತ್ತದೆ. ಒಂದು ವೇಳೆ ಖಾಸಗಿ ನಂಬರ್‌ಗಳಲ್ಲಿ ದಾಖಲೆಗಳು ಸರಿಯಾಗಿದ್ದರೆ, ಆಗ ಪ್ರಕ್ರಿಯೆಯಲ್ಲಿ ಬಹಳವಾಗಿ ವಿಳಂಬವಾಗುವುದಿಲ್ಲ. ಇಂತಹವುಗಳನ್ನು ಸರಾಸರಿಯಾಗಿ 24 – 38 ದಿನಗಳೊಳಗೆ ವಿಲೇವಾರಿಯಾಗುತ್ತಿವೆ. ಸರ್ಕಾರಿ ಜಮೀನುಗಳಲ್ಲಿ ಸಮಸ್ಯೆ ಜಾಸ್ತಿಯಿದೆ. ಏಕೆಂದರೆ, ಕಾಲಾನುಕಾಲದಿಂದ ಜಮೀನು ಮಂಜೂರಾಗಿದ್ದು, ಅವುಗಳು ದುರಸ್ತ್ ಆಗುವುದರಲ್ಲಿ ಬಹಳ ತೊಂದರೆಯಾಗುತ್ತಿದೆ. ಈ ಹಿಂದೆ

ಸರ್ಕಾರವು ಇವುಗಳಿಗೆ 1 -5 ಮಾಡಬೇಕೆಂದು ತೀರ್ಮಾನಿಸಿತ್ತು. ಈ ಪ್ರಕ್ರಿಯೆಯು ಬಹಳ ಜಟಿಲವಾಗಿತ್ತು; ಈಗ ಇದನ್ನು ಬಹಳ ಸರಳೀಕರಣ ಮಾಡಿದ್ದೇವೆ. ಈ ಹಿಂದೆ 5 ದಾಖಲೆಗಳು ಕಡ್ಡಾಯವಾಗಿದ್ದವು. ಆದರೆ, ಈಗ ಕೇವಲ 3 ದಾಖಲೆಗಳು ಕಡ್ಡಾಯವಾಗಿದ್ದರೂ ಸಾಕು ಎಂದು ದಾಖಲೆಗಳ ಸಂಖ್ಯೆಯನ್ನು ಮಾಡಿದ್ದೇವೆ. ಈ ಹಿಂದೆ ಭೂ ದಾಖಲೆಗಳ ಉಪ ನಿರ್ದೇಶಕರಿಗೆ ಹಾಗೂ ಸಹಾಯಕ ಆಯುಕ್ತರುಗಳವೆ ಮಾತ್ರವೇ ಹೋಗಬೇಕಾಗಿತ್ತು. ಆದರೆ, ಈಗ ಇದನ್ನು ತಹಸೀಲ್ದಾರ್ ರವರುಗಳ ಹಂತದಲ್ಲಿಯೇ ಅಂತಿಮಗೊಳಿಸುವ ವ್ಯವಸ್ಥೆಯನ್ನು ಮಾಡಿದ್ದೇವೆ. ಈ ಹಿಂದೆ ಇದನ್ನೆಲ್ಲಾ ಪೇಪರ್ ಕಡತ ಮಾಡಲಾಗುತ್ತಿತ್ತು. ಆದರೆ ಈಗ ಇದನ್ನು ಆನ್‌ಲೈನ್ ಕಡತ ಮಾಡುವ ವ್ಯವಸ್ಥೆಯನ್ನು ಮಾಡಲಾಗಿದೆ. ಸುಮಾರು 1,29,000 ಸರ್ಕಾರಿ ಜಮೀನುಗಳಲ್ಲಿ ಮಂಜೂರಾಗಿದೆ ಎನ್ನುವ ಮಾಹಿತಿಯನ್ನು ನಾವು ಕಲೆ ಹಾಕಿದ್ದೇವೆ. ಇಷ್ಟೂ ಜಮೀನುಗಳಿಗೆ ಪೋಡಿ ಮಾಡುವ ಅವಶ್ಯಕತೆ ಇದೆ ಎಂದು ನಾವು ಈಗ ಲೆಕ್ಕ ಹಾಕಿದ್ದೇವೆ. ಇದರಲ್ಲಿ ಎಷ್ಟು ಜನ ಇರಬಹುದು ಎಂದು ಕೇಳಿದರೆ, ಬಹುಶಃ ಒಂದು ಸಂಖ್ಯೆಯಲ್ಲಿ 10 ಜನರಿದ್ದರೆ, ಸುಮಾರು 12 - 15 ಲಕ್ಷ ಜನಕ್ಕೆ ದುರಸ್ತ್ ಆಗುವುದು ಬಾಕಿಯಿದೆ. ರಾಜ್ಯದಲ್ಲಿ ಈ ಹಿಂದೆ ಅಷ್ಟೂ ಜನರು ಬಂದು ಅರ್ಜಿಯನ್ನು ಸಲ್ಲಿಸಿ, ದುರಸ್ತ್ ಮಾಡಿಸಿಕೊಳ್ಳಬೇಕಾಗಿತ್ತು. ಆಗ ಅದನ್ನು ಏಕ ವ್ಯಕ್ತಿ ಪೋಡಿ ಎಂಬುದಾಗಿ ಕರೆಯುತ್ತಿದ್ದರು. ಈಗಲೂ ಸಹ ಈ ಆಯ್ಕೆಯು ಇದೆ. ಈಗ ಈ ವ್ಯವಸ್ಥೆಯನ್ನು ಬದಲಾವಣೆ ಮಾಡಿ, ಏಕ ವ್ಯಕ್ತಿ ಪೋಡಿಯ ಜೊತೆಗೆ ಸರ್ಕಾರವೇ ಪೋಡಿ ಮಾಡಿ ಕೊಡುವ ಅಭಿಯಾನವನ್ನು "ನನ್ನ ಭೂಮಿ" ಎಂಬ ಯೋಜನೆಯಡಿ ಈಗಾಗಲೇ ಪ್ರಾರಂಭಿಸಿದ್ದೇವೆ. 1,29,000 ಸರ್ಕಾರಿ ಜಮೀನುಗಳು ದುರಸ್ತ್‌ಗಾಗಿ ಬಾಕಿ ಉಳಿದಿವೆ; ಈ ಪೈಕಿ ಈಗಾಗಲೆ ಸುಮಾರು 27,600 ನಂಬರುಗಳಿಗೆ 1 – 5 ಪ್ರಕ್ರಿಯೆಯನ್ನು ಈಗಾಗಲೇ ಮಾಡಿಕೊಟ್ಟಿದ್ದೇವೆ. ಬಹುಶಃ ಮುಂದಿನ 6-8 ತಿಂಗಳುಗಳ ಕಾಲಾವಧಿಯೊಳಗೆ 1,29,000 ಜಮೀನುಗಳ ಪೈಕಿ ಶೇಕಡಾ 80 ರಷ್ಟು ಜಮೀನುಗಳಿಗೆ ಸರ್ಕಾರವೇ 1 – 5 ಪ್ರಕ್ರಿಯೆಯನ್ನು ಮಾಡಿಕೊಡುತ್ತದೆ. ಇದಕ್ಕಾಗಿ ಯಾರೂ ಸಹ ಅರ್ಜಿಯನ್ನು ಸಲ್ಲಿಸುವ ಅವಶ್ಯಕತೆಯಿಲ್ಲ. ಇವುಗಳನ್ನು ದುರಸ್ತ್ ಮಾಡಿಕೊಡುವುದಕ್ಕೂ ಸಹ ನಾವು ಪುಷ್ ಮಾಡುತ್ತಿದ್ದೇವೆ. ಕಳೆದ ವಾರ ನಾನು ಮಂಡ್ಯ ಜಿಲ್ಲೆಯ ನಾಗಮಂಗಲ ತಾಲ್ಲೂಕಿಗೆ ಭೇಟಿ ನೀಡಿದ್ದೆನು. ಕಳೆದ ವರ್ಷ ಅಲ್ಲಿ ಕೇವಲ 100 ಜಮೀನುಗಳ ದುರಸ್ತ್ ಮಾತ್ರವೇ ಆಗಿದೆ. ಆದರೆ ಈಗ ಮಂಡ್ಯ ಜಿಲ್ಲೆಯಲ್ಲಿ ಕೇವಲ 15 ದಿನಗಳಲ್ಲಿ 721 ಜಮೀನುಗಳ ದುರಸ್ತ್ ಮಾಡಿಕೊಟ್ಟಿದ್ದೇವೆ. ಇದೇ ರೀತಿಯ ಅಭಿಯಾನದ ಮೂಲಕ ಇಡೀ ರಾಜ್ಯದಲ್ಲಿ ನಾವು ಮಾಡುತ್ತಿದ್ದೇವೆ. 15 ಲಕ್ಷ ಜಮೀನುಗಳಲ್ಲಿ ಎಲ್ಲವನ್ನೂ ಮಾಡುತ್ತೇವೆ ಎಂದು ಹೇಳುವುದಕ್ಕಾಗುವುದಿಲ್ಲ. ಏಕೆಂದರೆ ಅವರ ದಾಖಲೆಗಳು ಸರಿ ಇವೆಯೇ ಅಥವಾ ಇಲ್ಲವೇ ಎನ್ನುವುದನ್ನು ನಾವು ನೋಡಬೇಕು. ಈ ಪೈಕಿ ಶೇಕಡಾ 50 ಸರಿ ಇವೆ ಎನ್ನುವುದು ನನಗೆ ಬಂದ ಮಾಹಿತಿಯಾಗಿದೆ. ಕಡೆಯ ಪಕ್ಷ ಶೇಕಡಾ 50 ರಷ್ಟು ಜನರಿಗಾದರೂ ಮುಂದಿನ ಒಂದು ವರ್ಷದಲ್ಲಿ ದುರಸ್ತ್ ಮಾಡಿಕೊಡುವ ಅಭಿಯಾನವನ್ನು "ನನ್ನ ಭೂಮಿ" ಎಂಬು ಯೋಜನೆಯಡಿ ನಾವು ಪ್ರಾರಂಭಿಸಿದ್ದೇವೆ. ಎಷ್ಟು ಸಾಧ್ಯವೋ ಅಷ್ಟನ್ನೂ ಸಹ ಮಾಡುತ್ತೇವೆ. ಇನ್ನೂ ಆಗದೇ ಇರುವ ಬಗ್ಗೆ ಯಾವ ಸಮಸ್ಯೆಗಳವೆ ಎನ್ನುವುದನ್ನು ನೋಡಿಕೊಂಡು ನಾವು ತೀರ್ಮಾನಗಳನ್ನು ತೆಗೆದುಕೊಳ್ಳುತ್ತೇವೆ

**ಶ್ರೀ ರಾಮೋಜಿಗೌಡ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಈ ಹಿಂದೆ 1 – 5 ಪ್ರಕ್ರಿಯೆ ಆಗುವುದು ಬಹಳ ಕಷ್ಟವಾಗಿತ್ತು. ಆದರೆ ಈಗ ಸರ್ಕಾರವೇ ಇದನ್ನು ಮಾಡುತ್ತಿದೆ ಎಂದು ಸಚಿವರು ತಿಳಿಸಿದರು. ನಾನು ತಮ್ಮ ಮೂಲಕ ಸಚಿವರಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ, 1 -5 ಪ್ರಕ್ರಿಯೆ ಆಗಿ ಎರಡು ವರ್ಷಗಳಾಗಿದ್ದರೂ ಸಹ ಅಧಿಕಾರಿಗಳು ಏಕೆ ವಿಳಂಬ ಮಾಡುತ್ತಿದ್ದಾರೆ? ಮಧ್ಯವರ್ತಿಗಳು ಹೋದರೆ ಅಲ್ಲಿ ಆಗುತ್ತದೆ.

**ಶ್ರೀ ಕೃಷ್ಣಭೈರೇಗೌಡ:-** ಮಾನ್ಯ ಸಭಾಪತಿಯವರೆ, 1 – 5 ಪ್ರಕ್ರಿಯೆಯನ್ನು ಮಾಡಿ, ಜಮೀನುಗಳ ದುರಸ್ತ್ ಮಾಡುತ್ತಿರುವುದು ಯಾವ ಪ್ರಕರಣಗಳೆಂದರೆ, ಅವುಗಳು 1962 ಮತ್ತು 1978 ನೇ ಇಸವಿಗಳಲ್ಲಿ ಮಂಜೂರಾಗಿರುವ ಪ್ರಕರಣಗಳಾಗಿವೆ. ಇಲ್ಲಿಯವರೆಗೆ ಅಧಿಕಾರಕ್ಕೆ ಬಂದವರು ಇದನ್ನು ಏಕೆ ಮಾಡಲಿಲ್ಲ ಎನ್ನುವುದನ್ನು ಅವರು ಕೇಳಬೇಕು. ಇದನ್ನು ಯಾರೂ ಸಹ ಕೇಳಲಿಲ್ಲ. ಆದರೂ ಸಹ ನಾವು ಇವುಗಳನ್ನು ಮೈಮೇಲೆ ಹಾಕಿಕೊಂಡು ಮಾಡುತ್ತಿದ್ದೇವೆ. ಇವುಗಳೆಲ್ಲವೂ ಚಾಪೆ ಕೆಳಗೆ ಮುಚ್ಚಿಹೋಗಿದ್ದ ವಿಷಯಗಳಾಗಿವೆ. ಇವುಗಳನ್ನು ನಾವು ಮೈಮೇಲೆ ಎಳೆದುಕೊಂಡು ಅಭಿಯಾನದ ಮೂಲಕ ಮಾಡುತ್ತಿದ್ದೇವೆ. ಸದಸ್ಯರು ಹೇಳುತ್ತಿರುವುದು ನಿಜವಾಗಿದೆ; ಇಲ್ಲವೆಂತಲ್ಲ. ಈ ಎಲ್ಲಾ ನ್ಯೂನ್ಯತೆಗಳು ಶೋಷಣೆಗೊಳಗಾಗಿವೆ. ನಾವು ಎಷ್ಟು ಸಾಧ್ಯವಿದೆಯೋ ಅಷ್ಟೂ ಆಗಲಿ ಎನ್ನುವ ಉದ್ದೇಶದಿಂದ ನಾವು ಈ ಕೆಲಸವನ್ನು ಅಭಿಯಾನದ ಮೂಲಕ ಮಾಡುತ್ತಿದ್ದೇವೆ. ಇಷ್ಟು ದಿನಗಳವರೆಗೆ ಇದನ್ನು ಏಕೆ ಬಾಕಿ ಇಟ್ಟುಕೊಳ್ಳಲಾಗಿತ್ತು? ಈ ಮುಂಚೆ ಇದು ಏಕ ವ್ಯಕ್ತಿ ಪೋಡಿ ವ್ಯವಸ್ಥೆಯಾಗಿತ್ತು. ಯಾರು ತಮ್ಮ ಜಮೀನಿನ ದುರಸ್ತ್ ಕೋರಿ ಅರ್ಜಿಯನ್ನು ಸಲ್ಲಿಸುತ್ತಿದ್ದರೋ, ಅವರುಗಳದ್ದನ್ನು ಮಾತ್ರವೇ ಮಾಡಲಾಗುತ್ತಿತ್ತು. ಆದರೆ ಕೇವಲ ಅರ್ಜಿಯ ಮೇಲೆ ಕೆಲಸಗಳಾಗುವುದಿಲ್ಲ. ಇದರಲ್ಲಿ ಬೇರೆ ಅಂಶಗಳನ್ನೂ ಸಹ ಪರಿಗಣಿಸಬೇಕು. ಈ ಎಲ್ಲಾ ಕೆಲಸಗಳು ಬೇಡ ಎನ್ನುವ ಕಾರಣಕ್ಕಾಗಿ ಸರ್ಕಾರದಿಂದಲೇ ಇದನ್ನು ಅಭಿಯಾನದ ಮೂಲಕ ಮಾಡಲಾಗುತ್ತಿದೆ. ಇಲ್ಲಿ ಎಲ್ಲವೂ ಪರಿಪೂರ್ಣ ಎಂದು ನಾನು ಹೇಳುವುದಿಲ್ಲ. ಎಷ್ಟು ಸಾಧ್ಯವೋ ಅಷ್ಟನ್ನು ನಾವು ಮಾಡೋಣ. ಇನ್ನುಳಿದವುಗಳನ್ನು ಪ್ರಕರಣವಾರು ಫಾಲೋ-ಅಪ್ ಮಾಡುತ್ತೇವೆ.

**ಪ್ರಶ್ನೆ ಸಂಖ್ಯೆ: 1024**

**(ಮಾನ್ಯ ಸದಸ್ಯರಾದ ಶ್ರೀ ಭೀಮರಾವ್ ಬಸವರಾಜ ಪಾಟೀಲ್ ರವರು ಸದನದಲ್ಲಿ ಉಪಸ್ಥಿತರಿರಲಿಲ್ಲ)**

**ಪ್ರಶ್ನೆ ಸಂಖ್ಯೆ: 1093**
**(ಉತ್ತರವನ್ನು ಲಗತ್ತಿಸಿದೆ)**

**ಶ್ರೀ ಸುನೀಲ್ ವಲ್ಯಾಪುರ್ (ವಿಧಾನ ಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ನಾನು ಕೇಳಿರುವ ಪ್ರಶ್ನೆಗೆ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಆದರೆ ನಾನು ಕೇಳಿರುವ ಉಪ ಪ್ರಶ್ನೆಯಲ್ಲಿ ಆ ದಾಖಲೆಗಳ ಬಗ್ಗೆ ಮಾಹಿತಿಯನ್ನು ಒದಗಿಸುವಂತೆ ಕೇಳಿದ್ದೆನು. ಅದಕ್ಕೆ ಸಚಿವರು ಹಳೆಯ ದಾಖಲೆಗಳು ದೊರೆಯುತ್ತಿಲ್ಲ ಎಂಬ ಉತ್ತರವನ್ನು ಒದಗಿಸಿದ್ದಾರೆ. ಲಿಖಿತ ಉತ್ತರವನ್ನು ಸಚಿವರು ನೋಡಿದ್ದಾರೆಯೋ ಅಥವಾ ಇಲ್ಲವೋ ಎಂದು ನನಗೆ ಅನ್ನಿಸುತ್ತಿದೆ. ಸಚಿವರ ಬಗ್ಗೆ ನನಗೆ ಗೌರವವಿದೆ. ಅವರು ತುಂಬಾ ಬುದ್ಧಿವಂತರು ಮತ್ತು ಒಳ್ಳೆಯ ಜ್ಞಾನವಂತರಾಗಿದ್ದಾರೆ. ಆದರೆ ಹಳೆಯ ದಾಖಲೆಗಳ ಬಗ್ಗೆ ಏನು ಮಾಡುತ್ತೀರಿ ಎಂದು ನಾನು ಪ್ರಶ್ನೆಯನ್ನು ಕೇಳಿದಾಗ ಡಿಜಿಟಲೀಕರಣ ಮತ್ತು ಕ್ರೋಢೀಕರಣ ಮಾಡುತ್ತೇವೆ ಎಂಬುದಾಗಿ ತಿಳಿಸಿದ್ದಾರೆ. ಇದರ ಜೊತೆಗೆ ಪೋಡಿ ಪ್ರಕರಣದ ಬಗ್ಗೆ ಬಹಳಷ್ಟು ಸದಸ್ಯರು ಮಾತನಾಡಿದ್ದಾರೆ. 1 – 5 ಪ್ರಕ್ರಿಯೆ ಆದ ಮೇಲೆ 6 – 10 ಪ್ರಕ್ರಿಯೆಯನ್ನು ಮಾಡಲಾಗುತ್ತದೆ. 1 – 5 ಪ್ರಕ್ರಿಯೆಯನ್ನು ಮಾಡುತ್ತಿರುವ ಬಗ್ಗೆ ಸಚಿವರು ಮತ್ತೊಬ್ಬ ಸದಸ್ಯರು ಕೇಳಿರುವ ಪ್ರಶ್ನೆಗೆ ಉತ್ತರಿಸುತ್ತಿದ್ದರು. 1979 ರಲ್ಲಿ ನೀಡಿದ್ದ ಜಮೀನುಗಳಿಗೆ ಈಗ ದುರಸ್ತ್ ಮಾಡಿರುವ ಬಗ್ಗೆ ಸಚಿವರು ಉತ್ತರಿಸಿದ್ದಾರೆ. ಇದು ತುಂಬಾ ಸಂತೋಷದ ವಿಷಯವಾಗಿದೆ. ಆದರೆ ಈಗ ಪೋಡಿ ಪ್ರಕರಣದಲ್ಲಿ ಏನಾಗುತ್ತಿದೆ ಎಂದರೆ, 1 – 5 ಪ್ರಕ್ರಿಯೆ ಪೂರ್ಣಗೊಳ್ಳದೆ 6 – 10 ಪ್ರಕ್ರಿಯೆಯನ್ನು ಅಧಿಕಾರಿಗಳು ಮಾಡಿಕೊಟ್ಟು, ಇವತ್ತಿನ ದಿವಸ ಅಲ್ಲಾಗುತ್ತಿರುವ ಸಂಗತಿಗಳ ಬಗ್ಗೆ ಸಚಿವರ ಗಮನವನ್ನು ಸೆಳೆಯಬಯಸುತ್ತೇನೆ. 1 – 5 ಪ್ರಕ್ರಿಯೆ ಪೂರ್ಣಗೊಳ್ಳದೆ ಅಲ್ಲಿನ ಅಧಿಕಾರಿಗಳಿಗೆ ಹಣ ನೀಡಿ ಮುಂದಿನ ಪ್ರಕ್ರಿಯೆಗಳನ್ನು ಮಾಡಿಕೊಳ್ಳುತ್ತಾರೆ. ನಾನು ಇಂತಹ ಪ್ರಕರಣಗಳನ್ನು ಬಹಳಷ್ಟು ಜಿಲ್ಲೆಗಳಲ್ಲಿ ನೋಡಿದ್ದೇನೆ. ಅವಶ್ಯವಿದ್ದಲ್ಲಿ ನಾನು ಸಾಕ್ಷಿ ಸಮೇತ ಇವುಗಳ ಮಾಹಿತಿಯನ್ನು ನೀಡುತ್ತೇನೆ. ಇವತ್ತಿನ ದಿವಸ 1 – 5 ಪ್ರಕ್ರಿಯೆಯನ್ನು ಪೂರ್ಣಮಾಡಿಕೊಳ್ಳದೆ 6 – 10 ಪ್ರಕ್ರಿಯೆಯನ್ನು ಮಾಡಿಕೊಂಡು, ಪೋಡಿಯನ್ನು ಮಾಡಿಸಿಕೊಳ್ಳುತ್ತಿದ್ದಾರೆ; ಇದರ ಬಗ್ಗೆ ಸಚಿವರು ಗಮನವನ್ನು ಹರಿಸಬೇಕು. ನಾನು ಸ್ವಮಿತ್ವ ಯೋಜನೆಯ ಬಗ್ಗೆ ಪ್ರಶ್ನೆಯನ್ನು ಕೇಳಿದ್ದೇನೆ. ಇವತ್ತಿನ ದಿವಸ ಸಾರ್ವಜನಿಕರು ಸ್ವಮಿತ್ವ ಮತ್ತು ಈ ಸ್ವತ್ತು ಇವುಗಳ ಬಗ್ಗೆ ಗೊಂದಲಗಳನ್ನಿಟ್ಟುಕೊಂಡಿದ್ದಾರೆ. ಯಾವುದನ್ನು ಅನುಕರಿಸಬೇಕು ಎನ್ನುವುದು ಅವರಿಗೆ ಗೊತ್ತಾಗುತ್ತಿಲ್ಲ. ಹೀಗಾಗಿ ಸಚಿವರು ಈ ಅಂಶದ ಬಗ್ಗೆಯೂ ಸಹ ಸ್ಪಷ್ಟೀಕರಣವನ್ನು ನೀಡಬೇಕೆಂದು ತಮ್ಮ ಮೂಲಕ ನಾನು ಅವರಲ್ಲಿ ಕೇಳಿಕೊಳ್ಳುತ್ತೇನೆ.

ಆಕಾರ ಬಂದ್ ಬಗ್ಗೆ ಹೇಳುವುದಾದರೆ, ನಮ್ಮ ರಾಜ್ಯದಲ್ಲಿ ಮಾತ್ರವಲ್ಲದೇ, ಇಡೀ ದೇಶದಲ್ಲಿಯೇ ಅನುಸರಿಸಲಾಗುತ್ತಿದೆ. ಬ್ರಿಟೀಷರ ಕಾಲದಲ್ಲಿದ್ದ ಬೆಂಚ್‌ಮಾರ್ಕ್ ವ್ಯವಸ್ಥೆಯ ಆಧಾರದ ಮೇಲೆ, ಇವತ್ತಿನ ದಿವಸ ನಮ್ಮಲ್ಲಿ ಸರ್ವೆ ಕಾರ್ಯಗಳು ನಡೆಯುತ್ತಿವೆ. ನಾವು ಇನ್ನೂ ಹಳೆಯ ಕಾಲದ ವ್ಯವಸ್ಥೆಯನ್ನೇ ಅನುಸರಿಸುತ್ತಿದ್ದೇವೆ. ಇವತ್ತಿನ ದಿವಸ ಸರ್ಕಾರವು ಆಕಾರ ಬಂದ್ ವ್ಯವಸ್ಥೆಯನ್ನೂ ಸಹ ಡಿಜಟಲೀಕರಣ ಮಾಡುತ್ತಿದೆ. ಇದು ಸಂತೋಷದ ಸಂಗತಿಯಾಗಿದೆ. ದಾಖಲೆಗಳು ಕ್ರೋಢೀಕರಣವಾಗುವುದು ಒಳ್ಳೆಯದು. ಆದರೆ, ಎಲ್ಲವನ್ನೂ

ಗಣಕೀಕರಣ ಮಾಡಿದ ಮೇಲೆ, ಒಂದು ಬಾರಿ ಕಂಪ್ಯೂಟರ್‌ಗೆ ವೈರಸ್ ಬಂದು, ಅವುಗಳಲ್ಲಿನ ಮಾಹಿತಿಗಳು ಹಾಳಾಗಿ ಹೋದರೆ, ಅಥವಾ ಕಂಪ್ಯೂಟರ್ ಸ್ಥಗಿತಗೊಂಡರೆ, ಅವುಗಳ ಗತಿ ಏನು ಎಂದು ನಾನು ಕೇಳಬಯಸುತ್ತೇನೆ. ಇದರ ಬಗ್ಗೆಯೂ ಸಹ ಸಚಿವರು ಯೋಚನೆಯನ್ನು ಮಾಡಬೇಕು. ಸರ್ಕಾರವು ದಾಖಲೆಗಳ ಡಿಜಿಟಲೀಕರಣ ಹಾಗೂ ಎಲ್ಲಾ ದಾಖಲಾತಿಗಳನ್ನು ಕಂಪ್ಯೂಟರ್‌ನಲ್ಲಿ ಕ್ರೋಢೀಕರಣ ಮಾಡಲಿ; ಇವುಗಳ ಜೊತೆಗೆ ಮ್ಯಾನುಯಲ್ ಸೆಟ್ ಸಹ ಇರಬೇಕೆಂಬ ಸಲಹೆಯನ್ನು ನಾನು ನೀಡಬಯಸುತ್ತೇನೆ. ಈ ಬಗ್ಗೆ ಸಚಿವರು ಸ್ಪಷ್ಟೀಕರಣವನ್ನು ನೀಡಬೇಕೆಂದು ತಮ್ಮ ಮೂಲಕ ಕೋರುತ್ತೇನೆ.

**ಶ್ರೀ ಕೃಷ್ಣಭೈರೇಗೌಡ (ಕಂದಾಯ ಸಚಿವರು):-** ಮಾನ್ಯ ಸಭಾಪತಿಯವರೆ, ಸದಸ್ಯರು ಮೂರ್ನಾಲ್ಕು ಉಪ ಪ್ರಶ್ನೆಗಳನ್ನು ಕೇಳಿದ್ದಾರೆ. ಹಳೆಯ ದಾಖಲೆಗಳು ಕಳೆದು ಹೋಗಿರುವ ಹಾಗೂ ಅವುಗಳ ಸಂರಕ್ಷಣೆಯ ಬಗ್ಗೆ ಸದಸ್ಯರು ಪ್ರಶ್ನೆಯನ್ನು ಕೇಳಿದ್ದಾರೆ. ಸದಸ್ಯರು ಕೇಳಿರುವುದು ನಿಜ. ಈಗ ಸುಮಾರು ದಾಖಲೆಗಳು ಕಳೆದು ಹೋಗಿ ಬಹಳಷ್ಟು ಅವ್ಯವಸ್ಥೆಗಳಾಗಿವೆ. ಹೀಗಾಗಿ ನಾನು ಇಲಾಖೆಯ ಜವಾಬ್ದಾರಿಯನ್ನು ತೆಗೆದುಕೊಂಡ ತಕ್ಷಣ ತಾಲ್ಲೂಕು ಕಛೇರಿಯಲ್ಲಿರುವ ಎಲ್ಲಾ ಮೂಲ ಕಡತಗಳು ಅಂದರೆ ಭೂ ಮಂಜೂರಾತಿ, ಮ್ಯೂಟೇಷನ್ ರೆಕಾರ್ಡ್, ಓ.ಎಂ. ಪ್ರತಿಗಳು ಹಾಗೂ ಹಳೆಯ ಕೈ ಬರಹ ಪಹಣಿಗಳನ್ನು ಬಹಳ..., ಇವುಗಳೆಲ್ಲವೂ ಕಂದಾಯ ಇಲಾಖೆಯಲ್ಲಿ ಭೂ ಮಂಜೂರಾತಿಯ ಆಧಾರ ದಾಖಲೆಗಳಾಗಿವೆ.

(ಮುಂದು)

952/18-12-2024/1-30/bkp-rn **(ಉಪ ಸಭಾಪತಿಯವರ ಉಪಸ್ಥಿತಿ)**

**ಶ್ರೀ ಕೃಷ್ಣಭೈರೇಗೌಡ(ಮುಂದು):**

ಅಂದರೆ, ನಮಗೆ ಕಂದಾಯ ಇಲಾಖೆಯಲ್ಲಿ ಭೂಮಿ ಮಂಜೂರಾತಿಗೆ ಇದೆಲ್ಲವೂ ಆಧಾರ. ಆದರೆ ಸರ್ವೆಯದ್ದು ಬೇರೆ. ಕಂದಾಯದ್ದು ಬೇರೆ ಇದೆ. ಇದೆಲ್ಲವೂ ಮೂಲ A-Category ಗೆ ಬರುತ್ತವೆ. ನಮ್ಮಲ್ಲಿ 'A' 'B' 'C' 'D' 'E' Category ಎಂದು ಹೇಳಿ ದಾಖಲೆಗಳನ್ನು ವರ್ಗೀಕರಣ ಮಾಡಲಾಗಿದೆ. ಪ್ರಸ್ತುತ 'A' & 'B' Category ನಲ್ಲಿ ಬರುವಂತಹ ಕೆಲವು ಪ್ರಮುಖವಾದವುಗಳನ್ನು ಆಯ್ಕೆ ಮಾಡಿಕೊಂಡು ಅವುಗಳೆಲ್ಲವನ್ನೂ ಕೂಡ ಈಗ ಸ್ಕಾನಿಂಗ್ ಮಾಡಲು ಶುರುಮಾಡಿದ್ದೇವೆ. 31 ತಾಲ್ಲೂಕುಗಳಲ್ಲಿ ಈಗ ಈಗಾಗಲೇ ಬಹುತೇಕ ಮುಗಿದಿದೆ. ಜನವರಿ ಮೊದಲ ವಾರದಿಂದ ಬಾಕಿಯಿರುವಂತಹ ಎಲ್ಲಾ 210 ತಾಲ್ಲೂಕುಗಳಲ್ಲಿ at a time ಈ ಮೂಲ ಕಡತಗಳ scanning ಶುರು ಮಾಡುತ್ತಿದ್ದೇವೆ. 'ಭೂ ಸುರಕ್ಷಾ' ಎಂದು ಒಂದು ಯೋಜನೆ ಹಾಕಿಕೊಂಡಿದ್ದು, ಅದರಲ್ಲಿ all ಈ ಹಳೆಯ ಮುಖ್ಯ ದಾಖಲೆಗಳೆಲ್ಲವನ್ನೂ ಕೂಡ scanning ಮಾಡುತ್ತಿದ್ದೇವೆ. So, that ನಾಳೆ ಕಳೆದುಹೋಗಬಾರದು, ಜನರು ಬಂದು ಕೇಳಿದಾಗ ಸಿಗಲಿಲ್ಲವೆಂದು ಹೇಳಬಾರದು, scanning ಮಾಡಿ ಅವುಗಳನ್ನು ಜನರಿಗೆ online ನಲ್ಲಿಯೇ ಬಿಟ್ಟುಬಿಡುತ್ತೇವೆ. ಅದನ್ನು ಯಾರು ಬೇಕಾದರೂ search ಮಾಡಿಕೊಳ್ಳಬಹುದು. ಈಗ ಏನು 31 ತಾಲ್ಲೂಕುಗಳನ್ನು already scanning ಮಾಡಿದ್ದೇವೆಯೋ ಅದನ್ನು ಜನವರಿ ಮೊದಲನೇ ವಾರದಲ್ಲಿ ಜನರಿಗೆ online access ಕೊಟ್ಟುಬಿಡುತ್ತೇವೆ. ಬಾಕಿಯಿರುವಂತಹ 210

ತಾಲ್ಲೂಕುಗಳ scanning ಅನ್ನು ಜನವರಿ ಮೊದಲನೇ ವಾರದಲ್ಲಿ ಪ್ರಾರಂಭ ಮಾಡುತ್ತಿದ್ದೇವೆ. ಮುಂದಿನ ವರ್ಷಾಂತ್ಯಕ್ಕೆ ಅದನ್ನು complete ಮಾಡಿ ಇಷ್ಟೂ ದಾಖಲೆಗಳನ್ನು online ನಲ್ಲಿ ಹಳೆಯ ದಾಖಲೆಗಳ ಜೊತೆಗೆ ಜನರಿಗೆ ಬಿಟ್ಟುಬಿಡುತ್ತೇವೆ. ಇನ್ನು ಸರ್ವೆ ದಾಖಲೆಗಳು ಇದೆ. ಟಿಪ್ಪಣಿ, ಆಕಾರ್-ಬಂದ್‌ಗಳಿವೆ, ಅವುಗಳನ್ನೂ ಕೂಡ scanning and digitalisation ಮಾಡುತ್ತಿದ್ದೇವೆ. ಆಕಾರ್-ಬಂದ್ ಕೆಲಸಕ್ಕೆ ಸಂಬಂಧಿಸಿದಂತೆ 97-98% digitisation ಈಗ already ಮಾಡಿದ್ದೇವೆ, campaign mode ನಲ್ಲಿ ಮಾಡಿದ್ದೇವೆ. Next ಟಿಪ್ಪಣಿ ಕಾಪಿಗಳನ್ನು ಕೂಡ scanning ಮಾಡುವುದಕ್ಕೆ ಅವರಿಗೆ ಹಣ ಒದಗಿಸಿಕೊಟ್ಟಿದ್ದೇವೆ. ಇದನ್ನೆಲ್ಲಾ scan ಮಾಡಿ ಶಾಶ್ವತವಾಗಿ ಉಳಿಯುವಂತೆ ಮಾಡುತ್ತಿದ್ದೇವೆ. ಏಕೆಂದರೆ ಕೆಲವು 100-150 ವರ್ಷಗಳ ಹಳೆಯ ದಾಖಲೆಗಳಿವೆ. ಮುಟ್ಟಿದರೆ ಪುಡಿಯಾಗುತ್ತದೆ, ಅಂತಹ ದಾಖಲೆಗಳಿವೆ. ಇವುಗಳೆಲ್ಲವನ್ನೂ ಕೂಡ scanning ಮಾಡಿ ಶಾಶ್ವತವಾಗಿ ಉಳಿಯುವಂತೆ, ಕಳೆದು ಹೋಗದಂತೆ, ಹಾಳಾಗದಂತೆ ಸಂರಕ್ಷಣೆ ಮಾಡುವ 'ಭೂಸುರಕ್ಷಾ' ಎನ್ನುವ ಒಂದು ಯೋಜನೆಯನ್ನು ಚಾಲನೆ ಮಾಡಿದ್ದೇವೆ. ಈಗ pilot ಮಾಡಿದ್ದೇವೆ. Next ಇಡೀ ರಾಜ್ಯದಲ್ಲಿ ಈ ಯೋಜನೆ ಜಾರಿಗೆ ತರುತ್ತೇವೆ. Survey records, revenue records ಇವೆ. ಎರಡನೆಯದಾಗಿ, ತಾವು ಕೇಳಿದ್ದು ಏನೆಂದರೆ, 1 to 5 ಇಲ್ಲದೇ 6 to 10 ಮಾಡಿದ್ದಾರೆಂದು ಆಗಿದೆ. ಕೆಲವು ಕಡೆಗಳಲ್ಲಿ ಆಗಿದೆ. ಮಾನ್ಯ ಎಂ.ಎಲ್.ಅನಿಲ್ ಕುಮಾರ್‌ರವರು ಹೇಳಿದಂತಹ ಒಂದು ಪ್ರಕರಣ ಅದರಲ್ಲಿ ಸೇರಿದೆ. ದಯವಿಟ್ಟು, ಅದನ್ನು ಕೊಡಿ. ಯಾವುದಾದರೂ ಇದ್ದರೆ ಕೊಟ್ಟರೆ ಅಧಿಕಾರಿಗಳ ಮೇಲೆ ನಾವು ಕ್ರಮ ಜರುಗಿಸುತ್ತೇವೆ. ಅಲ್ಲಿ, ಇಲ್ಲಿ ಎಲ್ಲೋ ಒಂದೊಂದು ಆಗಿದೆ, ಇಲ್ಲವೆಂದು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಆದರೆ, general ಆಗಿ ಹೇಳುವುದಕ್ಕಿಂತ case by case ಅದನ್ನು handle ಮಾಡುವಂತಹದ್ದು ಒಳ್ಳೆಯದು. ಮೂರನೆಯದು, ಏನೆಂದರೆ, manual ಆಗಿ ಕೂಡ ತಾವೆಲ್ಲಾ records ಇಟ್ಟುಕೊಳ್ಳಬೇಕೆಂದು ಹೇಳಿದ್ದೀರಿ. ಏಕೆಂದರೆ, virus ಬಂದು data ಹೋಗಿಬಿಡುತ್ತದೆ ಎನ್ನುವ ಕಾರಣಕ್ಕೆ ಆ ರೀತಿ ಹೇಳಿದ್ದೀರಿ. ನಮ್ಮ ಅಧಿಕಾರಿಗಳು technical experts ಇದ್ದಾರೆ, ಅವರ ಮಾತಿನ ಮೇಲೆ ನಂಬಿಕೆ ಇಟ್ಟಿದ್ದೇನೆ. ನಮ್ಮದು ಇದೆಲ್ಲಾ ಏನಿದೆ ಅದರ ಬಗ್ಗೆ ಅವರು ಎಲ್ಲಿ ಇದನ್ನು storage ಮಾಡುತ್ತಾರೆಯೇ ಅದಕ್ಕೆ ತುಂಬಾ ಸುರಕ್ಷಿತಾ ಕ್ರಮಗಳನ್ನು ತೆಗೆದುಕೊಂಡಿದ್ದಾರೆ. ಹಾಗಾಗಿ, digital records ಯಾವುದೇ ಕಾರಣಕ್ಕೂ ಹಾಳಾಗುವುದಿಲ್ಲ ಎನ್ನುವಂತಹ ಭರವಸೆ ನೂರಕ್ಕೆ ನೂರು ನನಗೆ ಇದೆ. ಆದರೂ ಕೂಡ ತಾವು ಹೇಳಿದ ಮಾತನ್ನು ನಾವು ಸರಿಸುತ್ತಿಲ್ಲ. ಯಾವುವು ಕೆಲವು ಪ್ರಮುಖ ದಾಖಲೆಗಳಿವೆಯೋ ಅಂದರೆ, ಈ land grant records, ಟಿಪ್ಪಣಿ, ಆಕಾರ್-ಬಂದ್ ಇಂತಹ ಮೂಲ ಕಾಗದದಲ್ಲಿರುವಂತಹ ಕಡತಗಳನ್ನು ಚೆನ್ನಾಗಿ ಸಂರಕ್ಷಣೆ ಮಾಡಬೇಕೆಂದು ನಾವು ಸುಮಾರು ರೂ.100 ಕೋಟಿಗಳಷ್ಟು ಖರ್ಚು ಮಾಡಿ ಎಲ್ಲಾ ತಾಲ್ಲೂಕುಗಳಿಗೂ Compactors ಅನ್ನು ಕೊಡುತ್ತಿದ್ದೇವೆ. Compactors ನಲ್ಲಿ ಈ ಕಡತಗಳನ್ನು ಇಟ್ಟರೆ ಅಲ್ಲಿ ಬಾಳಿಕೆ ಬರುತ್ತದೆ. ಅದರ ಜೊತೆಗೆ ಹೆಚ್ಚಿಗೆ storage ಮಾಡುವುದಕ್ಕೂ ಆಗುತ್ತದೆ. ಈಗಾಗಲೇ ಟೆಂಡರ್ ಕರೆದಿದ್ದೇವೆ. ಎಲ್ಲಾ ತಾಲ್ಲೂಕು ಕಚೇರಿಗಳಲ್ಲಿ ಬಹಳ important ಕಡತಗಳನ್ನು ಸರಿಯಾಗಿ ವೈಜ್ಞಾನಿಕವಾಗಿ ಇಡುವುದಕ್ಕೆ Compactors ಅನ್ನು purchase ಮಾಡುತ್ತಿದ್ದೇವೆ. ಹಾಗಾಗಿ, ಎಲ್ಲಾ ತಾಲ್ಲೂಕು ಕಛೇರಿಗಳಿಗೂ ಕೊಟ್ಟು ಕೆಲವು

important documents ಅನ್ನು Compactor ನಲ್ಲಿಟ್ಟು ಅದನ್ನು long life ಇರುವಂತೆ ಹಾಗೂ ಸಂರಕ್ಷಣೆ ಮಾಡುವಂತೆ ಮಾಡುತ್ತಿದ್ದೇವೆ. ಅದರ ಜೊತೆಗೆ ಅದನ್ನೆಲ್ಲಾ scan ಮಾಡುವುದರಿಂದ ಪದೇ ಪದೇ physical records ಮುಟ್ಟುವ ಅವಶ್ಯಕತೆ ಹೊರಟು ಹೋಗುತ್ತದೆ. ಒಂದು ಬಾರಿಗೆ scan ಮಾಡಿಬಿಟ್ಟರೆ ಅದನ್ನು online ನಲ್ಲಿಯೇ ನೋಡಿಕೊಳ್ಳಬಹುದು. ಪದೇ ಪದೇ ನಾವು ಹೋಗಿ physical records ಮುಟ್ಟಿದರೆ ಕಳೆದು ಹೋಗುತ್ತದೆ ಇಲ್ಲವೇ ಹಾಳಾಗುವುದು ಆಗುತ್ತದೆ. ಹಾಗಾಗಿ, scanning ಮಾಡುವುದರಿಂದ ಅವುಗಳ life span ಅನ್ನು ಕೂಡ ಹೆಚ್ಚಿಗೆ ಮಾಡುವುದಕ್ಕೆ ಸಾಧ್ಯವಾಗುತ್ತದೆ.

ಮಾನ್ಯ ಸಭಾಪತಿಯವರೆ, ಹಾಗಾಗಿ ಈ ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳುತ್ತಿದ್ದೇವೆ. ಅವರು ಹೇಳಿದಂತಹ ಎಲ್ಲಾ ಅಂಶಗಳೂ ಕೂಡ ಸಾರ್ವಜನಿಕರ ಹಿತದಲ್ಲಿವೆ. ಖಂಡಿತವಾಗಿ ಅದನ್ನು follow up ಮಾಡುತ್ತೇವೆ.

**ಶ್ರೀ ಸುನೀಲ್ ವಲ್ಯಾಪುರ್:** ಮಾನ್ಯ ಸಭಾಪತಿಯವರೆ, ಒಂದೇ ಒಂದು ವಾಕ್ಯದಲ್ಲಿ ಮುಗಿಸುತ್ತೇನೆ. ಇ-ಸ್ವತ್ತು ಮತ್ತು ಸ್ವಾಮಿತ್ವದ ಬಗ್ಗೆ ಜನರು confusion ನಲ್ಲಿದ್ದಾರೆ. ಅದರ ಬಗ್ಗೆ ತಾವು ಸ್ಪಷ್ಟೀಕರಣ ಕೊಡಲಿಲ್ಲ.

**ಶ್ರೀ ಕೃಷ್ಣಭೈರೇಗೌಡ:** ಮಾನ್ಯ ಸಭಾಪತಿಯವರೆ, ಕಳೆದ ಸರ್ಕಾರದಲ್ಲಿ ಸ್ವಾಮಿತ್ವವನ್ನು ಮಧ್ಯದಲ್ಲಿ ಏಕಾಏಕಿ ಯಾರೋ ಕೆಲವರು ತಕರಾರು ಮಾಡಿದರು ಎಂದು ನಿಲ್ಲಿಸಿಬಿಟ್ಟರು. ಅದನ್ನು ನಿಲ್ಲಿಸಬಾರದಾಗಿತ್ತು. ಅದು ಒಳ್ಳೆಯ ಯೋಜನೆಯಾಗಿತ್ತು. ಹಾಗಾಗಿ, ಈಗ ಸಧ್ಯಕ್ಕೆ ಎರಡೂ system at a time maintain ಮಾಡಿದರೆ ಎಲ್ಲಾ duplication ಆಗುತ್ತದೆ. ಇ-ಸ್ವತ್ತು ಮೇಲೆ ಒಂದು sale ಮಾಡುತ್ತಾರೆ. ಆಮೇಲೆ ಹೋಗಿ ಸ್ವಾಮಿತ್ವ PID (Property Identification Number) ಮೇಲೆ ಅದನ್ನೇ ಇನ್ನೊಬ್ಬರಿಗೆ ಮಾರುವಂತಹ fraud ಆಗುತ್ತದೆ. ಹಾಗಾಗಿ, ನಾನು ಮಂಗಳೂರಿನಲ್ಲಿ ಕೆಲವು ಕಡೆಗಳಲ್ಲಿ ಸೂಚನೆ ಕೊಟ್ಟಿದ್ದೇನೆ. ದಯವಿಟ್ಟು, ಒಂದನ್ನೇ follow ಮಾಡಬೇಕು. ಯಾವುದನ್ನಾದರೂ follow ಮಾಡಿ. ನೀವು local ನಲ್ಲಿ ಒಂದೇ system follow ಮಾಡಬೇಕೆಂದು ಹೇಳುತ್ತೇನೆ. Municipality ಯವರು ಯಾವುದನ್ನಾದರೂ ಹೇಳಿದರೆ ಅದನ್ನು ನಾವು follow ಮಾಡುತ್ತೇವೆ. ಏಕೆಂದರೆ, ನಾವು registering authority ಅಷ್ಟೆ. Issuing authority ಬಂದು ಅವರು ಇರುತ್ತಾರೆ. ಹಾಗಾಗಿ, ಮಂಗಳೂರಿನಲ್ಲಿ ಇವರೆಲ್ಲರನ್ನೂ ನಾವು ಇ-ಸ್ವತ್ತಿನ ಮೇಲೆ ಮಾಡೋಣ, ಏಕೆಂದರೆ, ಅವರಿಗೆ ಸ್ವಾಮಿತ್ವ ಕಾರ್ಡ್ ಅಂದರೆ property document ಎಂದು ಏನು ಹೇಳುತ್ತೇವೆಯೋ ಆ ಕಾರ್ಡ್ ಅಂದರೆ PR card ಎಲ್ಲರಿಗೂ issue ಆಗಿಲ್ಲ. ಹಾಗಾಗಿ, ಇ-ಸ್ವತ್ತು ಎಲ್ಲರಿಗೂ ಇದೆ ಎಂದು ಹೇಳಿದ್ದಾರೆ. ಅಲ್ಲಿ local Municipality ಯವರು ಏನು ಹೇಳುತ್ತಾರೆಯೋ ಅದನ್ನು ನಾವು follow ಮಾಡುತ್ತೇವೆ.

**ಉಪ ಸಭಾಪತಿಯವರು:-** ಮಾನ್ಯ ರಾಜೇಂದ್ರ ರಾಜಣ್ಣನವರ ಪರವಾಗಿ ಮಾನ್ಯ ಎಂ.ಎಲ್.ಅನಿಲ್ ಕುಮಾರ್‌ವರು ಮಾತನಾಡಿ. ಸರಿ ಅವರು ಸದನದಲ್ಲಿ ಈಗ ಇಲ್ಲ. ಈಗ ತಡೆಹಿಡಿಯಲಾದ ಪ್ರಶ್ನೆಗಳು. ಮಾನ್ಯ ಸುನೀಲ್ ವಲ್ಯಾಪುರ್‌ರವರು ಮಾತನಾಡಲಿ.

**ಆ) ತಡೆಹಿಡಿಯಲಾದ ಪ್ರಶ್ನೆಗಳು**

**ಪ್ರಶ್ನೆ ಸಂಖ್ಯೆ: 25**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಸುನೀಲ್ ವಲ್ಯಾಪುರ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, 1959ರಲ್ಲಿ ಕಂದಾಯ ಇಲಾಖೆಯಿಂದ ಸುಮಾರು 137 ರೈತರಿಗೆ ಅಂದರೆ ಅದರಲ್ಲಿಯೂ ಸಹ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದಲ್ಲಿ ಬರುವಂತಹ ಕೆಲವು ರೈತರಿಗೆ 1959ರಲ್ಲಿ ಕಂದಾಯ ಇಲಾಖೆಯಿಂದ grant ಮಾಡಿಕೊಟ್ಟಿದ್ದೀರಿ. ಇದರ ಜೊತೆಗೆ ತಮ್ಮ Deputy Commissioner ಗಳು 2010ರ ಇಸ್ವಿಯಲ್ಲಿ ಅದನ್ನು ಅರಣ್ಯ ಭೂಮಿಯೆಂದು consider ಮಾಡಿ ಅಲ್ಲಿ ತೊಂದರೆಯಾಗುತ್ತಿದೆ. ಅದಕ್ಕೆ ನಾನು ಮಾನ್ಯ ಅರಣ್ಯ ಸಚಿವರಿಗೂ ಸಹ ಇದರ ಬಗ್ಗೆ ಪ್ರಶ್ನೆ ಹಾಕಿದ್ದೆ. ಅವರು ಈ ಪ್ರಶ್ನೆಯನ್ನು ತಮ್ಮ ಕಂದಾಯ ಇಲಾಖೆಗೆ ವರ್ಗಾವಣೆ ಮಾಡಿದ್ದಾರೆ. ಇದರ ಬಗ್ಗೆ ತಾವು ಉತ್ತರ ಕೊಡಬೇಕೆಂದು ತಮ್ಮಲ್ಲಿ ಮಾನ್ಯ ಸಭಾಪತಿಯವರ ಮೂಲಕ ಕೇಳಬಯಸುತ್ತೇನೆ.

**ಶ್ರೀ ಕೃಷ್ಣಭೈರೇಗೌಡ (ಕಂದಾಯ ಸಚಿವರು):-** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರ ಕಾಳಜಿ ಸರಿಯಿದೆ. ನೀವು grant ಮಾಡಿದ್ದೀರಿ. ಆಮೇಲೆ 2010ರಲ್ಲಿ ಅಂದು ಜಿಲ್ಲಾಧಿಕಾರಿಗಳು grant ಅನ್ನು ರದ್ದು ಮಾಡಿದ್ದಾರೆ. ಏಕೆ ರದ್ದು ಮಾಡಿದ್ದಾರೆಂದರೆ, 1934ರಲ್ಲಿಯೇ ಇದು ಅರಣ್ಯ ಎಂದು notification ಆಗಿದೆ. ಹಾಗಾಗಿ, ಇದು ಅರಣ್ಯವೆಂದು ಉಳಿದ 19 ಜನರಿಗೆ rights ಅನ್ನು confirm ಮಾಡುವಂತಹ ಕೆಲಸ ಮಾಡುತ್ತಿದ್ದೇವೆ. ಆದರೆ, ಯಾರು forest notification ವ್ಯಾಪ್ತಿಗೆ land ಬರುವಂತಹವರನ್ನು 2010ರಲ್ಲಿಯೇ ಜಿಲ್ಲಾಧಿಕಾರಿಗಳು ರದ್ದು ಮಾಡಿದ್ದಾರೆ. 2010ರಲ್ಲಿಯೇ ರದ್ದಾಗಿದೆ. ಅದು ಈಗ ಆಗಿರುವುದಲ್ಲ. ಹಾಗಾಗಿ, ಅವರಿಗೆ ತೊಂದರೆಯಾಯಿತಲ್ಲಾ ಎಂದು ಸದಸ್ಯರು ಕೇಳುವುದು ಸರಿಯಿದೆ. ಆದರೆ, ಈ ಅರಣ್ಯ ಭೂಮಿ ವಿಷಯ ಬಂದಾಗ ನಿಮಗೂ ಎಲ್ಲಾ ಗೊತ್ತಿದೆ. ನಾನು ಏನನ್ನೂ ಹೇಳುವುದಕ್ಕೆ ಕಷ್ಟವಾಗುತ್ತದೆ. ಕಾನೂನು ಬಿಟ್ಟು ಹೇಳಿದರೆ ಇಲ್ಲಿ ಪ್ರಯೋಜನವಾಗುವುದಿಲ್ಲ, ಕಾನೂನು ಉಲ್ಲಂಘನೆಯಾಗುತ್ತದೆ. ಆದರೆ, 1934ರಲ್ಲಿ ಆ ಜಾಗ forest ಗೆ notify ಆಗಿರುವುದಂತೂ ನಿಜ. ಅದರೆ, ಹಿನ್ನೆಲೆಯಲ್ಲಿ 2010ರ ಅಂದಿನ ಸರ್ಕಾರದ ಸೂಚನೆಯಲ್ಲಿ ಜಿಲ್ಲಾಧಿಕಾರಿಗಳು ಅದನ್ನು ಮಾಡಿದ್ದಾರೆ. ಇಷ್ಟು ಮಾಹಿತಿ ಕೊಡಬಹುದು. ಈಗ ಏನು ಮಾಡುತ್ತೀರಿ ಎಂದು ಕೇಳಿದರೆ ನಾನು ಏನು ಮಾಡಬೇಕೆಂದು ತಾವೇ ಸಲಹೆ ಕೊಡಬೇಕು.

**ಶ್ರೀ ಸುನೀಲ್ ವಲ್ಯಾಪುರ್:** ಮಾನ್ಯ ಸಭಾಪತಿಯವರೇ, ತಮ್ಮ ಮೂಲಕ ಮಾನ್ಯ ಸಚಿವರಿಗೆ ಹೇಳಬಯಸುವುದೇನೆಂದರೆ, 1959ರಲ್ಲಿ ತಾವು ಕಂದಾಯ ಇಲಾಖೆಯಲ್ಲಿ ಅವರಿಗೆ grant ಅನ್ನು ಕೊಟ್ಟಿದ್ದೀರಿ. ಮುಂದೆ 2009ರಲ್ಲಿ ಮತ್ತು 2011ರಲ್ಲಿ ನಿಮ್ಮ Deputy Commissiner ರವರು ಮಾಡಿದ್ದಾರೆ. ಆಗ forest land ಇತ್ತು, ಈಗ ಏನು ಹೇಳುತ್ತಿದ್ದೀರಿ ಎಂದರೆ 1932ರಲ್ಲಿ ಅದು forest land ಇತ್ತು ಎಂದು ಹೇಳುತ್ತಿದ್ದೀರಿ.

ಆ forest land ಇರುವಾಗ ನೀವು ಮತ್ತೆ 1959ರಲ್ಲಿ ಮತ್ತೆ ಅವರಿಗೆ ಕಂದಾಯದ grant ಹೇಗೆ ಮಾಡಿಕೊಟ್ಟಿದ್ದೀರಿ, ಆಂದಿನಿಂದ ಇವತ್ತಿನವರೆಗೂ ಅವರು ಅಲ್ಲಿಯೇ ಇದ್ದಾರೆ. ಅವರ ಉಪಜೀವನ ಮುಂದೆ ಹೇಗಿರುತ್ತದೆ? ಅದಕ್ಕಾಗಿ ಇದಕ್ಕೆ ನೀವು ಹೇಳಿದ್ದೀರಿ. Forest rules, regulations ಬಹಳಷ್ಟು complicated ಇರುವುದು ನನಗೂ ಗೊತ್ತಿದೆ. ಆದರೆ, ತಾವು ಕಂದಾಯ ಇಲಾಖೆಯಿಂದ ಸರ್ಕಾರಕ್ಕೆ ವಿನಂತಿ ಮಾಡುತ್ತೇನೆ. ಆ 150 ಕುಟುಂಬಗಳೇನಿವೆಯೋ ಅಂದರೆ ತೀರಾ ಬಡವರಿದ್ದಾರೋ ಅವರಿಗೆ ಅರಣ್ಯ ಇಲಾಖೆಯವರು ಯಾವ ರೀತಿ ತೊಂದರೆ ಕೊಡುತ್ತಿದ್ದಾರೆಂದು ನೋಡಿ. ಅವರು ಮನೆಯ ಬಾಗಿಲಿಗೆ paint ಹಚ್ಚಿಕೊಳ್ಳಬೇಕೆಂದರೂ ಅವರಿಗೆ ಜಾಗ ಕೊಡುತ್ತಿಲ್ಲ. ಅಷ್ಟೊಂದು ತೊಂದರೆ ಕೊಡುತ್ತಿದ್ದಾರೆ. ತಾವು ಹೇಳಿದ ಹಾಗೆ forest rules, regulations follow ಮಾಡುತ್ತಾರೆ. ಆದರೆ, substitute ಅವರಿಗೆ alternate ಆಗಿ ಎಲ್ಲಾದರೂ ಜಾಗ ಕೊಡಬೇಕೆಂದು ತಮ್ಮಲ್ಲಿ ವಿನಂತಿ ಮಾಡುತ್ತೇನೆ.

**ಶ್ರೀ ಕೃಷ್ಣಭೈರೇಗೌಡ:** ಮಾನ್ಯ ಸಭಾಪತಿಯವರೆ, ಅವರು ತೊಂದರೆ ಕೊಡುತ್ತಿರುವ ಬಗ್ಗೆ ಮಾನ್ಯ ಸದಸ್ಯರು ಏನು ಹೇಳಿದ್ದಾರೆಯೋ ಅದು ಕೂಡ ವಾಸ್ತವದಿಂದ ಕೂಡಿದೆ. ಅದರ ಜೊತೆಗೆ ಅವರ ಸಲಹೆ ಕೂಡ ಇದಕ್ಕೆ ಏನಾದರೂ ಪರ್ಯಾಯ ವ್ಯವಸ್ಥೆ ಮಾಡಿ ಎನ್ನುವಂತಹದ್ದಾಗಿದೆ. ಅದರ ಬಗ್ಗೆ ಕೂಡ ನಾವು ಸಹಾನುಭೂತಿಯಿಂದ ಪರಿಗಣಿಸುತ್ತೇವೆ. ಆದರೆ, ಒಂದು Writ Petition ಹೈಕೋರ್ಟ್‌ನಲ್ಲಿ ನಡೆಯುತ್ತಿದೆ. ನೋಡೋಣ, matter sub-judice ಇರುವಾಗ ನಾನು ಹೆಚ್ಚಿಗೆ ಹೇಳುವುದೂ ಕೂಡ ಸೂಕ್ತವಾಗುವುದಿಲ್ಲ. ಕೋರ್ಟ್‌ನ ನಿರ್ದೇಶನ ಏನು ಬರುತ್ತದೆ ಎಂದು ನೋಡಿಕೊಂಡು ಇನ್ನು ಏನಾದರೂ ಮಾಡುವುದಕ್ಕೆ ಆಗುತ್ತದೆಯೇ ಎಂದು ಒಂದು open mind ನಿಂದ ನಾವು ಇಟ್ಟುಕೊಳ್ಳುತ್ತೇವೆ. ಏಕೆ ಆಯಿತು ಎಂದು ತಾವು ಕೇಳಿದ್ದೀರಿ. ಅದು ತಮಗೂ ಗೊತ್ತಿದೆ. ಇದು ಏತಕ್ಕೆ ಆಯಿತು ಎಂದರೆ 1934ರಲ್ಲಿ ಅರಣ್ಯ ಇಲಾಖೆಗೆ ಕೊಟ್ಟಾಗ ಪಹಣಿಯಲ್ಲಿ forest entry ಮಾಡಿಲ್ಲ.

**(ಮುಂದು)**

**(953) 18.12.2024 01.40 ಎಸ್‌ವಿ-ಆರ್‌ಎನ್** **(ಉಪ ಸಭಾಪತಿಯವರ ಉಪಸ್ಥಿತಿ)**

**ಶ್ರೀ ಕೃಷ್ಣ ಬೈರೇಗೌಡ (ಮುಂದು):**

ಸರ್ಕಾರ ಎಂದು ಬಂದಿತ್ತು. ಸರ್ಕಾರ ಎಂದು ಇದೆಯೆಂದು ಆಗ grant ಆಯಿತು. 1980ರ ಕಾನೂನು, 1996ರ ಗೋದಾವರ್ಮನ್ ಕೇಸ್‌ನಲ್ಲಿ ಸುಪ್ರೀಂ ಕೋರ್ಟ್ ಆದೇಶದ ಪ್ರಕಾರ ಈ ಎಲ್ಲಾ ಸಮಸ್ಯೆಗಳಾಗುತ್ತಿವೆ. ಇವಿಷ್ಟು ತಮಗೆ ಗೊತ್ತಿದೆ. ತಮಗೆ ಗೊತ್ತಿಲ್ಲದೆ ಇರುವುದು ಏನೂ ಇಲ್ಲ. ಕೇಳಿರುವುದರಿಂದ ignore ಮಾಡುವ ಹಾಗೆಯೂ ಇಲ್ಲ. ಹಾಗಾಗಿ ಹೇಳುತ್ತಿದ್ದೇನೆ.

**ಪ್ರಶ್ನೆ ಸಂಖ್ಯೆ 951**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ವೈ.ಎಂ.ಸತೀಶ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ನಮ್ಮ ಭಾಗದಲ್ಲಿ ಮೆಣಸಿನಕಾಯಿಯನ್ನು ಬೆಳೆಯುತ್ತಿರುವ ರೈತರಿಗೆ ಬಹಳ ತೊಂದರೆಯಾಗಿದೆ. ಇಲ್ಲಿ ಬೆಳೆದದ್ದನ್ನು ಬ್ಯಾಡಗಿ ಅಥವಾ ಬೇರೆ ಮಾರುಕಟ್ಟೆಗೆ ತೆಗೆದುಕೊಂಡು ಹೋಗಬೇಕು. ನಮ್ಮ ಕಡೆ ಮಾರುಕಟ್ಟೆ ಇಲ್ಲ. ನಮ್ಮ ರೈತರು unscrupulous middlemen ಗಳಿಂದ ಮೋಸ ಹೋಗುತ್ತಿದ್ದಾರೆ. ಬಳ್ಳಾರಿಯಲ್ಲಿ ಮೆಣಸಿನಕಾಯಿ ಮಾರುಕಟ್ಟೆ ಮಾಡಬೇಕೆಂದು 26 ಎಕರೆ ಜಮೀನು identify ಆಗಿದೆ. ಎರಡು ಬಾರಿ ಟೆಂಡರ್ ಕರೆಯಲಾಗಿದೆ. ಎರಡು ಬಾರಿಯೂ ಯಾರೂ participate ಮಾಡಿರುವುದಿಲ್ಲ. It is under PPP (Public Private Partnership) model. ನನ್ನ ಪ್ರಶ್ನೆ ಮತ್ತು ಮಾನ್ಯ ಸಚಿವರಲ್ಲಿ ವಿನಂತಿಯೇನೆಂದರೆ ನಮ್ಮ ರೈತರಿಗೆ ಹೇಗೆ ಸಹಾಯ ಮಾಡುತ್ತೀರಿ? ಹೊಸದಾಗಿ ಬರುವ start ಆಗುವವರೆಗೆ existing market ನಲ್ಲಿ ಚಿಕ್ಕದಾಗಿ ಜಾಗ ಕೊಟ್ಟು chilly market ಮಾಡಿ ರೈತರಿಗೆ ಸಹಾಯ ಮಾಡುವುದಕ್ಕೆ ಆಗುವುದೇ?

**ಶ್ರೀ ಶಿವಾನಂದ ಪಾಟೀಲ (ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ, ಕೃಷಿ ಮಾರುಕಟ್ಟೆ ಸಚಿವರು):-** ಮಾನ್ಯ ಸಭಾಪತಿಯವರೆ, ಈಗಾಗಲೇ 2021-22ನೇ ಸಾಲಿನಲ್ಲಿ ಇದು PPP model ನಲ್ಲಿ ಕರೆದಿದ್ದು, ದಿನಾಂಕ 15.11.2022, ದಿನಾಂಕ 21.12.2022ಗಳಂದು ಟೆಂಡರ್ ಕರೆಯಲಾಗಿತ್ತು. ದುರ್ದೈವವಶಾತ್ ಯಾರೂ ಪಾಲ್ಗೊಳ್ಳಲಿಲ್ಲ. ಮೊನ್ನೆ ಕೂಡ ನಬಾರ್ಡ್ thirtieth trenches ನಲ್ಲಿ ಇದನ್ನು propose ಮಾಡಿದ್ದೆವು. Unfortunately, ಅವರು cold storage ಗೆ ದುಡ್ಡು ಕೊಡುತ್ತೇವೆ, infrstructure ಗೆ ಕೊಡುವುದಿಲ್ಲ ಎಂದು refuse ಮಾಡಿದ ಮೇಲೆ ಸುದೈವದಿಂದ ಬಳ್ಳಾರಿಯ ಆಲದಹಳ್ಳಿಗೆ ಒಂದು cold storage ಅನ್ನು ಮಂಜೂರು ಮಾಡಲಾಗಿದೆ. ರೂ.11 ಕೋಟಿ ವೆಚ್ಚದಲ್ಲಿ cold storage ಅನ್ನು ಕಟ್ಟಲಾಗುತ್ತಿದೆ. ಅದನ್ನು ಬೇಕಾದರೆ ಇದೇ ಮಾರ್ಕೆಟ್‌ನಲ್ಲಿ ಕಟ್ಟಲಾಗುವುದು. ಜೊತೆಗೆ ನೀವು ಕೊಟ್ಟಿರುವ ಪ್ರಸ್ತಾವನೆಗೆ minimum infrastructure ನಾನು create ಮಾಡಬೇಕಾದರೆ ರೂ.15-20 ಕೋಟಿಗಳು ಬೇಕು. ತಕ್ಷಣ ನನಗೆ ಆ ಹಣ ಒದಗಿಸಲಿಕ್ಕಾಗದಿದ್ದರೂ ಕೂಡ ಬಳ್ಳಾರಿ ಎ.ಪಿ.ಎಂ.ಸಿ.ಯಲ್ಲಿ ರೂ.4-4.5 ಕೋಟಿ ದುಡ್ಡು ಇದೆ. ತಾವು ಅಲ್ಲಿರುವ ಆಡಳಿತ ಮಂಡಳಿಯವರನ್ನು ವಿನಂತಿ ಮಾಡಿಕೊಳ್ಳುವುದರ ಜೊತೆಗೆ ನಾನು ಅವರಿಗೆ ಸಲಹೆ ಕೊಡುತ್ತೇನೆ. ಅಲ್ಲಿಂದ ಸ್ವಲ್ಪ ದುಡ್ಡು ತೆಗೆದು minimum infrastructure ಏನು ಮಾಡಲಿಕ್ಕಾಗುತ್ತದೆಯೋ water supply, UGD, toilet blocks, roads ಅಂಥವುಗಳನ್ನು ಮಾಡೋಣ. ನೀವು ಕಲ್ಯಾಣ ಕರ್ನಾಟಕ ಭಾಗಕ್ಕೆ ಸೇರಿದವರಾಗಿರುವುದರಿಂದ ನೀವು ಕೆಕೆಆರ್‌ಡಿಬಿಯ ಅಧ್ಯಕ್ಷರಿಗೆ ಮತ್ತು ಆ ಭಾಗದ ಶಾಸಕರಿಗೆ ಮನವಿಯನ್ನು ಮಾಡಿ. ನಾನು ತಮಗೆ ಸಹಕಾರ ಕೊಡುತ್ತೇನೆ. ಇದನ್ನು ಆದಷ್ಟು ತೀವ್ರವಾಗಿ ಪ್ರಾರಂಭ ಮಾಡುವ ಪ್ರಯತ್ನ ಮಾಡೋಣ. ನಿಮ್ಮಲ್ಲಿ 45,000 ಹೆಕ್ಟೇರ್‌ನಲ್ಲಿ ಮೆಣಸಿನಕಾಯಿಯನ್ನು ಬೆಳೆಯುತ್ತಾರೆ. ಆದ್ದರಿಂದ ಇದಕ್ಕೆ ನನ್ನ

ಸಹಾಯ ಮತ್ತು ಸಹಕಾರ ಇದೆ. ತಾವು ಕೆಕೆಆರ್‌ಡಿಬಿಯವರ ಜೊತೆ ಮಾತನಾಡಿ. ನಾನು ಕೂಡ ಮಾತನಾಡುತ್ತೇನೆ.

**ಶ್ರೀ ವೈ.ಎಂ.ಸತೀಶ್:-** ಮಾನ್ಯ ಸಚಿವರೆ, temporary ಆಗಿ ಮಾಡಲಿಕ್ಕೆ ಏನಾದರೂ ಸಾಧ್ಯವಿದೆಯೇ?

**ಶ್ರೀ ಶಿವಾನಂದ ಪಾಟೀಲ:-** ಮಾನ್ಯ ಸದಸ್ಯರೆ, temporary ಆಗಿ existing market ನಲ್ಲಿ ಸ್ವಲ್ಪ ಜಾಗ ಇದ್ದರೆ ನಾನು ಮಾಡಿಕೊಡುತ್ತೇನೆ. ಇರದಿದ್ದರೂ 23 ಎಕರೆ ಜಾಗವನ್ನು ನೀವು acquire ಮಾಡಿದ್ದೀರಿ. ಅಲ್ಲಿಯೇ ಪ್ರಾರಂಭ ಮಾಡಿಬಿಟ್ಟರೆ once for all ಪ್ರಾರಂಭವಾಗಿ ಬಿಡುತ್ತದೆ. Cold storage ಅನ್ನು ಅಲ್ಲಿಯೇ ಕಟ್ಟಲಾಗುವುದು.

**ಶ್ರೀ ವೈ.ಎಂ.ಸತೀಶ್:-** ಧನ್ಯವಾದಗಳು.

**ಪ್ರಶ್ನೆ ಸಂಖ್ಯೆ 896**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಕಿಶೋರ್ ಕುಮಾರ್ ಪುತ್ತೂರು (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಆದರೆ ಉತ್ತರ ಸಮಂಜಸವಾಗಿಲ್ಲ. ಏಕೆಂದರೆ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಆಡಳಿತ ವಿಕೇಂದ್ರಿಕರಣದ ಭಾಗವಾಗಿ ನಗರ ಸ್ಥಳೀಯ ಸಂಸ್ಥೆಗಳನ್ನು ಸ್ಥಾಪಿಸಲಾಗುತ್ತದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಡಬ, ಬಜ್ಪೆ, ಕಿನ್ನಿಗೋಳಿ ಮತ್ತು ಉಡುಪಿ ಜಿಲ್ಲೆಯ ಬೈಂದೂರುಗಳನ್ನು ಹೊಸ ಪಟ್ಟಣ ಪಂಚಾಯ್ತಿಗಳನ್ನಾಗಿ 2022ರಲ್ಲಿ ರಚಿಸಲಾಯಿತು. ಆದರೆ ಈವರೆಗೆ ಚುನಾವಣೆಯಾಗಿಲ್ಲ. ಪರೋಕ್ಷವಾಗಿ ಇದು ಅಧಿಕಾರಶಾಹಿಗೆ ಅನುವು ಮಾಡಿಕೊಟ್ಟಂತಾಗುತ್ತದೆ. ಪ್ರಜಾಪ್ರಭುತ್ವದಲ್ಲಿ ಜನರ ಸಮಸ್ಯೆಗೆ ಸ್ಪಂದಿಸಬೇಕಾದರೆ ಜನರಿಂದ ಆಯ್ಕೆಯಾದ ಜನಪ್ರತಿನಿಧಿಗಳ ಅವಶ್ಯಕತೆ ತುಂಬಾ ಇದೆ. ಆ ಕಾರಣಕ್ಕೋಸ್ಕರ ಮೀಸಲಾತಿಯ ನೆಪವನ್ನು ಹೇಳಿ ಎರಡು ವರ್ಷದಿಂದ ಚುನಾವಣೆಯಾಗಿಲ್ಲ. ಆ ಭಾಗದ ಅಭಿವೃದ್ಧಿ ಕುಂಠಿತಗೊಂಡು, ಜನರಿಗೆ ತುಂಬಾ ತೊಂದರೆಯಾಗುತ್ತಿದೆ. ಆದ್ದರಿಂದ ಸಚಿವರು ಯಾವಾಗ ಚುನಾವಣೆ ಮಾಡುತ್ತೀರಿ ಎಂಬುದನ್ನು ಹೇಳಬೇಕು.

**ಶ್ರೀ ಕೆ.ರಹೀಂ ಖಾನ್ (ಪೌರಾಡಳಿತ ಮತ್ತು ಹಜ್ ಸಚಿವರು):-** ಮಾನ್ಯ ಸಭಾಪತಿಯವರೆ, ಮಾನ್ಯ ಕಿಶೋರ್ ಕುಮಾರ್ ಅವರು ಎರಡು ಪ್ರಶ್ನೆಯನ್ನು ಕೇಳಿದ್ದಾರೆ. ಮೊದಲನೆಯ ಪ್ರಶ್ನೆಯಲ್ಲಿ ಉಡುಪಿ-ದಕ್ಷಿಣ ಕನ್ನಡದಲ್ಲಿ ಎಷ್ಟು ಸಿ.ಎಂ.ಸಿ (City Municipal Council) ಹಾಗೂ ಟಿ.ಎಂ.ಸಿ. (Town Municipal Council) ಗಳಿವೆ ಎಂದು ಕೇಳಿದ್ದಾರೆ. ಉತ್ತರವನ್ನು ಒದಗಿಸಿದ್ದೇವೆ. ಹೊಸ local bodies ಷ್ಟಾಗಿದೆ ಎಂದು ಕೇಳಿದ್ದಾರೆ. ಉಡುಪಿ-ದಕ್ಷಿಣ ಕನ್ನಡದಲ್ಲಿ ಹೊಸದಾಗಿ 4 local bodies ಆಗಿದೆ. Till date election ಏಕೆ ಆಗಿಲ್ಲ ಎಂದು ಪ್ರಶ್ನೆ ಕೇಳಿದ್ದಾರೆ. ಅದಕ್ಕೆ ಎರಡು-ಮೂರು ಕಾರಣಗಳಿವೆ. ನಮ್ಮ ಜಿಲ್ಲಾಧಿಕಾರಿಗಳಿಂದ notification and delimitation ಆಗಿ ಬರಲಿಕ್ಕೆ ತಡವಾಗಿದೆ. ಎರಡನೆಯದಾಗಿ Backward Classes Welfare Department ನಿಂದ ಜಸ್ಟೀಸ್ ಭಕ್ತವತ್ಸಲ ಕಮಿಟಿ ಎಂದು ರಚಿಸಲಾಗಿತ್ತು. ಆ ಕಮಿಟಿಯ ವರದಿ ಬರಲಿಕ್ಕೆ ಸ್ವಲ್ಪ ತಡವಾಗಿದೆ. ಯಾವಾಗ ಚುನಾವಣೆ ಮಾಡುತ್ತೀರೆಂದು ಕೇಳಿದ್ದಾರೆ. ಇನ್ನೊಂದು ತಿಂಗಳೊಳಗಾಗಿ ಚುನಾವಣೆ ಮಾಡಿಸುತ್ತೇನೆಂದು ನಾನು ತಮಗೆ ಭರವಸೆಯನ್ನು ಕೊಡುತ್ತೇನೆ.

**ಪ್ರಶ್ನೆ ಸಂಖ್ಯೆ 928**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಎಸ್.ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಮೊದಲನೆಯದಾಗಿ ಪೀಠಕ್ಕೆ ಧನ್ಯವಾದಗಳನ್ನರ್ಪಿಸುತ್ತೇನೆ. ಏಕೆಂದರೆ ಇದಕ್ಕೆ 15 ದಿನಗಳ ಕಾಲಾವಕಾಶವನ್ನು ಕೇಳಿದ್ದರು. ಮಾನ್ಯ ಸಹಕಾರ ಸಚಿವರು ಮನಸ್ಸು ಮಾಡಿ ನಮ್ಮ ಭಾವನೆಯನ್ನು ಅರ್ಥ ಮಾಡಿಕೊಂಡು ಅಧಿಕಾರಿಗಳ ಮೇಲೆ ಒತ್ತಡ ಹಾಕಿ, ಇಂದೇ ಉತ್ತರವನ್ನು ಕೊಟ್ಟಿದ್ದಾರೆ. ಅದಕ್ಕೆ ನಾನು ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಹಾಸನ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕಿನಿಂದ ಎಷ್ಟು ಸಾಲ ವಿತರಣೆ ಮಾಡಿದ್ದಾರೆ? ಮಧ್ಯಮಾವಧಿ, ಸ್ತ್ರೀಶಕ್ತಿ, SHG (Self Help Groups) ಎಷ್ಟು ಸಲ ಕೊಟ್ಟಿದ್ದಾರೆ? ಅಲ್ಪಾವಧಿ ಬೆಳೆ ಸಾಲ ಎಷ್ಟು ಕೊಟ್ಟಿದ್ದಾರೆ? ಅದಕ್ಕೆಲ್ಲಾ ಉತ್ತರವನ್ನು ಕೊಟ್ಟಿದ್ದಾರೆ. ಚನ್ನರಾಯಪಟ್ಟಣದ ಪಹಣಿಯನ್ನು ಕೇಳಿದ್ದೆನು. ಆದರೆ ವಾಸ್ತವಿಕವಾಗಿ ಅದು 16,000 ಪಹಣಿಯಾಗುತ್ತದೆ, ಕೊಡುವುದಕ್ಕೆ ಸಾಧ್ಯವಿಲ್ಲ ಎಂದು ಮಾನ್ಯ ಸಚಿವರು ನನಗೆ ವಿವರಿಸಿ ಹೇಳಿದರು. ರೂ.1088 ಕೋಟಿ ಅಲ್ಪಾವಧಿ ಬೆಳೆ ಸಾಲ ಹಾಸನ ಡಿಸಿಸಿ ಬ್ಯಾಂಕ್‌ನಿಂದ ವಿತರಣೆಯಾಗಿದೆ. ಅದರ ಪೈಕಿ ರೂ.313 ಕೋಟಿ ಕೇವಲ ಚನ್ನರಾಯಪಟ್ಟಣ ತಾಲ್ಲೂಕೊಂದರಲ್ಲಿಯೇ ಆಗಿದೆ. ಹಾಸನ ಜಿಲ್ಲೆಯಲ್ಲಿ 8 ತಾಲ್ಲೂಕು ಇದೆ. 8 ತಾಲ್ಲೂಕುಗಳಲ್ಲಿ ಕೇವಲ 1 ತಾಲ್ಲೂಕಿಗೆ ರೂ.313 ಕೋಟಿ ಸಾಲ. ಅದು ಬಿಟ್ಟರೆ ಅರಸೀಕೆರೆ ತಾಲ್ಲೂಕು ರೂ.170 ಕೋಟಿ. ಅಂದರೆ 50% ಸಾಲ ಎರಡೇ ತಾಲ್ಲೂಕಿಗೆ ವಿತರಣೆಯಾಗಿದೆ. ಇನ್ನೆಲ್ಲಿಯೂ ವಿತರಣೆಯಾಗಿಲ್ಲ. ಹಾಸನ ಜಿಲ್ಲೆಯಲ್ಲಿ ಸಕಲೇಶಪುರ, ಬೇಲೂರು, ಆಲೂರು ತಾಲ್ಲೂಕುಗಳಲ್ಲಿ ಏಲಕ್ಕಿ, ಕಾಫಿ, ಅಡಕೆ ಬೆಳೆಯುತ್ತಾರೆ. ಅಲ್ಲಿ ಕೊಟ್ಟಿರಬಹುದೇನೋ ಎಂದು ಭಾವಿಸುತ್ತೇನೆ. ಚನ್ನರಾಯಪಟ್ಟಣಕ್ಕೆ ರೂ. 313 ಕೋಟಿ ಕೊಡಲು ಯಾವ commercial crop ಇದೆ? ಏಕೆಂದರೆ ಮಾನ್ಯ ರಾಜಣ್ಣನವರು ಕೂಡ ದೀರ್ಘಾವಧಿಗೆ ತುಮಕೂರು ಡಿಸಿಸಿ ಬ್ಯಾಂಕ್‌ಗೆ ಅಧ್ಯಕ್ಷರಾಗಿದ್ದರು. ಅವರು ಕೂಡ ಸಾಲ ವಿತರಣೆಯನ್ನು ಮಾಡಿ ರೈತರಿಗೆ ನೆರವು ನೀಡಿದ್ದಾರೆ. ಅದರ ಬಗ್ಗೆ ವಿವರಿಸಬೇಕೆಂದು ಕೋರುತ್ತೇನೆ. ಮಟ್ಟಿಗಾನವಿಲೆ ಎನ್ನುವ PACS (Primary Agricultural Credit Society) Society ಚನ್ನರಾಯಪಟ್ಟಣ ತಾಲ್ಲೂಕಿನಲ್ಲಿದ್ದು, ಅಲ್ಲಿನ ಪಹಣಿಗಳಲ್ಲಿ ರೂ. 3 ಲಕ್ಷ ಸಾಲ ವಿತರಣೆಯಾಗಿದೆ ಎಂದು ಇದೆ.

(ಮುಂದು)

(954) 18.12.2024 1.50 ಕೆಜಿ ವಿಕೆ (ಉಪ ಸಭಾಪತಿಯವರ ಉಪಸ್ಥಿತಿ)

**ಶ್ರೀ ಎಸ್. ರವಿ (ಮುಂದು):**

ಆ ರೈತರಿಗೆ ಸಾಲ ತಲುಪಿಲ್ಲ. ಆ ರೈತರಿಗೆ ಸಾಲ ವಿತರಣೆಯಾಗಿರುವುದು ಗೊತ್ತಿಲ್ಲ. ಇನ್ನೊಂದು ಅರಕಲಗೂಡು ತಾಲ್ಲೂಕಿನ ಸುಮಾರು 87 ವರ್ಷದ ಶ್ರೀಮತಿ ನಿಂಗಮ್ಮ ಎಂಬುವರು ಪರಿಶಿಷ್ಟ ಜಾತಿ ಜಾನಂಗಕ್ಕೆ ಸೇರಿದಂತಹ ಮಹಿಳೆಯಾಗಿದ್ದಾರೆ. ಇವರ ಹೆಸರಿನಲ್ಲಿ ಸಾಲ ವಿತರಣೆಯಾಗಿದೆ. ಆದರೆ, ಆಕೆಗೆ ಸಾಲ ವಿತರಣೆಯಾಗಿರುವುದು

ಗೊತ್ತಿಲ್ಲ. ಇನ್ನು ಒಂದು ಇದೆ. ನಾನು ಇದನ್ನು ಕೇವಲ ಉದಾಹರಣೆ ಕೊಡುತ್ತಿದ್ದೇನೆ ಅಷ್ಟೇ. ಚನ್ನರಾಯಪಟ್ಟಣ ತಾಲ್ಲೂಕಿನ ದೇವಿಗೆರೆಯವರಾದ ಶ್ರೀಮತಿ ರಾಜಮ್ಮ ಎಂಬುವರ ಖಾತೆಯಲ್ಲಿ ಅವರು regular ಆಗಿ 50,000 ರೂಪಾಯಿಗಳ ಅಲ್ಪಾವಧಿ ಬೆಳೆ ಸಾಲವನ್ನು ತೆಗೆದುಕೊಳ್ಳುತ್ತಿದ್ದರು. ಅವರು ಅದನ್ನು renewal ಮಾಡಿಕೊಳ್ಳುತ್ತಿದ್ದರು. ಅವರು ಒಂದು ಬಾರಿ ಹೋಗಿ ಪಹಣಿಯನ್ನು ತೆಗೆಸಿ ನೋಡಿದರೆ, ಅವರ ಹೆಸರಿನಲ್ಲಿ ಒಂದು ಲಕ್ಷ ರೂಪಾಯಿ ಸಾಲ mortgage ಆಗಿರುವುದು ಕಂಡು ಬಂದಿದೆ. ಆದರೆ, ಅವರಿಗೆ 50,000 ರೂಪಾಯಿಗಳು ಮಾತ್ರ ತಲುಪಿದೆ. ಇದರ ಬಗ್ಗೆ ದೂರು ಕೊಡುತ್ತಾರೆ. ಇದರ ಬಗ್ಗೆ ಇಲಾಖೆಯಿಂದ ತನಿಖೆಯಾಗುತ್ತದೆ. ಆ ಇಲಾಖೆಯ ತನಿಖೆಯಲ್ಲಿ ಆ PACS (Primary Agricultural Credit Societies) ನ ಕಾರ್ಯದರ್ಶಿ ತಪ್ಪಿತಸ್ಥ ಎಂದು prove ಆಗುತ್ತದೆ. ಆದರೆ, ಆ ಕಾರ್ಯದರ್ಶಿಯವರಿಂದ ಒಂದು ತಿಂಗಳಿಗೆ ಒಂದು ಸಾವಿರ ರೂಪಾಯಿಗಳನ್ನು ಮಾತ್ರ ಕಡಿತ ಮಾಡುವಂತಹ ಶಿಕ್ಷೆಯನ್ನು ಕೊಟ್ಟಿದ್ದಾರೆ. ಒಂದು ತಿಂಗಳಿಗೆ ಒಂದು ಸಾವಿರ ರೂಪಾಯಿ penalty ಕೊಡುವಂತೆ ಮಾಡಿದ್ದಾರೆ.

**ಉಪ ಸಭಾಪತಿಯವರು:-** ಮಾನ್ಯ ರವಿರವರೇ, ಇದರ ಬಗ್ಗೆ ಮಾನ್ಯ ಸಚಿವರು ಉತ್ತರ ಹೇಳುತ್ತಾರೆ. ತಾವು ತಮ್ಮ ಪ್ರಶ್ನೆ ಕೇಳಿ.

**ಶ್ರೀ ಎಸ್.ರವಿ:-** ಮಾನ್ಯ ಸಭಾಪತಿಯವರೇ, ಈ ರೀತಿಯಾಗಿದೆ. ಹಾಗಾಗಿ, ಇದರ ಬಗ್ಗೆ ಸಮಗ್ರವಾದಂತಹ ತನಿಖೆಯಾಗಬೇಕು. ಆಮೇಲೆ ನಾನು 64 ವಿಚಾರಣೆ ಬಗ್ಗೆ ಕೇಳಿದ್ದೇನೆ. ಹಾಸನ ಜಿಲ್ಲೆಯ ಸಹಕಾರ ಕೇಂದ್ರ ಬ್ಯಾಂಕ್‌ನಲ್ಲಿ ನಡೆಯುತ್ತಿರುವಂತಹ ಅವ್ಯವಹಾರಗಳ ಬಗ್ಗೆ ಒಬ್ಬರು 15 ಪಾಯಿಂಟ್‌ಗಳನ್ನು ಹಾಕಿ 64 ವಿಚಾರಣೆಗೆ ಕೇಳಿದ್ದಾರೆ. 64 ವಿಚಾರಣೆಯಲ್ಲಿ 5 eligibility ಇದೆ. ಇದು ಆರೋಪಗಳು ದೃಢವಾಗಿವೆ ಎಂದು, ಕಳೆದ 4 ವರ್ಷಗಳ ಹಿಂದೆ ಒಬ್ಬ ತನಿಖಾಧಿಕಾರಿಯನ್ನು ನೇಮಕ ಮಾಡುತ್ತಾರೆ. 4 ವರ್ಷಗಳು ಕಳೆದರೂ ಸಹ 64 ವಿಚಾರಣೆಯ ವರದಿ ಬಂದಿಲ್ಲ. ಇಬ್ಬರು ಅಧಿಕಾರಿಗಳು ಬದಲಾಗಿದ್ದಾರೆ. ಈಗ ಅಲ್ಲಿ 64 ವಿಚಾರಣೆ ಏತಕ್ಕೆ ಎಂದರೆ, ಬೇಲೂರಿನಲ್ಲಿ market value, ನಾನು SR value ಅನ್ನು ಹೇಳುತ್ತಿಲ್ಲ. Market value ಗೆ ಅಲ್ಲಿ ಹೆಚ್ಚು branch ಗಳನ್ನು ಮಾಡಬೇಕು. ಅಲ್ಲಿ ಕಟ್ಟಡ ಕಟ್ಟಬೇಕು, ಉದ್ಘಾಟನೆ ಮಾಡಬೇಕು ಎಂದು 4 ಪಟ್ಟು ಹೆಚ್ಚಿಗೆ ಹಣ ಕೊಟ್ಟು ಖರೀದಿ ಮಾಡಿದ್ದಾರೆ. ಇನ್ನೂ ಬಾಳಿಪೇಟೆ ಈ ರೀತಿಯಾಗಿ ಹಲವಾರು ಕಡೆಗಳಲ್ಲಿ 5-6 ಕಡೆಗಳಲ್ಲಿ ಸೈಟ್‌ಗಳನ್ನು ತೆಗೆದುಕೊಂಡಿದ್ದಾರೆ. ಆ ಸೈಟ್‌ಗಳನ್ನು ತೆಗೆದುಕೊಂಡಿರುವುದು ಎಷ್ಟು ಪಟ್ಟು ಜಾಸ್ತಿ ಎಂದರೆ, SR value ಅಲ್ಲ. ಬೇರೆಯದಕ್ಕೆ 5 ರಿಂದ 6 ಪಟ್ಟು ಹೆಚ್ಚಿಗೆ ಆಗಿರುವಂತಹದ್ದು ಆಗಿದೆ. ಹಾಗಾಗಿ, ಇದರ ಬಗ್ಗೆ ಸಮಗ್ರವಾದಂತಹ ತನಿಖೆಯಾಗಬೇಕು. 64 ವಿಚಾರಣೆಗೆ ಶ್ರೀ ಮಂಜುನಾಥ್ ಎನ್ನುವವರನ್ನು ನೇಮಕ ಮಾಡಿದ್ದಾರೆ. ನಾನು ಅವರ ವ್ಯಕ್ತಿತ್ವದ ಬಗ್ಗೆ ಪ್ರಶ್ನೆ ಮಾಡುವುದಿಲ್ಲ. ನಾನು ಇಲ್ಲಿಗೆ ಬರುವಂತಹ ಸಂದರ್ಭದಲ್ಲಿ ಯಾರೋ ನನಗೆ ಶ್ರೀ ಮಂಜುನಾಥ್ ಎನ್ನುವವರು ಅಲ್ಲಿರುವಂತಹ ಒಬ್ಬ ನಿರ್ದೇಶಕರಾಗಿರುವಂತಹ ಶ್ರೀ ಗಿರೀಶ್ ಎಂಬುವರ ಸಂಬಂಧಿಕರಾಗಿದ್ದಾರೆ, ಅದಕ್ಕೆ ಇದು ಪೆಂಡಿಂಗ್ ಇದೆ ಎಂದು ಹೇಳಿದರು. ಹಾಗಾಗಿ, ಮಾನ್ಯ ಸಚಿವರು ಇದರ ಬಗ್ಗೆ ಯಾವ ರೀತಿ ಕ್ರಮತೆಗೆದುಕೊಳ್ಳುತ್ತಾರೆ ಎನ್ನುವುದರ ಬಗ್ಗೆ ಸ್ಪಷ್ಟನೆ ಕೊಡಬೇಕೆಂದು ಮನವಿ ಮಾಡುತ್ತೇನೆ.

**ಶ್ರೀ ಕ್ಯಾತ್ಸಂದ್ರ ಎನ್. ರಾಜಣ್ಣ (ಸಹಕಾರ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಎಸ್.ರವಿಯವರ ಮಾತಿನ ಹಿನ್ನೆಲೆಯಲ್ಲಿ ನಾನು ಪ್ರಮುಖವಾಗಿ ಮೂರು ಅಂಶಗಳನ್ನು ಗಮನಿಸುತ್ತೇನೆ. ಮೊದಲನೆಯದಾಗಿ, ತಾಲ್ಲೂಕ್‌ಗಳಲ್ಲಿ disparity ಇದೆ ಎನ್ನುವಂತಹದ್ದಾಗಿದೆ. ಒಂದು ಕಡೆ 313 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಇನ್ನೊಂದು ಕಡೆ 280 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ, ಮತ್ತೊಂದು ಕಡೆ ಕೇವಲ 60 ಕೋಟಿ ರೂಪಾಯಿಗಳನ್ನು ಮಾತ್ರ ಕೊಟ್ಟಿದ್ದಾರೆ ಎನ್ನುವುದನ್ನು ಪ್ರಸ್ತಾಪ ಮಾಡಿದ್ದಾರೆ. ವಿಶೇಷವಾಗಿ ಚನ್ನರಾಯಪಟ್ಟಣ ದೊಡ್ಡ ತಾಲ್ಲೂಕು ಆಗಿದೆ. ಅಲ್ಲಿ ಸುಮಾರು 40 ಸಹಕಾರ ಸಂಸ್ಥೆಗಳು ಇವೆ. ಹಾಲೂರು ಕಡೆ 22, 16 ಈ ರೀತಿ ಇವೆ. ಆದರೆ, ಮೇಲ್ನೋಟಕ್ಕೆ ಇಲ್ಲಿ over financing ಆಗಿದೆ ಎನ್ನುವುದನ್ನು ನಾನು ಒಪ್ಪುತ್ತೇನೆ. ಇದರಲ್ಲಿ ಎರಡನೇ ಮಾತಿಲ್ಲ. ಅಲ್ಲಿ over financing ಏಕೆ ಆಗಿದೆ ಎಂದರೆ, ಅಲ್ಲಿ ರೈತರು, eligible farmer ಸಾಲ ತೆಗೆದುಕೊಳ್ಳುವುದಕ್ಕೆ ಹೆಚ್ಚು ಜನರು ಇದ್ದಾರೆ. ಹಾಗಾಗಿ, ಕೊಟ್ಟಿರಬಹುದು ಎಂದು ನಾನು ಭಾವಿಸುತ್ತೇನೆ.

ಮಾನ್ಯ ಸಭಾಪತಿಯವರೇ, ಎರಡನೆಯದಾಗಿ ಇದರ ಜೊತೆಯಲ್ಲಿ ಕೆಲವು ಜನರ ಪಹಣಿಗಳಲ್ಲಿ ಇಷ್ಟು ಸಾಲ ಇದೆ ಎಂದು ನಮೂದಾಗಿದೆ. ಆದರೆ, ಮಾನ್ಯ ಸದಸ್ಯರು ಅವರಿಗೆ ಸಾಲ ವಿತರಣೆಯಾಗಿಲ್ಲ ಎನ್ನುವ ವಿಷಯವನ್ನು ಹೇಳಿದ್ದಾರೆ. ಆದರೆ, ವಾಸ್ತವವಾಗಿ ಮಾನ್ಯ ಸದಸ್ಯರು ಅಧ್ಯಕ್ಷರಾಗಿ ಕೆಲಸ ಮಾಡಿದ್ದಾರೆ. ನಾನು ಕೂಡ ಅಧ್ಯಕ್ಷನಾಗಿ ಕೆಲಸ ಮಾಡಿದ್ದೇನೆ. RTC 11th column ರಲ್ಲಿ ರುಣಭಾರಗಳು ಎಂದು ಇರುವ ಕಡೆಯಲ್ಲಿ ಹೆಸರುಗಳು ಬರುತ್ತವೆ. ಅಲ್ಲಿ ಹೆಸರು ಬಂದ ತಕ್ಷಣ ಎಷ್ಟು ಮೊತ್ತಕ್ಕೆ ಬಂದಿದೆ, ಅಷ್ಟೇ ಮೊತ್ತವನ್ನು ಸಾಲ ಕೊಟ್ಟಿದ್ದಾರೆಂದು ಅಲ್ಲ, ಒಂದು ಬಾರಿ ಕಡಿಮೆ ಕೊಟ್ಟಿರುತ್ತಾರೆ. ಒಂದು ಬಾರಿ ಹೆಚ್ಚಿಗೆ ಕೊಟ್ಟಿರುತ್ತಾರೆ. ಈಗ ಸದನದಲ್ಲಿ ಮಾನ್ಯ ಸಚಿವರಾದ ಶ್ರೀ ಶಿವಾನಂದ ಪಾಟೀಲ್‌ರವರು ಇದ್ದಾರೆ, ಅವರಿಗೂ ಸಹ ಇದು ಗೊತ್ತಿರುತ್ತದೆ. ಅದು RTC 11th column ನಲ್ಲಿ ಬರುವಂತಹದ್ದು ಒಂದು entry. ಅದರ ಆಧಾರದ ಮೇಲೆ ಅಷ್ಟು ಸಾಲ ಕೊಡಲೇಬೇಕು, ಅದಕ್ಕಿಂತ ಕಡಿಮೆ ಕೊಡುವುದು, ಅದಕ್ಕಿಂತ ಹೆಚ್ಚಿಗೆ ಕೊಡುವಂತಹದ್ದು ಬಹಳಷ್ಟು ಕಡೆಗಳಲ್ಲಿ ಅದು ವ್ಯತ್ಯಾಸ ಸಹ ಆಗಿರುತ್ತದೆ. ಮಾನ್ಯ ಸದಸ್ಯರು ಶ್ರೀಮತಿ ನಿಂಗಮ್ಮನವರ ಹಾಗೂ ಶ್ರೀ ಶಿವನಂಜೇಗೌಡರವರ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಅದರ ಬಗ್ಗೆ ನಾನು ಮಾಹಿತಿಯನ್ನು ತರಿಸಿ ನೋಡಿದಾಗ, ಅವರಿಗೆ ಸಾಲ ಕೊಟ್ಟಿಲ್ಲ ಎಂಬುದು ಕಂಡುಬಂದಿದೆ. ಆದರೆ, ಆ ರೀತಿ RTC ನಲ್ಲಿ ನಮೂದಾಗಿದೆ.

ಮಾನ್ಯ ಸಭಾಪತಿಯವರೇ, ಮೂರನೇ ಅಂಶ ಏನೆಂದರೆ, ಬೇಲೂರಿನಲ್ಲಿ 2.96 ಕೋಟಿ ರೂಪಾಯಿಗಳಿಗೆ 30,053 ಚದುರ ಅಡಿಗಳ ಭೂಮಿಯನ್ನು exorbitant rate ನಲ್ಲಿ ಖರೀದಿ ಮಾಡಿದ್ದಾರೆ ಎನ್ನುವುದು ಇದೆ. ಅದು ಕೂಡ enquiry under section 64 ಗೆ ಮೊದಲು ಶ್ರೀ ಬಿ.ಹೆಚ್.ನಾರಾಯಣಗೌಡ ಎನ್ನುವವರು ದೂರು ಕೊಟ್ಟಿದ್ದಾರೆ. ಈ ದೂರಿನ ಮೇಲೆ ಬಹಳ ವರ್ಷಗಳಿಂದ ಸುಮಾರು 6/7 ವರ್ಷಗಳಿಂದ enquiry ಅನ್ನು ಅವರು ಮಾಡಲಿ, ಇವರು ಮಾಡಲಿ ಎಂದು ಹೇಳಿಕೊಂಡು ಬಹಳಷ್ಟು ಅಧಿಕಾರಿಗಳು ಬದಲಾವಣೆಯಾಗಿದ್ದಾರೆ. ಆದರೆ, ಅದರಲ್ಲಿ ಬಹಳ ತಡ ಆಗಿದೆ. ಅದರಲ್ಲಿ ಪ್ರಮುಖವಾಗಿ ಬಂದಿರುವಂತಹ ದೂರುಗಳಲ್ಲಿ ತೀವ್ರತರಹವಾದಂತಹ

ಆರೋಪಗಳು ಇವೆ. ಅದನ್ನು ಬಿಟ್ಟು 58 ವರ್ಷಗಳ ನಿವೃತ್ತಿ ವಯಸ್ಸನ್ನು ನೌಕರರಿಗೆ ಇಟ್ಟಿದ್ದಾರೆಂದು, ರಾಜ್ಯ ಸರ್ಕಾರದ ತೀರ್ಮಾನದಂತೆ ಇವರು 60 ವರ್ಷ ಮಾಡಬೇಕಾಗಿತ್ತು ಎಂದು ಈ ರೀತಿಯಲ್ಲಿ ಸಣ್ಣ ಸಣ್ಣ 5 ಅಂಶಗಳನ್ನು enquiry under section 64 ನಲ್ಲಿ ತೆಗೆದುಕೊಂಡಿದ್ದಾರೆ. ಆದರೆ, ಪ್ರಮುಖವಾದಂತಹ ಅಂಶಗಳನ್ನು ಮತ್ತು ಆರೋಪಗಳನ್ನು enquiry under section 64 ಗೆ ಒಳಪಡಿಸಿಲ್ಲ. ಹೀಗಾಗಿ, ನಾನು ಸಹ ಈ ಅಂಶಗಳ ಬಗ್ಗೆ ಕೂಲಂಕಷವಾಗಿ ಚರ್ಚೆ ಮಾಡಿದ್ದೇನೆ. ಅವರ ಬಳಿಯೂ ಮಾಡಿದ್ದೇನೆ. ನಾನು ಸಹ ನೋಡಿದ್ದೇನೆ. ಅದಕ್ಕೆ ನಾನು ಮುಂದಿನ ವಾರದಲ್ಲಿ, ಈ ತಿಂಗಳ ಕಡೆಯ ದಿವಸಗಳ ಒಳಗಡೆ ಅಥವಾ ಮುಂದಿನ ತಿಂಗಳ ಮೊದಲನೆ ವಾರದಲ್ಲಿ ಮಾನ್ಯ ಸದಸ್ಯರನ್ನು ಹಾಗೂ ಎಲ್ಲಾ ಅಧಿಕಾರಿಗಳನ್ನು ಕರೆಸಿ ಇದರ ಬಗ್ಗೆ ಸಭೆಯನ್ನು ಮಾಡುತ್ತೇನೆ. ಜೊತೆಗೆ ಈ ಬಗ್ಗೆ ವಿವರವಾದ ವರದಿಯನ್ನು ತರಿಸುತ್ತೇನೆ. ಆ ಸಭೆಯಲ್ಲಿ ಈ ವಿಷಯದ ಮೇಲೆ ಕೂಲಂಕಷವಾಗಿ ಚರ್ಚೆ ಮಾಡಿ ಮುಂದೆ enquiry ಮಾಡುವಂತಹ ಅಗತ್ಯತೆ ಇದ್ದರೆ ಅದನ್ನು ಮಾಡಿಸಿ, ಯಾವುದೇ ರೈತರಿಗೆ ಅನಾನುಕೂಲವಾಗಬಾರದು ಹಾಗೂ ಯಾವುದೇ ಸಂಸ್ಥೆಯ ಹಣ ಸಹ ಲೋಪ ಆಗದ ರೀತಿಯಲ್ಲಿ ಎಚ್ಚರ ವಹಿಸುವಂತಹ ಕೆಲಸವನ್ನು ನಾನು ಮಾಡುತ್ತೇನೆ.

**ಶ್ರೀ ಎಸ್.ರವಿ:-** ಮಾನ್ಯ ಸಭಾಪತಿಯವರೇ, ನಾನು ಮಾನ್ಯ ಸಚಿವರ ಕಾಳಜಿಯ ಬಗ್ಗೆ ಅವರಿಗೆ ಅಭಿನಂದಿಸುತ್ತೇನೆ.

**ಉಪ ಸಭಾಪತಿಯವರು:-** ಮಾನ್ಯ ಸದಸ್ಯರಾದ ಎಸ್.ರವಿಯವರೇ, ಮಾನ್ಯ ಸಚಿವರು ತಮ್ಮನ್ನು ಕರೆಸಿ ತಮ್ಮ ಸಮ್ಮುಖದಲ್ಲಿಯೇ ಚರ್ಚೆ ಮಾಡುತ್ತೇನೆಂದು ಹೇಳಿದ್ದಾರೆ ಅಲ್ಲವೇ; ಸಾಕು ಬಿಡಿ.

**ಶ್ರೀ ಎಸ್.ರವಿ:-** ಮಾನ್ಯ ಸಭಾಪತಿಯವರೇ, ಕಳೆದ ಬಾರಿ ಅಧಿವೇಶನದಲ್ಲಿ ಮಾನ್ಯ ಸದಸ್ಯರಾದ ಶ್ರೀ ಗೋಪಾಲಸ್ವಾಮಿಯವರು ಆಗ ಸಹಕಾರ ಸಚಿವರಾಗಿದ್ದಂತಹ ಶ್ರೀ ಎಸ್.ಟಿ.ಸೋಮಶೇಖರ್‌ರವರಿಗೆ ಕೇಳಿದಂತಹ ಪ್ರಶ್ನೆಗೆ, ಮಾನ್ಯ ಸಚಿವರು ಹಾಸನ ಜಿಲ್ಲೆಗೆ ಒಂದು ಸಹಕಾರ ಇಲಾಖೆ, ರಾಜ್ಯದಿಂದ ಹಾಸನ ಜಿಲ್ಲೆ separate ಎಂದು ಹೇಳಿದ್ದರು. ಈಗ ಸಹಕಾರ ಸಚಿವರಾದ ಮಾನ್ಯ ರಾಜಣ್ಣನವರು ಬಹಳ ದಕ್ಷರು ಇದ್ದಾರೆ. ಅವರಿಗೆ ಸಹಕಾರ ಇಲಾಖೆ ಬಗ್ಗೆ ಬಹಳ ಕಾಳಜಿ ಇದೆ. ಹಾಸನ ಜಿಲ್ಲಾ ಸಹಕಾರ ಕೇಂದ್ರದ ಬ್ಯಾಂಕ್‌ನಲ್ಲಿ ನಡೆಯುತ್ತಿರುವುದನ್ನು ಅವರು ಮಾತಿನಲ್ಲಿ ಒಪ್ಪಿಕೊಂಡಿದ್ದಾರೆ. ನಾನು ಮಾಡಿರುವಂತಹ ಆರೋಪಗಳನ್ನು ಮಾನ್ಯ ಸಚಿವರು ಒಪ್ಪಿಕೊಂಡಿದ್ದಾರೆ. ಇಂತಹದ್ದನ್ನು ಕೊನೆಗಾಣಿಸಬೇಕು. ಹಾಸನ ಜಿಲ್ಲೆಯಲ್ಲಿ ಒಂದು ವಂಶಾಡಳಿತವಾಗಿದೆ. ಆ ಮೂರು ಸೊಸೈಟಿಗಳಿಗೆ 4 ವರ್ಷಗಳಿಂದ ಕೇಳುತ್ತಿದ್ದಾರೆ. ಎರಡು ಸೊಸೈಟಿಗಳಿಗೆ ಒಂದು ಪಕ್ಷ ಆಧಾರಿತ ಒಂದು ಕುಟುಂಬಕ್ಕೆ ಮಾತ್ರ ಅನುಮತಿ ಕೊಡುತ್ತಾರೆ. ಇನ್ನೊಂದಕ್ಕೆ ಅನುಮತಿ ಕೊಡುವುದಿಲ್ಲ.

**ಉಪ ಸಭಾಪತಿಯವರು:-** ಮಾನ್ಯ ಸದಸ್ಯರಾದ ಶ್ರೀ ಎಸ್.ರವಿಯವರೇ, ಮಾನ್ಯ ಸಚಿವರು ಒಂದು ವಾರದೊಳಗೆ ತಮ್ಮನ್ನು ಕರೆಸಿ ತಮ್ಮ ಸಮ್ಮುಖದಲ್ಲಿಯೇ ಚರ್ಚೆ ಮಾಡುತ್ತೇವೆಂದು ಹೇಳಿದ್ದಾರೆ, ಅಲ್ಲವೇ; ಸಾಕು ಬಿಡಿ.

**ಶ್ರೀ ಎಸ್.ರವಿ:-** ಮಾನ್ಯ ಸಭಾಪತಿಯವರೇ, ಹಾಸನ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್, ಮಾನ್ಯ ಕೆ.ಎನ್.ರಾಜಣ್ಣನವರು ಸಹಕಾರ ಸಚಿವರು ಆಗಿರುವಂತಹ ಸಂದರ್ಭದಲ್ಲಿ.,

**(ಗೊಂದಲ)**

**ಶ್ರೀ ಟಿ.ಎ.ಶರವಣ:-** ಮಾನ್ಯ ಸಭಾಪತಿಯವರೇ…..

**(ಗೊಂದಲ)**

**ಶ್ರೀ ಎಸ್.ರವಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಟಿ.ಎ.ಶರವಣರವರು ದಯವಿಟ್ಟು ಕುಳಿತುಕೊಳ್ಳಬೇಕು. ಅವರ ಪ್ರಶ್ನೆ ಬಂದಾಗ ಅವರು ಮಾತನಾಡಲಿ. ನಾನು ಮಾನ್ಯ ಸಚಿವರನ್ನು ಕೇಳುತ್ತಿದ್ದೇನೆ,...

**(ಗೊಂದಲ)**

**ಉಪ ಸಭಾಪತಿಯವರು:-** ಮಾನ್ಯ ಶರವಣರವರೇ, ತಾವು ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಎಸ್.ರವಿ:-** ಮಾನ್ಯ ಸಭಾಪತಿಯವರೇ, ಸಹಕಾರ ಇಲಾಖೆಯ ಬಗ್ಗೆ ಅತ್ಯಂತ ಪ್ರಮಾಣಿಕವಾಗಿರುವಂತಹ ಸಂದರ್ಭದಲ್ಲಿ, ಅಲ್ಲದೇ ಅವರು ಆ ಜಿಲ್ಲೆಗೆ ಉಸ್ತುವಾರಿ ಸಚಿವರು ಆಗಿರುವಂತಹ ಸಂದರ್ಭದಲ್ಲಿ ಅವ್ಯವಹಾರಕ್ಕೆ ಒಂದು ಕೊನೆ ಹಾಡಬೇಕು. ಒಂದು ವಂಶಾಡಳಿತಕ್ಕೆ ಒಂದು ಕಪಿ ಮುಷ್ಟಿಯಿಂದ ಆಚೆಗೆ ತರಬೇಕು. ಅಲ್ಲಿನ ಜನರು ಮಾನ್ಯ ಸಚಿವರನ್ನು ಮುಕ್ತವಾಗಿ ಪ್ರಶಂಸೆಯನ್ನು ಮಾಡಬೇಕು. ಮಾನ್ಯ ಸಚಿವರು ಇದಕ್ಕೆ ಒಂದು ಮುಕ್ತಿಯನ್ನು ನೀಡಬೇಕು.

**ಶ್ರೀ ಟಿ.ಎ.ಶರವಣ:-** ಮಾನ್ಯ ಸಭಾಪತಿಯವರೇ, ತುಮಕೂರದ್ದು ಆಗಲಿ, ಕೋಲಾರದ್ದು ಆಗಲಿ, ಹಾಸನದ್ದು ಆಗಲಿ..

**(ಗೊಂದಲ)**

**ಉಪ ಸಭಾಪತಿಯವರು:-** ಮಾನ್ಯ ಶರವಣರವರೇ, ಆಗಲಿ. ತಾವು ದಯವಿಟ್ಟು ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಟಿ.ಎ.ಶರವಣ:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ಈ ವಿಚಾರ ಅಲ್ಲ. ಕಳೆದ ಬುಧವಾರ, 17ನೇ ತಾರೀಖು ಲಿಸ್ಟ್ ಆಗಿರುವಂತಹ ಪ್ರಶ್ನೆಗಳನ್ನು ಯಾವಾಗ ತೆಗೆದುಕೊಳ್ಳುತ್ತೀರಿ ಹೇಳಿ?

**ಶ್ರೀ ಕ್ಯಾತ್ಸಂದ್ರ ಎನ್.ರಾಜಣ್ಣ:-** ಮಾನ್ಯ ಸಭಾಪತಿಯವರೇ, ಮಾನ್ಯ ಶರವಣರವರು ಇದಾದ ಮೇಲೆ ಮಾತನಾಡಲಿ.

**(ಗೊಂದಲ)**

**ಉಪ ಸಭಾಪತಿಯವರು:-** ಮಾನ್ಯ ಶರವಣರವರೇ, ತಾವು ದಯವಿಟ್ಟು ಕುಳಿತುಕೊಳ್ಳಿ. ಮಾನ್ಯ ಸಚಿವರೇ, ತಾವು ಮಾತನಾಡಿ.

**(ಗೊಂದಲ)**

**ಶ್ರೀ ಕ್ಯಾತ್ಸಂದ್ರ ಎನ್.ರಾಜಣ್ಣ:-** ಮಾನ್ಯ ಸಭಾಪತಿಯವರೇ, ಈ ಸೊಸೈಟಿಗಳಿಗೆ ಸಾಲ ಕೊಡುವಂತಹದ್ದರಲ್ಲಿ ಹಾಗೂ ಸದಸ್ಯತ್ವ ಕೊಡುವಂತಹದ್ದರಲ್ಲಿ ತಾರತಮ್ಯ ಆಗಿರುವಂತಹದ್ದರಲ್ಲಿ, ಲೋಕಸಭೆ ಚುನಾವಣೆ ನಡೆದಂತಹ

ಸಂದರ್ಭದಲ್ಲಿ ಒಂದು ಊರಿನಲ್ಲಿ ಒಂದು ಹಾಲಿನ ಸೊಸೈಟಿಯಲ್ಲಿ ಇವರೆಲ್ಲರೂ ಮತ ಹಾಕಿಲ್ಲವೆಂದು ಒಂದು ದಿವಸ ಸಂಜೆ ಅವರ ಹಾಲನ್ನು ತೆಗೆದುಕೊಳ್ಳಲಿಲ್ಲ. ಈ ರೀತಿಯ ತಾರತಮ್ಯವನ್ನು ಸಹ ನಾವು ಗಮನಿಸಿದ್ದೇವೆ. ನಾವು ಅಲ್ಲಿ ಏನು ನಡೆಯುತ್ತಿದೆ ಎಂಬುದನ್ನು ಗಮನಿಸಿದ್ದೇವೆ. ಅವರು ಯಾವುದೇ ತಾರತಮ್ಯವನ್ನು ಮಾಡಿದರೂ ಸಹ, ನಾನು ಆ ಜಿಲ್ಲೆಗೆ ಉಸ್ತುವಾರಿ ಸಚಿವನಾದ ಮೇಲೆ ನಿರಂತರವಾಗಿ ಅದನ್ನು ತಪ್ಪಿಸುವಂತಹ ಪ್ರಯತ್ನವನ್ನು ಮಾಡಿದ್ದೇನೆ. ಈಗ ಮಾನ್ಯ ಸದಸ್ಯರು ಹೇಳದಂತಹ ರೀತಿಯಲ್ಲಿ ಇನ್ನೂ ತಾರತಮ್ಯಗಳು ನಡೆಯುತ್ತಿವೆ. ನಾನು ಇಲ್ಲವೆಂದು ಹೇಳುವುದಿಲ್ಲ. ನಾನು ಅದಕ್ಕಾಗಿ ಈಗಾಗಲೇ ಸ್ಪಷ್ಟ ಮಾಡಿದ್ದೇನೆ. ಮಾನ್ಯ ಸದಸ್ಯರ ಸಮ್ಮುಖದಲ್ಲಿ ನಮ್ಮ ಎಲ್ಲಾ ಹಿರಿಯ ಅಧಿಕಾರಿಗಳನ್ನು ಹಾಗೂ ಅಲ್ಲಿನ ಸ್ಥಳೀಯ ಅಧಿಕಾರಿಗಳನ್ನು ಕರೆಸಿ ಸಭೆ ಮಾಡುತ್ತೇನೆ.

**ಉಪ ಸಭಾಪತಿಯವರು:-** ಮಾನ್ಯ ಸಚಿವರೇ, ಆದಷ್ಟು ಬೇಗ ಮಾಡಿ. ಆಯಿತು ಬಿಡಿ.

**ಶ್ರೀ ಕ್ಯಾತ್ಸಂದ್ರ ಎನ್.ರಾಜಣ್ಣ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರ ಎಲ್ಲಾ ಆರೋಪಗಳ ಬಗ್ಗೆ ನಾನು ಮಾಹಿತಿಯನ್ನು ತರಿಸಿದ್ದೇನೆ. ಅವರ ಜೊತೆಗೆ ಚರ್ಚೆ ಮಾಡುತ್ತೇನೆ. ಮತ್ತೆ ಅಲ್ಲಿ ಅಗತ್ಯತೆ ಇದೆ ಎನ್ನುವುದು ನನಗೂ ಸಹ ಭಾಸವಾಗಿದೆ. ಅದಕ್ಕೆ ಸೂಕ್ತವಾದ ತನಿಖೆ ಮಾಡಬೇಕಾದರೆ ಮಾಡಿಸುತ್ತೇನೆ.

**ಶ್ರೀ ಟಿ.ಎ.ಶರವಣ:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ಕಳೆದ ವಾರ ಬುಧವಾರ, 17ನೇ ದಿನಾಂಕದಂದು ಲಿಸ್ಟ್ ಆಗಿರುವಂತಹ ಪ್ರಶ್ನೆಗಳನ್ನು ಯಾವಾಗ ತೆಗೆದುಕೊಳ್ಳುತ್ತೀರಿ ಹೇಳಿ?

**ಉಪ ಸಭಾಪತಿಯವರು:-** ಮಾನ್ಯ ಸದಸ್ಯರೇ, ತಾವು ಕೇಳಿರುವಂತಹದ್ದನ್ನು on the table laid ಮಾಡಲಾಗಿದೆ. ಈಗ ಮಾನ್ಯ ಸಭಾನಾಯಕರೇ, ತಾವು ಮಾತನಾಡಿ.

### ಇ) ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ದಿನಾಂಕ 18 ಡಿಸೆಂಬರ್, 2024, ಸಮೂಹ-8ರ ಲಿಖಿತ ಮೂಲಕ ಉತ್ತರಿಸುವ ಒಟ್ಟು 122 ಪ್ರಶ್ನೆಗಳ ಪೈಕಿ 82 ಪ್ರಶ್ನೆಗಳಿಗೆ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

**(ಉತ್ತರಗಳನ್ನು ಲಗತ್ತಿಸಲಾಗಿದೆ)**

**ಉಪ ಸಭಾಪತಿಯವರು:-** ಮಂಡಿಸಲಾಯಿತು.

(ಮುಂದು)

**(955) 18.12.2024 2.00 ಎಂವಿ-ವಿಕೆ (ಉಪ ಸಭಾಪತಿಯವರ ಉಪಸ್ಥಿತಿ)**

**5. <u>ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳು</u>**

**ಅ) ವಿಷಯ:- ಶಾಲಾ ಮಕ್ಕಳನ್ನು ಕರೆದೊಯ್ಯುವ ವಾಹನಗಳಲ್ಲಿ ಅಗತ್ಯ ಸುರಕ್ಷತಾ ಕ್ರಮ ಕೈಗೊಳ್ಳದಿರುವ ಕುರಿತು.**

- - - -

**ಶ್ರೀ ಗೋವಿಂದರಾಜು (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, 'ವಿಜಯ ಕರ್ನಾಟಕ' ದಿನಪತ್ರಿಕೆಯಲ್ಲಿ ಪ್ರಕಟವಾದ ಒಂದು ಜ್ವಲಂತ ಸಮಸ್ಯೆ ಬಗ್ಗೆ ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಲು ಅನುಮತಿ ನೀಡಿದ್ದಕ್ಕೆ ಧನ್ಯವಾದಗಳು. ಶಾಲಾ ಮಕ್ಕಳ ಆಟೋರಿಕ್ಷಾಗಳಲ್ಲಿ ಮಿತಿಮೀರಿ ಶಾಲಾ ಮಕ್ಕಳು, ಅಸಂಘಟಿತ ಕಾರ್ಮಿಕರನ್ನು ಕರೆದೊಯ್ಯಬಾರದು ಎಂದು ಮಾನ್ಯ ಸುಪ್ರೀಂ ಕೋರ್ಟ್ ಸ್ಪಷ್ಟ ನಿರ್ದೇಶನ ನೀಡಿದ್ದರೂ ಸಹ ಕೋಲಾರ ಜಿಲ್ಲೆಯ ಕೆ.ಜಿ.ಎಫ್. ಮತ್ತು ಸುತ್ತಮುತ್ತಲಿನ ಹಲವು ಶಾಲೆಗಳ ಮಕ್ಕಳನ್ನು ಕುರಿಗಳಂತೆ ಆಟೋಗಳಲ್ಲಿ ಸಾಮರ್ಥ್ಯಕಿಂತ ಹೆಚ್ಚು ತುಂಬಿಕೊಂಡು ಸಾಗಿಸುತ್ತಿರುವುದಕ್ಕೆ ಸಾರ್ವಜನಿಕ ವಲಯದಲ್ಲಿ ವ್ಯಾಪಕ ಟೀಕೆ ವ್ಯಕ್ತವಾಗಿದೆ.

ಶಾಲಾ ಮಕ್ಕಳ ಸುರಕ್ಷತೆ ದೃಷ್ಟಿಯಿಂದ ಮಾನ್ಯ ಸುಪ್ರೀಂ ಕೋರ್ಟ್ ಸೂಚನೆ ಮೇರೆಗೆ ಸಾರಿಗೆ ಇಲಾಖೆ, ಪೋಲೀಸ್ ಇಲಾಖೆ ಹಾಗೂ ಶಿಕ್ಷಣ ಇಲಾಖೆ ಜಂಟಿಯಾಗಿ ಮಾರ್ಗಸೂಚಿಯನ್ನು ರೂಪಿಸಿವೆ. ಇದನ್ನು ಗಣನೆಗೆ ತೆಗೆದುಕೊಳ್ಳದೆ, ವಾಹನ ಮಾಲೀಕರು ಮತ್ತು ಆಟೋ ಮಾಲೀಕರು ಹಾಗೂ ಕೆಲವು ಪೋಷಕರು ಕೇವಲ ಹಣದ ಆಸೆಗೆ ಹೆಚ್ಚಿನ ಮಕ್ಕಳನ್ನು ತುಂಬಿಕೊಂಡು ಹೋಗುತ್ತಿರುವುದರಿಂದ ಆಗಿಂದಾಗ್ಗೆ ಅಪಘಾತಗಳು ಸಂಭವಿಸಿ ಅಮಾಯಕ ಮಕ್ಕಳು ಪ್ರಪಂಚವನ್ನು ನೋಡುವ ಮುನ್ನವೇ ತಮ್ಮದಲ್ಲದ ತಪ್ಪಿಗೆ ಬಲಿಯಾಗುತ್ತಿರುವುದು ಕಳವಳಕಾರಿ ಸಂಗತಿಯಾಗಿದೆ. ವಾಹನ ಸೀಟ್ ಸಾಮಾರ್ಥ್ಯಕ್ಕಿಂತ ಹೆಚ್ಚಿನ ಮಕ್ಕಳನ್ನು ವಾಹನಗಳಲ್ಲಿ ಕೂರಿಸುವಂತಿಲ್ಲ. ವಾಹನದ ಪರವಾನಗಿ ಸುಸ್ಥಿತಿಯಲ್ಲಿದೆ ಎಂಬುದನ್ನು ಪರಿಶೀಲಿಸಬೇಕು. ಶಾಲಾ ಮಕ್ಕಳನ್ನು ಕರೆದೊಯ್ಯುವ ವಾಹನಗಳಲ್ಲಿ ಸುರಕ್ಷತೆಗಾಗಿ ಅಟೆಂಡರ್ ಇರುವುದು ಸೂಕ್ತ. ಚಾಲಕ ತನ್ನ ಸೀಟಿನ ಪಕ್ಕದಲ್ಲಿ ಮಕ್ಕಳನ್ನು ಕೂರಿಸಿಕೊಳ್ಳಬಾರದು. ಶಾಲಾ ಮಕ್ಕಳನ್ನು ಕರೆದೊಯ್ಯುವ ಬಸ್ಸುಗಳಿಗೆ ಸಿ.ಸಿ.ಟಿ.ವಿ. ಅಳವಡಿಸಿರಬೇಕು. ಶಾಲಾ ಮಕ್ಕಳನ್ನು ಸಾಗಿಸುವ ವಾಹನದ ಮೇಲೆ ಶಾಲಾ ವಾಹನ ಎಂದು ಬರೆಸಿರಬೇಕು. ಯಾವುದೇ ರೀತಿಯ ತುರ್ತು ಸಂದರ್ಭಗಳಲ್ಲಿ ಚಾಲಕನನ್ನು ಸಂಪರ್ಕಿಸಲು ಚಾಲಕನ ಮೊಬೈಲ್ ಸಂಖ್ಯೆಯನ್ನು ವಾಹನದ ಮೇಲೆ ಕಡ್ಡಾಯವಾಗಿ ನಮೂದಿಸಿರಬೇಕು. ಇದರೊಂದಿಗೆ ರಾಜ್ಯ ಸರ್ಕಾರ ಹೊರಡಿಸಿರುವ ನೂತನ ಕಾಯಿದೆಯಲ್ಲಿ ಶಾಲಾ ಮಕ್ಕಳನ್ನು ಅನ್ಯರಾಜ್ಯಗಳ ನೋಂದಣಿ ಇರುವ ವಾಹನಗಳಲ್ಲಿ ಕರೆದೊಯ್ಯುವಂತಿಲ್ಲ. ಒಂದು ವೇಳೆ ಅನ್ಯ ರಾಜ್ಯದ

ವಾಹನಗಳಲ್ಲಿ ಮಕ್ಕಳನ್ನು ಸಾಗಾಟ ಮಾಡುತ್ತಿರುವುದು ಕಂಡು ಬಂದಲ್ಲಿ ಅಂತಹ ವಾಹನಗಳನ್ನು ಸೀಜ್ ಮಾಡುವಂತೆ ಸರಕಾರ ಆದೇಶ ಹೊರಡಿಸಿರುವುದು ಸರಿಯಷ್ಟೆ. ಆದರೆ, ಈ ಎಲ್ಲಾ ನಿಯಮಗಳನ್ನು ಯಾರೂ ಪಾಲಿಸದಿರುವುದರಿಂದ, ಮಕ್ಕಳ ಹಿತದೃಷ್ಟಿಯಿಂದ ಈ ವಿಷಯವನ್ನು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಲು ಅನುಮತಿ ನೀಡಿರುವುದಕ್ಕೆ ತಮಗೆ ಧನ್ಯವಾದಗಳು.

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಸಂಬಂಧಪಟ್ಟ ಸಚಿವರಿಂದ ಉತ್ತರವನ್ನು ಒದಗಿಸಲಾಗುವುದು.

**ಆ) ವಿಷಯ:- ನಕಲಿ ಚಿನ್ನಾಭರಣಗಳನ್ನು ಅಡವಿಟ್ಟು, ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್‌ಗೆ ವಂಚಿಸುತ್ತಿರುವವರ ವಿರುದ್ಧ ಕಾನೂನು ಕ್ರಮ ಜರುಗಿಸುವ ಕುರಿತು.**

- - - - -

**ಶ್ರೀ ಕುಶಾಲಪ್ಪ ಎಂ.ಪಿ. (ಸುಜಾ) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ಚಿನ್ನಾಭರಣವನ್ನು ಅಡಮಾನವಿಟ್ಟುಕೊಂಡು, ಸಾಲ ನೀಡುವ ಬ್ಯಾಂಕ್‌ಗಳು, ಲೇವಾದೇವಿಗಾರರಿಗೆ ಇದೊಂದು ಆಘಾತಕಾರಿ ಸುದ್ದಿಯಾಗಿದೆ. ಮಡಿಕೇರಿಯಲ್ಲಿ ವ್ಯಕ್ತಿಯೊಬ್ಬ ನಕಲಿ ಚಿನ್ನಾಭರಣಗಳನ್ನು ಅಡವಿಟ್ಟು ಜಿಲ್ಲಾ ಕೇಂದ್ರ ಸಹಕಾರ (ಡಿ.ಸಿ.ಸಿ) ಬ್ಯಾಂಕ್‌ಗೆ 15.13 ಲಕ್ಷ ರೂಪಾಯಿಯಷ್ಟು ಹಣ ಪಡೆದು ವಂಚಿಸಿರುವ ಘಟನೆ ಕೊಡಗು ಜಿಲ್ಲೆ ಮಾತ್ರವಲ್ಲದೆ ರಾಜ್ಯವನ್ನೇ ಬೆಚ್ಚಿ ಬೀಳಿಸಿದಂತಿದೆ. ಎರಡು ಬಾರಿ ನಕಲಿ ಚಿನ್ನ ಅಡವಿಟ್ಟು ಹಣ ಪಡೆದಿದ್ದಾತ ಮೂರನೆಯ ಬಾರಿಯ ಪ್ರಯತ್ನದಲ್ಲಿ ಸಿಕ್ಕಿಬಿದ್ದಿದ್ದು, ಇದೀಗ ಪೋಲೀಸರ ಅತಿಥಿಯಾಗಿದ್ದಾನೆ. ಈ ಪ್ರಕರಣದ ನಂತರ ಇನೂ ಐದು ಪ್ರಕರಣಗಳು ಬೆಳಕಿಗೆ ಬಂದಿವೆ. ಕೃತ್ಯ ಬಯಲಿಗೆ ಬಂದ ಬಳಿಕ ಹಲವು ಬ್ಯಾಂಕ್‌ಗಳಲ್ಲಿ ಅಡವು ಇಟ್ಟಿರುವ ಆಭರಣಗಳ ಮರುಪರಿಶೀಲನೆ ಆಯಾ ಬ್ಯಾಂಕ್‌ಗಳ ಮೂಲಕ ನಡೆಯುತ್ತಿದೆ. ಮಡಿಕೇರಿ ತಾಲ್ಲೂಕಿನ ಒಂದು ಶಾಖೆಯ ಮೂಲಕ ದೊರೆತಿರುವ ದೂರಿನಂತೆ ಪೋಲಿಸರು ಮಹಿಳೆಯೊಬ್ಬರು ಸೇರಿದಂತೆ ಮತ್ತೊಬ್ಬ ವ್ಯಕ್ತಿಯನ್ನು ಬಂಧಿಸಿದ್ದಾರೆ.

ಈ ಪ್ರಕರಣದಲ್ಲಿ ನಕಲಿ ಚಿನ್ನಾಭರಣ ತಯಾರಿಕಾ ಜಾಲ ರಾಜ್ಯಾದ್ಯಂತ ಹರಡಿರುವ ಶಂಕೆ ಇದ್ದು, ಇದನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿ ತಪ್ಪಿತಸ್ಥರ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳುವಂತೆ ಸರ್ಕಾರವನ್ನು ಶೂನ್ಯವೇಳೆಯಲ್ಲಿ ಒತ್ತಾಯಿಸುತ್ತೇನೆ.

**ಶ್ರೀ ಕ್ಯಾತ್ಸಂದ ಎನ್. ರಾಜಣ್ಣ (ಸಹಕಾರ ಸಚಿವರು):-** ಮಾನ್ಯ ಸಭಾಪತಿಯವರೇ, ಈಗಾಗಲೇ ಮಾನ್ಯ ಸದಸ್ಯರಾದ ಶ್ರೀ ಸುಜಾ ಕುಶಾಲಪ್ಪನವರು ಶೂನ್ಯವೇಳೆಯಲ್ಲಿ ಏನು ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ, ನಾವು ಅದರ ಬಗ್ಗೆ ಈಗಾಗಲೇ ಸೂಕ್ತವಾದಂತಹ ಕ್ರಮವನ್ನು ತೆಗೆದುಕೊಳ್ಳುತ್ತೇವೆ. ಇದರ ಬಗ್ಗೆ ಪ್ರಪ್ರಥಮವಾಗಿ ವರದಿಯಾದ ಕೂಡಲೇ ದಿನಾಂಕ 14.12.2024ರಂದು ಎಫ್.ಐ.ಆರ್. ಅನ್ನು ಸಹ ಹಾಕಿದ್ದೇವೆ. ಅದರ ಜೊತೆಗೆ

ಎರಡು ಬಾರಿ ಶ್ರೀ ಮೊಹಮ್ಮದ್ ರಿಜ್ವಾನ್ ಇತರರು ಎಂಟು ಬಳೆಯನ್ನು ಅಡವಿಟ್ಟಿದ್ದರು. ಅವರು ಮೂರ್ನಾಲ್ಕು ಬಾರಿ ಇದೇ ಒಡವೆಯನ್ನು ಅಡವಿಟ್ಟಿದ್ದಾರೆ. ಆ ನಂಬಿಕೆ ಮೇಲೆ ಅವರು ಅಡವಿಡುವುದಕ್ಕೆ ಬಂದಾಗ ನೋಡಿದ್ದಾರೆ. ಈ ಚಿನ್ನದಲ್ಲಿ ಯಾವ ರೀತಿ ಇರುತ್ತದೆಂದರೆ, ಎರಡು layer gold ಅನ್ನು quoting ಮಾಡಿರುತ್ತಾರೆ. ಇವರು ಚೆಕ್ ಮಾಡುವಾಗ, ಮೇಲೆ ಇರುವಂತಹ layer ಅನ್ನು ನೋಡುತ್ತಾರೆ. ಆಗ ಅದು gold ಎಂದು ಬಂದು ಬಿಡುತ್ತದೆ. ಅದರ ಒಳಗೆ metal and copper ಗಳನ್ನು ಹಾಕಿರುತ್ತಾರೆ. ಅದಕ್ಕೋಸ್ಕರ ಎಲ್ಲಾ ಕಡೆಗಳಲ್ಲಿ, not only Kodagu DCC Bank ಎಂದು ಅಲ್ಲ. ರಾಜ್ಯದಲ್ಲಿರತಕ್ಕಂತಹ ಸಹಕಾರಿ ಬ್ಯಾಂಕುಗಳಲ್ಲಿ ಸಹಕಾರಿ ಸಂಸ್ಥೆಗಳು VSSN Bank ಗಳು ಇವೆ. ಮತ್ತೆ Urban Bank ಗಳಿವೆ. ಎಲ್ಲೆಲ್ಲಿ ಗೋಲ್ಡ್ ಲೋನ್‌ಗಳನ್ನು ಕೊಡುತ್ತಾರೆ. ಅಂತಹ ಕಡೆಗಳಲ್ಲಿ ಸರ್ವೆಸಾಮಾನ್ಯವಾಗಿ ಈ ರೀತಿಯ ಪ್ರಕರಣಗಳು ನಡೆಯುತ್ತವೆ. ಆ ಹಿನ್ನೆಲೆಯಲ್ಲಿ ಇದು ನನ್ನ ಗಮನಕ್ಕೆ ಬಂದ ಮೇಲೆ, ನಾನು ಅಲ್ಲಿ ನಡೆದ ಶ್ರೀ ಗಣಪತಿ ಯವರ ಮದುವೆಗೆ ಬಂದಿದ್ದಾಗ, ಬ್ಯಾಂಕ್‌ಗೆ ಭೇಟಿ ನೀಡಿದ್ದೆ. ಆಗ ಇದು ನನ್ನ ಗಮನಕ್ಕೆ ಬಂತು. ಆಗ ನಾನು ಅವರಿಗೆ ಇದನ್ನು ಬೇರೆ ಬೇರೆಯವರ ಕಡೆ verify ಮಾಡಿಸಿ ಎಂದು ಹೇಳಿದ ಮೇಲೆ ವಿರಾಜಪೇಟೆ, ಕಡಂಗ, ಭಾಗಮಂಡಲ ಮತ್ತು ಕಾಲೇಜು ರಸ್ತೆಯ ಮುಖ್ಯ ಶಾಖೆ ಮತ್ತು ಇನ್ನು ಕೆಲವು ಕಡೆಗಳಲ್ಲೂ ಸಹ report ಆಯಿತು. ಹಾಗಾಗಿ, ನಾವು ಅಲ್ಲಿಯೂ ಸಹ ಸೂಕ್ತವಾದ ಕ್ರಮವನ್ನು ತೆಗೆದುಕೊಂಡಿದ್ದೇವೆ. ಅದರೆ ಜೊತೆ ಜೊತೆಗೆ ರಾಜ್ಯದಲ್ಲಿರತಕ್ಕಂತಹ ಅದನ್ನು ಹೊರತುಪಡಿಸಿ, ಹದಿನಾಲ್ಕು ಜಿಲ್ಲಾ ಬ್ಯಾಂಕುಗಳಿರುತ್ತವೆ. ಒಟ್ಟು ಇಪ್ಪತ್ತೊಂದರಲ್ಲಿ ಒಂದು ಹೋದರೆ, ಇನ್ನು ಉಳಿದ ಇಪ್ಪತ್ತು ಬ್ಯಾಂಕುಗಳಲ್ಲೂ ಕೂಡ ಈ ಚಿನ್ನದ ಆಭರಣಗಳನ್ನು ಮತ್ತೆ ಬೇರೆ ಬೇರೆ ಕಡೆಯವರಿಂದ ಅಜಮಾಯಿಷಿ ಮಾಡಿಸಬೇಕು. ಅದರಲ್ಲಿ ಏನಾದರೂ ಲೋಪಗಳು ಇದ್ದರೆ, ಅದಕ್ಕೆ ನೀವು ಕ್ರಮ ಕೈಗೊಳ್ಳಬೇಕೆಂದು ಮೌಖಿಕವಾಗಿ ಸೂಚನೆಯನ್ನು ಸಹ ಕೊಟ್ಟಿದ್ದೇನೆ. ಆ ಹಿನ್ನೆಲೆಯಲ್ಲಿ ನಾವು ಎಚ್ಚರಿಕೆಯನ್ನು ವಹಿಸಿದ್ದೇವೆ. ಇದರಲ್ಲೂ ಕೂಡ ಸುಮಾರು ಎಂಟು ಪ್ರಕರಣಗಳಲ್ಲಿ ಸುಮಾರು ಮೂವತ್ತು ಲಕ್ಷದವರೆಗಿನ ಹಣ. ಆದರೆ, ಮಾನ್ಯ ಸದಸ್ಯರು ಹೇಳುತ್ತಿರುವುದು ಕೇವಲ ಎಂಟರಿಂದ ಹತ್ತು ಲಕ್ಷ ಮಾತ್ರ. ಈ ರೀತಿ ಸುಮಾರು ಮೂವತ್ತು ಲಕ್ಷದವರೆಗೆ ವಿವಿಧ ಶಾಖೆಗಳಲ್ಲಿ report ಆಗಿದೆ. ಅವುಗಳಿಗೆಲ್ಲಾ ಕ್ರಮ ಕೈಗೊಂಡು, criminal action ಅನ್ನು ಸಹ ತೆಗೆದುಕೊಂಡಿದ್ದೇವೆ. ಅವರಿಂದ ವಸೂಲಾತಿಗೆ ಸಂಬಂಧಪಟ್ಟಂತೆ ಏನು ಕ್ರಮ ತೆಗೆದುಕೊಳ್ಳಬಹುದೋ ಅದನ್ನು ಸಹ ತೆಗೆದುಕೊಂಡಿದ್ದೇವೆ. ಮತ್ತೆ ಎಚ್ಚರಿಕೆ ವಹಿಸುವುದಕ್ಕೆ ಬೇರೆ ಬ್ಯಾಂಕುಗಳಿಗೂ ಕೂಡ ಸೂಚನೆ ನೀಡಿದ್ದೇನೆ.

**ಇ) ವಿಷಯ:- ಕಾಳಗಿ ಹಾಗೂ ಅಂಕಲಗಾ ಏತ ನೀರಾವರಿ ಯೋಜನೆಗಳಿಗೆ ಅನುದಾನ ಬಿಡುಗಡೆ ಮಾಡುವ ಕುರಿತು.**

- - - - -

**ಶ್ರೀ ಜಗದೇವ್ ಗುತ್ತೇದಾರ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ಕಲ್ಯಾಣ ಕರ್ನಾಟಕ ಭಾಗದಲ್ಲಿರುವ ಕಲಬುರ್ಗಿಯಲ್ಲಿ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಉಪ ವಿಭಾಗ ಕಲಬುರ್ಗಿ ವ್ಯಾಪ್ತಿಯಲ್ಲಿ ಕಾಳಗಿ ತಾಲ್ಲೂಕಿನ ಕಾಳಜಿ ಏತ ನೀರಾವರಿ ಯೋಜನೆ ಹಾಗೂ ಕಮಲಾಪೂರ ತಾಲ್ಲೂಕಿನ ಅಂಕಲಗಾ ಏತ ನೀರಾವರಿ ಯೋಜನೆಗಳು ಬರುತ್ತವೆ.

ಆದರೆ, ಎರಡೂ ಏತ ನೀರಾವರಿ ಯೋಜನೆಗಳು ಸಮರ್ಪಕವಾಗಿ ನಿರ್ವಹಣೆ ಇಲ್ಲದೆ ದುರಸ್ಥಿಯಲ್ಲಿರುವುದರಿಂದ ಏತ ನೀರಾವರಿಯ ಸದ್ಬಳಕೆಯಾಗುತ್ತಿಲ್ಲ.

ಕಾಳಗಿ ತಾಲ್ಲೂಕಿನ ಏತ ನೀರಾವರಿ ಯೋಜನೆಯ ಹತ್ತಿರ ಐತಿಹಾಸಿಕ ನೀಲಕಂಠ ಕಾಳೇಶ್ವರ ದೇವಸ್ಥಾನವಿದ್ದು ಅದರ ಪಕ್ಕದಲ್ಲಿ 3-4 ಪುಷ್ಕರಣಿಗಳು ಹಾಗೂ ಒಂದು ನಾಲಾ ಇದೆ. ಆ ಪುಷ್ಕರಣಿಯಲ್ಲಿ ವಿಸ್ಮಯಕಾರಿಯಾದ ಕೆಲವೊಂದು ನೀರಿನ ಬುಗ್ಗೆಗಳು ಇದ್ದು ಅದರಿಂದ ನೀರು ಮೇಲೆ ಪುಟಿದು, ನೀರಿನ ಉಗಮವಾಗುತ್ತಿರುತ್ತದೆ. ಆ ನೀರು ಹಾಗೆಯೇ ಹಳ್ಳಕ್ಕೆ ಹರಿದು ಹೋಗಿ, ಜನಸಾಮಾನ್ಯರಿಗೆ ಉಪಯೋಗವಾಗದೆ ಪೋಲಾಗುತ್ತಿದೆ. ಆದ್ದರಿಂದ ಅಲ್ಲಿ ಪಕ್ಕದಲ್ಲಿಯೇ ಒಂದು ಕೆರೆಯನ್ನು ಕಟ್ಟಿ ಆ ನೀರನ್ನು ಸಂಗ್ರಹಿಸಿದರೆ ನಮ್ಮ ಭಾಗದ ರೈತರಿಗೆ ಹಾಗೂ ಜಾನುವಾರುಗಳಿಗೆ ಅನುಕೂಲವಾಗುತ್ತದೆ.

ಸದರಿ ಕಾರ್ಯವನ್ನು ತ್ವರಿತಗತಿಯಲ್ಲಿ ಕೈಗೊಳ್ಳಬೇಕೆಂದು ಹಾಗೂ ಏತ ನೀರಾವರಿಗಳಿಗೆ ಅನುದಾನವನ್ನು ಕೂಡಲೇ ನೀಡಬೇಕೆಂದು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸುತ್ತಿದ್ದೇನೆ. ಹಾಗೂ ಮಾನ್ಯ ಸಣ್ಣ ನೀರಾವರಿ ಸಚಿವರಿಂದ ಉತ್ತರವನ್ನು ಬಯಸುತ್ತೇನೆ.

**ಶ್ರೀ ಎನ್.ಎಸ್.ಬೋಸರಾಜು (ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ವಿಷಯವನ್ನು ಪ್ರಸ್ತಾಪಿಸಿದಂತೆ, ಗುಲ್ಬರ್ಗಾ ಜಿಲ್ಲೆಯಲ್ಲಿ ಒಂದು ಕಾಳಗಿ ಎಂದು, Lift Irrigation scheme, 1972ರಲ್ಲಿ ಇಲಾಖೆಯ ವತಿಯಿಂದ ನಿರ್ಮಾಣ ಮಾಡಿದ್ದಾರೆ. ಅದರಿಂದ 142 ಹೆಕ್ಟೇರ್‌ಗಳಿಗೆ ಮಾತ್ರ ನೀರಾವರಿಯಾಗುವಂಥದ್ದು. ಅದು ಈಗ ಬಹಳಷ್ಟು ಹಳೆಯದಾಗಿರುವುದರಿಂದ, pump and motor ದುರಸ್ಥಿಗೆ ಬಂದಿವೆ. ಅದಕ್ಕೆ ಸುಮಾರು 250 ಲಕ್ಷ ರೂಪಾಯಿಗಳನ್ನು ನೀಡಿದರೆ, ಅದನ್ನು upgrade ಮಾಡಿದರೆ ರೈತರಿಗೆ ಅನುಕೂಲವಾಗುತ್ತದೆ ಎಂಬ ಮಾತನ್ನು ಹೇಳಿದ್ದಾರೆ. ಮತ್ತೊಂದು ಅದೇ ಜಿಲ್ಲೆಯಲ್ಲಿ ಅಂಕಲಗಾ ಗ್ರಾಮದ ಹತ್ತಿರ Lift Irrigation scheme ಇದೆ. ಅದನ್ನು 1960ರಲ್ಲಿ ಅದನ್ನು

establish ಮಾಡಿದ್ದಾರೆ. ಅಲ್ಲಿ ಸುಮಾರು 222 ಹೆಕ್ಟೇರ್‌ಗೆ ನೀರಾವರಿಯಾಗುತ್ತಿದೆ. ಅದು ಸಹ ಹಳೆಯದಾಗಿ pump and motor ದುರಸ್ಥಿಗೆ ಬಂದಿವೆ. ಅದನ್ನು ಸ್ವಲ್ಪ upgrade ಮಾಡಿ, ದುರಸ್ಥಿ ಮಾಡಿದರೆ, ರೈತರಿಗೆ ಅನುಕೂಲವಾಗುತ್ತದೆ ಎಂದು ಪ್ರಸ್ತಾಪ ಮಾಡಿದ್ದಾರೆ. ಈ ಎರಡನ್ನೂ ಸಹ ಆದ್ಯತೆಯ ಮೇರೆಗೆ ಮಾಡಿಕೊಡುತ್ತೇವೆ. ಅದರ ಜೊತೆಗೆ ಐತಿಹಾಸಿಕ ನೀಲಕಂಠ ಕಾಳೇಶ್ವರ ದೇವಸ್ಥಾನದ ಬಗ್ಗೆ ಪ್ರಸ್ತಾವನೆ ಮಾಡಿದ್ದಾರೆ. ಅದನ್ನು ಈಗಾಗಲೇ ಸುಮಾರು ಐದು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ, bridge-cum-barrage ನಿರ್ಮಾಣವಾಗಿದೆ. ಇದರಿಂದ water storge ಅಗುತ್ತಿದೆ. ಅದಕ್ಕೆ ಏನೇನು ದುರಸ್ಥಿ ಮಾಡಬೇಕೋ ಆ ದುರಸ್ಥಿ ಮಾಡುವುದಕ್ಕೆ ತಕ್ಷಣ ಕ್ರಮ ತೆಗೆದುಕೊಳ್ಳುತ್ತೇವೆ.

**ಈ) ವಿಷಯ:- ಮೂಲಗೇಣಿದಾರರು ಸಲ್ಲಿಸಿರುವ ಅರ್ಜಿಗಳನ್ನು ಇತ್ಯರ್ಥಪಡಿಸಲು ವಿಶೇಷ ಅಭಿಯೋಜಕರನ್ನು ನೇಮಿಸುವ ಕುರಿತು.**

\- - - - - -

**ಶ್ರೀ ಐವನ್ ಡಿ'ಸೋಜಾ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಶೂನ್ಯವೇಳೆಯಲ್ಲಿ ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ಅವಕಾಶ ನೀಡಿದ್ದಕ್ಕಾಗಿ ಧನ್ಯವಾದಗಳು. 'ಸಿಗದ ಮೂಲಗೇಣಿ ನ್ಯಾಯ, ಮೂಲಗೇಣಿ ಒಕ್ಕಲುಗಳಿಗೆ ಮಾಲೀಕತ್ವ ನೀಡುವ ಕಾಯಿದೆ ಜಾರಿಯಾಗಿ 12 ವರ್ಷ' ಎಂಬ ಶೀರ್ಷಿಕೆಯಡಿಯಲ್ಲಿ ಪ್ರಕಟವಾದ ಸಾರ್ವಜನಿಕ ಮಹತ್ವವುಳ್ಳ ವಿಚಾರವನ್ನು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಲು ಅನುಮತಿ ನೀಡಿದ್ದಕ್ಕಾಗಿ ಮತ್ತೊಮ್ಮೆ ಧನ್ಯವಾದಗಳನ್ನು ಅರ್ಪಿಸುತ್ತಾ, ಮೂಲಗೇಣಿ ಒಕ್ಕಲುಗಳಿಗೆ ಮಾಲೀಕತ್ವ ನೀಡುವ ಕಾಯಿದೆ ಜಾರಿಯಾಗಿ 12 ವರ್ಷ ಕಳೆದರೂ ಒಕ್ಕಲುಗಳಿಗೆ ಇನ್ನೂ ನ್ಯಾಯ ಸಿಕ್ಕಿಲ್ಲ. ಅನುಭೋಗಿ ನೆಲ ಸ್ವಂತದ್ದಾಗಿಲ್ಲ. ಮೂಲಗೇಣಿ ಪದ್ಧತಿ ರದ್ದತಿಗೆ 2012ರ ಜುಲೈ 13ರಂದು ರಾಷ್ಟ್ರಪತಿಯವರ ಅಂಕಿತ ದೊರಕಿತ್ತು. ಮೂಲಗೇಣಿದಾರರಿಗೆ ಮಾಲೀಕತ್ವ ನೀಡಲು ಕರ್ನಾಟಕ ಮೂಲಗೇಣಿ ಅಥವಾ ಒಳಮೂಲಗೇಣಿದಾರರಿಗೆ ಮಾಲೀಕತ್ವವನ್ನು ಪ್ರದಾನ ಮಾಡುವಂತಹ ಅಧಿನಿಯಮ 2011 ಅನ್ನು ಕರ್ನಾಟಕ ರಾಜ್ಯ ಪತ್ರದಲ್ಲಿ ದಿನಾಂಕ 25.07.2012ರಂದು ಪ್ರಕಟಿಸಿತ್ತು. 2012ರಲ್ಲಿ ಕಾಯಿದೆ ಜಾರಿಯಾಗುತ್ತಿದ್ದಂತೆಯೇ ಲಕ್ಷಾಂತರ ಮಂದಿ ಒಕ್ಕಲುಗಳು ತಮ್ಮದೇ ಜಾಗದ ಕನಸು ಕಾಣುತ್ತಿದ್ದರು. ಈ ಕುರಿತು ನಿಯಮಾವಳಿಗಳನ್ನು ದಿನಾಂಕ 17.11.2016ರಂದು ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಗೊಂಡಿತ್ತು. 2016ರಲ್ಲಿ ಈ ಕುರಿತು ನಿಯಮಗಳ ರಚನೆಯಾಗಿ ಇನ್ನೇನು ಎಲ್ಲವೂ ಸರಿಯಾಗುತ್ತದೆ ಎನ್ನುವಾಗಲೇ ಇದರ ವಿರುದ್ಧ ಮೂಲಿದಾರರು ಹೈಕೋರ್ಟ್ ಮೆಟ್ಟಿಲೇರಿದರು. ಬಳಿಕ ಸರ್ಕಾರದ ಪರ ತೀರ್ಪು ಪ್ರಕಟವಾದರೂ ಒಕ್ಕಲುಗಳಿಗೆ ನ್ಯಾಯ ದೊರಕಿಸಲು ಸರ್ಕಾರ

ಮುಂದಾಗಲಿಲ್ಲ ಎಂಬ ಹೇಳಿಕೆಯು ‘ಉದಯವಾಣಿ’ ಮತ್ತು ‘ವಿಜಯ ಕರ್ನಾಟಕ’ ದಿನಪತ್ರಿಕೆಯಲ್ಲಿ ಪ್ರಕಟಗೊಂಡಿರುತ್ತದೆ.

ಸ್ವಾಧೀನವಿರುವ ಭೂಮಿಯ ಮೇಲೆ ಸಂಪೂರ್ಣ ಒಡೆತನವಿಲ್ಲದ ಕಾರಣ ಜಾಗವನ್ನು ಅಭಿವೃದ್ಧಿಪಡಿಸುವಂತಿಲ್ಲ. ಇದರಿಂದ ಬ್ಯಾಂಕ್‌ಗಳಿಂದ ಸಾಲವನ್ನು ಪಡೆಯುವುದು ಕಷ್ಟ. ಅದನ್ನು ಮಾರುವ ಹಕ್ಕು ಮೂಲಗೇಣಿದಾರರಿಗೆ ಇಲ್ಲ. ಇದರಿಂದಾಗಿ ಉಭಯ ಜಿಲ್ಲೆಗಳಲ್ಲಿ ಇರುವ ನೂರಾರು ಎಕರೆ ನಿರುಪಯುಕ್ತವಾಗಿದೆ. ಮೂಲಗೇಣಿದಾರರು ತ್ರಿಶಂಕು ಸ್ಥಿತಿಯಲ್ಲಿ ಬದುಕುವಂತಾಗಿದೆ. ಮೂಲಗೇಣಿದಾರರ ಅನೇಕ ವರ್ಷಗಳ ಹೋರಾಟದ ಫಲವಾಗಿ ಅವರಿಗೆ ಜಮೀನಿನ ಪೂರ್ಣ ಮಾಲೀಕತ್ವ ಹಾಗೂ ಮೂಲಿದಾರರ ನ್ಯಾಯಯುತ ಪರಿಹಾರ ನೀಡುವ ಕಾಯಿದೆ ಜಾರಿಗೆ ಬಂದಿತ್ತು. ಪ್ರಸ್ತುತ ಸರ್ಕಾರವು ಮೂಲಗೇಣಿ ನೀಡುವ ಬಗ್ಗೆ 2012ರಲ್ಲಿ ಅರ್ಜಿಗಳನ್ನು ಆಹ್ವಾನಿಸಿ ದಕ್ಷಿಣ ಕನ್ನಡ ಜಿಲ್ಲೆ ಮತ್ತು ಉಡುಪಿ ಜಿಲ್ಲೆಗಳಲ್ಲಿ ಸುಮಾರು 25 ಸಾವಿರಕ್ಕೂ ಅಧಿಕ ಅರ್ಜಿದಾರರು ಸರ್ಕಾರಕ್ಕೆ ಅರ್ಜಿಯನ್ನು ಸಲ್ಲಿಸಿದರು. ಅವುಗಳ ಇತ್ಯರ್ಥಕ್ಕೆ ತಾಲ್ಲೂಕು ಕಛೇರಿಯಲ್ಲಿ ಬಾಕಿ ಇದೆ. ಇದರ ಬಗ್ಗೆ ಮೂಲಿದಾರರು ನ್ಯಾಯಾಲಯಕ್ಕೆ ಅರ್ಜಿಗಳನ್ನು ಸಲ್ಲಿಸಿ, ಬಡ ಮೂಲಗೇಣಿದಾರರಿಗೆ ತೊಂದರೆಯನ್ನು ನೀಡುತ್ತಿದ್ದಾರೆ. ಈ ಬಗ್ಗೆ ವಿಶೇಷ ಅಭಿಯೋಜಕರನ್ನು ರಚನೆ ಮಾಡಿ, ಸದರಿ ಪ್ರಕರಣವನ್ನು ಇತ್ಯರ್ಥಗೊಳಿಸಿ, ಸರ್ಕಾರ ಮುತುರ್ವಜಿ ವಹಿಸಬೇಕು. ಕರ್ನಾಟಕದ ಹೈಕೋರ್ಟ್ ನ್ಯಾಯಾಲಯದಲ್ಲಿ ಮೂಲಗೇಣಿ ಪರವಾಗಿ ತೀರ್ಪು ಬಂದಿದೆ. ಇದು ಮೂಲಿದಾರರು ಅಪೀಲು ಸಲ್ಲಿಸುವ ಮೂಲಕ ತೊಂದರೆಯನ್ನು ನೀಡುತ್ತಿದ್ದಾರೆ. ಪೋಲೀಸರನ್ನು ಬಳಸಿಕೊಂಡು ದಬ್ಬಾಳಿಕೆ ನಡೆಸುತ್ತಿದ್ದಾರೆ. ಮೂಲಗೇಣಿದಾರರನ್ನು ಒಕ್ಕಲು ಎಬ್ಬಿಸಲು ಕ್ರಮಕ್ಕೆ ಮುಂದಾಗುತ್ತಿದ್ದಾರೆ. ಆದುದರಿಂದ, ವಿಶೇಷ ಅಭಿಯೋಜಕರನ್ನು ನೇಮಕ ಮಾಡಿ ಕೂಡಲೇ ಮೂಲಗೇಣಿದಾರರು ಸಲ್ಲಿಸಿರುವ ಅರ್ಜಿಗಳನ್ನು ಇತ್ಯರ್ಥಗೊಳಿಸಲು ಕ್ರಮಕೈಗೊಂಡು ಅವರಿಗೆ ಭೂಮಿಯ ಹಕ್ಕನ್ನು ನೀಡಬೇಕಂದು ಮಾನ್ಯ ಕಂದಾಯ ಸಚಿವರಿಗೆ ಶೂನ್ಯವೇಳೆಯಲ್ಲಿ ವಿಷಯವನ್ನು ಪ್ರಸ್ತಾಪಿಸುತ್ತೇನೆ.

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಸಂಬಂಧಪಟ್ಟ ಸಚಿವರಿಂದ ಉತ್ತರವನ್ನು ಒದಗಿಸಲಾಗುವುದು.

(ಮುಂದು)

**(956) 18.12.2024 02.10 LL-BNS** **(ಉಪ ಸಭಾಪತಿಯವರ ಉಪಸ್ಥಿತಿ)**

**ಉ) ವಿಷಯ:- ಆರೋಗ್ಯ ಇಲಾಖೆಯ ಆಯುಷ್ಮಾನ್ ಯೋಜನೆಯಡಿಯಲ್ಲಿ ಹಿರಿಯ ನಾಗರಿಕರಿಗೆ ಸೂಕ್ತ ಸೇವೆಯನ್ನು ಒದಗಿಸುವ ಕುರಿತು**

\- - -

**ಶ್ರೀ ಪಿ.ಹೆಚ್. ಪೂಜಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಪ್ರಧಾನ ಮಂತ್ರಿಯವರಾದ ಶ್ರೀ ನರೇಂದ್ರ ಮೋದಿಜಿಯವರ ಕೇಂದ್ರ ಸರ್ಕಾರ 70 ವರ್ಷ ದಾಟಿದಂತಹ ಹಿರಿಯ ನಾಗರಿಕರಿಗೆ ಆಯುಷ್ಮಾನ್ ವಯೋ ವಂದನ್ ಕಾರ್ಡ್ ಯೋಜನೆಯಲ್ಲಿ ದೇಶದಲ್ಲಿಯೇ ಕರ್ನಾಟಕ ರಾಜ್ಯ 6ನೇ ಸ್ಥಾನದಲ್ಲಿದೆ. ಈ ಎಲ್ಲಾ ವ್ಯವಸ್ಥೆ ಆದಾಗ್ಯೂ ಕೂಡ, "ಹಿರಿಯರಿಗೆ ಆಯುಷ್ಮಾನ್ ಸೇವೆಯೇ ಇಲ್ಲ" ಎಂಬ ಶೀರ್ಷಿಕೆಯ ವರದಿಯು ದಿನಾಂಕ:17.12.2024ರಂದು ವಿಜಯ ಕರ್ನಾಟಕ ದಿನಪತ್ರಿಕೆಯಲ್ಲಿ ಪ್ರಕಟಣೆಯಾಗಿರುವ ವಿಷಯವನ್ನು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಲು ಅನುಮತಿ ನೀಡಿದ್ದಕ್ಕಾಗಿ ಧನ್ಯವಾದಗಳು.

ರಾಜ್ಯದಲ್ಲಿ 70 ವರ್ಷ ದಾಟಿದ ಹಿರಿಯ ನಾಗರಿಕರಿಗೆ "ಆಯುಷ್ಮಾನ್ ವಯೋ ವಂದನ್ ಕಾರ್ಡ್" ಯೋಜನೆಯಲ್ಲಿ ದೇಶದಲ್ಲಿಯೇ ಕರ್ನಾಟಕ ರಾಜ್ಯ 6ನೇ ಸ್ಥಾನದಲ್ಲಿದೆ. ರಾಜ್ಯದ ಬೆಂಗಳೂರು ನಗರ, ಮೈಸೂರು, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹಿರಿಯ ನಾಗರಿಕರಿಗೆ ಆಯುಷ್ಮಾನ್ ವಯೋ ವಂದನ್ ಕಾರ್ಡ್ ಹೆಚ್ಚಿನ ಪ್ರಗತಿಯಲ್ಲಿದ್ದು, ಹಿರಿಯರಿಗೆ ಕಾರ್ಡ್ ನೋಂದಣಿಗೆ ಮಾತ್ರ ಅವಕಾಶ ಸಿಗುತ್ತಿದೆಯೇ ಹೊರತು, ಈ ಯೋಜನೆಯಡಿಯಲ್ಲಿ ಯಾವುದೇ ರೀತಿಯ ಸೇವೆಯೂ ಇಲ್ಲಿಯವರೆಗೂ ಹಿರಿಯ ನಾಗರಿಕರಿಗೆ ತಲುಪಿಲ್ಲ ಎಂದು ವರದಿಯಾಗಿದೆ. ಈ ರಾಜ್ಯದಲ್ಲಿ 70 ವರ್ಷ ದಾಟಿದ ಫಲಾನುಭವಿಗಳ ವಿಚಾರದಲ್ಲಿ ದೇಶದಲ್ಲಿಯೇ ಅತೀ ಹೆಚ್ಚು ಮಂದಿ ಮಧ್ಯಪ್ರದೇಶ ರಾಜ್ಯದವರು, ಕೇರಳ, ಉತ್ತರ ಪ್ರದೇಶ, ಗುಜರಾತ್, ಬಿಹಾರ ಮತ್ತು ಕರ್ನಾಟಕ ಸೇರಿದಂತೆ ಒಟ್ಟು 10,01,497 ಮಂದಿ ಪೋರ್ಟಲ್‌ನಲ್ಲಿ ನೋಂದಣಿ ಮಾಡಿಸಿಕೊಂಡಿದ್ದಾರೆ.

ಆಯುಷ್ಮಾನ್ ಭಾರತ್ ಯೋಜನೆಯಲ್ಲಿ ಬಿಪಿಎಲ್ ಕಾರ್ಡ್‌ದಾರರಿಗೆ ಚಿಕಿತ್ಸೆ ಸಂಪೂರ್ಣ ಉಚಿತವಾಗಿದ್ದು, ಎಪಿಎಲ್ ಕಾರ್ಡ್‌ದಾರರಿಗೆ ಚಿಕಿತ್ಸೆಯ ಶೇಕಡ 30 ರಷ್ಟನ್ನು ಸರ್ಕಾರ ಭರಿಸುತ್ತದೆ. ಉಳಿದ ಶೇಕಡ 70 ರಷ್ಟನ್ನು ರೋಗಿಯ ಕುಟುಂಬದವರು ಭರಿಸುವ ಅಗತ್ಯ ಇರುತ್ತದೆ. ಕೇಂದ್ರ ಸರ್ಕಾರದ ಆರೋಗ್ಯ ಇಲಾಖೆ ಹಿರಿಯರಿಗೆ ಆಯುಷ್ಮಾನ್ ಭಾರತ್ ಯೋಜನೆ ಜಾರಿಗೆ ತಂದ ಬಹಳಷ್ಟು ದಿನಗಳ ಬಳಿಕ ಕರ್ನಾಟಕದಲ್ಲಿ ಇದರ ನೋಂದಣಿಗೆ ಅವಕಾಶ ನೀಡಲಾಗಿತ್ತು. ಆದರೆ, ಕಾರ್ಡ್ ನೋಂದಣಿಗೆ ಮಾತ್ರ ಅವಕಾಶವಿದ್ದು, ಇದರ ಸೇವೆಯೂ ಅದರಲ್ಲೂ ಎಪಿಎಲ್ ಕಾರ್ಡ್‌ದಾರರಿಗೆ ಈ ಕಾರ್ಡ್‌ನ ಪೂರ್ಣ ಲಾಭ ಸಿಕ್ಕಿಲ್ಲ ಎಂದು ಹಿರಿಯ ನಾಗರಿಕರ ಅಳಲಾಗಿದೆ. ಅದರಲ್ಲಿಯೂ, ಎಪಿಎಲ್ ಕಾರ್ಡ್ ಹೊಂದಿರುವ ವಯೋ ವಂದನ್ ಕಾರ್ಡ್ ಮಾಡಿಸಿಕೊಂಡವರಿಗೆ ವರದಾನವಾಗಿಲ್ಲ ಎಂಬುದು ಅತ್ಯಂತ ನೋವಿನ ಸಂಗತಿ.

ಹಿರಿಯರಿಗೆ ಕಣ್ಣಿನ ಪೊರೆ ಶಸ್ತ್ರಚಿಕಿತ್ಸೆ, ಸ್ಟ್ರೋಕ್, ಹೀಮೋಡಯಾಲಿಸಿಸ್, ಎಂಟೆರಿಕ್ ಫೀವರ್ ಮತ್ತಿತರ ಕಾಯಿಲೆ ಹಾಗೂ ಆರೋಗ್ಯ ಸಮಸ್ಯೆಗಳಿಗೆ ಕಾರ್ಡ್ ಬಳಸಿ, ಚಿಕಿತ್ಸೆ ಪಡೆಯಬಹುದಾಗಿದೆ. ಆದರೆ, ಯಾವುದೇ ರೀತಿಯ ಸೇವೆ ಸಿಗುತ್ತಿಲ್ಲ. ರಾಜ್ಯದ ಹಿರಿಯ ನಾಗರಿಕರ ನೋವನ್ನು ಅತ್ಯಂತ ಗಂಭೀರವಾಗಿ ಪರಿಗಣಿಸಿ, ಆಯುಷ್ಮಾನ್ ಯೋಜನೆಯಡಿಯಲ್ಲಿ ಹಿರಿಯರಿಗೆ ಸೇವೆ ಸಿಗುವಂತೆ ಸರ್ಕಾರ ಕ್ರಮ ಕೈಗೊಳ್ಳಬೇಕೆಂದು ಈ ಮೂಲಕ ಶೂನ್ಯವೇಳೆಯಲ್ಲಿ ರಾಜ್ಯ ಸರ್ಕಾರವನ್ನು ಒತ್ತಾಯಿಸುತ್ತೇನೆ.

**ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿರುವ ವಿಷಯಕ್ಕೆ ಸಂಬಂಧಪಟ್ಟ ಸಚಿವರಿಂದ ನಂತರ ಉತ್ತರ ಒದಗಿಸಲಾಗುವುದು.

**ಊ) ವಿಷಯ:- ಕಲಬುರಗಿ ಜಿಲ್ಲೆಯ ಮಲ್ಲಾಬಾದ್ ಏತ ನೀರಾವರಿ ಯೋಜನೆಯ ಕಾಮಗಾರಿಯನ್ನು ಪೂರ್ಣಗೊಳಿಸುವ ಕುರಿತು**

\- - -

**ಡಾ: ಬಿ.ಜಿ. ಪಾಟೀಲ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ದಿನಾಂಕ:17.12.2024 ರಂದು "ವಿಜಯವಾಣಿ ದಿನಪತ್ರಿಕೆ"ಯಲ್ಲಿ "ನೀರಾವರಿ ಕಾಮಗಾರಿ ಆರಂಭಿಸಿ" ಎಂಬ ಶೀರ್ಷಿಕೆಯಡಿ ವರದಿಯಾಗಿರುವುದನ್ನು ಶೂನ್ಯ ವೇಳೆಯಲ್ಲಿ ವಿಷಯ ಪ್ರಸ್ತಾಪಿಸಲು ಅವಕಾಶ ನೀಡಿದ್ದಕ್ಕಾಗಿ ಧನ್ಯವಾದಗಳು.

ಕಲಬುರಗಿ ಜಿಲ್ಲೆಯ ಮಲ್ಲಾಬಾದ್ ಏತ ನೀರಾವರಿ ಯೋಜನೆಯ ಕಾಮಗಾರಿಯನ್ನು ಪೂರ್ಣಗೊಳಿಸಲು ಆಗ್ರಹಿಸಿ ಜೇವರ್ಗಿ ತಾಲ್ಲೂಕಿನ ಚಿಗರಳ್ಳಿ ಬಳಿ ರಾಷ್ಟ್ರೀಯ ಹೆದ್ದಾರಿಯಲ್ಲಿ ಸಾವಿರಾರು ರೈತರು ಎತ್ತಿನ ಬಂಡಿಯೊಂದಿಗೆ ಬೃಹತ್ ಪ್ರತಿಭಟನೆ ನಡೆಸುತ್ತಿದ್ದು, ನಾಲ್ಕು ದಶಕದ ಹೋರಾಟದ ಫಲದಿಂದ ಮಲ್ಲಾಬಾದ್ ಏತ ನೀರಾವರಿ ಯೋಜನೆ ಆರಂಭಿಸಿದ್ದು, ನಂತರ ಕಾಮಗಾರಿ ಸ್ಥಗಿತಗೊಳಿಸಲಾಗಿದೆ. ಜೇವರ್ಗಿ-ಯಡ್ರಾಮಿ ರೈತರು ಹೋರಾಟ ನಡೆಸಿದ್ದರಿಂದ ಹಿಂದಿನ ಸರ್ಕಾರ 330.40 ಕೋಟಿ ರೂಪಾಯಿಗಳ ಕಾಮಗಾರಿಗೆ ಅನುಮೋದನೆ ನೀಡಿ, ಟೆಂಡರ್ ಪ್ರಕ್ರಿಯೆ ಆರಂಭಿಸಿತ್ತು. ಆದರೆ, ವಿಧಾನಸಭೆ ಚುನಾವಣೆ ಘೋಷಣೆಯಾಗಿದ್ದರಿಂದ ಪ್ರಕ್ರಿಯೆ ಸ್ಥಗಿತಗೊಂಡಿದೆ ಎಂದು ಪ್ರತಿಭಟನಾಕಾರರು ಆಕ್ರೋಶ ವ್ಯಕ್ತಪಡಿಸಿದರು. ವಿಧಾನಸಭೆ ಚುನಾವಣೆ ಪ್ರಚಾರದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ 24 ಗಂಟೆಯಲ್ಲಿಯೇ ಟೆಂಡರ್ ಕರೆಯುವುದಾಗಿ ಹೇಳಿದ್ದರು. ಕಾಂಗ್ರೆಸ್ ಅಧಿಕಾರಕ್ಕೆ ಬಂದು ಎರಡು ವರ್ಷಗಳಾಗುತ್ತಿದ್ದರೂ ಯಾವುದೇ ಕೆಲಸ ಆರಂಭವಾಗಿಲ್ಲ. ಆದ್ದರಿಂದ, ಸದರಿ ಕಾಮಗಾರಿ ಟೆಂಡರ್ ಕರೆದು ಕೂಡಲೇ ಕಾಮಗಾರಿಯನ್ನು ಪ್ರಾರಂಭಿಸಲು ರೈತರ ಪರವಾಗಿ ನಾನು ಸದನದ ಶೂನ್ಯ ವೇಳೆಯಲ್ಲಿ ಚರ್ಚಿಸಲು ರಾಜ್ಯ ಸರ್ಕಾರಕ್ಕೆ ಒತ್ತಾಯಿಸುತ್ತೇನೆ.

**ಶ್ರೀ ಡಿ.ಕೆ. ಶಿವಕುಮಾರ್ (ಉಪ ಮುಖ್ಯಮಂತ್ರಿಗಳು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಡಾ: ಬಿ.ಜಿ. ಪಾಟೀಲರವರು ಹೇಳುವುದು ಸರಿಯಾಗಿದೆ. ನಾನು ಇಲ್ಲವೆಂದು ಹೇಳುವುದಿಲ್ಲ. ಇಲ್ಲಿ ಏನಾಗಿದೆಯೆಂದರೆ, ಶ್ರೀ ಬಸವರಾಜ ಬೊಮ್ಮಾಯಿಯವರು ಮುಖ್ಯಮಂತ್ರಿಯಾಗಿದ್ದಾಗ, 22,000 ಕೋಟಿ ರೂಪಾಯಿ ನೀರಾವರಿ

ಯೋಜನೆಗಾಗಿ ಬಜೆಟ್‌ನಲ್ಲಿ ಹಣ ಮೀಸಲಿಟ್ಟಿದ್ದರು. ನಾವು ಅಧಿಕಾರಕ್ಕೆ ಬಂದ ನಂತರ, ನಮಗೆ ಕೇಂದ್ರ ಸರ್ಕಾರದಲ್ಲಿ ಶ್ರೀಮತಿ ನಿರ್ಮಲ ಸೀತಾರಾಮನ್‌ರವರು ನಮ್ಮ ರಾಜ್ಯದ ನೀರಾವರಿ ಯೋಜನೆಗೆ ಸೇರಿಸಿದ್ದ 5,400 ಕೋಟಿ ರೂಪಾಯಿ ಹಣ ಏನು ಬರಬೇಕಾಗಿತ್ತು, ಅದು ಬರಲಿಲ್ಲ. ಆ ಹಣ ಬಿಡುಗಡೆ ಮಾಡುವ ವಿಷಯಕ್ಕೆ ಸಂಬಂಧಿಸಿದಂತೆ, ಈ ಹಿಂದೆ ಕೇಂದ್ರ ಸರ್ಕಾರದಲ್ಲಿ ಮಂತ್ರಿಗಳಾಗಿದ್ದಂತಹ ಶ್ರೀ ನಾರಾಯಣಸ್ವಾಮಿಯವರು ಮತ್ತು ಕೆಲವು ಎಂ.ಪಿ.ಗಳು ಸಹ ಸಾಕಷ್ಟು ಪ್ರಯತ್ನ ಮಾಡಿದ್ದರು. ಆದರೆ, ಕೆಲವು ಕಾರಣಾಂತರಗಳಿಂದ ಆ ಹಣ ಬರಲಿಲ್ಲ. ಹಾಗಾಗಿ, ನಮ್ಮ ಬಜೆಟ್‌ನಲ್ಲಿ 22,000 ಕೋಟಿ ರೂಪಾಯಿ ಹಣವನ್ನು 16,000 ಕೋಟಿ ರೂಪಾಯಿಗೆ ಇಳಿಸಬೇಕಾಯಿತು. ಇದರ ಜೊತೆಗೆ, ಇದಕ್ಕೆ ಟೆಂಡರ್ ಕರೆದು ಗ್ರೌಂಡ್ ಕೆಲಸ ಮಾಡಬೇಕು. ಕೋಲಾರ ಜಿಲ್ಲೆಯ ಎತ್ತಿನಹೊಳೆ ಯೋಜನೆಯಲ್ಲಿಯೂ ಸಹ ಇದೇ ಪರಿಸ್ಥಿತಿ ಇರುತ್ತದೆ. ಸದರಿ ಯೋಜನೆಯಲ್ಲಿ ತುಮಕೂರು ಜಿಲ್ಲೆಯವರೆಗೆ ನೀರನ್ನು ಬಿಡುವವರೆಗೂ ಆ ಕಾಮಗಾರಿಯನ್ನು ತಡೆಹಿಡಿದಿರುತ್ತೇವೆ. ಆಗ ಸುಮಾರು 28,000 ಕೋಟಿ ರೂಪಾಯಿ ಕಾಮಗಾರಿಗಳಿಗೆ ಬೋರ್ಡ್‌ನಲ್ಲಿ ಅನುಮೋದನೆ ಪಡೆದುಕೊಂಡಿದ್ದರು. ಆದರೆ, ಕೆಲಸ ಮಾಡಿಸಿಕೊಂಡು ಟೆಂಡರ್‌ದಾರರಿಗೆ ಹಣ ನೀಡದೆಹೋದರೆ ಬಹಳ ತೊಂದರೆಯಾಗುತ್ತದೆ ಮತ್ತು ಒತ್ತಡ ಜಾಸ್ತಿಯಾಗುತ್ತದೆ. ಈಗಾಗಲೇ ಸುಮಾರು ಒಂದೂವರೆ ಲಕ್ಷ ಕೋಟಿ ರೂಪಾಯಿಯ ಕೆಲಸ ನಡೆಯುತ್ತಿದೆ. ಆದರೆ, ನನ್ನ ಬಜೆಟ್ ಇರುವುದು ಸುಮಾರು 16,000 ಕೋಟಿ ರೂಪಾಯಿಗಳು. ಈ ಹಣದಲ್ಲಿ ಶೇಕಡ 50 ರಷ್ಟು ಹಣ ಹಳೆಯ ಸಾಲಕ್ಕೆ ಹೋಗುತ್ತದೆ. ಶೇಕಡ 25 ರಷ್ಟು ಹಣ ಭೂಸ್ವಾಧೀನ ಪ್ರಕ್ರಿಯೆಗೆ ಹೋಗುತ್ತದೆ. ಇನ್ನು ಶೇಕಡ 25 ರಷ್ಟು ಹಣ ಮಾತ್ರ ನಮ್ಮಲ್ಲಿ ಉಳಿಯುತ್ತದೆ. ಇತ್ತೀಚೆಗೆ ಕೃಷ್ಣ ಮೇಲ್ದಂಡೆ ಯೋಜನೆಗೆ ಸಂಬಂಧಪಟ್ಟಂತೆ, ಅನೇಕ ರೈತರು ಧರಣಿ ಮಾಡಿ, ಸರ್ಕಾರದ ಮೇಲೆ ಒತ್ತಡ ಹಾಕಿರುತ್ತಾರೆ. ಶ್ರೀ ಬಸವರಾಜ ಬೊಮ್ಮಾಯಿಯವರ ಕಾಲದಲ್ಲಿ ಕ್ಯಾಬಿನೆಟ್ ಸಬ್ ಕಮಿಟಿಯಿಂದ ಒಂದು ದರ ನಿಗದಿ ಮಾಡಿತ್ತು. ನಿಗದಿಯಾಗಿದ್ದ ದರವನ್ನು ವಯಾ ಮೀಡಿಯಾ ಮಾಡಬೇಕೆಂದು ಅಹೋರಾತ್ರಿ ಧರಣಿ ನಡೆದಿರುತ್ತದೆ. ಈ ವಿಷಯ ನಮ್ಮ ಗಮನದಲ್ಲಿದೆ. ಹಿಂದಿನ ಸರ್ಕಾರದ ಅವಧಿಯಲ್ಲಿ ಈ ಯೋಜನೆಗೆ ಅನುಮೋದನೆ ದೊರೆತಿರುತ್ತದೆ. ನಾವು ಕೂಡ ಮಾತು ಕೊಟ್ಟಿದ್ದೇವೆ. We will take it up. 130 ಕೋಟಿ ರೂಪಾಯಿಗಳ ಕಾಮಗಾರಿ ಅನುಮೋದನೆಯಾಗಿದ್ದು, ಅದು ಬೋರ್ಡ್‌ನಲ್ಲಿ ಬರಬೇಕಾಗಿದೆ. ಹಾಗಾಗಿ, ಮುಂದಿನ ಬೋರ್ಡ್‌ಗೆ ಅದನ್ನು ತೆಗೆದುಕೊಂಡು ಬಂದು, we will take up this work.

**ಖ) ವಿಷಯ:- ಅಂಗವೈಕಲ್ಯದ ಆಧಾರದ ಮೇಲೆ ಪಾಠ ಬೋಧನೆ ಮಾಡುವ ತರಬೇತಿ ಪಡೆದ ವಿಶೇಷ ಶಿಕ್ಷಕರ ನೇಮಕಾತಿ ಮಾಡಿಕೊಳ್ಳುವ ಬಗ್ಗೆ**

- - - - -

**ಶ್ರೀ ರಾಮೋಜಿಗೌಡ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ರಾಜ್ಯದ ಸರ್ಕಾರಿ ಶಾಲೆಗಳು ಮತ್ತು ಪದವಿಪೂರ್ವ ಕಾಲೇಜುಗಳಲ್ಲಿ ಓದುತ್ತಿರುವ ಅಂಗವಿಕಲ ವಿದ್ಯಾರ್ಥಿಗಳಿಗೆ ಅನುಕೂಲಕರವಾದ ಬೋಧನೆಗಾಗಿ ರಾಜ್ಯ ಸರ್ಕಾರ ಸೃಷ್ಟಿಸಿದ್ದ 3567 ಶಿಕ್ಷಕರ ನೇಮಕಾತಿ ಪ್ರಕ್ರಿಯೆ ನೆನೆಗುದಿಗೆ ಬಿದ್ದಿದೆ. ಆರ್ಥಿಕ ಇಲಾಖೆ ಒಪ್ಪಿಗೆ ನೀಡಿದ್ದರೂ ನೇಮಕಾತಿ ಪ್ರಕ್ರಿಯೆ ಪ್ರಾರಂಭಗೊಳ್ಳದ ಕಾರಣ ಸಾಮಾನ್ಯ ಶಾಲೆಗಳಿಗೆ

ದಾಖಲಾಗಿರುವ ಅಂಗವಿಕಲ ವಿದ್ಯಾರ್ಥಿಗಳ ಕಲಿಕೆ ಸ್ಥಗಿತಗೊಂಡಿದೆ. ಅಂಗವಿಕಲ ಹಕ್ಕುಗಳ ಕಾಯ್ದೆ 2016 ರನ್ವಯ ಸಾಮಾನ್ಯ ಶಾಲೆಗಳಲ್ಲಿ ಅಂಗವಿಕಲ ವಿದ್ಯಾರ್ಥಿಗಳು ಕಲಿಯಬೇಕು. ತಾರತಮ್ಯವಿಲ್ಲದೇ ಸಮನ್ವಯ ಶಿಕ್ಷಣ ಜಾರಿಯಾಗಬೇಕು. ಅಂಗವೈಕಲ್ಯದ ಆಧಾರದ ಮೇಲೆ ಪಾಠ ಬೋಧನೆ ಮಾಡುವ ವಿಶೇಷ ತರಬೇತಿ ಪಡೆದ ಶಿಕ್ಷಕರ ನೇಮಕಾತಿ ಮಾಡಿಕೊಳ್ಳಬೇಕು ಎಂದು 2021ರಲ್ಲಿ ಸಲ್ಲಿಕೆಯಾಗಿದ್ದ ರಿಟ್ ಅರ್ಜಿ ವಿಚಾರಣೆ ನಡೆಸಿದ್ದ ಸುಪ್ರೀಂ ಕೋರ್ಟ್ ಆದೇಶಿಸಿತ್ತು. ರಾಜ್ಯದಲ್ಲಿ 1 ರಿಂದ 12ನೇ ತರಗತಿವರೆಗೆ 43,719 ಅಂಗವಿಕಲ ವಿದ್ಯಾರ್ಥಿಗಳು ಸಾಮಾನ್ಯ ಶಾಲೆಗೆ ದಾಖಲಾಗಿದ್ದಾರೆ. 10 ವಿದ್ಯಾರ್ಥಿಗಳಿಗೆ ಒಬ್ಬರಂತೆ ವಿಶೇಷ ಶಿಕ್ಷಕರನ್ನು ನೇಮಕ ಮಾಡಿಕೊಳ್ಳಲು ನಡವಳಿ ರೂಪಿಸಿದ್ದ ಸರ್ಕಾರ 3,567 ವಿಶೇಷ ಶಿಕ್ಷಕರ ಹುದ್ದೆ ಸೃಷ್ಟಿಸಿದೆ. 2024ರ ಜನವರಿ 17 ರಂದು ಆರ್ಥಿಕ ಇಲಾಖೆ ಒಪ್ಪಿಗೆ ನೀಡಿದೆ. ಈಗಾಗಲೇ ಸುಪ್ರೀಂ ಕೋರ್ಟ್‌ಗೆ ಪ್ರಮಾಣ ಪತ್ರ ಸಲ್ಲಿಸಲಾಗಿದ್ದು, ಇದುವರೆವಿಗೂ ವಿಶೇಷ ಶಿಕ್ಷಕರನ್ನು ನೇಮಕ ಮಾಡಿಕೊಳ್ಳದ ಕಾರಣ ಅಂಗವಿಕಲ ವಿದ್ಯಾರ್ಥಿಗಳ ಶಿಕ್ಷಣ ನೆನೆಗುದಿಗೆ ಬಿದ್ದಿದೆ. ಆದುದರಿಂದ, ಅಂಗವೈಕಲ್ಯದ ಆಧಾರದ ಮೇಲೆ ಪಾಠ ಬೋಧನೆ ಮಾಡುವ ವಿಶೇಷ ಶಿಕ್ಷಕರ ತರಬೇತಿ ಪಡೆದ ವಿಶೇಷ ಶಿಕ್ಷಕರ ನೇಮಕಾತಿ ಮಾಡಿಕೊಳ್ಳುವ ಬಗ್ಗೆ ಶೂನ್ಯ ವೇಳೆಯಲ್ಲಿ ಮಾನ್ಯ ಶಿಕ್ಷಣ ಸಚಿವರ ಬಳಿ ವಿಷಯ ಪ್ರಸ್ತಾಪಿಸಬಯಸುತ್ತೇನೆ.

**ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿರುವ ವಿಷಯಕ್ಕೆ ಸಂಬಂಧಪಟ್ಟ ಸಚಿವರಿಂದ ನಂತರ ಉತ್ತರ ಒದಗಿಸಲಾಗುವುದು.

(ಮುಂದು)

(957) 18.12.2024 2.20 ವೈಎಲ್-ಬಿಎನ್‌ಎಸ್ (ಉಪ ಸಭಾಪತಿಯವರ ಉಪಸ್ಥಿತಿ)

**ಎ) ವಿಷಯ:- ನಡಿಪಟ್ಣ-ಕಾಡಿಪಟ್ಣದ ಅರಬ್ಬಿ ಸಮುದ್ರ ಮತ್ತು ಕಾಮಿನಿ ಹೊಳೆ ನಡುವಿನ ನಿವಾಸಿಗಳಿಗೆ ಹಕ್ಕು ಪತ್ರ ನೀಡುವ ಕುರಿತು.**

- - - -

**ಶ್ರೀ ಮಂಜುನಾಥ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಹಕ್ಕುಪತ್ರಕ್ಕೆ ಕಾಯುತ್ತಿರುವ 23 ಕುಟುಂಬಗಳು, 10 ವರ್ಷಗಳಿಂದ ಹೋರಾಟ ನಡಿಪಟ್ಣ-ಕಾಡಿಪಟ್ಣದ ಅರಬ್ಬಿ ಸಮುದ್ರ ಮತ್ತು ಕಾಮಿನಿ ಹೊಳೆ ನಡುವಿನ ನಿವಾಸಿಗಳು" ಎಂಬ ಶೀರ್ಷಿಕೆಯಡಿ ದಿನಾಂಕ: 17/12/2024ರ "ವಿಜಯ ಕರ್ನಾಟಕ" ದಿನಪತ್ರಿಕೆಯಲ್ಲಿ ವರದಿಯಾಗಿರುತ್ತದೆ.

ಆಡಳಿತದ ವೈಫಲ್ಯದಿಂದ ಕಳೆದ 40 ವರ್ಷಗಳಿಂದ ಪಡುಬಿದ್ರಿಯ ನಡಿಪಟ್ಣದ 19 ಹಾಗೂ ಕಾಡಿಪಟ್ಣದ 4 ಕುಟುಂಬಗಳು ಹಕ್ಕುಪತ್ರಕ್ಕಾಗಿ ಕಾಯುತ್ತಾ ದಿನಗಳೆಯುತ್ತಿವೆ. ಹಕ್ಕುಪತ್ರಕ್ಕಾಗಿ ಜನಪ್ರತಿನಿಧಿಗಳು, ಅಧಿಕಾರಿಗಳು ಹಾಗೂ ಸರ್ಕಾರದ ಬಾಗಿಲು ತಟ್ಟುತ್ತಲೇ ಬಂದಿದ್ದಾರೆ. ಎಲ್ಲರೂ ಭರವಸೆ ನೀಡುತ್ತಲೇ ಬಂದಿದ್ದಾರೆ. ಆದರೆ, ಈವರೆಗೆ ಹಕ್ಕುಪತ್ರ ದೊರೆಯದೆ ನಿರಾಶ್ರಿತರಾಗಿದ್ದಾರೆ.

ಕಾಪು ವಿಧಾನಸಭೆ ಕ್ಷೇತ್ರ ವ್ಯಾಪ್ತಿಯ ಪಡುಬಿದ್ರಿಯ ನಡಿಪಟ್ಣ-ಕಾಡಿಪಟ್ಣದ ಅರಬ್ಬಿ ಸಮುದ್ರ ಮತ್ತು ಕಾಮಿನಿ ಹೊಳೆ ಮಧ್ಯೆ ವಾಸಿಸುತ್ತಿರುವ ಮೊಗವೀರ ಮತ್ತು ಬಿಲ್ಲವ ಸಮುದಾಯದ 40 ಕುಟುಂಬಗಳು ಸರ್ಕಾರದ ಸಣ್ಣ ತಪ್ಪಿನಿಂದ ಹಕ್ಕುಪತ್ರ ವಂಚಿತರಾಗಿದ್ದಾರೆ.

ಸರ್ಕಾರಿ ದಾಖಲೆಗಳ ಪ್ರಕಾರ 1989-90 ರಿಂದ ಈ ಕುಟುಂಬಗಳು ಕಲಂ 94ಸಿ ಅಡಿಯಲ್ಲಿ ಹಕ್ಕುಪತ್ರಕ್ಕಾಗಿ ಅರ್ಜಿ ಸಲ್ಲಿಸುತ್ತಾ ಬಂದಿದ್ದಾರೆ. ಮುಖ್ಯಮಂತ್ರಿಗಳ ಜನತಾ ದರ್ಶನದಲ್ಲಿಯೂ ಅರ್ಜಿ ಸಲ್ಲಿಸಲಾಗಿತ್ತು. ಹಕ್ಕುಪತ್ರ ವಂಚಿತ ಕುಟುಂಬದ ಮನೆಗಳು, ಪಹಣಿ ದಾಖಲೆಗಳ ಪ್ರಕಾರ ನಡ್ಡಾಲು ಗ್ರಾಮದ ಜನ ವಸತಿಯ ಈ ಪ್ರದೇಶಗಳು ಪರಂಬೋಕು ಮೀನು ಒಣಗಿಸುವ ಸ್ಥಳ ಮತ್ತು ಹೊಳೆ ಎಂದು ನಮೂದಾಗಿದೆ. ಈ ತಾಂತ್ರಿಕ ತೊಡಕಿನಿಂದ ಈ ಕುಟುಂಬಗಳಿಗೆ ಹಕ್ಕುಪತ್ರ ನೀಡಲು ಸಮಸ್ಯೆಯಾಗಿದೆ.

ಕಳೆದ ವರ್ಷ ಸಮಸ್ಯೆಯ ಗಂಭೀರತೆ ಅರಿತ ಉಡುಪಿ ಜಿಲ್ಲಾಧಿಕಾರಿ ಡಾ॥ ವಿದ್ಯಾಕುಮಾರಿ, ಸಹಿತ ಇಲಾಖಾಧಿಕಾರಿಗಳು ಖುದ್ದು ಭೇಟಿ ನೀಡಿ ಪರಿಶೀಲನೆ ನಡೆಸಿ, ಪರಂಬೋಕು ಮೀನು ಒಣಗಿಸುವ ಸ್ಥಳ ಶೀರ್ಷಿಕೆ ವಿರಹಿತಗೊಳಸುವಂತೆ ಸರ್ಕಾರಕ್ಕೆ ಮನವರಿಕೆ ಮಾಡಿ ಪತ್ರ ಬರೆದಿದ್ದರು.

ಆದ್ದರಿಂದ ಇಲ್ಲಿಯ ನಿವಾಸಿಗಳ ಹಿತದೃಷ್ಟಿಯಿಂದ ತಾಂತ್ರಿಕ ತೊಂದರೆಯನ್ನು ನಿವಾರಿಸಿ ಕೂಡಲೇ ಅವರಿಗೆ ಹಕ್ಕುಪತ್ರ ನೀಡಲು ಕ್ರಮಕೈಗೊಳ್ಳಬೇಕಾಗಿ ತಮ್ಮ ಮೂಲಕ ಸರ್ಕಾರಕ್ಕೆ ಒತ್ತಾಯಿಸುತ್ತೇನೆ.

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಪ್ರಸ್ತಾಪಿಸಿರುವ ಶೂನ್ಯ ವೇಳೆ ಪ್ರಸ್ತಾವಕ್ಕೆ ಮಾನ್ಯ ಕಂದಾಯ ಸಚಿವರಿಂದ ಉತ್ತರ ಒದಗಿಸಲಾಗುವುದು.

**ಏ) ವಿಷಯ:- "ಕ್ಷೀರಧಾರೆ ಯೋಜನೆ" ಯಡಿ ಹೈನುಗಾರರಿಗೆ ನೀಡಬೇಕಾಗಿರುವ ಪ್ರೋತ್ಸಾಹ ಧನ ಮೊತ್ತವನ್ನು ಬಿಡುಗಡೆ ಮಾಡುವ ಬಗ್ಗೆ.**

- - - - -

**ಶ್ರೀ ಸಿ.ಎನ್.ಮಂಜೇಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ದಿನಾಂಕ: 17.12.2024 ರ "ಈ ಸಂಜೆ" ಪತ್ರಿಕೆಯಲ್ಲಿ "ಗ್ಯಾರಂಟಿಯತ್ತ ಲಕ್ಷ್ಯ-ಹೈನುಗಾರರಿಗೆ ನಿರ್ಲಕ್ಷ್ಯ" ಎಂಬ ಶೀರ್ಷಿಕೆಯಡಿ ವರದಿ ಪ್ರಕಟವಾಗಿರುತ್ತದೆ.

ರಾಜ್ಯ ಸರ್ಕಾರ ಗ್ಯಾರಂಟಿ ಯೋಜನೆಗಳಿಗೆ ಹೆಚ್ಚಿನ ವಿಶೇಷ ಆಸಕ್ತಿ ತೋರಿಸಿದ ಕಾರಣ ಹಣವಿಲ್ಲ ಎಂಬ ಕಾರಣ ನೀಡಿ ಕಳೆದ ಒಂಬತ್ತು ತಿಂಗಳುಗಳಿಂದ ಹೈನುಗಾರರಿಗೆ ಪ್ರೋತ್ಸಾಹಧನ ನೀಡದಿರುವುದು ಬೆಳಕಿಗೆ ಬಂದಿರುತ್ತದೆ. ಕ್ಷೀರಧಾರೆ ಯೋಜನೆಯಡಿ ರೈತರು ಪೂರೈಸುವ ಪ್ರತಿ ಲೀಟರ್ ಹಾಲಿಗೆ ಸರ್ಕಾರ 5 ರೂಪಾಯಿಗಳಷ್ಟು ಪ್ರೋತ್ಸಾಹಧನ ನೀಡಬೇಕಿದೆ. ಈ ಬಗ್ಗೆ ಪ್ರಸ್ತಾವನೆ ಹಣಕಾಸು ಇಲಾಖೆ ಮುಂದೆ ಬಾಕಿಯಿರುವುದರಿಂದ ರೈತರಿಗೆ ಪ್ರೋತ್ಸಾಹಧನ ಪಾವತಿಯಾಗಿರುವುದಿಲ್ಲ. ಪ್ರತಿ ದಿನ ರಾಜ್ಯಾದ್ಯಂತ ಒಂದು ಕೋಟಿ

ಲೀಟರ್ ಹಾಲು ಸಂಗ್ರಹವಾಗುತ್ತಿದ್ದು, ಕರ್ನಾಟಕ ಹೈನುಗಾರಿಕೆಯಲ್ಲಿ ಅಗ್ರಸ್ಥಾನದಲ್ಲಿದೆ. 2023ರ ವಿಧಾನಸಭೆ ಚುನಾವಣೆಗೂ ಮೊದಲು ಕಾಂಗ್ರೆಸ್ ಪಕ್ಷದ ಚುನಾವಣಾ ಪ್ರಣಾಳಿಕೆಯಲ್ಲಿ ನಮ್ಮ ಪಕ್ಷ ಅಧಿಕಾರಕ್ಕೆ ಬಂದರೆ ಪ್ರತಿ ಲೀಟರ್ ಹಾಲಿಗೆ ಪ್ರೋತ್ಸಾಹಧನವನ್ನು 6 ರೂಪಾಯಿಗಳಿಗೆ ಹೆಚ್ಚಿಸುವುದಾಗಿ ಹೇಳಿತ್ತು. ಆದರೆ, ರೈತರಿಗೆ ಪಾವತಿಸಬೇಕಾದ ಮೊತ್ತ ರೂ.606 ಕೋಟಿ ಬಾಕಿ ಉಳಿದಿರುವುದಾಗಿ ತಿಳಿದುಬಂದಿರುತ್ತದೆ.

ಪರಿಶಿಷ್ಟ ಜಾತಿ ಸಮುದಾಯದ ಹೈನುಗಾರರಿಗೆ ಅಕ್ಟೋಬರ್ ತಿಂಗಳಿಗೆ ರೂ.6.85 ಕೋಟಿ ಪಾವತಿಸಬೇಕಿದ್ದರೆ, ಎಸ್ಸಿ ರೈತರಿಗೆ 2024ರ ನವೆಂಬರ್ ತಿಂಗಳಿಗೆ ರೂ.9 ಕೋಟಿ ಪಾವತಿಸಬೇಕಿದೆ. ಸರ್ಕಾರ ಬಾಕಿ ಹಣವನ್ನು ಕಂತುಗಳಲ್ಲಿ ಪಾವತಿಸುವುದಾಗಿ ಹೇಳುತ್ತಿದೆ. ರಾಜ್ಯದಲ್ಲಿ ಸುಮಾರು 38 ಲಕ್ಷ ಹೈನುಗಾರರಿದ್ದು, ಇದರಲ್ಲಿ ಶೇಕಡ 90 ಕ್ಕೂ ಹೆಚ್ಚು ಮಹಿಳೆಯರು ಇದ್ದಾರೆ. ರಾಜ್ಯ ಸರ್ಕಾರ ಮಹಿಳಾ ಸಬಲೀಕರಣದ ಬಗ್ಗೆ ಮಾತನಾಡುತ್ತದೆಯೇ ಹೊರತು, ಪ್ರೋತ್ಸಾಹಧನದ ಬಗ್ಗೆ ಮೌನವಹಿಸಿದೆ. ಒಟ್ಟಾರೆ ರೂ.1,000 ಕೋಟಿ ಹೈನುಗಾರರಿಗೆ ನೀಡಬೇಕಾದ ಪ್ರೋತ್ಸಾಹಧನ ಬಾಕಿ ಇದ್ದು, ಈ ಮೊತ್ತವನ್ನು ಆದಷ್ಟು ಜಾಗ್ರತೆ ಬಿಡುಗಡೆ ಮಾಡಿ ಹೈನುಗಾರರ ಹಿತ ಕಾಪಾಡಲು ಸರ್ಕಾರ ಕೂಡಲೇ ಕ್ರಮಕೈಗೊಳ್ಳಬೇಕೆಂದು ತಮ್ಮ ಮೂಲಕ ಸರ್ಕಾರಕ್ಕೆ ಒತ್ತಾಯಿಸುತ್ತೇನೆ.

**ಶ್ರೀ ಕೆ.ವೆಂಕಟೇಶ್ (ಪಶುಸಂಗೋಪನಾ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಮಂಜೇಗೌಡರು ಹಾಲಿನ incentive ಬಾಕಿ ಕುರಿತು ಪ್ರಸ್ತಾಪ ಮಾಡಿದ್ದಾರೆ. ಇಲ್ಲಿ ಗಮನಿಸಬೇಕಾದ ಅಂಶಗಳೇನೆಂದರೆ, 2023-24ನೇ ಸಾಲಿನಲ್ಲಿ ಸರ್ಕಾರ ರೂ.1,168 ಕೋಟಿಗಳನ್ನು ನಿಗದಿ ಮಾಡಿದ್ದು, ಅದರಲ್ಲಿ ರೂ.1,161 ಕೋಟಿಗಳನ್ನು ಬಿಡುಗಡೆ ಮಾಡಲಾಗಿದೆ. 2024-25ನೇ ಸಾಲಿನಲ್ಲಿ ನಮ್ಮ ಸರ್ಕಾರವು ರೂ.1,300 ಕೋಟಿಗಳನ್ನು ನಿಗದಿ ಮಾಡಿದೆ. ಅದರಲ್ಲಿ ಈಗಾಗಲೇ ರೂ.1,124 ಕೋಟಿಗಳನ್ನು 3 ಕಂತುಗಳಲ್ಲಿ ಬಿಡುಗಡೆ ಮಾಡಿದ್ದು, 4ನೇ ಕಂತುಗಳು ಬಿಡುಗಡೆಯಾಗಬೇಕಾಗಿದೆ. ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ನಾವು ಬಾಕಿ ಉಳಿಸಿಕೊಂಡಿಲ್ಲ. ಹಿಂದಿನ ಸರ್ಕಾರ ಇದ್ದಾಗ ಸುಮಾರು ರೂ.700 ಕೋಟಿಗಳನ್ನು ಬಾಕಿ ಉಳಿಸಿದ್ದು, ಅದನ್ನು ತೀರಿಸುವಂಥ ಕೆಲಸ ನಾವು ಮಾಡುತ್ತಿದ್ದೇವೆ. ನಿನ್ನೆ ದಿವಸ ಮಾನ್ಯ ಮುಖ್ಯಮುಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರು ಮಂಡಿಸಿದಾಗ ರೂ.200 ಕೋಟಿಗಳನ್ನು additionally ಕೊಡಬೇಕೆಂದು ಪ್ರಸ್ತಾವನೆಯನ್ನಿಟ್ಟಿದ್ದಾರೆ. ಜೊತೆಗೆ ನಾನು ಸಹ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರಿಗೆ 'ರೈತರ ಒತ್ತಡ ಜಾಸ್ತಿ ಇರುವುದರಿಂದ ಆದಷ್ಟು ಬೇಗ ಇತ್ಯರ್ಥಪಡಿಸಬೇಕು' ಎಂದು ಮನವಿ ಮಾಡಿದ್ದು, ಅವರು ಸಹ 'ಆಗಲಿ ತಿರಿಸೋಣ' ಎಂದು ಒಪ್ಪಿಕೊಂಡಿದ್ದಾರೆ. ಅದರಂತೆ ಹಂತ ಹಂತವಾಗಿ ತೀರಿಸುವ ಕೆಲಸ ಮಾಡುತ್ತಿದ್ದೇವೆ. ಚುನಾವಣಾ ಪ್ರಣಾಳಿಕೆಯಲ್ಲಿ ಸಹ ಜಾಸ್ತಿ

ಮಾಡುತ್ತೇವೆ ಎಂಬ ಹೇಳಿಕೆ ನೀಡಿದ್ದು, ನಮ್ಮ ಸರ್ಕಾರ ಅಧಿಕಾರಕ್ಕೆ ಬಂದು ಕೇವಲ ಒಂದೂವರೆ ವರ್ಷಗಳು ಮಾತ್ರ ಕಳೆದಿದೆ. ಹಾಗಾಗಿ, ಇನ್ನು ಸಮಯ ಇರುವುದರಿಂದ ಮುಂದಿನ ದಿನಗಳಲ್ಲಿ ಮಾಡುತ್ತೇವೆ.

**ಶ್ರೀ ಗೋವಿಂದರಾಜು (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, 'ನುಡಿದಂತೆ ನಡೆದಿದ್ದೇವೆ' ಎಂದು ಹೇಳಿದ್ದಾರೆ ಅಲ್ಲವೇ?

**ಶ್ರೀ ಕೆ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ನಾನು ಅದನ್ನೇ ಹೇಳಿದ್ದು.

**ಉಪ ಸಭಾಪತಿಯವರು:-** ಮಾನ್ಯ ಸಚಿವರೇ, ತಾವು ಮಾನ್ಯ ಗೋವಿಂದರಾಜುರವರಿಗೆ ಉತ್ತರ ಕೊಡುವ ಅವಶ್ಯಕತೆ ಇಲ್ಲ. ಇದು ಶೂನ್ಯ ವೇಳೆ ಪ್ರಸ್ತಾವವಾಗಿದ್ದು, ತಾವು ತಮ್ಮ ಉತ್ತರ ಏನೆಂಬುದನ್ನು ತಿಳಿಸಿದರೆ ಸಾಕು.

**ಶ್ರೀ ಕೆ.ವೆಂಕಟೇಶ್:-** ಮಾನ್ಯ ಸಭಾಪತಿಯವರೇ, ಚುನಾವಣಾ ಸಂದರ್ಭದಲ್ಲಿ ಏನೆಂದು ಹೇಳಿದ್ದೇವೆ, ಅದನ್ನು ಅನುಷ್ಠಾನ ಮಾಡಲು ಇನ್ನೂ ಸಮಯ ಇದೆ.

**ಐ) ವಿಷಯ:- ಪೌರಕಾರ್ಮಿಕರುಗಳ ವೇತನವನ್ನು ಎಸ್.ಎಫ್.ಸಿ. ಮುಕ್ತ ನಿಧಿಯಿಂದ ಕೂಡಲೇ ಪಾವತಿಸುವ ಬಗ್ಗೆ.**

- - - - -

**ಶ್ರೀಮತಿ ಉಮಾಶ್ರೀ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಕರ್ನಾಟಕ ಮುನಿಸಿಪಾಲ್ ಕಾರ್ಪೋರೇಷನ್ (ರಾಜ್ಯದ ಪಾಲಿಕೆಗಳ ಪೌರಕಾರ್ಮಿಕರ ನೇಮಕಾತಿ) (ವಿಶೇಷ) ನಿಯಮಗಳು, 2022 ಅಡಿಯಲ್ಲಿ ನೇಮಕಾತಿ ಹೊಂದಿರುವ ಪೌರಕಾರ್ಮಿಕರುಗಳ ವೇತನವನ್ನು ಎಸ್.ಎಫ್.ಸಿ. ಮುಕ್ತ ನಿಧಿಯಿಂದ ಪಾವತಿಸಲು ಈಗಾಗಲೇ ಆರ್ಥಿಕ ಇಲಾಖೆಯು ಸೂಚಿಸಿರುತ್ತದೆ ಹಾಗೂ ಹೆಚ್ಚುವರಿ ಆರ್ಥಿಕ ಪರಿಣಾಮಗಳನ್ನು ನಗರ ಸ್ಥಳೀಯ ಸಂಸ್ಥೆಯ ಸ್ವಂತ ನಿಧಿಯಿಂದ ಪಾವತಿಸಬೇಕೆಂದು ನಿರ್ದೇಶನವು ಇರುತ್ತದೆ.

ಆದರೆ, ರಾಜ್ಯದ ಕೆಲವು ಪಟ್ಟಣಗಳಲ್ಲಿ ಅಭಿವೃದ್ಧಿ ದೃಷ್ಟಿಯಿಂದ ವಿಶೇಷ ನೇಮಕಾತಿ ಪೌರ ಕಾರ್ಮಿಕರ ವೇತನವನ್ನು ಪುರಸಭೆ ನಿಧಿಯಿಂದ ಪಾವತಿ ಮಾಡಲು ಸಾಧ್ಯವಾಗುತ್ತಿಲ್ಲ ಹಾಗೂ ಎಸ್.ಎಫ್.ಸಿ. ಮುಕ್ತ ನಿಧಿಗೆ ಬಿಡುಗಡೆಯಾಗುವ ಅನುದಾನದಲ್ಲಿಯೂ ಸಹ ಸದರಿಯವರಿಗೆ ವೇತನವನ್ನು ಪಾವತಿ ಮಾಡಲು ಸಾಧ್ಯವಾಗುತ್ತಿಲ್ಲ. ಇದರಿಂದ ವಿಶೇಷ ನೇಮಕಾತಿ ಪೌರ ಕಾರ್ಮಿಕರಿಗೆ ಆರ್ಥಿಕವಾಗಿ ತೊಂದರೆಯಾಗುತ್ತಿದೆ ಎಂಬುದನ್ನು ತಮ್ಮ ಮೂಲಕ ಸರ್ಕಾರಕ್ಕೆ ಒತ್ತಾಯಿಸುತ್ತೇನೆ.

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕೇಳಿರುವ ಶೂನ್ಯ ವೇಳೆ ಪ್ರಸ್ತಾವಕ್ಕೆ ಮಾನ್ಯ ಪೌರಾಡಳಿತ ಹಾಗೂ ಹಜ್ ಸಚಿವರಿಂದ ಉತ್ತರ ಒದಗಿಸುತ್ತೇನೆ.

**ಒ) ವಿಷಯ:- ಧರಣಿ ನಿರತರಿಗೆ ಧರಣಿ ನಡೆಯುವ ಸ್ಥಳಗಳಲ್ಲಿ ಶೌಚಾಲಯ, ಕುಡಿಯುವ ನೀರು ಅಗತ್ಯ ಮೂಲಭೂತ ಸೌಲಭ್ಯಗಳನ್ನು ಒದಗಿಸುವ ಬಗ್ಗೆ.**

- - - - -

**ಡಾ॥ ಧನಂಜಯ ಸರ್ಜಿ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಿನ್ನೆಯ ದಿನ ಸುವರ್ಣ ವಿಧಾನಸೌಧದ ಹತ್ತಿರ ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಅತಿಥಿ ಉಪನ್ಯಾಸಕರು ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಧರಣಿ ನಿರತರಾಗಿದ್ದರು. ನಾನು ಅವರ ಅಹವಾಲು ಸ್ವೀಕರಿಸಲು ತೆರಳಿದ ಸಂದರ್ಭದಲ್ಲಿ ನಡೆದ ಘಟನೆ ಮತ್ತು ಅಲ್ಲಿ ಅವ್ಯವಸ್ಥೆ ಕುರಿತು ಹೇಳಬಯಸುತ್ತೇನೆ.

ಧರಣಿ ನಿರತರ ಜೊತೆ ಮಾತನಾಡುತ್ತಿರುವ ಸಂದರ್ಭದಲ್ಲಿ ಅತಿಥಿ ಉಪನ್ಯಾಸಕಿಯೊಬ್ಬರು ಅಸ್ವಸ್ಥಗೊಂಡು ಪ್ರಜ್ಞೆ ತಪ್ಪಿ ಬಿದ್ದರು. ಅವರಿಗೆ ಅಲ್ಲಿಯೇ ಪ್ರಥಮ ಚಿಕಿತ್ಸೆ ನೀಡಿ ಅವರನ್ನು ಆಂಬ್ಯುಲೆನ್ಸ್ ಮೂಲಕ ಸರ್ಕಾರಿ ಆಸ್ಪತ್ರೆಗೆ ದಾಖಲಿಸಲಾಯಿತು. ವೈದ್ಯನಾಗಿ ಅದು ಕರ್ತವ್ಯವೂ ಹೌದು. ಆದರೆ, ತುರ್ತು ಸೇವೆಯ 108 ಆಂಬ್ಯುಲೆನ್ಸ್‌ನಲ್ಲಿ ಯಾವುದೇ ಅಗತ್ಯ ಜೀವ ರಕ್ಷಕ ಸೌಲಭ್ಯಗಳು ಇರಲಿಲ್ಲ (ಸಕ್ಕರೆ ಖಾಯಿಲೆ ಪರೀಕ್ಷೆ ಮಾಡುವ ಮೆಷಿನ್ ಹಾಳಾಗಿದ್ದು) ಡ್ರಿಪ್ ಹಾಕುವ ಸೌಲಭ್ಯಗಳು ಇಲ್ಲದೇ ಇರುವುದು ಸೇಫ್ಟಿ ಬೆಲ್ಟ್ ಇಲ್ಲದೇ. ಓ.ಆರ್.ಎಸ್. ಕೊಡಲು ಸುಮಾರು 10 ನಿಮಿಷ ಸಮಯವನ್ನು ತೆಗೆದುಕೊಂಡಿರುವುದು ಮತ್ತು ಆಂಬ್ಯುಲೆನ್ಸ್ ಚಾಲಕನಿಗೆ ಸೈರನ್ ಹಾಕಿಕೊಂಡು ತುರ್ತಾಗಿ ಹೋಗು ಎಂದು ಸೂಚಿಸಿದಾಗ ಚಾಲಕ ಪೋಲೀಸ್‌ನವರು ಸೈರನ್ ಹಾಕಬಾರದು ಎಂದು ತಿಳಿಸಿದ್ದಾರೆ ಎಂದು ನಿಧಾನವಾಗಿ ಆಸ್ಪತ್ರೆಗೆ ತಲುಪಿಸಿದ್ದು ದುರದೃಷ್ಟಕರ ಸಂಗತಿ. 108 ಆಂಬ್ಯುಲೆನ್ಸ್‌ನಲ್ಲಿ ಹೋಗುವಾಗ ಸಿಬ್ಬಂದಿಗೆ ವಿಚಾರಿಸಿದಾಗ ಕಳೆದ 6 ತಿಂಗಳಿನಿಂದ ಸಂಬಳ ನೀಡಿರುವುದಿಲ್ಲ ಹಾಗೂ ಈ ಹಿಂದೆ ನೀಡುತ್ತಿದ್ದ ರೂ.30,000 ತಡೆದು ಈಗ ಕೇವಲ ರೂ.12,000 ಸಂಬಳ ನೀಡುತ್ತಿದ್ದಾರೆ ಎಂಬುದನ್ನು ತಿಳಿದು ಸರ್ಕಾರದ "ವ್ಯವಸ್ಥೆಯ ಅವ್ಯವಸ್ಥೆ" ಗೆ ಹಿಡಿದ ಕೈಗನ್ನಡಿಯಾಗಿ ತೋರಿತು. ಮತ್ತೊಂದೆಡೆ ಅಂಗವಿಕಲರಿಗೆ ಧರಣಿ ಮಾಡಲು ಅವಕಾಶ ನೀಡಿ, ಅಂಗವಿಕಲರಿಗೆ ಶೌಚಾಲಯಕ್ಕೆ ಹೋಗಲು ಮೆಟ್ಟಿಲುಗಳನ್ನು ಹತ್ತಿಕೊಂಡು ಹೋಗುವಂತ ವಿವೇಚನರಹಿತ ಶೌಚಾಲಯಗಳನ್ನು ನಿರ್ಮಿಸಿ ಕನಿಷ್ಠ ಅವರಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಸಾಧ್ಯವಾಗದೇ ಇರುವುದು ಅತ್ಯಂತ ಖಂಡನೀಯ.

ಸುವರ್ಣ ವಿಧಾನಸೌಧ ಅಧಿವೇಶನದ ಸಮಯದಲ್ಲಿ ಪ್ರತಿದಿನ ವಿವಿಧ ಸಂಘಟನೆಗಳಿಂದ ಧರಣಿ ಮುಷ್ಕರ ನಡೆಯುವ ಸಂದರ್ಭದಲ್ಲಿಯೂ ಪರಿಸ್ಥಿತಿ ಗಂಭೀರತೆಯ ಅರಿವಿಲ್ಲದೇ ಯಾವುದೇ ಅಗತ್ಯ ಸೌಕರ್ಯಗಳಿಲ್ಲದೇ ಜೀವರಕ್ಷಕ ಸೌಲಭ್ಯಗಳಿಲ್ಲದ 108 ಆಂಬ್ಯುಲೆನ್ಸ್ ಸೇವೆಗೆ ನಿಯೋಜಿಸಿ ಸಾರ್ವಜನಿಕರ ಜೀವದೊಂದಿಗೆ ಚೆಲ್ಲಾಟವಾಡುತ್ತಿರುವುದು ಅಕ್ಷಮ್ಯ ಅಪರಾಧ.

ಪ್ರತಿಯೊಬ್ಬರ ಭಾವನೆಗಳನ್ನು ಗೌರವಿಸಬೇಕಾಗಿರುವುದು ಸರ್ಕಾರದ ನೀತಿಯಾಗಬೇಕಾಗಿದೆ. ಧರಣಿ-ಮುಷ್ಕರ-ಪ್ರತಿಭಟನೆ ನಡೆಸಿರುವ ಭಾವನೆಗಳನ್ನು ಅರ್ಥಮಾಡಿಕೊಂಡು ಅವರ ಘನತೆಗೆ ಚ್ಯುತಿ ಬರದಂತೆ ಧರಣಿ ನಡೆಯುವ ಸ್ಥಳಗಳಲ್ಲಿ ಶೌಚಾಲಯ, ಕುಡಿಯುವ ನೀರು ಅಗತ್ಯ ಮೂಲಭೂತ ಸೌಲಭ್ಯ ಒದಗಿಸುವುದರ ಮೂಲಕ ವ್ಯಕ್ತಿಯ ಗೌರವ ಕಾಪಾಡಲು ಸರ್ಕಾರ ಸ್ಪಂದಿಸಬೇಕೆಂದು ತಮ್ಮ ಮೂಲಕ ಸರ್ಕಾರಕ್ಕೆ ಒತ್ತಾಯಿಸುತ್ತೇನೆ.

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕೇಳಿರುವ ಶೂನ್ಯ ವೇಳೆ ಪ್ರಸ್ತಾವಕ್ಕೆ ಮಾನ್ಯ ಮುಖ್ಯಮಂತ್ರಿಗಳಿಂದ ಉತ್ತರ ಒದಗಿಸುತ್ತೇನೆ.

(ಮುಂದು)

**(958) 18.12.2024 (2.30) ಎಸ್‌ಕೆ-ಕೆಎಸ್** **(ಉಪ ಸಭಾಪತಿಯವರ ಉಪಸ್ಥಿತಿ)**

**ಡಾ॥ ಧನಂಜಯ ಸರ್ಜಿ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈ ಘಟನೆ ಬಗ್ಗೆ ಒಂದು ಉತ್ತರ ಕೇಳಿದ್ದೇವೆ ಎನ್ನುವುದು ತಪ್ಪಾಗುತ್ತದೆ.

**ಉಪ ಸಭಾಪತಿಯವರು:-** ಅದಕ್ಕೆ ಉತ್ತರ ಕೊಡಿಸುವಂತಹ ಕೆಲಸ ಮಾಡೋಣ.

**ಡಾ॥ ಧನಂಜಯ ಸರ್ಜಿ:-** ಮಾನ್ಯ ಸಭಾಪತಿಯವರೇ ಒಟ್ಟಿನಲ್ಲಿ ಈ ರೀತಿ ಇದ್ದಾಗ ರಾಜ್ಯದ ಪರಿಸ್ಥಿತಿ ಹೇಗಿರಬಹುದು?

**ಉಪ ಸಭಾಪತಿಯವರು:-** ಮಾನ್ಯ ಸದಸ್ಯರೇ ಕುಳಿತುಕೊಳ್ಳಿ. ಶೂನ್ಯ ವೇಳೆಯಲ್ಲಿ ಉತ್ತರ ಕೊಡುವುದಕ್ಕೆ ಅವಕಾಶವಿಲ್ಲ.

**ಓ) ವಿಷಯ:- ರಾಯಚೂರು, ಬಳ್ಳಾರಿ, ಕೊಪ್ಪಳ ಮತ್ತು ವಿಜಯನಗರದ ಹಾಲು ಒಕ್ಕೂಟದ ಆಡಳಿತ ಮಂಡಳಿ ಚುನಾವಣೆಯನ್ನು ತುರ್ತಾಗಿ ನಡೆಸುವ ಕುರಿತು.**

**- - - - -**

**ಶ್ರೀ ವೈ.ಎಂ. ಸತೀಶ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನರ್ಪಿಸುತ್ತೇನೆ.

ರಾಯಚೂರು, ಬಳ್ಳಾರಿ, ಕೊಪ್ಪಳ ಮತ್ತು ವಿಜಯನಗರ ಜಿಲ್ಲೆಗಳ ಹಾಲು ಒಕ್ಕೂಟದ ಆಡಳಿತ ಮಂಡಳಿ ಅವಧಿ ಮುಗಿದು 7 ತಿಂಗಳು ಕಳೆದರೂ ಹೊಸದಾಗಿ ಚುನಾವಣೆ ನಡೆಸದೆ ಅಥವಾ ಆಡಳಿತಾಧಿಕಾರಿಯನ್ನು ಸಹ ನೇಮಿಸದೇ ಹಾಲು ಒಕ್ಕೂಟದಲ್ಲಿ ಪ್ರಮುಖ ನಿರ್ಧಾರಗಳನ್ನು ತೆಗೆದುಕೊಳ್ಳಲು ಸಾಧ್ಯವಾಗದೇ ತೊಂದರೆಯಾಗಿರುತ್ತದೆ.

ಆದಕಾರಣ, ಕೂಡಲೇ ಈ ಹಾಲು ಒಕ್ಕೂಟಕ್ಕೆ ಆಡಳಿತಾಧಿಕಾರಿಯನ್ನು ನೇಮಕ ಮಾಡಬೇಕೆಂದು ನಾನು ತಮ್ಮ ಮೂಲಕ ಸರ್ಕಾರಕ್ಕೆ ಒತ್ತಾಯಿಸುತ್ತೇನೆ.

**ಉಪ ಸಭಾಪತಿಯವರು:-** ಮಾನ್ಯ ಸಭಾನಾಯಕರೇ,....

**ಶ್ರೀ ವೈ.ಎಂ. ಸತೀಶ್:-** ಮಾನ್ಯ ಸಭಾಪತಿಯವರೇ, ಕಳೆದ ಬಾರಿ ಶೂನ್ಯವೇಳೆಯನ್ನು ಪ್ರಸ್ತಾಪ ಮಾಡಿದ್ದೆ. ಅದಕ್ಕೂ ಕೂಡ ನನಗೆ ಉತ್ತರ ಬಂದಿಲ್ಲ.

**ಶ್ರೀ ಕ್ಯಾತ್ಸಂದ್ರ ಎನ್. ರಾಜಣ್ಣ (ಸಹಕಾರ ಸಚಿವರು):-** ಮಾನ್ಯ ಸಭಾಪತಿಯವರೇ, ನನ್ನ ಬಳಿಯಿರುವ ತಮ್ಮ ಮೂಲಕ ಉತ್ತರವನ್ನು ಮಾನ್ಯ ಸದಸ್ಯರಿಗೆ ಕಳುಹಿಸಿಕೊಡಬೇಕೆಂದು ವಿನಂತಿಸುತ್ತೇನೆ.

ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಸತೀಶ್‌ರವರು ಪ್ರಸ್ತಾಪ ಮಾಡಿರುವ ಶೂನ್ಯವೇಳೆ ವಿಷಯದಲ್ಲಿ ಈಗಾಗಲೇ ರಾಯಚೂರು, ಬಳ್ಳಾರಿ, ಕೊಪ್ಪಳ ಮತ್ತು ವಿಜಯನಗರ ಈ ನಾಲ್ಕು ಜಿಲ್ಲೆಗಳನ್ನೊಳಗೊಂಡಂತೆ ಒಂದು ಹಾಲು ಒಕ್ಕೂಟದ ಆಡಳಿತ ಮಂಡಳಿ ಇದೆ. ಮೇ 2024ಕ್ಕೆ ಅದರ ಅವಧಿ ಅಂತ್ಯವಾಗಿದೆ. ಲೋಕಸಭಾ ಚುನಾವಣೆ ಹಿನ್ನೆಲೆಯಲ್ಲಿ ರಾಜ್ಯದಲ್ಲಿರುವ ಎಲ್ಲಾ ಸಹಕಾರ ಸಂಸ್ಥೆಗಳಿಗೂ ಕೂಡ ಆಡಳಿತ ಮಂಡಳಿಯ ಅವಧಿಯನ್ನು ಮುಂದೂಡಿ, ಚುನಾವಣೆಯನ್ನು ಆರು ತಿಂಗಳಿನಲ್ಲಿ ನಡೆಸಬೇಕೆಂದು ಹೇಳಿ, ಸರ್ಕಾರಿ ಆದೇಶವನ್ನು ಹೊರಡಿಸುತ್ತೇವೆ. ಅದರ ಹಿನ್ನೆಲೆಯಲ್ಲಿ ಚುನಾವಣಾ ಪ್ರಕ್ರಿಯೆಗೂ ಕೂಡ ಕ್ರಮ ತೆಗೆದುಕೊಳ್ಳುತ್ತಾರೆ. ಆಗ ಇಲ್ಲಿರುವವರು ಮಾನ್ಯ ಉಚ್ಚ ನ್ಯಾಯಾಲಯಕ್ಕೆ ಹೋಗಿ, ಅದಕ್ಕೆ ತಡೆಯಾಜ್ಞೆಯನ್ನು ತಂದಿದ್ದಾರೆ. The Returning Officers have also published the Calendar of events. ನಂತರ, ಅದು ರೀತಿ ಆಗಿದೆ. ಇದು ಮೆಗಾ ಡೈರಿ. Karnataka Mining Environment Restoration Corporation (KMRC) ನಲ್ಲಿ ಎಂಭತ್ತು ಕೋಟಿ ರೂಪಾಯಿಗಳಷ್ಟು ದುಡ್ಡು ಡಿಪಾಸಿಟ್ ಕೂಡ ಆಗಿದೆ. ಆದರೆ ಏನಾಗಿದೆ ಎಂದರೆ, ಮಾನ್ಯ ಸದಸ್ಯರ ಜಿಲ್ಲೆಯ ಕೊಣಗಲ್ ಎಂಬ ಊರಲ್ಲಿ ಸುಮಾರು 15 ಎಕರೆ ಜಮೀನನ್ನು ಕೊಂಡುಕೊಳ್ಳುವುದಕ್ಕೆ ಅವರು ಪ್ರಸ್ತಾವನೆಯನ್ನು ಕೂಡ ಕಳುಹಿಸಿದ್ದಾರೆ. ಅದರ ಪೈಕಿ 2,92,01,070 ಕೋಟಿ ರೂಪಾಯಿಗಳಲ್ಲಿ 15 ಎಕರೆ ಜಮೀನಿಗೆ ಹಣ ಕಟ್ಟಿ ಎಂದು ಜಿಲ್ಲಾಧಿಕಾರಿಗಳು ಕೊಟ್ಟಿದ್ದಾರೆ. ಈ ಆಡಳಿತ ಮಂಡಳಿ ಮುಂದುವರೆಸುವಂತಹ ಸಂದರ್ಭದಲ್ಲಿ ಅವರು ಯಾವುದೇ ಪ್ರಮುಖ ನಿರ್ಧಾರಗಳನ್ನು ತೆಗೆದುಕೊಳ್ಳಬಾರದು ಎಂಬುದು ಒಂದು condition ಇದೆ. ಮಾನ್ಯ ಸದಸ್ಯರು ಹೇಳಿರುವಂತೆ, ಪ್ರೋತ್ಸಾಹಧನ ಕೊಡುವುದಕ್ಕೆ ಯಾವುದೇ ಅಡ್ಡಿಯಿಲ್ಲ. ಏಕೆಂದರೆ, routine ಇರುವುದರಿಂದ day-to-day activities ಏನಿದೆ, ಅದಕ್ಕೆ ಯಾವುದೇ ಆಡಚಣೆಗಳಿಲ್ಲ. ಆದರೆ, major Policy decisions ಅನ್ನು ತೆಗೆದುಕೊಳ್ಳುವುದಕ್ಕೆ ಅವರಿಗೆ ಅಧಿಕಾರ ಇರುವುದಿಲ್ಲ. ಮಾನ್ಯ ಸದಸ್ಯರು ಹೇಳಿದ ಹಾಗೇ, ಚುನಾವಣೆ ಮಾಡುವಂತಹ ಪ್ರಕ್ರಿಯೆಗೆ ಚಾಲನೆ ನೀಡಿದಾಗ, ಅದಕ್ಕೆ ಮಾನ್ಯ ಉಚ್ಚ ನ್ಯಾಯಾಲಯದಿಂದ ತಡೆಯಾಜ್ಞೆ ಬಂದಿದೆ. ಆ ತಡೆಯಾಜ್ಞೆಯನ್ನು ತೆರವುಗೊಳಿಸಿ, ಮುಂದಿನ ಕ್ರಮ ತೆಗೆದುಕೊಳ್ಳುವಂತಹ ಕೆಲಸವನ್ನು ನಾವು ಮಾಡುತ್ತೇವೆ.

## 6. ಸಭಾಪತಿಯವರ ಅನುಮತಿಯ ಮೇರೆಗೆ ಪ್ರಸ್ತಾಪಿಸಲಾಗಿದ ವಿಷಯಗಳಿಗೆ ಸಂಬಂಧಿಸಿದಂತೆ ಸಚಿವರ ಹೇಳಿಕೆಗಳು

**ಅ) ವಿಷಯ:- ರಾಜ್ಯದ ವಿದ್ಯಾರ್ಥಿಗಳಿಗೆ ರಾಜ್ಯ ಪಠ್ಯಕ್ರಮದಿಂದ ಆಗುತ್ತಿರುವ ತಾರತಮ್ಯ ಸರಿಪಡಿಸಲು ಪಠ್ಯಕ್ರಮ ಪರಿಷ್ಕರಿಸುವ ಕುರಿತು.**

- - - -

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು) (ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಮಾನ್ಯ ಶಾಸಕರಾದ ಶ್ರೀ ರಾಮೋಜಿಗೌಡರವರು ದಿನಾಂಕ: 13.12.2024ರಂದು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿದ್ದ ವಿಷಯಕ್ಕೆ ಸಂಬಂಧಿಸಿದ ಉತ್ತರವನ್ನು ಸದನಕ್ಕೆ ಒಪ್ಪಿಸುತ್ತಿದ್ದೇನೆ.

**(ಉತ್ತರವನ್ನು ಲಗತ್ತಿಸಲಾಗಿದೆ)**

**ಆ) ವಿಷಯ:- ನ್ಯಾ. ಸದಾಶಿವ ಆಯೋಗದ ವರದಿಯನ್ನು ಅಂಗೀಕರಿಸಿ, ಒಳ ಮೀಸಲು ಜಾರಿಗೆ ತರಲು ಕ್ರಮ ಕೈಗೊಳ್ಳುವ ಕುರಿತು.**

- - - - -

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು) (ಸಮಾಜ ಕಲ್ಯಾಣ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಮಾನ್ಯ ಶಾಸಕರಾದ ಶ್ರೀ ಸಿ.ಟಿ. ರವಿಯವರು ದಿನಾಂಕ 16.12.2024ರಂದು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿದ್ದ ವಿಷಯಕ್ಕೆ ಸಂಬಂಧಿಸಿದ ಉತ್ತರವನ್ನು ಸದನಕ್ಕೆ ಒಪ್ಪಿಸುತ್ತಿದ್ದೇನೆ.

**(ಉತ್ತರವನ್ನು ಲಗತ್ತಿಸಲಾಗಿದೆ)**

**ಇ) ವಿಷಯ:- UPCMC ಸರ್ವರ್‌ನಿಂದಾಗಿ ವಿದ್ಯಾರ್ಥಿಗಳು ಪಾವತಿಸಿರುವ ಪರೀಕ್ಷಾ ಶುಲ್ಕವು ವಿಶ್ವವಿದ್ಯಾಲಯಕ್ಕೆ ಸಂದಾಯವಾಗದಿರುವುದರಿಂದ ವಿದ್ಯಾರ್ಥಿಗಳಿಗೆ ತೊಂದರೆಯಾಗಿದ್ದು, ಈಗಾಗಲೇ ಭರ್ತಿ ಮಾಡಿದ ಅರ್ಜಿ ಮತ್ತು ಶುಲ್ಕವನ್ನು ಪರಿಗಣಿಸುವ ಬಗ್ಗೆ.**

---

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು) (ಉನ್ನತ ಶಿಕ್ಷಣ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಮಾನ್ಯ ಶಾಸಕರಾದ ಶ್ರೀ ನಿರಾಣಿ ಹಣಮಂತ್ ರುದ್ರಪ್ಪನವರು ದಿನಾಂಕ 16.12.2024ರಂದು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿದ್ದ ವಿಷಯಕ್ಕೆ ಸಂಬಂಧಿಸಿದ ಉತ್ತರವನ್ನು ಸದನಕ್ಕೆ ಒಪ್ಪಿಸುತ್ತಿದ್ದೇನೆ.

**(ಉತ್ತರವನ್ನು ಲಗತ್ತಿಸಲಾಗಿದೆ)**

**ಈ) ವಿಷಯ:- 1955ರ ನಂತರ ಪ್ರಾರಂಭವಾಗಿರುವ ಅನುದಾನ ರಹಿತ ಶಾಲಾ ಕಾಲೇಜುಗಳನ್ನು ಅನುದಾನಕ್ಕೆ ಒಳಪಡಿಸುವ ಬಗ್ಗೆ.**

- - - - -

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು) (ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಮಾನ್ಯ ಶಾಸಕರಾದ ಶ್ರೀ ಶಶೀಲ್ ಜಿ. ನಮೋಶಿಯವರು ದಿನಾಂಕ 16.12.2024ರಂದು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿದ್ದ ವಿಷಯಕ್ಕೆ ಸಂಬಂಧಿಸಿದ ಉತ್ತರವನ್ನು ಸದನಕ್ಕೆ ಒಪ್ಪಿಸುತ್ತಿದ್ದೇನೆ.

**(ಉತ್ತರವನ್ನು ಲಗತ್ತಿಸಲಾಗಿದೆ)**

**ಉ) ವಿಷಯ:- ಬೆಳಗಾವಿ ತಾಲ್ಲೂಕಿನ ಬಸ್ತವಾಡ ಗ್ರಾಮದಲ್ಲಿ ಪ್ರೌಢಶಾಲೆಯನ್ನು ಪ್ರಾರಂಭಿಸುವ ಕುರಿತು.**

- - - - -

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು) (ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಮಾನ್ಯ ಶಾಸಕರಾದ ಶ್ರೀ ಎಂ. ನಾಗರಾಜುರವರು ದಿನಾಂಕ 16.12.2024ರಂದು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿದ್ದ ವಿಷಯಕ್ಕೆ ಸಂಬಂಧಿಸಿದ ಉತ್ತರವನ್ನು ಸದನಕ್ಕೆ ಒಪ್ಪಿಸುತ್ತಿದ್ದೇನೆ.

**(ಉತ್ತರವನ್ನು ಲಗತ್ತಿಸಲಾಗಿದೆ)**

**ಊ) ವಿಷಯ:- ಕಂಬಳ ಕ್ರೀಡೆಗಳಿಗೆ 2024-25ನೇ ಸಾಲಿನಲ್ಲಿ ತಲಾ ರೂ. 5 ಲಕ್ಷ ಸಹಾಯಧನ ನೀಡುವ ಹಾಗೂ ಕರ್ನಾಟಕ ಕ್ರೀಡಾ ಪ್ರಾಧಿಕಾರದಿಂದ ಮಾನ್ಯತೆ ನೀಡುವ ಬಗ್ಗೆ.**

- - - - -

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು) (ಮುಖ್ಯಮಂತ್ರಿಗಳ ಪರವಾಗಿ):-** ಮಾನ್ಯ ಸಭಾಪತಿಯವರೇ, ಮಾನ್ಯ ಶಾಸಕರಾದ ಶ್ರೀ ಐವನ್ ಡಿ'ಸೋಜಾರವರು ದಿನಾಂಕ 16.12.2024ರಂದು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿದ್ದ ವಿಷಯಕ್ಕೆ ಸಂಬಂಧಿಸಿದ ಉತ್ತರವನ್ನು ಸದನಕ್ಕೆ ಒಪ್ಪಿಸುತ್ತಿದ್ದೇನೆ.

**(ಉತ್ತರವನ್ನು ಲಗತ್ತಿಸಲಾಗಿದೆ)**

**ಋ) ವಿಷಯ:- ಮಲೆನಾಡು ಗಿಡ್ಡ ತಳಿ ಸಂಶೋಧನೆಗಾಗಿ ಮಾಹಿತಿ ಕೇಂದ್ರವನ್ನು ಪುನರಾರಂಭಿಸಿ ಅಗತ್ಯವಿರುವ ಅನುದಾನ ಬಿಡುಗಡೆ ಮಾಡುವ ಕುರಿತು.**

\- - - - - -

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು) (ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಮಾನ್ಯ ಶಾಸಕರಾದ ಶ್ರೀ ಡಿ.ಎಸ್. ಅರುಣ್‌ರವರು ದಿನಾಂಕ 17.12.2024ರಂದು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿದ್ದ ವಿಷಯಕ್ಕೆ ಸಂಬಂಧಿಸಿದ ಉತ್ತರವನ್ನು ಸದನಕ್ಕೆ ಒಪ್ಪಿಸುತ್ತಿದ್ದೇನೆ.

**(ಉತ್ತರವನ್ನು ಲಗತ್ತಿಸಲಾಗಿದೆ)**

**ಎ) ವಿಷಯ:- ಬಿ.ಬಿ.ಎಂ.ಪಿ. ಸೇರಿದಂತೆ ಎಲ್ಲಾ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯ ಬಡಾವಣೆಗಳು ಇ-ಖಾತೆ ಸಂಬಂಧ ರಿಲಿಂಕ್ವಿಶ್ ಡೀಡ್‌ಗೆ ಅವಕಾಶ ಕಲ್ಪಿಸದಿರುವ ಕುರಿತು.**

\---

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು) (ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಮಾನ್ಯ ಶಾಸಕರಾದ ಶ್ರೀ ಟಿ.ಎ. ಶರವಣರವರು ದಿನಾಂಕ 17.12.2024ರಂದು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿದ್ದ ವಿಷಯಕ್ಕೆ ಸಂಬಂಧಿಸಿದ ಉತ್ತರವನ್ನು ಸದನಕ್ಕೆ ಒಪ್ಪಿಸುತ್ತಿದ್ದೇನೆ.

**(ಉತ್ತರವನ್ನು ಲಗತ್ತಿಸಲಾಗಿದೆ)**

**ಏ) ವಿಷಯ:- ಗೆಜೆಟೆಡ್ ಪ್ರೊಬೆಷನರಿ ಪರೀಕ್ಷೆಯ ಪ್ರಶ್ನ ಪತ್ರಿಕೆಯ ದೋಷಕ್ಕೆ ಕಾರಣರಾದವರನ್ನು ಕಂಡುಹಿಡಿಯದಿರುವ ಬಗ್ಗೆ.**

\- - - - -

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು) (ಮುಖ್ಯಮಂತ್ರಿಗಳ ಪರವಾಗಿ):-** ಮಾನ್ಯ ಸಭಾಪತಿಯವರೇ, ಮಾನ್ಯ ಶಾಸಕರಾದ ಶ್ರೀ ನಿರಾಣಿ ಹಣಮಂತ ರುದ್ರಪ್ಪನವರು ದಿನಾಂಕ 17.12.2024ರಂದು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿದ್ದ ವಿಷಯಕ್ಕೆ ಸಂಬಂಧಿಸಿದ ಉತ್ತರವನ್ನು ಸದನಕ್ಕೆ ಒಪ್ಪಿಸುತ್ತಿದ್ದೇನೆ.

**(ಉತ್ತರವನ್ನು ಲಗತ್ತಿಸಲಾಗಿದೆ)**

**ಸಭಾಪತಿಯವರು:-** ಈಗ ಸದನವನ್ನು ಭೋಜನ ವಿರಾಮಕ್ಕಾಗಿ ಮಧ್ಯಾಹ್ನ 3-30 ಗಂಟೆಯವರೆಗೆ ಮುಂದೂಡುತ್ತಿದ್ದೇನೆ.

**(ಸದನವು ಭೋಜನ ವಿರಾಮಕ್ಕಾಗಿ ಅಪರಾಹ್ನ 2 ಗಂಟೆ 35 ನಿಮಿಷಕ್ಕೆ ಮುಂದೂಡಲ್ಪಟ್ಟು, ಪುನಃ ಅಪರಾಹ್ನ 03 ಗಂಟೆ 30 ನಿಮಿಷಕ್ಕೆ ಸೇರಲು ನಿಶ್ಚಯಿಸಿತು)**

(959) 18.12.2024, 3.30, TCH-KS (ಸಭಾಪತಿಯವರ ಉಪಸ್ಥಿತಿ)

**(ಭೋಜನ ವಿರಾಮಕ್ಕಾಗಿ ಮುಂದೂಡಲ್ಪಟ್ಟ ಸದನವು ಮಧ್ಯಾಹ್ನ 3 ಗಂಟೆ 36 ನಿಮಿಷಕ್ಕೆ ಸಮಾವೇಶಗೊಂಡಿತು)**

**(ಮಾನ್ಯ ಸಭಾಪತಿಯವರು ಪೀಠವನ್ನಲಂಕರಿಸಿದರು)**

**7. ಕಾರ್ಯದರ್ಶಿಯವರ ವರದಿ**

**"ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ ವಿಧೇಯಕಗಳ ಮಂಡನೆ"**

**ಕಾರ್ಯದರ್ಶಿ, ಕ.ವಿ.ಪ:-** ಮಾನ್ಯ ಸಭಾಪತಿಯವರೇ, ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ ಈ ಕೆಳಕಂಡ ವಿಧೇಯಕಗಳನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

1. ಕರ್ನಾಟಕ ಧನವಿನಿಯೋಗ (ಸಂಖ್ಯೆ-5) ವಿಧೇಯಕ, 2024
2 ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ (ತಿದ್ದುಪಡಿ) ವಿಧೇಯಕ, 2024
3. ಕರ್ನಾಟಕ (ಖನಿಜ ಹಕ್ಕುಗಳು ಮತ್ತು ಖನಿಜ ಹೊಂದಿರುವ ಭೂಮಿ) ತೆರಿಗೆ ವಿಧೇಯಕ, 2024
4. ಕರ್ನಾಟಕ ಕಾರ್ಮಿಕ ಕಲ್ಯಾಣ ನಿಧಿ (ತಿದ್ದುಪಡಿ) ವಿಧೇಯಕ, 2024
5. ಕರ್ನಾಟಕ ಪ್ರವಾಸೋದ್ಯಮ ರೋಪ್‌ವೇಗಳ ವಿಧೇಯಕ, 2024

**ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ ಈ ಕೆಳಕಂಡ ವಿಧೇಯಕಗಳನ್ನು ಸಹ ಸಭೆಯ ಮುಂದೆ ಮಂಡಿಸುತ್ತಿದ್ದೇನೆ.**

1. ಸಿವಿಲ್ ಪ್ರಕ್ರಿಯಾ ಸಂಹಿತೆ (ಕರ್ನಾಟಕ ತಿದ್ದುಪಡಿ) ವಿಧೇಯಕ, 2024
2. ಕರ್ನಾಟಕ ಭೂ ಕಂದಾಯ (3ನೇ ತಿದ್ದುಪಡಿ) ವಿಧೇಯಕ, 2024
3. ಕರ್ನಾಟಕ ಮೋಟಾರು ವಾಹನಗಳ ತೆರಿಗೆ ನಿರ್ಧರಣೆ (2ನೇ ತಿದ್ದುಪಡಿ) ವಿಧೇಯಕ, 2024

**ಸಭಾಪತಿಯವರು:-** ಮಂಡಿಸಲಾಯಿತು.

## 8. ನಿಯಮ 59ರ ಮೇರೆಗೆ ನಿಲುವಳಿ ಸೂಚನೆ ಮಂಡಿಸಲು ಅನುಮತಿ ಕೋರಿ ಪ್ರಸ್ತಾವ

**“ರಾಯಚೂರು ಶಾಖೋತ್ಪನ್ನ ವಿದ್ಯುತ್ ಕೇಂದ್ರದಲ್ಲಿ ಘಟಕಗಳ ನಿರ್ಮಾಣಕ್ಕೆ ಕರೆದಿರುವ ಟೆಂಡರ್ ಆದೇಶವನ್ನು ರದ್ದುಪಡಿಸಿ ಕಾಮಗಾರಿಗಳ ಅಂದಾಜು ದರಗಳನ್ನು ಮರುಪರಿಶೀಲಿಸಿ ಅವಶ್ಯವಿರುವ ಕಾಮಗಾರಿಗಳಿಗೆ ಮರುಟೆಂಡರ್ ಆಹ್ವಾನಿಸುವ ಕುರಿತು”**

\- - - -

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ನಾನು ನಿಲುವಳಿ ಸೂಚನೆಯನ್ನು ಕೊಟ್ಟಿದ್ದೇನೆ. ದಯವಿಟ್ಟು ಅದನ್ನು ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕು.

**ಸಭಾಪತಿಯವರು:-** ನಿಲುವಳಿ ಸೂಚನೆಗೆ ಸಂಬಂಧಿಸಿದಂತೆ ನನ್ನ ಅಭಿಪ್ರಾಯವೇನೆಂದರೆ, ಆಡಳಿತಾತ್ಮಕ ವಿಷಯವಾದ್ದರಿಂದ ನಿಲುವಳಿ ಸೂಚನೆ ಮಂಡನೆಗೆ ಅವಕಾಶ ಕೋರಿ ನೀಡಿರುವ ಪ್ರಸ್ತಾವಕ್ಕೆ ಅವಕಾಶ ನೀಡದೇ ತಿರಸ್ಕರಿಸಿದ್ದೇನೆ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ತಾವು ಏನು ಹೇಳಿದ್ದೀರಿ ಕೇಳಿಸಲಿಲ್ಲ.

**ಸಭಾಪತಿಯವರು:-** ಅದು ಆಡಳಿತಾತ್ಮಕ ವಿಷಯವಾಗಿರುವುದರಿಂದ ನಿಲುವಳಿ ಸೂಚನೆ ಅಡಿಯಲ್ಲಿ ಪ್ರಸ್ತಾಪ ಮಾಡುವುದಕ್ಕೆ ಬರುವುದಿಲ್ಲ. ಹಾಗಾಗಿ, ನಾನು ಅದನ್ನು ತಿರಸ್ಕಾರ ಮಾಡಿದ್ದೇನೆ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, . . .

**ಸಭಾಪತಿಯವರು:-** ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ ಯವರೇ, ಅದನ್ನು ತಿರಸ್ಕಾರ ಮಾಡಿದ ಮೇಲೆ ಮತ್ತೆ ಅದರ ಬಗ್ಗೆ ಮಾತನಾಡುವಂತಿಲ್ಲ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಇಲ್ಲಿ ರೂ. 260 ಕೋಟಿ ರೂಪಾಯಿಗಳ ಟೆಂಡರ್‌ಗಳಾಗಿದೆ.

**(ಗೊಂದಲ)**

**ಶ್ರೀ ಸಲೀಂ ಅಹಮದ್ (ಸರ್ಕಾರದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ಈಗ ತಾವು ರೂಲಿಂಗ್ ಕೊಟ್ಟಿದ್ದೀರಿ. ರೂಲಿಂಗ್ ಕೊಟ್ಟನಂತರ ಮತ್ತೆ ಆ ವಿಷಯದ ಬಗ್ಗೆ ಚರ್ಚೆ ಮಾಡುವುದಕ್ಕೆ ಆಗುತ್ತದೆಯೇ?

**(ಗೊಂದಲ)**

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಇದರಲ್ಲಿ split tender ಗಳು ಆಗಿವೆ. **(ಗೊಂದಲ)** ಇದರಲ್ಲಿ ಹಗರಣ ಆಗಿದೆ. **(ಗೊಂದಲ)** ಆದ್ದರಿಂದ ಇದು ಭ್ರಷ್ಟಾಚಾರಕ್ಕೆ ಅವಕಾಶ ಕೊಡುತ್ತಿದೆ. ಆ ಕಾರಣದಿಂದಾಗಿ ದಯವಿಟ್ಟು ನಾನು ಇದನ್ನು ಪ್ರಸ್ತಾಪ ಮಾಡುವುದಕ್ಕೆ ತಾವು ಅವಕಾಶ ಕೊಡಬೇಕು.

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):-** ವಿರೋಧ ಪಕ್ಷದವರು ಅದನ್ನೇ ಮಾತನಾಡಿದರೆ ಹೇಗೆ?

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಇವತ್ತಿನ ದಿವಸ ಸರ್ಕಾರ ಸುಮಾರು 260 ಕೋಟಿ ರೂಪಾಯಿಗಳ ಹಗರಣದಲ್ಲಿದೆ.

**ಸಭಾಪತಿಯವರು:-** ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿಯವರೇ, ನೀವು ಬೇರೆ ನಿಯಮಗಳಡಿ ತೆಗೆದುಕೊಂಡು ಬನ್ನಿ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಇದು technical ಇರಲಿ ಅಥವಾ financial ಇರಲಿ ನನಗೆ ಅದು ಸಂಬಂಧವಿಲ್ಲ. ಪೀಠದಿಂದ ಒಂದು ತೀರ್ಮಾನ ಕೊಡಿ. ನಾನು ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಕೊಡಿ. ಅದಾದ ನಂತರ ನೀವು ಏನು ತೀರ್ಮಾನ ಕೊಡುತ್ತೀರೋ . . .

**ಶ್ರೀ ಸಲೀಂ ಅಹಮದ್ (ಸರ್ಕಾರದ ಮುಖ್ಯ ಸಚೇತಕರು):-** ಮಾನ್ಯ ಸಭಾಪತಿಯವರೇ, ತಾವು ಈಗಾಗಲೇ ತೀರ್ಮಾನ ಕೊಟ್ಟಿದ್ದೀರಲ್ಲವೇ?

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ರೂ.128 ಕೋಟಿ ರೂಪಾಯಿಗಳ ಟೆಂಡರ್‌ನ್ನು 4 ಭಾಗಗಳಾಗಿ split ಮಾಡಿದ್ದಾರೆ. ರೂ.140 ಕೋಟಿ ರೂಪಾಯಿಗಳ ಟೆಂಡರ್‌ನ್ನು 4 ಭಾಗಗಳಾಗಿ split ಮಾಡಿದ್ದಾರೆ. ಅವರ ಪಕ್ಷದ ಶಾಸಕರಾದ ಶ್ರೀ ಬಸನಗೌಡ ದದ್ದಲ್ ರವರು ಇದನ್ನು ಮಾಡಿರುವುದು ಸರಿಯಿಲ್ಲವೆಂದು ಪತ್ರ ಬರೆದಿದ್ದಾರೆ.

**(ಈ ಹಂತದಲ್ಲಿ ವಿರೋಧ ಪಕ್ಷದ ನಾಯಕರಾದ ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿಯವರು ಒಂದು ಪತ್ರವನ್ನು ಮಾನ್ಯ ಸಭಾಪತಿಯವರಿಗೆ ತೋರಿಸಿದರು)**

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ನೀವೇ ನೋಡಿ, ರೂ.128 ಕೋಟಿ ರೂಪಾಯಿಗಳ ಟೆಂಡರ್‌ನ್ನು 4 ಭಾಗಗಳಾಗಿ split ಮಾಡಿದ್ದಾರೆ. **(ಗೊಂದಲ)** ಈ ಕಾರಣದಿಂದಾಗಿ ದಯವಿಟ್ಟು ತಾವು ಅದನ್ನು ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಕೊಡಿ. ಇದರಲ್ಲಿ ರೂ. 280 ಕೋಟಿ ರೂಪಾಯಿಗಳ ಹಗರಣ ಆಗಿದೆ. ಬರೀ paint ಮಾಡುವುದಕ್ಕೆ ಒಂದೇ ಕಂಪನಿಯವರಿಗೆ 4 ಭಾಗಗಳಾಗಿ split ಮಾಡಿ ಒಂದೇ ಕಂಪನಿಯವರಿಗೆ ಏಕೆ ಕೊಟ್ಟಿದ್ದಾರೆ?

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೇ, ಒಂದು ನಿಮಿಷ ತಾವು ನನ್ನ ಮಾತು ಕೇಳಿ. ನಾನು ಎಲ್ಲಾ ಓದಿದ್ದೇನೆ. ಚರ್ಚೆ ಮಾಡಿದ್ದೇನೆ. It is not a fit case for the adjournment motion ಎಂದು ಇದನ್ನು reject ಮಾಡಿದ್ದೇನೆ.

**(ಮುಂದು)**

(960)18.12.2024/3.40/ಎಂ.ಎಂ-ಎಂ.ಡಿ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು**):- ಮಾನ್ಯ ಸಭಾಪತಿಯವರೇ, ಇಲ್ಲಿ ಭ್ರಷ್ಟಾಚಾರವಾಗಿದೆ. ಮಾನ್ಯ ಕಾನೂನು ಸಚಿವರು ಹಿಂದೆ ಮಂತ್ರಿಯಾಗಿದ್ದಾಗ (**ಗೊಂದಲ**) ಮಾಡಬಾರದು ಎಂದು (**ಗೊಂದಲ**) ತಾಕೀತು ಮಾಡಿದರು. ಕೆಲವರನ್ನೆಲ್ಲಾ ಸಸ್ಪೆಂಡ್ ಮಾಡಿದರು. ಈಗ ಅವರ ಮಾತಿಗೇನು ಅರ್ಥ ಬರುತ್ತದೆ?

**ಸಭಾಪತಿಯವರು:-** ಮಾನ್ಯ ವಿರೋಧ ಪಕ್ಷದ ನಾಯಕರೇ, ಒಂದು ನಿಮಿಷ ಕೇಳಿ. ನೀವು ಕೊಟ್ಟ Adjournment Motion Notice ಅನ್ನು ನಾನು ಓದಿದ್ದೇನೆ. ಈಗಲೂ ಅದನ್ನು ಹೇಳದಿರಿ. ಅದನ್ನು "it is not a fit case for the Adjournment Motion" ಎಂದು ತಿರಸ್ಕರಿಸಿದ್ದೇನೆ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಇದು Power Corporation ನಲ್ಲಿ ಆಗಿರುವುದು. ಇದರ ಛೇರ್ಮನ್ ಮಾನ್ಯ ಮುಖ್ಯಮಂತ್ರಿಗಳಾಗಿದ್ದಾರೆ.

**ಸಭಾಪತಿಯವರು:-** ಒಂದು ನಿಮಿಷ ಇಲ್ಲಿ ಕೇಳಿ. ನನಗೆ ಬೇಸರವಾಗುತ್ತಿದೆ. ನಾನು ಒಂದು ಸಲ ರೂಲಿಂಗ್ ಕೊಟ್ಟ ನಂತರ you cannot question the ruling of the Chair. ಬೇರೆ ನೋಟಿಸನ್ನು ಕಳುಹಿಸಿ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ನಿಮ್ಮ ಅಧಿಕಾರವನ್ನು ನಾವು ಪ್ರಶ್ನೆ ಮಾಡುತ್ತಿಲ್ಲ. ತಾವು ನಮಗೆ ಅವಕಾಶ ಕೊಡಬೇಕು. ನಮ್ಮ rescue ಗೆ ಬರಬೇಕು. 260 ಕೋಟಿ ರೂಪಾಯಿಗಳ ಹಗರಣವಿದು. ಮಾನ್ಯ ಮುಖ್ಯಮಂತ್ರಿಗಳು ಕೂಡ ಇಲ್ಲಿಯೇ ಇದ್ದಾರೆ. ಉತ್ತರವನ್ನೂ ಅವರೇ ಕೊಡಬಹುದು.

**ಸಭಾಪತಿಯವರು:-** ಅದು ನಿಮಗೆ ಮತ್ತು ಅವರಿಗೆ ಬಿಟ್ಟದ್ದು. ಅದನ್ನು ಬೇರೆ ರೂಪದಲ್ಲಿ ಕಳಿಸಿ ನೋಡೋಣ. ಈಗ "it is not a fit case for the Adjournment Motion" ಎಂದು ತಿರಸ್ಕರಿಸುತ್ತಿದ್ದೇನೆ. ಇಲ್ಲಿಗೆ ಮುಗಿಯಿತು.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಇದು ಸರಿ ಹೋಗುವುದಿಲ್ಲ. ಸರ್ಕಾರ ಸಂಪೂರ್ಣವಾಗಿ ಭ್ರಷ್ಟಾಚಾರದಲ್ಲಿ ಮುಳುಗಿದೆ. ಅನೇಕ ಭ್ರಷ್ಟಾಚಾರಗಳಲ್ಲಿ ಇದೂ ಒಂದು. ಇದು ಸರಿಯಲ್ಲ. ನೀವು ನಮಗೆ ಅವಕಾಶ ಕೊಡಬೇಕು. ಭ್ರಷ್ಟಾಚಾರದ ವಿಚಾರವನ್ನು ಪ್ರಸ್ತಾಪ ಮಾಡಲು ಇದು fit case ಅಲ್ಲ ಎಂದು ಹೇಳದರೆ ನಾವೇನು ಮಾಡಬೇಕು?

**ಸಭಾಪತಿಯವರು:-** ಮಾನ್ಯ ವಿರೋಧಪಕ್ಷದ ನಾಯಕರೇ, ನೋಡಿ, ನಾನು ಓದಿದ್ದೇನೆ, ನೋಡಿದ್ದೇನೆ, ಚರ್ಚೆ ಸಹ ಮಾಡಿದ್ದೇನೆ. ಚರ್ಚೆ ಮಾಡಿದ ನಂತರ ನಾನು ತೀರ್ಮಾನಕ್ಕೆ ಬರುವುದೇನೆಂದರೆ, ಇದು administration matter ಆಗಿದೆ. ನಿಲುವಳಿ ಸೂಚನೆಯಾಗಿ ಬರುವುದಿಲ್ಲ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೆ, Raichur Thermal Plant ದು ನಾಲ್ಕು. ಮತ್ತು ಬಳ್ಳಾರಿಯದ್ದು ಹೊಸ ಯುನಿಟ್. ಅದಕ್ಕೂ ಕೂಡ ಪೇಂಟ್ ಎಂದು ಹೇಳಿ ಅಲ್ಲಿಯೂ ಕೂಡ 140 ಕೋಟಿ;

**ಸಭಾಪತಿಯವರು:–** ವಿರೋಧ ಪಕ್ಷದ ನಾಯಕರೇ, ಇನ್ನೊಮ್ಮೆ ಹೇಳುತ್ತೇನೆ ಕೇಳಿ. ನಾನು ನೀವು ಕೊಟ್ಟಂತಹ ನಿಲುವಳಿ ಸೂಚನೆಯನ್ನು ಸಂಪೂರ್ಣವಾಗಿ ಓದಿದ್ದೇನೆ. ಬೆಳಗ್ಗೆ ಅರ್ಧ ಗಂಟೆ ಕುಳಿತುಕೊಂಡು ಸ್ಟಡಿ ಸಹ ಮಾಡಿದ್ದೇನೆ ಹಾಗೂ ಎಲ್ಲರ ಜೊತೆಗೆ ಚರ್ಚೆ ಮಾಡಿದ್ದೇನೆ. ನಂತರ ಯಾವ conclusion ಗೆ ಬಂದೆನೆಂದರೆ, ಇದು ಆಡಳಿತಾತ್ಮಕ ವಿಷಯವಾಗಿರುವುದರಿಂದ ನಿಲುವಳಿ ಸೂಚನೆಯಲ್ಲಿ ಪ್ರಸ್ತಾಪಕ್ಕೆ ಅವಕಾಶವಿಲ್ಲ. ಆದ್ದರಿಂದ ನಿರಾಕರಿಸಿದ್ದೇನೆ. ನೀವು ಬೇರೆ ರೂಪದಲ್ಲಿ ತೆಗೆದುಕೊಂಡು ಬನ್ನಿ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಇದಕ್ಕೆ ನನ್ನ ವಿರೋಧವಿದೆ. ಮಾನ್ಯ ಮುಖ್ಯಮಂತ್ರಿಗಳೂ ಇಲ್ಲಿಯೇ ಇದ್ದಾರೆ. ದೊಡ್ಡ ಭ್ರಷ್ಟಾಚಾರದ ಹಗರಣ ಇದು.

**ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು);–** ಭ್ರಷ್ಟಾಚಾರವನ್ನು ಯಾರು ಮಾಡಿದರು?

(**ಗೊಂದಲ**)

**ಸಭಾಪತಿಯವರು:–** ನಾನು ಹೇಳುತ್ತೇನೆ ಕುಳಿತುಕೊಳ್ಳಿ. ಈ ರೀತಿ ಆದರೆ ಸದನವನ್ನು ಹೇಗೆ ನಡೆಸಬೇಕು? ನಾನು ಹೇಳುವುದನ್ನು ಕೇಳಿ. Whether it is right or wrong, ಸಭಾಪತಿಯ ಪೀಠದಿಂದ ಒಂದು ಸಲ ತೀರ್ಮಾನ ಕೊಟ್ಟರೆ, you cannot question the decision of the Chair.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ನಾನು ನಿಮ್ಮನ್ನು ಪ್ರಶ್ನೆ ಮಾಡುತ್ತಿಲ್ಲ. ಇಂತಹ ವಿಚಾರವನ್ನು ನಾವು ಇನ್ಯಾವ ವೇದಿಕೆಯಲ್ಲಿ ಹೇಳಬೇಕು?

**ಸಭಾಪತಿಯವರು:–** ಬೇರೆ ರೂಪದಲ್ಲಿ ತೆಗೆದುಕೊಂಡು ಬನ್ನಿ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಹಾಗೆ ಮಾಡುವುದಕ್ಕೆ ನಾಳೆ ಅಧಿವೇಶನ ಮುಗಿಯುತ್ತದೆ. ಆಯಿತು ನಾಳೆಗೆ ಅವಕಾಶ ಕೊಡಿ, ಮಾತನಾಡುತ್ತೇವೆ. ಯಾವ ನಿಯಮದಡಿ ತರಬೇಕೆಂದು ಹೇಳಿ.

**ಸಭಾಪತಿಯವರು:–** ನಾನೇನು ಮಾಡಲಿ, ನಿಲುವಳಿ ಸೂಚನೆಯಡಿ ಕೊಡುವುದಕ್ಕೆ ಬರುವುದಿಲ್ಲ. ನಿಲುವಳಿ ಸೂಚನೆಯಡಿ ಇದನ್ನು ತೆಗೆದುಕೊಳ್ಳಲು "it is not a fit case" ಎಂದು ಹೇಳಿದ್ದೇನೆ. ತಾವು ಇದನ್ನು ತಿಳಿದುಕೊಳ್ಳಬೇಕು. ಬೇರೆ ರೂಪದಲ್ಲಿ ಕೊಡಿ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:–** ಆಯಿತು, ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 330ರಡಿ ಚರ್ಚೆಗೆ ಅವಕಾಶ ಕೊಡಿ.

**ಸಭಾಪತಿಯವರು:–** ಬರೆದು ಕೊಡಿ ನೋಡೋಣ.

## ೯. ಶಾಸನ ರಚನೆ

### i) ವಿಧೇಯಕಗಳ ಪರ್ಯಾಲೋಚನೆ ಹಾಗೂ ಅಂಗೀಕಾರ

### ಅ) ಕರ್ನಾಟಕಧನವಿನಿಯೋಗ (ಸಂಖ್ಯೆ-5) ವಿಧೇಯಕ 2024

### ಪರ್ಯಾಲೋಚನಾ ಪ್ರಸ್ತಾವ

**ಶ್ರೀ ಸಿದ್ದರಾಮಯ್ಯ (ಮುಖ್ಯಮಂತ್ರಿ):-** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2024ನೇ ಸಾಲಿನ ಕರ್ನಾಟಕ ಧನವಿನಿಯೋಗ (ಸಂಖ್ಯೆ-5) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು**

**ಶ್ರೀ ಸಿದ್ದರಾಮಯ್ಯ (ಮುಖ್ಯಮಂತ್ರಿ):-** ಮಾನ್ಯ ಸಭಾಪತಿಯವರೇ, ಈ ಆರ್ಥಿಕ ವರ್ಷದಲ್ಲಿ;

**ಸಭಾಪತಿಯವರು:-** ಎಲ್ಲರಿಗೂ ಬಿಲ್ ಕಾಪಿ ಕೊಡಿ.

**ಶ್ರೀ ಸಿದ್ದರಾಮಯ್ಯ:-** ಎಲ್ಲರಿಗೂ ಬಿಲ್ ಕಾಪಿ ಬಂದಿದೆಯೇ?

**(ಈ ಹಂತದಲ್ಲಿ ಮಾನ್ಯ ಸದಸ್ಯರುಗಳು ಬಿಲ್ ಕಾಪಿ ತಮಗೆ ಬಂದಿಲ್ಲ ಎಂದು ತಿಳಿಸಿದರು)**

**ಸಭಾಪತಿಯವರು:-** ಬೇಗ ಬೇಗ ಕೊಡಿ.

**ಶ್ರೀ ಸಿದ್ದರಾಮಯ್ಯ:-** ನಾನು ಎಲ್ಲರಿಗೂ ಅದನ್ನು ಮನೆಗೇ ಕಳುಹಿಸಿದ್ದೇನೆ, ನೀವು ನೋಡಿಲ್ಲ ಅಷ್ಟೇ.

**ಶ್ರೀ ಟಿ.ಎ. ಶರವಣ:-** ಮಾನ್ಯ ಸಭಾಪತಿಯವರೇ, ನಮ್ಮ ಕೊಠಡಿಗೆ ಬರುವ ಕಾಗದ ಪತ್ರಗಳ ಪ್ರತಿ ಪುಟವನ್ನೂ ನಾನು ಓದುತ್ತೇನೆ. ನಮಗೆ ಬಂದಿಲ್ಲ.

**ಸಭಾಪತಿಯವರು:-** ಮಾನ್ಯ ಶರವಣರವರೇ, ನೀವು ಕೊಠಡಿಯಲ್ಲಿ ಇರಲೇ ಇಲ್ಲ ಹೇಗೆ ಓದುತ್ತೀರಿ?

**ಶ್ರೀ ಸಿದ್ದರಾಮಯ್ಯ:-** ಹೌದಾ ಮಾನ್ಯ ಶರವಣರವರೇ? ನೀನು ಪ್ರತಿ ಪುಟವನ್ನೂ ಓದುತ್ತೇನೆ ಎನ್ನುವುದು ಸತ್ಯಕ್ಕೆ ದೂರವಾದುದು. ಓದಬಹುದು ಆದರೆ ಪ್ರತಿ ಪುಟವನ್ನೂ ಓದುತ್ತೇನೆ ಎಂಬುದೆಲ್ಲಾ ಸತ್ಯಕ್ಕೆ ದೂರವಾದುದು.

**ಸಭಾಪತಿಯವರು:-** ಮಾನ್ಯ ಮುಖ್ಯಮಂತ್ರಿಗಳೇ ತಾವು explain ಮಾಡಿ ಮಾನ್ಯ ಸದಸ್ಯರುಗಳಿಗೆ ಬಿಲ್ ಪ್ರತಿಗಳನ್ನು ಒದಗಿಸುತ್ತಾರೆ.

**ಶ್ರೀ ಸಿದ್ದರಾಮಯ್ಯ:-** ಮಾನ್ಯ ಸಭಾಪತಿಯವರೇ, 2024-25ನೇ ಸಾಲಿನ ಆರ್ಥಿಕ ವರ್ಷದಲ್ಲಿ ಪೂರಕ ಅಂದಾಜುಗಳ ಎರಡನೇ ಕಂತನ್ನು ವಿಧಾನ ಪರಿಷತ್ತಿನ ಸಭೆಯ ಮುಂದೆ ಮಂಡಿಸಿದ್ದೇನೆ. ಅದು ರೂ. 5,317 ಕೋಟಿ 83 ಲಕ್ಷ. ಒಟ್ಟು ಬಜೆಟ್ ಇರುವುದು ರೂ. 3,71,000/- ಕೋಟಿ. ಅದರಲ್ಲಿ ಎರಡನೇ ಕಂತು

ಎಷ್ಟಾಗುತ್ತದೆಂದರೆ, 1.39% ಆಗುತ್ತದೆ. ಬಹುಶಃ ಮುಂದಿನ ವರ್ಷದ ಬಜೆಟ್ ಮಂಡಿಸುವುದಕ್ಕಿಂತ ಮುಂಚಿತವಾಗಿ ಇನ್ನೂ ಒಂದು supplementary estimates ಆಗಬಹುದು. Supplementary estimates ಮಂಡಿಸುವುದಕ್ಕೆ ಭಾರತ 'ಸಂವಿಧಾನ'ದ ಅನುಚ್ಛೇದ 205(1)(ಎ) ರಲ್ಲಿ ಅವಕಾಶ ಕೊಟ್ಟಿದ್ದಾರೆ. ಅದರ ರೀತ್ಯ ರೂ. 5,317 ಕೋಟಿ 83 ಲಕ್ಷದಲ್ಲಿ ರೂ. 2,540 ಕೋಟಿ 17 ಲಕ್ಷ revenue expenditure ಗೆ ಹೋಗುತ್ತದೆ. ಉಳಿದ ರೂ. 2,777 ಕೋಟಿ 66 ಲಕ್ಷ ಬಂಡವಾಳ ವೆಚ್ಚಕ್ಕೆ ಹೋಗುತ್ತದೆ. ಇದರಲ್ಲಿ reserve fund ನಿಂದ ರೂ. 2304 ಕೋಟಿ, 95 ಲಕ್ಷ ಹೋಗುತ್ತದೆ. Consolidated Fund ನಿಂದ ರೂ. 3,012 ಕೋಟಿ 87 ಲಕ್ಷ ಹೋಗುತ್ತದೆ. ಇದರಲ್ಲಿ ರೂ. 3,012 ಕೋಟಿ 87 ಲಕ್ಷದಲ್ಲಿ ರೂ. 1,199 ಕೋಟಿ, 94 ಲಕ್ಷ. ಇದು ಕೇಂದ್ರ ಸರ್ಕಾರದಿಂದ ಬರುವಂತಹ ಸಹಾಯಾನುದಾನವಾಗಿದೆ. ಅವರು ಕೊಟ್ಟಿರುವುದನ್ನು ಕೂಡ ನಾವಿಲ್ಲಿ ಮಂಡಿಸಿ ಒಪ್ಪಿಗೆಯನ್ನು ಪಡೆದುಕೊಳ್ಳಬೇಕಾಗುತ್ತದೆ. ನಮ್ಮ ಖಜಾನೆಯಿಂದ ಒಟ್ಟು ನಿವ್ವಳ outgoing cash ಎಷ್ಟೆಂದರೆ, ರೂ. 1,812 ಕೋಟಿ 94 ಲಕ್ಷ. ಪೂರಕ ಅಂದಾಜುಗಳಲ್ಲಿ ಬಹಳ ಮುಖ್ಯವಾಗಿ ರೂ.100 ಕೋಟಿಗಿಂತ ಜಾಸ್ತಿ ಕೊಟ್ಟಿರತಕ್ಕಂತಹದ್ದು. ಅನೇಕ ಇಲಾಖೆಗಳಿಗೆ ಕೊಟ್ಟಿದೆ ಅದರಲ್ಲಿ 100 ಕೋಟಿಗಿಂತ ಹೆಚ್ಚಿಗೆ ಕೊಟ್ಟಿರುವಂತಹ ಇಲಾಖೆಗಳಾವುವೆಂದರೆ, ಗ್ರಾಮೀಣ ರಸ್ತೆಗಳಿಗೆ ಸುಮಾರು 500 ಕೋಟಿ ರೂಪಾಯಿಗಳು. ಪೆರಿಫೆರಲ್ ರಿಂಗ್ ರೋಡ್‌ಗೆ 456 ಕೋಟಿ ರೂಪಾಯಿಗಳು. ವಿದ್ಯುಚ್ಛಕ್ತಿಯ ಬಾಕಿಯ ಸಲುವಾಗಿ ಗ್ರಾಮ ಪಂಚಾಯಿತಿಗಳಿಗೆ ಅನುದಾನ; ಗ್ರಾಮ ಪಂಚಾಯಿತಿಗಳು ವಿದ್ಯುಚ್ಛಕ್ತಿ ಬಾಕಿ ಕೊಡಬೇಕು. ಅವುಗಳನ್ನು ಇಂಧನ ಇಲಾಖೆಗೆ ಕೊಡುವುದಕ್ಕೋಸ್ಕರ ಗ್ರಾಮೀಣ ಪಂಚಾಯಿತಿಗಳಿಗೆ 400 ಕೋಟಿ ರೂಪಾಯಿಗಳನ್ನು ಕೊಡುತ್ತಿದ್ದೇವೆ. ಜಿಲ್ಲಾ ರಸ್ತೆಗಳಿಗೆ SCP-TSP (Special Component Plan and Tribal Sub-Plan) ಅಡಿಯಲ್ಲಿ 393 ಕೋಟಿ ರೂಪಾಯಿಗಳನ್ನು ಕೊಡುತ್ತಿದ್ದೇವೆ.

(ಮುಂದು)

**(961) 18.12.2024 3.50 ಹೆಚ್‌ವಿ.ಎಂಡಿ**

**ಶ್ರೀ ಸಿದ್ದರಾಮಯ್ಯ(ಮುಂದುವರಿದದ್ದು):-**

ಸನ್ಮಾನ್ಯ ಸಭಾಪತಿಯವರೇ, ಅರಣ್ಯ ಅಭಿವೃದ್ಧಿ ವೆಚ್ಚಕ್ಕಾಗಿ ಅರಣ್ಯ ಇಲಾಖೆಗೆ ಸುಮಾರು 300 ಕೋಟಿ ರೂಪಾಯಿಗಳನ್ನು ನೀಡಲಾಗಿದೆ. ವಸತಿ ಶಾಲೆಗಳ ನಿರ್ಮಾಣಕ್ಕಾಗಿ 250 ಕೋಟಿ ರೂಪಾಯಿಗಳನ್ನು, ಪರಿಶಿಷ್ಟಜಾತಿಯವರ ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳಿಗಾಗಿ ಸುಮಾರು 241 ಕೋಟಿ ರೂಪಾಯಿಗಳನ್ನು ಕೊಡಲಾಗಿದೆ. ಪ್ರಧಾನಮಂತ್ರಿಗಳ ಅವಾಸ್ ಯೋಜನೆಗಾಗಿ ಸುಮಾರು 218 ಕೋಟಿ ರೂಪಾಯಿಗಳನ್ನು ಮೀಸಲಿಡಲಾಗಿದೆ. ಹಾಲು ಉತ್ಪಾದಕರಿಗೆ ನೀಡಲಾಗುತ್ತಿರುವ ಪ್ರೋತ್ಸಾಹಧನಕ್ಕಾಗಿ ಸುಮಾರು 200 ಕೋಟಿ ರೂಪಾಯಿಗಳನ್ನು ಮೀಸಲಿಡಲಾಗುತ್ತಿದೆ.

**ಶ್ರೀ ಶಶೀಲ್ ಜಿ.ನಮೋಶಿ(ಶಿಕ್ಷಕರ ಕ್ಷೇತ್ರ):-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳು ಹೇಳುತ್ತಿರುವ ಅಂಕಿಸಂಖ್ಯೆಗಳು ಯಾವುದೂ ಅವರು ನೀಡಿರುವ ಪೂರಕ ಅಂದಾಜುಗಳ ವಿಧೇಯಕದಲ್ಲಿ ಇಲ್ಲ.

**ಶ್ರೀ ಟಿ.ಎ.ಶರವಣ(ವಿಧಾನಸಭಾ ಕ್ಷೇತ್ರ):-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳ ಬಳಿ ಇರುವ ಪ್ರತಿಯನ್ನು ನಮಗೆ ಕೊಟ್ಟಿಲ್ಲವೆಂದು ಕಾಣುತ್ತದೆ.

**ಸಭಾಪತಿಯವರು:-** ಮಾನ್ಯ ಮುಖ್ಯಮಂತ್ರಿಗಳು ಅಲ್ಲಿ ಕೊಟ್ಟಿರುವುದನ್ನು ಬಿಟ್ಟು, ಹೆಚ್ಚುವರಿ ಮಾಹಿತಿಯನ್ನು ನೀಡುತ್ತಿದ್ದಾರೆ.

**ಶ್ರೀ ಸಿದ್ದರಾಮಯ್ಯ:-** ಸನ್ಮಾನ್ಯ ಸಭಾಪತಿಯವರೇ, ಸುಮಾರು 100 ಕೋಟಿ ರೂಪಾಯಿಗಳಿಗಿಂತ ಹೆಚ್ಚು ಅನುದಾನವನ್ನು ಕೊಟ್ಟಿರುವಂತಹ ಬಾಬ್ತುಗಳನ್ನು ಮಾತ್ರ ನಾನು ಓದುತ್ತಿದ್ದೇನೆ. 100 ಕೋಟಿ ರೂಪಾಯಿಗಳಿಗಿಂತ ಕಡಿಮೆ ಅನುದಾನ ಕೊಟ್ಟಿರುವ ಅಂಕಿಅಂಶಗಳು ಸಹ ಅದರಲ್ಲಿವೆ. "ಪೂರಕ ಅಂದಾಜುಗಳು(ಎರಡನೇ ಕಂತು) 2024-25" ಈ ಪುಸ್ತಕದಲ್ಲಿ ಇಲಾಖೆವಾರು ಹಂಚಿಕೆ ಮಾಡಿರುವ ಅನುದಾನದ ಮಾಹಿತಿಯನ್ನು ನೀಡಲಾಗಿದೆ. ಅದನ್ನು ಮಾನ್ಯ ಸದಸ್ಯರುಗಳು ಓದಿಕೊಳ್ಳಬೇಕಾಗಿದೆ. ಆ ಪುಸ್ತಕವನ್ನು ಎಲ್ಲ ಸದಸ್ಯರುಗಳಿಗೂ ಕೊಡಿ. ಯಾಕೆ ಇಲ್ಲಿಯವರೆಗೆ ಆ ಪುಸ್ತಕವನ್ನು ಕೊಟ್ಟಿಲ್ಲ? ಅದರಲ್ಲಿ ಎಲ್ಲ ಮಾಹಿತಿ ಇದೆ.

**ಸಭಾಪತಿಯವರು:-** ಮಾನ್ಯ ಮುಖ್ಯಮಂತ್ರಿಗಳೇ, ಕಾರ್ಯಕಲಾಪಗಳ ಪಟ್ಟಿಯಲ್ಲಿ ಎರಡು ದಿನಗಳಿಗೆ ಮುಂಚಿತವಾಗಿ ಈ ವಿಧೇಯಕವನ್ನು ಹಾಕಿಕೊಳ್ಳಲಾಗಿತ್ತು. ಆಗ ಪೂರಕ ಅಂದಾಜು ಪುಸ್ತಕವನ್ನು ಎಲ್ಲ ಸದಸ್ಯರುಗಳಿಗೂ ಅಂಜೆಡಾ ಜೊತೆಗೆ ಒದಗಿಸಲಾಗಿತ್ತು.

**ಶ್ರೀ ಕೆ.ಎ.ತಿಪ್ಪೇಸ್ವಾಮಿ:-** ಸನ್ಮಾನ್ಯ ಸಭಾಪತಿಯವರೇ, ಅಜೆಂಡಾದಲ್ಲಿ ಎರಡು ದಿನಗಳ ಹಿಂದೆ ಬಂದಿರಬಹುದು. ಆದರೆ, ನಮಗೆ ಪೂರಕ ಅಂದಾಜುಗಳ ಪುಸ್ತಕ ಸಿಕ್ಕಿಲ್ಲ.

**ಶ್ರೀ ಎನ್.ಎಸ್.ಬೋಸರಾಜು(ಸಭಾನಾಯಕರು):-** ಸನ್ಮಾನ್ಯ ಸಭಾಪತಿಯವರೇ, ಬುಕ್‌ಲೆಟ್ ಎರಡು ಮೂರು ದಿನಗಳ ಹಿಂದೆಯೇ ಎಲ್ಲರಿಗೂ ಕಳುಹಿಸಿಕೊಡಲಾಗಿದೆ.

**ಸಭಾಪತಿಯವರು:-** ಮಾನ್ಯ ಮುಖ್ಯಮಂತ್ರಿಗಳೇ, ಅಜೆಂಡಾ ಜೊತೆಯಲ್ಲಿ ಅದನ್ನು ಕಳುಹಿಸಿಕೊಡಲಾಗಿದೆ.

**ಶ್ರೀ ಸಿದ್ದರಾಮಯ್ಯ:-** ಸನ್ಮಾನ್ಯ ಸಭಾಪತಿಯವರೇ, ಕಳುಹಿಸಿಕೊಟ್ಟಿದ್ದರೆ ಸರಿ. ವಸತಿ ಯೋಜನೆಯಡಿಯಲ್ಲಿ ಫಲಾನುಭವಿ ಸಹಾಯ ನೀಡುವ ಹಿನ್ನೆಲೆಯಲ್ಲಿ ಪೌರ ಕಾರ್ಮಿಕರು ಮನೆಗಳನ್ನು ಕಟ್ಟಿಕೊಳ್ಳುವುದಕ್ಕೆ ಕೇಂದ್ರ ಸರ್ಕಾರ 1.5 ಲಕ್ಷ ರೂಪಾಯಿಗಳನ್ನು ಮತ್ತು ರಾಜ್ಯ ಸರ್ಕಾರ 1.20 ಲಕ್ಷ ರೂಪಾಯಿಗಳ ಧನ ಸಹಾಯವನ್ನು ನೀಡುತ್ತಿವೆ. ಉಳಿದಿರುವ ವೆಚ್ಚವನ್ನು ಫಲಾನುಭವಿಗಳು ನೀಡಬೇಕಾಗುತ್ತದೆ. ಒಟ್ಟಾರೆ ವೆಚ್ಚ 7.5 ಲಕ್ಷ ರೂಪಾಯಿಗಳಾಗುತ್ತದೆ. ಈಗ ಫಲಾನುಭವಿಗಳು ಒಂದು ಲಕ್ಷ ರೂಪಾಯಿಗಳನ್ನು ಕೊಟ್ಟರೇ ಸಾಕು, ಉಳಿದಿರುವ ಹಣವನ್ನು ರಾಜ್ಯ ಸರ್ಕಾರ ನೀಡುತ್ತದೆ ಎನ್ನುವ ತೀರ್ಮಾನವನ್ನು ತೆಗೆದುಕೊಳ್ಳಲಾಗಿದೆ. ಅದಕ್ಕಾಗಿಯೇ 137 ಕೋಟಿ ರೂಪಾಯಿಗಳನ್ನು ನೀಡಲಾಗುತ್ತಿದೆ. ಗ್ರಂಥಾಲಯಗಳು ಮತ್ತು ಡಿಜಿಟಲೀಕರಣಕ್ಕಾಗಿ ಸುಮಾರು 132 ಕೋಟಿ ರೂಪಾಯಿಗಳನ್ನು; ಪ್ರವಾಸಿ ತಾಣಗಳಲ್ಲಿ ಮೂಲಭೂತ ಸೌಕರ್ಯ ಕಾಮಗಾರಿಗಳಿಗಾಗಿ 131 ಕೋಟಿ ರೂಪಾಯಿಗಳನ್ನು; ಅಂಗನವಾಡಿ ಕೊಠಡಿಗಳ ಉನ್ನತ್ತೀಕರಣ ಕಾಮಗಾರಿಗಳಿಗಾಗಿ 113 ಕೋಟಿ ರೂಪಾಯಿಗಳನ್ನು ಮತ್ತು ಬೇರೆ ಬಾಬ್ತುಗಳಿಗೆ 1,446 ಕೋಟಿ ರೂಪಾಯಿಗಳನ್ನು ವೆಚ್ಚ ಮಾಡಲಾಗುತ್ತಿದೆ. ಹೀಗೆ ಒಟ್ಟು 5,317 ಕೋಟಿ 23,00,000 ರೂಪಾಯಿಗಳನ್ನು

ಈ ಆರ್ಥಿಕ ವರ್ಷದಲ್ಲಿ ವೆಚ್ಚ ಮಾಡುವುದಕ್ಕೆ ಸದನವು ಒಪ್ಪಿಗೆ ನೀಡಬೇಕೆಂದು ಕೇಳಿಕೊಳ್ಳುತ್ತಾ, ಈ ಸದನದ ಮುಂದೆ ಪೂರಕ ಅಂದಾಜುಗಳ ವಿಧೇಯಕವನ್ನು ಮಂಡಿಸುತ್ತಿದ್ದೇನೆ. ಅದರ ಬಗ್ಗೆ ವಿವರಣೆಯನ್ನು ಸಹ ಕೊಟ್ಟಿದ್ದೇನೆ. ಪೂರಕ ಅಂದಾಜುಗಳಿಗೆ ದಯಮಾಡಿ ಈ ಸದನದ ಎಲ್ಲ ಸದಸ್ಯರು ಒಪ್ಪಿಗೆಯನ್ನು ನೀಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

**ಸಭಾಪತಿಯವರು:- ಪ್ರಸ್ತಾವ ಏನೆಂದರೆ;**

"ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2024ರ ಕರ್ನಾಟಕ ಧನ ವಿನಿಯೋಗ (ಸಂಖ್ಯೆ-05)ವಿಧೇಯಕವನ್ನು ಪರ್ಯಾಲೋಚಿಸುವುದು."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**ಪ್ರಸ್ತಾವದ ಅಂಗೀಕಾರ**

**ಶ್ರೀ ಸಿದ್ದರಾಮಯ್ಯ (ಮುಖ್ಯಮಂತ್ರಿಗಳು ಹಾಗೂ ಹಣಕಾಸು ಸಚಿವರು):-** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2024ರ ಕರ್ನಾಟಕ ಧನ ವಿನಿಯೋಗ (ಸಂಖ್ಯೆ-05) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ."

**ಸಭಾಪತಿಯವರು:- ಪ್ರಸ್ತಾವ ಏನೆಂದರೆ,**

"ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2024ರ ಕರ್ನಾಟಕ ಧನ ವಿನಿಯೋಗ (ಸಂಖ್ಯೆ-05)ವಿಧೇಯಕವನ್ನು ಅಂಗೀಕರಿಸುವುದು."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು**

**ii) ವಿಧೇಯಕವನ್ನು ಹಿಂಪಡೆಯುವುದು.**

**ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ(ತಿದ್ದುಪಡಿ) ವಿಧೇಯಕ, 2024**

ಹಿಂಪಡೆಯುವ ಪ್ರಸ್ತಾವ

**ಶ್ರೀ ಬಿ.ಎಸ್.ಸುರೇಶ್(ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು):-** ಸನ್ಮಾನ್ಯ ಸಭಾಪತಿಯವರೇ, 2024ರ ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ(ತಿದ್ದುಪಡಿ) ವಿಧೇಯಕವನ್ನು ಹಿಂಪಡೆಯುವ ಪ್ರಸ್ತಾವನೆಯನ್ನು ಮಂಡಿಸುತ್ತಿದ್ದೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು**

**ಶ್ರೀ ಬಿ.ಎಸ್.ಸುರೇಶ್(ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು):-** ಸನ್ಮಾನ್ಯ ಸಭಾಪತಿಯವರೇ, 2024ರ ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ(ತಿದ್ದುಪಡಿ) ವಿಧೇಯಕವನ್ನು ಹಿಂಪಡೆಯಲು ಅನುಮತಿಯನ್ನು ನೀಡಬೇಕೆಂದು ಕೋರುತ್ತೇನೆ.

**ಸಭಾಪತಿಯವರು:-** ಪ್ರಸ್ತಾವ ಏನೆಂದರೇ,

"2024ರ ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ(ತಿದ್ದುಪಡಿ) ವಿಧೇಯಕವನ್ನು ಹಿಂಪಡೆಯುವುದು.

**ವಿಧೇಯಕವನ್ನು ಹಿಂಪಡೆಯಲಾಯಿತು ಹಾಗೂ ಪ್ರಸ್ತಾವಕ್ಕೆ ಸದನದ ಅನುಮೋದನೆ ದೊರೆಯಿತು**

**iii) ವಿಧೇಯಕಗಳ ಪರ್ಯಾಲೋಚನೆ ಹಾಗೂ ಅಂಗೀಕಾರ (ಮುಂದುವರೆದುದು)**

**ಆ) ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ(ತಿದ್ದುಪಡಿ) ವಿಧೇಯಕ, 2024**

**ಪರ್ಯಾಲೋಚನಾ ಪ್ರಸ್ತಾಪ**

**ಶ್ರೀ ಪ್ರಿಯಾಂಕ್ ಖರ್ಗೆ (ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು):-** ಸನ್ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2024ರ ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ವಿಶ್ವವಿದ್ಯಾಲಯ (ತಿದ್ದುಪಡಿ)_ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು**

**ಶ್ರೀ ಪ್ರಿಯಾಂಕ್ ಖರ್ಗೆ (ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು):-** ಸನ್ಮಾನ್ಯ ಸಭಾಪತಿಯವರೇ, ಈ ವಿಧೇಯಕವನ್ನು ತರುವುದರ ಮೂಲಕ ಪ್ರಕರಣ 2(ಆರ್-ಎ), ಪ್ರಕರಣ 13(1), ಪ್ರಕರಣ15(2), ಪ್ರಕರಣ 26(1) ಹಾಗೂ ಪ್ರಕರಣ 33(1)ಗೆ ಸಂಬಂಧಪಟ್ಟಂತೆ ಒಟ್ಟು 05 ಪ್ರಕರಣಗಳಿಗೆ ತಿದ್ದುಪಡಿಗಳನ್ನು ತರುತ್ತಿದ್ದೇವೆ.

ಪ್ರಕರಣ2(ಆರ್-ಎ)ನಲ್ಲಿ ಮೊದಲು "ರಾಜ್ಯ ಸರ್ಕಾರ" ಎಂದು ಇತ್ತು ಈಗ ಅದಕ್ಕೆ ತಿದ್ದುಪಡಿಯನ್ನು ತಂದು, "ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯ ಪ್ರಭಾರೆಯಲ್ಲಿರುವ ಮಂತ್ರಿ" ಎನ್ನುವುದನ್ನು ಸೇರಿಸಲಾಗಿದೆ.

(ಮುಂದುವರಿದಿದೆ)

(962) 18.12.2024 4.00 ಪಿಕೆ:ಎಕೆ

**ಶ್ರೀ ಪ್ರಿಯಾಂಕ ಖರ್ಗೆ(ಮುಂದುವರೆದಿದೆ)**

In Section 13(1) of the Act, for the words, "The Governor" the words "The Chief Minister" shall be substituted. Obviously, "ರಾಜ್ಯಪಾಲರು" ಎಂಬುದರ ಬದಲಾಗಿ "ಮುಖ್ಯಮಂತ್ರಿಯವರು" ಎಂದು ತಿದ್ದುಪಡಿಯನ್ನು ತರುತ್ತಿದ್ದೇವೆ. ಮತ್ತೆ Appointment of Vice Chancellors ಬಗ್ಗೆ ಹೇಳುವುದಾದರೆ, Vice Chancellors ನೇಮಕ ಮಾಡುವಂತಹ ವಿಧಾನವನ್ನು ಸೆಕ್ಷನ್ 15(2) ರಲ್ಲಿ ತರುತ್ತಿದ್ದೇವೆ. This is as per the UGC guidelines. ಹಿಂದೆ ಯುಜಿಸಿ ಗೈಡ್‌ಲೈನ್ಸ್

ಇರಲಿಲ್ಲ. ಈ ಯುಜಿಸಿ ಗೈಡ್‌ಲೈನ್ಸ್ ಪ್ರಕಾರ, ಈಗ ವಿಸಿ ನೇಮಕವಾಗಬೇಕಾದರೆ ಯಾವುದೇ ವಿಶ್ವವಿದ್ಯಾಲಯದಲ್ಲಾಗಲಿ ಕನಿಷ್ಠ 10 ವರ್ಷ ಪ್ರೊಫೆಸರ್ ಆಗಿ ಅನುಭವ ಇರಬೇಕು ಅಂದರೆ "...with a minimum of ten years of experience as professor in any University or ten years of experience in reputed research and/or academic administrative organization with proof of having demonstrated academic leadership preferably who have sufficient experience in the areas of Rural Development and Panchayat Raj..." so on and so forth. ಇದನ್ನು ನಾವು as per the UGC guidelines ತರುತ್ತಿದ್ದೇವೆ. 4ನೇ ತಿದ್ದುಪಡಿಯಾಗಿ, ಸೆಕ್ಷನ್ 26(1) ಪ್ರಕಾರ Executive Council ನಲ್ಲಿ Ex-officio Members by designation ಇರುತ್ತಿದ್ದರು. ಮತ್ತೆ by designation ತಜ್ಞರೂ ಇರುತಿದ್ದರು. ಅದರ ಜೊತೆಗೆ Nominated Members of the Government ಕೂಡ ಇರುತ್ತಿದ್ದರು. ಅದು 3 ವರ್ಷದ ಅವಧಿಗೆ ಮಾತ್ರ ಇತ್ತು. ಈಗ ನಾವು, ಯಾರು by designation ಇದ್ದಾರೆ, ಯಾರು Ex-officio Members ಇದ್ದಾರೋ ಅವರು ಪರ್ಮನೆಂಟ್ ಮೆಂಬರ್ ಆಗಿರುತ್ತಾರೆ. ನಾಮ ನಿರ್ದೇಶಿತ ಸದಸ್ಯರನ್ನು ಸರ್ಕಾರ ಮೂರು ವರ್ಷಕ್ಕೊಮ್ಮೆ ಬದಲಾವಣೆ ಮಾಡಬಹುದು ಎನ್ನುವ ತಿದ್ದುಪಡಿಯನ್ನು ತರುತ್ತಿದ್ದೇವೆ. ಸೆಕ್ಷನ್ 32ರಲ್ಲಿ Academic Council ಎಂದಿದೆ. Section 26(1) is about Members of the Executive Council. Section 33(1) is about Members of the Academic Council. ಇದರಲ್ಲೂ ಕೂಡ similar to Executive Council, Ex-officio Members ಯಾರಿರುತ್ತಾರೆ, ಅಧಿಕಾರಿಗಳು ಯಾರಿರುತ್ತಾರೋ by way of designation, ಅವರು ಪರ್ಮನೆಂಟ್ ಆಗಿ ಇರುತ್ತಾರೆ. ಆದರೆ, ಯಾರು ಸರ್ಕಾರದಿಂದ ನಾಮಿನೇಷನ್ ಆಗುತ್ತಾರೋ ಅವರು ಮೂರು ವರ್ಷಕ್ಕೊಮ್ಮೆ ಬದಲಾವಣೆ ಆಗುತ್ತಾರೆ. ಈ ತಿದ್ದುಪಡಿಗಳನ್ನು ತರುವ ಉದೇಶವೇನೆಂದರೆ, better functioning of the University. ಏಕೆಂದರೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಬಗ್ಗೆ ಇರುವಂತಹ ದೇಶದ ಒಂದೇ ಒಂದು ವಿಶ್ವವಿದ್ಯಾಲಯವಾಗಿದೆ. ಇದು ವಿಭಿನ್ನ ವಿಶ್ವವಿದ್ಯಾಲಯವಾಗಿದೆ. ಅದರ ದಿನನಿತ್ಯದ functioning ಗೆ ಇರಬಹುದು ಅಥವಾ effective management of administration ಮತ್ತು ಸರ್ಕಾರದ ಜೊತೆ better coordination ಇದ್ದರೆ ಅನುಕೂಲವಾಗುತ್ತದೆ. ಮಾನ್ಯ ಮುಖ್ಯಮಂತ್ರಿಗಳೇ ಅದಕ್ಕೆ ಚಾನ್ಸಲರ್ ಆಗಿರುತ್ತಾರಾದ್ದರಿಂದ ಮತ್ತು ಇಲಾಖೆ ಕೂಡ ಅದರ ಜವಾಬ್ದಾರಿ ವಹಿಸಿಕೊಳ್ಳುವುದರಿಂದ ಬಹಳ ನಿಕಟವಾಗಿ ಅದರ ಪ್ರಗತಿಯನ್ನು ಕಾಣಬಹುದು. ಅವರಿಗೆ ಸಂಪೂರ್ಣವಾದಂತಹ ಸಹಕಾರವನ್ನು ನೀಡಿ ಇಡೀ ದೇಶದಲ್ಲೇ ಇದನ್ನು ಒಂದು ಮಾದರಿಯಾದ ವಿಶ್ವವಿದ್ಯಾಲಯವನ್ನಾಗಿ ಮಾಡಬಹುದು. ವಿಶೇಷವಾಗಿ ಅಲ್ಲಿನ ವಿದ್ಯಾರ್ಥಿಗಳು ಯಾರು ಇರುತ್ತಾರೋ, ಯುವಕ-ಯುವತಿಯರು ಇರುತ್ತಾರೋ ಅವರಿಗೆ ಉತ್ತಮವಾದಂತಹ ಶಿಕ್ಷಣ, ಸಂಶೋಧನೆಗಳಿಗೆ ಅವಕಾಶ, ಉತ್ತಮ ತರಬೇತಿ, ಹೆಚ್ಚಿನ ಉದ್ಯಮಶೀಲತೆ ಮತ್ತು ಹೊಸ ಆವಿಷ್ಕಾರಗಳು ಬರಲಿ ಎನ್ನುವ ಕಾರಣಕ್ಕೆ ತಿದ್ದುಪಡಿ ತರುತ್ತಿದ್ದೇವೆ.

ನಾನೂ ಕೂಡ ಐಟಿ-ಬಿಟಿ ಸಚಿವನಿದ್ದಾಗ ಗ್ರಾಮೀಣ ಪ್ರದೇಶದಲ್ಲಿ ತಂತ್ರಜ್ಞಾನವನ್ನು ಒಳಪಡಿಸುವ ಕೆಲಸವನ್ನು ಮಾಡಿದ್ದೆ. ಈಗ ತಂತ್ರಜ್ಞಾನ ಎನ್ನುವುದು agriculture, horticulture, food processing ಇರಬಹುದು, ಈ ಎಲ್ಲದರಲ್ಲೂ ಇದೆ. ರೂರಲ್ ಡೆವಲಪ್‌ಮೆಂಟ್‌ನಲ್ಲಿ ಕನ್‌ಸ್ಟ್ರಕ್ಷನ್‌ಗೆ ಉಪಯೋಗ ಮಾಡುವ materials ಇರಬಹುದು, ಇವೆಲ್ಲದರಲ್ಲಿ ಹೊಸ ತಂತ್ರಜ್ಞಾನ ಬರುತ್ತಿದೆ. ಇದರಿಂದ ನಾವು ಹೊಸ ನೀತಿ, ಯೋಜನೆಗಳನ್ನು ರೂಪಿಸಬಹುದಾಗಿದೆ. ಈ ವಿಧೇಯಕವನ್ನು ತರುವುದರ ಮುಖಾಂತರ ಮಾದರಿ ವಿಶ್ವವಿದ್ಯಾಲಯವನ್ನು ನಮ್ಮ ದೇಶಕ್ಕೆ ಮತ್ತು ನಮ್ಮ ರಾಜ್ಯದ ಯುವಕರ ಭವಿಷ್ಯಕ್ಕಾಗಿ ಕೊಡಬಹುದು ಎನ್ನುವ ಉದ್ದೇಶದಿಂದ ತಂದಿದ್ದೇವೆ. ಸದನ ಈ ವಿಧೇಯಕಕ್ಕೆ ಒಪ್ಪಿಗೆ ಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ.

**ಶ್ರೀ ಟಿ.ಎ.ಶರವಣ(ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಗಳೆ, ಸದರಿ ತಿದ್ದುಪಡಿ ವಿಧೇಯಕವನ್ನು ತಂದಿರುವುದು ನೋಡಿದರೆ, ಎಲ್ಲೋ ಒಂದು ಕಡೆ ಇದು ರಾಜ್ಯಪಾಲರ ಮೇಲಿನ ದ್ವೇಷದ ವಿಧೇಯಕವಾಗಿದೆ ಎಂದನಿಸುತ್ತಿದೆ. ರಾಜ್ಯಪಾಲರ ಸ್ಥಾನ ಸಂವಿಧಾನದತ್ತವಾದುದು. ಅವರ ಸ್ಥಾನಕ್ಕೆ ಧಕ್ಕೆಯಾಗುತ್ತದೆ ಎಂದು ನನಗನ್ನಿಸುತ್ತದೆ. ರಾಜ್ಯಪಾಲರನ್ನು ದೂರ ಇಡುವುದರಿಂದ ಸರ್ಕಾರಕ್ಕೆ ಏನು ಲಾಭವಾಗುತ್ತದೆ? ಅದರ ಬಗ್ಗೆ ಮಾನ್ಯ ಮಂತ್ರಿಗಳು ಸ್ಪಷ್ಟನೆ ಕೊಡಬೇಕು. ಈ ವಿಶ್ವವಿದ್ಯಾಲಯಗಳು ಯಾವಾಗಲೂ ಕೂಡ ರಾಜಕೀಯದಿಂದ ದೂರ ಇರಬೇಕೆಂದು ಎಲ್ಲರೂ ಬಯಸುತ್ತೇವೆ. ರಾಜ್ಯದ ಮುಖ್ಯಮಂತ್ರಿಗಳಿಗೆ ಇರಬಹುದಾದ ಒತ್ತಡ, ಕೆಲಸ ಇವೆಲ್ಲವನ್ನೂ ನೋಡಿದಾಗ ಅವರು ಯಾವಾಗಲೂ ಬಿಜಿಯಾಗಿರುತ್ತಾರೆ. ಆ ಸ್ಥಾನದಲ್ಲಿ ಅವರು ಯಾವರೀತಿ ಕರ್ತವ್ಯವನ್ನು ನಿಭಾಯಿಸುವುದಕ್ಕೆ ಸಾಧ್ಯವಾಗುತ್ತದೆ ಎಂಬುದನ್ನು ಹೇಳಬೇಕು. ಕುಲಪತಿಯ ಕರ್ತವ್ಯ ಮತ್ತು ಸರ್ಕಾರಕ್ಕೆ ಆಗುವ ನಷ್ಟವನ್ನು ಮಂತ್ರಿಗಳು ಹೇಳಬೇಕಾಗುತ್ತದೆ. ಮುಖ್ಯಮಂತ್ರಿಗಳನ್ನು ಮಾಡುವುದಕ್ಕೆ ನನ್ನ ವಿರೋಧ ಇಲ್ಲ ಆದರೆ, ರಾಜ್ಯಪಾಲರ ಸ್ಥಾನದಲ್ಲಿ ಕೂರಿಸುವುದರಿಂದ ಅವರ ಕೆಲಸ-ಕಾರ್ಯಕ್ಕೆ, ದಿನನಿತ್ಯ ಜನರ ಸಮಸ್ಯೆಗಳನ್ನು ಆಲಿಸುವುದಕ್ಕೆ ಮತ್ತು ಬೇರೆ ಬೇರೆ ರೀತಿಯ ಆಡಳಿತಾತ್ಮಕ ಕರ್ತವ್ಯಗಳನ್ನು ನಿರ್ವಹಿಸಲು ತೊಂದರೆಯಾಗುತ್ತದೆ. ಅದರ ಕಡೆ ಕೂಡ ಗಮನಹರಿಸಬೇಕು. ಸರ್ಕಾರ ಮತ್ತು ರಾಜ್ಯಪಾಲರ ನಡುವೆ ಯಾವುದೇ ರೀತಿಯ ಕಂದಕ ಆಗಬಾರದು. ಸುದೀರ್ಘವಾಗಿ, ಅನ್ಯೋನ್ಯತೆಯಿಂದ ವ್ಯವಸ್ಥೆ ನಡೆಯಬೇಕಾದರೆ ಈ ಅಂಶದ ಬಗ್ಗೆ ಮರುಚಿಂತಿಸಬೇಕು. ಇನ್ನು Members of the Academic Council and Executive Council ಬಗ್ಗೆ ತಂದಿದ್ದೀರಿ. ಅದು ಯಥಾ ಪ್ರಕಾರ ನಡೆಯುತ್ತಿದೆ. ಅದರಲ್ಲಿ ಹೊಸದೇನೂ ಇಲ್ಲ. ಅವರ ಅವಧಿ ಫಿಕ್ಸ್ ಮಾಡಿರುವುದನ್ನು ಸ್ವಾಗತ ಮಾಡುತ್ತೇನೆ. "ರಾಜ್ಯಪಾಲರು" ಎಂಬುದರ ಬದಲಾಗಿ "ಮುಖ್ಯಮಂತ್ರಿಯವರು" ಎಂದು ಮಾಡಿರುವುದರ ಕಡೆ ದಯವಿಟ್ಟು ಇನ್ನೊಮ್ಮೆ ಗಮನಿಸಬೇಕು ಎಂದು ಕೇಳಿಕೊಳ್ಳುತ್ತೇನೆ.

**ಶ್ರೀ ಕೆ.ಎಸ್.ನವೀನ್(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಗಳೆ, ವಿಶ್ವವಿದ್ಯಾಲಯ ಎನ್ನುವುದು ಘನತೆವೆತ್ತ ರಾಜ್ಯಪಾಲರ ನೇತೃತ್ವದಲ್ಲಿರುವಂಥದ್ದು. ಇದು ಬಹಳ ವರ್ಷಗಳಿಂದ ನಡೆದುಕೊಂಡು ಬಂದಿದೆ. ಇದು ಉನ್ನತ ಶಿಕ್ಷಣ ಸಂಸ್ಥೆ ಆಗಿರುವುದರಿಂದ ರಾಜಕೀಯ ಲೇಪನ ಆಗಬಾರದು. Constitutional Head

ಆಗಿರುವವರು ಆ ಸಂಸ್ಥೆಗಳ ಮುಖ್ಯಸ್ಥರಾಗಿ ಕಾರ್ಯನಿರ್ವಹಿಸಬೇಕು. ಆದರೆ ಮಾನ್ಯ ಸಚಿವರು ವಿಧೇಯಕದ ಬಗ್ಗೆ ವಿವರಿಸುವಾಗ, ಮುಖ್ಯಮಂತ್ರಿಗಳನ್ನು ಚಾನ್ಸಲರ್ ಆಗಿ ತರುತ್ತಿದ್ದೇವೆ ಎಂದು ಹೇಳಿದರು. ಹಾಗೆ ಮಾಡಿದರೆ ಇದೊಂದು ಸರ್ಕಾರದ ಇಲಾಖೆಯ ರೀತಿಯಲ್ಲಾಗುತ್ತದೆ. ಸರ್ಕಾರದ ಇಲಾಖೆಯಾದಾಗ ವಿಶ್ವವಿದ್ಯಾಲಯಕ್ಕೆ ಸಂಬಂಧಪಟ್ಟಂತೆ ಇರಬೇಕಾದ ಪ್ರಿನ್ಸಿಪಲ್‌ಗಳು ಡೈಲ್ಯೂಟ್ ಆಗುತ್ತವೆ. ಅದು ಇಲಾಖೆಯ ಒಂದು ಭಾಗವಾಗಿ, ಅಲ್ಲಿ ನಡೆಯುವಂತಹ ಚಟುವಟಿಕೆಗಳ ಮಾದರಿಯಲ್ಲಿ ಇಲ್ಲೂ ನಡೆದು ಹೋಗುತ್ತದೆ. ಹಾಗಾಗಿ ಇದಕ್ಕೆ ಒಂದು sanctity ಇರಬೇಕು, ಇದು ವಿಶ್ವವಿದ್ಯಾಲಯದ ರೀತಿಯಲ್ಲಿ ಇರಬೇಕು, ಅಲ್ಲಿ ಯಾವುದೇ ರೀತಿಯಾದ ರಾಜಕೀಯ ಹಸ್ತಕ್ಷೇಪ ಆಗಬಾರದು ಅಥವಾ ಯಾವುದೇ ರೀತಿಯ ರಾಜಕೀಯ ಒತ್ತಡ ಬಾರದ ಹಾಗೆ ಆಗಬೇಕು ಎಂದರೆ ಅದು ಮೂಲ ಸ್ವರೂಪದಲ್ಲಿರಬೇಕು. ಈ ರೀತಿ ಏಕೆ ಮಾಡುತ್ತಿದ್ದೇವೆ ಎಂದು ಮಂತ್ರಿಗಳು ಬಿಡಿಸಿ ಹೇಳಲಿಲ್ಲ. ಮುಖ್ಯಮಂತ್ರಿಗಳನ್ನು ಕುಲಾಧಿಪತಿಯಾಗಿ ಮಾಡುವುದರಿಂದ ವಿಶ್ವವಿದ್ಯಾಲಯಕ್ಕೆ ಏನು ಲಾಭವಾಗುತ್ತದೆ ಎನ್ನುವುದನ್ನು ಮಂತ್ರಿಗಳು ವಿವರಣೆಯಲ್ಲಿ ಹೇಳಬೇಕಿತ್ತು. ಅವರು ಹೇಳಿದ್ದರೆ ನಮಗೆ ಅರ್ಥವಾಗುತ್ತಿತ್ತು. ಈಗ ಕೇವಲ ರಾಜ್ಯಪಾಲರ ಜಾಗದಲ್ಲಿ ಮುಖ್ಯಮಂತ್ರಿಗಳು ಇರುತ್ತಾರೆ ಎನ್ನುವುದಷ್ಟನ್ನೇ ಹೇಳಿದರು. ಆ ಸ್ಥಾನದಲ್ಲಿ ಮುಖ್ಯಮಂತ್ರಿಗಳನ್ನು ಕೂರಿಸುವುದರಿಂದ ಈ ವಿಶ್ವವಿದ್ಯಾಲಯದ ಒಟ್ಟು ಸ್ವರೂಪದಲ್ಲಿ ಏನು ಬದಲಾವಣೆ ಆಗುತ್ತದೆ? ಗ್ರಾಮೀಣಾಭಿವೃದ್ಧಿಯನ್ನು ಮಾಡುವುದಕ್ಕೆ ಸರ್ಕಾರ ಇರುತ್ತದೆ. ಈ ರೀತಿಯ ಒಂದು ವಿಶ್ವವಿದ್ಯಾಲಯ ನಮ್ಮಲ್ಲಿ ಇದೆ ಎಂಬುದರ ಬಗ್ಗೆ ನಮಗೆ ಖುಷಿ ಇದೆ. ಆದರೆ, ರಾಜಕೀಯ ಪ್ರೇರಿತವಾಗಿರುವ ಘಟನೆಯಿಂದ ಈ ವಿಧೇಯಕವನ್ನು ತಂದಿರುವುದು ನೋಡಿದರೆ ಸರ್ಕಾರ ಬೇರೆ ರೀತಿಯ ಭಾಷ್ಯಕ್ಕೆ ನಾಂದಿಯನ್ನು ಹಾಡುತ್ತಿದೆ. ದಯಮಾಡಿ ಇದನ್ನು ಮಾಡಬಾರದು. ಹಿಂದೆ ಏನು ವ್ಯವಸ್ಥೆ ಇತ್ತೋ ಅದನ್ನೇ ಮುಂದುವರೆಸಬೇಕು. ಎಷ್ಟು ಬೇಕಾದರೂ ಅಭಿವೃದ್ಧಿ ಮಾಡಲಿ. Tenure fix ಮಾಡಿರುವಂಥದ್ದು ಸರಿಯಿದೆ. ಆದರೆ ರಾಜ್ಯಪಾಲರನ್ನೇ ತೆಗೆದು ಆ ಜಾಗಕ್ಕೆ ಮುಖ್ಯಮಂತ್ರಿಗಳನ್ನು ತರುತ್ತಿರುವುದರಿಂದ ರಾಜಕೀಯವಾಗಿ ಇಲ್ಲಿ ಎಲ್ಲಾ ರೀತಿಯ ಚಟುವಟಿಕೆಗಳನ್ನು ಮಾಡುವುದಕ್ಕೆ ಅವಕಾಶ ಮಾಡಿ ಕೊಟ್ಟಂತೆ ಆಗುತ್ತದೆ. ಅದು ಆಗಬಾರದು ಎಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

(ಮುಂದು)

(963) 18.12.2024 4.10 ಡಿಎಸ್-ಎಕೆ

**ಶ್ರೀ ಸಿ.ಟಿ.ರವಿ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ವಿಶ್ವವಿದ್ಯಾಲಯ 2016 ರಲ್ಲಿ ಪ್ರಾರಂಭವಾಗಿದೆ. 2016 ರಿಂದ ರಾಜ್ಯಪಾಲರು ಕುಲಾಧಿಪತಿಗಳಾಗಿದ್ದರು.

**(ಈ ಹಂತದಲ್ಲಿ ಮಾನ್ಯ ಉಪ ಸಭಾಪತಿಯವರು ಪೀಠವನ್ನಲಂಕರಿಸಿದರು)**

ಮಾನ್ಯ ಸಚಿವರು ಈ ವಿಧೇಯಕದ ಬಗ್ಗೆ ವಿವರಣೆ ಕೊಡಬೇಕಾದರೆ ಸಹಕಾರದ ಅವಶ್ಯಕತೆ ಇರುವುದರಿಂದ ಎನ್ನುವ ಪದ ಪ್ರಯೋಗ ಮಾಡಿದರು. ಅಂದರೆ, ಕುಲಾಧಿಪತಿಗಳಿಂದ ಈ ವಿಶ್ವವಿದ್ಯಾಲಯಕ್ಕೆ ಸಹಕಾರ ಇರಲಿಲ್ಲವೇ? ಏಕೆಂದರೆ, ಸಹಕಾರ ಇರಲಿಲ್ಲವೆಂದು ಅನುಭವಕ್ಕೆ ಬಂದಿದೆಯೇ? ಯಾವ ಹಿನ್ನೆಲೆಯಲ್ಲಿ ಹೇಳುತ್ತಿದ್ದಾರೆ? ಮಾನ್ಯ ಮುಖ್ಯಮಂತ್ರಿಗಳು ಮಾತ್ರ ಸಹಕಾರ ಕೊಡುತ್ತಾರೆಯೇ? ರಾಜ್ಯಪಾಲರು ಸಹಕಾರ ಕೊಡುವುದಿಲ್ಲ ಎಂದು ಏಕೆ ಭಾವಿಸಿದ್ದಾರೆ? ಆ ರೀತಿಯ ಅನುಭವ ಮಾನ್ಯ ಸಚಿವರಿಗೆ ಏಕೆ ಬಂತು? ಪದ್ಧತಿ ಏನೆಂದರೆ, ಬಹುತೇಕ ವಿಶ್ವವಿದ್ಯಾಲಯಗಳಿಗೆ ರಾಜ್ಯಪಾಲರು ಕುಲಾಧಿಪತಿಗಳಾಗಿದ್ದಾರೆ. ಅದು ಇವತ್ತಿನಿಂದ ಬಂದಿರುವಂತಹ ಪದ್ಧತಿ ಅಲ್ಲ. ಬಹಳ ಹಿಂದಿನಿಂದಲೂ ಬಂದಿರುವಂತಹ ಪದ್ಧತಿ. 2016 ರಲ್ಲಿ ಅಂದರೆ, ಹಿಂದಿನ ಕಾಂಗ್ರೆಸ್ ಸರ್ಕಾರ ಈ ಪಂಚಾಯತ್ ರಾಜ್ ಮತ್ತು ಗ್ರಾಮೀಣ ವಿಶ್ವವಿದ್ಯಾಲಯ ತರಬೇಕಾದರೆ ಕುಲಾಧಿಪತಿಗಳಾಗಿ ರಾಜ್ಯಪಾಲರನ್ನೇ ಪ್ರಸ್ತಾಪಿಸಿದ್ದರು. ಈ ವಿಧೇಯಕ ಇದೇ ಸದನದಲ್ಲಿ ಅನುಮೋದನೆಗೊಂಡಿತ್ತು. ಅನುಮೋದನೆಗೊಂಡ ನಂತರ ತಿದ್ದುಪಡಿ ಮಾಡಬೇಕೆಂದರೆ, ಅಂತಹ ಮಹತ್ತರ ಉದ್ದೇಶವೇನು? ಯಾವ ಹಿನ್ನೆಲೆಯಲ್ಲಿ ತಿದ್ದುಪಡಿಯನ್ನು ಮಾಡುತ್ತಿದ್ದಾರೆ? ಬಹಳ ಸಲ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರು ಸಾರ್ವಜನಿಕವಾಗಿ ಹೇಳಿರುವ ಮಾತನ್ನು ನಾನು ಕೇಳಿದ್ದೇನೆ. ರಾಜ್ಯಪಾಲರ ಹುದ್ದೆ, ಅದು ಸಂವಿಧಾನ ಬದ್ಧವಾಗಿರುವಂತಹ ಹುದ್ದೆ, ಅದಕ್ಕೆ ಅದರದ್ದೇ ಆದ ಘನತೆ ಇದೆ. ಅವರು ಸಂವಿಧಾನ ಬದ್ಧ ಕರ್ತವ್ಯವನ್ನು ನಿರ್ವಹಿಸುತ್ತಾರೆ. ಅದಕ್ಕಾಗಿಯೇ ಕೇಂದ್ರ ಸರ್ಕಾರದ ಶಿಫಾರಸ್ಸಿನೊಂದಿಗೆ ರಾಜ್ಯಪಾಲರನ್ನು ರಾಷ್ಟ್ರಪತಿಗಳು ನೇಮಕ ಮಾಡುತ್ತಾರೆ ಎನ್ನುವುದನ್ನು ಮಾನ್ಯ ಸಿದ್ದರಾಮಯ್ಯನವರು ಬಹಳ ಸಲ ಹೇಳಿರುವುದನ್ನು ನಾನು ಕೇಳಿದ್ದೇನೆ. ಈಗ ಕುಲಾಧಿಪತಿ ಹುದ್ದೆಯನ್ನು ರಾಜ್ಯಪಾಲರು ನಿರ್ವಹಿಸುತ್ತಿರುವುದು ಸಂವಿಧಾನ ಬದ್ಧವಾಗಿರುವಂಥದ್ದು. ಅವರಿಗೆ ಆ ಸಂವಿಧಾನ ಬದ್ಧ ಪ್ರತಿನಿಧಿ ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯದಲ್ಲಿ ಇರಬಾರದು ಎಂದು ಅನಿಸಿದೆಯೇ? ಸಂವಿಧಾನ ಬದ್ಧ ಪ್ರತಿನಿಧಿ ಕುಲಾಧಿಪತಿಯಾಗಿರಬಾರದೇ? ಈ ವಿಧೇಯಕಕ್ಕೆ ಏಕೆ ತಿದ್ದುಪಡಿ ಮಾಡುತ್ತಿದ್ದಾರೆ? ಶೋಧನಾ ಸಮಿತಿಯ ಮಾರ್ಗಸೂಚಿಗಳನ್ನೆಲ್ಲಾ ಹಾಕಿದ್ದಾರೆ. ಹತ್ತು ವರ್ಷಗಳ ಅನುಭವವಿರಬೇಕು ಎಂದು ಹೇಳಿದ್ದಾರೆ, ಅದೆಲ್ಲಾ ಒಳ್ಳೆಯದು. ಶೋಧನಾ ಸಮಿತಿಯನ್ನು ನೇಮಕ ಮಾಡುವವರು ಯಾರು? ಛಾನ್ಸಲರ್ ಎಂದ ತಕ್ಷಣ, ಇದರ ಉದ್ದೇಶ ಏನು, ಕೊನೆ ಪಕ್ಷ checks and balances ಇರಬೇಕು, ಯಾರಾದರೊಂದು ತ್ರಯಸ್ಥ ವ್ಯಕ್ತಿಗಳು ಪರಿಶೀಲನೆಗೆ ಒಳಪಡಬೇಕು ಎನ್ನುವುದನ್ನು ಯಾವ ಉದ್ದೇಶದಲ್ಲಿ ಇದನ್ನು ಬದಲಾವಣೆ ಮಾಡುವುದಕ್ಕೆ ಹೊರಟಿದ್ದಾರೆ? ಹಾಗಾಗಿ ನಮಗೆ ಸ್ಪಷ್ಟಪಡಿಸಬೇಕಾಗಿರುವುದು ಸಂವಿಧಾನ ಬದ್ಧ ಪ್ರತಿನಿಧಿ ಕುಲಾಧಿಪತಿಯಾಗಿರುವುದನ್ನು ಏಕೆ ಬದಲಾಯಿಸುತ್ತಿದ್ದಾರೆ ಎನ್ನುವುದನ್ನು ಮಾನ್ಯ ಸಚಿವರು ಸ್ಪಷ್ಟಪಡಿಸಬೇಕು. ಇನ್ನಷ್ಟು ಸಹಕಾರದ ಅವಶ್ಯಕತೆ ಇದೆ ಎಂದು ಹೇಳಿದ್ದಾರೆ. ಹಾಗಿದ್ದಲ್ಲಿ ಹಿಂದಿನ ಕುಲಾಧಿಪತಿಗಳು ಈ ವಿಶ್ವವಿದ್ಯಾಲಯಕ್ಕೆ ಅಸಹಕಾರ ತೋರಿಸಿದ್ದಾರೆಯೇ ಅಥವಾ ಅಸಹಕಾರ ಚಳುವಳಿ ಮಾಡಿದ ರೀತಿಯಲ್ಲಿ ಯಾವುದಾದರೂ ಉದಾಹರಣೆ ಇದೆಯೇ, ಯಾವ ಹಿನ್ನೆಲೆಯಲ್ಲಿ ಈ ರೀತಿಯ ಅಭಿಪ್ರಾಯಕ್ಕೆ ಬಂದಿದ್ದಾರೆ ಎನ್ನುವುದನ್ನು ಮಾನ್ಯ ಸಚಿವರು ಸ್ಪಷ್ಟಪಡಿಸಬೇಕೆಂದು ನಾನು ವಿನಂತಿ ಮಾಡುತ್ತೇನೆ.

**ಶ್ರೀ ಶಶೀಲ್ ಜಿ.ನಮೋಶಿ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ತಿದ್ದುಪಡಿ ವಿಧೇಯಕವನ್ನು ಮಂಡಿಸಿದ್ದಾರೆ. 2016ರಲ್ಲಿ ಮೊದಲನೇ ಬಾರಿಗೆ ಇಡೀ ದೇಶದಲ್ಲಿ The Karnataka State Rural Development and Panchayat Raj University Act ಎಂದು ಕೂಡ ತಂದಿರುವ ಹೆಗ್ಗಳಿಕೆ ನಮ್ಮಲ್ಲಿ ಇದೆ. ನಮ್ಮ ರಾಜ್ಯ ಈ ರೀತಿಯ ವಿಶ್ವವಿದ್ಯಾಲಯಗಳನ್ನು, ತಾಂತ್ರಿಕ ವಿಶ್ವವಿದ್ಯಾಲಯ ವಿ.ಟಿ.ಯು. ಕೂಡ ಬೇರೆ ರಾಜ್ಯದಲ್ಲಿ ಇಲ್ಲದಿರುವಂತಹ ಸಂದರ್ಭದಲ್ಲಿ ನಾವು ತಂದಿದ್ದೇವೆ. ಆರೋಗ್ಯ ವಿಶ್ವವಿದ್ಯಾಲಯ ಪ್ರಾರಂಭವಾಗಿರುವುದು ದೇಶದಲ್ಲಿ ನಮ್ಮ ರಾಜ್ಯದ ಮೊದಲನೆಯದು. ಇಲ್ಲಿ ಪ್ರಶ್ನೆ ಇರುವುದೇನೆಂದರೆ, ಬಹಳ ಮುಖ್ಯವಾಗಿ 'Education' Concurrent List ನಲ್ಲಿ ಇದೆ. 'Education' Concurrent List ನಲ್ಲಿ ಇರುವುದರಿಂದ ಅದರ standard ಅನ್ನು ಸೆಟ್ ಮಾಡುವಂತಹ ಜವಾಬ್ದಾರಿ. ಅಲ್ಲಿ academic standard ಏನಿರಬೇಕು, ಅಲ್ಲಿ research activity ನಡೆಯುವುದು ಬಹಳ ಮುಖ್ಯ. ಆ research activity ಇತ್ಯಾದಿ ಈ technical institution ನಲ್ಲಿ ಅಥವಾ ಎಲ್ಲಾದರೂ ಇರಲಿ, ಉನ್ನತ ಶಿಕ್ಷಣದಲ್ಲಿರುವಂಥದ್ದು ಆ ಸ್ಟ್ಯಾಂಡರ್ಡ್‌ನ್ನು ಸೆಟ್ ಮಾಡುವಂತಹ ಜವಾಬ್ದಾರಿ ಮುಖ್ಯವಾಗಿ ಯಾರದ್ದು ಎಂದರೆ University Grants Commission ರವರದ್ದು. The UGC plays the role of setting up the standards. ಮುಖ್ಯವಾಗಿ ಅವರೇ ಜವಾಬ್ದಾರಿ. ಇದರಲ್ಲಿ ಸಿಬ್ಬಂದಿಗಳು ಯಾವ ರೀತಿ ಇರಬೇಕು, ಅವರ ವಿದ್ಯಾರ್ಹತೆ ಏನಿರಬೇಕು, 2018ರ ರೆಗ್ಯುಲೇಶನ್ಸ್ ಪ್ರಕಾರ ಕೆಲವು ತಿದ್ದುಪಡಿಗಳು ಆಗಿ 'the Chancellor mostly is the Governor of the State, and he shall appoint the Vice-Chancellor' ಎಂದು ಇದೆ. ಏಕೆಂದರೆ, ರಾಜಕೀಯ ಹಸ್ತಕ್ಷೇಪ ಬೇಡ ಎನ್ನುವಂಥದ್ದು. ಇದರಲ್ಲಿ academically ಈ ವಿಷಯಗಳನ್ನು ಅಪ್ರೋಚ್ ಮಾಡಬೇಕೇ ಹೊರತು ಮತ್ತೆ ಬೇರೆ ಉದ್ದೇಶದಿಂದ ಇಲ್ಲ. ಈಗ ನನ್ನ ಸನ್ಮಿತ್ರರು ಹೇಳಿದ್ದಾರೆ, ನಾವು ಪ್ರಪೋಸ್ ಮಾಡುವಂತಹದ್ದು ಬೇರೆ ಬೇರೆ ಕಡೆಯಿಂದ ಸರ್ಕಾರದ ನಾಮಿನಿ ಕೂಡ ಇರುತ್ತಾರೆ. ಅನೇಕ ವರ್ಷಗಳಿಂದ ನಮ್ಮ ಅನುಭವ ಏನಿದೆ ಎಂದರೆ, ಸರ್ಕಾರ ಶೋಧನಾ ಸಮಿತಿಯನ್ನು ಪ್ರಪೋಸ್ ಮಾಡಿದಂತಹ ಆ ಮೂರು ಹೆಸರಲ್ಲಿ ಅಂತಿಮವಾಗಿ ರಾಜ್ಯಪಾಲರು ಟಿಕ್ ಮಾಡುತ್ತಾರೆ. ಆದರೆ ಅನೇಕ ಸಂದರ್ಭಗಳಲ್ಲಿ ಮುಖ್ಯಮಂತ್ರಿಗಳಾಗಲಿ ಅಥವಾ ರಾಜ್ಯ ಸರ್ಕಾರ ಏನು ಬಯಸುತ್ತದೆ ಅದನ್ನೇ ಮಾಡಿಕೊಳ್ಳುತ್ತಾ ಬಂದಿದ್ದಾರೆ. ಎಲ್ಲೋ ಒಂದು ಕಡೆ extraordinary ಏನಾದರೂ ಇದ್ದರೆ ಅವರು ಪ್ರಪೋಸ್ ಮಾಡುತ್ತಾರೆ. ಒಟ್ಟಾರೆ it is an understanding between the Chief Minister and the Governor when it comes to the appointment of Vice-Chancellor. ಇದು ಒಂದು ಪದ್ಧತಿ, ಪರಂಪರೆ ಮೊದಲಿನಿಂದಲೂ ಬಂದಿದೆ. ಈಗ ಇದು ದಿಢೀರ್ ಆಗಿ ಈ ಸರ್ಕಾರವೇ ಮಾಡಿರುವುದು. ಬಿಜೆಪಿ ಪಕ್ಷದ ಸರ್ಕಾರ ಮಾಡಿರುವುದು ಅದಕ್ಕೆ ತಿದ್ದುಪಡಿಯನ್ನು ತರೋಣವೆಂದು ತರುತ್ತಿಲ್ಲ. ಈ ರೀತಿಯ ವ್ಯತ್ಯಾಸ ಇದ್ದಲ್ಲಿ ಕೇಂದ್ರ ಸರ್ಕಾರ ಬೇರೆ, ರಾಜ್ಯ ಸರ್ಕಾರ ಬೇರೆ ಇದ್ದಲ್ಲಿ ಈ ರೀತಿಯ ಪ್ರಯೋಗವನ್ನು ತಮಿಳುನಾಡು, ವೆಸ್ಟ್ ಬೆಂಗಾಲ್‌ನಲ್ಲಿ ಮಾಡಿದ್ದಾರೆ. ಆದರೆ ಎಲ್ಲಾ ಕಡೆ ಮಾಡಿರುವಂಥದ್ದು ಒಂದೆರಡು ಉದಾಹರಣೆಗಳಲ್ಲ. ಕೇಂದ್ರಕ್ಕೆ ವಿಧೇಯಕವನ್ನು

ಕಳುಹಿಸಿದ ಮೇಲೆ the President has turned down such a request ಎಂದು ನಾನು ಬಹಳ ಸ್ಪಷ್ಟವಾಗಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಒಂದೆರಡು ಸಂದರ್ಭಗಳಲ್ಲಿ ಆ ವಿಚಾರಗಳು ಕೋರ್ಟ್‌ಗೆ ಹೋಗಿರಬಹುದು. ಆದರೆ ಇದನ್ನು ಡೈಲ್ಯೂಟ್ ಮಾಡುವುದು ಬೇಡ, ರಾಜಕೀಯ ತರುವಂಥದ್ದು ಬೇಡ. Ultimately, it is the State which decides all this. ಅದಕ್ಕೆ ಯು.ಜಿ.ಸಿ. ಉದ್ದೇಶ, ಕೇಂದ್ರದ ಉದ್ದೇಶ, ಇಲ್ಲಿ ಮಾಡಬೇಕೆನ್ನುವ academic standards ಏನಿದೆ ಅದರ ಉದ್ದೇಶವನ್ನು ಕಡಿಮೆ ಮಾಡಬೇಡಿ. ಇವತ್ತು 'Chancellor' ಎಂದು Governor ಆ role ಅನ್ನು ಏನು ಮಾಡುತ್ತಾರೆ, ಅವರಿಗೆ ಬಿಟ್ಟು ಕೊಡುವುದೇ ಸೂಕ್ತ. ಈ ವಿಚಾರವನ್ನು ರಾಜ್ಯದ ಒಳ್ಳೆಯದಕ್ಕಾಗಿ ನಾವು ಹೇಳುತ್ತಿದ್ದೇವೆ. The Karnataka State Rural Development and Panchayat Raj University Act ಅಡಿಯಲ್ಲಿ ಹೊಸ ವಿಶ್ವವಿದ್ಯಾಲಯ ಸ್ಥಾಪನೆ, ಅಂದರೆ 2016 ರಲ್ಲಿ ಪ್ರಪೋಸ್ ಮಾಡಿ ತಂದಿರುವ ವಿಧೇಯಕ ಅದು ರಾಷ್ಟ್ರದಲ್ಲೇ ಎಲ್ಲೂ ಇಲ್ಲ. ಅದು ಮಾದರಿಯಾಗಿರಬೇಕೆಂದರೆ, the Governor should continue as a Chancellor ದಯವಿಟ್ಟು ಮಾನ್ಯ ಮುಖ್ಯಮಂತ್ರಿಗಳನ್ನು ತಂದು ರಾಜಕೀಯ ಮಾಡುತ್ತಿದ್ದಾರೆ ಎಂದು ಹೇಳುವುದು ಬೇಡ ಎನ್ನುವುದು ನನ್ನ ಅಭಿಪ್ರಾಯ.

**ಶ್ರೀ ಎಸ್.ವ್ವಿ.ಸಂಕನೂರ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಇವತ್ತು ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ (ತಿದ್ದುಪಡಿ) ವಿಧೇಯಕವನ್ನು ತಂದಿದ್ದಾರೆ ಆ ವಿಧೇಯಕದಲ್ಲಿ ಪ್ರಕರಣ-13ಕ್ಕೆ ನಾನು ಸಂಪೂರ್ಣವಾಗಿ ವಿರೋಧ ಮಾಡುತ್ತೇನೆ. ಏಕೆಂದರೆ, ಕುಲಾಧಿಪತಿ ಎಂದರೆ ಇಲ್ಲಿಯವರೆವಿಗೂ ರಾಜ್ಯಪಾಲರು ಇರುತ್ತಿದ್ದರು. ಅದರ ಬದಲಾಗಿ ಇವರು ಮುಖ್ಯಮಂತ್ರಿಗಳನ್ನು ಮಾಡಬೇಕೆಂದು ತಿದ್ದುಪಡಿಯನ್ನು ಮಂಡಿಸುತ್ತಿದ್ದಾರೆ. ಈಗಾಗಲೇ ನಮ್ಮ ಸ್ನೇಹಿತರು ಮಾತನಾಡಿದ ಹಾಗೆ, ವಿಶ್ವವಿದ್ಯಾಲಯಗಳು ರಾಜಕೀಯದಿಂದ ದೂರವಿರಬೇಕು. ರಾಜಕೀಯ ಹಸ್ತಕ್ಷೇಪ ಆಗಬಾರದು. ಅಲ್ಲಿ ರಾಜಕೀಯ ಒತ್ತಡ ಆಗಬಾರದು. ಹಾಗಾಗಿ ಎಲ್ಲಾ ವಿಶ್ವವಿದ್ಯಾಲಯಗಳನ್ನು ಸ್ವಾಯತ್ತ ಸಂಸ್ಥೆಗಳನ್ನು ಮಾಡಿದ್ದಾರೆ. ಸ್ವಾಯತ್ತ ಸಂಸ್ಥೆಗಳಾಗಿ ಮಾಡಬೇಕಾದರೆ ಪ್ರಿನ್ಸಿಪಲ್‌ಗಳವೆ. ಆ ಪ್ರಿನ್ಸಿಪಲ್‌ಗೆ ಇದು ವಿರೋಧವಾಗಿದೆ. ನಾನು ಈ ತಿದ್ದುಪಡಿಯನ್ನು ವಿರೋಧ ಮಾಡುತ್ತೇನೆ. ಮಾನ್ಯ ಸಚಿವರು ಈ ವಿಧೇಯಕದ ಬಗ್ಗೆ ವಿವರಣೆಯನ್ನು ಕೊಟ್ಟರು. ರಾಜ್ಯಪಾಲರ ಬದಲಾಗಿ ನಾವು ಮುಖ್ಯಮಂತ್ರಿಗಳನ್ನು ಏಕೆ ಮಾಡುತ್ತಿದ್ದೇವೆಂದರೆ 'for better and effective management' ಎಂದು ಹೇಳಿದರು. ನಾನು ಮಾನ್ಯ ಸಚಿವರಿಗೆ ಪ್ರಶ್ನೆಯನ್ನು ಮಾಡುತ್ತೇನೆ. ಇಷ್ಟು ವರ್ಷ ರಾಜ್ಯಪಾಲರು ಇದ್ದರಲ್ಲಾ ಅವರು ಇವರ ಯಾವ ಕೆಲಸದಲ್ಲಿ ಸಹಕಾರವನ್ನು ಕೊಟ್ಟಿಲ್ಲ. ಇದರಲ್ಲಿ ಅವರಿಗೆ ತೊಂದರೆ ಯಾವುದರಲ್ಲಿ ಆಗಿದೆ?

(ಮುಂದು)

**ಶ್ರೀ ಎಸ್.ವ್ಹಿ.ಸಂಕನೂರ(ಮುಂದು):**

ಅವರು ಇಲ್ಲಿಯವರೆಗೆ ಪರಿಣಾಮಕಾರಿಯಾಗಿ ಕರ್ತವ್ಯವನ್ನು ನಿರ್ವಹಿಸಿಲ್ಲವೇ? ಅವರಿಂದ ಯಾವ ತೊಂದರೆಗಳು, ಅಡಚಣೆಗಳಾಗಿವೆ ಎನ್ನುವ ಬಗ್ಗೆ ಸಚಿವರು ವಿವರಣೆಯನ್ನು ನೀಡಬೇಕು. ಅವರ ಅಧಿಕಾರಾವಧಿಯಲ್ಲಿ ಪರಿಣಾಮಕಾರಿಯಾದ ಹಾಗೂ ಉತ್ತಮವಾದ ನಿರ್ವಹಣೆಯಾಗಲಿಲ್ಲವೇ? ಯಾವ ತೊಂದರೆಯಾಗಿದೆ ಎಂದು ಸಚಿವರು ತಿಳಿಸಬೇಕು. ರಾಜ್ಯಪಾಲರು ಎಂದು ಇರುವುದನ್ನು ಸರ್ಕಾರವು ವಿನಾಕಾರಣ ಮುಖ್ಯಮಂತ್ರಿ ಎಂದು ಬದಲಾವಣೆ ಮಾಡಿದರೆ, ರಾಜ್ಯದ ಮುಖ್ಯಮಂತ್ರಿಗಳಿಗೆ ಬಹಳಷ್ಟು ಕಾರ್ಯಭಾರ ಮತ್ತು ಒತ್ತಡಗಳು ಇರುತ್ತದೆಯಲ್ಲವೇ? ಇದರ ನಡುವೆ ಮುಖ್ಯಮಂತ್ರಿಗಳು ಎಷ್ಟರ ಮಟ್ಟಿಗೆ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಲು ಸಾಧ್ಯವಾಗುತ್ತದೆ ಎಂದು ನಾನು ಪ್ರಶ್ನಿಸಬಯಸುತ್ತೇನೆ. ಹೀಗಾಗಿ ಈ ಹಿಂದೆ ಇದ್ದ "ರಾಜ್ಯಪಾಲರು" ಎನ್ನುವುದೇ ಉತ್ತಮವಾಗಿದೆ. ಈ ಮೊದಲಿನ ಸಂಪ್ರದಾಯವನ್ನೇ ಸರ್ಕಾರ ಮುಂದುವರೆಸಿಕೊಂಡು ಹೋಗಬೇಕೆಂದು ನಾನು ವಿನಂತಿಸುತ್ತೇನೆ. ಈ ತಿದ್ದುಪಡಿಯ ಮೂಲಕ ಸರ್ಕಾರವು ಕೆಟ್ಟ ಸಂಪ್ರದಾಯವನ್ನು ಪ್ರಾರಂಭಿಸುತ್ತದೆ. ಇದೇ ಪದ್ಧತಿಯಂತೆ, ಇನ್ನಿತರೆ ಎಲ್ಲಾ ವಿಶ್ವವಿದ್ಯಾಲಯಗಳಲ್ಲಿ ರಾಜ್ಯಪಾಲರು ಬದಲಾಗಿ ಮುಖ್ಯಮಂತ್ರಿಗಳು ಬೇಕು ಎಂಬ ಕೆಟ್ಟ ಸಂಪ್ರದಾಯವನ್ನು ಸರ್ಕಾರವು ಹುಟ್ಟು ಹಾಕುತ್ತದೆ. ದಯಮಾಡಿ ಸರ್ಕಾರ ಇದನ್ನು ಕೈಬಿಡಬೇಕೆಂದು ನಾನು ವಿನಂತಿಸುತ್ತೇನೆ. ಇನ್ನುಳಿದ ತಿದ್ದುಪಡಿಗಳಿಗೆ ನಮ್ಮ ತಕ್ಕರಾರುಗಳಿಲ್ಲ. ರಾಜ್ಯಪಾಲರ ಬದಲಾಗಿ ಮುಖ್ಯಮಂತ್ರಿಗಳನ್ನು ಮಾಡುವುದು ತಪ್ಪು ಹಾಗೂ ಇದರಿಂದ ಕೆಟ್ಟ ಸಂಪ್ರದಾಯಕ್ಕೆ ನಾಂದಿ ಹಾಡಿದಂತಾಗುತ್ತದೆ ಎಂದು ನಾನು ಹೇಳುತ್ತೇನೆ. ದಯಮಾಡಿ ಸರ್ಕಾರವು ಈಗ ಮಂಡಿಸಿರುವ ವಿಧೇಯಕವನ್ನು ಹಿಂಪಡೆದುಕೊಳ್ಳಬೇಕೆಂದು ನಾನು ಕೇಳುತ್ತೇನೆ.

**ಡಾ॥ ತಳವಾರ್ ಸಾಬಣ್ಣ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೆ, ಅವಕಾಶಕ್ಕಾಗಿ ಧನ್ಯವಾದಗಳು. ಪ್ರಸ್ತುತ ಸರ್ಕಾರವು ಮಂಡಿಸಿರುವ ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ (ತಿದ್ದುಪಡಿ) ವಿಧೇಯಕ, 2024 ರಲ್ಲಿನ ಎರಡು ವಿಷಯಗಳ ಬಗ್ಗೆ ನಾನು ಬೆಳಕು ಚೆಲ್ಲಲು ಪ್ರಯತ್ನಿಸುತ್ತೇನೆ. ಸಾಮಾನ್ಯವಾಗಿ ವಿಶ್ವವಿದ್ಯಾಲಯಗಳು ಎರಡು ರೀತಿಯದ್ದಾಗಿರುತ್ತವೆ. ಕೆಲವೊಂದು ರೆಗ್ಯೂಲರ್ ವಿಶ್ವವಿದ್ಯಾಲಯಗಳಾಗಿದ್ದರೆ, ಕೆಲವೊಂದು ವಿಶೇಷ ವಿಶ್ವವಿದ್ಯಾಲಯಗಳಾಗಿರುತ್ತವೆ. ರೆಗ್ಯೂಲರ್ ವಿಶ್ವವಿದ್ಯಾಲಯ ಎಂದರೆ ಉದಾಹರಣೆಗೆ ಹೇಳುವುದಾದರೆ, ಕರ್ನಾಟಕ ವಿಶ್ವವಿದ್ಯಾಲಯಕ್ಕೆ ತನ್ನದೇ ಆದ ಪ್ರಾದೇಶಿಕ ಸೀಮಿತವಿರುತ್ತದೆ. ಅದೇ ರೀತಿಯಾಗಿ ಗುಲಬರ್ಗಾ ವಿಶ್ವವಿದ್ಯಾಲಯಕ್ಕೆ ತನ್ನದೇ ಆದ ಪ್ರಾದೇಶಿಕ ಸೀಮಿತವಿರುತ್ತದೆ. ಅದೇ ರೀತಿಯಾಗಿ ಬೇರೆ ಬೇರೆ ವಿಶ್ವವಿದ್ಯಾಲಯಗಳು ನಮ್ಮ ರಾಜ್ಯದಲ್ಲಿವೆ. ಇವುಗಳೆಲ್ಲದಕ್ಕೂ ರಾಜ್ಯಪಾಲರೇ

ಕುಲಾಧಿಪತಿಗಳಾಗಿರುತ್ತಾರೆ. ನಮ್ಮ ರಾಜ್ಯದಲ್ಲಿ ಇನ್ನೂ ಅನೇಕ ವಿಶೇಷ ವಿಶ್ವವಿದ್ಯಾಲಯಗಳಿವೆ. ಉದಾಹರಣೆಗೆ ಹೇಳುವುದಾದರೆ, ಹಂಪಿ ವಿಶ್ವವಿದ್ಯಾಲಯ, ಜಾನಪದ ವಿಶ್ವವಿದ್ಯಾಲಯ, ಕನ್ನಡ ವಿಶ್ವವಿದ್ಯಾಲಯ, ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಅಕ್ಕಮಹಾದೇವಿ ವಿಶ್ವವಿದ್ಯಾಲಯ, ಸಂಗೀತ ವಿಶ್ವವಿದ್ಯಾಲಯ ಮತ್ತು ಕಾನೂನು ವಿಶ್ವವಿದ್ಯಾಲಯ ಇತ್ಯಾದಿಗಳಿವೆ. ಆ ಪೈಕಿ ಒಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯವಾಗಿದೆ. ಪ್ರಶ್ನಿತ ವಿಶ್ವವಿದ್ಯಾಲಯಕ್ಕೆ ನಾನು ಎರಡು ಬಾರಿ ಭೇಟಿ ನೀಡಿದ್ದೇನೆ. ಒಂದು ದಿನ ಪೂರ್ತಿ ಅಲ್ಲಿಯೇ ಇದ್ದು ಬಂದಿದ್ದೇನೆ. ಈ ವಿಶ್ವವಿದ್ಯಾಲಯವು ಚೆನ್ನಾಗಿ ಬೆಳೆಯುತ್ತಿದೆ. ಈ ವಿಶ್ವವಿದ್ಯಾಲಯಕ್ಕೆ ಕುಲಾಧಿಪತಿಗಳಾಗಿ ರಾಜ್ಯದ ಮುಖ್ಯಮಂತ್ರಿಗಳನ್ನು ನೇಮಿಸಿದರೆ, ... ಇಲ್ಲಿಯವರೆಗೆ ಆ ವಿಶ್ವವಿದ್ಯಾಲಯದ ಕುಲಾಧಿಪತಿಗಳಾಗಿ ಕರ್ತವ್ಯ ನಿರ್ವಹಿಸಿದ ರಾಜ್ಯದ ರಾಜ್ಯಪಾಲರನ್ನೇ ಸರ್ಕಾರವು ಪ್ರಶ್ನೆ ಮಾಡುತ್ತಿದೆ ಎಂದರ್ಥವಾಗುತ್ತದೆ. ಇನ್ನುಳಿದ ವಿಶ್ವವಿದ್ಯಾಲಯಗಳಿಗೆ ರಾಜ್ಯಪಾಲರೇ ಕುಲಾಧಿಪತಿಗಳಾಗಿರುತ್ತಾರೆ. ಅದರಂತೆ ರಾಜ್ಯದಲ್ಲಿರುವ ವಿಶೇಷ ವಿಶ್ವವಿದ್ಯಾಲಯಗಳಿಗೂ ಸಹ ರಾಜ್ಯದ ರಾಜ್ಯಪಾಲರೇ ಕುಲಾಧಿಪತಿಗಳಾಗಿರುತ್ತಾರೆ. ಆದರೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯಕ್ಕೆ ಮಾತ್ರವೇ ಈ ಬದಲಾವಣೆ ಏಕೆ ಎಂಬ ಪ್ರಶ್ನೆಯು ಇಲ್ಲಿ ಉದ್ಭವವಾಗುತ್ತದೆ. ರಾಜ್ಯದ ಮುಖ್ಯಮಂತ್ರಿಗಳು ವಿಶ್ವವಿದ್ಯಾಲಯದ ಕುಲಾಧಿಪತಿಗಳಾದರೆ ಹೆಚ್ಚಿನ ಸಹಕಾರ ದೊರೆಯುತ್ತದೆ ಎಂದು ಸರ್ಕಾರವು ತಿಳಿಸುತ್ತದೆ. ಇವರಿಂದ ಶೈಕ್ಷಣಿಕ, ಸಂಶೋಧನಾ ಚಟುವಟಿಕೆಗಳಿಗೆ, field based practical activities ಗಳಿಗೆ ಸಹಕಾರಗಳು ದೊರೆಯುತ್ತವೆ ಎಂಬ ಅಂಶಗಳ ಬಗ್ಗೆ ಸಚಿವರು ಸ್ಪಷ್ಟಪಡಿಸಬೇಕು. ವಿಧೇಯಕದ ಕ್ಲಾಸ್ 15 ರಲ್ಲಿ ಕುಲಾಧಿಪತಿಗಳ ನೇಮಕವನ್ನು ಮುಖ್ಯಮಂತ್ರಿಗಳಿಗೆ ನೀಡುತ್ತಿದ್ದಾರೆ. ಈಗಾಗಲೇ ವಿಶ್ವವಿದ್ಯಾಲಯಗಳಿಗೆ ನೇಮಕಗೊಳ್ಳುವ ಎಲ್ಲಾ ಕುಲಾಧಿಪತಿಗಳ ಬಗ್ಗೆ ನೂರಾರು ಪ್ರಶ್ನೆಗಳು ಬರುತ್ತವೆ. ಸರ್ಕಾರವು ಇದನ್ನು ಜಾರಿಗೊಳಿಸಿದರೆ, ಇದನ್ನು ಪೂರ್ತಿಯಾಗಿ ರಾಜಕೀಕರಣ ಮಾಡಿದಂತಾಗುತ್ತದೆ. ಮುಖ್ಯಮಂತ್ರಿಗಳು ಒಬ್ಬ ರಾಜಕೀಯ ವ್ಯಕ್ತಿಯಾಗಿದ್ದು, ರಾಜಕೀಯ ಪಕ್ಷದಿಂದ ಆಯ್ಕೆಗೊಂಡು ರಾಜ್ಯವನ್ನು ಆಳುವವರಾಗಿದ್ದಾರೆ. ಅಂತಹವರ ಕೈಯ್ಯಲ್ಲಿ ಈ ಅಧಿಕಾರವನ್ನು ಕೊಟ್ಟರೆ, ಸಹಜವಾಗಿಯೇ ಅಲ್ಲಿ ರಾಜಕೀಕರಣವಾಗುತ್ತದೆ. ಹೀಗೆ ರಾಜಕೀಕರಣವಾದಾಗ, ಅಲ್ಲಿ ಮುಂದೆ ಯಾವ ರೀತಿಯಾದ ಪರಿಣಾಮಗಳು ಬೀರುತ್ತವೆ ಎಂಬ ಪ್ರಶ್ನೆ ಇದೆ. ಹೀಗಾಗಿ ಸಚಿವರು ಈ ಬಗ್ಗೆ ಎರಡು ಬಾರಿ ಯೋಚನೆ ಮಾಡಬೇಕು. ಏಕೆಂದರೆ ಈ ಕೆಟ್ಟ ಪದ್ಧತಿ ಪ್ರಶ್ನಿತ ವಿಶ್ವವಿದ್ಯಾಲಯದಿಂದ ಪ್ರಾರಂಭವಾದರೆ, ಇದು ಬೇರೆ ವಿಶ್ವವಿದ್ಯಾಲಯಗಳ ಮೇಲೆಯೂ ಸಹ ತನ್ನ ಪ್ರಭಾವವನ್ನು ಬೀರುತ್ತದೆ. ಆಗ ಸಂವಿಧಾನ ಬದ್ಧವಾದ ರಾಜ್ಯಪಾಲರ ಅಧಿಕಾರಗಳನ್ನೇ ಪ್ರಶ್ನೆ ಮಾಡಿದಂತಾಗುತ್ತದೆ. ಕಾನೂನು, ಸಂಸದೀಯ ಮತ್ತು ವ್ಯವಹಾರಗಳ ಇಲಾಖೆಯ

ಸಚಿವರಾದ ಶ್ರೀ ಹೆಚ್.ಕೆ.ಪಾಟೀಲ್ ರವರು ಮೂಲತಃ ಗದಗ ಜಿಲ್ಲೆಯವರಾಗಿದ್ದು ಪ್ರಸ್ತುತ ಸದನದಲ್ಲಿ ಉಪಸ್ಥಿತರಿದ್ದಾರೆ. ಇವರೂ ಸಹ ಈ ವಿಧೇಯಕಕ್ಕೆ ಆಸಕ್ತಿಯನ್ನು ತೋರಿಸಿದ್ದಾರೆ. ಪ್ರಶ್ನಿತ ವಿದ್ಯಾಲಯವೂ ಸಹ ಗದಗ ಜಿಲ್ಲೆಯಲ್ಲಿದೆ. ಈ ವಿಚಾರದಲ್ಲಿ ಸರ್ಕಾರವು ಮತ್ತೊಮ್ಮೆ ಯೋಚನೆ ಮಾಡಬೇಕೆಂದು ನಾನು ಕೋರುತ್ತೇನೆ.

**ಶ್ರೀ ಐವನ್ ಡಿ'ಸೋಜಾ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಪ್ರಸ್ತುತ ಸರ್ಕಾರವು ಮಂಡಿಸಿರುವ ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ (ತಿದ್ದುಪಡಿ) ವಿಧೇಯಕ, 2024 ಅನ್ನು ನಾನು ಸ್ವಾಗತಿಸುತ್ತೇನೆ. ಏಕೆಂದರೆ ನಾನು ವಿಶ್ವವಿದ್ಯಾಲಯದ ಸೆನೆಟ್, ಸಿಂಡಿಕೇಟ್ ಮತ್ತು ಅಕಾಡೆಮಿಕ್ ಕೌನ್ಸಿಲ್‌ಗಳಲ್ಲಿ ಕರ್ತವ್ಯ ನಿರ್ವಹಿಸಿದ್ದೇನೆ. ಇವತ್ತಿನ ದಿವಸ ವಿಶ್ವವಿದ್ಯಾಲಯಗಳು ಪರಿಸ್ಥಿತಿ ಯಾರಿಗೂ ಬೇಡವಾದ ಸ್ಥಿತಿಯಲ್ಲಿವೆ. ಇತ್ತೀಚೆಗೆ ನಾನೇ ಈ ಸದನದಲ್ಲಿ ಮಂಗಳೂರು ವಿಶ್ವವಿದ್ಯಾಲಯದ ಆರ್ಥಿಕ ವ್ಯವಸ್ಥೆಯ ಬಗ್ಗೆ ಮಾತನಾಡಿದೆ. ಅಲ್ಲಿ ಕರ್ತವ್ಯ ನಿರ್ವಹಿಸಿ ನಿವೃತ್ತಿ ಹೊಂದಿದವರಿಗೆ ಪಿಂಚಣಿ ನೀಡದಿರುವಷ್ಟು ಸ್ಥಿತಿ ಅಲ್ಲಿ ಉಂಟಾಗಿದೆ. ಏಕೆಂದರೆ ಖಾಸಗಿ, ಡೀಮ್ಡ್ ವಿಶ್ವವಿದ್ಯಾಲಯಗಳನ್ನೊಳಗೊಂಡಂತೆ ಹಲವಾರು ವಿಶ್ವವಿದ್ಯಾಲಯಗಳು ಆಗುತ್ತಿವೆ. [xxx] Anyway the elected Government, ರಾಜ್ಯದ ದೊರೆಯೇ ಅರಸನಾಗಬೇಕೆ ಹೊರತು ಬೇರೆ ಯಾರೂ ಆಗಲಿಕ್ಕಿಲ್ಲ. ನನ್ನ ಮನವಿಯೇನೆಂದರೆ ಈಗ ತಂದಿರುವ ತಿದ್ದುಪಡಿಯನ್ನು....

**ಶ್ರೀ ಸಿ.ಟಿ.ರವಿ:-** ಮಾನ್ಯ ಸಭಾಪತಿಯವರೆ, ದೇಶಕ್ಕೆ ಸ್ವತಂತ್ರ ಬಂದು 75 ವರ್ಷಗಳಾದ ಮೇಲೆ ಇವರಿಗೆ ಜ್ಞಾನೋದಯವಾಗಿದೆ.

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೆ, ಇದು ಬದಲಾವಣೆಯ ಚಕ್ರವಾಗಿದೆ.

**ಶ್ರೀ ಸಿ.ಟಿ.ರವಿ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಸದಸ್ಯರು ಸದನವನ್ನು ತಪ್ಪು ದಾರಿಗೆ ಎಳೆಯುತ್ತಿದ್ದಾರೆ. ಸರ್ಚ್ ಕಮಿಟಿಯ ಮೂಲಕ ಶಿಫಾರಸ್ಸು ಮಾಡಲಾದ..., ಉಪ ಕುಲಾಧಿಪತಿಗಳ ನೇಮಕಕ್ಕೆ ಸಂಬಂಧಪಟ್ಟಂತೆ, ಸರ್ಕಾರ ಶಿಫಾರಸ್ಸು ಮಾಡಿದ್ದನ್ನು ಕುಲಾಧಿಪತಿಗಳು ಅಂತಿಮ ಮುದ್ರೆಯನ್ನು ಒತ್ತುತ್ತಾರೆ. ಕುಲಾಧಿಪತಿಗಳ ಪಾತ್ರ ಕೇವಲ ನಾಮ ಮಾತ್ರ ಎಂಬಂತಾಗಿದೆ. ವಿಶ್ವವಿದ್ಯಾಲಯಗಳ ದಿನನಿತ್ಯದ ಚಟುವಟಿಕೆಗಳಲ್ಲಿ ಕುಲಾಧಿಪತಿಗಳೂ ಸಹ ಕಾರ್ಯನಿರ್ವಹಿಸುತ್ತಾರೆ. ಆದರೆ ಕುಲಾಧಿಪತಿಗಳು ನಾಮ ಮಾತ್ರವೇ ಇರುತ್ತಾರೆ. ನಾವು

[xxx]ಮಾನ್ಯ ಸಭಾಪತಿಯವರ ಆಜ್ಞಾನುಸಾರ ಕಡತದಿಂದ ತೆಗೆದುಹಾಕಲಾಗಿದೆ.

ಇಲ್ಲಿಂದ ವಿಧೇಯಕವನ್ನು ಅನುಮೋದಿಸಿ, ಅಂಗೀಕರಿಸಿದ ನಂತರ ಅದು ರಾಜ್ಯದ ರಾಜ್ಯಪಾಲರಿಗೆ ಸಹಿಗಾಗಿ ಹೋಗುತ್ತದೆ. ಯಾವುದೇ ಕಾಯ್ದೆಗಳು ರಾಜ್ಯಪಾಲರ ಹೆಸರಿನಲ್ಲಿಯೇ ಅನುಷ್ಠಾನಗೊಳ್ಳುತ್ತವೆ. ಆದರೆ, ರಾಜ್ಯದ ಮುಖ್ಯಮಂತ್ರಿಗಳೇ ಆಡಳಿತವನ್ನು ನಡೆಸುವುದು. ಆದೇಶ ಮಾತ್ರ ರಾಜ್ಯಪಾಲರ ನಾಮ ಮಾತ್ರದಿಂದಲೇ ಹೊರಡಿಸಲಾಗುವುದು. ಹಾಗಿದ್ದರೆ, ಈ ಎಲ್ಲಾ ವಿಧಾನವನ್ನೂ ಸಹ ರಾಜ್ಯದ ಮುಖ್ಯಮಂತ್ರಿಗಳಿಗೇ ವಹಿಸಿಬಿಡಲಿ.

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೆ, ಈ ಹಿಂದೆ ಶ್ರೀ ಸಿ.ಟಿ. ರವಿಯವರು ಉನ್ನತ ಶಿಕ್ಷಣ ಮಂತ್ರಿಗಳಾಗಿ ಕಾರ್ಯನಿರ್ವಹಿಸಿದ್ದರು. ಹೀಗಾಗಿ ಇದರ ಬಗ್ಗೆ ಸ್ವಲ್ಪ ಅನುಕಂಪವಿರಬಹುದು. ಆದರೆ ಈ ಸಂದರ್ಭದಲ್ಲಿ ನಾನು ಹೇಳಬಯಸುವುದೇನೆಂದರೆ, [xxx] ಹೀಗಾಗಿ ಪ್ರಸ್ತುತ ಸರ್ಕಾರ ಮಂಡಿಸಿರುವ ವಿಧೇಯಕವನ್ನು ನಾನು ಸ್ವಾಗತಿಸುತ್ತೇನೆ.

**(ಗೊಂದಲ)**

**ಶ್ರೀ ಟಿ.ಎ.ಶರವಣ:-** ಮಾನ್ಯ ಸಭಾಪತಿಯವರೆ, ಇಲ್ಲಿ [xxx] **(ಗೊಂದಲ)**

**ಶ್ರೀ ಸಿ.ಟಿ.ರವಿ:-** ಮಾನ್ಯ ಸಭಾಪತಿಯವರೆ, [xxx] **(ಗೊಂದಲ)**

**(ಮುಂದು)**

**(965) 18-12-2024 12.30 ಕೆಜಿ:ಆರ್‌ಎನ್** **(ಉಪ ಸಭಾಪತಿಯವರ ಉಪಸ್ಥಿತಿ)**

**(ಗೊಂದಲ)**

**ಶ್ರೀ ಟಿ.ಎ.ಶರವಣ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವರು ಸಂವಿಧಾನದ ಬಗ್ಗೆ ಪುಸ್ತಕಗಳನ್ನು ಕೊಟ್ಟು ಓದಿ ತಿಳಿದುಕೊಳ್ಳಿ ಎಂದು ಹೇಳುತ್ತಾರೆ. ಅವರು Special Session ಮಾಡಬೇಕೆಂದು ಹೇಳುತ್ತಾರೆ. ಆ ಸಂವಿಧಾನಕ್ಕೆ ಅಪಮಾನ ಮಾಡುತ್ತಾರೆ. ಇದು ಏನು ಸ್ವಾಮಿ?

**(ಗೊಂದಲ)**

**ಶ್ರೀ ಪುಟ್ಟಣ್ಣ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಾವು ಮತ್ತು ಅವರು ವ್ಯವಸ್ಥೆಯಲ್ಲಿರುವಂತಹ loopholes ಬಗ್ಗೆ ಚರ್ಚೆ ಮಾಡಬೇಕು. ಏಕೆ ಚರ್ಚೆ ಮಾಡಬಾರದು? ಅವರು ದೇವಲೋಕದಿಂದ ಇಳಿದಿದ್ದಾರೆಯೇ?

**(ಗೊಂದಲ)**

---

[xxx]ಮಾನ್ಯ ಸಭಾಪತಿಯವರ ಆಜ್ಞಾನುಸಾರ ಕಡತದಿಂದ ತೆಗೆದುಹಾಕಲಾಗಿದೆ.

**ಶ್ರೀ ಸಿ.ಟಿ.ರವಿ:-** ಮಾನ್ಯ ಸಭಾಪತಿಯವರೇ...

**(ಗೊಂದಲ)**

**ಉಪ ಸಭಾಪತಿಯವರು:-** ಮಾನ್ಯ ಸದಸ್ಯರಾದ ಶ್ರೀ ಪುಟ್ಟಣ್ಣನವರೇ, ಶ್ರೀ ಸಿ.ಟಿ.ರವಿರವರೇ ತಾವುಗಳು ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ, ಮಾನ್ಯ ರಾಜ್ಯಪಾಲರು ಬೇರೆ ರಾಜ್ಯಗಳಿಂದ ಬರುತ್ತಾರೆ ಅಲ್ಲವೇ...

**(ಗೊಂದಲ)**

**ಉಪ ಸಭಾಪತಿಯವರು:-** ಮಾನ್ಯ ಸದಸ್ಯರಾದ ಶ್ರೀ ಪುಟ್ಟಣ್ಣನವರೇ, ತಾವು ದಯವಿಟ್ಟು ಕುಳಿತುಕೊಳ್ಳಿ. ನಾನು ಮಾತನಾಡುತ್ತೇನೆ.

**(ಗೊಂದಲ)**

**ಶ್ರೀ ಟಿ.ಎ.ಶರವಣ:-** ಮಾನ್ಯ ಸಭಾಪತಿಯವರೇ..

**(ಗೊಂದಲ)**

**ಉಪ ಸಭಾಪತಿಯವರು:-** ಮಾನ್ಯ ಸದಸ್ಯರಾದ ಶ್ರೀ ಟಿ.ಎ.ಶರವಣರವರೇ, ಶ್ರೀ ಪುಟ್ಟಣ್ಣನವರೇ, ತಾವು ದಯವಿಟ್ಟು ಕುಳಿತುಕೊಳ್ಳಿ. In case... **ಈಗ ಮಾನ್ಯ ಸದಸ್ಯರಾದ ಶ್ರೀ ಐವನ್ ಡಿ' ಸೋಜಾರವರು ಹೇಳಿರುವಂತಹದ್ದರಲ್ಲಿ ಸಂವಿಧಾನಕ್ಕೆ ಏನಾದರೂ ಅಪಮಾನ ಆಗುವಂತಹ ವಿಚಾರ ಇದ್ದರೆ ಅದನ್ನು ಕಡತದಿಂದ ತೆಗೆಯಿರಿ.** ಅಷ್ಟೇ, ಆಯಿತು.

**ಶ್ರೀ ಐವನ್ ಡಿ' ಸೋಜಾ:-** ಮಾನ್ಯ ಸಭಾಪತಿಯವರೇ, ಅಂತಹ ವಿಚಾರ ಏನಾದರೂ ಇದ್ದರೆ ತೆಗೆಯಿರಿ. ಈಗ ಮಾನ್ಯ ಸಚಿವರು ತಿದ್ದುಪಡಿಯನ್ನು ತರುವುದಕ್ಕೆ ಬಯಸಿದ್ದಾರೆ. ಈ ತಿದ್ದುಪಡಿಯಿಂದ university ಗಳಿಗೆ ಸಹಾಯ ಆಗುತ್ತದೆ. University ಗಳ ಬೆಳವಣಿಗೆಗೆ ಸಹಾಯ ಆಗುತ್ತದೆ. ಇದಕ್ಕೀಗ ಮಾನ್ಯ ಮುಖ್ಯಮಂತ್ರಿಯವರು ಕುಲಾಧಿಪತಿಯವರು ಆಗಿರುವುದರಿಂದ universities ಅಭಿವೃದ್ಧಿಗೆ ಸಾಧ್ಯವಾಗುತ್ತದೆ. ಹಾಗಾಗಿ, ಇದೊಂದು ಉತ್ತಮವಾದ ವಿಧೇಯಕವಾಗಿದೆ. ಹಾಗಾಗಿ, ಈ ವಿಧೇಯಕವನ್ನು ಪಾಸ್ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

**ಶ್ರೀ ಪ್ರತಾಪ್ ಸಿಂಹ ನಾಯಕ್.ಕೆ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾನಿಲಯ (ತಿದ್ದುಪಡಿ) ವಿಧೇಯಕ 2024 ರ ಬಗ್ಗೆ ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನು ಸಲ್ಲಿಸುತ್ತೇನೆ. ಇವತ್ತು ಎಲ್ಲಾ ಮಾನ್ಯ ಸದಸ್ಯರು ಸಂವಿಧಾನದ ಬಗ್ಗೆ ಮತ್ತು ಮಾನ್ಯ ರಾಜ್ಯಪಾಲರ ಹುದ್ದೆಯ ದೃಷ್ಟಿಯಿಂದ ಮಾತನಾಡುವಂತಹ ಪರಿಸ್ಥಿತಿಯನ್ನು ಈ ತಿದ್ದುಪಡಿ ತಂದಿದೆ ಎಂದು ನಾನು ತಿಳಿದುಕೊಳ್ಳುತ್ತೇನೆ. ನಮ್ಮ ಸಂವಿಧಾನವನ್ನು ಮಾಡುವಾಗಲೂ ಸಹ, ಸಂವಿಧಾನ

ಕರ್ತೃಗಳು ಪ್ರತಿಯೊಂದು ಸ್ಥಾನಕ್ಕೂ ಅದರದ್ದೇ ಆದಂತಹ ಒಂದು ಸ್ಥಾನ, ಮಾನ ಮತ್ತು ಗೌರವವನ್ನು ಕೊಟ್ಟಿದ್ದಾರೆ. ಒಂದು ಮನೆ ಇದ್ದಾಗೆ. ಒಂದು ಮನೆಯಲ್ಲಿ ಯಜಮಾನ ಬಹಳಷ್ಟು ಕೆಲಸ ಮಾಡುವುದಕ್ಕೆ ಸಾಮರ್ಥ್ಯ ಇಲ್ಲದೇ ಇರಬಹುದು. ಆದರೆ, ಆ ಸ್ಥಾನಕ್ಕೆ ಒಂದು ಗೌರವ ಇದೆ. ಅವರ ಅನುಭವದ ಹಿನ್ನೆಲೆಯಲ್ಲಿ ಅವರ ಸ್ಥಾನದಲ್ಲಿ ಅವರನ್ನು ಕುಳಿಸಿರುತ್ತಾರೆ. ನಮ್ಮ ಒಟ್ಟು ಸಂವಿಧಾನದ ವ್ಯವಸ್ಥೆಯನ್ನು ತೆಗೆದರೂ ಮಾನ್ಯ ರಾಜ್ಯಪಾಲರಿಗೆ ಅದರದ್ದೇ ಆದಂತಹ ಗೌರವವನ್ನು ನಾವೆಲ್ಲರೂ ಕೊಡುತ್ತಿದ್ದೇವೆ. ಮನೆಯಲ್ಲಿ ನಿರ್ಣಯ ತೆಗೆದುಕೊಳ್ಳುವವರು ಯಾರು ಎಂದು ಕೇಳಿದರೆ, ಖಂಡಿತವಾಗಿ ಮನೆಯಲ್ಲಿ ಒಂದು ನಿರ್ಣಯ ತೆಗೆದುಕೊಳ್ಳುವಂತಹ ಒಂದು ಪ್ರಕ್ರಿಯೆ ಬೇರೆ ಇರುತ್ತದೆ. ಮಾನ್ಯ ರಾಜ್ಯಪಾಲರು ನಮ್ಮ ಸಂವಿಧಾನದ ವ್ಯವಸ್ಥೆಯೊಳಗೆ ಮುಖ್ಯಮಂತ್ರಿ ಮತ್ತು ಕ್ಯಾಬಿನೇಟ್‌ನ ದೃಷ್ಟಿಯಿಂದಲೇ ಅವರ ಸಲಹೆಗಳು ಅಥವಾ ಸೂಚನೆಗಳು ಏನಿವೆ, ಅದರ ಆಧಾರದ ಮೇಲೆ ಕೆಲಸ ಮಾಡುತ್ತೀರುತ್ತೇವೆ ಹೊರತು, ಇಲ್ಲಿ ಈ ತಿದ್ದುಪಡಿಯನ್ನು ತಂದಾಗ ನಮಗೆ ಕಾಣುವಂತಹ ಅಂಶ ಏನೆಂದು ಕೇಳಿದರೆ, ಮಾನ್ಯ ಸಚಿವರು ಈ ತಿದ್ದುಪಡಿಯ ಬಗ್ಗೆ ಮಾತನಾಡುವಾಗ ಬಹಳ ಕಷ್ಟಪಡುತ್ತಿದ್ದಾರೆ. ಏಕೆಂದರೆ, ಇದನ್ನು ಏಕೆ ಬದಲಾವಣೆ ಮಾಡುತ್ತಿದ್ದೇವೆಂದು ಕಾರಣ ಕೊಡುವುದಕ್ಕೆ ಬಹಳ ಕಷ್ಟಪಡುತ್ತಿದ್ದಾರೆ. ಹಿಂದಿ ಭಾಷೆಯಲ್ಲಿ; "**ಖಾನೇ ಕೀ ದಾಂತ್, ಔರ್ ದಿಖಾವಟ್ ಕೀ ದಾಂತ್**" ಎಂಬ ಮಾತು ಇದೆ. ತೋರಿಸುವಂತಹ ಹಲ್ಲು ಒಂದು, ತಿನ್ನುವ ಹಲ್ಲುಗಳು ಬೇರೆ.

ಮಾನ್ಯ ಸಭಾಪತಿಯವರೇ, ಇದಕ್ಕೆ ಮಾನ್ಯ ರಾಜ್ಯಪಾಲರಿಂದ ಇದರಲ್ಲಿ ಬದಲಾವಣೆ ತಂದಿದ್ದೇವೆ ಎಂದು ಹೇಳುವಂತಹದ್ದನ್ನು ಸಮರ್ಥಿಸಿಕೊಳ್ಳುವುದಕ್ಕೆ ಕೊಡವಂತಹ ಕಾರಣ ನಿಜವಾಗಿಯೂ ಬದಲಾವಣೆ ತರಬೇಕು ಎಂದಾದರೆ, ಮೊದಲು ವ್ಯವಸ್ಥೆಗೆ ಏನು ತೊಂದರೆಯಾಗುತ್ತಿದೆ ಎನ್ನುವುದನ್ನು ಹೇಳಬೇಕಾಗಿದೆ. ಮಾನ್ಯ ರಾಜ್ಯಪಾಲರಿಂದ ಏನು ತೊಂದರೆಯಾಗಿದೆ ಎನ್ನವುದನ್ನು ಹೇಳಿ ಮತ್ತೆ ಬದಲಾವಣೆಯ ಬಗ್ಗೆ ಅವರು ಸಮರ್ಥನೆಯನ್ನು ಕೊಡಬೇಕಾಗಿತ್ತು. ನಾವು ಇಲ್ಲಿ ತುಂಬಾ ಬಾರಿ ಚರ್ಚೆ ಮಾಡಿದ್ದೇವೆ. ಮಾನ್ಯ ಮುಖ್ಯಮಂತ್ರಿಯವರಿಗೆ ಆರ್ಥಿಕ ಮಂತ್ರಿಯ ಸ್ಥಾನವನ್ನು ಕೊಡುವಂತಹದ್ದು ಎಷ್ಟರ ಮಟ್ಟಿಗೆ ವ್ಯವಸ್ಥೆಯ ದೃಷ್ಟಿಯಿಂದ ಇವರೆಡು ಬೇರೆ ಬೇರೆ ಇದ್ದರೆ ಒಳ್ಳೆಯದು. ಏಕೆಂದರೆ, ಆರ್ಥಿಕ ಮಂತ್ರಿಯಾಗಿ ಅವರಿಗೆ ಬಹಳಷ್ಟು ಜವಾಬ್ದಾರಿ ಇರುತ್ತದೆ. ಅವರು ಅದರ ಬಗ್ಗೆ ಸಾಕಷ್ಟು ಸಮರ್ಥರು ಇದ್ದಾರೆ, ಮಾಡುತ್ತಾರೆ. ನಾವು ಅವರಿಗೆ ಆರ್ಥಿಕ ಮಂತ್ರಿಯ ಜವಾಬ್ದಾರಿಯನ್ನು ಕೊಟ್ಟಿದ್ದೇವೆ. ಆದರೆ, ನಾವು ಇಲ್ಲಿ ಚರ್ಚೆ ಮಾಡುತ್ತೇವೆ. ಅವರಿಗೆ ಈಗಾಗಲೇ ಇಷ್ಟೊಂದು ಜವಾಬ್ದಾರಿ ಇರುವಾಗ ಇದರ ಮಧ್ಯೆ ಪುನಃ ಇದೊಂದನ್ನು ಕೊಟ್ಟರೆ, ಅದು ಕಳೆದ ಎಷ್ಟು ವರ್ಷಗಳಿಂದ ಕೆಲಸ ಮಾಡಿಕೊಂಡು ಬರುತ್ತಿತ್ತು. ಅದಕ್ಕೆ ಅದರದ್ದೇ ಆದಂತಹ ಗೌರವ ಇತ್ತು. ಎಲ್ಲದಕ್ಕಿಂತ ಮುಖ್ಯವಾಗಿ ಈ ಬದಲಾವಣೆಯ ಕಾರಣಕ್ಕೆ ಸಾರ್ವಜನಿಕರಿಗೆ ಅಥವಾ ಒಟ್ಟು ಸಂವಿಧಾನದ ದೃಷ್ಟಿಯಲ್ಲಿ ಏನು ಸಂದೇಶವನ್ನು ಕೊಡುತ್ತೇವೆ. ಇದು ನೇರವಾಗಿ ಮಾನ್ಯ ರಾಜ್ಯಪಾಲರಿಗೆ ಇದ್ದಂತಹ ಒಂದು ಗೌರವವನ್ನು ನಾವು ಹಿಂದಕ್ಕೆ ಪಡೆಯುತ್ತಿದ್ದೇವೆ ಎಂದು ಹೇಳುವಂತಹ ಒಂದು ಸಂದೇಶವನ್ನು ಈ ಬದಲಾವಣೆ ಕೊಡುತ್ತಿದೆ. ನಾವು ಈ ದೃಷ್ಟಿಯಲ್ಲಿ 75ನೇ ಅಮೃತ ಮಹೋತ್ಸವದ ಕಾಲಘಟ್ಟದಲ್ಲಿ ಇದ್ದೇವೆ. ನಾವು ಸಂವಿಧಾನದ ದೃಷ್ಟಿಯಲ್ಲಿ

ಸಂಭ್ರಮವನ್ನು ಪಡುತ್ತಿದ್ದೇವೆ. ನಮ್ಮ ಸಂವಿಧಾನ ಇಡೀ ಜಗತ್ತಿಗೆ ಮಾದರಿಯಾಗುವಂತಹ ರೀತಿಯ ಸಂವಿಧಾನವಾಗಿದೆ. ನಾವು ಖಂಡಿತವಾಗಿ ಹೆಮ್ಮೆ ಪಡಬೇಕು. ಬಹುಶಃ ನಾವೆಲ್ಲರೂ Constituent Assembly ಯ ಬಗ್ಗೆ ಅಲ್ಲಿ ಅದಂತಹ ಚರ್ಚೆಗಳನ್ನು ಏನಾದರೂ ನೋಡಿದರೆ, ಎಷ್ಟೊಂದು ಮಂಥನ ಮಾಡಿ, ಎಷ್ಟೊಂದು ಗಟ್ಟಿಯಾದಂತಹ ಸಂವಿಧಾನವನ್ನು ನಮಗೆ ಕೊಟ್ಟಿದ್ದಾರೆ ಅನಿಸುತ್ತದೆ. ಕಳೆದ 75 ವರ್ಷಗಳಲ್ಲಿ ಬೇರೆ ಯಾವುದೇ ದೇಶಗಳಲ್ಲಿ ಇಲ್ಲದ ರೀತಿಯಲ್ಲಿ ನಮ್ಮ ದೇಶದಲ್ಲಿ ಕಳೆದ 75 ವರ್ಷಗಳಿಂದ ಇಡೀ ದೇಶವನ್ನು ಒಂದಾಗಿ ಇಟ್ಟುಕೊಂಡು ಹೋಗುತ್ತಿದೆ. ಎಲ್ಲಿಯಾದರೂ ಈ ರೀತಿಯ ಸಂದೇಶಗಳು ಪ್ರತಿಯೊಂದು ಅದರದ್ದೇ ಆದಂತಹ ಸ್ಥಾನ ಮಾನಕ್ಕೆ ಇರುವಂತಹ ಗೌರವವನ್ನು ಕಡಿಮೆ ಮಾಡುವಂತಹ ದೃಷ್ಟಿಯಲ್ಲಿ ನಾವೇನಾದರೂ ನಾಂದಿ ಹಾಕಿದ್ದೇವೆಂದು ಎಂದಾದರೆ, ಎಲ್ಲದಕ್ಕೂ ನಮಗೆ ಆಗಲಿಲ್ಲವೆಂದು ಹೇಳಿಯಾದರೆ, ಇರಬಹುದು. ನಾವು ಇಲ್ಲಿ ಬಿಲ್ ಪಾಸ್ ಮಾಡಿಕೊಂಡು ಹೋಗುತ್ತೇವೆ ಅಥವಾ ಇದನ್ನು ಮುಂದುವರೆಸಿಕೊಂಡು ಹೋಗುತ್ತೇವೆ. ಆದರೆ, ಇದರ ಸಂದೇಶ ಸರಿಯಾದ ರೀತಿಯಲ್ಲಿ ನಮ್ಮ ಸಮಾಜಕ್ಕೆ ಆಗಲಿ ದೇಶಕ್ಕೆ ಆಗಲಿ ಇದು ಕೊಡವುದಿಲ್ಲ. ನಮಗೆ ಯಾವುದೇ ರೀತಿಯ ಸಮರ್ಥನೆ ಇಲ್ಲ. ಮಾನ್ಯ ಮುಖ್ಯಮಂತ್ರಿಯವರನ್ನು ಮಾಡಿದ ತಕ್ಷಣ ಆರ್ಥಿಕವಾಗಿ ಇದರ ಅರ್ಥ ಏನು? University ಗಳನ್ನು ನೋಡಿಕೊಳ್ಳುವುದಕ್ಕೆ ಅದರದ್ದೇ ಆದಂತಹ ಸಚಿವರು ಇದ್ದಾರೆ. ನಾವು ಇದಕ್ಕೆಲ್ಲವನ್ನು ಕೊಡುತ್ತೇವೆ. ಅಂದರೆ, ಸರ್ಕಾರ ಕೊಡುತ್ತದೆ. ಮಾನ್ಯ ರಾಜ್ಯಪಾಲರು ಕೊಡುವಂತಹದ್ದು ಅಲ್ಲ. ನಮಗೆ ಅಭಿವೃದ್ಧಿ ಬೇಕೆಂದು ಹೇಳಿದರೆ, ನಾವು ಮಾನ್ಯ ರಾಜ್ಯಪಾಲರಿಗೆ ಹೇಳಿಸಿ ಕೊಡಿಸುವಂತಹದ್ದು ಅಷ್ಟೇ. ಮತ್ತೆ ಸರ್ಕಾರವೇ ನಿರ್ಣಯವನ್ನು ತೆಗೆದುಕೊಳ್ಳುತ್ತದೆ. ನಾವು ಇಲ್ಲಿ ಮಾತನಾಡುವಾಗ ಆ ಶಬ್ದಗಳನ್ನು ಯೋಚನೆ ಮಾಡಬೇಕು. ಅವರು ಇದ್ದರೆ, ಅವರಿಂದ ಹೀಗೆ ಬರುವುದು, ಹಾಗೆ ಹೋಗುವುದು ಎಂದಲ್ಲ. ಅದು ಒಂದು decorum. ಮಾನ್ಯ ರಾಜ್ಯಪಾಲರು ಜಂಟಿ ಅಧಿವೇಶನಕ್ಕೆ ಇಲ್ಲಿಗೆ ಮಾತನಾಡುವುದಕ್ಕೆ ಬರುತ್ತಾರೆ. ಅದು ಸಂವಿಧಾನದ ಒಂದು ವ್ಯವಸ್ಥೆಯಲ್ಲಿ ಎಂದು ಹೇಳುವಂತಹದ್ದಾಗಿದೆ. ಯಾವುದೇ ಸರ್ಕಾರ ಕೇಂದ್ರದಲ್ಲಿ ಇರಲಿ ಅಥವಾ ರಾಜ್ಯದಲ್ಲಿ ಇರಲಿ. ಅದೊಂದು ಪದ್ಧತಿಯನ್ನು protocol ಅನ್ನು ನಾವು ಒಪ್ಪಿ ಹಾಕಿಕೊಂಡಿದ್ದೇವೆ. ಮಾನ್ಯ ರಾಜ್ಯಪಾಲರ ಹುದ್ದೆಯ ಗೌರವ ಕಡಿಮೆಯಾಗುವಂತಹ ದೃಷ್ಟಿಯಲ್ಲಿ ಈ ಬದಲಾವಣೆಯನ್ನು ತರುತ್ತಿರುವುದು ಸರಿಯಲ್ಲ. ಹಾಗಾಗಿ, ಇದನ್ನು ಮತ್ತೊಮ್ಮೆ ವಿಮರ್ಶೆ ಮಾಡಬೇಕೆಂದು ನಾನು ಸರ್ಕಾರವನ್ನು ಮತ್ತು ಮಾನ್ಯ ಸಚಿವರನ್ನು ಆಗ್ರಹಿಸುತ್ತೇನೆ.

**ಶ್ರೀ ಎನ್.ರವಿಕುಮಾರ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳು. ಈ ವಿಧೇಯಕದ ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆಯಲ್ಲಿ ಮಾನ್ಯ ಮುಖ್ಯಮಂತ್ರಿಯವರನ್ನು ಕುಲಾಧಿಪತಿಯನ್ನಾಗಿಸಲು ಮತ್ತು ಶೋಧಾನ ಸಮಿತಿಯು ಶಿಫಾರಸ್ಸು ಮಾಡಿದ ಮೂವರು ವ್ಯಕ್ತಿಗಳ ಪಟ್ಟಿಯಿಂದ ಕುಲಾಧಿಪತಿಯವರು ಕುಲಪತಿಯನ್ನು ನೇಮಕ ಮಾಡಲು ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ. ಇದರಲ್ಲಿ ನನ್ನ ಎರಡು-ಮೂರು ಪ್ರಶ್ನೆಗಳು ಇವೆ. ಬಹಳಷ್ಟು ಧೀರ್ಘ ಕಾಲ ಮಾನ್ಯ ರಾಜ್ಯಪಾಲರು ಸಾಮಾನ್ಯವಾಗಿ University ಗಳ ಕುಲಾಧಿಪತಿಯಾಗಿರುವುದನ್ನು ನಾವು

ನೋಡುತ್ತಾ ಬಂದಿದ್ದೇವೆ. ಕೆಲವು ಯಾವುದೋ Premier Institutions ಇದೆ, ಆ ತರಹದಕ್ಕೆ for example ಶ್ರೀ ಕಸ್ತೂರಿ ರಂಗನ್‌ರವರನ್ನು ಹಾಗೂ, ಪ್ರೊ.ತಿಮ್ಮಪ್ಪ ಇವರಂತಹವರನ್ನು ಕುಲಾಧಿಪತಿಯಾಗಿ ನೇಮಕ ಮಾಡಿರುವುದು ಉಂಟು. ಆದರೆ, ಮಾನ್ಯ ಮುಖ್ಯಮಂತ್ರಿಯವರನ್ನು ಕುಲಾಧಿಪತಿಯನ್ನಾಗಿ ಮಾಡುವುದಕ್ಕೆ ಹೊರಟಿರುವುದು ಅಷ್ಟು ಸೂಕ್ತವಾದ ಆಯ್ಕೆ ಅಲ್ಲವೆಂದು ನಾನು ಭಾವಿಸುತ್ತೇನೆ. ಈಗ ಚರ್ಚೆ ನಡೆಯುತ್ತಿರುವುದು ಏನು, ಇದೊಂದು ವಿಶಿಷ್ಟವಾದಂತಹ University. ಗ್ರಾಮೀಣಾ University. ಸಾಕಷ್ಟು ವಿಚಾರಗಳು ಇವೆ. ನಮ್ಮ ಕರ್ನಾಟಕ ರಾಜ್ಯದ ಅಭಿವೃದ್ಧಿಗೆ ಸಂಬಂಧಪಟ್ಟಂತೆ, ಆ ಒಂದು ವಿಶಿಷ್ಟವಾಗಿರುವಂತಹ University ನಲ್ಲಿ ಕರ್ನಾಟಕ ರಾಜ್ಯದ ಅಭಿವೃದ್ಧಿಗೆ ಸಂಬಂಧಪಟ್ಟಂತೆ, ಆ University ನಿಂದ ಅನೇಕ recommendations ಅನ್ನು ಮಾಡಬಹುದು. ಆ University ನಿಂದ ಸಾಕಷ್ಟು research ಮಾಡಬಹುದು. ಕರ್ನಾಟಕ ರಾಜ್ಯದ ಬಗ್ಗೆ, ಗ್ರಾಮೀಣಾವೃದ್ಧಿಯ ಬಗ್ಗೆ, ಕುಡಿಯುವ ನೀರಿನ ಬಗ್ಗೆ ಮತ್ತು ಕೃಷಿಯ ಬಗ್ಗೆ ಈ ರೀತಿಯ ಅನೇಕ ವಿಷಯಗಳ ಬಗ್ಗೆ ಆ University ಯಲ್ಲಿ ಮಾಡಬಹುದು. ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ನನ್ನದು ಏನು ತಕಾರಾರು ಇಲ್ಲ. ಆದರೆ, ನಾವು ಎಂತಹ ಹೆಜ್ಜೆಯನ್ನು ಇಡುತ್ತಿದ್ದೇವೆ ಎಂದರೆ, ಮುಖ್ಯಮಂತ್ರಿಯವರನ್ನು ಕುಲಾಧಿಪತಿಯನ್ನಾಗಿ ಮಾಡುವುದರಿಂದ ಆ University ಅಭಿವೃದ್ಧಿಯಾಗುತ್ತದೆ.

(ಮುಂದು)

**(966) 18.12.2024 4.40 ಎಂವಿ-ವಿಕೆ** **(ಉಪ ಸಭಾಪತಿಯವರ ಉಪಸ್ಥಿತಿ)**

**ಶ್ರೀ ಎನ್.ರವಿಕುಮಾರ್ (ಮುಂದು):**

ಅಕಸ್ಮಾತ್ ಅವರನ್ನು ಮಾಡದೇ ಹೋದರೆ ಅಭಿವೃದ್ಧಿ ನಿಂತು ಹೋಗುತ್ತದೆಯೇ? ಈಗ ಮಾನ್ಯ ಮುಖ್ಯಮಂತ್ರಿಗಳನ್ನು ಆ ವಿಶ್ವವಿದ್ಯಾಲಯಕ್ಕೆ ಕುಲಾಧಿಪತಿಗಳನ್ನಾಗಿ ಮಾಡುವುದಿಲ್ಲ. ಆಗ ಅದರ ಅಭಿವೃದ್ಧಿ ನಿಂತು ಹೋಗುತ್ತದೆಯೇ? ಆ ವಿಶ್ವವಿದ್ಯಾಲಯದಿಂದ ಸ್ವಲ್ಪ ಗ್ರ್ಯಾಂಟ್ ಬೇಕೆಂದು ಬರುತ್ತಾರೆ. ಆಗ ಮಾನ್ಯ ಮುಖ್ಯಮಂತ್ರಿಗಳು ಗ್ರ್ಯಾಂಟ್ ಅನ್ನು ಕೊಡುವುದಿಲ್ಲವೇ? ಅವರನ್ನು ಕುಲಾಧಿಪತಿಗಳನ್ನಾಗಿ ಮಾಡುವುದರಿಂದಲೇ ಹಣವನ್ನು ಕೊಡುತ್ತಾರೆಯೇ? ಕರ್ನಾಟಕ ರಾಜ್ಯದಲ್ಲಿರತಕ್ಕಂತಹ 28 ಇಲಾಖೆಗಳನ್ನು ಸೇರಿಸಿಬಿಟ್ಟರೆ, ಇಷ್ಟು ಗ್ಯಾರಂಟಿಗಳು, ಇಲಾಖೆಗಳು, ಎಷ್ಟು ಮೀಟಿಂಗ್‌ಗಳು, ಎಷ್ಟು ಹಣಕಾಸು, ಎಷ್ಟು ಸಮಸ್ಯೆಗಳು? ಇದಕ್ಕೆ ಮಾನ್ಯ ಮುಖ್ಯಮಂತ್ರಿಗಳಿಗೆ ಎರಡು ಕಿವಿಗಳು, ಒಂದು ಬಾಯಿ, ಎರಡು ಕಣ್ಣುಗಳು ಸಾಲುವುದಿಲ್ಲ. ಅವರಿಗೆ ಸಾಕಷ್ಟು ಜನ ಆಪ್ತ ಕಾರ್ಯದರ್ಶಿಗಳು ಬೇಕು. ಸಾಕಷ್ಟು ಜನ ಐ.ಎ.ಎಸ್. ಅಧಿಕಾರಿಗಳು ಬೇಕು. ಇನ್ನು Personal Secretary ಗಳನ್ನು ಇಟ್ಟುಕೊಳ್ಳುತ್ತಾರೆ. ಮಾನ್ಯ ಮುಖ್ಯಮಂತ್ರಿಗಳಿಗೆ ಅದೂ ಸಾಕಾಗುವುದಿಲ್ಲ. ಅವರು ಕೆಲಸ ಮಾಡುವುದಕ್ಕೆ ಸಾಕಷ್ಟು ಜನ ಬೇಕಾಗುತ್ತದೆ. ಇಂತಹ ಸಂದರ್ಭದಲ್ಲಿ ಅವರನ್ನು ವಿಶ್ವವಿದ್ಯಾಲಯಕ್ಕೆ ಕುಲಾಧಿಪತಿಗಳನ್ನಾಗಿ ಮಾಡುತ್ತೇವೆಂದರೆ, ಮಾನ್ಯ ಮುಖ್ಯಮಂತ್ರಿಗಳಿಗೆ ವಿಶ್ವವಿದ್ಯಾಲಯದ ಕಡೆಗೆ ಗಮನ ಕೊಡುವುದಕ್ಕೆ, ಅವರು ಅಲ್ಲಿಗೆ ಹೋಗುವುದಕ್ಕೆ ಮತ್ತು ಚರ್ಚೆ ಮಾಡುವುದಕ್ಕೆ ಸಮಯ ಎಲ್ಲಿದೆ? ಇದಕ್ಕೆ ನನ್ನದು ಏನೂ ಇಲ್ಲ. ಅವರು ಇದರ ಬಗ್ಗೆ

ಚರ್ಚೆ ಮಾಡಲಿ. ಆದುದರಿಂದ, ಇದು ಉಚಿತವಾಗಿರತಕ್ಕಂಥದ್ದು ಅಲ್ಲ. ನಾನು ಮತ್ತೊಂದನ್ನು ಹೇಳುವುದಕ್ಕೆ ಬಯಸುತ್ತೇನೆ. ಈಗ ಅಭಿವೃದ್ಧಿಗೆ ಸಂಬಂಧಪಟ್ಟಂತೆ ಎಂದರೆ, ಅದು ಯಾವ ರೀತಿಯ ಅಭಿವೃದ್ಧಿ? ಅದು ಶೈಕ್ಷಣಿಕ ಅಭಿವೃದ್ಧಿ. ಅಲ್ಲಿ ಸಂಶೋಧನೆಯನ್ನು ಮಾಡಬೇಕಾಗಿದೆ. ಈ ದೇಶಕ್ಕೆ, ರಾಜ್ಯಕ್ಕೆ ಮತ್ತು ನಾಡಿಗೆ ಯಾವ ರೀತಿಯ ಶಿಕ್ಷಣದ ಅಗತ್ಯವಿದೆ? ಯಾವ ರೀತಿಯ ಪಾಲಿಸಿಗಳ ಅಗತ್ಯವಿದೆ ಎಂದು, ಆ ರೀತಿಯ ಚರ್ಚೆಗಳು, ಸಂಶೋಧನೆಗಳು, ಚಿಂತನ-ಮಂಥನ ಮತ್ತು ಚರ್ಚೆ ವಿಶ್ವವಿದ್ಯಾಲಯಗಳಲ್ಲಿ ಆಗಬೇಕಾಗಿದೆ. ಆದುದರಿಂದ, ಘನತೆವೆತ್ತ ರಾಜ್ಯಪಾಲರನ್ನು ತೆಗೆದುಹಾಕಿ, ಮಾನ್ಯ ಮುಖ್ಯಮಂತ್ರಿಗಳನ್ನು ಇಲ್ಲಿಗೆ ತೆಗೆದುಕೊಂಡು ಬರತಕ್ಕಂಥದ್ದು ಸರಿಯಲ್ಲ. ಉದಾಹರಣೆಗೆ; ಸಿಂಡಿಕೇಟ್ ಇದೆ. ಆ ಸಿಂಡಿಕೇಟ್‌ಗೆ ಎಂತಹವರು ಬರುತ್ತಿದ್ದಾರೆ; Vice Chancellor ರವರು ಎಂತಹವರು ಬರುತ್ತಿದ್ದಾರೆ? ಈಗ ಒಳ್ಳೆಯವರು ಬರಬೇಕು ಎಂದರೆ, ಒಳ್ಳೆಯ Search Committee ಇದ್ದರೆ, ಅಲ್ಲಿಗೆ ಒಳ್ಳೆಯವರು ಬರುತ್ತಾರೆ. ಆ Search Committee ಹೇಗೆ ಇರುತ್ತದೆ? ಇಲ್ಲಿ ಬಹಳಷ್ಟು ಜನರು ಇದ್ದಾರೆ. ಆ Search Committee ಗೆ ಯಾರು ಬರಬೇಕೆಂದು ಯಾರ್‍ಯಾರು influence ಮಾಡುತ್ತಾರೆಂದು, ಈಗ Vice Chancellor ಗಳೆಲ್ಲಾ ಹೇಗೆ ನೇಮಕವಾಗುತ್ತಿದಾರೆ ಎಂದು ಎಲ್ಲರಿಗೂ ಸಹ ಗೊತ್ತಿದೆ. ಇದು open secret, ಇದನ್ನು ಮುಚ್ಚಿಡುವಂಥದ್ದು ಏನೂ ಇಲ್ಲ. ಇವತ್ತು ವಿಶ್ವವಿದ್ಯಾಲಯಗಳು ನಡೆಯುತ್ತಿರುವ ರೀತಿ ಮತ್ತು Vice Chancellor ಗಳು ಹೇಗೆ ನೇಮಕವಾಗಿ ಬರುತ್ತಿದ್ದಾರೆಂಬುದು ಬಹಳ ಬೇಸರದ ಸಂಗತಿ. ಒಳ್ಳೆಯ ವಿಶ್ವವಿದ್ಯಾಲಯಗಳು ಬರಬೇಕು ಮತ್ತು ಒಳ್ಳೆಯ academicians ಬರಬೇಕು. ಈಗ ಡಾ:ಡಿ.ಎಂ.ನಂಜುಂಡಪ್ಪನವರ ಹೆಸರು ಕರ್ನಾಟಕದಲ್ಲಿ ಯೂನಿವರ್ಸಿಟಿಗಳು ಇರುವವರೆಗೂ ಇರುತ್ತದೆ. ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದ Vice Chancellor ಆಗಿದ್ದಂತಹ ಶ್ರೀ ಡಿ.ಸಿ.ಪಾವಟೆಯವರ ಹೆಸರು ಯೂನಿವರ್ಸಿಟಿ ಎನ್ನುವಂತಹ ಪದ ಇರುವವರೆಗೂ ಕೂಡ ಇರುತ್ತದೆ. ಈಗ ಗುಲ್ಬರ್ಗ ವಿಶ್ವವಿದ್ಯಾಲಯದ Vice Chancellor ಆಗಿದ್ದಂತಹ ಡಾ: ಹಾ.ಮಾ.ನಾಯಕ ಹಾಗೂ ರಾಷ್ಟ್ರಕವಿ ಕುವೆಂಪುರವರ ಹೆಸರುಗಳು ಯೂನಿವರ್ಸಿಟಿ ಇರುವವರೆಗೂ ಇರುತ್ತವೆ. ಹಾಗಾಗಿ, ಈ ರೀತಿ Vice Chancellor ಗಳು ಬರಲಿ. ಅದೇ ರೀತಿ ಶ್ರೀ ರುದ್ರಯ್ಯನವರು ಇದ್ದರು. ಪ್ರೋ.ಎಂ.ಎಸ್.ತಿಮ್ಮಪ್ಪನವರು ಇದ್ದರು, ಇವರು ಇತ್ತೀಚಿನ ದಿನಗಳಲ್ಲಿ ಕಾಲವಾದರು. ನಾವು ಅಂತಹ ಮಹಾತ್ಮರ ಹೆಸರುಗಳನ್ನು ನೆನಪಿಸಿಕೊಳ್ಳಬೇಕು. ನಾವು ಸುಮ್ಮನೆ ಮಾನ್ಯ ಮುಖ್ಯಮಂತ್ರಿಗಳ ಹೆಸರನ್ನು ತೆಗೆದುಕೊಂಡು ಬಂದಿರುವುದು. ಈಗ ಮಾನ್ಯ ಸಿದ್ಧರಾಮಯ್ಯನವರು ಆಗಬೇಕೆಂದು ಅಲ್ಲ, ಮಾನ್ಯ ಮುಖ್ಯಮಂತ್ರಿಗಳು ಆಗಬೇಕೆಂದು. ಈಗ ಮಾನ್ಯ ಮುಖ್ಯಮಂತ್ರಿಗಳಿಗೆ ಸಮಯವಿರುವುದಿಲ್ಲ. ಅದು ಯಾರಾದರೂ ಆಗಲಿ. ಆದುದರಿಂದ, ಈ ವಿಷಯವನ್ನು ಇಲ್ಲಿಗೆ ಬಿಡಬೇಕು, ಇದು ಸರಿಯಲ್ಲವೆಂದು ಹೇಳುವುದಕ್ಕೆ ಬಯಸುತ್ತೇನೆ.

**ಶ್ರೀಮತಿ ಬಲ್ಕೀಸ್ ಬಾನು (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ (ತಿದ್ದುಪಡಿ) ವಿಧೇಯಕ, 2024 ಅನ್ನು ನಾನು ಮನಸಾರೆ ಸಂಪೂರ್ಣವಾಗಿ ಸ್ವಾಗತಿಸುತ್ತೇನೆ. ನಾನು ಕೂಡ ಜಿಲ್ಲಾ

ಪಂಚಾಯಿತಿಯ ಮಾಜಿ ಅಧ್ಯಕ್ಷೆ. ನಾನು ಪಂಚಾಯತ್ ರಾಜ್‌ನಲ್ಲಿ ಸುಮಾರು ೩೦ ವರ್ಷ ಕೆಲಸ ಮಾಡಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವ್ಯವಸ್ಥೆ ಹೇಗೆ ಇರಬೇಕೆಂದು ಆ ಕಲ್ಪನೆ ಇಟ್ಟುಕೊಂಡು ಕೆಲಸ ಮಾಡಿರುವಂಥದ್ದು. ಇವತ್ತು ಮಂಡಿಸಿರುವಂತಹ ತಿದ್ದುಪಡಿ ವಿಧೇಯಕದಲ್ಲಿ ಮಾನ್ಯ ಮುಖ್ಯಮಂತ್ರಿಗಳು Chancellor ಆಗಬೇಕು ಎಂಬ ಹಿನ್ನೆಲೆ ಮತ್ತು ಉದ್ದೇಶ ಏನೂ ಇಲ್ಲ. ಇದರ ಉದ್ದೇಶ ಏನೆಂದರೆ, ಈಗ ಯಾರೇ ಮುಖ್ಯಮಂತ್ರಿಯಾಗಿರಲಿ ಅವರು ಇಡೀ ರಾಜ್ಯಾದ್ಯಂತ ಪ್ರವಾಸವನ್ನು ಮಾಡಿ, ಗ್ರಾಮೀಣ ಪ್ರದೇಶದಲ್ಲಿ ಏನೇನು ಆಗಬೇಕಾಗಿರತಕ್ಕಂಥದ್ದು ಎಂಬುದನ್ನು ಗಮನಿಸಬೇಕಾಗುತ್ತದೆ. ಈಗ ಮಾನ್ಯ ಸದಸ್ಯರಾದ ಎನ್.ರವಿಕುಮಾರ್‌ರವರು ಹೇಳಿದ ಹಾಗೆ, ರಸ್ತೆ, ಕುಡಿಯುವ ನೀರು, ಸಾರಿಗೆ ಇರಲಿ. ನೇರವಾಗಿ ಭಾರತ ದೇಶದಲ್ಲಿ ಶೇಕಡಾ ೬೫ರಷ್ಟು ಗ್ರಾಮೀಣ ಪ್ರದೇಶವೇ ಸೇರಿರುವುದರಿಂದ, ಗ್ರಾಮೀಣ ಪ್ರದೇಶದ ಪ್ರಾಥಮಿಕ ಶಿಕ್ಷಣದಿಂದ ಹಿಡಿದು, ಉನ್ನತ ಶಿಕ್ಷಣದವರೆಗೆ ಹಳ್ಳಿಗಳಲ್ಲಿ ಎಲ್ಲಿಯವರೆಗೆ ಅಭಿವೃದ್ಧಿ ಮಾಡುವುದಿಲ್ಲವೋ ಅಲ್ಲಿಯವರೆಗೆ ದೇಶವನ್ನು ಅಭಿವೃದ್ಧಿ ಮಾಡುವುದಕ್ಕೆ ಸಾಧ್ಯವಿಲ್ಲ. ಈ ರಾಜ್ಯವನ್ನು ಆಳುವಂತಹ ರಾಜ್ಯದ ಮುಖ್ಯಮಂತ್ರಿಗಳಿಗೆ ಆ ರೀತಿಯ ಕಲ್ಪನೆ ಇರುತ್ತದೆ. ಇಡೀ fact finding report ಕೂಡ ಇರುತ್ತದೆ. ಮತ್ತೊಂದನ್ನು ನನ್ನ experience ಮೂಲಕ ಹೇಳುವಂಥದ್ದು ಏನೆಂದರೆ, ಇಲ್ಲಿ ನಾವು ಪಕ್ಷಾತೀತವಾಗಿ ಮಾತನಾಡೋಣ. ಎಲ್ಲಾ ಶಾಸಕ ಮಿತ್ರರು ಇರಲಿ, ಇಡೀ ರಾಜ್ಯದಲ್ಲಿ research ಮಾಡುವಂತಹವರು ಇರಲಿ, ವಿದ್ವಾಂಸರು ಇರಲಿ, ಅವರೆಲ್ಲರೂ ಕೂಡ ಬಹಳ ಸುಲಭವಾಗಿ ಭೇಟಿ ಮಾಡಿ, ಗ್ರಾಮೀಣ ಪ್ರದೇಶದಲ್ಲಿ ಏನಾದರೂ ಅಭಿವೃದ್ಧಿ ಆಗಬೇಕು ಮತ್ತು ಇದೇ ರೀತಿ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕು ಎಂದರೆ, ಬಹಳ ಸುಲಭವಾಗಿ ಸಿಗುವಂತಹವರು ಮಾನ್ಯ ಮುಖ್ಯಮಂತ್ರಿಗಳೇ. ಇವತ್ತಿನ ದಿವಸ ಘನತೆವೆತ್ತ ರಾಜ್ಯಪಾಲರನ್ನು ಭೇಟಿ ಮಾಡಬೇಕೆಂದರೆ, ಅವರಿಗೆ ಅವರದೇ ಆದಂತಹ ಒಂದು ವ್ಯವಸ್ಥೆ ಇರುತ್ತದೆ. ನಾವು ಅವರಿಗೆ ಪತ್ರ ಬರೆಯಬೇಕು. ಅವರ ಕಛೇರಿಯಿಂದ ನಮಗೆ ಹಿಂಬರಹ ಬರಬೇಕು. ಆಮೇಲೆ ಅವರನ್ನು ಭೇಟಿ ಮಾಡಬೇಕು. ಅವರು ನಮ್ಮನ್ನು ಕರೆಯುವ ಸಮಯಕ್ಕೆ ನಮಗೆ ಸಮಯ ಇರುತ್ತದೆಯೋ ಇಲ್ಲವೋ. ಆ ರೀತಿಯ ವ್ಯವಸ್ಥೆ ಇರುವುದರಿಂದ, ನಿಜಕ್ಕೂ ಶಿಕ್ಷಣ ಎಂಬುದು it is a continuous process. ಅದು ಯಾವ ರೀತಿ continuous process ಅಂದರೆ, ಅದು ಕಾಲ ಕಾಲಕ್ಕೆ ಬದಲಾವಣೆ ಕೂಡ ಆಗಬೇಕಾಗಿರುವಂಥದ್ದು. ಮತ್ತೆ ಬದಲಾವಣೆ ಹೇಗೆ ಆಗಬೇಕು ಎಂದರೆ, based on the facts and figures at the ground level. ಈ research ಅನ್ನು ಯಾರು ಮಾಡಬೇಕು ಎಂದರೆ, ಅವರ ತಲೆಯಲ್ಲಿ ಗ್ರಾಮೀಣಾಭಿವೃದ್ಧಿ ಎಂಬ ಕಲ್ಪನೆ ಇರುವಂತಹವರು ಮಾತ್ರ ಅಲ್ಲಿ ಪ್ರತಿನಿಧಿಸಬೇಕಾಗಿರುವಂಥದ್ದು. ಈ ರೀತಿಯ ಯೋಚನೆ ಮಾಡುವಂಥದ್ದು ಬಹಳಷ್ಟು ಶಾಸಕರಿಗೆ ಮತ್ತು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್

ರಾಜ್ ಇಲಾಖೆಯ ಮಂತ್ರಿಗಳಿಗೆ ಇರುತ್ತದೆ. ಹೀಗೆ ಎಲ್ಲವನ್ನು ಬಹಳ ಸುಲಭವಾಗಿ ಚರ್ಚೆ ಮಾಡಿದ, ಸಂಪೂರ್ಣ ಮಾಹಿತಿ ಮಾನ್ಯ ಮುಖ್ಯಮಂತ್ರಿಗಳಿಗೆ ಇರುತ್ತದೆ. ಎಲ್ಲಾ ವಿಶ್ವವಿದ್ಯಾಲಯಗಳಿಗೆ ಕುಲಾಧಿಪತಿಗಳಾಗಿ ಘನತೆವೆತ್ತ ರಾಜ್ಯಪಾಲರೇ ಇರುತ್ತಾರೆ. ನಾನು ಒಂದು ಸಣ್ಣ ಉದಾಹರಣೆಯನ್ನು ಕೊಡುವುದಕ್ಕೆ ಇಷ್ಟಪಡುತ್ತೇನೆ. ಶಿವಮೊಗ್ಗದ ಕುವೆಂಪು ವಿಶ್ವವಿದ್ಯಾಲಯ ನನ್ನ ಕ್ಷೇತ್ರದ ವ್ಯಾಪ್ತಿಗೆ ಬರುವಂಥದ್ದು. ನನ್ನ ತಾಲ್ಲೂಕಿನಲ್ಲಿ ಒಂದು ಪಾಲಿಟೆಕ್ನಿಕ್ ಕಾಲೇಜ್ ಇದೆ. ಆ ಪಾಲಿಟೆಕ್ನಿಕ್ ಕಾಲೇಜಿನಲ್ಲಿ ಹೆಣ್ಣುಮಕ್ಕಳ ಹಾಸ್ಟೆಲ್ ನಿರ್ಮಾಣದ ಕಾಮಗಾರಿ ನಡೆಯುತ್ತಿತ್ತು. ಆದರೆ, ಆ ಹಾಸ್ಟೆಲ್ ನಿರ್ಮಾಣದ ಕಾಮಗಾರಿ ನಿಂತು ಐದು ವರ್ಷವಾಗಿದೆ. ನಾನು ಅಲ್ಲಿಗೆ ಹೋಗಿ fact finding ಮಾಡಿದಾಗ, ನನಗೆ ಗೊತ್ತಾಗಿದ್ದು ಏನೆಂದರೆ, ಯು.ಜಿ.ಸಿ.ಯವರು ನಮಗೆ ಒಂದು ಮಾನದಂಡವನ್ನು ಫಿಕ್ಸ್ ಮಾಡಿದ್ದರು. ನಾವು ಅದನ್ನು ಸರಿಯಾದ ರೀತಿಯಲ್ಲಿ ಮಾಡುವುದಕ್ಕೆ ಆಗುವುದಿಲ್ಲವೆಂದು ಅಲ್ಲಿಗೆ ನಮ್ಮ ಗ್ರ್ಯಾಂಟ್ ಅನ್ನು ನಿಲ್ಲಿಸಿದ್ದಾರೆಂದು. ಇದಕ್ಕೆ ಸರ್ಕಾರದವರು ಗಮನ ಕೊಡಲಿಲ್ಲವೆಂದು ಕೇಳಿದಾಗ, ಇದಕ್ಕೆ ನೇರವಾಗಿ ರಾಜ್ಯಪಾಲರು ಮತ್ತು ಕುಲಪತಿ interfere ಆಗಿ ಅದನ್ನು ಮಾಡಬೇಕಾಗಿರುವಂಥದ್ದು. ಈ ರೀತಿ ಇದೆ. ಈಗ ಉನ್ನತ ಶಿಕ್ಷಣದಲ್ಲಿ ಬಹಳಷ್ಟು ಲೋಪದೋಷಗಳಿವೆ. ಈಗ ಪ್ರೋಫೆಸರ್ ರವರ ನೇಮಕಾತಿಯ ಬಗ್ಗೆ ಉನ್ನತ ಶಿಕ್ಷಣ ಸಚಿವರಿಗೆ ಸಂಬಂಧಪಟ್ಟಂತೆ ಚರ್ಚೆಯಾಯಿತು. ಈ ರೀತಿಯ ground reality ಗೊತ್ತಾಗಬೇಕು ಎಂದರೆ, ಪಂಚಾಯತ್ ರಾಜ್ ಅನ್ನು ಯಾರು ಪ್ರತಿನಿಧಿಸುತ್ತಾರೆ, ಅವರ ಮೂಲಕ ರಾಜ್ಯದ ಮುಖ್ಯಮಂತ್ರಿಗಳಿಗೆ ಸಂಪೂರ್ಣವಾದ ಮಾಹಿತಿ ಇರುತ್ತದೆ. ಹಾಗಾಗಿ, ನಾನು ಈ appointment of Chief Minister as the Chancellor, ನಾನು ಇದನ್ನು ಸಂಪೂರ್ಣವಾಗಿ ಒಪ್ಪುತ್ತೇನೆ.

ನಮ್ಮ ವಿಶ್ವವಿದ್ಯಾಲಯಗಳಿಗೆ ಯು.ಜಿ.ಸಿ.ಯವರು ಬಹಳಷ್ಟು ಕಡಿವಾಣವನ್ನು ಹಾಕುತ್ತಾರೆ. ವಿದ್ಯಾರ್ಥಿ-ವಿದ್ಯಾರ್ಥಿನಿಯರು ಸುಮಾರು ತಿಂಗಳುಗಟ್ಟಲೆ ಹೋರಾಟ ಮಾಡುತ್ತಾರೆ. ಮತ್ತೆ strike ನಲ್ಲಿ ಕುಳಿತುಕೊಳ್ಳುತ್ತಾರೆ. ಅಲ್ಲಿ Vice Chancellor ಏನಾದರೂ ಮಾಡಬೇಕೆಂದರೂ ಕೂಡ he must go to the Governor. ರಾಜ್ಯಪಾಲರ ಬಳಿ ಅಷ್ಟು ಸುಲಭವಾಗಿ Circulars ಹೊರಡಿಸಬೇಕು, ಮತ್ತೆ ಅದನ್ನು ತೆಗೆದುಕೊಂಡು ಬಂದು ಮತ್ತೆ ಆ ವಿಶ್ವವಿದ್ಯಾಲಯವನ್ನು ಅಭಿವೃದ್ಧಿ ಮಾಡಬೇಕೆಂದರೆ, it has become a very tough job for the Universities. ಹಾಗಾಗಿ, ಬಹಳ ಒಳ್ಳೆಯ ವಿಧೇಯಕವನ್ನು ನಮ್ಮ ಪಂಚಾಯತ್ ರಾಜ್ ಸಚಿವರಾಗಿರುವಂತಹ ಮಾನ್ಯ ಪ್ರಿಯಾಂಕ್ ಖರ್ಗೆಯವರು ಮಂಡಿಸಿದ್ದಾರೆ. ನಾನು ಈ ವಿಧೇಯಕವನ್ನು ಸಂಪೂರ್ಣವಾಗಿ ಸ್ವಾಗತಿಸುತ್ತೇನೆಂದು ಹೇಳುತ್ತಾ, ನನ್ನ ಮಾತನ್ನು ಮುಗಿಸುತ್ತೇನೆ.

(ಮುಂದು)

(967) 18.12.2024 04.50 LL-VK (ಉಪ ಸಭಾಪತಿಯವರ ಉಪಸ್ಥಿತಿ)

**ಶ್ರೀ ಕೇಶವ ಪ್ರಸಾದ್ ಎಸ್. (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ (ತಿದ್ದುಪಡಿ) ವಿಧೇಯಕ, 2024ಕ್ಕೆ ಸರ್ಕಾರ ತಿದ್ದುಪಡಿ ತರುವುದಕ್ಕೆ ಹೊರಟಿದೆ. ಇದೊಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶಿಷ್ಟವಾದಂತಹ ವ್ಯವಸ್ಥೆ ಇಡೀ ದೇಶದಲ್ಲಿ ಇರುವಂಥದ್ದು. ಈ ರೀತಿ ಯೂನಿವರ್ಸಿಟಿ ಭಾರತ ದೇಶದಲ್ಲಿಯೇ ಪ್ರಥಮ ಎಂದು ಹೇಳುತ್ತಿದ್ದೇನೆ. ಹಾಗಾಗಿ, ಇದಕ್ಕೆ ಆದಂತಹ ಸಿದ್ಧತೆ ಮತ್ತು ಪರಿಪೂರ್ಣತೆ ತಂದುಕೊಡುವಂಥದ್ದು, ಇಡೀ ದೇಶಕ್ಕೆ ಮಾದರಿಯಾಗಿ ಮಾಡುವಂಥದ್ದು, ಜಗತ್ತಿನಾದ್ಯಂತ ಈ ವಿಷಯದ ಬಗ್ಗೆ ಅಧ್ಯಯನ ಮಾಡುವುದಕ್ಕೆ, ತಿಳಿದುಕೊಳ್ಳುವುದಕ್ಕೆ ಜನ ಬರುವಂತಹ ಜಾಗ/ತಾಣ ಇದಾಗಬೇಕು ಎನ್ನುವಂತಹ ರೀತಿಯಲ್ಲಿ ನಮ್ಮ ಕಲ್ಪನೆಯಾಗಿದೆ. ಹಾಗೆಯೇ, ನಾನು University Grants Commission ಬಗ್ಗೆ ಕೇಳಿದ್ದೇನೆ. ಅಲ್ಲಿ ಏನು ಕೊಡಬೇಕು ಮತ್ತು ಏನು ಮಾಡಬೇಕು ಎಂಬ ಬಗ್ಗೆ ನಿಚ್ಚಳವಾಗಿ ಯೂನಿವರ್ಸಿಟಿ ಗ್ರಾಂಟ್ಸ್ ಕಮೀಷನ್‌ನಲ್ಲಿ ಇದೆ. ದಿವಂಗತ ರಾಜೀವ್ ಗಾಂಧಿಯವರು ಇದ್ದಾಗ ಈ ಮಹತ್ತರವಾದಂತಹ ಬದಲಾವಣೆಗಳನ್ನು ತಂದರು. ತನಗೆ ಪಾಠ ಮಾಡಿದಂತಹ ಗುರುಗಳು ಏನಿದ್ದರು, ಅವರ ವೇತನದ ವಿಷಯವನ್ನು ಕೇಳಿ ಅವರು ಚಕಿತರಾದರು. ನಿಮ್ಮಿಂದ ನಾನು ವಿದ್ಯಾರ್ಜನೆ ಪಡೆದುಕೊಂಡೆನು ಮತ್ತು ವಿಷಯವನ್ನು ತಿಳಿದುಕೊಂಡು ಬೆಳೆದೆನು. ಹಾಗಾಗಿ, ಯೂನಿವರ್ಸಿಟಿ ಗ್ರಾಂಟ್ಸ್ ಕಮೀಷನ್ ತರಬೇಕು. ಅದರಲ್ಲಿ ಈ ಎಲ್ಲಾ ಬದಲಾವಣೆಗಳನ್ನು ಮಾಡಬೇಕು ಎಂದು ಈ ವಿಧೇಯಕವನ್ನು ತಂದರು. ಆ ಸಂದರ್ಭದಲ್ಲಿ ರಾಜ್ಯಪಾಲರನ್ನೇ ಯೂನಿವರ್ಸಿಟಿಗೆ ಬಹಳ ಪ್ರಮುಖರನ್ನಾಗಿ ಇಡೀ ಭಾರತ ದೇಶದಲ್ಲಿಯೇ ಮಾಡಿದಂತಹ ವ್ಯವಸ್ಥೆಯಾಗಿದೆ. ದಿವಂಗತ ರಾಜೀವ್ ಗಾಂಧೀಯವರು ಇದ್ದಾಗಲೇ brute majority ಇತ್ತು. ಆಗ ಅವರು ಈ ವ್ಯವಸ್ಥೆಯನ್ನು ವ್ಯತ್ಯಾಸ ಮಾಡಬಹುದಾಗಿತ್ತು. ಏತಕ್ಕೆ ಮಾಡಲಿಲ್ಲ? ರಾಜ್ಯಪಾಲರನ್ನೇ ಈ ಯೂನಿವರ್ಸಿಟಿಗೆ ಬಹಳ ಪ್ರಮುಖರಾಗಿ ಏತಕ್ಕೆ ಉಳಿಸಿದರು? ಅಂದರೆ, ಮಹತ್ತರವಾದಂತಹ ಯೋಚನೆ ಇತ್ತು, ಸಾಂವಿಧಾನಿಕ ಹುದ್ದೆಗಳಿಗೆ ಗೌರವ ಕೊಡಬೇಕು ಎನ್ನುವಂಥದ್ದು, ದಿವಂಗತ ರಾಜೀವ್ ಗಾಂಧಿಯವರಿಗೆ ಸ್ಪಷ್ಟವಾಗಿ ಗೊತ್ತಿತ್ತು. ತಾನು ವಿದ್ಯಾರ್ಜನೆ ಮಾಡಿದಾಗ, ಹಿನ್ನೆಲೆ ಹೇಗಿತ್ತು ಮತ್ತು ಈಗ ಏನು ಬದಲಾವಣೆಯಾಗುತ್ತಿದೆ. ಸಾಂಸ್ಥಿಕವಾದ ಬದಲಾವಣೆಯನ್ನು ಶೈಕ್ಷಣಿಕ ಕ್ಷೇತ್ರದಲ್ಲಿ ತರಬೇಕೆಂದಾಗ, ವ್ಯವಸ್ಥೆ ಏನಿರಬೇಕೆಂದು ಯೋಚನೆ ಮಾಡಿದರು. ಹಾಗೆಯೇ, ನಾನು ಒಂದು European Union Delegation ಅನ್ನು ಯೂನಿವರ್ಸಿಟಿಯನ್ನು ಒಳಗೊಂಡ ಒಂದು delegation ಭಾರತ ದೇಶದಲ್ಲಿ ಪ್ರವಾಸ ಮಾಡುವುದನ್ನು ನೋಡಿದೆನು. ಅದರಲ್ಲಿ ವೈಸ್ ಚಾನ್ಸಿಲರ್‌ಗಳನ್ನು ಅವರು ಭೇಟಿ ಮಾಡಿದರು ಮತ್ತು ಅಲ್ಲಿನ ಎಲ್ಲಾ ವಿಶೇಷ ಸಂಗತಿಗಳನ್ನು ಅವರು ಮನಗಂಡರು. ತದನಂತರ, ಇದರ ಚಾನ್ಸಿಲರ್ ಯಾರು ಎಂದು ಹೇಳಿ, ಆಗಿದ್ದಂತಹ ರಾಜ್ಯಪಾಲರನ್ನು ಭೇಟಿ ಮಾಡಿ, ಮಾತನಾಡಿರುತ್ತಾರೆ. ನಮ್ಮ ಮುಖ್ಯಮಂತ್ರಿಗಳಿಗೆ ಅಥವಾ ಯಾರೇ ಮುಖ್ಯಮಂತ್ರಿಯಾಗಿದ್ದರೂ ಸಹ, ಅವರಿಗೆ ಇರುವಂತಹ ಕಾರ್ಯದೊತ್ತಡ ಏನು? ಇಡೀ ರಾಜ್ಯದಲ್ಲಿ ಅಧಿವೇಶನ ನಡೆಯುತ್ತಿರುವಂತಹ ಸಂದರ್ಭದಲ್ಲಿ ಯಾವುದೋ ಒಂದು ಡೆಲಿಗೇಷನ್ ಅವರನ್ನು ಭೇಟಿ

ಮಾಡುವುದಕ್ಕೆ ಸಾಧ್ಯವಿದೆಯೇ? ಹಾಗಾಗಿ, ನಾನು ಹೇಳುವುದೇನೆಂದರೆ, ಯೂನಿವರ್ಸಿಟಿ ಗ್ರಾಂಟ್ಸ್ ಕಮೀಷನ್‌ನಲ್ಲಿ ಎಲ್ಲವೂ ನಿಖರವಾಗಿ ಗೊತ್ತಿದೆ ಎಂದರೆ, ಸಹಜವಾಗಿ grants ಸಿಗುತ್ತಿದೆ. ಹಾಗಾಗಿ, ಈ ನಿಯುಕ್ತಿಯನ್ನು ಅಂದರೆ, ಈ ಬದಲಾವಣೆಯನ್ನು ತರುತ್ತಿರುವುದರ ಹಿಂದೆ, ಕುಲಪತಿಗಳಾದ ರಾಜ್ಯಪಾಲರನ್ನು ಬದಲಾಯಿಸಿ, ಮುಖ್ಯಮಂತ್ರಿಗಳನ್ನು ತರುತ್ತಿದ್ದೇವೆ ಎನ್ನುವುದರ ಹಿಂದೆ ಏನು ಅಡಗಿದೆ? ರಾಜಕೀಯ ಕಾರಣ ಇದೆಯೇ? ಅಥವಾ ರಾಜ್ಯಪಾಲರು ಮುಡಾ ಹಗರಣಕ್ಕೆ ಅನುಮತಿ ಕೊಟ್ಟುಬಿಟ್ಟರು ಎಂದು ಬದಲಾವಣೆ ತರುತ್ತಿದೆಯೇ ಈ ರಾಜ್ಯ ಸರ್ಕಾರ? ಇದು ತಪ್ಪು ಅಲ್ಲವೇ? ಇದು ಪೂರ್ವಾಗ್ರಹ ಪೀಡಿತ ಸರ್ಕಾರ ಅಲ್ಲವೇ?

**(ಗೊಂದಲ)**

**ಡಾ: ಯತೀಂದ್ರ ಎಸ್. (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಆ ರೀತಿ ಇದ್ದಿದ್ದರೆ ಎಲ್ಲಾ ಯೂನಿವರ್ಸಿಟಿಗಳಲ್ಲಿ ತರಬಹುದಾಗಿತ್ತು.

**(ಗೊಂದಲ)**

**ಶ್ರೀ ಕೇಶವ ಪ್ರಸಾದ್ ಎಸ್. :-** ಮಾನ್ಯ ಸಭಾಪತಿಯವರೇ, ಹಾಗಾಗಿ ಇದು ರಾಜಕೀಯ ಪ್ರೇರಿತವಾದಂತಹ ಬದಲಾವಣೆ.

**ಡಾ: ಯತೀಂದ್ರ ಎಸ್.:-** ಮಾನ್ಯ ಸಭಾಪತಿಯವರೇ, ಆದರೆ ಕೇವಲ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ಯ ವಿಶ್ವವಿದ್ಯಾಲಯದಲ್ಲಿ ಮಾತ್ರ ಬದಲಾವಣೆ ತಂದಿರುವುದು. ಇದು ವಿಶೇಷವಾದಂತಹ ಯೂನಿವರ್ಸಿಟಿಯಾಗಿದ್ದು, ಅದಕ್ಕೆ ಬೇರೆ ರೀತಿಯಾದಂತಹ ಅಗತ್ಯತೆಗಳು ಇರುತ್ತವೆ.

**(ಗೊಂದಲ)**

**ಶ್ರೀ ಕೇಶವ ಪ್ರಸಾದ್ ಎಸ್. :-** ಮಾನ್ಯ ಸಭಾಪತಿಯವರೇ, ಇದು ರಾಜಕೀಯ ಪ್ರೇರಿತವಾಗಿ ತಂದಂತಹ ಬದಲಾವಣೆಯಾಗಿದೆ. ಹಾಗಾಗಿ, ಈ ಬದಲಾವಣೆಯನ್ನು ನಾನು ಆಮೂಲಾಗ್ರವಾಗಿ ವಿರೋಧ ಮಾಡುತ್ತೇನೆ. ಇದು ಪೂರ್ವಾಗ್ರಹಪೀಡಿತವಾಗಿ ಮುಡಾ ಹಗರಣದ ನಂತರ ತಂದಿರುವಂತಹ ಒಂದು ಬದಲಾವಣೆಯಾಗಿದೆ. ಇದನ್ನು ನಾನು ವಿರೋಧ ಮಾಡುತ್ತೇನೆ.

**(ಗೊಂದಲ)**

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ,..

**(ಗೊಂದಲ)**

**ಉಪ ಸಭಾಪತಿಯವರು:-** ಮಾನ್ಯ ಪುಟ್ಟಣ್ಣನವರೇ, ತಾವು ಮಾತನಾಡುವಾಗ ಈ ವಿಷಯವನ್ನು ಮಾತನಾಡಿ. ಈಗ ದಯಮಾಡಿ ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ,..

**ಶ್ರೀ ಕೇಶವ ಪ್ರಸಾದ್ ಎಸ್. :-** ಮಾನ್ಯ ಸಭಾಪತಿಯವರೇ, ಹಾಗಾಗಿ ಯಾರು ಕೂಡ ಈ ರೀತಿಯ ಸಾಂವಿಧಾನಿಕ ಹುದ್ದೆಗಳಲ್ಲಿ ಕುಳಿತಿರುವಂತಹವರ ವಿರುದ್ಧ ಯಾವುದೇ ರೀತಿಯಾದಂತಹ ವಿರೋಧ ಮಾಡುವಂತಹ ಕೆಲಸಗಳನ್ನು ಮಾಡಬಾರದು.

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ,..

**ಉಪ ಸಭಾಪತಿಯವರು:-** ಮಾನ್ಯ ಪುಟ್ಟಣ್ಣನವರೇ, ದಯಮಾಡಿ ಕುಳಿತುಕೊಳ್ಳಿ. ತಾವು ಅರ್ಥಮಾಡಿಕೊಳ್ಳಬೇಕು.

**ಶ್ರೀ ಕೇಶವ ಪ್ರಸಾದ್ ಎಸ್. :-** ಮಾನ್ಯ ಸಭಾಪತಿಯವರೇ, ಇದು ಅವರದ್ದೇ ಸರ್ಕಾರದ ಪ್ರಧಾನ ಮಂತ್ರಿಯಾಗಿದ್ದಂತಹ ಹಾಗೂ ಮೇಲ್ಪಂಕ್ತಿ ಹಾಕಿದಂತಹ ದಿವಂಗತ ಶ್ರೀ ರಾಜೀವ್ ಗಾಂಧಿಯವರಿಗೆ ಮಾಡಿದಂತಹ ಅಪಮಾನವಾಗಿರುತ್ತದೆ.

**ಶ್ರೀ ಪುಟ್ಟಣ್ಣ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ (ತಿದ್ದುಪಡಿ) ವಿಧೇಯಕ, 2024 ಅನ್ನು ನಾನು ಸಂಪೂರ್ಣವಾಗಿ ಸ್ವಾಗತ ಮಾಡುತ್ತೇನೆ. **(ಗೊಂದಲ**) ನನಗೆ ಏತಕ್ಕೆ ಕೋಪ ಬರುತ್ತದೆಯೆಂದರೆ, ಇಂತಹ ವಿಷಯಗಳನ್ನು ಹೇಳಿದಾಗ...

**ಉಪ ಸಭಾಪತಿಯವರು:-** ಈ ಸದನ ಕೋಪ ಮಾಡಿಕೊಳ್ಳುವುದಕ್ಕೆ ಇರುವುದಲ್ಲ. ವಿಚಾರ ವಿನಿಮಯ ಮಾಡಿಕೊಳ್ಳುವುದಕ್ಕೆ ಇರುವಂಥಹ ವ್ಯವಸ್ಥೆ ಆಗಿದೆ.

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹೇಳಿರುವ ವಿಚಾರದ ಬಗ್ಗೆ ನನಗೆ ಯಾವುದೇ ಬೇಜಾರು ಇಲ್ಲ. ಆದರೆ, ವಾಸ್ತವ ಸ್ಥಿತಿಯಲ್ಲಿ ನಾವೆಲ್ಲರೂ ಬದುಕಬೇಕು. ಈ ವಿಷಯ ನಿಮಗೂ ಗೊತ್ತಿದೆ, ನಮಗೂ ಗೊತ್ತಿದೆ. ರಾಜಕಾರಣಕ್ಕೋಸ್ಕರ ಇದನ್ನು ವಿರೋಧ ಮಾಡುವಂತಹ ಅಗತ್ಯ ಇಲ್ಲ. ಇದರಲ್ಲಿ ರಾಜ್ಯಪಾಲರ ನೇಮಕಾತಿ ನಾಮಕಾವಸ್ಥೆ ಎಂದು ಹೇಳುತ್ತಾರೆ. ರಾಜ್ಯಪಾಲರಿಗೆ ಘನತೆ, ಗೌರವ ಇದೆ ಎಂದು ಹೇಳುತ್ತಾರೆ. ಅದನ್ನು ಎಲ್ಲರೂ ಒಪ್ಪುತ್ತೇವೆ. **(ಗೊಂದಲ)** ಈ ಹಿಂದೆ ಅಧಿಕಾರದಲ್ಲಿ ಅವರು ಸಹ ಇದ್ದರು. ಆ ಸಂದರ್ಭದಲ್ಲಿ ಹೊಸ ವಿಶ್ವವಿದ್ಯಾಲಯಗಳಿಗೆ ಸಂಬಂಧಪಟ್ಟ ವಿಧೇಯಕಗಳನ್ನು ಟೈಪ್ ಮಾಡಿಕೊಂಡು ಈ ಸದನದಲ್ಲಿ ಮಂಡಿಸಿರುತ್ತಾರೆ. ಆಗ ನಾವೆಲ್ಲರೂ ಸಹಮತ ವ್ಯಕ್ತಪಡಿಸಿರುತ್ತೇವೆ. ಆ ಎಲ್ಲಾ ವಿಶ್ವವಿದ್ಯಾಲಯಗಳಿಗೆ Vice Chancellor ಗಳನ್ನು ನೇಮಕಾತಿ ಮಾಡಿದರು. ಅವರನ್ನು ಹೇಗೆ ನೇಮಕಾತಿ ಮಾಡಿದರು? ಚೇರು ಮತ್ತು ಕುರ್ಚಿಗಳನ್ನು ಇವರೇ ತೆಗೆದುಕೊಂಡು ಹೋಗಿ ಕುಳಿತಿರುತ್ತಾರೆ. ಇನ್ನು ಕೂಡ ಒಂದು ನೇಮಕಾತಿ ಕೂಡ ಆಗಿರುವುದಿಲ್ಲ.

**ಶ್ರೀ ಎಸ್.ವ್ಹಿ ಸಂಕನೂರ:-** ಮಾನ್ಯ ಸಭಾಪತಿಯವರೇ,...

**ಶ್ರೀ ಪುಟ್ಟಣ್ಣ:-** ಮಾನ್ಯ ಸಂಕನೂರರವರೇ, ನಾವು ಮತ್ತು ನೀವೆಲ್ಲರೂ ಶೈಕ್ಷಣಿಕ ಕ್ಷೇತ್ರವನ್ನು ಪ್ರತಿನಿಧಿಸುತ್ತಿದ್ದೇವೆ. ಇವೊತ್ತಿನ ದಿವಸ ಮಾನ್ಯ ಮುಖ್ಯಮಂತ್ರಿಗಳಾಗಿ ಶ್ರೀ ಸಿದ್ದರಾಮಯ್ಯನವರು ಇದ್ದಾರೆ. ನಾಳೆಯ ದಿವಸ ಬೇರೆಯವರು ಬರುತ್ತಾರೆ.

**ಉಪ ಸಭಾಪತಿಯವರು:-** ಮಾನ್ಯ ಪುಟ್ಟಣ್ಣನವರೇ, ತಾವು ನೇರವಾಗಿ ಮಾನ್ಯ ಸದಸ್ಯರ ಜೊತೆ ಮಾತನಾಡಬೇಡಿ. ದಯಮಾಡಿ, ತಾವು ಪೀಠದ ಜೊತೆ ಮಾತನಾಡಿ. ಆ ಕಡೆ ಮಾತನಾಡಬೇಡಿ.

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ, ಹಾಗಾಗಿ ನಾನು ಹೇಳುವುದೇನೆಂದರೆ, ಇವೊತ್ತಿನ ದಿವಸ ಈ ವಿಶ್ವವಿದ್ಯಾಲಯಕ್ಕೆ ಮಾನ್ಯ ಮುಖ್ಯಮಂತ್ರಿಗಳನ್ನು ಕುಲಾಧಿಪತಿಯವರನ್ನಾಗಿ ಮಾಡಿದರೆ, ನಾವು ಅವರ ಜೊತೆ ಚರ್ಚೆ ಮಾಡಬಹುದಾಗಿರುತ್ತದೆ. ಅವರ ಹೆಸರು ಹಿಡಿದು ಹೇಳುತ್ತೇವೆ. "ಸ್ವಾಮಿ, ಈ ರೀತಿ ಇದೆ. ತಾವು ಕುಲಾಧಿಪತಿಗಳು. ತಮ್ಮ ಯೂನಿವರ್ಸಿಟಿಯಲ್ಲಿ ನಮ್ಮ ಮಕ್ಕಳು ಓದುತ್ತಿದ್ದಾರೆ" ಎಂದು ನಾವು ಕೇಳುತ್ತೇವೆ. ಆದರೆ, ಗವರ್ನರ್ ಎಂದರೆ ಬಿಳಿಯಾನೆ ಇದ್ದ ಹಾಗೆ. ಆನೆಯ ಹತ್ತಿರ ಸಾಕಿರುವವನು ಇದ್ದಾಗಲೇ ನಾವು ಹೋಗುವುದಕ್ಕೆ ಆಗುವುದಿಲ್ಲ. ಇನ್ನು ಎಲ್ಲರೂ ಗವರ್ನರ್ ಮೀಟ್ ಮಾಡುವುದಕ್ಕೆ ಆಗುತ್ತದೆಯೇ? ಆದರೆ, ನಾವು ಮತ್ತು ನೀವೆಲ್ಲರೂ ಯೂನಿವರ್ಸಿಟಿ ಬಗ್ಗೆ ನಾಳೆಯ ದಿವಸ ಯಾವುದೇ ಪಕ್ಷದ ಮುಖ್ಯಮಂತ್ರಿ ಇದ್ದರೂ ಸಹ, ನಾವು ಅವರನ್ನು ಕೇಳಬಹುದಾಗಿರುತ್ತದೆ ಮತ್ತು ಅವರ ಜೊತೆ ಮಾತನಾಡಬಹುದು, ಹೋರಾಟ ಮಾಡಬಹುದು, ಜಗಳ ಮಾಡಬಹುದು. ಇದು ಅವರಿಗೆ ಅರ್ಥವಾಗಿದೆಯೇ? ಮಾನ್ಯ ಸದಸ್ಯರು ಸಿಂಡಿಕೇಟ್ ಸದಸ್ಯರ ಬಗ್ಗೆ ಮಾತನಾಡಿರುತ್ತಾರೆ. ಇವೊತ್ತಿನ ವ್ಯವಸ್ಥೆಯಲ್ಲಿ ಆ ಸಿಂಡಿಕೇಟ್ ಸದಸ್ಯರನ್ನು ಯಾವ ರೀತಿ ನೇಮಕಾತಿ ಮಾಡುತ್ತಾರೆ? ಈ ವಿಷಯದ ಬಗ್ಗೆ ಪ್ರಾಮಾಣಿಕವಾಗಿ ಮಾತನಾಡಲಿ. ನಾನು ಸತ್ಯ ಮತ್ತು ಪ್ರಾಮಾಣಿಕವಾಗಿ ಹೇಳುತ್ತಿದ್ದೇನೆ. ಅದನ್ನು ತಾವೆಲ್ಲರೂ ತಿಳಿದುಕೊಳ್ಳಬೇಕು. ನಾನು ಯಾವುದೇ ರಾಜ್ಯಪಾಲರ ಬಗ್ಗೆ ಹೇಳುತ್ತಿಲ್ಲ. ಆದರೆ, ಅವರ ಹೆಸರಿನಲ್ಲಿ ಏನೆಲ್ಲಾ ನಡೆಯುತ್ತಿದೆ ಎಂಬುದನ್ನು ಅವರೇ ಹೇಳಬೇಕು? ಬೇಕಾದರೆ ಎಲ್ಲಾ ಯೂನಿವರ್ಸಿಟಿಗಳನ್ನು ಚೆಕ್ ಮಾಡಿಕೊಂಡು ಬರಲಿ. ಅಲ್ಲಿ ಯಾರ್‍ಯಾರನ್ನು ನೇಮಕಾತಿ ಮಾಡಿರುತ್ತಾರೆ? ಇವೊತ್ತಿನ ದಿವಸ ಆ ಯೂನಿವರ್ಸಿಟಿಗಳಲ್ಲಿ ರಾಷ್ಟ್ರಕವಿ ಕುವೆಂಪುರವರನ್ನು, ಡಾ: ಹಾ.ಮಾ. ನಾಯಕರನ್ನು, ಡಾ: ಹೆಚ್. ನರಸಿಂಹಯ್ಯನವರನ್ನು ಖ್ಯಾತ ಉದ್ಯಮಿ ಶ್ರೀ ಎನ್.ಆರ್. ಶೆಟ್ಟಿ, ಶ್ರೀ ಪಠಾಣ್‌ರವರನ್ನು ಹುಡುಕುವುದಕ್ಕೆ ಸಾಧ್ಯವಿದೆಯೇ? ಈ ಕೆಲಸವನ್ನು ನಾವು ಮತ್ತು ಅವರೇ ಮಾಡಿರುವುದು. ಅವರು ಇಲ್ಲಿದ್ದಾಗ ಅವರು ಮಾಡಿರುತ್ತಾರೆ. ನಾವು ಇಲ್ಲಿ ಇದ್ದಾಗ ನಾವು ಮಾಡಿರುತ್ತೇವೆ. ಇದು ಸತ್ಯವಲ್ಲವೇ? ಆದರೆ, ನಮ್ಮ ಮಕ್ಕಳು ಯೂನಿವರ್ಸಿಟಿಗಳಲ್ಲಿ ಓದುತ್ತಿದ್ದಾರೆ. ಇವೊತ್ತಿನ ದಿವಸ ಒಂದು ಯೂನಿವರ್ಸಿಟಿಗಳಲ್ಲಿ ಒಂದು ನೇಮಕಾತಿ ಆಗಿರುವುದಿಲ್ಲ. ಈ ಬಗ್ಗೆ ಯಾರನ್ನು ಕೇಳುತ್ತಾರೆ? ಆಯಿತು, ಇಂತಹ ಯೂನಿವರ್ಸಿಟಿಯಲ್ಲಿ ಇಂತಹ ಅವ್ಯವಹಾರ ಆಗಿದೆ ಎಂದು ಪತ್ರ ಬರೆದರೆ, ವಾಪಸ್ಸು ಉತ್ತರವೇ ಬರುವುದೇ ಇಲ್ಲ. ವಿಸಿ ಯವರು ನಿವೃತ್ತಿಯಾಗುವವರೆಗೂ ಏನೂ ಆಗುವುದೇ ಇಲ್ಲ. ಆದರೆ, ನಾವು ಮತ್ತು ಅವರು ಯಾವುದಾದರೂ ಯೂನಿವರ್ಸಿಟಿಯಲ್ಲಿ ಅವ್ಯವಹಾರ ನಡೆದರೆ ಅಥವಾ ಯಾವುದಾದರೂ ಅಭಿವೃದ್ಧಿಗಾಗಿ ಮಾನ್ಯ ಮುಖ್ಯಮಂತ್ರಿಗಳನ್ನು ಕೇಳಬಹುದಲ್ಲವೇ? "ಸ್ವಾಮಿ, ತಾವು ಕುಲಾಧಿಪತಿಗಳಾಗಿದ್ದೀರಿ, ಇಂತಹ ಯೂನಿವರ್ಸಿಟಿಯಲ್ಲಿ ಈ ರೀತಿ ನಡೆಯುತ್ತಿದೆ" ಎಂದು ಈ ಸದನದಲ್ಲಿ ಚರ್ಚೆ ಮಾಡಬಹುದಲ್ಲವೇ? ಈಗ ನಾವು ಘನತೆವೆತ್ತ ರಾಜ್ಯಪಾಲರು ಎಂದು ಸುಮ್ಮನೆ ಕೈ ಕಟ್ಟಿಕೊಂಡು ಕುಳಿತುಕೊಳ್ಳಬೇಕು. ಆದರೆ, ಈ ಯೂನಿವರ್ಸಿಟಿಯಲ್ಲಿ ಓದುವಂತಹ ಮಕ್ಕಳ ಏನಾಗಬೇಕು? ನಿನ್ನೆಯ ದಿವಸ ಯಾವುದೋ ಒಂದು ವಿಷಯದ ಬಗ್ಗೆ ಮಾನ್ಯ ಉನ್ನತ

ಶಿಕ್ಷಣ ಸಚಿವರ ಜೊತೆ ಮಾತನಾಡಿದೆನು. ಒಂದು ವಿಶ್ವವಿದ್ಯಾಲಯದಲ್ಲಿಯೂ ಸಹ ವಿಷಯವಾರು ತೆಗೆದುಕೊಂಡರೆ ಕಳೆದ 20 ವರ್ಷಗಳಿಂದ ಒಬ್ಬರು ಪರ್ಮನೆಂಟ್ ಉಪನ್ಯಾಸಕರು ಇರುವುದಿಲ್ಲ. ಮಾನ್ಯ ಸಿ.ಟಿ. ರವಿಯವರು ಉನ್ನತ ಶಿಕ್ಷಣ ಮಂತ್ರಿಗಳಾಗಿದ್ದವರು. ಅವರಿಗೆ ಈ ಬಗ್ಗೆ ಚೆನ್ನಾಗಿ ಗೊತ್ತಿದೆ. ಈ ಬಗ್ಗೆ ನಾವು ಯಾರನ್ನು ಕೇಳಬೇಕು? ಕನಿಷ್ಠ ಪಕ್ಷ ನಾವು ಮಾನ್ಯ ಮುಖ್ಯಮಂತ್ರಿಯವರ ಜೊತೆ ನಾವು ಹೋರಾಟ ಮಾಡಿ, ಅವರನ್ನು ಕೇಳಬಹುದಲ್ಲವೇ?

**ಶ್ರೀ ಎಸ್.ವ್ಹಿ. ಸಂಕನೂರ:-** ಮಾನ್ಯ ಸಭಾಪತಿಯವರೇ, ವಿಶ್ವವಿದ್ಯಾಲಯಗಳಿಗೆ ಉಪನ್ಯಾಸಕರನ್ನು ನೇಮಕ ಮಾಡುವುದು ಸರ್ಕಾರದ ಜವಾಬ್ದಾರಿಯಾಗಿರುತ್ತದೆ. ಮಾನ್ಯ ಪುಟ್ಟಣ್ಣನವರು ಈ ರೀತಿ ಏತಕ್ಕೆ ಮಾತನಾಡುತ್ತಿದ್ದಾರೆಂಬುದು ನಮಗೆ ಗೊತ್ತಿಲ್ಲ. ಅವರು ಹೆಚ್ಚು ತಿಳುವಳಿಕೆ ಇರುವಂತಹವರು.

**(ಗೊಂದಲ)**

**ಉಪ ಸಭಾಪತಿಯವರು:-** ಎಲ್ಲರೂ ದಯಮಾಡಿ ಕುಳಿತುಕೊಳ್ಳಿ.

**ಶ್ರೀ ಎನ್.ಎಸ್. ಬೋಸರಾಜು:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಮಾತನಾಡಿದ ನಂತರ ಅವರು ಮಾತನಾಡಲಿ. ಮಧ್ಯದಲ್ಲಿ ಏತಕ್ಕೆ ಈ ರೀತಿ ಅಡ್ಡಿಪಡಿಸುತ್ತಿದ್ದಾರೆ?

**(ಗೊಂದಲ)**

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ, ನಾನು ಇದನ್ನು ನಮ್ಮ ಕಾಂಗ್ರೆಸ್ ಪಕ್ಷ ಎಂದು ಮಾತನಾಡುತ್ತಿಲ್ಲ. ಆದರೆ, ಇವೊತ್ತಿನ ವಾಸ್ತವ ಪರಿಸ್ಥಿತಿಯಲ್ಲಿ ಏಜೆಂಟ್‌ಗಳು ಹುಟ್ಟಿಕೊಂಡಿರುತ್ತಾರೆ. ಬೆಂಗಳೂರಿನಲ್ಲಿ ಎಲ್ಲರೂ ಸುತ್ತಮುತ್ತಲೂ ಕುಳಿತಿರುತ್ತಾರೆ. ಅವರು ನಿನ್ನ ಸಿಂಡಿಕೇಟ್ ಮೆಂಬರ್ ಮಾಡುತ್ತೇನೆ, ತೆಗೆದುಕೊಂಡು ಬಾ. ನಿನ್ನ Vice Chancellor ಮಾಡುತ್ತೇನೆ, ತೆಗೆದುಕೊಂಡು ಬಾ, ನಿನ್ನ ರಿಜಿಸ್ಟ್ರಾರ್ ಮಾಡುತ್ತೇನೆ, ತೆಗೆದುಕೊಂಡು ಬಾ ಎಂದು ಹೇಳಿದರೆ ಅಲ್ಲಿ ನಮ್ಮ ಮಕ್ಕಳು ಓದುವುದಕ್ಕೆ ಆಗುತ್ತದೆಯೇ? ಇದನ್ನು ಏನು ಮಾಡಬೇಕೆಂದು ತಾವೇ ಹೇಳಿ. ಇರುವಂತಹ ವ್ಯವಸ್ಥೆ ಸರಿ ಹೋಗಬೇಕಲ್ಲವೇ? ಒಂದು ಯೂನಿವರ್ಸಿಟಿಯಲ್ಲಿಯೂ ಒಂದು ನೇಮಕಾತಿ ಇಲ್ಲ. ಒಂದು ಕೋರ್ಸ್ ಇಲ್ಲ. ಏನೂ ಇಲ್ಲ. ಯಾರೋ ದುಡ್ಡು ತೆಗೆದುಕೊಂಡರು, ವಿಸಿಗಳನ್ನು ನೇಮಕಾತಿ ಮಾಡಿದರು.

**(ಗೊಂದಲ)**

**ಶ್ರೀ ಪಿ.ಹೆಚ್. ಪೂಜಾರ್:-** ಮಾನ್ಯ ಸಭಾಪತಿಯವರೇ, ಮಾನ್ಯ ಪುಟ್ಟಣ್ಣನವರು ಏನು ಮಾತನಾಡುತ್ತಿದ್ದಾರೆ? ಹಾಗಾದರೆ, ಈ ಸರ್ಕಾರದಲ್ಲಿ ಎಲ್ಲವೂ ಪರಿಶುದ್ಧವಾಗಿದೆಯೇ?

**(ಗೊಂದಲ)**

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ, ನಾನು ಇರುವಂತಹ ವಾಸ್ತವ ವಿಷಯದ ಬಗ್ಗೆ ಮಾತನಾಡುತ್ತಿದ್ದೇನೆ. ಏತಕ್ಕೆ ಇವರು ಈ ರೀತಿ ಮಾತನಾಡುತ್ತಿದ್ದಾರೆ?

**(ಗೊಂದಲ)**

(ಮುಂದು)

**(968) 18.12.2024 5.00 ವೈಎಲ್-ಕೆಎಸ್** **(ಉಪ ಸಭಾಪತಿಯವರ ಉಪಸ್ಥಿತಿ)**

**ಶ್ರೀ ಟಿ.ಎ.ಶರವಣ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಪುಟ್ಟಣ್ಣನವರು ವಿಧೇಯಕದ ಮೇಲೆ ಚರ್ಚೆ ಮಾಡಲಿ, ವಿಷಯಾಂತರವಾಗುತ್ತಿದೆ.

**ಉಪ ಸಭಾಪತಿಯವರು:-** ಮಾನ್ಯ ಪುಟ್ಟಣ್ಣನವರು ಮಾತನಾಡುವಾಗ obstruct ಮಾಡುವುದು ಬೇಡ. ಸುಮ್ಮನೆ ಅವರು ಹೇಳುವುದನ್ನು ಕೇಳಿಸಿಕೊಂಡು ನೋಟ್ ಮಾಡಿಟ್ಟುಕೊಳ್ಳಿ. ನಂತರ ತಮಗೆ ಅವಕಾಶ ಸಿಕ್ಕಿದಾಗ ಕೌಂಟರ್ ಕೊಡಿ.

**ಶ್ರೀ ಪುಟ್ಟಣ್ಣ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ವಿರೋಧ ಪಕ್ಷದ ಸದಸ್ಯರು ಮಾತನಾಡುವಾಗ ನಾನು ಮಧ್ಯೆ ಎದ್ದು ನಿಂತು ಮಾತನಾಡಿಲ್ಲ.

**(ಗೊಂದಲ)**

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ, ಮೊದಲು ನಾನು ಏನು ಹೇಳುತ್ತೇನೆ ಎಂಬುದನ್ನು ಅವರು ಸಂಪೂರ್ಣವಾಗಿ ಕೇಳಿಸಿಕೊಳ್ಳಲಿ.

**ಶ್ರೀ ಎಸ್.ವ್ಹಿ.ಸಂಕನೂರ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಎಷ್ಟು ಸಲ ಎದ್ದು ನಿಂತು ಮಾತನಾಡಿದ್ದಾರೆ ಎಂಬುದು ಗೊತ್ತಿದೆ.

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ, ನಾನು ಮಾತನಾಡಿಲ್ಲ. ಆದರೆ, ವಿರೋಧ ಪಕ್ಷದ ಸದಸ್ಯರೆಲ್ಲರೂ ನಮ್ಮ ಸ್ನೇಹಿತರು. ಆದರೆ, ಮೈಸೂರಿನ ಎಂ.ಪಿ. ಏನಿದ್ದಾರೆ, ಒಂದು ಮಾತನ್ನು ಹೇಳಿದ್ದಾರೆ ನೆನಪಿದೆಯೇ? ಅದೇನೆಂದರೆ, ವೈಸ್ ಚಾನ್ಸಲರ್ ಹುದ್ದೆಗೆ ನೇಮಕಗೊಳ್ಳಬೇಕಾದರೆ suitcase ತೆಗೆದುಕೊಂಡು ಹೋದರೆ ಮಾತ್ರ ಸಹಿ ಆಗುತ್ತದೆ ಎಂದು ಹೇಳಿರುವುದನ್ನು ಕೇಳಿರಬಹುದು. ಸ್ವಲ್ಪ ನೆನಪಿಸಿಕೊಳ್ಳಲಿ.

**ಶ್ರೀ ಗೋವಿಂದರಾಜು (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅದು ಈಗ ಸಹ ನಡೆಯುತ್ತಿದೆ.

**ಡಾ. ಎಂ.ಆರ್. ಸೀತಾರಾಂ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಇಷ್ಟು ಹೊತ್ತು ವಿರೋಧ ಪಕ್ಷದವರು ಹೇಳರುವುದನ್ನು ಕೇಳಸಿಕೊಂಡಿದ್ದೇವೆ. ಈಗ ಆಡಳತ ಪಕ್ಷದವರು ಹೇಳುವುದನ್ನು ಕೇಳಸಿಕೊಳ್ಳಲಿ.

**(ಗೊಂದಲ)**

**ಶ್ರೀ ಗೋವಿಂದರಾಜು:-** ಮಾನ್ಯ ಸಭಾಪತಿಯವರೇ, **(ಗೊಂದಲ)** ಇದು ಹಿಂದಿನಿಂದಲೂ ಬಂದಿದೆ, ಇವತ್ತಿಗೂ ಇದೆ.

**(ಗೊಂದಲ)**

**ಡಾ|| ಎಂ.ಸಿ.ಸುಧಾಕರ್:-** ಮಾನ್ಯ ಸಭಾಪತಿಯವರೇ, ಕಾಂಗ್ರೆಸ್ ಸರ್ಕಾರ ಅಸ್ತಿತ್ವಕ್ಕೆ ಬಂದ ಮೇಲೆ ಅಂತಹ ವ್ಯವಸ್ಥೆ ಇಲ್ಲ. ನಮ್ಮ ಸರ್ಕಾರ ಅಸ್ತಿತ್ವಕ್ಕೆ ಬಂದಾಗಿನಿಂದ ಎಲ್ಲಿ ಬೇಕಾದರೂ ವಿಶ್ವವಿದ್ಯಾಲಯಕ್ಕೆ ನೇಮಕಗೊಳ್ಳಲು ಬರಲಿ. **(ಗೊಂದಲ)** ನಮ್ಮ ಸರ್ಕಾರ ಅಸ್ತಿತ್ವಕ್ಕೆ ಬಂದಾಗಿನಿಂದ ಖಂಡಿತವಾಗಿ suitcase ತೆಗೆದುಕೊಂಡು ಹೋಗುವಂಥ ವ್ಯವಸ್ಥೆ ಇಲ್ಲ. ನಮ್ಮ ವಿಶ್ವವಿದ್ಯಾಲಯದಲ್ಲಿ ಆ ವ್ಯವಸ್ಥೆಯಿಲ್ಲ.

**(ಗೊಂದಲ)**

**ಶ್ರೀ ಗೋವಿಂದರಾಜು:-** ಮಾನ್ಯ ಸಭಾಪತಿಯವರೇ, ಹಾಗೆಂದು ಗ್ಯಾರಂಟಿ ಕೊಡಲಿ.

**(ಗೊಂದಲ)**

**ಡಾ|| ಎಂ.ಸಿ.ಸುಧಾಕರ್:-** ಮಾನ್ಯ ಸಭಾಪತಿಯವರೇ, ಮಾನ್ಯ ಪ್ರತಾಪ್ ಸಿಂಹ ನಾಯಕ್‌ರವರು ಸಹ ಆ ವ್ಯವಸ್ಥೆ ಇಲ್ಲವೆಂದು ಹೇಳದ್ದಾರೆ.

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಿ.ಟಿ.ರವಿರವರು ಸರಿಯಾಗಿ ಮಾತನಾಡಿದ್ದಾರೆ. ನಾನು ಸತ್ಯವಾಗಿ ಹೇಳುತ್ತಿದ್ದೇನೆ. ಇಲ್ಲಿ ಯಾರೊಬ್ಬರ ವಿರುದ್ಧವು ನಾನು ಮಾತನಾಡುತ್ತಿಲ್ಲ. (ಗೊಂದಲ) ಇವತ್ತಿನ ದಿವಸ ಒಬ್ಬ ಸಿಂಡಿಕೇಟ್ ಮೆಂಬರ್ Rajiv Gandhi University of Health Sciences ಗೆ ಹೋಗಬೇಕಾದರೆ ಸುಮಾರು ರೂ.2.00 ಕೋಟಿ ಕೊಡಬೇಕು. ಯಾರು ಆ ಹಣವನ್ನು ತೆಗೆದುಕೊಳ್ಳುವುದು?

**ಶ್ರೀಮತಿ ಭಾರತಿ ಶೆಟ್ಟಿ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಯಾರು ತೆಗೆದುಕೊಳ್ಳುತ್ತಾರೆ ಎಂಬುದನ್ನು ಹೇಳಲಿ.

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ, ನನಗೆ ಗೊತ್ತಿಲ್ಲ. **(ಗೊಂದಲ)** ನಾನು ಇರುವುದನ್ನು ಹೇಳುತ್ತಿದ್ದೇನೆ. ವಿರೋಧ ಪಕ್ಷದ ಸದಸ್ಯರು ಏತಕ್ಕೆ ಉರಿದುಕೊಳ್ಳುತ್ತಿದ್ದಾರೆ.

**(ಗೊಂದಲ)**

**ಶ್ರೀ ಟಿ.ಎ.ಶರವಣ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಪುಟ್ಟಣ್ಣನವರು ಸತ್ಯವನ್ನು ಹೇಳುತ್ತಿದ್ದು, ಯಾರು ಲಂಚ ಪಡೆಯುತ್ತಿದ್ದಾರೆ ಎಂಬುದನ್ನು ಸಹ ಹೇಳಲಿ. **(ಗೊಂದಲ)** ಏಕೆಂದರೆ, ಜನರಿಗೂ ಸರಿಯಾಗಿ ಗೊತ್ತಿಲ್ಲ. **(ಗೊಂದಲ)** ಮಾನ್ಯ ಪುಟ್ಟಣ್ಣನವರು ವಾಸ್ತವಾಂಶ ಬಗ್ಗೆ ಇಷ್ಟೊಂದು ಚೆನ್ನಾಗಿ ಮಾತನಾಡುತ್ತಿದ್ದಾರೆ. ಯಾರೆಂಬುದನ್ನು ಸಹ ಹೇಳಲಿ.

**ಶ್ರೀ ಸಂತೋಷ್ ಎಸ್. ಲಾಡ್ (ಕಾರ್ಮಿಕ ಸಚಿವರು):-** ಮಾನ್ಯ ಶರವಣನವರೇ, ಮಾನ್ಯ ಪುಟ್ಟಣ್ಣನವರು ಯಾರನ್ನು ಸಹ allegation ಮಾಡುತ್ತಿಲ್ಲ, ಜನರಲ್ ಆಗಿ ಹೇಳುತ್ತಿದ್ದಾರೆ.

**ಶ್ರೀ ಟಿ.ಎ.ಶರವಣ:-** ಮಾನ್ಯ ಸಭಾಪತಿಯವರೇ, ವಾಸ್ತವಾಂಶದ ಬಗ್ಗೆ ಹೇಳುತ್ತಿದ್ದಾರೆ ಹೇಳಲಿ.

**ಶ್ರೀ ಸಂತೋಷ್ ಎಸ್. ಲಾಡ್:-** ಮಾನ್ಯ ಸಭಾಪತಿಯವರೇ, ಮಾನ್ಯ ಪುಟ್ಟಣ್ಣನವರು ಮಾತನಾಡುತ್ತಿದ್ದು, ಅವರಿಗೆ ಮಾತನಾಡಲು ಅವಕಾಶ ನೀಡಲಿ. ದಯವಿಟ್ಟು ಮಾನ್ಯ ಶರವಣನವರು ಕುಳಿತುಕೊಳ್ಳಲಿ.

**ಶ್ರೀ ಸಿ.ಟಿ.ರವಿ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಪುಟ್ಟಣ್ಣನವರು ಸರ್ಕಾರ ನಡೆಸುತ್ತಿರುವವರ ಬಗ್ಗೆ ಎಷ್ಟು ಅಸಹನೆ ಇದೆ ಎಂಬುದನ್ನು ವ್ಯಕ್ತಪಡಿಸುತ್ತಿದ್ದು, ಅವರು ಮಾತನಾಡಲಿ.

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ, ಖಂಡಿತ ಮಾತನಾಡುತ್ತೇನೆ.

**ಶ್ರೀ ಸಿ.ಟಿ.ರವಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಪುಟ್ಟಣ್ಣನವರ ದೃಷ್ಟಿಯಲ್ಲಿ ಸಚಿವರು,...

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ, ‘ಘನತೆವೆತ್ತ’ ಹೆಸರನ್ನು ಹೇಳಬೇಡಿ ಎಂದು ಹೇಳಿರುವುದರಿಂದ ನಾನು ಅವರ ಹೆಸರನ್ನು ಹೇಳುವುದಿಲ್ಲ.

**ಉಪ ಸಭಾಪತಿಯವರು:–** ಮಾನ್ಯ ಪುಟ್ಟಣ್ಣನವರೇ, ವಿರೋಧ ಪಕ್ಷದ ಸದಸ್ಯರನ್ನು ಚುಚ್ಚಿ ಮಾತನಾಡಿ ಮೈ ಮೇಲೆ ಎಳೆದುಕೊಳ್ಳುವುದು ಬೇಡ. ವಿಚಾರಗಳನ್ನು ಮಂಡಿಸಿ ಅಷ್ಟೇ. ಚುಚ್ಚು ಮಾತುಗಳನಾಡುವುದರ ಮೂಲಕ ವಿರೋಧ ಪಕ್ಷದ ಸದಸ್ಯರನ್ನು ಎಬ್ಬಿಸಿ, ಮತ್ತೆ ಕೂರಿಸಿ ಎಂದರೆ ನನಗೆ ಆಗುವುದಿಲ್ಲ. ನೇರವಾಗಿ ವಿಧೇಯಕದ ಮೇಲೆ ಮಾತನಾಡಿ.

**ಶ್ರೀ ಪುಟ್ಟಣ್ಣ:–** ಮಾನ್ಯ ಸಭಾಪತಿಯವರೇ, VTU (Visvesvaraya Technological University) ನ ಸಿಂಡಿಕೇಟ್ ಸದಸ್ಯರನ್ನು ನೇಮಕ ಮಾಡಲು ಸುಮಾರು ಒಂದೂವರೆ ಕೋಟಿ ರೂಪಾಯಿಯಿಂದ ಎರಡು ಕೋಟಿ ರೂಪಾಯಿ ತೆಗೆದುಕೊಳ್ಳುತ್ತಾರೆ. ಉಳಿದಂತೆ ನಾರ್ಮಲ್ ಆಗಿರುವಂಥ ವಿಶ್ವವಿದ್ಯಾಲಯಕ್ಕೆ ಸುಮಾರು ಒಂದು ಕೋಟಿ ರೂಪಾಯಿ ಹತ್ತಿಬಿಟ್ಟಿದೆ. ಪಾಪ! ಸಿಂಡಿಕೇಟ್ ಮೆಂಬರ್‌ಗೆ ಸಹ ಆ ವಿಶ್ವವಿದ್ಯಾಲಯದ ಪರಿಸ್ಥಿತಿ ಏನೆಂಬುದು ಸರಿಯಾಗಿ ಗೊತ್ತಿಲ್ಲದ ಪ್ರಯುಕ್ತ ತಿಳಿದಿಲ್ಲ. ಎಲ್ಲರೂ ಹಣ ಕೊಟ್ಟು ನೇಮಕಗೊಂಡು 'ಏನಪ್ಪಾ, ಕುಳಿತುಕೊಳ್ಳುವುದಕ್ಕೆ ಛೇರ್ ಇಲ್ಲ' ಎಂದು ಹುಡುಕಾಡುತ್ತಿದ್ದು, ಅವರೇ ಛೇರ್ ಎತ್ತುಕೊಂಡು ಹೋಗಿ ಕುಳಿತುಕೊಳ್ಳಬೇಕು.

**ಶ್ರೀ ಗೋವಿಂದರಾಜು:–** ಮಾನ್ಯ ಸಭಾಪತಿಯವರೇ, ರದ್ದು ಮಾಡಲಿ.

**ಶ್ರೀ ಪುಟ್ಟಣ್ಣ:–** ಮಾನ್ಯ ಸಭಾಪತಿಯವರೇ, ಹೌದು. ಅದನ್ನೇ ಇಲ್ಲಿ ಮಾಡಿರುವುದು.

**ಶ್ರೀ ಗೋವಿಂದರಾಜು:–** ಮಾನ್ಯ ಸಭಾಪತಿಯವರೇ, ರದ್ದುಪಡಿಸಲು ಆಕ್ಷೇಪಣೆ ಇಲ್ಲ, ರದ್ದು ಮಾಡಲಿ. ಇಲ್ಲದಿದ್ದರೆ ಮೂಲಸೌಕರ್ಯ ಕೊಡಲಿ. ಇಲ್ಲದಿದ್ದರೆ ರದ್ದುಪಡಿಸಲಿ. ಅದನಾದರೂ ಮಾಡಲಿ.

**ಶ್ರೀ ಪುಟ್ಟಣ್ಣ:–** ಮಾನ್ಯ ಸಭಾಪತಿಯವರೇ, ಮಾನ್ಯ ಗೋವಿಂದರಾಜುರವರು ಈಗ ಸರಿಯಾದ ದಾರಿಗೆ ಬಂದರು. ಅದನ್ನು ರದ್ದು ಮಾಡಬೇಕು.

**ಶ್ರೀ ಗೋವಿಂದರಾಜು:–** ಮಾನ್ಯ ಸಭಾಪತಿಯವರೇ, ಹೌದು. ರದ್ದುಪಡಿಸಲಿ.

**ಉಪ ಸಭಾಪತಿಯವರು:–** ಮಾನ್ಯ ಗೋವಿಂದರಾಜುರವರೇ, ತಾವು ಮಾತನಾಡಿ ಆಗಿದೆ ಅಲ್ಲವೇ ಕುಳಿತುಕೊಳ್ಳಿ.

**ಶ್ರೀ ಪುಟ್ಟಣ್ಣ:–** ಮಾನ್ಯ ಸಭಾಪತಿಯವರೇ, ಮಾನ್ಯ ಗೋವಿಂದರಾಜುರವರು ಹೇಳಿರುವುದನ್ನು ಸ್ವಾಗತ ಮಾಡುತ್ತೇನೆ.

**ಉಪ ಸಭಾಪತಿಯವರು:-** ಮಾನ್ಯ ಪುಟ್ಟಣ್ಣನವರೇ, ಈಗಾಗಲೇ ಈ ವಿಧೇಯಕದ ಮೇಲೆ ಚರ್ಚೆ ಪ್ರಾರಂಭಿಸಿ ಸುಮಾರು ಒಂದು ಗಂಟೆ ಸಮಯವಾಗಿದ್ದು, ಇನ್ನು ಎಂಟು ವಿಧೇಯಕದ ಮೇಲೆ ಚರ್ಚೆಯಾಗಬೇಕಾಗಿದ್ದು, ಅದರ ಮೇಲೆ ಮಾತನಾಡಬೇಕೇ ಬೇಡವೇ? ವಿಧೇಯಕದ ಮೇಲೆ ಬಾಕಿ ಇರುವ ವಿಚಾರದ ಬಗ್ಗೆ ಹೇಳಿ. ಯಾವುದೋ ವಿಚಾರ ಹೇಳಿ ಸಮಯ ವ್ಯರ್ಥ ಮಾಡುವುದು ಬೇಡ.

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ, ಸಿಂಡಿಕೇಟ್ ಸದಸ್ಯರ ನೇಮಕ ಕುರಿತು ಮಾತನಾಡಿದ್ದು, ವೈಸ್ ಚಾನ್ಸಲರ್ ನೇಮಕಾತಿ ಬಗ್ಗೆ **(ಗೊಂದಲ)** ನಾನು ಮಾತನಾಡಬೇಕಲ್ಲವೇ? ಆಗಲಿ. ನಾನೇ ಹಣ ತೆಗೆದುಕೊಳ್ಳುತ್ತಿದ್ದೇನೆ ಅಂದುಕೊಳ್ಳಲಿ.

**ಉಪ ಸಭಾಪತಿಯವರು:-** ಮಾನ್ಯ ಪುಟ್ಟಣ್ಣನವರೇ, ಏನೇನೋ ಮಾತನಾಡುವುದು ಬೇಡ. ವಿಧೇಯಕದ ಕುರಿತು ಮಾತನಾಡಿ. ಮಾನ್ಯ ಮುಖ್ಯಮಂತ್ರಿಗಳನ್ನು ನೇಮಕ ಮಾಡಬೇಕೇ ಅಥವಾ ಬೇಡವೇ ಎಂಬುದರ ಬಗ್ಗೆ ಮಾತ್ರ ಮಾತನಾಡಿ. ಅದನ್ನು ಬಿಟ್ಟು ಎಲ್ಲೆಲ್ಲಿಯೋ ಮಾತನಾಡಲು ಹೋಗಬೇಡಿ.

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ, ವೈಸ್ ಚಾನ್ಸಲರ್ ನೇಮಕಾತಿಗಾಗಿ ಸುಮಾರು ರೂ.5.00 ಕೋಟಿಗಳಿಂದ ರೂ.20.00 ಕೋಟಿವರೆಗೂ ತಲುಪಿದೆ. ನಾನು ನೇರವಾಗಿ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರಿಗೆ ಅಭಿನಂದಿಸುತ್ತೇನೆ. ಏಕೆಂದರೆ, ಇದುವರೆವಿಗೂ ಕುಲಾಧಿಪತಿಗಳಿದ್ದರೂ,... ಬೇರೆ ರಾಜ್ಯಗಳಿಂದ ಐ.ಎ.ಎಸ್. ಸುಮಾರು 30 ರಿಂದ 35 ವರ್ಷಗಳ ಸೇವಾವಧಿಯಲ್ಲಿ ನಮ್ಮ ರಾಜ್ಯಕ್ಕೂ ಸಹ ಬಂದು ಇಲ್ಲಿಯ ಕಷ್ಟ ಸುಖವನ್ನು ತಿಳಿದುಕೊಂಡು ಸುಮಾರು 5 ರಿಂದ 10 ವರ್ಷಗಳ ಸೇವೆ ಸಲ್ಲಿಸುತ್ತಾರೆ. ಈ ರೀತಿ ಬೇರೆ ರಾಜ್ಯಗಳಿಂದ ನಮ್ಮ ರಾಜ್ಯಕ್ಕೆ ಬಂದು ಸ್ವಲ್ಪ ವರ್ಷಗಳ ಮಟ್ಟಿಗೆ ಸೇವೆ ಸಲ್ಲಿಸಿ ಹೋಗುವವರಿಗೆ ಯಾವ ಗ್ರಾಮೀಣಾಭಿವೃದ್ಧಿಯಲ್ಲಿ ಯಾರು ನೇಮಕಗೊಂಡಿದ್ದಾರೆ, ಏನೆಂಬುದು ಹೇಗೆ ಗೊತ್ತಾಗುತ್ತದೆ? ನಾನು ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರ ಬಗ್ಗೆ ಮಾತನಾಡುತ್ತಿಲ್ಲ. ಆದರೆ, ಒಬ್ಬ ಮುಖ್ಯಮಂತ್ರಿಯಾಗುವವರಿಗೆ ಈ ರಾಜ್ಯದ ಪ್ರತಿ ಮೂಲೆಯಲ್ಲಿರುವಂಥ ತಾಲ್ಲೂಕು, ಜಿಲ್ಲೆ ಮತ್ತು ಹಳ್ಳಿಯ ಬಗ್ಗೆ ಒಂದು ಕಲ್ಪನೆ ಇದ್ದು, ಅಲ್ಲಿಯ ವಾಸ್ತವ ಸ್ಥಿತಿ ಏನೆಂಬುದು ತಿಳಿದಿರುತ್ತದೆ. ಆದರೆ, ಈ ರೀತಿ ಬೇರೆ ರಾಜ್ಯದಿಂದ ಬರುವವರಿಗೆ ಏಟ್ರಿಯಾ ಹೋಟೆಲ್, The Capitol Hotel ಗೆ ಯಾರನ್ನಾದರೂ ಕರೆಸಿಕೊಂಡು ಅದರ ಬಗ್ಗೆ ತಿಳಿದುಕೊಂಡು ಮುಂದಿನ ಕೆಲಸ ಮಾಡಬೇಕು. ನಮ್ಮ ಮಕ್ಕಳಾಗಲೀ, ಅವರ ಮಕ್ಕಳಾಗಲೀ ಮುಂದೆ ಓದಬೇಕಾಗಿದೆ.

**ಶ್ರೀ ಟಿ.ಎ.ಶರವಣ:–** ಮಾನ್ಯ ಪುಟ್ಟಣ್ಣನವರೇ ಹೌದಪ್ಪಾ! ಮುಂದೆ ಓದಬೇಕಪ್ಪಾ!

**ಉಪ ಸಭಾಪತಿಯವರು:–** ಮಾನ್ಯ ಪುಟ್ಟಣ್ಣನವರೇ, ತಮ್ಮ ಮಾತನ್ನು ಮುಗಿಸಿ.

**ಶ್ರೀ ಪುಟ್ಟಣ್ಣ:–** ಮಾನ್ಯ ಸಭಾಪತಿಯವರೇ, ನಾನು ನನ್ನ ಮಾತನ್ನು ಮುಗಿಸುತ್ತಿದ್ದೇನೆ. ಮತ್ತೆ ವಿರೋಧ ಪಕ್ಷದವರು ಮಧ್ಯೆ ಮಾತನಾಡಿದರೆ, ನಾನು ಮತ್ತೆ ನನ್ನ ಮಾತನ್ನು ಎಳೆಯುತ್ತೇನೆ. ಆಮೇಲೆ ಯಾರು ಎನ್ನುವವರ ಹೆಸರನ್ನು ಸಹ ಹೇಳಿ ಬಿಡುತ್ತೇನೆ. ಈಗಲೇ ಹೇಳಿದ್ದೇನೆ. ಹೆಸರನ್ನು ಸಹ ಹೇಳಿಬಿಡುತ್ತೇನೆ.

**(ಗೊಂದಲ)**

**ಶ್ರೀ ಟಿ.ಎ.ಶರವಣ:–** ಮಾನ್ಯ ಸಭಾಪತಿಯವರೇ, ಅಷ್ಟೆಲ್ಲಾ ಹೇಳಿದ್ದಾರೆ, ಅದನ್ನು ಸಹ ಹೇಳಲಿ.

**ಶ್ರೀ ಪುಟ್ಟಣ್ಣ:–** ಮಾನ್ಯ ಸಭಾಪತಿಯವರೇ, ಅವರಿಗೆ ಸುಮ್ಮನೆ ಇರಲು ಹೇಳಿ **(ಗೊಂದಲ)** ನಾನೇನು ಹೆದರಿಕೊಳ್ಳುವುದಿಲ್ಲ. ನಾನು ಸಹ ವಿದ್ಯಾರ್ಥಿ ಚಳುವಳಿಯಿಂದ ಮೇಲೆ ಬಂದಿರುವವನಾಗಿದ್ದು, ವಿದ್ಯಾರ್ಥಿಗಳ ಬಗ್ಗೆ ನಮ್ಮದೊಂದು commitment ಇದ್ದು, ಅವರಿಗೂ ಸಹ ಇದೆ ಎಂದು ಹೇಳುತ್ತಿದ್ದೇನೆ ಅಷ್ಟೇ. ನಾವು, ಅವರೆಲ್ಲರೂ ಸೇರಿ ಒಟ್ಟಿಗೆ ಮಾಡಬೇಕೆಂಬ ದೃಷ್ಟಿಯಿಂದ ಹೇಳುತ್ತಿದ್ದೇನೆ ಅಷ್ಟೇ. ಅದನ್ನು ಸರಿಪಡಿಸಬೇಕಲ್ಲವೇ?

**ಶ್ರೀ ಸಿ.ಟಿ.ರವಿ:–** ಮಾನ್ಯ ಸಭಾಪತಿಯವರೇ, ಕಾಲೇಜಿಗೆ ಹೋಗುವ ಅವಶ್ಯಕತೆ ಇಲ್ಲ, ಮನೆ ಬಾಗಿಲಿಗೆ ಪ್ರಮಾಣಪತ್ರವನ್ನು ತಂದು ಕೊಡುವಂಥ ವ್ಯವಸ್ಥೆ ಇದ್ದು, ಅದಕ್ಕೂ ಜನರಿದ್ದಾರೆ ಅಂತೆ?

**ಶ್ರೀ ನಸೀರ್ ಅಹ್ಮದ್ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾನ್ಯ ಪ್ರಧಾನಮಂತ್ರಿಗಳಾದ ಶ್ರೀ ನರೇಂದ್ರ ಮೋದಿಯವರ ಹಾಗೆ ಇದ್ದಾರೆ.

**ಉಪ ಸಭಾಪತಿಯವರು:–** ಮಾನ್ಯ ಸಿ.ಟಿ.ರವಿರವರೇ, ತಾವು ಕುಳಿತುಕೊಳ್ಳಿ. ಮಾನ್ಯ ಪುಟ್ಟಣ್ಣನವರೇ, ತಮ್ಮ ಮಾತನ್ನು ಮುಗಿಸಿ.

**ಶ್ರೀ ಪ್ರಿಯಾಂಕ್ ಖರ್ಗೆ:–** ಮಾನ್ಯ ಸಭಾಪತಿಯವರೇ, Master's degree in Entire Political Science ಎಂದಿದೆ. ಅದು ಯಾರದು?

**ಶ್ರೀ ಸಿ.ಟಿ.ರವಿ:–** ಮಾನ್ಯ ಸಭಾಪತಿಯವರೇ, ಯಾರೆಂಬುದನ್ನು ಹೇಳಲಿ.

**ಶ್ರೀಮತಿ ಭಾರತಿ ಶೆಟ್ಟಿ:-** ಮಾನ್ಯ ಸಭಾಪತಿಯವರೇ, ಬಹಳ ಚೆನ್ನಾಗಿದೆ ಹೇಳಲಿ. ಹಾಗಾದರೆ, ಮಾನ್ಯ ಪ್ರಿಯಾಂಕ್ ಖರ್ಗೆಯವರದು ಏನಿದೆ?

**ಶ್ರೀ ಸಿ.ಟಿ.ರವಿ:-** ಮಾನ್ಯ ಸಭಾಪತಿಯವರೇ, ನಾನು ಡಿಪ್ಲೋಮಾದಲ್ಲಿ ತೇರ್ಗಡೆಯಾಗಿದ್ದೇನೆ.

**ಶ್ರೀಮತಿ ಭಾರತಿ ಶೆಟ್ಟಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಪ್ರಿಯಾಂಕ್ ಖರ್ಗೆಯವರು ಹೆಣ್ಣು ಮಕ್ಕಳ ಬಗ್ಗೆ ಏನು ಮಾತನಾಡಿದ್ದಾರೆ ಎಂಬುದನ್ನು ಹೇಳಲಿ.

**(ಗೊಂದಲ)**

**ಶ್ರೀ ಪ್ರಿಯಾಂಕ್ ಖರ್ಗೆ:-** ಮಾನ್ಯ ಸಭಾಪತಿಯವರೇ, I have a Diploma in Graphic Design. ನನ್ನ ಪ್ರಮಾಣಪತ್ರ ನಕಲಿಯೇ? I am a Graphic Designer. **(ಗೊಂದಲ)** ಚರ್ಚೆಯಾಗಲಿ.

**ಶ್ರೀ ಟಿ.ಎ.ಶರವಣ:-** ಮಾನ್ಯ ಸಭಾಪತಿಯವರೇ, ಅವರು ಯಾವುದನ್ನು ಮುಚ್ಚಿಟ್ಟಿಲ್ಲ.

**(ಗೊಂದಲ)**

**ಶ್ರೀ ಪ್ರಿಯಾಂಕ್ ಖರ್ಗೆ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರೇ,...(ಗೊಂದಲ) What is the problem?

**ಶ್ರೀಮತಿ ಭಾರತಿ ಶೆಟ್ಟಿ:-** ಮಾನ್ಯ ಸಭಾಪತಿಯವರೇ, ಈ ದೇಶದ ಮಾನ್ಯ ಪ್ರಧಾನಮಂತ್ರಿಗಳಾದ ಶ್ರೀ ನರೇಂದ್ರ ಮೋದಿಯವರ ಬಗ್ಗೆ ಮಾತನಾಡುತ್ತಾರೆ. **(ಗೊಂದಲ)** ಏನು ಸತ್ಯ ಅವರದು? ಯಾವುದು ಸತ್ಯ?

**(ಗೊಂದಲ)**

**ಶ್ರೀ ಪ್ರಿಯಾಂಕ್ ಖರ್ಗೆ:-** ಮಾನ್ಯ ಸಭಾಪತಿಯವರೇ, ಮರೆ ಮಾಚಿರುವವರು ಯಾರು? ಸತ್ಯಕ್ಕೆ ದೂರವಾದುದನ್ನು ಹೇಳಿರುವವರು ಯಾರು?

**ಶ್ರೀ ಸಿ.ಟಿ.ರವಿ:-** ಮಾನ್ಯ ಸಭಾಪತಿಯವರೇ, ಆಡಳಿತ ಪಕ್ಷದವರು ಮಾತನಾಡುವುದನ್ನು ಅರಗಿಸಿಕೊಳ್ಳಲು ಆಗುವುದಿಲ್ಲ.

**(ಗೊಂದಲ)**

**ಶ್ರೀಮತಿ ಭಾರತಿ ಶೆಟ್ಟಿ:-** ಮಾನ್ಯ ಸಭಾಪತಿಯವರೇ, ಸಮಾಜಕ್ಕೆ ಅವರೇನು ಮಾಡಿದ್ದಾರೆ?

**(ಗೊಂದಲ)**

**ಶ್ರೀ ಪ್ರಿಯಾಂಕ್ ಖರ್ಗೆ:-** ಮಾನ್ಯ ಸಭಾಪತಿಯವರೇ, ನಾನು 6ನೇ ತರಗತಿಯಲ್ಲಿ ಫೇಲ್ ಆಗಿದ್ದೇನೆಯೇ, 10ನೇ ತರಗತಿಯಲ್ಲಿ ಫೇಲ್ ಆಗಿದ್ದೇನೆಯೇ, ನಾನು Diploma in Graphic Design ಮಾಡಿದ್ದೇನಾ, ನಾನು animator ನ, ನನಗೆ National Law School of India University ನಲ್ಲಿ ಅಡ್ಮಿಷನ್ ಸಿಕ್ಕಿದೆಯೇ? ಅವೆಲ್ಲವೂ ಕೂಡ ಬಹಿರಂಗವಾಗಿದೆ. We will discuss that also. ಮಾನ್ಯ ಸದಸ್ಯರು ಡಿಗ್ರಿಗಳು ಹೇಗೆ ಬರುತ್ತಿವೆ ಎಂದು ಕೇಳಿದ ಪ್ರಯುಕ್ತ ಕೇಂದ್ರ ಸಚಿವರಾದ ಶ್ರೀ ಅಮೀಶ್ ಶಾ ರವರು Master's degree in Entire Political Science ಎನ್ನುವುದನ್ನು ತೋರಿಸಿದ್ದು, ಆ ವಿಷಯವೇ ನನಗೆ ಗೊತ್ತಿಲ್ಲ!

**ಶ್ರೀಮತಿ ಭಾರತಿ ಶೆಟ್ಟಿ:-** ಮಾನ್ಯ ಸಭಾಪತಿಯವರೇ, ಗೊತ್ತಿಲ್ಲವೆಂದರೆ,...

**(ಗೊಂದಲ)**

**ಶ್ರೀ ಸಿ.ಟಿ.ರವಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಪ್ರಿಯಾಂಕ್ ಖರ್ಗೆಯವರಿಗೆ ಗೊತ್ತಿಲ್ಲವೆಂದರೆ ಸುಪ್ರೀಂ ಕೋರ್ಟ್ ಮೊರೆ ಹೋಗಬಹುದು.

**ಶ್ರೀ ಪ್ರಿಯಾಂಕ್ ಖರ್ಗೆ:-** ಮಾನ್ಯ ಸಭಾಪತಿಯವರೇ, ಅವರಿಗೆ ಗೊತ್ತಿದೆಯೇ?

**(ಗೊಂದಲ)**

**ಉಪ ಸಭಾಪತಿಯವರು:-** ಮಾನ್ಯ ಪ್ರಿಯಾಂಕ್ ಖರ್ಗೆಯವರೇ, ದಯವಿಟ್ಟು ಕುಳಿತುಕೊಳ್ಳಿ. ನೀವೇ ಸರ್ಕಾರ. ವಿಧೇಯಕಕ್ಕೆ ಸಂಬಂಧಪಟ್ಟ ಹಾಗೆ ಚರ್ಚೆ ಮಾಡಿ.

**ಶ್ರೀ ಸಿ.ಟಿ.ರವಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಖರ್ಗೆಯವರೇ, ಲೋಕಸಭೆ ಹಾಗೂ ರಾಜ್ಯಸಭೆ ಇರಲಿ, ಮನಸ್ಸಿಗೆ ಬಂದಾಗೆ ಮಾತನಾಡನಾಡಲು ಹೋಗಬಾರದು.

**(ಗೊಂದಲ)**

**ಶ್ರೀ ಪ್ರಿಯಾಂಕ್ ಖರ್ಗೆ:-** ಕೇಂದ್ರ ಸಚಿವರಾದ ಶ್ರೀ ಅಮಿತ್ ಶಾ ರವರು ಡಿಗ್ರಿ ವಿರೋಧ ಮಾಡಿರುವುದು ಗೊತ್ತಿಲ್ಲವೇ?

**(ಗೊಂದಲ)**

**ಶ್ರೀಮತಿ ಭಾರತಿ ಶೆಟ್ಟಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಪ್ರಧಾನಮಂತ್ರಿಗಳಾದ ಶ್ರೀ ನರೇಂದ್ರ ಮೋದಿಯವರ ಬಗ್ಗೆ ಮಾತನಾಡುತ್ತಾರೆ.

**(ಗೊಂದಲ)**

**ಉಪ ಸಭಾಪತಿಯವರು:-** ಮಾನ್ಯ ಪುಟ್ಟಣ್ಣನವರೇ, ಮಾನ್ಯ ಪ್ರಿಯಾಂಕ್ ಖರ್ಗೆಯವರೇ, ಇದಕ್ಕೆ ಸಂಬಂಧಪಟ್ಟಂತ ವಿಚಾರಗಳನ್ನು ಮಾತ್ರ ಮಾತನಾಡಿ. ಕೇಂದ್ರದ ವಿಚಾರಗಳನ್ನು ಇದಕ್ಕೆ link ಮಾಡಬೇಡಿ. You are the Government. ನೀವು ಅವರಿಗೆ ಮಾತನಾಡಲು ಅವಕಾಶ ಕೊಡಿ.

**(ಗೊಂದಲ)**

**ಶ್ರೀ ಸಿ.ಟಿ.ರವಿ:-** ಮಾನ್ಯ ಸಭಾಪತಿಯವರೇ, ಮಾತು ಎತ್ತಿದ್ದರೆ, ಎಲ್ಲಿ ಕುಣಿಯುತ್ತಿದ್ದರು ಎಂಬುದು ಗೊತ್ತಿಲ್ಲವೇ?

**ಉಪ ಸಭಾಪತಿಯವರು:-** ಮಾನ್ಯ ಪ್ರಿಯಾಂಕ್ ಖರ್ಗೆರವರೇ, ತಾವು ಕುಳಿತುಕೊಂಡು ಮಾನ್ಯ ಪುಟ್ಟಣ್ಣನವರಿಗೆ ಮಾತನಾಡಲು ಅವಕಾಶ ಕೊಡಿ. ಈಗಾಗಲೇ ಬಿಲ್ ಪಾಸ್ ಮಾಡಿಕೊಂಡಿದ್ದೀರಿ, ಬಿಲ್ ಇಟ್ಟಿದ್ದೀರಿ, ಆ ರೀತಿ ಇದ್ದಾಗ ವಿಧೇಯಕದ ಮೇಲೆ ಮಾತನಾಡಲು ಅವಕಾಶ ಕೊಡದೇ ತಾವೇ interfere ಆದರೆ ಹೇಗೆ? No, this is not right.

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಹಾಗಾದರೆ, ಅವರು ಏತಕ್ಕೆ ಮಧ್ಯೆ ಎದ್ದು ನಿಂತು ಮಾತನಾಡಬೇಕು? ವಿರೋಧ ಪಕ್ಷದವರು ಸಹ ಮಾನ್ಯ ಪುಟ್ಟಣ್ಣನವರು ಮಾತನ್ನು ಮುಗಿಸಿದ ಮೇಲೆ ಮಾತನಾಡಬೇಕಲ್ಲವೇ?

**ಉಪ ಸಭಾಪತಿಯವರು:-** ಮಾನ್ಯ ಸಭಾನಾಯಕರೇ, ತಮ್ಮ ಮಾತು ಮುಗಿದಿದೆ. ಕುಳಿತುಕೊಳ್ಳಿ.

**ಶ್ರೀ ಎಸ್.ವ್ಹಿ.ಸಂಕನೂರ:-** ಮಾನ್ಯ ಸಭಾಪತಿಯವರೇ, ಮಾನ್ಯ ಪ್ರಧಾನಮಂತ್ರಿಯವರ ಬಗ್ಗೆ, ಅಮಿತ್ ಶಾ ರವರ ಬಗ್ಗೆ ಮಾತನಾಡಿದ್ದಾರೆ. ಅದನ್ನು ಕಡತದಿಂದ ತೆಗೆಯಿಸಿ.

**ಉಪ ಸಭಾಪತಿಯವರು:-** ಮಾನ್ಯ ಸಂಕನೂರುರವರೇ, ನಾನು ಅದರ ಬಗ್ಗೆ ಪರಿಶೀಲನೆ ಮಾಡುತ್ತೇನೆ ಕುಳಿತುಕೊಳ್ಳಿ.

**ಶ್ರೀಮತಿ ಭಾರತಿ ಶೆಟ್ಟಿ:-** ಮಾನ್ಯ ಸಭಾಪತಿಯವರೇ, ಘನತೆವೆತ್ತ ರಾಜ್ಯಪಾಲರಿಗೆ ಅವಮಾನ ಮಾಡಿದಾಗಿತ್ತು

**(ಗೊಂದಲ)**

**ಉಪ ಸಭಾಪತಿಯವರು:-** ಆ ಪದವು ಸಮಂಜಸವೇ ಅಥವಾ ಅಸಮಂಜಸವೇ ಎಂಬುದನ್ನು ಪರಿಶೀಲನೆ ಮಾಡುತ್ತೇನೆ. ತದನಂತರ ಅಸಮಂಜಸವಾಗಿದ್ದರೆ, ಅದನ್ನು ತೆಗೆಯುವಂತಹ ವ್ಯವಸ್ಥೆಯನ್ನು ಮಾಡೋಣ.

(ಮುಂದು)

**(969) 18.12.2024 (5.10) ಎಸ್‌ಕೆ-ಕೆಎಸ್** **(ಉಪ ಸಭಾಪತಿಯವರ ಉಪಸ್ಥಿತಿ)**

**(ಗೊಂದಲ)**

**ಶ್ರೀ ಬಿ.ಕೆ. ಹರಿಪ್ರಸಾದ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ,..

**(ಗೊಂದಲ)**

**ಉಪ ಸಭಾಪತಿಯವರು:-** ಅವರು yield, ಆದರೆ, ತಾವು ಮಾತನಾಡಿ.

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ...

**ಉಪ ಸಭಾಪತಿಯವರು:-** ಮಾನ್ಯ ಪುಟ್ಟಣ್ಣನವರೇ, ಕುಳಿತುಕೊಳ್ಳಿ.

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ತಾವು ರೇಗುವುದಕ್ಕೆ ಹೋಗಬೇಡಿ. ಅವರು yield ಆಗಿದ್ದಾರೆ.

**ಉಪ ಸಭಾಪತಿಯವರು:-** ಮಾನ್ಯ ಹರಿಪ್ರಸಾದ್‌ರವರೇ, ಕುಳಿತುಕೊಳ್ಳಿ. ಮಾನ್ಯ ಪುಟ್ಟಣ್ಣನವರೇ conclude ಮಾಡಿ ಕುಳಿತುಕೊಳ್ಳಿ.

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ತಾವು ಅವರಿಗೆ allow ಮಾಡುತ್ತಿದ್ದೀರಾ?

**ಉಪ ಸಭಾಪತಿಯವರು:-** ಮಾನ್ಯ ಹರಿಪ್ರಸಾದ್‌ರವರೇ, ಕುಳಿತುಕೊಳ್ಳಿ. ಯಾವಾಗಲೂ ತಾವು ಅವರು yield ಆಗದೇ ಮಾತನಾಡುವುದಕ್ಕೆ target ಮಾಡುತ್ತೀರಾ.

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಅವರು yield ಆಗುತ್ತಿದ್ದಾರೆ.

**ಉಪ ಸಭಾಪತಿಯವರು:-** ಮಾನ್ಯ ಹರಿಪ್ರಸಾದ್‌ರವರೇ, ತಾವು discipline ಕಲಿಯಿರಿ. ಮಾನ್ಯ ಪುಟ್ಟಣ್ಣನವರೇ, ತಾವು ಮಾತನಾಡಿ.

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ನಾನು ಚೆನ್ನಾಗಿ ಕಲಿತಿದ್ದೇನೆ.

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಅವರನ್ನು ಮೊದಲು control ಮಾಡಿ.

**ಉಪ ಸಭಾಪತಿಯವರು:-** ಮಾನ್ಯ ಹರಿಪ್ರಸಾದ್‌ರವರೇ, ಕುಳಿತುಕೊಳ್ಳಿ. ಮಾನ್ಯ ಪುಟ್ಟಣ್ಣ ಮಾತನಾಡಿ.

**ಶ್ರೀ ಬಿ.ಕೆ. ಹರಿಪ್ರಸಾದ್:-** ಅವರು ಅವರಿಗೆ ಹೇಳುತ್ತಿಲ್ಲ. ಸರ್ಕಾರಕ್ಕೆ ಹೇಳುತ್ತಿದ್ದಾರೆ.

**ಉಪ ಸಭಾಪತಿಯವರು:-** ಮಾನ್ಯ ಹರಿಪ್ರಸಾದ್‌ರವರೇ, ಎಲ್ಲರನ್ನೂ ಕೂರಿಸಬೇಕಲ್ಲವೇ?

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ತಾವು ಅವರಿಗೆ ಅವಕಾಶ ಮಾಡಿಕೊಡುತ್ತೀರಾ.

**ಉಪ ಸಭಾಪತಿಯವರು:-** ಮಾನ್ಯ ಹರಿಪ್ರಸಾದ್‌ರವರೇ, ಅವರಿಗೆ ಅವಕಾಶ ಮಾಡಿಕೊಡುತ್ತೀರಿ ಇವರಿಗೆ ಅವಕಾಶ ಮಾಡಿಕೊಡುತ್ತೀರಿ ಎಂದು ಯಾವಾಗಲೂ ಹೇಳುತ್ತಿರುತ್ತೀರಿ.

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಹರಿಪ್ರಸಾದ್‌ರವರೇ, ಅವರಿಗೆ ಅವಕಾಶ ಮಾಡಿಕೊಟ್ಟಿರುವ ಹಾಗೇ ನನಗೂ ಮಾತನಾಡುವುದಕ್ಕೆ ಅವಕಾಶ ಮಾಡಿಕೊಡಿ.

**ಉಪ ಸಭಾಪತಿಯವರು:-** ಮಾನ್ಯ ಹರಿಪ್ರಸಾದ್‌ರವರೇ, ತಮಗೆ ಮಾತನಾಡುವುದಕ್ಕೆ ಎಷ್ಟು ಬಾರಿ ಅವಕಾಶ ಮಾಡಿಕೊಟ್ಟಿಲ್ಲ ಹೇಳಿ. ನೀವು ದಯವಿಟ್ಟು ಕುಳಿತುಕೊಳ್ಳಿ. ಮಾನ್ಯ ಪುಟ್ಟಣ್ಣನವರೇ, ತಾವು ಮಾತನಾಡಿ.

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ ಅವರಿಗೆ ಮಾತ್ರ ಮಾತನಾಡುವುದಕ್ಕೆ ಅವಕಾಶ ಮಾಡಿಕೊಡುತ್ತೀರಿ.

**ಉಪ ಸಭಾಪತಿಯವರು:-** ಮಾನ್ಯ ಹರಿಪ್ರಸಾದ್‌ರವರೇ, ಎಲ್ಲರಿಗೂ ಮಾತನಾಡುವುದಕ್ಕೆ ನಾನು ಅವಕಾಶ ಮಾಡಿಕೊಡುತ್ತಿದ್ದೇನೆ. ಯಾರನ್ನಾದರೂ ಬಿಟ್ಟಿದ್ದೇನೆಯೇ?

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಹಾಗಾದರೆ, ನನಗೆ ಅವಕಾಶ ಕೊಡಿ. ಅವರು yield ಆಗುತ್ತಿದ್ದಾರೆ.

**ಉಪ ಸಭಾಪತಿಯವರು:-** ಮಾನ್ಯ ಹರಿಪ್ರಸಾದ್‌ರವರೇ, ತಾವು ಕೈ ಎತ್ತಿ, ತಮ್ಮ ಹೆಸರನ್ನು ನೋಟ್ ಮಾಡಿಸಿ. ಆಗ ತಮಗೆ ಮಾತನಾಡುವುದಕ್ಕೆ ಅವಕಾಶ ಮಾಡಿಕೊಡುತ್ತೇನೆ. ಈಗ ತಮಗೆ ಮಾತನಾಡುವುದಕ್ಕೆ ಅವಕಾಶ ಕೊಡುವುದಿಲ್ಲ. ಮಾನ್ಯ ಪುಟ್ಟಣ್ಣನವರೇ, ತಾವು ಮಾತನಾಡಿ.

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಅವರು yield ಆಗಿದ್ದಾರೆ.

**ಉಪ ಸಭಾಪತಿಯವರು:-** ಇಲ್ಲಿ ಯಾರ ಹೆಸರನ್ನು ಕೊಟ್ಟಿದ್ದಾರೋ, ಅವರಿಗೆ ಮಾತ್ರ ಮಾತನಾಡುವುದಕ್ಕೆ ಅವಕಾಶ ಮಾಡಿಕೊಡುತ್ತೇನೆ. ಹೆಸರು ಕೊಟ್ಟಿರುವವರಿಗೆ ಮಾತ್ರ ಅವಕಾಶ ಮಾಡಿಕೊಡುತ್ತೇನೆ.

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಅವರು ಅವರಿಗೆ ಹೇಳುತ್ತಿಲ್ಲ. ಸರ್ಕಾರಕ್ಕೆ ಹೇಳುತ್ತಿದ್ದಾರೆ.

**ಉಪ ಸಭಾಪತಿಯವರು:-** ಮಾನ್ಯ ಹರಿಪ್ರಸಾದ್‌ರವರೇ, ತಮ್ಮ ಹೆಸರನ್ನು ನೋಟ್ ಮಾಡಿಸಿ. ಆಗ ತಮಗೆ ಅವಕಾಶ ಕೊಡುತ್ತೇನೆ. ತಾವು ಕುಳಿತುಕೊಳ್ಳಿ. ಮಾನ್ಯ ಪುಟ್ಟಣ್ಣನವರೇ, ಮಾತನಾಡಿ.

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಅಷ್ಟರೊಳಗೆ ಅವಕಾಶ ಕೊಡದಿದ್ದರೆ,..

**ಉಪ ಸಭಾಪತಿಯವರು:-** ಮಾನ್ಯ ಹರಿಪ್ರಸಾದ್‌ರವರೇ, ತಾವು ನೋಟ್ ಕೊಡದೇ ಹೋದರೆ ಬಿಡಿ. ಮಾನ್ಯ ಪುಟ್ಟಣ್ಣನವರೇ, ಮಾತನಾಡಿ.

**ಶ್ರೀ ಪುಟ್ಟಣ್ಣ (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಒಂದೆರಡು ಕೋಟಿ ಇದ್ದಿದ್ದೆಲ್ಲಾ ತೆಗೆದು ಹಾಕಿಬಿಡಿ ಎನ್ನುತ್ತಾರೆ. ಆಗ ಎಂದಾಕ್ಷಣ ….. ನಾನು ಮಾತನಾಡುವಾಗ ಮಧ್ಯ ಏತಕ್ಕೆ ಮಾತನಾಡುತ್ತೀರಾ? ತಮ್ಮ ಹೆಸರನ್ನು ಹೇಳುತ್ತಿದ್ದೇನಾ.

**(ಗೊಂದಲ)**

**ಉಪ ಸಭಾಪತಿಯವರು:-** ನೀವು ಸುಮ್ಮನೆ ಇರಬೇಕೆಂದು ನಾನು ಹೇಳುತ್ತಿಲ್ಲವೇ? ಮಾನ್ಯ ಪುಟ್ಟಣ್ಣನವರು ಮಾತನಾಡಲಿ. ದಯವಿಟ್ಟು, ಎಲ್ಲರೂ ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಎನ್.ಎಸ್. ಬೋಸರಾಜು:-** ಮಾನ್ಯ ಸಭಾಪತಿಯವರೇ, ಎಲ್ಲದಕ್ಕೂ ಎದ್ದು ನಿಂತರೆ ಹೇಗೆ?

**ಉಪ ಸಭಾಪತಿಯವರು:-** ಮಾನ್ಯ ಸಭಾನಾಯಕರೇ, ನಾನು ಅವರನ್ನೆಲ್ಲಾ ಕುಳಿತುಕೊಳ್ಳುವುದಕ್ಕೆ ಹೇಳುತ್ತೇನೆ. ತಾವು ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಎನ್.ಎಸ್. ಬೋಸರಾಜು:-** ಮಾನ್ಯ ಸಭಾಪತಿಯವರೇ, ಅವರನ್ನೆಲ್ಲಾ ಕುಳಿತುಕೊಳ್ಳುವುದಕ್ಕೆ ಹೇಳಿ.

**(ಗೊಂದಲ)**

**ಶ್ರೀ ಪುಟ್ಟಣ್ಣ:-** ಹೀಗೆ ಮಾತಾಡಬೇಕೆಂದು ಬರೆದುಕೊಟ್ಟಿದ್ದೀರಾ.

**(ಗೊಂದಲ)**

**ಉಪ ಸಭಾಪತಿಯವರು:-** ಮಾನ್ಯ ಪುಟ್ಟಣ್ಣನವರೇ, ಪೀಠವನ್ನು ನೋಡಿಕೊಂಡು, ತಾವು ಮಾತಾಡಬೇಕು. ನೀವು ಯಾರನ್ನು ನೋಡಿ ಮಾತನಾಡಬೇಡಿ.

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ, ನಾನು ಯಾರನ್ನಾದರೂ ಹೆಸರು ಹೇಳಿದ್ದೇನೆಯೇ?

**ಉಪ ಸಭಾಪತಿಯವರು:-** ಮಾನ್ಯ ಪುಟ್ಟಣ್ಣನವರೇ, ಆಯಿತು, ತಾವು ಮಾತನಾಡಿ.

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ, ನಾನು ಯಾರನ್ನಾದರೂ ಹೆಸರು ಹೇಳಿದ್ದೇನೆಯೇ? ತಾವು ಹೇಳಿ. ನಾನು ಯಾರ ಹೆಸರನ್ನು ಹೇಳಲಿಲ್ಲ.

**ಉಪ ಸಭಾಪತಿಯವರು:-** ತಮ್ಮ ಮಾತನ್ನು conclude ಮಾಡಿ.

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ, ಒಂದು ಕೋಟಿ ರೂಪಾಯಿ ನಡೆಯುತ್ತಿದೆ ಮತ್ತು ಇಪ್ಪತ್ತು ಕೋಟಿ ರೂಪಾಯಿಗಳು ನಡೆಯುತ್ತಿದೆ ಎಂದು ತೆಗೆದು ಹಾಕಿಬಿಡಿ ಎಂದಾಕ್ಷಣಕ್ಕೆ ಅಲ್ಲಿ ಜನರನ್ನು ಹಿಡಿದುಕೊಂಡು Atria Hotel, The Capitol Hotel ಹಾಗೂ The Lalit Ashok ನಲ್ಲಿ agents ತರಹ ಕುಳಿತಿದ್ದಾರೆ. ಅವರು ಎದ್ದು ಮನೆಗೆ ಏನು ಹೋಗಿ ಬಿಡುವುದಿಲ್ಲ. ವ್ಯವಹಾರ ನಡೆಯುತ್ತಲೇ ಇರುತ್ತದೆ. ಅದನ್ನು ತಪ್ಪಿಸಬೇಕು ಎನ್ನುವುದಾದರೆ, ಈ ತರಹ amendment ಗಳು ಆಗಬೇಕು.

**(ಈ ಹಂತದಲ್ಲಿ ಆಡಳಿತ ಪಕ್ಷದವರು ಮೇಜು ತಟ್ಟುವ ಮೂಲಕ ತಮ್ಮ ಹರ್ಷವನ್ನು ವ್ಯಕ್ತಪಡಿಸಿದರು)**

ನಾನು ಏತಕ್ಕೆ ಹೇಳುತ್ತೇನೆಂದರೆ, ಮುಖ್ಯಮಂತ್ರಿಗಳು ಎಂದ ತಕ್ಷಣಕ್ಕೆ ಕುಲಪತಿ ಮತ್ತು ಕುಲಸಚಿವರಿಗೆ ಭಯವಾದರೂ ಇರುತ್ತದೆ. ಒಬ್ಬ syndicate member ರನ್ನು withdraw ಮುಖ್ಯಮಂತ್ರಿಯವರಿಗೆ ಒಂದು power ಇರುತ್ತದೆ. ಅವರು withdraw ಮಾಡಿ ಬಿಸಾಕಬಹುದು. ಇವತ್ತು ಅದು ಏನಾಗಿದೆ ಎಂದರೆ, ಅದು ಮಾಡುವುದಕ್ಕಾಗುತ್ತದೆಯೇ? ಅದು ಮಾಡುವುದಕ್ಕಾಗುತ್ತಿಲ್ಲ. ಮಾನ್ಯ ಸಭಾಪತಿಯವರೇ, ತಮಗೂ ಗೊತ್ತು. ಮಾನ್ಯ ಸಿ.ಟಿ. ರವಿಯವರು ಉನ್ನತ ಶಿಕ್ಷಣ ಸಚಿವರಾಗಿದ್ದಾಗ ಇದ್ದಾಗಲೂ ಕೂಡ ಸುಮಾರು private University ಗಳನ್ನು ಕೊಟ್ಟರು. ಹಿಂದಿನ ಸರ್ಕಾರವಿದ್ದಾಗಲೂ ಕೂಡ private University ಗೂ ಕೊಟ್ಟರು. ವಿಶ್ವವಿದ್ಯಾಯಲಗಳಗೂ ಕೂಡ ಮಾಡಿದರು. ವಿಧಾನಸೌಧದ ಪಕ್ಕದಲ್ಲಿಯೇ ಮಹಾರಾಣಿ ಕಾಲೇಜು ಇದೆ. ಇಲ್ಲಿಂದ ಸುಮಾರು ಐದುನೂರು ಮೀಟರ್ ಇರಬೇಕು. ಇಲ್ಲಿ ಹತ್ತು ಸಾವಿರಕ್ಕಿಂತಲೂ ಹೆಚ್ಚು ಹೆಣ್ಣುಮಕ್ಕಳು ಓದುತ್ತಿದ್ದರು. ....

**ಶ್ರೀ ಗೋವಿಂದ ರಾಜು (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ,..

**ಶ್ರೀ ಪುಟ್ಟಣ್ಣ:-** ತಾವು ಒಂದು ನಿಮಿಷ ಕೇಳಿ.

**ಶ್ರೀ ಗೋವಿಂದ ರಾಜು (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ,..

**ಉಪ ಸಭಾಪತಿಯವರು:-** ಮಾನ್ಯ ಗೋವಿಂದರಾಜುರವರೇ, ತಾವು ಮಾತನಾಡುವುದಾದರೆ, ತಮ್ಮ ಹೆಸರನ್ನು ನೋಟ್ ಮಾಡಿಸಿ. ತಾವು ಮಧ್ಯೆದಲ್ಲಿ intervene ಆಗಬೇಡಿ.

**ಶ್ರೀ ಪುಟ್ಟಣ್ಣ:-** ಬೆಂಗಳೂರಿನ ವಿಧಾನಸೌಧದಿಂದ ಐದುನೂರು ಮೀಟರ್ ಹತ್ತಿರ ಮಹಾರಾಣಿ ಕಾಲೇಜು ಇದೆ. ಅಲ್ಲಿ ಹತ್ತು ಸಾವಿರ ಬಡ ಹೆಣ್ಣುಮಕ್ಕಳು ಓದುತ್ತಿದ್ದಾರೆ. ಇವತ್ತು ಹೆಣ್ಣು ಮಕ್ಕಳು ಇದ್ದಾರೆ ಎಂಬುದರ ಬಗ್ಗೆ ಚೆಕ್ ಮಾಡುವುದಕ್ಕೆ ಹೇಳಿ. ಇದು ಏಕಾಯಿತು? ....ಕೇಳಿ ಸ್ವಾಮಿ.

**ಉಪ ಸಭಾಪತಿಯವರು:-** ಮಾನ್ಯ ಪುಟ್ಟಣ್ಣನವರೇ, ಆ ಕಡೆ ಕಿವಿಗೊಡಬೇಡಿ. ಇಲ್ಲಿ ನೋಡಿ ಮಾತನಾಡಿ.

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ, ನನಗೆ ದೇವರು ಕಿವಿ ಕೊಟ್ಟಿದ್ದಾನೆ. ಈ ಕಡೆಯೂ ಕೇಳಿಸುತ್ತದೆ. ನಾವು ಏನು ಮಾಡುವುದು?

**ಉಪ ಸಭಾಪತಿಯವರು:-** ಅವರು ಎದ್ದು ನಿಂತು ಮಾತನಾಡಿದರೆ, ಅವರನ್ನು ಕೂರಿಸಬಹುದು. ಇನ್ನೂ ಏನು ಮಾಡಬೇಕು?

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ, ಸ್ವಲ್ಪ ಕೇಳಿ. ನನ್ನ ಮೈಂಡ್ ಬೇರೆ ಬೇರೆ ಕಡೆ ಹೊರಟು ಹೋಗುತ್ತದೆ.

**ಉಪ ಸಭಾಪತಿಯವರು:-** ಆಯಿತು. ಹೇಳಿ.

**ಶ್ರೀ ಪುಟ್ಟಣ್ಣ:-** ಈ ಮಹಾರಾಣಿ ಕಾಲೇಜ್‌ನಲ್ಲಿ ಏನಾಗಿದೆ ಎಂದರೆ, Cluster University ಗಳು ಎಂದು ಮಾಡಿದ್ದರಲ್ಲ Vice-Chancellor ಹಾಗೂ Registrar ಎಂದು ಮಾಡಿದರು. ಇವರು ಏನು ತೆಗೆದುಕೊಳ್ಳಬೇಕಾಗಿತ್ತೋ, ಅದನ್ನೆಲ್ಲಾ ತೆಗೆದುಕೊಂಡು ಹೊರಟು ಹೋದರು. ಪಾಪ ಅವರ ಪರಿಸ್ಥಿತಿ ಏನಾಗಿದೆ ಎಂದರೆ, ಅವರಿಗೆ ಯಾರಿಗೂ ಕುಳಿತುಕೊಳ್ಳುವುದಕ್ಕೆ ಕುರ್ಚಿ ಇಲ್ಲ. ಇವರು ನೇಮಕಾತಿ ಮಾಡಿದಾಗ condition ಏನಿತ್ತು ಗೊತ್ತಾ, ನೀವು ಯಾವುದೇ ಕಾರಣಕ್ಕೂ ಒಂದು attender ರನ್ನು ಕೂಡ appointment ಮಾಡಿಕೊಳ್ಳುವಹಾಗಿಲ್ಲ. ಯಾವುದೇ ಒಂದು ವಸ್ತುವನ್ನು ಹೊಸದಾಗಿ ತೆಗೆದುಕೊಳ್ಳುವಾಗಿಲ್ಲ. ಆ condition ಮೇಲೆ ವಿಶ್ವವಿದ್ಯಾಲಯ ಆಗಿರುವುದು. ಅದನ್ನು ತೆಗೆದು ಓದಿ. ಅದಕ್ಕೆ ಏನು ಮಾಡಿದರು ಎಂದರೆ, ಇವರು ಬಂದರಲ್ಲ. ಪಾಪ ವಿಧಿಯಿಲ್ಲ. ಸರ್ಕಾರ ದುಡ್ಡು ಕೊಡುವುದಿಲ್ಲ. ಅವರು ಏನು ಮಾಡಬೇಕು? Fees hike ಮಾಡಿಬಿಟ್ಟರು. ಬಡವರು ಎಲ್ಲಿಂದ ತಂದು ಕೊಡುತ್ತಾರೆ? ಹಾಗಾಗಿ, ವಿದ್ಯಾರ್ಥಿಗಳ ಸಂಖ್ಯೆ ಕಡಿಮೆಯಾಯಿತು. ಇನ್ನೂ ಮೂರು ವರ್ಷ ಅಥವಾ ಐದು ವರ್ಷ ಹೋದರೆ, ಕಾಲೇಜು ಮುಚ್ಚಿ ಹೋಗುತ್ತದೆ.

**ಉಪ ಸಭಾಪತಿಯವರು:-** ತಾವು conclude ಮಾಡಿ. ಇನ್ನು ಮಾತನಾಡುವವರು ತುಂಬಾ ಜನ ಸದಸ್ಯರಿದ್ದಾರೆ.

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ, ಅದಕ್ಕೆ ದಯಮಾಡಿ ಇಲ್ಲಿ ನಮ್ಮ ಶಿಕ್ಷಣ ಸಚಿವರಿದ್ದಾರೆ. ನಮ್ಮ ಮಾನ್ಯ ಪ್ರಿಯಾಂಕ್ ಖರ್ಗೆಯವರು ಏನೋ ಒಂದು ಒಳ್ಳೆಯ ಯೋಚನೆ ಮಾಡಿ, ಒಂದು amendment ಅನ್ನು Act ಗೆ ತಂದಿದ್ದಾರೆ. ಇದರ ಪ್ರೇರಪಣೆಯಿಂದಾಗಿ, ಅವರು ಕೂಡ ಬೇರೆ ರೀತಿಯಿಂದ ಮಾಡಿದ್ದೇವೆಂದು ಹೇಳಿದರು. ಅವರು ಒಂದು ರೀತಿ ಮಾಡಿದ್ದಾರೆ, ಇವರು ಒಂದು ರೀತಿ ಮಾಡಿದ್ದಾರೆ. ನಾನು ಅವರನ್ನು ಅಭಿನಂದಿಸುತ್ತೇನೆ. ಸನ್ಮಾನ್ಯ ಮುಖ್ಯಮಂತ್ರಿಗಳು ಯಾರು ಇರುತ್ತಾರೋ, ಅವರೇ ಎಲ್ಲಾ ತೀರ್ಮಾನ ತೆಗೆದುಕೊಳ್ಳಬೇಕು. ರಾಜ್ಯಪಾಲರ ಹೆಸರಿನಲ್ಲಿ ಎಲ್ಲವೂ ಆದೇಶವಾಗುತ್ತದೆ. ಅದು ಆಗಲಿ ಯಾವುದೇ ತೊಂದರೆಯಿಲ್ಲ. ಅದು ಸಂವಿಧಾನಬದ್ಧವಾದಂತಹ ಹುದ್ದೆ. ಅದೆಲ್ಲವೂ ಆಗಲಿ. ಅದರೆ ಅವರೆಲ್ಲಾ ಬೇರೆ ಬೇರೆ ರಾಜ್ಯದವರು. ಎಲ್ಲಿಂದಲೂ ಬಂದಂತಹವರು. ಅವರು ಇಲ್ಲಿ ರಾಜ್ಯಪಾಲರು ಆಗುತ್ತಾರೆ. ಐದು ವರ್ಷ ಇರುತ್ತಾರೆ, ಅವರು ಹೊರಟು ಹೋಗುತ್ತಾರೆ. ಕೇಂದ್ರ ಸರ್ಕಾರ ಏನಾದರೂ ಬದಲಾವಣೆಯಾದರೆ, ಅವರು ಎರಡು ವರ್ಷಕ್ಕೆ ಹೊರಟು ಹೋಗುತ್ತಾರೆ. ಅಷ್ಟರಲ್ಲಿ ಬಂದಾಗ ಏನೇನು ಮಾಡಬೇಕು, ಅದನ್ನೆಲ್ಲಾ ಮಾಡಿ ಹೊರಟು ಹೋಗುತ್ತಾರೆ. ಆ ಅದ್ವಾನವನ್ನು ಸರಿಪಡಿಸುವುದಕ್ಕಾಗುವುದಿಲ್ಲ. ಅದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಏನು ಮಾಡುವುದಕ್ಕೆ ಹೊರಟಿದ್ದಾರೆ. ಇದು ಒಳ್ಳೆಯದು. ಇದು ಒಳ್ಳೆಯ amendment

ಅನ್ನು ತಂದಿದ್ದಾರೆ. ಎಲ್ಲರೂ ಸೇರಿ ಯಾವುದೇ ಅಪಸ್ವರವಿಲ್ಲದೇ ಹಾಗೇ ಎದ್ದುನಿಂತುಕೊಂಡು ಇದಕ್ಕೆ ಬೆಂಬಲ ಕೊಟ್ಟು, ಈ ತಿದ್ದುಪಡಿ ವಿಧೇಯವನ್ನು ಎಲ್ಲರೂ ಸೇರಿ approve ಮಾಡಬೇಕೆಂದು ನಾನು ತಮ್ಮ ಮೂಲಕ ಮಾನ್ಯ ಸದಸ್ಯರೆಲ್ಲರಿಗೂ ಕೈಮುಗಿದು ಕೇಳಿಕೊಳ್ಳುತ್ತೇನೆ.

**ಉಪ ಸಭಾಪತಿಯವರು:-** ಮಾನ್ಯ ಹಣಮಂತ ರುದ್ರಪ್ಪ ನಿರಾಣಿಯವರೇ, ತಾವು ಮಾತನಾಡಿ.

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ (ತಿದ್ದುಪಡಿ) ವಿಧೇಯಕವನ್ನು ನಾನು ವಿರೋಧ ಮಾಡುತ್ತಿದ್ದೇನೆ. ಈ ವಿಧೇಯಕದ ಬಗ್ಗೆ ಅನೇಕ ಹಿರಿಯ ಸದಸ್ಯರು ಮಾತನಾಡಿದ್ದಾರೆ. ಈ ವಿಧೇಯಕವನ್ನು ನಾವು ವಿರೋಧ ಮಾಡಬೇಕಾಗುತ್ತದೆ. ಮಾನ್ಯ ರಾಜ್ಯಪಾಲರಿಗೆ ಇರುವಂತಹ ಕುಲಾಧಿಪತಿಗಳ ಸ್ಥಾನವನ್ನು ತೆಗೆದು ಮುಖ್ಯಮಂತ್ರಿಗಳಿಗೆ ಕೊಡುವುದು ಸೂಕ್ತವಲ್ಲ ಎಂದು ನಾನು ಹೇಳುವುದಕ್ಕೆ ಬಯಸುತ್ತೇನೆ. ಮುಖ್ಯಮಂತ್ರಿಯವರಿಗೆ ಸಾಕಷ್ಟು ಒತ್ತಡದ ಕೆಲಸಗಳ ಕಾರ್ಯಭಾರ ಇರುವಂತಹ ಸಂದರ್ಭದಲ್ಲಿ, ಈ ವಿಶ್ವವಿದ್ಯಾಲಯಕ್ಕೆ ಕುಲಾಧಿಪತಿಯಾಗಿ ಕೆಲಸ ಮಾಡುವಂತಹದ್ದು ಸೂಕ್ತವಲ್ಲ ಎನ್ನುವುದು ನನ್ನ ವಿಚಾರ. ಒಂದು ವೇಳೆ ಮಾಡದಿದ್ದರೆ, ಈ ಒಂದು ವಿಶ್ವವಿದ್ಯಾಲಯಕ್ಕೆ ಮಾನ್ಯ ಮುಖ್ಯಮಂತ್ರಿಗಳನ್ನು ಕುಲಾಧಿಪತಿಗಳಾಗಿ ಏತಕ್ಕೆ ಮಾಡಬೇಕು? ಎಲ್ಲಾ ವಿಶ್ವವಿದ್ಯಾಲಯಕ್ಕೆ ಮಾಡಬಿಡಿ. ಎಲ್ಲಾ ವಿಶ್ವವಿದ್ಯಾಲಯಗಳಿಗೂ ಕೂಡ ಮಾನ್ಯ ಮುಖ್ಯಮಂತ್ರಿಗಳೇ ಕುಲಾಧಿಪತಿಗಳಾಗಿಯೇ ಇನ್ನು ಮುಂದೆ ಕೆಲಸ ಮಾಡಲಿ ಎನ್ನುವಂತಹದ್ದನ್ನು ವಿಚಾರ ಮಾಡಬೇಕಾಗುತ್ತದೆ. ಹಾಗಾಗಿ, ಈ ವಿಧೇಯಕವನ್ನು ವಿರೋಧ ಮಾಡುತ್ತೇನೆ. ಇದರ ಜೊತೆಗೆ ನಾನು ಇಲ್ಲಿ ಒಂದು ವಿಷಯವನ್ನು ಪ್ರಸ್ತಾಪ ಮಾಡುತ್ತಿದ್ದೇನೆ. ಪ್ರತಿಯೊಬ್ಬ ಶಾಸಕರಿಗೂ ಕೂಡ ಒಂದೊಂದು ವಿಶ್ವವಿದ್ಯಾಲಯಗಳಿಗೆ academic ಸದಸ್ಯರಾಗುವುದಕ್ಕೆ ಕೊಡುವಂತಹ ವ್ಯವಸ್ಥೆ ಇದೆ. ಅದರ ಅನುಮೋದನೆಯನ್ನು ರಾಜ್ಯಪಾಲರು ಮಾಡುತ್ತಿರುತ್ತಾರೆ. ಸಭಾಪತಿಯವರು ಇಲ್ಲಿರುವಂತಹ ಸದಸ್ಯರನ್ನು ಒಂದೊಂದು ವಿಶ್ವವಿದ್ಯಾಲಯಕ್ಕೆ ನೇಮಕ ಮಾಡುವುದಕ್ಕೆ ಪ್ರಸ್ತಾಪವನ್ನು ಕಳುಹಿಸುತ್ತಾರೆ. ಅದಕ್ಕೆ ರಾಜ್ಯಪಾಲರು ಅನುಮೋದನೆ ಕೊಡುತ್ತಾರೆ. ತೋಟಗಾರಿಕಾ ವಿಶ್ವವಿದ್ಯಾಲಯಗಳು ಕೂಡ ನಾಲ್ಕು ತಿಂಗಳಿನಿಂದ ರಾಜ್ಯಪಾಲರಿಗೆ ಪತ್ರವನ್ನು ಬರೆದಿರುತ್ತಾರೆ. ಮೂರು ಬಾರಿ reminder ಅನ್ನು ಹಾಕಿದ್ದಾರೆ. ಮಾನ್ಯ ತೋಟಗಾರಿಕಾ ಸಚಿವರ ಮನೆಗೆ ಕಡತ ಹೋಯಿತು. ನಂತರ ಮಾನ್ಯ ಮುಖ್ಯಮಂತ್ರಿಗಳ ಮನೆಗೂ ಕಡತ ಹೋಯಿತು. ಇವತ್ತಿಗೆ ನಾಲ್ಕು ತಿಂಗಳಾದರೂ file ಇನ್ನೂ clear ಆಗುತ್ತಿಲ್ಲ. ಒಬ್ಬ academic ಸದಸ್ಯರನ್ನು ನೇಮಕ ಮಾಡಬೇಕೆಂದರೆ, ನಾಲ್ಕು ತಿಂಗಳಾದರೂ file move ಆಗುವುದಿಲ್ಲ. ಅದು ಆಗುವುದಿಲ್ಲ ಎಂದರೆ, ಒಬ್ಬ ಕುಲಾಧಿಪತಿಗಳಾಗಿ ಒಂದು ವಿಶ್ವವಿದ್ಯಾಲಯವನ್ನು ಹೇಗೆ ನೋಡುತ್ತಾರೆ ಎನ್ನುವುದನ್ನು ನಾವೆಲ್ಲರೂ ಇವತ್ತು ಚಿಂತನೆ ಮಾಡಬೇಕಾಗಿದೆ. ನಾನೊಬ್ಬ ಶಾಸಕನಾಗಿ, ನನಗೆ ಇರುವಂತಹ ಹಕ್ಕು. ನಾನು ಹಕ್ಕುಬಾಧ್ಯತಾ ಸಮಿತಿಗೆ ಹೋಗಬೇಕು. ಆದರೆ ಶಾಸಕನಾಗಿ ಒಂದು ಅಧಿಕಾರಕ್ಕಾಗಿ ಹಪಹಪಿಸು ಮಾಡುತ್ತಾರೆ ಎಂದು ಎನಿಸಿಕೊಳ್ಳಬಾರದು ಎಂದು ಸುಮ್ಮನೆ ಕುಳಿತಿದ್ದೇನೆ. ಇದರ ಬಗ್ಗೆ ಮಾನ್ಯ ಸಚಿವರ ಗಮನಕ್ಕೆ ತಂದಿದ್ದೇನೆ. ಮಾನ್ಯ ಸಭಾಪತಿಯವರು ಮೂರು ಬಾರಿ reminder ಹಾಕಿದ್ದಾರೆ. ಇವತ್ತಿಗೂ ಕೂಡ file clear

ಆಗುತ್ತಿಲ್ಲ. ಇಂತಹ ಸಣ್ಣ ವಿಷಯ ಏತಕ್ಕೆ ಹೇಳುತ್ತೇನೆಂದರೆ, ಒಂದು ವಿಶ್ವವಿದ್ಯಾಲಯಕ್ಕೆ ಇವತ್ತು ಮುಖ್ಯಮಂತ್ರಿಗಳನ್ನು ಕುಲಾಧಿಪತಿಗಳನ್ನಾಗಿ ಕೂರಿಸಿದರೆ, ಅವರಿಗೆ ಇಷ್ಟೊಂದು ಕೆಲಸದ ಕಾರ್ಯಭಾರದಲ್ಲಿ ಈ ಕೆಲಸ ಆಗುವುದಿಲ್ಲ. ಇದರಿಂದ ಬಹಳಷ್ಟು ತೊಂದರೆಯಾಗುತ್ತದೆ. ಹಾಗಾಗಿ ಇದನ್ನು ತಾವು ಗಮನಿಸಬೇಕು ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಾ, ಪೀಠ ನನ್ನ ಆಸರೆಗೆ ಬರಬೇಕು. ಪ್ರತಿಯೊಬ್ಬರು ಒಂದೊಂದು ವಿಶ್ವವಿದ್ಯಾಲಯಗಳಿಗೆ academic ಸದಸ್ಯರು ಆಗುವಂತಹ ಅವಕಾಶ ಇರುತ್ತದೆ. ಕಳೆದ ನಾಲ್ಕು ತಿಂಗಳಿನಿಂದ ಕೂಡ academic ಸದಸ್ಯರು ಹುದ್ದೆಯ vacant ಇದೆ. ತೋಟಗಾರಿಕಾ ವಿಶ್ವವಿದ್ಯಾಲಯದವರು ಅಲ್ಲಿಗೆ ಹೋಗಿ ಮಾತನಾಡಬೇಕು ಎನ್ನುವಂತಹ ವಿಚಾರವಿದೆ. ಇವತ್ತು ತೋಟಗಾರಿಕಾ ವಿಶ್ವವಿದ್ಯಾಲಯಗಳು ಕೂಡ ಕೃಷಿ ವಿಶ್ವವಿದ್ಯಾಲಯಗಳ ಜೊತೆಗೆ ಸಂಲಗ್ನ ಮಾಡುತ್ತಿದ್ದೀರಿ. ಮಂಡ್ಯದಲ್ಲಿರುವಂತಹ ಕೃಷಿ ವಿಶ್ವವಿದ್ಯಾಲಯವನ್ನು ತೋಟಗಾರಿಕಾ ವಿಶ್ವವಿದ್ಯಾಲಯದಿಂದ bifurcation ಮಾಡಿ, ಅಲ್ಲಿ ಎರಡು ಮಾಡುವಂತಹದ್ದಾಗಬಾರದು. ತೋಟಗಾರಿಕಾ ವಿಶ್ವವಿದ್ಯಾಲಯದ concept ಏನಿದೆ, ಅದು ಸಂಪೂರ್ಣವಾಗಿರುವಂತಹ ...

**ಉಪ ಸಭಾಪತಿಯವರು:-** ಮಾನ್ಯ ಸದಸ್ಯರೇ, subject divert ಆಗಬಾರದು. ಈ ವಿಷಯಕ್ಕೆ ಸಂಬಂಧಪಟ್ಟಂತೆ ಹೇಳಿ. ಅದನ್ನು club ಮಾಡಬೇಡಿ.

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ:-** ಮಾನ್ಯ ಸಭಾಪತಿಯವರೇ, ವಿಶ್ವವಿದ್ಯಾಲಯಕ್ಕೆ ಸಂಬಂಧಪಟ್ಟಿರುವ ಬಗ್ಗೆ ಹೇಳುತ್ತಿದ್ದೇನೆ. ಈ ವಿಧೇಯಕದ ಬಗ್ಗೆ ಮಾತನಾಡುವ ಸಂದರ್ಭದಲ್ಲಿ ವಿಶ್ವವಿದ್ಯಾಲಯಗಳ ವಿಚಾರವನ್ನು ಚರ್ಚೆ ಮಾಡಬೇಕಾಗುತ್ತದೆ. Bill ಗೆ no... **(ಗೊಂದಲ)** ತೋಟಗಾರಿಕಾ ವಿಶ್ವವಿದ್ಯಾಲಯನ್ನು ತೋಟಗಾರಿಕಾ ವಿಶ್ವವಿದ್ಯಾಲಯವನ್ನಾಗಿಯೇ ಮಾಡಿ ಎನ್ನುವುದು ನನ್ನ ವಿಚಾರವಾಗಿದೆ.

**ಉಪ ಸಭಾಪತಿಯವರು:-** ಮಾನ್ಯ ನಿರಾಣಿ ಹಣಮಂತ ರುದ್ರಪ್ಪ ಒಂದು ನಿಮಿಷ.

**ಶ್ರೀ ಹೆಚ್.ಕೆ. ಪಾಟೀಲ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ಪ್ರವಾಸೋದ್ಯಮ ಸಚಿವರು:-** ಮಾನ್ಯ ಸಭಾಪತಿಯವರೇ, ಇನ್ನೂ ಎಂಟು ವಿಧೇಯಕಗಳಿವೆ. ನಾನು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುವುದೇನೆಂದರೆ, ಇದನ್ನು ಬೇಗ ಪೂರ್ಣಗೊಳಿಸಬೇಕು. ಎಂಟು ವಿಧೇಯಕವಾದ ಮೇಲೆ ಇನ್ನು ಬೇರೆ ಬೇರೆ ಕಾರ್ಯಕ್ರಮಗಳಿವೆ.

**ಉಪ ಸಭಾಪತಿಯವರು:-** ಮಾನ್ಯ ಸಚಿವರೇ, ತಾವು ಕೂಡ ಸದನದಲ್ಲಿ ನೋಡುತ್ತಿದ್ದೀರಿ. ನಮ್ಮ ಪ್ರಯತ್ನ ಮಾಡುತ್ತಿದ್ದೇವೆ. ಎಲ್ಲರೂ ಸಹಕಾರ ಮಾಡಿ. ಇನ್ನು ಮಾತನಾಡಬೇಕಾದಂತಹ ಸದಸ್ಯರೊಬ್ಬಬ್ಬರಿಗೆ ಐದೈದು ನಿಮಿಷ ಕೊಡುತ್ತೇನೆ. ಅದಕ್ಕಿಂತ ಹೆಚ್ಚಿನದಾಗಿ ಕಾಲಾವಕಾಶ ಕೊಡುವುದಿಲ್ಲ. ಎಲ್ಲರಿಗೂ ಮಾತನಾಡುವುದಕ್ಕೆ ಅವಕಾಶ ಮಾಡಿಕೊಡುತ್ತೇನೆ. ಸದಸ್ಯರೆಲ್ಲರೂ ಐದು ನಿಮಿಷದಲ್ಲಿ ಮುಗಿಸಬೇಕು.

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ:-** ಮಾನ್ಯ ಸಭಾಪತಿಯವರೇ, ನನ್ನ ಮಾತನ್ನು ಒಂದು ನಿಮಿಷದಲ್ಲಿ ಮುಗಿಸುತ್ತೇನೆ. ಇವತ್ತು ಪಂಚಾಯತ್ ರಾಜ್ ಇಲಾಖೆಗಳಲ್ಲಿ ಬಹಳಷ್ಟು ಕೆಲಸ ಕಾರ್ಯಗಳಿವೆ. ಅಧಿಕಾರ ವಿಕೇಂದ್ರೀಕರಣದ ಕನಸನ್ನು ಇಟ್ಟುಕೊಂಡು ಹಿಂದಿನ ರಾಜಕಾರಣಿಗಳು three-tier system ಅನ್ನು ತಂದಿದ್ದಾರೆ.

ಜಿಲ್ಲಾ ಮತ್ತು ತಾಲ್ಲೂಕು ಪಂಚಾಯಿತಿಗಳು ಚುನಾವಣೆಯಾಗಲಾರದೇ, ನಾಲ್ಕು ವರ್ಷದಿಂದ ಅಭಿವೃದ್ಧಿ ಕೆಲಸ ಕಾರ್ಯಗಳು ಕುಂಠಿತವಾಗುತ್ತದೆ. ದಯವಿಟ್ಟು, ಅದನ್ನು ಆದಷ್ಟು ಬೇಗ ಮಾಡುವಂತಹದ್ದಕ್ಕೆ ಸರ್ಕಾರ ಮುಂದಾಗಬೇಕು. ಈ ವಿಧೇಯಕವನ್ನು ನಾನು ವಿರೋಧ ಮಾಡುತ್ತೇನೆ ಎಂಬ ಮಾತನ್ನು ಹೇಳಬಯಸುತ್ತೇನೆ.

**ಉಪ ಸಭಾಪತಿಯವರು:-** ಮಾನ್ಯ ಚಿದಾನಂದ್ ಗೌಡರವರೇ, ತಾವು ಮಾತನಾಡಿ.

(ಮುಂದು)

(970) 18.12.2024, 5.20 TCH-MD (ಉಪ ಸಭಾಪತಿಯವರ ಉಪಸ್ಥಿತಿ)

**ಶ್ರೀ ಚಿದಾನಂದ್ ಎಂ.ಗೌಡ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು. ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ (ತಿದ್ದುಪಡಿ) ವಿಧೇಯಕ, 2024 ಅನ್ನು ನಾನು ವಿರೋಧಿಸುತ್ತೇನೆ. ಇವತ್ತು ಏನು ಈ ಸದನದಲ್ಲಿ ಚರ್ಚೆ ನಡೆಯಿತು. ನಾನು ಮತ್ತು ಶ್ರೀ ಪುಟ್ಟಣ್ಣನವರು ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಒಟ್ಟಿಗೆ ಓದಿದ್ದೇವೆ. ಈಗ ಏಕೋ ನಾನು ನೋಡಿದರೆ wrong University ಯಲ್ಲಿ ಓದಿದ್ದೇನೆಯೇ ಎಂದು ನನಗೆ ಅನಿಸುತ್ತಿದೆ. ಏಕೆಂದರೆ, ಗೌರವಾನ್ವಿತ ರಾಜ್ಯಪಾಲರು ಕುಲಾಧಿಪತಿಗಳು ಆಗಿದ್ದೇ wrong ಏನೋ ಅನ್ನುವ ಮಟ್ಟಕ್ಕೆ ಇಲ್ಲಿ ಚರ್ಚೆಗಳು ನಡೆಯುತ್ತಿದೆ. ಇವತ್ತಿನ ದಿವಸ ಇಲ್ಲಿ ಇದಕ್ಕೆ ಒಂದು ಸಕಾರಣ ಕೊಟ್ಟು ಸ್ವಾತಂತ್ರ್ಯ ನಂತರ ಸುಮಾರು 75 ವರ್ಷಗಳಿಂದ ಇದ್ದಂತಹ ಪದ್ಧತಿಯನ್ನು ಯಾವುದೋ ಒಂದು ಒಳ್ಳೆಯ ಕಾರಣಕ್ಕೆ ಬದಲಾಯಿಸುವುದಕ್ಕೆ ಹೊರಟಿದ್ದೀರಿ. ಈ ಬದಲಾವಣೆ ಮಾಡುವುದಕ್ಕೆ ಕಾರಣ ಏನೆಂದು ಹೇಳಿ. ಆದರೆ ಅವರು ಕುಲಾಧಿಪತಿಗಳಾಗುವುದರಿಂದ ಏನೋ ದೊಡ್ಡ ಹಾನಿಯಾಗುತ್ತದೆ, ಆ ಒಂದು ಸಾಂವಿಧಾನಿಕ ಹುದ್ದೆಗೆ ಗೌರವವೇ ಇಲ್ಲ. ಅಗೌರವ ಆಗುವ ರೀತಿಯಲ್ಲಿ ಇವತ್ತಿನ ದಿವಸ ಸದನದಲ್ಲಿ ಚರ್ಚೆಗಳು ನಡೆಯುತ್ತಿವೆ. ಆ ಕಾರಣಕ್ಕಾಗಿ ನನ್ನ ವಿನಂತಿ ಏನೆಂದರೆ, ನಮ್ಮ ಭಾಗದ ಗಣಿ ಮತ್ತು ಭೂ ವಿಜ್ಞಾನ ಸಚಿವರು ಹಾಗೂ ಉನ್ನತ ಶಿಕ್ಷಣ ಸಚಿವರು ಇಬ್ಬರು ಕೂಡ ಇಲ್ಲೇ ಕುಳಿತುಕೊಂಡಿದ್ದಾರೆ. ಇದರಲ್ಲಿ ಏನಾದರೂ hidden agenda ಇದೆಯೇ? ಅಂದರೆ, ಮುಂದೆ ಈ ಕರ್ನಾಟಕದಲ್ಲಿರತಕ್ಕಂಥ ಎಲ್ಲಾ University ಗಳಿಗೂ Chancellor ಅನ್ನು ಬದಲಾಯಿಸುವಂತಹ ಉದ್ದೇಶ ಏನಾದರು ಇದೆಯೇ? ಇದು Sample ಎಂದು ಏನಾದರೂ ಬಿಟ್ಟಿದ್ದೀರಾ? ಅದರ ಮುಖಾಂತರ ಎಲ್ಲಾ University ಗಳಿಗೂ Chancellor ಅನ್ನು ಬದಲಾಯಿಸಿ ನೇರವಾಗಿ ಸರ್ಕಾರ ಅಂದರೆ, ಸನ್ಮಾನ್ಯ ಮುಖ್ಯಮಂತ್ರಿಗಳೇ ಎಲ್ಲಾ University ಗಳಿಗೂ ಕುಲಾಧಿಪತಿಗಳು ಆಗಲಿ ಎನ್ನುವ ಉದ್ದೇಶವೇ? ನಾವು ಇಷ್ಟು ಹೊತ್ತು University Vice Chancellor ರವರ ಹೆಸರನ್ನು ಪ್ರಸ್ತಾಪ ಮಾಡಿದ್ದೇವೆ. ರಾಷ್ಟ್ರಕವಿ ಕುವೆಂಪುರವರು, ಡಾ. ಹಾ.ಮಾ. ನಾಯಕರ್ ರವರು ಹಾಗೂ ಡಾ.ನಂಜುಂಡಪ್ಪನವರು ಅವರ ಕಾಲದಲ್ಲಿ ವಿಶ್ವವಿದ್ಯಾಲಯಗಳು ಅಭಿವೃದ್ಧಿ ಹೊಂದಲೇ ಇಲ್ಲವೇ? ದೊಡ್ಡ ಮಟ್ಟಕ್ಕೆ ಮೈಸೂರು ವಿಶ್ವವಿದ್ಯಾಲಯ ಹೆಸರು ಮಾಡಲಿಲ್ಲವೇ? ಆಗಲೂ ಕೂಡ ಗೌರವಾನ್ವಿತ ರಾಜ್ಯಪಾಲರು ತಾನೇ ಕುಲಾಧಿಪತಿಗಳಾಗಿದ್ದರು. ಈ ರೀತಿ ಸಾಂವಿಧಾನಿಕ ಹುದ್ದೆಯನ್ನು ಹೊಂದಿರತಕ್ಕಂಥ ಡಾಕ್ಟರ್ ಬಾಬಾ ಸಾಹೇಬ್ ಅಂಬೇಡ್ಕರ್ ರವರ ಸಂವಿಧಾನದ

ಅಡಿಯಲ್ಲಿ ಅವಕಾಶವನ್ನು ತೆಗೆದುಕೊಂಡು ರಾಜ್ಯಪಾಲರನ್ನು ಕುಲಾಧಿಪತಿಗಳನ್ನಾಗಿ ಮಾಡಿದಂತಹ ಸಂದರ್ಭ ಅದೆಲ್ಲದಕ್ಕೂ ಎಲ್ಲೋ ಒಂದು ಕಡೆ ಅನಿವಾರ್ಯ ದೃಷ್ಟಿಯಿಂದ ಅಲ್ಲಿ ಏನೋ ಹಣಕಾಸಿನ ವ್ಯವಹಾರದ ಬಗ್ಗೆ ಚರ್ಚೆ ನಡೆಯುತ್ತದೆ, ಇನ್ನೊಂದು ಮತ್ತೊಂದು ಇದೆಲ್ಲಾ ಕೂಡ ನಮ್ಮ ಸದನದಲ್ಲಿ ಚರ್ಚೆಯಾಗುವುದು ಎಷ್ಟರಮಟ್ಟಿಗೆ ಸಮಂಜಸ ಎನ್ನುವುದನ್ನು ನಾವು ಯೋಚನೆ ಮಾಡಬೇಕಾಗುತ್ತದೆ.

ಮಾನ್ಯ ಸಭಾಪತಿಯವರೇ, ಇವತ್ತಿನ ದಿವಸ ಸರ್ಕಾರ ಏನು ಈ ಬಿಲ್ ಅನ್ನು ತೆಗೆದುಕೊಂಡು ಬಂದಿದ್ದಾರೆ, ಮಾನ್ಯ ಸಚಿವರಿಂದ ನನಗೆ ಒಂದು ಸ್ಪಷ್ಟೀಕರಣ ಕೊಡಬೇಕು. ಕರ್ನಾಟಕದಲ್ಲಿರತಕ್ಕಂಥ ಎಲ್ಲಾ Chancellorಗಳನ್ನು ಮುಖ್ಯಮಂತ್ರಿಗಳನ್ನು ಮಾಡುವ ಉದ್ದೇಶ ಏನಾದರೂ ಈ ಸರ್ಕಾರಕ್ಕೆ ಇದೆಯೇ?

**(ಈ ಹಂತದಲ್ಲಿ ಮಾನ್ಯ ಸಭಾಪತಿಯವರು ಪೀಠಾಸೀನರಾದರು)**

**ಸಭಾಪತಿಯವರು:-** ಮಾನ್ಯ ಚಿದಾನಂದ್ ಎಂ.ಗೌಡ ರವರೇ, ತಾವು ಈ ಬಿಲ್‌ಗೆ ಸೀಮಿತವಾಗಿ ಮಾತನಾಡಿ.

**ಶ್ರೀ ಚಿದಾನಂದ್ ಎಂ.ಗೌಡ:-** ಮಾನ್ಯ ಸಭಾಪತಿಯವರೇ, ಈ ಬಿಲ್‌ನಲ್ಲಿ ಅದರ ಬಗ್ಗೆ ಸ್ಪಷ್ಟವಾಗಿ ಹೇಳಿದ್ದಾರೆ. ಇದೇ ಸರ್ಕಾರ 2016ರಲ್ಲಿ ಈ ಒಂದು University ಯನ್ನು ಅಸ್ತಿತ್ವಕ್ಕೆ ತಂದಾಗ ಗೌರವಾನ್ವಿತ ರಾಜ್ಯಪಾಲರೇ ಕುಲಾಧಿಪತಿಗಳಾಗಿದ್ದರು. ಇದನ್ನು ಈ ಸರ್ಕಾರವೇ ಮಾಡಿದ್ದಾರೆ. ಆದರೆ ಈಗ ಇದನ್ನು ಬದಲಾಯಿಸತಕ್ಕಂಥ ಉದ್ದೇಶವೇನು? ಈಗ ಎಲ್ಲರ ಕಾಳಜಿ ಬಂತು. ಸನ್ಮಾನ್ಯ ಮುಖ್ಯಮಂತ್ರಿಯವರಿಗೆ ಕಾರ್ಯಭಾರದ ಒತ್ತಡ ಇರುತ್ತದೆ. ಅವರು ಆ ಕಾರ್ಯಭಾರದ ಒತ್ತಡದ ಮಧ್ಯೆ Chancellor ರವರನ್ನಾಗಿ ಕೂಡ ಮಾಡುವುದಕ್ಕೆ ಅವಕಾಶ ಇದೆಯೇ? ಇಷ್ಟೆಲ್ಲಾ ಇವೆ.

**ಸಭಾಪತಿಯವರು:-** ಮಾನ್ಯ ಚಿದಾನಂದ್ ಎಂ.ಗೌಡ ರವರೇ, ಮತ್ತೆ ರಿಪೀಟ್ ಆಗುವುದು ಬೇಡ. ತಾವು ಮಾತನಾಡಿದ್ದು ಸಾಕು ಬಿಡಿ.

**ಶ್ರೀ ಚಿದಾನಂದ್ ಎಂ.ಗೌಡ:-** ಮಾನ್ಯ ಸಭಾಪತಿಯವರೇ, ಹಾಗಾಗಿ, ದಯಮಾಡಿ ಈ ಎರಡು clarification ಅನ್ನು ಕೊಡಬೇಕು. ಒಂದುವೇಳೆ ಆ ರೀತಿ ಸರ್ಕಾರದ ಉದ್ದೇಶವಾಗಿದ್ದರೆ ಸರ್ಕಾರ ಸಕಾರಣವನ್ನು ಕೊಟ್ಟು, ಬದಲಾಯಿಸುವುದಕ್ಕೆ ಅವಕಾಶವಿದೆ. ಆದ್ದರಿಂದ ದಯಮಾಡಿ ಈ ಬಗ್ಗೆ clarification ಕೊಡಬೇಕು. ಈ ವಿಧೇಯಕಕ್ಕೆ ನನ್ನ ವಿರೋಧ ಇದೆ. ತಾವು ದಯಮಾಡಿ ಮತ್ತೊಮ್ಮೆ ಆಲೋಚನೆ ಮಾಡಿ ಈ ಒಂದು ಕೆಟ್ಟ ಸಂಪ್ರದಾಯಕ್ಕೆ ನಾಂದಿ ಆಗುವುದು ಬೇಡ. ಒಂದು ಸಂವಿಧಾನದ ಹುದ್ದೆಗೆ ಅಗೌರವ ತರುವುದು ಬೇಡವೆಂದು ನಾನು ಮಾನ್ಯ ಸಭಾಪತಿಯವರ ಮುಖಾಂತರ ಸರ್ಕಾರಕ್ಕೆ ವಿನಂತಿಸುತ್ತೇನೆ.

**ಸಭಾಪತಿಯವರು:-** ಶ್ರೀ ಗೋವಿಂದರಾಜುರವರೇ, ತಾವು ಬಿಲ್ ಬಗ್ಗೆ short ಆಗಿ ಮಾತನಾಡಿ, repeat ಆಗಬಾರದು.

**ಶ್ರೀ ಗೋವಿಂದರಾಜು (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ (ತಿದ್ದುಪಡಿ) ವಿಧೇಯಕ, 2024ರ ಪ್ರಕರಣ 13ಕ್ಕೆ ಏನು ತಿದ್ದುಪಡಿ ಮಾಡಲು ಹೊರಟಿದ್ದಾರೆ, ಅದಕ್ಕೆ ಮಾತ್ರ ನನ್ನ ವಿರೋಧವನ್ನು ವ್ಯಕ್ತಪಡಿಸುತ್ತೇನೆ. ಕಳೆದ 2 ವಾರಗಳ ಹಿಂದೆ ಪತ್ರಿಕೆಗಳಲ್ಲಿ ಒಂದು ಸುದ್ದಿ ಪ್ರಸಾರವಾಯಿತು.

**ಸಭಾಪತಿಯವರು:-** ಮಾನ್ಯ ಗೋವಿಂದರಾಜುರವರೇ, ತಾವು ಮಾತನಾಡಿದ್ದು ಸಾಕು. ಹೆಚ್ಚು ಮಾತನಾಡುವುದು ಬೇಡ.

**ಶ್ರೀ ಗೋವಿಂದರಾಜು:-** ಮಾನ್ಯ ಸಭಾಪತಿಯವರೇ, ಕಳೆದ 2 ವಾರಗಳ ಹಿಂದೆ ಪತ್ರಿಕೆಗಳಲ್ಲಿ ಒಂದು ಸುದ್ದಿ ಪ್ರಸಾರವಾಯಿತು. ಅದೇನೆಂದರೆ, ಗೌರವಾನ್ವಿತ ರಾಜ್ಯಪಾಲರನ್ನು ವಿಶ್ವವಿದ್ಯಾಲಯಕ್ಕೆ ಕುಲಾಧಿಪತಿಗಳನ್ನಾಗಿ ಮಾಡಿರುವುದನ್ನು ಈ ಸರ್ಕಾರ ಬದಲಾವಣೆ ಮಾಡಿ, ಸನ್ಮಾನ್ಯ ಮುಖ್ಯಮಂತ್ರಿಗಳನ್ನೇ ಆ ಒಂದು ಸ್ಥಾನಕ್ಕೆ ಕುಲಾಧಿಪತಿಗಳನ್ನಾಗಿ ಮಾಡುವುದಕ್ಕೆ ರಾಜ್ಯ ಸರ್ಕಾರ ಚಿಂತನೆಯನ್ನು ನಡೆಸಿದೆ ಎನ್ನುವ ವಿಚಾರ ಕಳೆದ 15 ದಿವಸಗಳ ಹಿಂದೆಯೇ ಪತ್ರಿಕೆಗಳಲ್ಲಿ ಬಂದಿತ್ತು. ಅಂದರೆ ಇವತ್ತು ಈ ಬಿಲ್ ರೂಪದಲ್ಲಿ ಇಷ್ಟು ಬೇಗ ಇದು ಬದಲಾವಣೆ ಆಗುತ್ತದೆಂದು ನಾನು expect ಮಾಡಿರಲಿಲ್ಲ. ಆದರೆ ಈ ರಾಜ್ಯ ಸರ್ಕಾರ ಮತ್ತು ಗೌರವಾನ್ವಿತ ರಾಜ್ಯಪಾಲರ ಮಧ್ಯೆ ಇದ್ದಂತಹ ಈ ಒಂದು ಸಂಘರ್ಷ ಈ ರೂಪದಲ್ಲಿ ಆಚೆಗೆ ಬಂದಿದೆ ಎಂದು ನನಗೆ ಅನಿಸುತ್ತದೆ. ಇವತ್ತಿನ ದಿವಸ ಸನ್ಮಾನ್ಯ ಮುಖ್ಯಮಂತ್ರಿಗಳು ಮಾತ್ರ ಕುಲಾಧಿಪತಿಗಳಾದರೆ ಎಲ್ಲಾ ರೀತಿಯಿಂದಲೂ ಆ ಒಂದು ವಿಶ್ವವಿದ್ಯಾಲಯ ಚೆನ್ನಾಗಿ ಆಗುತ್ತದೆಂದು ಮಾನ್ಯ ವಿರೋಧ ಪಕ್ಷದಲ್ಲಿರುವ ಎಲ್ಲಾ ಸದಸ್ಯರು ಹಾಗೂ ಆಡಳಿತ ಪಕ್ಷದ ನಮ್ಮೆಲ್ಲಾ ಸ್ನೇಹಿತರು ಕೂಡ ಹೇಳಿದರು. ಹಾಗಾದರೆ ಇಲ್ಲಿ ಏನಾದರೂ ಈ ಒಂದು ವಿಶ್ವವಿದ್ಯಾಲಯದಲ್ಲಿ ಕೆಲಸ ಮಾಡಬೇಕು, ಅಲ್ಲಿರುವಂತಹ ಖಾಲಿ ಹುದ್ದೆಗಳನ್ನು ಭರ್ತಿ ಮಾಡಬೇಕು. ಅಲ್ಲಿಗೆ ಮೂಲಸೌಕರ್ಯಗಳನ್ನು ಒದಗಿಸಬೇಕೆಂದರೆ, ಗೌರವಾನ್ವಿತ ರಾಜ್ಯಪಾಲರೇನು separate ಮುಂಗಡ ಪತ್ರವನ್ನು ಮಂಡನೆ ಮಾಡುವುದಿಲ್ಲ. ಅದಕ್ಕೂ ಕೂಡ ನಮ್ಮ ಸರ್ಕಾರ ತಾನೆ ಮಾಡುವುದು. ಹಾಗಾಗಿ, ಆ ಪತ್ರಿಕೆಯವರು ಏನು ಅನುಮಾನವನ್ನು ವ್ಯಕ್ತಪಡಿಸಿದ್ದರೋ ಅದಕ್ಕೆ ಇವತ್ತಿನ ದಿವಸ ಇವರು ತಂದಿರತಕ್ಕಂಥ ಈ ಒಂದು ಬಿಲ್ ಪೂರಕವಾಗಿದೆ ಎಂದು ನನಗೆ ಅನಿಸುತ್ತದೆ. ಅದಲ್ಲದೇ ಇವತ್ತಿನ ದಿವಸ ರಾಜ್ಯ ಸರ್ಕಾರದ ಅಡಿಯಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳು ಬೋರ್ಡ್ ಅಧ್ಯಕ್ಷರನ್ನು, ಅದರ ನಿರ್ದೇಶಕರನ್ನು ಯಾವ ರೀತಿ ನಾಮಕರಣ ಮಾಡುತ್ತಾರೋ ಅದೇ ರೀತಿ ವಿಶ್ವವಿದ್ಯಾಲಯಗಳನ್ನು ಕೂಡ ಬೋರ್ಡ್ ಮಾಡುವುದಕ್ಕೆ ಈ ಸರ್ಕಾರ ಹೊರಟಿದೆ ಎನ್ನುವ ಒಂದು ಅನುಮಾನ ನಮಗೆ ವ್ಯಕ್ತವಾಗಿರುತ್ತದೆ. ಗೌರವಾನ್ವಿತ ರಾಜ್ಯಪಾಲರ ಸ್ಥಾನಕ್ಕೆ ಸನ್ಮಾನ್ಯ ಮುಖ್ಯಮಂತ್ರಿಗಳನ್ನು ಇವತ್ತಿನ ದಿವಸ ಕುಲಾಧಿಪತಿಗಳನ್ನಾಗಿ ಮಾಡಲು ಹೊರಟಿದ್ದಾರೆ. ಈ ಬಿಲ್‌ಗೆ ವಿರೋಧ ವ್ಯಕ್ತಪಡಿಸುತ್ತಾ, ನನ್ನ ಮಾತು ಮುಗಿಸುತ್ತೇನೆ.

**ಸಭಾಪತಿಯವರು:-** ಮಾನ್ಯ ಎಂ.ನಾಗರಾಜ್ ರವರೇ, ತಾವು 2 ನಿಮಿಷಗಳಲ್ಲಿ ಮಾತನಾಡಿ ಮುಗಿಸಿ. ಎದ್ದೆದ್ದು ತೌಡು ಕುಟ್ಟಬೇಡಿ.

**ಶ್ರೀ ಎಂ.ನಾಗರಾಜು (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು. ವಿಧಾನಸಭೆಯಿಂದ ಅಂಗೀಕಾರವಾದ ರೂಪದಲ್ಲಿ ತಂದಿತಕ್ಕಂಥ ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ (ತಿದ್ದುಪಡಿ) ವಿಧೇಯಕ, 2024 ಅನ್ನು ನಾನು ಸಂಪೂರ್ಣವಾಗಿ ಬೆಂಬಲಿಸುತ್ತಾ ಹೇಳುವಂತಹ ವಿಚಾರಗಳೇನೆಂದರೆ, ನಾವು ಇಷ್ಟೊತ್ತು ಮಾತನಾಡತಕ್ಕಂಥ ಸಂದರ್ಭದಲ್ಲಿ ಹಲವಾರು ವಿಚಾರಗಳನ್ನು ವಿರೋಧ ಪಕ್ಷದವರು ಮತ್ತು ಆಡಳಿತ ಪಕ್ಷದ ಮಾನ್ಯ ಸದಸ್ಯರುಗಳು ಕೂಡ ಚರ್ಚೆ ಮಾಡಿದರು. University ಯಲ್ಲಿ ಆಗುತ್ತಿರುವಂತಹ ಭ್ರಷ್ಟಾಚಾರಗಳ ಬಗ್ಗೆ ಬೆಳಕು ಚೆಲ್ಲುವುದಕ್ಕೆ ಪ್ರಯತ್ನವನ್ನು ಮಾಡಿದರು. ಈ ಬಿಲ್‌ನ್ನು ತಂದಿರತಕ್ಕಂಥದ್ದು ಸಂದರ್ಭ ಮತ್ತು ಏನು ಕಾರಣವೆಂದು ನಾನು ಅಂದುಕೊಂಡಿದ್ದೇನೆಂದರೆ, University ಗಳು ಉನ್ನತ ಶಿಕ್ಷಣವನ್ನು ಕೊಡುವಂತಹ ಸಂದರ್ಭದಲ್ಲಿ ಭ್ರಷ್ಟಾಚಾರಕ್ಕೆ ಎಡೆಮಾಡಿಕೊಡಬಾರದು. ಆಗುತ್ತಿರತಕ್ಕಂಥ ವಿಚಾರಗಳಲ್ಲಿ ಬದಲಾವಣೆ ತರಬೇಕು. ಒಂದು ಪ್ರಗತಿಪರವಾಗಿ ಇರಬೇಕು ಎನ್ನುವ ಕಾರಣಕ್ಕೋಸ್ಕರ ಗೌರವಾನ್ವಿತ ರಾಜ್ಯಪಾಲರ ಹೆಸರು ಇರುವಂತಹ ಜಾಗದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳನ್ನು ಹಾಕಿರುವುದನ್ನು ನಾನು ಸ್ವಾಗತ ಮಾಡುತ್ತೇನೆ. ಯಾವ ಕಾರಣಕ್ಕೆ ಎಂದರೆ,..

**ಸಭಾಪತಿಯವರು:-** ಮಾನ್ಯ ಎಂ.ನಾಗರಾಜುರವರೇ, ತಾವು ಸ್ವಾಗತ ಮಾಡಿದ್ದೀರಲ್ಲ, ಸಾಕು ಬಿಡಿ.

**ಶ್ರೀ ಎಂ.ನಾಗರಾಜು:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ನಾನು ಅದಕ್ಕೆ ಸಕಾರಣಗಳನ್ನು ಕೊಡುತ್ತೇನೆ, ಇದು ನನ್ನ ಮನವಿ. ನಾನು ಶಿಕ್ಷಣ ಸಂಸ್ಥೆಗಳಿಂದ ಬಂದಿರುವುದರಿಂದ 2 ನಿಮಿಷ extra ತೆಗೆದುಕೊಂಡಿರುತ್ತೇನೆ ಅಷ್ಟೇ. ಗೌರವಾನ್ವಿತ ರಾಜ್ಯಪಾಲರು ಮತ್ತು ಸನ್ಮಾನ್ಯ ಮುಖ್ಯಮಂತ್ರಿಗಳ ಈ ಎರಡು ಹುದ್ದೆಗಳು ಕೂಡ ಬಹು ದೊಡ್ಡ ಸ್ಥಾನಮಾನಗಳನ್ನು ಹೊಂದಿರತಕ್ಕಂಥ ಹುದ್ದೆಗಳಾಗಿರುತ್ತದೆ. ಸನ್ಮಾನ್ಯ ಮುಖ್ಯಮಂತ್ರಿಗಳು ನೇರವಾಗಿ University ಗಳಿಗೆ ಜವಾಬ್ದಾರರಾದರೆ ಆ University ಗಳನ್ನು ಇನ್ನೂ ಹೆಚ್ಚಿನ ಪ್ರಗತಿಪರವಾಗಿ ತೆಗೆದುಕೊಂಡು ಹೋಗುವುದಕ್ಕೆ ಅನುಕೂಲವಾಗುತ್ತದೆ ಎನ್ನುವ ಕಾರಣಕ್ಕೋಸ್ಕರ ಇದನ್ನು ತಾವೆಲ್ಲರೂ ಸ್ವಾಗತ ಮಾಡಬೇಕೆಂದು ನಾನು ಮನವಿ ಮಾಡುತ್ತಿದ್ದೇನೆ. ಒಂದುಕಡೆ ಹಣಕಾಸಿನ ವಿಚಾರ ಮಾತ್ರ ಅಲ್ಲ. ರಾಜ್ಯದ ಮುಖ್ಯಮಂತ್ರಿಗಳಿಗೆ ನೇರವಾಗಿರತಕ್ಕಂಥ elected representatives direct contact ಇರುವುದರಿಂದ, ಆ University ಗಳಲ್ಲಿ ಆ ಶಾಸಕರು ಆಯ್ಕೆಯಾಗಿರುವ ಜನಪ್ರತಿನಿಧಿಗಳು ನೇರವಾಗಿ ತರತಕ್ಕಂಥ ಬದಲಾವಣೆಗಳನ್ನು ಸನ್ಮಾನ್ಯ ಮುಖ್ಯಮಂತ್ರಿಗಳ ಮೂಲಕ ಮತ್ತು ಅನುದಾನಗಳನ್ನು ಕೂಡ ಅತಿವೇಗವಾಗಿ ತರುವುದಕ್ಕೆ ಸಾಧ್ಯವಾಗುವ ಕಾರಣಕ್ಕೋಸ್ಕರ ನಾವು ಇದನ್ನು ಸ್ವಾಗತ ಮಾಡಬೇಕು. ಇನ್ನೊಂದು ವಿಚಾರ ಹೇಳುವುದೇನೆಂದರೆ, ಭ್ರಷ್ಟಾಚಾರದ ಬಗ್ಗೆ ಮಾತನಾಡುವುದಾದರೆ, 2022ರಲ್ಲಿ ಒಬ್ಬರು ಶ್ರೀ ಸುಪ್ರೀತ್ ಎನ್ನುವವರು Bengaluru North Syndicate Member ಆಗಿ nominate ಆಗುತ್ತಾರೆ. According to the Karnataka State Universities Act, 2000, ಒಬ್ಬ ವ್ಯಕ್ತಿ nominate ಆದಾಗ, ಅವರ term complete ಆಗುವವರೆಗೂ ಇನ್ನೊಂದು University ಗೆ nominate ಆಗಬಾರದು. ಅಲ್ಲಿ ಒಂದು ವರ್ಷ term ಇದ್ದರೂ ಕೂಡ ಅವರು Bengaluru City University ಗೆ nominate ಆಗುವುದು ಏನು

ತೋರಿಸುತ್ತದೆ ಎನ್ನುವುದನ್ನು ಈ ಸದನ ಯೋಚನೆ ಮಾಡಬೇಕಾಗುತ್ತದೆ ಎನ್ನುವ ವಿಚಾರಗಳನ್ನು ಹೇಳುತ್ತಿದ್ದೇನೆ. ಇಂತಹ ವಿಚಾರಗಳಿಗೆ ಅವಕಾಶ ಕೊಡಬಾರದು. ಕಾನೂನು ಬಾಹಿರವಾಗಿರತಕ್ಕಂಥ Syndicate Members ಯಾರೇ ಮಾಡಿದರೂ ಕೂಡ ಅದರ ವಿರುದ್ಧ ಹೋರಾಟ ಮಾಡಬೇಕೆಂದರೆ ಜನಪ್ರತಿನಿಧಿಗಳಿಗೆ ಶಕ್ತಿ ತುಂಬಬೇಕಾಗುತ್ತದೆ. ಸನ್ಮಾನ್ಯ ಮುಖ್ಯಮಂತ್ರಿಗಳನ್ನು ಗೌರವಾನ್ವಿತ ರಾಜ್ಯಪಾಲರು ಇರತಕ್ಕಂಥ Chancellor ಜಾಗದಲ್ಲಿ ಇಟ್ಟಿದ್ದೇ ಆದಲ್ಲಿ ಜನಪ್ರತಿನಿಧಿಗಳು ನೇರವಾಗಿ ಸನ್ಮಾನ್ಯ ಮುಖ್ಯಮಂತ್ರಿಗಳ ಹತ್ತಿರ ಹೋಗಿ ಇದನ್ನು ಸರಿಪಡಿಸುವುದಕ್ಕೆ ಸಾಧ್ಯವಾಗುತ್ತದೆ. ಒಂದುವೇಳೆ ನಾವು ಶಿಕ್ಷಣದಲ್ಲಿ ಭ್ರಷ್ಟಾಚಾರವನ್ನು ಬೆಳೆಯುವುದಕ್ಕೆ ಬಿಟ್ಟಿದ್ದೇ ಆದಲ್ಲಿ, ನಾನು ಎಲ್ಲಾ Governor ಗಳು ಮಾಡುತ್ತಾರೆಂದು ಹೇಳುವುದಿಲ್ಲ. ಇತ್ತೀಚಿನ ದಿನಗಳಲ್ಲಿ ಆಗುತ್ತಿರುವಂತಹ, Governor ತನ್ನ ಸಾಂವಿಧಾನಿಕ ಹುದ್ದೆಯಲ್ಲಿ ನಡೆದುಕೊಳ್ಳತಕ್ಕಂಥ ರೀತಿ-ನೀತಿಗಳನ್ನು ನೋಡಿದಾಗ, ಸಾರ್ವಜನಿಕವಾಗಿ ಚರ್ಚಾವಸ್ತುವಾಗಿರತಕ್ಕಂಥದ್ದನ್ನು ನಾವು ಒಪ್ಪುವುದಕ್ಕೆ ಸಾಧ್ಯವಿಲ್ಲ. ಅಲ್ಲಿ ರಾಜಕಾರಣ ಮಾಡುವುದಕ್ಕೂ ಸಾಧ್ಯವಿಲ್ಲ. Search Committee ಕೊಟ್ಟದ್ದು,....

**ಶ್ರೀ ಟಿ.ಎ.ಶರವಣ:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. . .

**ಶ್ರೀ ಎಂ.ನಾಗರಾಜು:-** ಮಾನ್ಯ ಸಭಾಪತಿಯವರೇ, ನಾನು ಮಾನ್ಯ ಸದಸ್ಯರಿಗೆ yield ಆಗಿಲ್ಲ. ದಯವಿಟ್ಟು ಅವರು ಕುಳಿತುಕೊಳ್ಳಬೇಕು. ನಾನು ಮಾನ್ಯ ಸಭಾಪತಿಯವರ ಪೀಠಕ್ಕೆ ಮಾತನಾಡುತ್ತಿದ್ದೇನೆ. Search Committee ಗೆ ಕೊಡದೇ 3 ಹೆಸರಲ್ಲಿ ಅವರೊಬ್ಬರನ್ನು pick up ಮಾಡಿ Chancellor ಮಾಡುವುದೇ ಆದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳು ನೇರವಾಗಿ ಇಡೀ ನಾಡಿನ ಎಲ್ಲಾ ವಿಚಾರಧಾರೆಗಳನ್ನು ತಿಳಿದುಕೊಂಡಿರುತ್ತಾರೆ. ಒಟ್ಟು 224 ಮತ ಕ್ಷೇತ್ರಗಳ ಆಗು-ಹೋಗುಗಳನ್ನು ಅವರು ತಿಳಿದುಕೊಂಡಿರತಕ್ಕಂಥವರು. ಆರ್ಥಿಕ ವ್ಯವಸ್ಥೆಯನ್ನು ತಿಳಿದುಕೊಂಡಿರತಕ್ಕಂಥವರು. ಒಂದು ಗ್ರಾಮೀಣ ಅಭಿವೃದ್ಧಿಯನ್ನು ಮಾಡಬೇಕೆಂದು ಪಣತೊಟ್ಟಿರತಕ್ಕಂಥ ಒಬ್ಬ ಯಾರೇ ಮುಖ್ಯಮಂತ್ರಿಯಾದರೂ ಆತನಿಗೆ ಅವಕಾಶವನ್ನು ಕೊಡುವುದು ತಪ್ಪೇನಿದೆ ಎನ್ನುವ ಮಾತನ್ನು ನಾನು ಈ ಸದನದಲ್ಲಿ ಕೇಳುತ್ತಿದ್ದೇನೆ. ಆ ಕಾರಣಕ್ಕೋಸ್ಕರ ನಾನು ಮಾನ್ಯ ಸಭಾಪತಿಯವರಲ್ಲಿ ಮನವಿ ಮಾಡುವುದೇನೆಂದರೆ, ಈ ಬಿಲ್‌ನ್ನು ತಂದಿರತಕ್ಕಂಥ ಗ್ರಾಮೀಣಾಭಿವೃದ್ಧಿ ಇಲಾಖೆಯ ಮಾನ್ಯ ಸಚಿವರಿಗೆ ಮತ್ತು ರಾಜ್ಯ ಸರ್ಕಾರಕ್ಕೆ ನಾನು ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಇಲ್ಲಿರತಕ್ಕಂಥ ಸರ್ವರೆಲ್ಲರೂ ಒಟ್ಟಾಗಿ ಸೇರಿ ಈ ಬಿಲ್‌ನ್ನು ಪಾಸ್ ಮಾಡಿಕೊಡಬೇಕೆಂದು ನಾನು ಮನವಿ ಮಾಡುತ್ತಿದ್ದೇನೆ.

**(ಮುಂದು)**

(971)18.12.2024/5.30/ಎಂಎಂ-ಎಂ.ಡಿ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಡಿ.ಎಸ್. ಅರುಣ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ತಮಗೆ ಧನ್ಯವಾದಗಳು. ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ವಿಶ್ವವಿದ್ಯಾಲಯ (ತಿದ್ದುಪಡಿ) ವಿಧೇಯಕಕ್ಕೆ ನನ್ನ ವಿರೋಧವಿದೆ. ಎಲ್ಲಾ ಚರ್ಚೆಗಳಾಗಿದೆ. ಕಾಂಗ್ರೆಸ್‌ನವರು ಈ ಬಿಲ್ ಅನ್ನು ತಂದಿರುವುದು ಮತ್ತು ಮಾನ್ಯ ಸಚಿವರು ಈ ಬಿಲ್ ಅನ್ನು ಮಂಡಿಸಿದಾಗ ನನಗನ್ನಿಸಿದ್ದು ಈ ದೇಶದಲ್ಲಿ ರಾಜ್ಯಪಾಲರನ್ನು ನೇಮಕ ಮಾಡುವುದು ಕೇಂದ್ರ

ಸರ್ಕಾರ. ಇವರು ಇನ್ನು ಇತಿಹಾಸದಲ್ಲಿಯೇ ಕೇಂದ್ರದಲ್ಲಿ ಕಾಂಗ್ರೆಸ್ ಪಕ್ಷ ಬರುವುದಿಲ್ಲ ಎಂದು ಇವರು ಒಂದು ರೀತಿಯ ತೀರ್ಮಾನವನ್ನು ಮಾಡಿದ್ದಾರೆ. ಹಾಗಾಗಿ ಇವರು ಏನು ಮಾಡುತ್ತಿದ್ದಾರೆಂದರೆ, ರಾಜ್ಯಪಾಲರ ಅಧಿಕಾರವನ್ನು ಮೊಟಕು ಮಾಡಬೇಕೆಂದು ಅವರ ಇತಿಹಾಸದಲ್ಲಿ ಇನ್ನು ಇವರ ಕೈಯಲ್ಲಿ ರಾಜ್ಯಪಾಲರ ನೇಮಕವಾಗುವುದಿಲ್ಲ. ಹಾಗಾಗಿ ಇನ್ನೇನು ಮಾಡಬೇಕೆಂದು ಕೊನೆಗೆ ಮುಖ್ಯಮಂತ್ರಿಗಳು ಇನ್ನು ಮೂರೂವರೆ ವರ್ಷ ಇರುತ್ತಾರೆ. "Chancellor" ಎಂದು ಮಾಡಬೇಕಾದರೆ ಒಂದು intent ಇತ್ತು. *"The original intent of making Governors hold the office of Chancellor and vesting some statutory powers on them was to insulate universities from political influence."* The intent was that. ಅದಕ್ಕೋಸ್ಕರ ಗವರ್ನರ್‌ರವರನ್ನು "Chancellor" ಎಂದು ಮಾಡಿದ್ದು. ಈಗಿನದ್ದಲ್ಲ. ಹಾಗಾಗಿ ಇವರ ಉದ್ದೇಶ political ಆಗಿದೆ. ದಯಮಾಡಿ ಆಗಲೇ ಹೇಳದ ಹಾಗೆ ಮುಖ್ಯಮಂತ್ರಿಗಳಿಗೆ ಪ್ರತಿ ವಿಶ್ವವಿದ್ಯಾಲಯಗಳ ಅಭಿವೃದ್ಧಿಗೆ ಬೇಕಾಗಿರುವಂತಹ ಹಣ ಆ ತರಹದ್ದನ್ನು ಕೊಡಿ. ಒಂದೊಂದು ವಿಶ್ವವಿದ್ಯಾಲಯಕ್ಕೂ ಬಜೆಟ್‌ನಲ್ಲಿ ಹಂಚಿಕೆ ಮಾಡಿ. ನಿಮಗದು ಗೊತ್ತಿದೆಯಲ್ಲಾ. ಈ ವಿಶ್ವವಿದ್ಯಾಲಯದಲ್ಲಿ ಎಷ್ಟು ಜನ ಮಕ್ಕಳು ಓದುತ್ತಿದ್ದಾರೆ, infrastructure ಗೆ ಎಷ್ಟು ಜನರ ಅವಶ್ಯಕತೆ ಇದೆ ಎಂದು ಕೊಡಿ. ಏತಕ್ಕೆ ರಾಜಕೀಯವಾಗಿ ಯೋಚನೆ ಮಾಡುತ್ತಿದ್ದೀರಿ? ಗವರ್ನರ್‌ರವರಿಗೆ ಇರುವಂತಹ ಅಪಾರವಾದಂತಹ ಗೌರವ, ನಿಮಗೆ ನಿಮ್ಮ ಮುಂದಿನ ದಿನಗಳಲ್ಲಿ ದೇಶದಲ್ಲಿಯೆ ಗವರ್ನರ್ ಇರುವುದಿಲ್ಲ ಎನ್ನುವ ಕಾರಣಕ್ಕೋಸ್ಕರ ಆ ರೀತಿ ಮಾಡಬಾರದೆಂದು ನಿಮ್ಮಲ್ಲಿ ಕೇಳಿಕೊಳ್ಳುತ್ತೇನೆ.

**ಶ್ರೀ ಪಿ.ಹೆಚ್. ಪೂಜಾರ್:-** ಮಾನ್ಯ ಸಭಾಪತಿಯವರೇ, . . .

**ಶ್ರೀ ಕೆ.ಎ. ತಿಪ್ಪೇಸ್ವಾಮಿ:-** ಮಾನ್ಯ ಸಭಾಪತಿಯವರೇ, . . .

**ಸಭಾಪತಿಯವರು:-** ಇಲ್ಲ, ಕುಳಿತುಕೊಳ್ಳಿ. ನಿಮಗೆ ಆಮೇಲೆ ಅವಕಾಶ ಕೊಡುತ್ತೇನೆ. ಮಾನ್ಯ ಸಚಿವರೇ, ಪ್ರಿಯಾಂಕ್‌ರವರೇ, ಉತ್ತರ ಹೇಳಿ.

**ಶ್ರೀ ಪ್ರಿಯಾಂಕ್ ಖರ್ಗೆ (ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು):-** ಮಾನ್ಯ ಸಭಾಪತಿಯವರೇ, ಈಗಾಗಲೇ ಮಾನ್ಯ ಸದಸ್ಯರುಗಳಾದ ಶ್ರೀ ಟಿ.ಎ. ಶರವಣರವರು, ಶ್ರೀ ಕೆ.ಎಸ್. ನವೀನ್‌ರವರು, ಶ್ರೀ ಸಿ.ಟಿ. ರವಿಯವರು, ಶ್ರೀ ಶಶಿಲ್ ಜಿ. ನಮೋಶಿಯವರು, ಶ್ರೀ ಎಸ್.ವ್ಹಿ. ಸಂಕನೂರರವರು, ಶ್ರೀ ಕೆ. ಪ್ರತಾಪ್‌ಸಿಂಹ ನಾಯಕರು, ಶ್ರೀ ಐವನ್ ಡಿ'ಸೋಜಾರವರು, ಡಾ: ತಳವಾರ್ ಸಾಬಣ್ಣನವರು, ಶ್ರೀ ಎನ್. ರವಿಕುಮಾರ್‌ರವರು, ಶ್ರೀ ಎಸ್. ಕೇಶವ ಪ್ರಸಾದ್‌ರವರ್, ಶ್ರೀ ಪುಟ್ಟಣ್ಣನವರು, ಶ್ರೀಮತಿ ಬಲ್ಕೀಸ್ ಬಾನುರವರು, ಶ್ರೀ ಹಣಮಂತ ರುದ್ರಪ್ಪ ನಿರಾಣಿಯವರು, ಶ್ರೀ ಚಿದಾನಂದ್ ಎಂ.ಗೌಡ ರವರು, ಶ್ರೀ ಗೋವಿಂದರಾಜುರವರು, ಶ್ರೀ ಎಂ. ನಾಗರಾಜುರವರು ಮತ್ತು ಶ್ರೀ ಡಿ.ಎಸ್. ಅರುಣ್‌ರವರು ಎಲ್ಲರೂ ಕೂಡ ವಿಧೇಯಕದ ಪರವೂ ಹಾಗೂ ವಿರೋಧವೂ ಮಾತನಾಡಿದ್ದಾರೆ. ಮೊದಲನೆಯದಾಗಿ, ನಾನು ಬಹಳ ಸ್ಪಷ್ಟವಾಗಿ ಹೇಳಬಯಸುತ್ತಿದ್ದೇನೆ, ಈ ವಿಧೇಯಕವನ್ನು ನಾವು ತಂದಿದ್ದು ಯಾವುದೇ ರಾಜಕೀಯ ದುರುದ್ದೇಶದಿಂದಲ್ಲ.

ಯಾವುದೇ ರೀತಿಯ ದ್ವೇಷ ಸಾಧಿಸುವುದಕ್ಕಲ್ಲ, ಗವರ್ನರ್ ಜೊತೆ ಯಾವುದೇ ರೀತಿಯಾದಂತಹ confrontation ಮಾಡಿಕೊಳ್ಳಬೇಕೆಂದಲ್ಲ. We have utmost respect for the Chair and to the dignity of the Chair. This is not in any way confrontational to the Hon'ble Governor. ಬಹಳಷ್ಟು ಜನರು ಈ ಬಿಲ್ ಎರಡು ಹೆಜ್ಜೆ ಹಿಂದೆ ಹೋಗುವ ಹಾಗಿದೆ, retrograde ಇದೆ, ಇದರಿಂದ ಪ್ರಗತಿಯಾಗುವುದಿಲ್ಲ ಎಂದು ಹೇಳುತ್ತಿದ್ದರು. ನಾನು ಬಹಳ ಸ್ಪಷ್ಟವಾಗಿ ಈ ತಿದ್ದುಪಡಿಯ ಉದ್ದೇಶಗಳನ್ನು ಹೇಳಿದೆ. It is brought in only for the better and more effective functioning of the University. ಈಗ administration ಆಗುತ್ತಿಲ್ಲ ಎಂದು ಹೇಳಿಲ್ಲ. ಬಹಳ ಸ್ಪಷ್ಟವಾಗಿಯೇ ಹೇಳಿದ್ದೇನೆ. More effective management of administration and better coordination with the Government, ನಮ್ಮ ಯುವಕರಿಗೆ ಇನ್ನೂ ಹೆಚ್ಚು ಗುಣಮಟ್ಟವಾದಂತಹ ಶಿಕ್ಷಣ, ಸಂಶೋಧನೆ, ಉತ್ತಮವಾದಂತಹ ತರಬೇತಿ, ಹೆಚ್ಚಿನ ಉದ್ಯಮಶೀಲತೆ ಹಾಗೂ ಹೊಸ ಆವಿಷ್ಕಾರಗಳನ್ನು ಅಲ್ಲಿಂದ ಆರಂಭವಾಗಬೇಕೆಂಬ ಉದ್ದೇಶಗಳಿಂದ ನಾವು ಈ ತಿದ್ದುಪಡಿಯನ್ನು ತಂದಿದ್ದೇವೆ. ಎಲ್ಲಿಯೂ ಕೂಡ ನಾನು ರಾಜ್ಯಪಾಲರು ನಮಗೆ ಸಹಕಾರ ನೀಡಿಲ್ಲವೆಂದು ಹೇಳಿಲ್ಲ. ಸಹಕಾರವನ್ನು ಹಿಂದೆಯೂ ನೀಡಿದ್ದಾರೆ, ಮುಂದೆಯೂ ನೀಡುತ್ತಾರೆ. ಆದರೆ ವಿರೋಧಪಕ್ಷದಲ್ಲಿ ಬಹಳಷ್ಟು ಸದಸ್ಯರುಗಳು ಚರ್ಚೆ ಮಾಡಿದಂತಹ ಸಂದರ್ಭದಲ್ಲಿ ಮುಖ್ಯಮಂತ್ರಿಗಳಿಗೆ ಸಮಯ ಸಿಗುವುದಿಲ್ಲ ಎಂದರು. ಅದಕ್ಕೋಸ್ಕರ ನಾವೊಂದು ಸೆಕ್ಷನ್ ಅನ್ನು ರಾಜ್ಯ ಸರ್ಕಾರದ ಬದಲು Minister for Rural Development and Panchayat Raj ಎಂದು ತಂದಿದ್ದೇವೆ. ಈಗ ರಾಜ್ಯಸರ್ಕಾರ ನಿರ್ವಹಣೆ ಮಾಡುತ್ತಿದೆ, Chancellor ಆಗಿ ಮಾನ್ಯ ರಾಜ್ಯಪಾಲರಿದ್ದಾರೆ. ವಿಶ್ವವಿದ್ಯಾಲಯಗಳಲ್ಲಿ ಏನಾದರೂ ಸಮಸ್ಯೆಗಳಾದಾಗ ವಿದ್ಯಾರ್ಥಿಗಳು ಯಾವತ್ತಾದರೂ Hon'ble Governor ಮುಂದೆ ಹೋಗಿ ಸಮಯಕ್ಕೆ ಸರಿಯಾಗಿ ಊಟ ಸಿಕ್ಕಿಲ್ಲ, ಪೇಪರ್ ಲೀಕ್ ಆಯಿತು, ನಮಗೆ ಬೋಧಕರಿಲ್ಲ ಎಂದು ಪ್ರತಿಭಟನೆ ಮಾಡಿದ್ದಾರಾ? Hon'ble Governor ಮುಂದೆ ಯಾರೂ ಹೋಗಿಲ್ಲ. ಆದರೆ ಪ್ರತಿಭಟನೆಗಳು ಆಗುವುದೆಲ್ಲಿ? Higher Education Minister office ಮುಂದೆ, ಮುಖ್ಯಮಂತ್ರಿಗಳ ಕಛೇರಿ ಮುಂದೆ, ಎಂ.ಎಲ್.ಎ. ಮನೆಗಳ ಮುಂದೆ ಆಗುತ್ತವೆ. ಆದ್ದರಿಂದ ಇಲ್ಲಿ ಟೈಂ ಪ್ರಶ್ನೆ ಅಲ್ಲ. How effectively we can manage the University is important and we think that this is one of the better ways. ಅದಕ್ಕೆ ನಾವಿದನ್ನು ತಂದಿದ್ದೇವೆ. Search Committee ಬಗ್ಗೆ ಮಾನ್ಯ ಸದಸ್ಯರಾದ ಸಿ.ಟಿ. ರವಿಯವರು ಮಾತನಾಡಿದರು. Search Committee ಗವರ್ನರ್ ನೇಮಕ ಮಾಡುವುದಿಲ್ಲ, ಸರ್ಕಾರವೇ ನೇಮಕ ಮಾಡುತ್ತದೆ. ಆ ಕಮಿಟಿ ಮೂರು ಜನರ ಹೆಸರು ಕೊಡುತ್ತದೆ, ಅವರು ಯಾರನ್ನಾದರೂ ಆಯ್ಕೆ ಮಾಡುತ್ತಾರೆ. ಸರ್ಕಾರ ಹೇಳಿದ್ದೇ ಕೇಳಬೇಕೆಂದಿಲ್ಲ. ಅವರಿಗೆ X, Y, Z ಸೂಕ್ತವೆನಿಸಿದರೆ ಅವರು ಮಾಡಬಹುದು. That is also Hon'ble Governor's discretion. 2022ರಲ್ಲಿ ಹಿಂದಿನ ಸರ್ಕಾರದಲ್ಲಿ ಬೆಂಗಳೂರು ವಿಶ್ವವಿದ್ಯಾಲಯದ Vice Chancellor ನೇಮಕಾತಿ ಯಾವರೀತಿ ಆಗಿದೆ ಎಂಬುದು ತಮಗೆ ಗೊತ್ತಿದೆ. ಇದ್ದವರೇ ಕೋರ್ಟ್‌ಗೆ ಹೋಗಿ ಮೂರು ವರ್ಷ ಅದು ಸಂಘರ್ಷದಲ್ಲಿಯೇ ಹೋಯಿತು. ಅದರ details ಗೆ ನಾನು ಹೋಗುವುದಿಲ್ಲ.

ವಿಶೇಷವಾಗಿ ಬಹಳಷ್ಟು ಜನರು ನಾವು ರಾಜ್ಯಪಾಲರ ಹಕ್ಕನ್ನು ತೆಗೆಯುತ್ತಿದ್ದೇವೆ ಅಥವಾ ಅವರಿಗೆ ಕಪ್ಪು ಚುಕ್ಕೆ ತರುತ್ತಿದ್ದೇವೆ ಎಂದು ಹೇಳುತ್ತಿದ್ದರು. Show me any guidelines, ಯು.ಜಿ.ಸಿ. ಗೈಡ್‌ಲೈನ್ಸ್ ಇರಬಹುದು, 'ಸಂವಿಧಾನ'ದಲ್ಲಿ ಇರಬಹುದು, where it says that the Hon'ble Governor only should be the Chancellor. ಎಲ್ಲಿಯೂ ಇಲ್ಲ. Mandatory ಇಲ್ಲ. ಅಲ್ಲಿ ಗವರ್ನರ್ ಎಂಬ ಪದವೇ ಇಲ್ಲ. ನಾವು ನಮ್ಮ ಸಂಪ್ರದಾಯಗಳಿಗೆ ಬಳಸಿಕೊಂಡು ಬಂದಿದ್ದೇವೆ. ನೀವು ತೋರಿಸಿಬಿಡಿ. ಅದಕ್ಕೆ ನಾನು ಮಾನ್ಯ ಸದಸ್ಯರಾದ ಅರುಣ್‌ರವರು ಮಾತನಾಡಿದಾಗ, ಆ quote ಅನ್ನು ಎಲ್ಲಿಂದ ತಂದರು ಎಂದು I was surprised. ನಾವು ಮಾಡುತ್ತಿರುವುದು ಅಸಂವಿಧಾನಿಕ, we are spoiling the sanctity of the Raj Bhavan ಎಂದು ಹೇಳುತ್ತಿದ್ದಾರಲ್ಲಾ; ಮಾನ್ಯ ಸದಸ್ಯರಾದ ಶ್ರೀ ಶಶಿಲ್ ಜಿ. ನಮೋಶಿಯವರು ಮಾತನಾಡಬೇಕಾದರೆ ಸರಿಯಾಗಿ ಹೇಳಿದರು. ಆದರೆ ಸಂಪೂರ್ಣವಾಗಿ ಹೇಳಿಲ್ಲ. State Autonomy and Federalism ನಲ್ಲಿ education is on concurrent list. States have the power to legislate about the Universities. ಇದಕ್ಕೆ 3-4 ಪ್ರಕರಣಗಳಿವೆ. ಇದು ಸುಪ್ರೀಂ ಕೋರ್ಟ್ ತನಕ ಹೋಗಿದೆ. ಸುಪ್ರೀಂ ಕೋರ್ಟ್ ಜಡ್ಜ್‌ಮೆಂಟ್ ಇದೆ. Dr. J.S.YADAV vs. STATE OF Uttar Pradesh 2011 ರಲ್ಲಿ the appointment of the VC, must follow procedure. Hon'ble Governor ರವರೇ ಇರಬೇಕೆಂದು ಏನಿಲ್ಲ. ಪ್ರೊಸೀಜರ್ ಪ್ರಕಾರ ಇರಬಹುದು and it is a state subject ಎಂದು 3-4 ಜಡ್ಜ್‌ಮೆಂಟ್‌ಗಳಿವೆ. ವಿಶೇಷವಾಗಿ ಇಲ್ಲಿ Role of the Governor, Centre – State relations, Constitutional Governance and Management of Centre – State relations ಎಂದು ಈ ಬಗ್ಗೆ ಹಿಂದೆ ಒಂದು Punchhi Commission ರಚಿಸಿದ್ದರು. ಜಸ್ಟೀಸ್॥ ಮದನ್‌ಮೋಹನ್ ಪುಂಚಿಯವರ ವರದಿ ಇದೆ. ಅದರಲ್ಲಿ ಬಹಳ ಸ್ಪಷ್ಟವಾಗಿ ಹೇಳುತ್ತಾರೆ,

> *"To be able to discharge the constitutional obligations fairly and impartially, the Governor should not be burdened with positions and powers which are not envisaged by the Constitution.*
>
> *And which may expose the office to controversies or public criticism. Conferring statutory powers on the Governor by State Legislatures had that potential and should be avoided. Making the Governor the Chancellor of Universities and thereby conferring powers of him which may have had some relevance historically has ceased to be so with change of time and circumstances."*

ಮತ್ತೊಮ್ಮೆ ಒಂದು ಲೈನ್ ಹೇಳುತ್ತೇನೆ, *"the Governor should not be burdened with positions and powers which are not envisaged by the Constitution."* ಸಂವಿಧಾನದ ಚೌಕಟ್ಟಿನಲ್ಲಿ ಅವರಿಗೆ

ಅವಕಾಶವಿಲ್ಲ, ನಾವೇ ಏತಕ್ಕೆ ಅವರಿಗೆ ಹೆಚ್ಚು ಜವಾಬ್ದಾರಿ ಕೊಟ್ಟು ಅವರಿಗೆ burden ಮಾಡುತ್ತಿದ್ದೇವೆ ಎಂದು ಇದೆ. ಇದಕ್ಕೆ politically motivated ಇದೆ ಎಂದು ಸಾಕಷ್ಟು ಹೇಳಿದರು. ರಾಜಕೀಯವನ್ನು ನಾವು university campus ಗೆ ತೆಗೆದುಕೊಂಡು ಹೋಗುತ್ತಿದ್ದೇವೆ ಎಂದು ಹೇಳಿದರು. ಕ್ಯಾಂಪಸ್‌ನಲ್ಲಿ ಏನೇನು ನಡೆಯುತ್ತದೆ ಅದರ ಬಗ್ಗೆ ನಾನು ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ನಾನು ನನ್ನ ಸ್ನೇಹಿತರಿಗೆ ಕೇಳುತ್ತಿರುವ ಪ್ರಶ್ನೆ ಏನೆಂದರೆ, ಇಲ್ಲಿ ಮುಖ್ಯಮಂತ್ರಿಗಳಿರಬಾರದು, ಗವರ್ನರ್‌ಗೆ ಕೊಡಬೇಕು ಎಂದು ಹೇಳುತ್ತಾರೆ. ಆದರೆ ಬಹಳಷ್ಟು ರಾಜ್ಯಗಳಲ್ಲಿ ಎಲ್ಲಿ ತಮ್ಮದೇ ಸರ್ಕಾರ ಇದೆ ಅಲ್ಲಿಯೂ ಇದೇ ವ್ಯವಸ್ಥೆ ಇದೆ.

(ಮುಂದು)

**(972) 18.12.2024 5.40 ಹೆಚ್‌ವಿ-ಎಕೆ**

**ಶ್ರೀ ಪ್ರಿಯಾಂಕ್ ಖರ್ಗೆ (ಮುಂದು):**

ಸನ್ಮಾನ್ಯ ಸಭಾಪತಿಯವರೇ, ಬರೋಡಾ ವಿಶ್ವವಿದ್ಯಾನಿಲಯದ ವ್ಯವಸ್ಥೆಯನ್ನು ನೋಡಿದರೇ, the Governor has no role to play. ಅಲ್ಲಿ ಘನತೆವೆತ್ತ ರಾಜ್ಯಪಾಲರ ಪಾತ್ರ ಇರುವುದಿಲ್ಲ. ಅರುಣಾಚಲ ಪ್ರದೇಶ ವಿಶ್ವವಿದ್ಯಾನಿಲಯಗಳ (ತಿದ್ದುಪಡಿ) ವಿಧೇಯಕ 2022ನ್ನು ಯಾವ ಕಾರಣಕ್ಕಾಗಿ ತರಲಾಯಿತು? ಅಲ್ಲಿ the Governor is just a Visitor. ಅಲ್ಲಿಯೂ ವಿ.ಸಿ.,ಯವರ ನೇಮಕಾತಿ ಮತ್ತು ವಿಶ್ವವಿದ್ಯಾಲಯದ ಆಡಳಿತ ವ್ಯವಸ್ಥೆಯಲ್ಲಿ ಘನತೆವೆತ್ತ ರಾಜ್ಯಪಾಲರ ಪಾತ್ರವಿಲ್ಲ. The Doctor Ram Manohar Lohia National Law University Act, Uttar Pradesh, ಇಲ್ಲಿಯೂ ಸಹ ಘನತೆವೆತ್ತ ರಾಜ್ಯಪಾಲರ ಪಾತ್ರ ಇರುವುದಿಲ್ಲ. The National Law School of India University Act ಏನಿದೆ, ಆ ಕಾಯ್ದೆ ಅಡಿಯಲ್ಲಿ, the Chief Justice of India is the Visitor, who appoints the Vice-Chancellor. The Karnataka Private Universities Act ಮತ್ತು ಇತರೆ ವಿಶ್ವವಿದ್ಯಾನಿಲಯಗಳು ಏನಿವೆ, ಇವೆಲ್ಲವೂ ಸರಿಯಾಗಿ ನಡೆಯುತ್ತಿಲ್ಲವೇ? ಇಂತಹ ಸಾಕಷ್ಟು ಉದಾಹರಣೆಗಳನ್ನು ನಾನು ಕೊಡಬಲ್ಲೆ; ಈ ಮೇಲೆ ಉಲ್ಲೇಖ ಮಾಡಿದಂತಹ ವಿಶ್ವವಿದ್ಯಾನಿಲಯಗಳಲ್ಲಿ ಘನತೆವೆತ್ತ ರಾಜ್ಯಪಾಲರಿಗೆ ಯಾವುದೇ ಪಾತ್ರವಿಲ್ಲ, neither administrative nor constitutional.

**ಶ್ರೀ ಕೇಶವ ಪ್ರಸಾದ್.ಎಸ್.:-** ಸನ್ಮಾನ್ಯ ಸಭಾಪತಿಯವರೇ, ಅವರು ಉಲ್ಲೇಖ ಮಾಡುತ್ತಿರುವ ವಿಶ್ವವಿದ್ಯಾಲಯಗಳಲ್ಲಿ ಮುಖ್ಯಮಂತ್ರಿಗಳೇ ಕುಲಾಧಿಪತಿಗಳಾಗಿದ್ದಾರೆಯೇ?

**ಶ್ರೀ ಪ್ರಿಯಾಂಕ್ ಖರ್ಗೆ(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):-** ಹೌದು, ರಾಷ್ಟ್ರೀಯ ಕಾನೂನು ವಿಶ್ವವಿದ್ಯಾಲಯಕ್ಕೆ ಸಿ.ಜೆ.ಐ, ಯವರು ಕುಲಾಧಿಪತಿಗಳಾಗಿದ್ದಾರೆ. ಮಾನ್ಯ ರಾಂ ಮನೋಹರ್ ಲೋಹಿಯಾ ವಿಶ್ವವಿದ್ಯಾಲಯಕ್ಕೆ ಮುಖ್ಯಮಂತ್ರಿಗಳೇ ಕುಲಾಧಿಪತಿಗಳಾಗಿದ್ದಾರೆ. In Arunachal Pradesh,

the Governor is just a Visitor; the Chief Minister calls the shots. ಗುಜರಾತ್ ಮತ್ತು ಬರೋಡಾ ವಿಶ್ವವಿದ್ಯಾಲಯಗಳಲ್ಲಿಯೂ ಇದೇ ವ್ಯವಸ್ಥೆ ಇದೆ. ಅದನ್ನೇ ನಾವು ಇಲ್ಲಿಗೆ ಅಳವಡಿಸಿಕೊಂಡರೇ, ಯಾವುದೋ ದುರುದ್ದೇಶಪೂರಿತವಾಗಿ ಮತ್ತು ರಾಜಕೀಯ ಪ್ರೇರಿತವಾಗಿ ಈ ಬದಲಾವಣೆಯನ್ನು ತರಲಾಗಿದೆಯೆಂದು ಅವರು ಹೇಗೆ ಹೇಳುವುದಕ್ಕೆ ಸಾಧ್ಯ? ಅಲ್ಲಿ ಎಲ್ಲ ಕಡೆಗಳಲ್ಲಿ ವಿಶ್ವವಿದ್ಯಾಲಯಗಳು ಚೆನ್ನಾಗಿ ನಡೆದುಕೊಂಡು ಹೋಗುತ್ತಿವೆಯೆಂದು ಇವರೇ ಹೇಳುತ್ತಾರೆ. ನಾವು ಅದರಂತೆ ಬದಲಾವಣೆ ಮಾಡುವುದಕ್ಕೆ ಪ್ರಯತ್ನ ಮಾಡಿದರೇ; ಒಂದು ಪ್ರಗತಿಪರವಾಗಿರುವ ಹಾದಿ ಹಿಡಿಯುವುದಕ್ಕೆ ಹೋದರೇ "ಇಲ್ಲ ಈ ತಿದ್ದುಪಡಿಯನ್ನು ರಾಜಕೀಯ ದುರುದ್ದೇಶದಿಂದ ತರಲಾಗಿದೆ" ಎಂದು ಹೇಳುವ ಮೂಲಕ ಅವರು double standard ನ್ನು ಹೊಂದಬಾರದೆಂದು ನಾನು ಹೇಳುತ್ತಿದ್ದೇನೆ. ಕೆಲವು ಸದಸ್ಯರುಗಳು ಮಾತನಾಡುತ್ತಾ, ಘನತೆವೆತ್ತ ರಾಜ್ಯಪಾಲರ ಜೊತೆಗೆ ಈಗ ನಿಮ್ಮ ಸಂಬಂಧಗಳು ಸರಿಯಿಲ್ಲ, ಮೂಡಾ ಪ್ರಕರಣದ ಹಿನ್ನೆಲೆಯಲ್ಲಿ ಈ ತಿದ್ದುಪಡಿಯನ್ನು ತರಲಾಗಿದೆ" ಎನ್ನುವ ಮಾತುಗಳನ್ನು ಹೇಳಿದ್ದಾರೆ. ಹಾಗಾದರೇ, ಮುಖ್ಯಮಂತ್ರಿಗಳನ್ನು ವಿಶ್ವವಿದ್ಯಾಲಯದ ಕುಲಾಧಿಪತಿಗಳನ್ನಾಗಿ ಮಾಡಿರುವ ಕಡೆಗಳಲ್ಲಿ ಅಂದರೆ, ಉತ್ತರ ಪ್ರದೇಶ, ಗುಜರಾತ್, ಅಸ್ಸಾಂ ಮತ್ತು ಅರುಣಾಚಲ ಪ್ರದೇಶಗಳಲ್ಲಿರುವ ಮುಖ್ಯಮಂತ್ರಿಗಳು ಸಹ ಹಗರಣಗಳನ್ನು ಮಾಡಿದ್ದಾರೆಯೇ? ಅವರುಗಳ ಮೇಲೆಯೂ ಪ್ರಕಣಗಳು ದಾಖಲಾಗಿದೆಯೇ?

ಸನ್ಮಾನ್ಯ ಸಭಾಪತಿಯವರೇ, ಅವರುಗಳು ಸರಿಯಾದ ಸಂಗತಿಗಳನ್ನು ತಿಳಿದುಕೊಳ್ಳದೇ, ಅಧ್ಯಯನ ಮಾಡದೇ ಸದನಕ್ಕೆ ತಪ್ಪು ಮಾಹಿತಿಯನ್ನು ಕೊಡಬಾರದು. ಹಿಂದಿನ ವ್ಯವಸ್ಥೆ ಹೇಗಿತ್ತು ಎನ್ನುವುದರ ಬಗ್ಗೆ ನಾನು ಮಾತನಾಡುವುದಕ್ಕೆ ಹೋಗುವುದಿಲ್ಲ. ಈಗಾಗಲೇ ಮಾನ್ಯ ಪುಟ್ಟಣ್ಣನವರು ಮಾತನಾಡುತ್ತಿದ್ದ ಸಂದರ್ಭದಲ್ಲಿ ಎಲ್ಲವನ್ನೂ ಎಳೆಎಳೆಯಾಗಿ ಬಿಚ್ಚಿಟ್ಟಿದ್ದಾರೆ.

**ಶ್ರೀ ಸಿ.ಟಿ.ರವಿ:-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಪುಟ್ಟಣ್ಣನವರಿಗೆ ನಾನು ತಿಳಿಸಬಯಸುವುದೇನೆಂದರೆ, ಘನತೆವೆತ್ತ ರಾಜ್ಯಪಾಲರ ವ್ಯಾಪ್ತಿಗೆ ಬಾರದೇ ಇರುವಂತಹ; ಆಯಾಕಟ್ಟಿನ ಹುದ್ದೆಗಳಿಗೆ ನೇಮಕ ಮಾಡಬೇಕಾದರೇ, ಅರ್ಬನ್ ಡಿ.ಸಿ., ಇಷ್ಟು ಕೊಡಬೇಕು, ಸ್ಪೆಷಲ್ ಡಿ.ಸಿ., ಇಷ್ಟು ಕೊಡಬೇಕು, ಎ.ಸಿ., ಇಷ್ಟು ಕೊಡಬೇಕು; ಕಮೀಶನರ್ ಇಷ್ಟು ಕೊಡಬೇಕು ಎನ್ನುವ ರೇಟ್ ಕಾರ್ಡ್ ಇದೆ. ಚೀಫ್ ಇಂಜಿನಿಯರ್ ಎಷ್ಟು ಕೊಡಬೇಕು? ,,,,, ಇದು ಎಲ್ಲಿಗೆ ಹೋಗಿ ಮುಟ್ಟುತ್ತಿದೆ.

**(ಗೊಂದಲ)**

**ಶ್ರೀ ಐವನ್ ಡಿ'ಸೋಜಾ(ವಿಧಾನಸಭಾ ಕ್ಷೇತ್ರ):-** ಸನ್ಮಾನ್ಯ ಸಭಾಪತಿಯವರೇ, ಅದರ ಬಗ್ಗೆಯೂ ಚರ್ಚೆಯಾಗಲೀ, ಮುಖ್ಯಮಂತ್ರಿಯಾಗುವುದಕ್ಕೆ ಎಷ್ಟು; ಮಂತ್ರಿಯಾಗುವುದಕ್ಕೆ ಎಷ್ಟು ಎನ್ನುವುದರ ಬಗ್ಗೆಯೂ ಅವರು ಬೆಳಕು ಚೆಲ್ಲಬೇಕಾಗುತ್ತದೆ.

**(ಗೊಂದಲ)**

**ಶ್ರೀ ಪ್ರಿಯಾಂಕ್ ಖರ್ಗೆ:-** ಸನ್ಮಾನ್ಯ ಸಭಾಪತಿಯವರೇ, ವಿಷಯಾಂತರ ಮಾಡುವುದರ ಬಗ್ಗೆ ನಾವು ಮಾನ್ಯ ಸಿ.ಟಿ.ರವಿ ಅವರ ಹತ್ತಿರ ಕಲಿತುಕೊಳ್ಳಬೇಕು. ಅವರು ವಿ.ಸಿ., ಯಿಂದ ಡಿ.ಸಿ.,ಗೆ ಹೋಗುತ್ತಿದ್ದಾರೆ. ರೇಟ್ ಕಾರ್ಡ್ ಎಲ್ಲ ಆಚೆಗೆ ಬಂದಿರುವುದರಿಂದಲೇ ಅವರುಗಳು ಈಗ ವಿರೋಧ ಪಕ್ಷದಲ್ಲಿ ಕುಳಿತುಕೊಂಡಿರುವುದು.

**(ಗೊಂದಲ)**

**ಶ್ರೀ ಸಿ.ಟಿ.ರವಿ:-** ಸನ್ಮಾನ್ಯ ಸಭಾಪತಿಯವರೇ, ಬಿ.ಬಿ.ಎಂ.ಪಿ.,ಯಲ್ಲಿ ಪ್ರತಿ ಚದುರ ಅಡಿಗೆ ನೂರು ರೂಪಾಯಿಗಳನ್ನು ಕೊಡಬೇಕಾಗಿದೆ. ಇದರ ಬಗ್ಗೆಯೂ ಮಾನ್ಯ ಪುಟ್ಟಣ್ಣನವರು ಬೆಳಕು ಚೆಲ್ಲಬೇಕು.... ಹೀಗೆ ಉಳಿದುಕೊಳ್ಳುವುದಕ್ಕೆ ಎಷ್ಟು ಕೊಡಬೇಕು ಎನ್ನುವುದು ಸಹ ನನಗೆ ಗೊತ್ತಿದೆ.

**(ಗೊಂದಲ)**

**ಸಭಾಪತಿಯವರು:-** ಎಲ್ಲರೂ ಕುಳಿತುಕೊಳ್ಳಿ. ಸುಮ್ಮನೆ ಎಷ್ಟು ಮಾತನಾಡುತ್ತಿದ್ದೀರಿ? ಮಾನ್ಯ ಮಂತ್ರಿಗಳು ಮಾತನಾಡುತ್ತಿದ್ದಾರೆ. ಮಾನ್ಯ ಸಿ.ಟಿ.ರವಿ ಮತ್ತು ಶ್ರೀ ಪುಟ್ಟಣ್ಣನವರುಗಳೂ ಕುಳಿತುಕೊಳ್ಳಬೇಕು. ನೀವಿಬ್ಬರೂ ಒಂದೇ.

**(ಗೊಂದಲ)**

**ಶ್ರೀ ಪುಟ್ಟಣ್ಣ(ಶಿಕ್ಷಕರ ಕ್ಷೇತ್ರ):-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಸಿ.ಟಿ.ರವಿಯವರು ವಿ.ಸಿ., ಅವರ ಬಗ್ಗೆ ಮಾತನಾಡುತ್ತಿದ್ದರೇ ಅವರು ಎ.ಸಿ.,ಗಳ ಬಗ್ಗೆ ಮಾತನಾಡುತ್ತಿದ್ದಾರೆ. ಮಾನ್ಯ ಬಸವನಗೌಡ ಯತ್ನಾಳ್‌ರವರು ಮುಖ್ಯಮಂತ್ರಿಗಳ ಸ್ಥಾನಕ್ಕೆ 2,500 ಕೋಟಿ ರೂಪಾಯಿಗಳ ಆರೋಪ ಮಾಡಿದ್ದಾರೆ. ಅದನ್ನು ಯಾರು ಯಾರಿಗೆ ಕೊಟ್ಟಿದ್ದಾರೆ; ಎಲ್ಲಿಗೆ ತೆಗೆದುಕೊಂಡು ಹೋಗುತ್ತಿದ್ದರು. ಯಾವ ವಾಹನದಲ್ಲಿ ಲಾರಿಯಲ್ಲಿ; ಟ್ರೈನ್‌ನಲ್ಲಿ ಅಥವಾ ವಿಮಾನದಲ್ಲಿ ತೆಗೆದುಕೊಂಡು ಹೋಗುತ್ತಿದ್ದರೇ ಎನ್ನುವುದನ್ನು ಅವರು ಹೇಳಬೇಕಾಗಿದೆ.

**(ಗೊಂದಲ)**

**ಶ್ರೀ ಸಿ.ಟಿ.ರವಿ:-** ಸನ್ಮಾನ್ಯ ಸಭಾಪತಿಯವರೇ, ಆಗ ಮಾನ್ಯ ಪುಟ್ಟಣ್ಣನವರು ನಮ್ಮ ಜೊತೆಗೆ ಇದ್ದರು.

**(ಗೊಂದಲ)**

**ಶ್ರೀ ಪುಟ್ಟಣ್ಣ:-** ಸನ್ಮಾನ್ಯ ಸಭಾಪತಿಯವರೇ, ನಾನು ಅದಕ್ಕೂ ತಯಾರಿದ್ದೇನೆ. ಭಾರತೀಯ ಜನತಾ ಪಕ್ಷದವರು ಈ ರಾಜ್ಯದಲ್ಲಿ ಪೂರ್ಣ ಪ್ರಮಾಣದ ಬಹುಮತವನ್ನು ಗಳಿಸಿಕೊಂಡು ಎಂದಿಗೂ ಸರ್ಕಾರವನ್ನು ರಚನೆ ಮಾಡಲಿಲ್ಲ. ನನ್ನಂಥವರನ್ನು ಇಟ್ಟುಕೊಂಡೇ ಸರ್ಕಾರ ರಚನೆ ಮಾಡಿರುವುದು. ಏನೇನು ಮಾಡಿದ್ದಾರೆ ಎನ್ನುವುದನ್ನು ಹೇಳುವುದಕ್ಕೆ ತಯಾರಿದ್ದೇನೆ. ಅದು ಇಡೀ ರಾಜ್ಯ ಮತ್ತು ದೇಶದ ಜನತೆಗೆ ಗೊತ್ತಾಗಲಿ. ನನಗೆ ಏನೂ ಆಗಬೇಕಾಗಿಲ್ಲ. ನಾನು ಎಲ್ಲದಕ್ಕೂ ready. ಎಲ್ಲವನ್ನು ತೆರೆದು ಇಡುತ್ತೇನೆ.

**ಸಭಾಪತಿಯವರು:-** ಎಲ್ಲರೂ ಕುಳಿತುಕೊಳ್ಳಿ. ಮಾನ್ಯ ಸಚಿವರು ಮಾತನಾಡುವಾಗ, ಯಾರೂ ಮಧ್ಯೆ ಮಾತನಾಡಬೇಡಿ.

**ಶ್ರೀ ಪ್ರಿಯಾಂಕ್ ಖರ್ಗೆ:-** ಸನ್ಮಾನ್ಯ ಸಭಾಪತಿಯವರೇ, ವಿಷಯಾಂತರ ಮಾಡುವುದರ ಬಗ್ಗೆ ನಾವು ಮಾನ್ಯ ಸಿ.ಟಿ.ರವಿ ಅವರ ಹತ್ತಿರ ಕಲಿತುಕೊಳ್ಳಬೇಕು. ಇಲ್ಲಿ ಚರ್ಚೆ ಆಗುತ್ತಿರುವುದು, Chancellor ಮತ್ತು Vice-

Chancellor ಬಗ್ಗೆ. ಅವರು ವಿ.ಸಿ., ಯಿಂದ ಡಿ.ಸಿ.,ಗೆ ಹೋಗುತ್ತಿದ್ದಾರೆ. ರೇಟ್ ಕಾರ್ಡ್ ಎಲ್ಲ ಆಚೆಗೆ ಬಂದಿರುವುದರಿಂದಲೇ ಅವರುಗಳು ಈಗ ವಿರೋಧ ಪಕ್ಷದಲ್ಲಿ ಕುಳಿತುಕೊಂಡಿರುವುದು. ಅದರ ಬಗ್ಗೆ ನಾನು ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ನಾನು justification ಕೊಟ್ಟಿದ್ದೇನೆ. ನಾವು ಹೊಸದೇನೂ ತರುತ್ತಿಲ್ಲ. ಅಸಂವಿಧಾನಾತ್ಮಕವಾಗಿರುವ ಅಂಶಗಳೇನೂ ಇಲ್ಲ. ಯುವಕರಿಗೆ ಒಳ್ಳೆಯ ಭವಿಷ್ಯವನ್ನು ನೀಡುವುದಕ್ಕಾಗಿ ಮತ್ತು ಈ ವಿಶ್ವವಿದ್ಯಾಲಯ ನಮ್ಮ ರಾಷ್ಟ್ರಕ್ಕೆ ಮಾದರಿಯಾಗಬೇಕು ಎನ್ನುವ ನಿಟ್ಟಿನಲ್ಲಿ ಈ ತಿದ್ದುಪಡಿಯನ್ನು ತರಲಾಗುತ್ತಿದೆ. ದಯವಿಟ್ಟು ಈ ವಿಧೇಯಕಕ್ಕೆ ಅನುಮೋದನೆಯನ್ನು ನೀಡಬೇಕೆಂದು ವಿರೋಧ ಪಕ್ಷದ ಎಲ್ಲ ಸದಸ್ಯರಲ್ಲಿ ಮನವಿ ಮಾಡುತ್ತಿದ್ದೇನೆ.

**ಶ್ರೀ ಕೆ.ಎ.ತಿಪ್ಪೇಸ್ವಾಮಿ (ನಾಮನಿರ್ದೇಶಿತರು):-** ಸನ್ಮಾನ್ಯ ಸಭಾಪತಿಯವರೇ, ಘನತೆವೆತ್ತ ರಾಜ್ಯಪಾಲರ ಹುದ್ದೆ ಗೌರವಾನ್ವಿತವಾಗಿರುವ ಹುದ್ದೆಯಾಗಿದೆ. ಘನತೆವೆತ್ತ ರಾಜ್ಯಪಾಲರು ಪ್ರತಿಯೊಂದು ವಿಶ್ವವಿದ್ಯಾಲಯದ ಘಟಿಕೋತ್ಸವ ಸಮಾರಂಭದಲ್ಲಿ ಭಾಗವಹಿಸಿ ವಿದ್ಯಾರ್ಥಿಗಳಿಗೆ ಪದವಿ ಪ್ರಧಾನ ಮಾಡುತ್ತಾರೆ. ಅದರಲ್ಲಿ ಮಾನ್ಯ ಉನ್ನತ ಶಿಕ್ಷಣ ಸಚಿವರು ಸಹ ಭಾಗವಹಿಸಿರುತ್ತಾರೆ. ರಾಜ್ಯದಲ್ಲಿ ಹಿಂದೆ ಶ್ರೀ ಧರ್ಮವೀರ್‌ರವರು, ಮಾನ್ಯ ಆಶೋಕ್‌ನಾಥ್ ಬ್ಯಾನರ್ಜಿಯವರು, ಶ್ರೀ ಮೋಹನ್‌ಲಾಲ್ ಸುಖಾಡಿಯಾರವರು ರಾಜ್ಯಪಾಲರಾಗಿದ್ದಾಗ ಇಂತಹ ತಿದ್ದುಪಡಿಯನ್ನು ತರುತ್ತಿರಲಿಲ್ಲವೆನ್ನುವುದು ನನ್ನ ಅಭಿಪ್ರಾಯವಾಗಿದೆ. ಪ್ರಸ್ತುತ ಘನತೆವೆತ್ತ ರಾಜ್ಯಪಾಲರಾಗಿರುವ ಶ್ರೀ ಥಾವರ್‌ಚಂದ್ ಗೆಹ್ಲೋಟ್‌ರವರು ಸುಸಂಸ್ಕೃತರು ಮತ್ತು ಸಂಭಾವಿತರಾಗಿದ್ದಾರೆ. ಘನತೆವೆತ್ತ ರಾಜ್ಯಪಾಲರ ಬದಲಾಗಿ ಮಾನ್ಯ ಮುಖ್ಯಮಂತ್ರಿಗಳನ್ನು ಕುಲಾಧಿಪತಿಗಳನ್ನಾಗಿ ನೇಮಕ ಮಾಡಿದರೆ, ಅವರಿಗೆ ವಿಶ್ವವಿದ್ಯಾಲಯಗಳ ಘಟಿಕೋತ್ಸವ ಸಮಾರಂಭಗಳಿಗೆ ಹಾಜರಾಗುವುದಕ್ಕೆ ಸಮಯವಿರುತ್ತದೆಯೇ ಎನ್ನುವುದು ನನ್ನ ಪ್ರಶ್ನೆಯಾಗಿದೆ. ಮಾನ್ಯ ಮುಖ್ಯಮಂತ್ರಿಗಳು ತಮ್ಮ ಬಿಡುವಿಲ್ಲದ ಸಮಯದ ನಡುವೆ ಘಟಿಕೋತ್ಸವಕ್ಕೆ ಹಾಜರಾಗುವುದಕ್ಕೆ ಸಾಧ್ಯವಾಗುತ್ತದೆಯೇ ಅಥವಾ ಅವರು ಡೇಟ್ ಕೊಡದಿದ್ದರೇ ವಿದ್ಯಾರ್ಥಿಗಳಿಗೆ ಪದವಿ ಪ್ರಧಾನ ಮಾಡುವುದಕ್ಕೆ ತೊಂದರೆಯಾಗುವುದಿಲ್ಲವೇ ಎನ್ನುವುದು ನನ್ನ ಪ್ರಶ್ನೆಯಾಗಿದೆ. ದೈನಂದಿನ ಕಾರ್ಯಭಾರದ ಜೊತೆಗೆ ಮಾನ್ಯ ಮುಖ್ಯಮಂತ್ರಿಗಳಿಗೆ ಈ ವಿಶ್ವವಿದ್ಯಾಲಯಕ್ಕೆ ಸಂಬಂಧಪಟ್ಟಂತೆ ಬರುವಂತಹ ಕಡತಗಳನ್ನು ಅಧಿಕಾರಿಗಳೇ ನೋಡುವುದರಿಂದ Academic Council ಗೆ ಧಕ್ಕೆಯಾಗುವುದಿಲ್ಲವೇ ಎನ್ನುವುದು ನನ್ನ ಪ್ರಶ್ನೆಯಾಗಿದೆ. ಇದನ್ನು ಯಾವ ರೀತಿಯಲ್ಲಿ ನಿರ್ವಹಿಸಲಾಗುತ್ತದೆ ಎನ್ನುವುದನ್ನು ಮಾನ್ಯ ಸಚಿವರು ಸ್ಪಷ್ಟಪಡಿಸಬೇಕಾಗುತ್ತದೆ.

ಸನ್ಮಾನ್ಯ ಸಭಾಪತಿಯವರೇ, ಅಹಮದಾಬಾದ್‌ನಲ್ಲಿ RUDMI (Rural Development and Management Institute) ಎಂದು ಒಂದು ಉತ್ತಮವಾಗಿರುವ ಸಂಸ್ಥೆ ಇದೆ. ಅದೇ ರೀತಿಯಲ್ಲಿ ಈ ವಿಶ್ವವಿದ್ಯಾಲಯವನ್ನು ಏತಕ್ಕೋಸ್ಕರ ಸ್ವತಂತ್ರ ವಿಶ್ವವಿದ್ಯಾಲಯವನ್ನಾಗಿ ಮಾಡಬಾರದು ಏತಕ್ಕೋಸ್ಕರ ರಾಜಕೀಯ ಪ್ರೇರಿತವಾಗಿ ಈ ತಿದ್ದುಪಡಿಯನ್ನು ತರಲಾಗುತ್ತಿದೆ ಎನ್ನುವುದು ನನ್ನ ಪ್ರಶ್ನೆಯಾಗಿದೆ. ಆದ್ದರಿಂದ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು ತಂದಿರುವಂತಹ ಈ ತಿದ್ದುಪಡಿಗೆ ನನ್ನ ಸಹಮತವಿಲ್ಲ, ಈ

ತಿದ್ದುಪಡಿಯನ್ನು ಮತ್ತೊಮ್ಮೆ ಪುನರ್ ವಿಮರ್ಶಿಸಬೇಕೆಂದು ಕೇಳಿಕೊಳ್ಳುತ್ತಾ, ನನ್ನ ಮಾತುಗಳನ್ನು ಮುಕ್ತಾಯಗೊಳಿಸುತ್ತಿದ್ದೇನೆ.

**ಸಭಾಪತಿಯವರು:-** ಮುಂದಿನ ಹಾಗೂ ಕೊನೆಯ ಸದಸ್ಯರಾಗಿ ಮಾನ್ಯ ಪಿ.ಹೆಚ್.ಪೂಜಾರ್‌ರವರು ಮಾತನಾಡಬೇಕು. ಕೇವಲ ಸ್ಪಷ್ಟೀಕರಣವನ್ನು ಮಾತ್ರ ಕೇಳಬೇಕು. ಭಾಷಣ ಮಾಡಬಾರದು ಮತ್ತು ಎರಡು ನಿಮಿಷಗಳಲ್ಲಿ ತಮ್ಮ ಮಾತುಗಳನ್ನು ಮುಕ್ತಾಯಗೊಳಿಸಬೇಕು.

**ಶ್ರೀ ಪಿ.ಹೆಚ್.ಪೂಜಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಸನ್ಮಾನ್ಯ ಸಭಾಪತಿಯವರೇ, ನಮ್ಮ ದೇಶದ ಸಂಸ್ಕೃತಿ ಮತ್ತು ಪರಂಪರೆ "ನಹೀ ಜ್ಞಾನೇನ ಸದೃಶ್ಯಂ" ಎಂದು ಹೇಳುತ್ತದೆ. ಜ್ಞಾನಕ್ಕೆ ಸಮಾನವಾದದ್ದು ಯಾವುದೂ ಇಲ್ಲ ಎನ್ನುವುದು ಇದರರ್ಥವಾಗಿದೆ. ಎಲ್ಲ ಕಡೆಯಿಂದ ಜ್ಞಾನವನ್ನು ಆವಾಹನೆ ಮಾಡಿಕೊಳ್ಳುವುದು; ಸ್ವೀಕಾರ ಮಾಡುವಂತಹ ಸ್ವಭಾವ ನಮ್ಮಲ್ಲಿದೆ. ನಮ್ಮ ಸಂಸ್ಕೃತಿಯಲ್ಲಿ ಗುರು ಪರಂಪರೆ ಎನ್ನುವುದು ಸಹ ಕಂಡು ಬರುತ್ತದೆ. ಗುರುನೇ ಬೇರೆ; ರಾಜನೇ ಬೇರೆ. ಗುರು ಗುರುವಿನ ಸ್ಥಾನದಲ್ಲಿ, ಮನೆಯ ಯಜಮಾನನ್ನಾಗಿ ಜವಾಬ್ದಾರಿಯನ್ನು ನಿರ್ವಹಿಸಿಕೊಂಡು ಹೋಗುವಂತಹ ಪರಂಪರೆ ಇದೆ. ರಾಜನಾದವನು ಇಡೀ ರಾಜ್ಯದ ಅಭಿವೃದ್ಧಿಯ ಕಡೆಗೆ ಗಮನಹರಿಸಿ ಸಮಾನತೆಯ ಸಮಾಜ ಮತ್ತು ಎಲ್ಲರಿಗೂ ಒಳ್ಳೆಯದಾಗುವ ಕಾರ್ಯಕ್ರಮವನ್ನು ನೀಡುವಂತಹ ಜವಾಬ್ದಾರಿ ರಾಜನದ್ದಾಗಿದೆ. ಗುರುವಿನ ಸ್ಥಾನಕ್ಕೆ ಅಗೌರವ ತರುವಂತೆ ನಡೆದುಕೊಳ್ಳುವುದು ಸರಿಯಲ್ಲ. ಸಂವಿಧಾನ ವ್ಯವಸ್ಥೆಯಲ್ಲಿ ಬಹುಮತ ಪಡೆದಂತಹ ಸರ್ಕಾರ ಯಾವುದೇ ಇರಲಿ; ರಾಷ್ಟ್ರಪತಿಗಳ ಬಗ್ಗೆ ಅಥವಾ ಘನತೆವೆತ್ತ ರಾಜ್ಯಪಾಲರ ಬಗ್ಗೆ ಅಗೌರವ ತೋರುವಂತಹ ಕೆಲಸವನ್ನು ಮಾಡಬಾರದೆನ್ನುವುದು ನನ್ನ ಅನಿಸಿಕೆಯಾಗಿದೆ. ಎಷ್ಟೇ ಬಹುಮತವಿದ್ದರೂ ಸಹ ಸಂವಿಧಾನಾತ್ಮಕವಾಗಿ ಯಾರಿಗೆ ಯಾವಯಾವ ಜವಾಬ್ದಾರಿಗಳನ್ನು ನೀಡಲಾಗಿದೆಯೋ ಆ ಜವಾಬ್ದಾರಿಗಳನ್ನು ನೀಡಿ ಅವರನ್ನು ಕಾಣುವಂತಹ ಇತಿಹಾಸ ಮತ್ತು ಪರಂಪರೆಯನ್ನು ನಾವು ಉಳಿಸಿಕೊಂಡು ಹೋಗಬೇಕಾಗಿದೆ. ಸಣ್ಣಪುಟ್ಟ ಕಾರಣಕ್ಕಾಗಿ ಆ ಸ್ಥಾನದ ಗೌರವವನ್ನು ಕೆಳಗಿಳಿಸಿದರೇ ನಮ್ಮ ರಾಜ್ಯಕ್ಕೆ ಒಳ್ಳೆಯದಾಗುವುದಿಲ್ಲ. 'Unconstitutional' ಎಂದು ಹೇಳುವುದಕ್ಕೆ ನಾನು ತಯಾರಿಲ್ಲ. It is an unethical procedure that this government is following. Unethical ಆಗುವಂತಹ ಕೆಲಸಕ್ಕೆ ಈ ಸರ್ಕಾರ ಕೈ ಹಾಕಬಾರದು. ಸಂವಿಧಾನದ ಕರ್ತೃಗಳಲ್ಲಿ ಈ ಭಾವನೆ ಇರಲಿಲ್ಲ. ಶತಶತಮಾನಗಳ ಹಿಂದಿನ ನಮ್ಮ ದೇಶದ ಪರಂಪರೆಯನ್ನು ನೋಡಿದಾಗ, ಗುರು ಪರಂಪರೆ, ಹಿರಿಯರ ಪರಂಪರೆಗೆ ಮತ್ತು ಯಜಮಾನರ ಪರಂಪರೆಗೆ ವಿಶೇಷವಾಗಿರುವ ಪ್ರಾಮುಖ್ಯತೆಯನ್ನು ಕೊಟ್ಟಿರುವುದು ಕಂಡು ಬರುತ್ತದೆ. ಬೀದಿಯಲ್ಲಿ ನಿಂತು ನಮ್ಮ ಪರಿವಾರದ ಬಗ್ಗೆ ಮಾತನಾಡುವುದಿಲ್ಲ, ಬೇರೆಯವರು ಆ ರೀತಿ ಇದ್ದಾರೆ; ಈ ರೀತಿ ಇದ್ದಾರೆ ಎಂದು ಮಾತನಾಡುತ್ತಾರೆ. ನಮ್ಮ ಪರಿವಾರದ ಬಗ್ಗೆ ಮಾತನಾಡಿದರೆ, ಹುಷಾರ್! ಎಂದು ಹೇಳುತ್ತೇವೆ. ನಮ್ಮ ಸಂವಿಧಾನದ ವ್ಯವಸ್ಥೆಯೊಳಗೆ ಘನತೆವೆತ್ತ ರಾಜ್ಯಪಾಲರಿಗೆ ಯಾವ ರೀತಿಯಲ್ಲಿ ಗೌರವವನ್ನು ನೀಡಬೇಕು ಆ ಗೌರವವನ್ನು ನೀಡುತ್ತಿಲ್ಲ ಎನ್ನುವ ಖೇದ ಇವತ್ತಿನ ಈ ಚರ್ಚೆಯನ್ನು ನೋಡಿದರೆ ಗೊತ್ತಾಗುತ್ತಿದೆ. ದಯಮಾಡಿ ಆ ಸ್ಥಾನ-ಮಾನ ಮತ್ತು ಗೌರವವನ್ನು ನಮ್ಮ ದೇಶದಲ್ಲಿ

ನೀಡುತ್ತಿದ್ದೇವೆ ಅದನ್ನು ಕೆಳಗಿಳಿಸುವಂತಹ ಕೆಲಸವನ್ನು ಇಲ್ಲಿ ಮಾಡಬಾರದೆಂದು ಹೇಳುತ್ತಾ, ದಯಮಾಡಿ ಈ ವಿಧೇಯಕವನ್ನು ವಾಪಸ್ಸು ಪಡೆಯಬೇಕೆನ್ನುವ ವಿನಂತಿಯನ್ನು ನಾನು ಮಾಡುತ್ತಿದ್ದೇನೆ.

(ಮುಂದು)

(973) 18.12.2024 5.50 ಪಿಕೆ:ಎಕೆ (ಸಭಾಪತಿಯವರ ಉಪಸ್ಥಿತಿ)

**ಪ್ರಸ್ತಾವದ ಅಂಗೀಕಾರ**

**ಶ್ರೀ ಪ್ರಿಯಾಂಕ್ ಖರ್ಗೆ (ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು):-** ಮಾನ್ಯ ಸಭಾಪತಿಗಳೆ, ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ 2024ರ ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ;

"2024ರ ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು"

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಗಳೆ, ನಾನು ವಿಭಜನೆಗಾಗಿ ಒತ್ತಾಯಿಸುತ್ತೇನೆ.

**ಸಭೆಯನ್ನು ವಿಭಜಿಸಲಾಯಿತು**

**ಸಭಾಪತಿಯವರು:-** ವಿಭಜಿಸಿದಾಗ ಫಲಿತಾಂಶ ಹೀಗಿದೆ:

ಹೌದು – 26

ಇಲ್ಲ - 25

ಸೂಚನೆಯು "ಹೌದು" ಎನ್ನುವವರ ಪರವಾಗಿದೆ.

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು**

**ಇ) ಕರ್ನಾಟಕ (ಖನಿಜ ಹಕ್ಕುಗಳು ಮತ್ತು ಖನಿಜ ಹೊಂದಿರುವ ಭೂಮಿ) ತೆರಿಗೆ ವಿಧೇಯಕ, 2024**

**ಪರ್ಯಾಲೋಚನಾ ಪ್ರಸ್ತಾವ**

**ಶ್ರೀ ಎಸ್.ಎಸ್.ಮಲ್ಲಿಕಾರ್ಜುನ (ಗಣಿ ಮತ್ತು ಭೂವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು):-** ಮಾನ್ಯ ಸಭಾಪತಿಗಳೆ, 2024ರ ಕರ್ನಾಟಕ (ಖನಿಜ ಹಕ್ಕುಗಳು ಮತ್ತು ಖನಿಜ ಹೊಂದಿರುವ ಭೂಮಿ) ತೆರಿಗೆ ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು**

**ಶ್ರೀ ಎಸ್.ಎಸ್.ಮಲ್ಲಿಕಾರ್ಜುನ (ಗಣಿ ಮತ್ತು ಭೂವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು):-** ಮಾನ್ಯ ಸಭಾಪತಿಗಳೆ, ಮಾನ್ಯ ಸರ್ವೋಚ್ಛ ನ್ಯಾಯಾಲಯವು ದಿನಾಂಕ 25.7.2024ರಂದು ಮಿನರಲ್ ಏರಿಯಾ ಡೆವಲಪ್‌ಮೆಂಟ್ ಅಥಾರಿಟಿ V/s ಸ್ಟೀಲ್ ಅಥಾರಿಟಿ ಆಫ್ ಇಂಡಿಯಾ ಪ್ರಕರಣದಲ್ಲಿ, ಶಾಸಕಾಂಗಕ್ಕೆ ತೆರಿಗೆ ವಿಧಿಸುವ ಅಧಿಕಾರ ಇರುತ್ತದೆ ಎಂದು ಆದೇಶಿಸಿದೆ. ಆ ನಿಟ್ಟಿನಲ್ಲಿ ನಮ್ಮ ಗಣಿ ಗುತ್ತಿಗೆ ಸಂಬಂಧಪಟ್ಟಂತೆ ವಿಧೇಯಕದಲ್ಲಿ ನಮೂದಿಸಿರುವಂತೆ ತೆರಿಗೆ ವಿಧಿಸಲಾಗಿದೆ. ಆ ಎಲ್ಲಾ ತೆರಿಗೆಗಳಿಂದ ನಮ್ಮ ರಾಜ್ಯಕ್ಕೆ ರೂ. 4,207 ಕೋಟಿ ಅಂದಾಜು ವರಮಾನ ಬರುತ್ತದೆ. ರಾಜ್ಯಕ್ಕೆ ಹೆಚ್ಚು ವರಮಾನ ಬಂದರೆ ರಾಜ್ಯವನ್ನು ಅಭಿವೃದ್ಧಿ ಪಥದತ್ತ ಕೊಂಡೊಯ್ಯಬಹುದು. ಆ ನಿಟ್ಟಿನಲ್ಲಿ ತಾವು ವಿಧೇಯಕಕ್ಕೆ ಒಪ್ಪಿಗೆ ನೀಡಬೇಕೆಂದು ಕೋರುತ್ತೇನೆ.

**ಶ್ರೀ ಕೆ.ಎ.ತಿಪ್ಪೇಸ್ವಾಮಿ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಗಳೆ, ನಿನ್ನೆ ಮಾನ್ಯ ಮಂತ್ರಿಗಳು ಉತ್ತರ ಕೊಡುತ್ತಾ, ಪ್ರತಿ ವರ್ಷ ರಾಜ್ಯಕ್ಕೆ ರೂ. 4,207 ಕೋಟಿ ಆದಾಯ ಬರುತ್ತದೆ ಎನ್ನುವ ಮಾತನ್ನು ಹೇಳಿದರು. ಈ ಹಣವನ್ನು ಜಿಲ್ಲಾ ಖನಿಜ ಪ್ರತಿಷ್ಠಾನಕ್ಕೆ ಬಳಕೆ ಮಾಡುತ್ತೀರಾ ಎಂದು ಕೇಳಿದ್ದೆ. ಬಾಧಿತ ಗಣಿಗಾರಿಕೆ ಪ್ರದೇಶದಲ್ಲಿ ಅದನ್ನು ಉಪಯೋಗ ಮಾಡಿ environment restore ಮಾಡುತ್ತೀರಾ ಎಂದು ಕೇಳಿದ್ದೆ. ಅವರು ಉತ್ತರ ಕೊಡುತ್ತಾ, ಪ್ರತಿ ಜಿಲ್ಲಾ ಮಟ್ಟದಲ್ಲಿರುವ ಖನಿಜ ಪ್ರತಿಷ್ಠಾನಗಳಿಗೆ ಸಮನಾಗಿ ಹಂಚುತ್ತೇವೆ ಎಂದು ಹೇಳಿದ್ದರು.

(ಮುಂದು)

**(974) 18-12-2024 6.00 ಡಿಎಸ್-ಆರ್‌ಎನ್**

**ಶ್ರೀ ಕೆ.ಎ.ತಿಪ್ಪೇಸ್ವಾಮಿ (ಮುಂದು):**

ಸುಪ್ರೀಂ ಕೋರ್ಟ್ ಜಡ್ಜ್‌ಮೆಂಟ್ ಇದೆ. ಬಳ್ಳಾರಿ, ಚಿತ್ರದುರ್ಗ ಮತ್ತು ತುಮಕೂರು ಜಿಲ್ಲೆಗಳಲ್ಲಿ ಪರಿಸರಕ್ಕೆ ಧಕ್ಕೆಯಾಗಿದೆ, ಅದಕ್ಕೆ ಸಂಬಂಧಪಟ್ಟ ಹಾಗೆ ಅಲ್ಲಿ ಬರತಕ್ಕಂಥ ರಾಯಲ್ಟಿ, ತೆರಿಗೆಯನ್ನು ಅದಕ್ಕೆ ಮಾತ್ರ ಉಪಯೋಗ ಮಾಡಬೇಕು ಎಂದು ಹೇಳಿರುವಂಥದ್ದು. ಆದರೆ ಇದನ್ನು ಬೇರೆ ಜಿಲ್ಲೆಗಳಿಗೆ ಹಂಚಿಕೆ ಮಾಡತಕ್ಕಂಥ ಬಾಧಕ ಇಲ್ಲವೇ? ರಾಜ್ಯದಾದ್ಯಂತ ಅಲ್ಲಲ್ಲಿ ಗಣಿಗಾರಿಕೆ ನಡೆಯುತ್ತದೆ ಮತ್ತು ಖನಿಜ ಗಣಿಗಾರಿಕೆ, ಕಲ್ಲು ಗಣಿಗಾರಿಕೆ ನಡೆಯುತ್ತದೆ. ಅಲ್ಲಿಯೂ ಕೂಡ royalty, ತೆರಿಗೆಯನ್ನು ಉಪಯೋಗ ಮಾಡುತ್ತಾರೆಯೇ ಎನ್ನುವುದನ್ನು ಸದನಕ್ಕೆ ತಿಳಿಸಬೇಕೆಂದು ಮಾನ್ಯ ಸಚಿವರಿಗೆ ಕೋರುತ್ತೇನೆ.

**ಶ್ರೀ ವೈ.ಎಂ.ಸತೀಶ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಕರ್ನಾಟಕ (ಖನಿಜ ಹಕ್ಕುಗಳು ಮತ್ತು ಖನಿಜ ಹೊಂದಿರುವ ಭೂಮಿ) ತೆರಿಗೆ ವಿಧೇಯಕ, 2024 ಅನ್ನು ಬಹಳ ಅವಸರದಲ್ಲಿ hasty Bill ಅನ್ನು ತಂದಿದ್ದಾರೆ. ಈ ವಿಧೇಯಕವನ್ನು ನಾನು ವಿರೋಧ ಮಾಡುತ್ತಿದ್ದೇನೆ. ಅದಕ್ಕೆ ಕಾರಣವನ್ನು ನಾನು ಹೇಳಿದ ಮೇಲೆ ಮಾನ್ಯ ಸಚಿವರು ನಿರ್ಣಯ ಕೈಗೊಳ್ಳಲಿ. It is not viable in the present form what you have given us. ನಾನು ಮೊದಲು ಒಂದು ಉದಾಹರಣೆಯನ್ನು ಕೊಡುತ್ತೇನೆ. One ton iron ore or any mineral, Mines ನಿಂದ ಹೊರಗೆ ಹೋದರೆ 15 ಪರ್ಸೆಂಟ್ ಕಟ್ಟುತ್ತೇವೆ, 2 ಪರ್ಸೆಂಟ್ NMF

(National Mineral Fund) ಕೊಡುತ್ತೇವೆ. 10 ಪರ್ಸೆಂಟ್ DMF (District Mineral Fund) ಕಟ್ಟುತ್ತೇವೆ. GST 18% ಕಟ್ಟುತ್ತೇವೆ. Totally 45% ಕಟ್ಟುತ್ತೇವೆ. This does not include Income Tax. When one ton of any mineral leaves the lease area, it has 45% tax on it. In this Bill as per Clause.3(1) and (4), you are proposing three-times of royalty as Mineral Right Tax. Mineral bearing land ಗೆ ಪ್ರತಿ ಟನ್‌ಗೆ ನೂರು ರೂಪಾಯಿ ಹೇಳಿದ್ದೀರಿ. ನಾನು Clause.4 ರ ಬಗ್ಗೆ ಉದಾಹರಣೆಯನ್ನು ಕೊಡುತ್ತೇನೆ. ಶೇಕಡಾ 45 ರಷ್ಟು ತೆರಿಗೆ Mineral Right Tax, Mineral bearing land tax ಗೆ ಸಂಬಂಧಿಸಿದ್ದು. ಶೇಕಡಾ 45 ರಷ್ಟು ತೆರಿಗೆ, ನಮ್ಮ inbuilt tax, ಅಂದರೆ ನಾವು ಏನು ಪ್ರಸ್ತುತ ತೆರಿಗೆಯನ್ನು ಕಟ್ಟುತ್ತಿದ್ದೇವೆ, it comes to 90%. ಯಾವ ವ್ಯವಹಾರದಲ್ಲಿ ಶೇಕಡ.90 ರಷ್ಟು ತೆರಿಗೆಯನ್ನು, source ಕೊಟ್ಟು ನಮ್ಮ ದೇಶದಲ್ಲಿ ಯಾವ ವ್ಯವಹಾರವನ್ನು ನಡೆಸಲು ಸಾಧ್ಯ? Is it economically viable? It is impossible and not economically viable. ಶೇಕಡ.90 ರಷ್ಟು ತೆರಿಗೆಯನ್ನು ಕೊಟ್ಟು ನಮ್ಮ ದೇಶದಲ್ಲಿ ಯಾವ ವ್ಯವಹಾರ ನಡೆಯುತ್ತದೆ? ಈ ವಿಧೇಯಕದಿಂದ ನನಗನಿಸುವುದೇನೆಂದರೆ, ನೂರಕ್ಕೆ ನೂರರಷ್ಟು ನಮ್ಮ Mining Industries ಬಂದ್ ಆಗುತ್ತವೆ. ಈ ವಿಧೇಯಕದಿಂದ ಶೇಕಡ ನೂರರಷ್ಟು ಕರ್ನಾಟಕದಲ್ಲಿರುವ ಎಲ್ಲಾ ಗಣಿಗಾರಿಕೆ ನಿಲ್ಲುತ್ತದೆ. 90 ಪರ್ಸೆಂಟ್ ತೆರಿಗೆಯಲ್ಲಿ ಯಾವ ವ್ಯವಹಾರವೂ ನಡೆಯುವುದಿಲ್ಲ. This does not include Income Tax. ಇಷ್ಟು ತೆರಿಗೆ ವಿಧಿಸುವುದು ಹೇಗೆ ಬಂತು? ಹೇಗೆ advice ಆಯಿತು? I have no comments on that. ಎರಡನೆಯದಾಗಿ, 2015 ರವರೆಗೆ Fixed Royalty Regime ಇತ್ತು. During the year 2015, the Mining Laws were amended. Before 2015, it was fixed royalty. After 2015, it was percentage of your sales. Fixed Royalty Regime ನಲ್ಲಿ before 2015 ಏನಿತ್ತು, ಈಗ ನೀವು ಏನು ವಿಧೇಯಕದಲ್ಲಿ proposal ತಂದಿದ್ದೀರಿ, in Part-A you have proposed hundred rupees per ton on iron ore. ನಾನು iron ore ಬಗ್ಗೆ ಉದಾಹರಣೆ ಕೊಡುತ್ತಿದ್ದೇನೆ. Limestone ಗೂ ಅನ್ವಯವಾಗುತ್ತದೆ. Hundred rupees per ton ಗೆ ಕೊಟ್ಟಿದ್ದಾರೆ. Section.4 sub-clause(2) ನಲ್ಲಿ ನೀವು three-times ಎಂದು ಹೇಳುತ್ತೀರಿ. Three times of royalty that is 45%. It is not viable. ನನ್ನ ಮನವಿಯೇನೆಂದರೆ, ಇದನ್ನು viability ಮಾಡಬೇಕೆಂದರೆ .25% of royalty ಮಾಡಿದರೆ ಮಾತ್ರ. Starting from .25% otherwise Mining Industry ಎಲ್ಲಾ close ಆಗುತ್ತವೆ. ನಿನ್ನೆ ಕೆಳಮನೆಯಲ್ಲಿ ಈ ವಿಧೇಯಕ ಪಾಸ್ ಆಗಿರುವುದರಿಂದ ಇವತ್ತು ಬೆಳಗ್ಗಿನಿಂದಲೇ ನಮ್ಮ ಭಾಗದಲ್ಲಿ ಮಾತ್ರ ಎಲ್ಲಾ ಗಣಿಗಾರಿಕೆಗಳು ಕ್ಲೋಸ್ ಆಗಿರುತ್ತವೆ. ಮಾನ್ಯ ಸಚಿವರು ದಿನಾಂಕ 14.08.2024 ರಲ್ಲಿ ಸುಪ್ರೀಂ ಕೋರ್ಟ್ ಆದೇಶದ ಪ್ರಕಾರ ನಾವು ತಂದಿದ್ದೇವೆಂದು ಹೇಳಿದರು. ಈ ವಿಧೇಯಕದ Section.3 sub-clause (3) ರ ಕೊನೆಯ ಪ್ಯಾರಾದಲ್ಲಿ "(3) *The Government may, by a notification in the official Gazette*

*amend Schedule-I,"* ಎನ್ನುವ ಅಂಶವನ್ನು ಹೇಳಿ ಕೊನೆ ಪ್ಯಾರಾದಲ್ಲಿ; *"...Provided that, the Government shall not enhance rate of tax in respect of any mineral more than once during any period of three years and such enhancement shall not exceed three times of the prevailing rates..."* ಹೇಳಿದ್ದಾರೆ. ನನಗೆ ಮಾಹಿತಿ ಇರುವ ಪ್ರಕಾರ 2024 ರಲ್ಲಿ ಸುಪ್ರೀಂ ಕೋರ್ಟ್ ಆದೇಶದ ಪ್ರಕಾರ ಈ ಅಧಿಕಾರವನ್ನು ಕೊಟ್ಟಿಲ್ಲ. Revision of mineral bearing land and Mineral Right Tax ಗೆ ನೀವು ಮೂರು ವರ್ಷಗಳಿಗೊಮ್ಮೆ ಶೇಕಡಾ ಇಂತಿಷ್ಟು increase ಮಾಡಬೇಕೆಂದು ಎಲ್ಲಿಯೂ ಅಧಿಕಾರ ಕೊಟ್ಟಿಲ್ಲ. ಆ ಆದೇಶದಲ್ಲಿ mention ಆಗಿಲ್ಲ. ಮಾನ್ಯ ಸಚಿವರೇನಾದರೂ ಆ ರೀತಿಯ ದಾಖಲೆಯನ್ನು ಕೊಟ್ಟರೆ I will withdraw this statement. ಆ ಆದೇಶವನ್ನು ನಾನು ಓದಿದ್ದೇನೆ. ಆ ಆದೇಶದಲ್ಲಿ ಈ clauses introduce ಮಾಡುವುದಕ್ಕೆ ಮಾನ್ಯ ಸಚಿವರಿಗೆ ಅಧಿಕಾರವಿಲ್ಲ. This clause is hundred percent completely wrong. In Section.3 sub-clause (2) ರಲ್ಲಿ; *"... The holder of a mining lease, irrespective of whether the mining lease is in existence or expired..."* ಎಂದು ಹೇಳಿದ್ದಾರೆ. ನನಗೆ ಒಂದು ಅನುಮಾನವಿದೆ, in existence ಯಾರು mining run ಮಾಡುತ್ತಾರೆ, ಅವರಿಗೆ ಸರ್ಕಾರ ತೆರಿಗೆಯನ್ನು ಹಾಕಿದರೆ ಅವರು ತೆರಿಗೆಯನ್ನು ಕಟ್ಟುತ್ತಾರೆ. ಈಗ by lapse of time, expired ಆಗಿದೆ. ಅವರ ಹತ್ತಿರ ಈ liability ಹೇಗೆ ಸರ್ಕಾರ recovery ಮಾಡುತ್ತದೆ? ನಾನು ಏಕೆ ಈ ಪ್ರಶ್ನೆ ಕೇಳುತ್ತಿದ್ದೇನೆಂದರೆ, ಇದಕ್ಕೆ ಮಾನ್ಯ ಸಚಿವರು ಜವಾಬನ್ನು ಕೊಡಬೇಕು. ಸುಪ್ರೀಂ ಕೋರ್ಟ್ ಆದೇಶದ ಪ್ರಕಾರ 2010-11 ರಲ್ಲಿ ಸಿ- ಕ್ಯಾಟಗರಿ ಗಣಿಗಾರಿಕೆಯಲ್ಲಿ ಯಾವ್ಯಾವ ಪೆನಾಲ್ಟಿ ಕಟ್ಟಬೇಕಾಗಿತ್ತು ಅದನ್ನು ಇದುವರೆವಿಗೂ ನಮ್ಮ ಸರ್ಕಾರ ಇವರ ಸರ್ಕಾರ ಕಟ್ಟಿಸಿಕೊಂಡಿಲ್ಲ. ಏಕೆ ಪೆನಾಲ್ಟಿಯನ್ನು ಕಟ್ಟಿಸಿಕೊಂಡಿಲ್ಲ? ಸೆಕ್ಷನ್ (3)ಮತ್ತು (4)ರಲ್ಲಿ ಅವರೇನು ಲೆವಿ ಹಾಕಿದ್ದಾರೆ, ಅದನ್ನು ಸಂಗ್ರಹ ಮಾಡುವುದಕ್ಕೆ for the lease expired mine ಗೆ ಏನು ಗ್ಯಾರಂಟಿ ಕೊಡುತ್ತಾರೆ? You cannot give a guarantee. ನನಗೆ ಮಾಹಿತಿ ಇರುವ ಪ್ರಕಾರ ಇದುವರೆವಿಗೂ ಸಿ-ಕ್ಯಾಟಗರಿಯ ಒಂದು ಗಣಿಗಾರಿಕೆಯಲ್ಲೂ ಪೆನಾಲ್ಟಿಯನ್ನು ಸಂಗ್ರಹ ಮಾಡಿಲ್ಲ. Lease expired mines ನಲ್ಲಿ ಯಾವ ರೀತಿ ಸಂಗ್ರಹ ಮಾಡುತ್ತಾರೆಂದು ನನಗೆ ಅನುಮಾನವಿದೆ. ಮಾನ್ಯ ಸಚಿವರ ಹತ್ತಿರ ನಾನು ಸ್ಪಷ್ಟೀಕರಣ ಕೇಳುವುದೇನೆಂದರೆ, ಈಗ Central Public Sector Undertakings (CPSUs) or State Public Sector Undertakings (SPSUs) ಗೆ ಮೂರು ಸ್ಲ್ಯಾಬ್‌ನ್ನು ಮಾಡಿದ್ದಾರೆ. ಅದನ್ನು ಏಕೆ ಮಾಡಿದ್ದಾರೆ ಎಂಬುದು ನನಗೆ ಅರ್ಥವಾಗುತ್ತಿಲ್ಲ. ಮಾನ್ಯ ಸಚಿವರು ಅದರ ಬಗ್ಗೆ ವಿವರಣೆ ಕೊಟ್ಟರೆ ನಾನು ತಿಳಿದುಕೊಳ್ಳುತ್ತೇನೆ. ಕೊನೆಯದಾಗಿ, implication of this Mineral Rights Tax ಗೆ ನಾನು ಉದಾಹರಣೆಯನ್ನು ಕೊಡುತ್ತೇನೆ. ಒಂದು ಟನ್‌ಗೆ ರಾಯಲ್ಟಿಯನ್ನು ಎಷ್ಟು ಸಂಗ್ರಹ ಮಾಡುತ್ತಿದ್ದಾರೆಂದು ನಾನು ಮಾಹಿತಿಯನ್ನು ಪಡೆದುಕೊಂಡಿದ್ದೇನೆ. The price varies from Rs.1,084- to 5,495/-. ಉದಾಹರಣೆಗೆ, we can take on an average of Rs.3,000/-,

ಮೂರು ಸಾವಿರದಲ್ಲಿ ಶೇಕಡಾ.15 ಎಂದರೆ ನಾಲ್ಕೂನೂರ ಐವತ್ತು ರೂಪಾಯಿ ಆಗುತ್ತದೆ. ಅದು 450x3 ಗುಣಿಸಿದರೆ Rs.1,350/- ಆಗುತ್ತದೆ. ಈ ವಿಧೇಯಕ ಪಾಸ್ ಆದರೆ additional iron ore cost incurs ಆಗುತ್ತದೆ. ಒಂದು ಟನ್ ಸ್ಟೀಲ್‌ಗೆ 1.6-ton iron ore raw material ಬೇಕು. ಅಂದರೆ, 1350x1.6, it will come to Rs.2,160.

(ಮುಂದು)

**(975) 18/12/2024 6:10 ಎಸ್‌ಪಿಆರ್/ಆರ್‌ಎನ್ (ಸಭಾಪತಿಯವರ ಉಪಸ್ಥಿತಿ)**

**ಶ್ರೀ ವೈ.ಎಂ.ಸತೀಶ್(ಮುಂದು):**

ಅಂದರೆ ಸ್ಟೀಲ್‌ನ ಚಿಲ್ಲರೆ ಬೆಲೆ ಜಾಸ್ತಿಯಾಗುತ್ತದೆ. ನಾಳೆಯ ದಿನ ಈ ಕಾಯ್ದೆ ಜಾರಿಗೊಂಡ ತಕ್ಷಣವೇ ಸ್ಟೀಲ್ ಕಂಪನಿಯವರು 2,000/- ರೂಪಾಯಿಗಳಷ್ಟು ಮೊತ್ತವನ್ನು ಹೆಚ್ಚಳ ಮಾಡುತ್ತಾರೆ. ಕಾಯ್ದೆ ಜಾರಿಗೊಂಡ ನಂತರ ಆಗುವ ಪರಿಣಾಮದ ಬಗ್ಗೆ ನಾನು ಹೇಳುತ್ತಿದ್ದೇನೆ. ಅದೇ ರೀತಿಯಾಗಿ ಸಿಮೆಂಟ್ ಬೆಲೆಯೂ ಸಹ ಹೆಚ್ಚಳವಾಗುತ್ತದೆ. ಅಂದರೆ ನಮ್ಮ ರಾಜ್ಯದಲ್ಲಿ ಸ್ಟೀಲ್ ಮತ್ತು ಸಿಮೆಂಟ್‌ನ ಬೆಲೆಗಳು ಹೆಚ್ಚಳವಾಗುತ್ತವೆ. ಆದಾಯಕ್ಕೋಸ್ಕರ ಈ ವಿಧೇಯಕವನ್ನು ಅವಸರದಲ್ಲಿ ಮಂಡಿಸಲಾಗಿದೆ ಎಂದು ನಾನು ಹೇಳಬಯಸುತ್ತೇನೆ. ಹೀಗಾಗಿ ಈ ವಿಷಯವನ್ನು ಜಂಟಿ ಸದನ ಸಮಿತಿಗೆ ವಹಿಸಿದರೆ ಒಳ್ಳೆಯದು ಎನ್ನುವುದು ನನ್ನ ಭಾವನೆಯಾಗಿದೆ.

**ಶ್ರೀ ಪಿ.ಹೆಚ್.ಪೂಜಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಅವಕಾಶಕ್ಕಾಗಿ ಧನ್ಯವಾದಗಳು. ಇವತ್ತಿನ ದಿವಸ ಈ ವಿಧೇಯಕ ಮುಖಾಂತರ ಸುಣ್ಣದ ಕಲ್ಲು ಮತ್ತಿತರೆ ಖನಿಜಗಳ ರಾಯಧನವನ್ನು ಹೆಚ್ಚಳ ಮಾಡುವ ಪ್ರಸ್ತಾವವನ್ನು ಮಂಡಿಸಿದ್ದಾರೆ. ಪ್ರಸ್ತುತ ಮಂಡಿಸಿರುವ ವಿಧೇಯಕವು ತೊಂದರೆದಾಯಕವಾಗಿದ್ದು, ಇದನ್ನು ಏಕೆ ಮಂಡಿಸಿದ್ದಾರೆ ಎಂದು ಹೇಳುವುದಾದರೆ, ವಸ್ತುಗಳ ಅಂತಿಮ ಬಳಕೆದಾರರ ಮೇಲೆ ಸರ್ಕಾರವು 20/- ರೂಪಾಯಿಗಳ ಬದಲಾಗಿ 200/- ರೂಪಾಯಿಗಳನ್ನು ಹೆಚ್ಚಳ ಮಾಡಿದೆ. ಸುಣ್ಣದ ಕಲ್ಲಿನ ಮೇಲೆ ವಿಧಿಸುವ ರಾಯಧನವನ್ನು ಅಂತಿಮ ಬಳಕೆದಾರರಿಂದ ವಸೂಲು ಮಾಡಿದಂತಾಗುತ್ತದೆ. ಇದಕ್ಕೆ ನಮ್ಮದೇನೂ ಅಭ್ಯಂತವಿಲ್ಲ. ಕಾರ್ಖಾನೆಗಳಿಗೆ, ದೊಡ್ಡ ದೊಡ್ಡ ಸ್ಟೀಲ್ ಕೈಗಾರಿಕೆಗಳಿಗೆ ಸುಣ್ಣದ ಕಲ್ಲನ್ನು ನೀಡಲಾಗುತ್ತಿದ್ದು, ಅವರುಗಳಿಂದ ರಾಯಧನವನ್ನು ವಸೂಲಿ ಮಾಡಲಾಗುತ್ತದೆ. ಇವತ್ತಿನಿಂದ ವಲೂಲು ಮಾಡುವುದಕ್ಕೆ ತೊಂದರೆ ಇಲ್ಲ; ಮಾಡಬಹುದು. ಆದರೆ ಇದನ್ನು ಬಿಟ್ಟು ಹಿಂದಿನಿಂದಲೂ ಅಂದರೆ, 2005 ಅಥವಾ 2015 ರಿಂದ ಬಾಕಿ ಎನ್ನುವ ರೀತಿಯಲ್ಲಿ ವಸೂಲಿ ಮಾಡಿದರೆ, ಅದು ಗಣಿ ಮಾಲೀಕರ ಮೇಲೆ ಹೊರಲಾರದ ಭಾರ ಮತ್ತು ಅನ್ಯಾಯವಾಗುತ್ತದೆ. ಇದರಿಂದ ಗಣಿ ಮಾಲೀಕರುಗಳು ಬಹಳ ತೊಂದರೆಯನ್ನು ಅನುಭವಿಸುವಂತಾಗುತ್ತದೆ. ಗಣಿಗಾರಿಕೆಯಲ್ಲಿ ಉತ್ಪಾದನೆ ಮಾಡುವ ವ್ಯವಸ್ಥೆಯಲ್ಲಿ ಈಗ್ಗೆ 15-20 ವರ್ಷಗಳ ಹಿಂದೆ ಇದ್ದ ಪರಿಸ್ಥಿತಿ ಈಗ ಇಲ್ಲ.

ಆಗಿನ ಉತ್ಪಾದನಾ ವೆಚ್ಚ, ಗಣಿಗಾರಿಕೆಗೆ ಉಪಯೋಗಿಸುವ ಸ್ಫೋಟಕ ವಸ್ತುಗಳು, ಅಲ್ಲಿನ ಆಳುಗಳಿಗೆ ನೀಡುವ ಕೂಲಿ, ಅಂದಿನ ಸಂದರ್ಭದಲ್ಲಿದ್ದ ಡೀಸಲ್ ಬೆಲೆಗಳು ಜಾಸ್ತಿಯಾಗಿದ್ದು, ಇವುಗಳು ಇವತ್ತಿನ ದಿವಸ ನಾಲ್ಕು ಪಟ್ಟು ಹೆಚ್ಚಾಗಿವೆ. ಅಂದಿನ ದಿನಗಳಲ್ಲಿ ನಿರ್ವಹಣಾ ವೆಚ್ಚವು ಕಡಿಮೆಯಾಗಿತ್ತು. ಆದರೆ, ಇವತ್ತಿನ ದಿವಸ ಇದು ಒಂದಕ್ಕೆ ನಾಲ್ಕು ಪಟ್ಟು ಹೆಚ್ಚಳವಾಗಿದೆ. ಮೈನಿಂಗ್ ವ್ಯವಸ್ಥೆಯಲ್ಲಿ ಅದೇ ರೀತಿಯಾಗಿ ಇನ್ನಿತರೆ ಎಲ್ಲಾ ಪರಿಕರಗಳ ಬೆಲೆಯೂ ಸಹ ಸರಿಸಮಾನವಾಗಿ ಹೆಚ್ಚಳವಾಗುತ್ತಾ ಬಂದಿದ್ದು, ಇದನ್ನು ಯಾರೂ ಸಹ ಅಲ್ಲಗಳೆಯುವುದಕ್ಕೆ ಸಾಧ್ಯವಿಲ್ಲ. ಈ ಎಲ್ಲಾ ವ್ಯವಸ್ಥೆಗಳನ್ನು ನೋಡಿಕೊಂಡು ಅಂದಿನ ಸಂದರ್ಭದಲ್ಲಿ ವಿಧಿಸುತ್ತಿದ್ದ ತೆರಿಗೆ ಹಾಗೂ ರಾಯಧನ 45/- ರೂಪಾಯಿಗಳಷ್ಟು ಇತ್ತು. ನಂತರದಲ್ಲಿ ಇದನ್ನು 70/-, 75/- ಮತ್ತು 100/- ರೂಪಾಯಿಗಳಿಗೆ ಹೆಚ್ಚಳ ಮಾಡಲಾಯಿತು. ಆಗಿನ ಲೆಕ್ಕದಲ್ಲಿ ಇದನ್ನು ಕೊಡುವ ವ್ಯವಸ್ಥೆ ಇದ್ದಿದ್ದರೆ ಇದು ಸರಿಯಾಗಿ ಇರುತ್ತಿತ್ತು. ಆದರೆ ಸರ್ಕಾರವು 2005 ರಿಂದ 2015 ರ ವರೆಗೆ ವಸೂಲು ಮಾಡಬೇಕು ಎಂಬ ಕ್ಲಾಸ್ ಅನ್ನು ವಿಧಿಸಿದ್ದು, ಅದೂ retrospective effect ಆಗಿ ಬಾಕಿ ಎಂಬುದಾಗಿ ಹೇಳಿದ್ದು, ಅದನ್ನು ಇವತ್ತಿನ ದರದ ಮೇಲೆ ವಿಧಿಸಲಾಗುತ್ತಿದೆ. ಇವತ್ತಿನ ದಿವಸ ರಾಯಧನದ ಮೇಲೆ ರೂಪಾಯಿ 1.25 ತೆಗೆದುಕೊಳ್ಳುತ್ತಾರೆ ಎಂಬುದಾಗಿ ಹೇಳುತ್ತಿದ್ದಾರೆ. ಇವತ್ತಿನ ದಿವಸ ರಾಯಧನ 80/- ರೂಪಾಯಿಗಳಿದ್ದು, ಇದರ ಮೇಲೆ ರೂಪಾಯಿ 1.25 ರಾಯಧನ ಸೇರಿಸಿದರೆ, ಅದು 100/- ರೂಪಾಯಿಗಳಷ್ಟಾಗುತ್ತದೆ. ಈ ಅಂಶವು ವಿಧೇಯಕದಲ್ಲಿ ಕಂಡು ಬರುತ್ತಿದೆ. ಏನೂ ಅರಿಯಲಾರದ ಗಣಿ ಮಾಲೀಕರಿಗೆ ಆಕಾಶವನ್ನು ನೋಡುವ ಪರಿಸ್ಥಿತಿಯುಂಟಾಗುತ್ತದೆ. ಏಕೆಂದರೆ ಅಂದಿನ ದಿನಗಳಲ್ಲಿ ಯಾರು ಗಣಿಗಾರಿಕೆಯನ್ನು ಮಾಡುತ್ತಿದ್ದರು, ... ಅದೊಂದು ಭಾಗವಾಗಿದೆ. ಅನೇಕರು ಅಲ್ಲಿನ ತೊಂದರೆಗಳನ್ನು ಅನುಭವಿಸಿ, ಗಣಿಗಾರಿಕೆ ಮಾಡುವುದು ಬೇಡ ಎಂದು ಇದನ್ನು ಬಿಟ್ಟು ಹೋಗಿರುವವರೂ ಸಹ ಇದ್ದಾರೆ. ಅಂದರೆ ಗಣಿಗಾರಿಕೆಯನ್ನು ಸ್ಥಗಿತಗೊಳಿಸಿರುವವರೂ ಸಹ ಇದ್ದಾರೆ. ಗಣಿಗಾರಿಕೆಯನ್ನು ಮತ್ತೊಬ್ಬರಿಗೆ ಮಾರಿಕೊಂಡು ಹೋದ ಗಣಿ ಮಾಲೀಕರೂ ಸಹ ಇದ್ದಾರೆ. ಅಂದಿನ ದಿನ ಖನಿಜ ನಿಕ್ಷೇಪ ಎಷ್ಟು ಇತ್ತು ಮತ್ತು ಮುಂದಿನ ದಿನಗಳಲ್ಲಿ ಇದು ಎಷ್ಟು ಸಿಗಬಹುದು ಎಂಬ ಲೆಕ್ಕವನ್ನು ಹಾಕಿಕೊಂಡು ಅಂದಿನ ಬೆಲೆಗೆ ಗಣಿಗಾರಿಕೆಯನ್ನು ಕೊಂಡಿರುವವರೂ ಸಹ ಇದ್ದಾರೆ. ಆದರೆ, ಇವತ್ತಿನ ದಿವಸ ಆ ರೀತಿಯಾಗಿ ಗಣಿಗಾರಿಕೆಯನ್ನು ತೆಗೆದುಕೊಂಡಿರುವವರಿಗೂ ಸಹ 100/- ರೂಪಾಯಿಗಳ ರಾಯಧನವನ್ನು ವಿಧಿಸುವುದು ಸರಿಯಾದುದಲ್ಲ. Retrospective effect ಆಗಿ ರಾಯಧನವನ್ನು ಭರಿಸಬೇಕು ಎನ್ನುವ ಕ್ಲಾಸ್ ಅನ್ನು ಏನು ಹಾಕಿದ್ದಾರೆ ಅದರಿಂದ ಅವರುಗಳಿಗೆ ತುಂಬಲಾರದ ಭಾರವಾಗಿದೆ. ಅಂದರೆ "ಗಾಯದ ಮೇಲೆ ಬರೆ ಎಳೆದಂತಾಗಿದೆ" ಎನ್ನುವುದನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಹೀಗೆ ಪ್ರಹಾರ ಮಾಡುವ ಹೆಚ್ಚಳವನ್ನು ಸಂಪೂರ್ಣವಾಗಿ ಕೈಬಿಡಬೇಕು. ಕೇಂದ್ರದ ಮಟ್ಟದಲ್ಲಿ

ಸರ್ವೋಚ್ಛ ನ್ಯಾಯಾಲಯವು ಒಂದು ಮಾರ್ಗಸೂಚಿಯನ್ನು ನೀಡಿದೆ. ವಸೂಲು ಮಾಡಬಹುದು ಎಂದು ತಿಳಿಸಿದ್ದು; ಅದನ್ನು ಮಾಡಲೇಬೇಕು ಎಂದು ಎಲ್ಲಿಯೂ ಸಹ ತಿಳಿಸಿಲ್ಲ. ಇದು ರಾಜ್ಯದ ವಿವೇಚನೆಗೆ ಬಿಟ್ಟ ವಿಚಾರವಾಗಿದೆ. ಗಣಿಗಾರಿಕೆಯನ್ನು ಅನುಭವಿಸುವಂತಹದ್ದು, ಗಣಿ ಮಾಲೀಕರುಗಳು ಎದುರಿಸುವ ಸ್ಥಿತಿ-ಗತಿಗಳಿಗನುಗುಣವಾಗಿ ಮಾಡಬಹುದಾಗಿರುತ್ತದೆ. ಒಂದು ಟನ್ ಉತ್ಪಾದನೆಗಾಗಿ ಅವರು ಮಾಡುವ ಖರ್ಚು-ವೆಚ್ಚಗಳು ಇತ್ಯಾದಿಗಳನ್ನು ನೋಡಿಕೊಂಡು they may levy the tax ಎಂಬುದಾಗಿ ಸರ್ವೋಚ್ಛ ನ್ಯಾಯಾಲಯವು ಇತ್ತೀಚೆಗೆ ನೀಡಿದ ತೀರ್ಪಿನಲ್ಲಿ ತಿಳಿಸಿದೆ. ಇದನ್ನೇ ಆಧಾರವಾಗಿಟ್ಟುಕೊಂಡು ಇವತ್ತಿನ ದಿವಸ ರಾಜ್ಯ ಸರ್ಕಾರವು ರಾಯಧನವನ್ನು ಹೆಚ್ಚಳ ಮಾಡುತ್ತಿದೆ. ಇದು ಇವತ್ತಿನ ಸಂದರ್ಭದಲ್ಲಿ ಅವಶ್ಯಕತೆ ಇಲ್ಲವೆಂದು ನಾನು ಭಾವಿಸುತ್ತೇನೆ. ಮುಂಬರುವ ದಿನಗಳಲ್ಲಿ ಜಾರಿಗೆ ಬರುವಂತೆ ಹೆಚ್ಚಳ ಮಾಡಿಕೊಂಡು ಹೋಗಲಿ. ಆದರೆ, ಹಿಂದಿನಿಂದ ಇದನ್ನು ಜಾರಿಗೆ ತರುವುದೆಂದರೆ ಅದು ಸರಿಯಲ್ಲ. ಈ ಹಿಂದೆ ಆದಾಯದ ವ್ಯವಸ್ಥೆಯು ಕೈಗೆ ಮತ್ತು ಬಾಯಿಗೆ ತುತ್ತು ಬರುವಂತೆ ಇತ್ತು. ಈ ಹಿಂದೆ 20-25 ರೂಪಾಯಿಗಳಷ್ಟು ಲಾಭವನ್ನು ಹೊಂದುತ್ತಿದ್ದರು. ಇದನ್ನು ಕೇವಲ ನಮ್ಮ ರಾಜ್ಯದಲ್ಲಿಯೇ ಮಾತ್ರವೇ ಜಾರಿಗೆತರಲಾಗುತ್ತಿದೆ ಹೊರತು ದೇಶದ ಬೇರೆ ರಾಜ್ಯಗಳಲ್ಲಿ ಇಲ್ಲ. ಸರ್ವೋಚ್ಛ ನ್ಯಾಯಾಲಯವು ನೀಡಿರುವ ತೀರ್ಪು ಯಾವುದೋ ಒಂದು ರಾಜ್ಯದ ಮತ್ತು ಅಲ್ಲಿನ ಖನಿಜ ನಿಕ್ಷೇಪಕ್ಕೆ ಸಂಬಂಧಪಟ್ಟಿದ್ದಾಗಿದೆ. ಆಗ ಈ ವಿಷಯದ ಬಗ್ಗೆ ಚರ್ಚೆಗಳಾದಾಗ ರಾಯಧನ ಹೆಚ್ಚಳ ಮಾಡಿದ್ದನ್ನು ತುಂಬಬೇಕು ನೋಟೀಸ್ ನೀಡಿದ್ದರೋ ಏನೋ? ಆಗ ಈ ವಿಷಯದ ಬಗ್ಗೆ ಚರ್ಚೆಗಳಾಗಿ, ಜಿಲ್ಲಾ ಮತ್ತು ಅಲ್ಲಿನ ಉಚ್ಛ ನ್ಯಾಯಾಲಯಗಳಲ್ಲಿ ಪ್ರಕರಣದ ವಿಚಾರಣೆಯಾಗಿ ಆ ನಂತರದಲ್ಲಿ ಸರ್ವೋಚ್ಛ ನ್ಯಾಯಾಲಯಕ್ಕೆ ಪ್ರಕರಣವು ವಿಚಾರಣೆಗೆ ಬಂದಿರುತ್ತದೆ. ಇದು ಆ ಒಂದು ಪ್ರಕರಣಕ್ಕೆ ಮಾತ್ರವೇ ಸೀಮಿತವಾದದ್ದಾಗಿದೆ. ಅಲ್ಲಿನ ಗಣಿ ಮಾಲೀಕರುಗಳಿಗೆ ರಾಯಧನ ಪಾವತಿಸುವಂತೆ ನೋಟೀಸ್ ನೀಡಲಾಗಿತ್ತು. ಆಗ ಸದರಿ ಪ್ರಕರಣದಲ್ಲಿ ಯಾವ ರೀತಿಯ ಡೆವಲೆಪ್‌ಮೆಂಟ್‌ಗಳಾದವೋ, ಅದರ ಆಧಾರದ ಮೇಲೆ ಸರ್ವೋಚ್ಛ ನ್ಯಾಯಾಲಯವು ಆ ಪ್ರಕರಣದಲ್ಲಿ ತೀರ್ಪನ್ನು ನೀಡಿತ್ತು. ಹೀಗಾಗಿ ಈ ತೀರ್ಪನ್ನು ಇಡಿಯಾಗಿ ನಮ್ಮ ರಾಜ್ಯದಲ್ಲಿ ಅಳವಡಿಸಿಕೊಳ್ಳಬೇಕು ಎನ್ನುವುದು ಅಗತ್ಯತೆ ಇಲ್ಲ. ನಮ್ಮ ರಾಜ್ಯದಲ್ಲಿ ಈ ವಿಷಯಕ್ಕೆ ಸಂಬಂಧಪಟ್ಟಂತೆ ಯಾವುದೇ ಗಣಿ ಮಾಲೀಕರುಗಳಿಗೆ ನೋಟೀಸ್ ನೀಡಿಲ್ಲ. ರಾಯಧನವನ್ನು ತುಂಬಲೇಬೇಕು, ಶೇಕಡಾವಾರು ಇಷ್ಟು ಹೆಚ್ಚಳವಾಗಿದೆ ಎಂದು ಎಲ್ಲಿಯೂ ಸಹ ತಿಳಿಸಿಲ್ಲ ಈ ರೀತಿಯ ಪ್ರೋಸೆಸ್ ಆಗಲಾರದೇ, ಕೇವಲ ವಿಧೇಯಕದ ಮೂಲಕ ಇದನ್ನು ಜಾರಿಗೆ ತರುತ್ತಿರುವುದು ಸರಿಯಲ್ಲ. ಪ್ರಸ್ತುತ ಹೆಚ್ಚಳ ಮಾಡುತ್ತಿರುವುದು ಕಾನೂನು ಬಾಹಿರ ಎಂದು ನಾನು ಈ

ಸಂದರ್ಭದಲ್ಲಿ ಹೇಳಬಯಸುತ್ತೇನೆ. ಹತ್ತು ವರ್ಷ ಹಿಂದಕ್ಕೆ ಹೋಗಿ ಇದನ್ನು ಜಾರಿಗೊಳಸುವುದು ಈ ಸರ್ಕಾರಕ್ಕೆ ಒಳ್ಳೆಯದಲ್ಲ ಎನ್ನುವ ವಿಚಾರವನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಮುಂದುವರೆದು ನಾನು ಈ ಸಂದರ್ಭದಲ್ಲಿ ಹೇಳಬೇಕಾದ ಮತ್ತೊಂದು ಅಂಶವೇನೆಂದರೆ, ಇದರಲ್ಲಿ ನಿರ್ದಿಷ್ಟವಾಗಿ ಹೇಳಿದ್ದಾರೆ. ಮುಂದಿನ ದಿನಗಳಲ್ಲಿ ಏನೇನು ಬರಬಹುದು ಎಂಬ ಅಂಶಗಳನ್ನು ಈ ಕಾಯ್ದೆಯಲ್ಲಿ ಸರ್ಕಾರವು ತೋರಿಸಬಹುದು. ಯಾವಾಗ ಅವಶ್ಯಕವಾದ ಸಂದರ್ಭ ಉದ್ಭವವಾಗುತ್ತದೆಯೋ, "... The Government may, by a notification in the official Gazette amend Schedule-I..." Schedule-I ರಲ್ಲಿ ಯಾವ್ಯಾವ minerals ಬರುತ್ತವೆ ಎನ್ನುವುದನ್ನು ತಿಳಿಸಿದ್ದಾರೆ. It reads: "*(3) The Government may, by a notification in the official Gazette amend Schedule-I, so as to include or exclude any mineral and to enhance or reduce the rate of tax in respect of any mineral with effect from such date as may be specified in the said notification:....*" ಸರ್ಕಾರವು ಸುಣ್ಣದ ಕಲ್ಲಿನ ಬಗ್ಗೆ ವಿಧೇಯಕದಲ್ಲಿ ತಿಳಿಸಿದೆ. ಆದರೆ, ಡೋಲೋಮೈಟ್ ಬಗ್ಗೆ ಎಲ್ಲಿಯೂ ಸಹ ಉಲ್ಲೇಖಿಸಿಲ್ಲ. ಇದರ ಜೊತೆಗೆ ಕಟ್ಟಡದ ಕಲ್ಲು, ಜಲ್ಲಿ ಕಲ್ಲುಗಳ ಬಗ್ಗೆಯೂ ಸಹ ಉಲ್ಲೇಖಿಸಿಲ್ಲ. ಮೇಜರ್ ಮಿನರಲ್ಸ್ ಜೊತೆಗೆ ಗಣಿ ಎಂಬ ಶಬ್ದವನ್ನು ಈ ವಿಧೇಯಕದಲ್ಲಿ ತಿಳಿಸಲಾಗಿದೆ. ಗಣಿ ಗುತ್ತಿಗೆಯ ಪ್ರಶ್ನೆ ಬಂದಾಗ, ಅದಕ್ಕೂ ಸಹ ಗುತ್ತಿಗೆಯನ್ನು ಪಡೆದುಕೊಂಡಿರುತ್ತಾರೆ. ಮರಳಿನ ಲೀಸ್ ಸಹ ಇದರಲ್ಲಿ ಒಳಗೊಂಡಿರುತ್ತದೆ. ಆದರೆ ನಾನು ಈ ಬಗ್ಗೆ ಮಾತನಾಡುತ್ತಿಲ್ಲ. ಕಲ್ಲು ಗಣಿ ಗುತ್ತಿಗೆ ಎಂಬುದಾಗಿ ಸರ್ಕಾರವು ತಿಳಿಸಿದೆ.

**ಶ್ರೀ ಎಸ್.ಎಸ್.ಮಲ್ಲಿಕಾರ್ಜುನ:-** ಮಾನ್ಯ ಸಭಾಪತಿಯವರೆ, ಇಲ್ಲಿ ಕಲ್ಲು ಗಣಿ ಗುತ್ತಿಗೆಯು ಬರುವುದಿಲ್ಲ. ಇಲ್ಲಿ ಕೇವಲ ಮೇಜರ್ ಮಿನರಲ್ಸ್ ಮಾತ್ರವೇ ಬರುತ್ತದೆ. ಬಂಗಾರ, ಬೆಳ್ಳಿ, ಕಬ್ಬಿಣದ ಅದಿರು, ಮ್ಯಾಂಗನೀಸ್ ಇತ್ಯಾದಿಗಳು ಬರುತ್ತವೆ.

**ಸಭಾಪತಿಯವರು:-** ಸಚಿವರೇ ಸದಸ್ಯರು ಹೇಳುವ ಅಂಶಗಳನ್ನು ನೀವು ಬರೆದುಕೊಳ್ಳಿ. ನೀವು ಉತ್ತರಿಸುವ ಸಂದರ್ಭದಲ್ಲಿ ಈ ಬಗ್ಗೆ ಹೇಳಿ. ಶ್ರೀ ಪಿ.ಹೆಚ್.ಪೂಜಾರ್ ರವರೇ, ನೀವು ಬಹಳ ಸಮಯದಿಂದ ಮಾತನಾಡುತ್ತಿದ್ದೀರಿ, ಹೀಗಾಗಿ ಬೇಗ ನಿಮ್ಮ ಭಾಷಣವನ್ನು ಮುಗಿಸಿ.

**(ಮುಂದು)**

**(976) 18.12.2024 6.20 ಎಂವಿ-ವಿಕೆ** **(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಪಿ.ಹೆಚ್.ಪೂಜಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, Major Minerals ನಲ್ಲಿ they have included dolomite also. ಕಳೆದ ಕೆಲವು ವರ್ಷಗಳ ಹಿಂದೆ, ಆ dolomite ಎನ್ನುವಂತಹ ಖನಿಜ ಸಹಿತವಾಗಿ major mineral ನಲ್ಲಿ include ಮಾಡಿದ್ದಾರೆಯೇ? Dolomite ಅನ್ನು include ಮಾಡಿದ್ದಾರೆಯೇ? ಅದು ಮೇಜರ್ ಮಿನರಲ್‌ನಲ್ಲಿ ಕಂಡಿಲ್ಲ. That is one point.

**ಶ್ರೀ ಸಂತೋಷ್ ಎಸ್. ಲಾಡ್ (ಕಾರ್ಮಿಕ ಸಚಿವರು):-** ಮಾನ್ಯ ಸಭಾಪತಿಯವರೇ, ಅದು Central Government.

**ಸಭಾಪತಿಯವರು:-** ಮಾನ್ಯ ಸಚಿವರೆ, ತಮಗೆ ಸಮಯ ಇರುತ್ತದೆ. ತಾವು ಆಮೇಲೆ ಮಾತನಾಡಿ. ನೀವು ಎದ್ದು ಏಕೆ ಮಾತನಾಡುತ್ತೀರಿ?

**ಶ್ರೀ ಪಿ.ಹೆಚ್.ಪೂಜಾರ್:-** ಮಾನ್ಯ ಸಭಾಪತಿಯವರೇ, ಜಲ್ಲಿ ಕ್ರಷರ್ ಮತ್ತು ಮೈನಿಂಗ್ ಮಾಲೀಕರು ಏನಿದ್ದಾರೆ, ಜಲ್ಲಿ stone ಮಾಡುವಂತಹವರ ಪರಿತಾಪವನ್ನು ಹೇಳಲೇಬಾರದು. ಈಗ ಅವರಿಗೆ KMMCR (Karnataka Minor Minerals Concession Rules) ನ ಒಳಗೆ, ಈ quarries ಗೆ, Government land ಗೆ, Patta land ಗೆ differentiation ಮಾಡಿಯೇ ಇಲ್ಲ. ಬೆಂಗಳೂರು ಕಡೆಯ ಬೆಟ್ಟಗಳಲ್ಲಿ ಜಲ್ಲಿ ಮತ್ತು building stone ಸಿಗುತ್ತದೆ.

**ಶ್ರೀ ಎಸ್.ಎಸ್.ಮಲ್ಲಿಕಾರ್ಜುನ (ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು):-** ಮಾನ್ಯ ಸಭಾಪತಿಯವರೇ, ಅದು ಬರುವುದಿಲ್ಲ.

**(ಗೊಂದಲ)**

**ಶ್ರೀ ಪಿ.ಹೆಚ್.ಪೂಜಾರ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ನಮ್ಮ ಸಮಸ್ಯೆಗಳನ್ನು ಕೇಳಿಸಿಕೊಳ್ಳಲಿ.

**ಸಭಾಪತಿಯವರು:-** ಮಾನ್ಯ ಪಿ.ಹೆಚ್.ಪೂಜಾರ್‌ರವರೆ, ತಾವು ನನ್ನ ಕಡೆ ನೋಡಿಕೊಂಡು ಮಾತನಾಡಿ.

**ಶ್ರೀ ಪಿ.ಹೆಚ್.ಪೂಜಾರ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು interfere ಆಗುತ್ತಿದ್ದಾರೆ.

**ಸಭಾಪತಿಯವರು:-** ಮಾನ್ಯ ಪಿ.ಹೆಚ್.ಪೂಜಾರ್‌ರವರೆ, ನೀವು ನನ್ನ ಕಡೆ ನೋಡಿಕೊಂಡು ಮಾತನಾಡಿದರೆ, ಅವರು ಏಕೆ interfere ಆಗುತ್ತಾರೆ.

**ಶ್ರೀ ಪಿ.ಹೆಚ್.ಪೂಜಾರ್:-** ಮಾನ್ಯ ಸಭಾಪತಿಯವರೇ, ಆ ಕಡೆಗಳಲ್ಲಿ ಗುಡ್ಡ ಮತ್ತು ಬೆಟ್ಟಗಳನ್ನು ಅಗೆದು, ಹೊಡೆದು ಆ mining process ಅಷ್ಟೊಂದು easy ಆಗಿ ಇರುವಂಥದ್ದು. ಅವರು ಆ process ನಲ್ಲಿ ಅರಾಮವಾಗಿ building stone ಮತ್ತು ಜಲ್ಲಿಗಳನ್ನು ತಯಾರು ಮಾಡಿಕೊಡುವಂಥದ್ದು. ಆದರೆ, ನಮ್ಮ ಕಡೆಗಳಲ್ಲಿ

ಪಟ್ಟಾ ಲ್ಯಾಂಡ್‌ನಲ್ಲಿ ಮಾಡುತ್ತಿದ್ದೇವೆ. ನಾವು ಭೂಮಿಯನ್ನು ಅಗೆದು 40 ರಿಂದ 50 feet ಗಳಲ್ಲಿ ಮಾಡುವಂಥದ್ದು. ನಮಗೂ ಸಹ ಅಷ್ಟೇ royalty ಯನ್ನು fix ಮಾಡಿದ್ದಾರೆ. ಅದಕ್ಕೂ ಇದಕ್ಕೂ ಕೇವಲ 20 ರೂಪಾಯಿಗಳನ್ನು ಹೆಚ್ಚಿಗೆ ಮಾಡಿದ್ದಾರೆ. ನಮಗೆ 20 ರೂಪಾಯಿಗಳಷ್ಟು ಕಡಿಮೆ ಮಾಡಿದ್ದಾರೆ. ಅವರಿಗೆ 20 ರೂಪಾಯಿಗಳಷ್ಟು ಜಾಸ್ತಿ ಮಾಡಿದ್ದಾರೆ. ಆದರೆ, ನಮಗೆ 100 ರೂಪಾಯಿ ಮೇಲೆ ಖರ್ಚು ಬರುತ್ತದೆ. ಹೆಚ್ಚಿನ ಖರ್ಚು, ವ್ಯಾಜ್ಯ ಮತ್ತು ತೊಂದರೆಗಳಾಗುವಂಥದ್ದು ನಮ್ಮಲ್ಲಿ ಜಲ್ಲಿ ತೆಗೆಯುವಂತಹ mine owners ಗಳಿಗೆ ಮತ್ತು ಇವರಿಗೆ ಕೂಡ equal ಆಗಿ ಮಾಡಿರುವುದನ್ನು ದಯಮಾಡಿ ಸರಿಪಡಿಸಬೇಕು. ಈ ಕಡೆಯವರಿಗೆ ಏನು ರಾಯಲ್ಟಿಯನ್ನು ಹಾಕಿದ್ದಾರೆ, ಅದನ್ನು ಸರ್ಕಾರಕ್ಕೆ ಕೊಡುವಂತಹ ವ್ಯವಸ್ಥೆ ಆಗಬೇಕು. ಹೆಚ್ಚಿಗೆ ಶೇಕಡಾ 30 ರಿಂದ 40 ರಷ್ಟು ಮನೆ ಕಟ್ಟುವಂತಹ ಮಾಲೀಕರು ತೆಗೆದುಕೊಳ್ಳುತ್ತಾರೆ. ಮನೆ ಮತ್ತು ಮತ್ತೊಂದಕ್ಕೆ ತೆಗೆದುಕೊಳ್ಳುವಂಥದ್ದಕ್ಕೆ ನಾವು ಜಲ್ಲಿಯನ್ನು ರೆಡಿ ಮಾಡುವಂಥದ್ದು. ನಮಗೆ ಮತ್ತು ಅವರಿಗೆ ಹೋಲಿಸಿದರೆ, ಬಹಳಷ್ಟು ಫರ್ಕ್ ಇದೆ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಜಲ್ಲಿ ಕ್ರಷರ್‌ನವರನ್ನು ಕರೆದು ಕೂರಿಸಿ ಮಾತನಾಡಲಿ. ಈಗ ನನಗೆ ಅವಕಾಶ ಸಿಕ್ಕಿರುವುದರಿಂದ ಹೇಳುತ್ತಿದ್ದೇನೆ.

**ಶ್ರೀ ಪ್ರದೀಪ್ ಶೆಟ್ಟರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವರು next ಏನು ಮಾಡುತ್ತಾರೆ ಎಂದು ಮಾನ್ಯ ಸದಸ್ಯರು ಅದರ ಬಗ್ಗೆ ಹೇಳುತ್ತಿದ್ದಾರೆ. ಈಗ 70 ಮತ್ತು 80 ರೂಪಾಯಿಗಳ ರಾಯಲ್ಟಿ ಎಂದು ಮಾಡುತ್ತಿದ್ದಾರಲ್ಲ, ಮುಂದೆ ಜಲ್ಲಿಗೆ ಮಾಡಬೇಕಾದರೆ ಅದನ್ನು ಮಾಡಿ ಎಂದು ಹೇಳುತ್ತಿದ್ದಾರೆ.

**ಸಭಾಪತಿಯವರು:-** ಮಾನ್ಯ ಪ್ರದೀಪ್ ಶೆಟ್ಟರ್‌ರವರೆ, ಈಗ ತಾವು ಕುಳಿತುಕೊಳ್ಳಿ. ಮಾನ್ಯ ಪಿ.ಹೆಚ್.ಪೂಜಾರ್‌ರವರೆ, ತಾವು ಇನ್ನು ಎಷ್ಟು ಸಮಯ ಮಾತನಾಡುತ್ತೀರಿ?

**ಶ್ರೀ ಪಿ.ಹೆಚ್.ಪೂಜಾರ್:-** ಮಾನ್ಯ ಸಭಾಪತಿಯವರೇ, ನಾನು ಹೇಳುವಂಥದ್ದು ಏನೆಂದರೆ, ಕ್ರಷರ್‌ರವರಿಗೆ ಮತ್ತು ಜಲ್ಲಿ ಹಾಗೂ stone ತಯಾರು ಮಾಡುವಂತಹವರಿಗೆ ಸರ್ಕಾರ ಕಿವುಡಾಗಿದೆ ಮತ್ತು ಕುರುಡಾಗಿದೆ. ಅವರೆಲ್ಲರನ್ನು ಕರೆದು ಕೂರಿಸಿ, ಅವರ ಸಮಸ್ಯೆ ಏನು? ಇದಕ್ಕೆ ಪರಿಹಾರಗಳು ಏನೆಂದು ಕೇಳಬೇಕು. ಈಗ ಯಾರಿಗೂ ಸರ್ಕಾರಕ್ಕೆ ರಾಯಲ್ಟಿ ಕೊಡಬಾರದು ಎಂಬ ಭಾವನೆ ಇಲ್ಲ. ಎಲ್ಲರೂ ಸಹ ನ್ಯಾಯಯುತವಾಗಿ ಕೊಡಬೇಕು ಎನ್ನುವಂತಹವರೆ ಇರುವುದು. ಅದಕ್ಕೆ ಎಷ್ಟನ್ನು fix ಮಾಡಬೇಕು ಮತ್ತು ಅದಕ್ಕೆ production cost ಎಷ್ಟಾಗುತ್ತದೆ ಎಂದು ನಿಗದಿ ಮಾಡಬೇಕಾದರೆ, ಅವರನ್ನು ಮೀಟಿಂಗ್‌ಗೆ ಕರೆದು ಅಧಿಕಾರಿಗಳ ಜೊತೆ ಸಮಸ್ಯೆಯನ್ನು ಪರಿಹಾರ ಮಾಡುವಂಥದ್ದನ್ನು ಮಾಡಬೇಕೆಂದು ತಿಳಿಸುತ್ತೇನೆ. ಸಹಜವಾಗಿ ಇದರಲ್ಲಿ dolomite ಬರುವುದಿಲ್ಲ. ಇದರಲ್ಲಿ limestone ಮಾತ್ರ ಬರುತ್ತದೆಂದು ಹೇಳಿದ್ದಾರೆ. ಅದನ್ನು retrospective ಆಗಿ

ತೆಗೆದುಕೊಳ್ಳುವುದಿಲ್ಲ. ಅದನ್ನು ಇವತ್ತಿನಿಂದ ತೆಗೆದುಕೊಳ್ಳುತ್ತೇವೆಂದು ಹೇಳುತ್ತಿದ್ದಾರೆ. ಆದುದರಿಂದ, ನಾನು ಮಾನ್ಯ ಸಚಿವರಿಂದ ಉತ್ತರವನ್ನು ನಿರೀಕ್ಷೆ ಮಾಡುತ್ತಿದ್ದೇನೆ.

**ಶ್ರೀ ಕೆ.ಎಸ್.ನವೀನ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈಗ ಸರ್ಕಾರ ಏನು ಈ ವಿಧೇಯಕವನ್ನು ಮಂಡಿಸಿದೆ, ಈಗಾಗಲೇ ಮಾನ್ಯ ಸದಸ್ಯರಾದ ಸತೀಶ್ ರವರು technical aspects ನಲ್ಲಿ ಮಾತನಾಡಿದ್ದಾರೆ. ನಾನು ಅದರ ಬಗ್ಗೆ ಹೇಳುವುದಿಲ್ಲ. ನಾನು ಮಾನ್ಯ ಸಚಿವರ ಗಮನಕ್ಕೆ ತರುವಂಥದ್ದು ಏನೆಂದರೆ, ಇವತ್ತು ಮಿನರಲ್ ಎನ್ನುವಂಥದ್ದು open market ನಲ್ಲಿ ಸಿಗುವಂತಹ ವಸ್ತು. ನಮ್ಮ ರಾಜ್ಯದಲ್ಲೂ ಸಹ mineral extraction ಆಗುತ್ತದೆ. ಬೇರೆ ಬೇರೆ ರಾಜ್ಯಗಳಲ್ಲೂ ಸಹ ಆಗುತ್ತದೆ. ಇವತ್ತು ಯಾರು ಅದನ್ನು processing ಮಾಡಿ final product ಆಗಿ ಮಾಡುತ್ತಾರೆ. ಈಗ ಅದು ಎಲ್ಲಿ ಯಾವ ರಾಜ್ಯದಲ್ಲಿ raw material ಕಡಿಮೆ ಸಿಗುತ್ತದೆ ಅಲ್ಲಿಗೆ ಹೋಗಿ ಖರೀದಿ ಮಾಡುತ್ತಾರೆ. ಮಾನ್ಯ ಸುಪ್ರೀಂ ಕೋರ್ಟ್ ಒಂದು ಆದೇಶ ನೀಡಿದೆ. ಅಂದರೆ, ನೀವು mineral rights tax collect ಮಾಡಿಕೊಳ್ಳಬಹುದು ಎಂದು ಆದೇಶ ನೀಡಿದೆ. ಆ ಆದೇಶವನ್ನು ಬಳಕೆ ಮಾಡಿಕೊಂಡು, resource mobilization ಮಾಡುವುದಕ್ಕೋಸ್ಕರ mines ಮೇಲೆ ಯದ್ವಾತದ್ವಾ ಮೂರುಪಟ್ಟು royalty tax ನ್ನು ಹಾಕಿದರೆ, ನಮ್ಮ ಕರ್ನಾಟಕ ರಾಜ್ಯದ raw material ಏನಾದರೂ ಹೊರ ರಾಜ್ಯಗಳಲ್ಲಿ raw material ನ cost ಜಾಸ್ತಿಯಾದರೆ, ಯಾವ ಒಬ್ಬ manufacturer ಸಹ ನಮ್ಮ ರಾಜ್ಯದಿಂದ ಮಿನರಲ್ಸ್ ಅನ್ನು ಖರೀದಿ ಮಾಡುವುದಿಲ್ಲ. ಈಗ ಸರ್ಕಾರಕ್ಕೆ ತೆರಿಗೆ ಬರುವುದಿರಲಿ, ಲಕ್ಷಾಂತರ ಜನರು ಉದ್ಯೋಗವನ್ನು ಕಳೆದುಕೊಳ್ಳುತ್ತಾರೆ. ನಾನು ಪ್ರತಿನಿಧಿಸುವಂತಹ ಚಿತ್ರದುರ್ಗ ಜಿಲ್ಲೆ, ಪಕ್ಕದ ಬಳ್ಳಾರಿ ಜಿಲ್ಲೆ ಮತ್ತು ತುಮಕೂರು ಜಿಲ್ಲೆಗಳು ಈ ರಾಜ್ಯದ ಶೇಕಡಾ 70ರಷ್ಟು ಮೇಜರ್ ಮಿನರಲ್ಸ್ ಇರುವುದು ನಾಲ್ಕೈದು ಜಿಲ್ಲೆಗಳಲ್ಲಿ ಮಾತ್ರ. ಇವತ್ತು ಮೈನ್ಸ್‌ಗಳು ಬಂದ್ ಆಗಿ ಹೋದರೆ, ಮೈನಿಂಗ್ ಮಾಲೀಕರಿಗೆ ಬಿಸಿನೆಸ್ ಆಗಲಿಲ್ಲವೆಂದರೆ, ಅವರು ಅದನ್ನು ಬಂದ್ ಮಾಡುತ್ತಾರೆ. ಆದರೆ, ಅವರನ್ನು ನಂಬಿಕೊಂಡು ಸಾವಿರಾರು ಜನ ಕೆಲಸ ಮಾಡುವಂತಹವರು, ಲಾರಿಗಳನ್ನು ಇಟ್ಟುಕೊಂಡಿರುವಂತಹವರು, excavators ಇಟ್ಟುಕೊಂಡಿರುವಂತಹವರು, ಜೆ.ಸಿ.ಬಿ.ಗಳನ್ನು ಇಟ್ಟುಕೊಂಡಿರುವಂತಹವರು ಅದರ ಮೇಲೆ ನಂಬಿಕೆ ಇಟ್ಟುಕೊಂಡು ಸಾಲ ಮಾಡಿ, ಅದಕ್ಕೆ ಬಂಡವಾಳ ಹಾಕಿ ಉಪಕರಣಗಳನ್ನು ತಂದಿರುವಂತಹವರ ಎಲ್ಲರ ಬದುಕು ಕೂಡ ಬಂದ್ ಆಗಿ ಹೋಗುತ್ತದೆ. ಹಾಗಾಗಿ, ನಾನು ತಮ್ಮ ಮೂಲಕ ಸರ್ಕಾರಕ್ಕೆ ಮತ್ತು ಮಾನ್ಯ ಸಚಿವರಿಗೆ ವಿನಂತಿ ಮಾಡುವುದೇನೆಂದರೆ, this is very unrealistic. 'Three times of royalty tax' ಎಂದು ಏನು propose ಮಾಡಿದ್ದಾರೆ, ಅದಕ್ಕೆ ನಾನು ದಯಮಾಡಿ ವಿನಂತಿ ಮಾಡುವುದೇನೆಂದರೆ, ಮಾನ್ಯ ಸಚಿವರು ಸಹ ಉದ್ಯಮವನ್ನು

ನಡೆಸುತ್ತಿರುವಂತಹವರು. ಈಗ ಸಂಡೂರಿನಲ್ಲಿ ನಲವತ್ತೈದು ಸಾವಿರಕ್ಕೂ ಹೆಚ್ಚು ಕಾರ್ಮಿಕರು ಮೈನ್ಸ್ ಮೇಲೆ ನೇರವಾಗಿ ಅವಲಂಬಿತವಾಗಿರುವಂಥದ್ದು ಇದೆ. ಇದು ಮಾನ್ಯ ಕಾರ್ಮಿಕ ಸಚಿವರಿಗೆ ಗೊತ್ತಿದೆ. ಇವರು ಅವರೆಲ್ಲರನ್ನೂ ಸಹ ಗಮನಕ್ಕೆ ತೆಗೆದುಕೊಳ್ಳಬೇಕು. ಈಗ resource mobilization ಮಾಡುವುದರಿಂದ, ಲಕ್ಷಾಂತರ ಜನರ ಬದುಕನ್ನು ನಾಶ ಮಾಡಿ resource mobilization ಮಾಡುವಂತಹ ಅವಶ್ಯಕತೆ ನಮ್ಮ ರಾಜ್ಯಕ್ಕೆ ಇಲ್ಲ. ಈಗ ಸರ್ಕಾರದ ಮುಂದೆ ಏನು ಈ ಪ್ರಸ್ತಾವನೆ ಇದೆ. ಇದನ್ನು ದಯವಿಟ್ಟು ತೆಗೆಯಲಿ. ಬೇರೆ ರೀತಿಯಲ್ಲಿ resource mobilization ಮಾಡುವಂತಹ ಕೆಲಸವನ್ನು ಮಾಡಲಿ. ನಾನು mine owners, ಮತ್ತೊಬ್ಬರ ಪರವಾಗಿ ಮಾತನಾಡುತ್ತಿಲ್ಲ. ಸಾಮಾನ್ಯ ಜನರು ಆ ಗಣಿಗಳನ್ನು ನಂಬಿ ಕೆಲಸ ಮಾಡುತ್ತಿರುವಂತಹ ಕಾರ್ಮಿಕರ ಪರವಾಗಿ ನಾನು ಧ್ವನಿಯನ್ನು ಎತ್ತುತ್ತಿದ್ದೇನೆ. ದಯವಿಟ್ಟು ಈ ಪ್ರಸ್ತಾವನೆಯನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ತಮ್ಮ ಮೂಲಕ ಸರ್ಕಾರಕ್ಕೆ ಮತ್ತು ಮಾನ್ಯ ಸಚಿವರಿಗೆ ವಿನಂತಿ ಮಾಡುತ್ತೇನೆ.

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಕರ್ನಾಟಕ (ಖನಿಜ ಹಕ್ಕುಗಳು ಮತ್ತು ಖನಿಜ ಹೊಂದಿರುವ ಭೂಮಿ) ತೆರಿಗೆ ವಿಧೇಯಕ, 2024 ಅನ್ನು ನಾನು ವಿರೋಧ ಮಾಡುತ್ತೇನೆ. ಇಲ್ಲಿ Minor Minerals and Major Minerals ಎಂದು ಎರಡು ಪ್ರತ್ಯೇಕವಾಗಿ ಬರುತ್ತಿರುವುದರಿಂದ ಈ ವಿಧೇಯಕದಲ್ಲಿ confusion ಆಗುತ್ತಿದೆ. ಇಲ್ಲಿ minor minerals ರಾಜ್ಯ ಸರ್ಕಾರದ ಸುಪರ್ದಿಗೆ ಬರತಕ್ಕಂತಹ ಯೋಜನೆಗಳಲ್ಲಿ crusher mining ಗಳ ಬಗ್ಗೆ ವಿಶೇಷವಾಗಿ ಇರತಕ್ಕಂತಹ confusion ಅನ್ನು ಮಾನ್ಯ ಮಂತ್ರಿಗಳು clear ಮಾಡಬೇಕು. ಈ ವಿಧೇಯಕದಲ್ಲಿ ತೆರಿಗೆ ಮತ್ತು ರಾಜಧನವನ್ನು ಹೆಚ್ಚಿಗೆ ಮಾಡುವಂಥದ್ದು ಇದೆ. ಒಂದು ವೇಳೆ ಏನಾದರೂ ಆದರೆ ರಾಜ್ಯದಲ್ಲಿರತಕ್ಕಂತಹ ಎಲ್ಲಾ crusher machine ಗಳು ಕೂಡ ಬಂದ್ ಆಗುವಂತಹ ಪ್ರಸಂಗ ಬರುತ್ತದೆ. ಇದರಿಂದ ಸಾಕಷ್ಟು ನಿರುದ್ಯೋಗದ ಸಮಸ್ಯೆ ಕೂಡ ಉಲ್ಬಣವಾಗುವುದನ್ನು ನಾವೆಲ್ಲರೂ ಗಮನಿಸಬಹುದು. ಇದರ ಜೊತೆಗೆ ತೆರಿಗೆಯನ್ನು ಸಂಗ್ರಹಣೆ ಮಾಡುವಂಥದ್ದು 1ನೇ ಏಪ್ರಿಲ್, 2005ರಿಂದ ಪೂರ್ವಾನ್ವಯವಾಗಿ ವಸೂಲಿ ಮಾಡಬೇಕಾಗುತ್ತದೆ ಎಂದು ತಿಳಿಸಿದ್ದಾರೆ. ಅದರ ಜೊತೆಗೆ ಬಡ್ಡಿ ಮತ್ತು ದಂಡವನ್ನು ಬಿಟ್ಟು, 2026 ರಿಂದ 12 ವರ್ಷಗಳ ಕಾಲ ಕಂತುಗಳ ಮುಖಾಂತರ ತುಂಬಬೇಕೆಂದು ಹೇಳುತ್ತಾರೆ. ಏನಾದರೂ ಇಷ್ಟು ತೆರಿಗೆಯನ್ನು ಹಾಕಿದರೆ, ಈಗಾಗಲೇ ಹೇಳಿರುವಂತೆ ಯಾವುದೇ ಒಂದು mines industry ಯನ್ನು ನಡೆಸಿಕೊಂಡು ಹೋಗುವುದಕ್ಕೆ ಬಹಳ ಕಷ್ಟವಾಗುತ್ತದೆ ಎನ್ನುವಂಥದ್ದನ್ನು ತಮ್ಮ ಗಮನಕ್ಕೆ ತರುವುದಕ್ಕೆ ಬಯಸುತ್ತೇನ. ಇದರ ಜೊತೆಗೆ ನಮ್ಮ ರಾಜ್ಯದಲ್ಲಿ ಪ್ರತಿವರ್ಷ ಸುಮಾರು ಆರು ದಶಲಕ್ಷ ಟನ್‌ನಷ್ಟು ಕಟ್ಟಡ ಕಲ್ಲಿನ ಅವಶ್ಯಕತೆ ಇದೆ. ಆದರೆ, ನಮ್ಮ ರಾಜ್ಯದಲ್ಲಿ ಎರಡು ದಶಲಕ್ಷ ಟನ್‌ನಷ್ಟು ಮಾತ್ರ ಉತ್ಪನ್ನವಾಗುತ್ತದೆ. ಬೇರೆ

ರಾಜ್ಯಗಳಿಂದ ಸುಮಾರು ನಾಲ್ಕು ದಶಲಕ್ಷದಷ್ಟು ಸ್ಯಾಂಡ್ ಮತ್ತು ಕ್ರಷರ್ ಸ್ಟೋನ್ ರಾಜ್ಯಕ್ಕೆ ಬರುವಂಥದ್ದನ್ನು ತಡೆಯಬೇಕು. ಇದರಿಂದ ರಾಜ್ಯದ ಬೊಕ್ಕಸಕ್ಕೆ ಬಹಳಷ್ಟು ಹಾನಿಯಾಗುತ್ತದೆ ಎಂಬುದನ್ನು ಮಾನ್ಯ ಸಚಿವರು ಗಮನಿಸಬೇಕು. ಇಲ್ಲಿ ಎರಡು-ಮೂರು ಬಾರಿ ತೆರಿಗೆಯನ್ನು ಕಟ್ಟುವಂಥದ್ದು ಆಗುತ್ತದೆ. ಅಂತಿಮವಾಗಿ ಯಾವ ಗ್ರಾಹಕರು ಬಳಸುತ್ತಾರೆ, ಅವರು ತೆರಿಗೆ ಕಟ್ಟಿದರೆ ಆಗುತ್ತದೆ. ಇಲ್ಲಿ ಗಣಿ ಮಾಲೀಕರು ಮತ್ತು ಅದನ್ನು ಬಳಕೆ ಮಾಡುವಂತಹವರು ಸಹ ತೆರಿಗೆಯನ್ನು ಕಟ್ಟುವಂಥದ್ದು ಇದೆ. ಅಂದರೆ, ಜಿ.ಎಸ್.ಟಿ ಮತ್ತು ರಾಜಧನವನ್ನು ಕೊಡುವುದರಿಂದ, ಅಂದರೆ ಎರಡು ಕಡೆಗಳಲ್ಲಿ ಕೊಡುವುದರಿಂದ ಬಹಳಷ್ಟು ಹಾನಿ ಕ್ರಷರ್ ಮಾಲೀಕರಿಗೆ ಮತ್ತು ಗಣಿ ಉದ್ಯಮಿಯವರಿಗೆ ಆಗುತ್ತದೆ. ಅದಕ್ಕೆ ಒಂದು ಕಡೆ ಮಾತ್ರ ತೆರಿಗೆಯನ್ನು ತೆಗೆದುಕೊಳ್ಳಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಅದರ ಜೊತೆಗೆ ದಿನಾಂಕ 08.07.2013ರಂದು Civil Appeal Nos 4540-4548 of 2000, ಮಾನ್ಯ ಸರ್ವೋಚ್ಚ ನ್ಯಾಯಾಲಯದ ಆದೇಶದ ಪ್ರಕಾರ ಖಾಸಗಿ ಜಮೀನುಗಳಲ್ಲಿರತಕ್ಕಂತಹ ಖನಿಜ ಸಹಜ ಮಾಲೀಕತ್ವವು ಜಮೀನು ಮಾಲೀಕರಿಗೆ ಸೇರುತ್ತದೆ ಎನ್ನತಕ್ಕಂಥದ್ದನ್ನು ಹೇಳುತ್ತಾರೆ.

(ಮುಂದು)

(977) 18.12.2024 06.30 LL-VK (ಸಭಾಪತಿಯವರ ಉಪಸ್ಥಿತಿ)

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ (ಮುಂದು):**

ಇಲ್ಲಿ ಖಾಸಗಿ ಜಮೀನಿನ ಮೇಲೆ ಇರತಕ್ಕಂತಹ ತೆರಿಗೆ ಬೇರೆಯಾಗಬೇಕು ಮತ್ತು ಸರ್ಕಾರಿ ಜಮೀನಿನ ಮೇಲೆ ಇರತಕ್ಕಂತಹ ರಾಯಲ್ಟಿ ಬೇರೆಯಾಗಬೇಕು. ಇದು ಎರಡೂ ಸಮನಾಗಿ ಇರುವಂಥದ್ದು ಸೂಕ್ತವಲ್ಲ. ಹಾಗಾಗಿ, ಇದನ್ನು ಗಮನಿಸಬೇಕೆಂದು ಹೇಳಿ, ಈ ವಿಧೇಯಕದ ಮೇಲಿನ ತಿದ್ದುಪಡಿಯನ್ನು ವಿರೋಧ ಮಾಡುತ್ತೇನೆ.

**ಶ್ರೀ ಸಿ.ಟಿ. ರವಿ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಕರ್ನಾಟಕ ರಾಜ್ಯ ತೆರಿಗೆ ವಿಧೇಯಕದಲ್ಲಿ, ಮಾನ್ಯ ಸರ್ವೋಚ್ಚ ನ್ಯಾಯಾಲಯ ದಿನಾಂಕ 14.08.2024ರಂದು ಪೂರ್ವಾನ್ವಯವಾಗಿ ಜಾರಿಗೆ ಬರುವಂತೆ, ಖನಿಜ ಹೊಂದಿರುವ ಭೂಮಿಯ ಮತ್ತು ಖನಿಜ ಹಕ್ಕುಗಳ ಮೇಲೆ ಖನಿಜ ತೆರಿಗೆಗಳನ್ನು ಸಂಗ್ರಹಿಸಬಹುದಾಗಿದೆ ಎಂದು ತೀರ್ಪು ಕೊಟ್ಟಿರುತ್ತದೆ. ಸಂಗ್ರಹಿಸಬೇಕು ಎಂದು ಹೇಳಿರುವುದಿಲ್ಲ. ಸಂಗ್ರಹಿಸಬಹುದಾಗಿದೆ ಎನ್ನುವ ಒಂದು ಸಲಹೆ ರೂಪದಲ್ಲಿ ಈ ತೀರ್ಪು ಕೊಟ್ಟಿರುತ್ತದೆ. ಹಾಗಾಗಿ, ಈ ಒಂದು ವಿಧೇಯಕಕ್ಕೆ ತಿದ್ದುಪಡಿ ತರುವಂತಹ ಉದ್ದೇಶ ಏನು ಎಂಬುದನ್ನು ಸ್ಪಷ್ಟಪಡಿಸಬೇಕು. ಯಾವ ಉದ್ದೇಶಕ್ಕಾಗಿ ಈ ವಿಧೇಯಕಕ್ಕೆ ತಿದ್ದುಪಡಿ ತರುತ್ತಿದ್ದಾರೆ. ಇದರ ಸಮಗ್ರ ಪರಿಣಾಮಗಳ ಬಗ್ಗೆ ಇವರು ಅಧ್ಯಯನ ಮಾಡಿದ್ದಾರೆಯೇ? ತೆರಿಗೆ ಹೆಚ್ಚಳ ಮಾಡುವುದು ಮತ್ತು ಅದರಿಂದ ತೆರಿಗೆ ಸಂಗ್ರಹ ಮಾಡಿ, ಆದಾಯ ಕ್ರೋಢೀಕರಣ ಮಾಡುವುದು ಮಾತ್ರ ಉದ್ದೇಶವೇ ಅಥವಾ ಅದರ ಅಡ್ಡ ಪರಿಣಾಮಗಳು ಏನಾಗುತ್ತದೆ ಎಂಬುದರ ಬಗ್ಗೆ ಸರ್ಕಾರದ ಯಾವುದಾದರೂ ಅಧ್ಯಯನ ಇದೆಯೇ? ನನ್ನ ಅಭಿಪ್ರಾಯದ ಪ್ರಕಾರ, ಶೇಕಡ 18 ರಷ್ಟು ಜಿಎಸ್‌ಟಿ, ಶೇಕಡ 10

ರಷ್ಟು ಡಿಎಂಎಫ್, ಶೇಕಡ 15 ರಷ್ಟು ರಾಯಲ್ಟಿ, ಶೇಕಡ 2 ರಷ್ಟು ಎನ್‌ಎಂಎಫ್ ಸೇರಿ ಒಟ್ಟಾರೆಯಾಗಿ ಶೇಕಡ 45 ರಷ್ಟು ಈಗಾಗಲೇ ಕಟ್ಟುತ್ತಿದ್ದಾರೆ. ಆದರೆ, ಈಗ ಸರ್ಕಾರ ರಾಯಲ್ಟಿಯ ಮೂರು ಪಟ್ಟು ಹೆಚ್ಚಳ ಮಾಡುತ್ತೇವೆಂದರೆ, ಅದು ಮೂರು ಪಟ್ಟು ಹೆಚ್ಚಾಗಿ ಶೇಕಡ 45 ರಷ್ಟು ಆಗುತ್ತದೆ. ಅಂದರೆ, ಶೇಕಡ 45 ಮತ್ತು ಶೇಕಡ 45 ರಷ್ಟು ಸೇರಿ ಶೇಕಡ 90 ರಷ್ಟಾಗುತ್ತದೆ. ಮಾನ್ಯ ಸದಸ್ಯರಾದ ಶ್ರೀ ವೈ.ಎಂ. ಸತೀಶ್‌ರವರು ಮಾತನಾಡುತ್ತಾ, ಇದರ ಮೇಲೆ ಆದಾಯ ತೆರಿಗೆ ಕೂಡ ಹಾಕುತ್ತಾರೆಂದು ಹೇಳಿರುತ್ತಾರೆ. ಈ ತೆರಿಗೆ ಭಾರಕ್ಕೆ ಅಂದರೆ, ಮೂಗಿಗಿಂತ ಮೂಗುತಿ ಭಾರವಾಗಿ, ಒಂದು ವೇಳೆ ಗಣಿ ಉದ್ದಿಮೆಗಳು ಕುಸಿತು ಹೋದರೆ, ಅದರ ಪರಿಣಾಮವೇನು. ಮೊದಲು ನಿರುದ್ಯೋಗ ಸಮಸ್ಯೆ ತಲೆದೋರುತ್ತಿದೆ. ಆದರೆ, ರಾಯಲ್ಟಿಯನ್ನು ಹೆಚ್ಚು ಮಾಡುವುದರಿಂದ ಇವೊತ್ತಿನ ದಿವಸ ಸರ್ಕಾರಕ್ಕೆ ಆದಾಯ ಕ್ರೋಢೀಕರಣ ಆಗುತ್ತದೆ ಎನ್ನುವಂತಹ ಒಂದು ಉದ್ದೇಶಕ್ಕೆ ಮಾತ್ರ ಈ ವಿಧೇಯಕಕ್ಕೆ ತಿದ್ದುಪಡಿ ತಂದಿದ್ದಾರೆಯೋ ಅಥವಾ ನಾಳೆಯ ದಿವಸ ಈ ತೆರಿಗೆ ಭಾರಕ್ಕೆ ಗಣಿ ಉದ್ದಿಮೆ ಕುಸಿದರೆ ಆಗ ಆಗುವಂತಹ ನಿರುದ್ಯೋಗದ ಬಗ್ಗೆ ಯೋಚನೆ ಮಾಡಿದ್ದಾರೆಯೇ ಅಥವಾ ಬೆಲೆ ಏರಿಕೆ ಬಗ್ಗೆ ಯೋಚನೆ ಮಾಡಿದ್ದಾರೆಯೇ? ಯಾವುದೇ ಗಣಿ ಉದ್ದಿಮೆದಾರರು ಅಂತಿಮವಾಗಿ ಬೆಲೆ ಏರಿಕೆಯನ್ನು ಗ್ರಾಹಕರಿಗೆ ವರ್ಗಾವಣೆ ಮಾಡುತ್ತಾರೆ. ಇದು ಹಣದುಬ್ಬರಕ್ಕೂ ಮತ್ತು ಬೆಲೆ ಏರಿಕೆಗೂ ಸಹ ಕಾರಣವಾಗುತ್ತದೆ ಎಂದು ನನಗನ್ನಿಸುತ್ತದೆ. ಅವರು ಸ್ವಾಭಾವಿಕವಾಗಿ ಯಾವುದೇ ತೆರಿಗೆಯನ್ನು ತಮ್ಮ ಮೇಲೆ ಹಾಕಿಕೊಳ್ಳುವುದಿಲ್ಲ. ಅದನ್ನು ಅವರು ಗ್ರಾಹಕರಿಗೆ ವರ್ಗಾವಣೆ ಮಾಡುತ್ತಾರೆ. ಹಾಗಾಗಿ, ಈ ಬಗ್ಗೆ ಸರ್ಕಾರ ಯೋಚನೆ ಮಾಡಬೇಕು. ಒಂದು ವೇಳೆ ಇದರ ಬಗ್ಗೆ ಸಮಗ್ರವಾಗಿ ಅಧ್ಯಯನ ಮಾಡಿದ್ದರೆ ಬೇರೆ ವಿಷಯ. ಇಲ್ಲವಾದರೆ, ಈ ಬಗ್ಗೆ ಅಧ್ಯಯನ ಮಾಡಬೇಕು. ಇದಕ್ಕೆ ಉದಾಹರಣೆಯಾಗಿ ಚಿನ್ನದ ಮೊಟ್ಟೆ ಇಡುವ ಕೋಳಿಯ ಕಥೆ ಹೇಳುತ್ತೇನೆ. ಅದೇನೆಂದರೆ, ಸೋಮಪ್ಪ ಎಂಬ ವ್ಯಕ್ತಿ ಒಂದು ಕೋಳಿ ಸಾಕಿದ್ದನು. ಅದು ಪ್ರತಿದಿನ ಚಿನ್ನದ ಮೊಟ್ಟೆ ಇಡುತ್ತಿತ್ತು. ಒಂದು ದಿನ ಆತನಿಗೆ ಏನು ಅನಿಸುತ್ತದೆಯೆಂದರೆ, ಈ ಕೋಳಿ ಪ್ರತಿದಿನ ಒಂದೇ ಮೊಟ್ಟೆ ಇಡುತ್ತದೆ. ಇದರ ಹೊಟ್ಟೆ ಬಗೆದರೆ ಎಲ್ಲಾ ಮೊಟ್ಟೆಗಳು ಒಟ್ಟಿಗೆ ಸಿಕ್ಕಿ, ನಾನು ಒಂದೇ ಬಾರಿಗೆ ಸಾಹುಕಾರ ಆಗಬಹುದೆಂದು ಭಾವಿಸಿ, ಆ ಕೋಳಿಯ ಹೊಟ್ಟೆ ಬಗೆದಿರುತ್ತಾನೆ. ಕೊನೆಗೆ, ಮೊಟ್ಟೆಯೂ ಇಲ್ಲ, ಕೋಳಿಯೂ ಇಲ್ಲ. ಆ ಪರಿಸ್ಥಿತಿ ಬರಬಾರದು. ಒಂದು ಕಡೆ ನಾವು ಉದ್ಯಮ ಸ್ನೇಹಿ ರಾಜ್ಯ ಎಂದು ಹೇಳುತ್ತಾ, ಇನ್ನೊಂದು ಕಡೆ ಎಲ್ಲೆಲ್ಲಿ ನಾವು ಆದಾಯ ಕ್ರೋಢೀಕರಣ ಮಾಡುವುದಕ್ಕೆ ಸಾಧ್ಯವಿದೆ ಎಂದು ಹೇಳುತ್ತಾ, ಹೊರಲಾರದಂತಹ ಭಾರವನ್ನು ಹೊರಿಸಿದರೆ, ಆ ಭಾರಕ್ಕೆ ಉದ್ದಿಮೆಗಳು ಕುಸಿದು ಹೋಗಬಾರದು. ಹಾಗಾಗಿ, ಈ ವಿಷಯದಲ್ಲಿ ನನಗೆ ಅನ್ನಿಸುವುದೇನೆಂದರೆ, ಇದರ ಬಗ್ಗೆ ಸಮಗ್ರವಾದ ಅಧ್ಯಯನ ಮಾಡಿರುವುದಿಲ್ಲವೆಂದು ಅನಿಸುತ್ತದೆ. ಕೇವಲ ಸರ್ಕಾರಕ್ಕೆ ಅನ್ನಿಸುವುದೇನೆಂದರೆ, ಏನಾದರೂ ಮಾಡಿ ಆದಾಯ ಕ್ರೋಢೀಕರಣ ಮಾಡಬೇಕು. ಆದಾಯಕ್ಕಾಗಿ ಕ್ರೋಢೀಕರಣಕ್ಕಾಗಿ ಎಲ್ಲಾ ಬೆಲೆಯನ್ನು ಏರಿಸಿ ಆಯಿತು. ತದನಂತರ, ಬೇರೆ ಏನೂ ಉಳಿದಿಲ್ಲ, ಇದನ್ನು ಕೂಡ ಮಾಡಿಬಿಡೋಣ ಎಂದು ಹೊರಟಿದ್ದರೆ, ತಾತ್ಕಾಲಿಕವಾಗಿ ಆದಾಯ ಕ್ರೋಢೀಕರಣ ಮಾಡಬಹುದು ಎಂದು ಮೇಲ್ನೋಟಕ್ಕೆ ಅನ್ನಿಸಿ, ಕೊನೆಗೆ ಉದ್ದಿಮೆ ಬಾಗಿಲು ಹಾಕಿದರೆ, ಕೊನೆಗೆ ಬರುತ್ತಿದ್ದಂತಹ ಆದಾಯವೂ ನಿಂತು ಹೋಗುವಂತಹ ಪರಿಸ್ಥಿತಿ ಬರಬಹುದು. ಹಾಗಾಗಿ, ಈ ವಿಷಯದಲ್ಲಿ ಸಮಗ್ರವಾದ ಅಧ್ಯಯನ ಮಾಡಬೇಕು.

ಅದಕ್ಕೋಸ್ಕರ ನನಗನ್ನಿಸುವುದೇನೆಂದರೆ, ಸದನ ಸಮಿತಿಗೆ ಇದನ್ನು ವಹಿಸಿ, 1, 2 ಅಥವಾ 3 ತಿಂಗಳು ಗಡುವು ಕೊಡಲಿ. ಅವರು ಸಹ ಅಧ್ಯಯನ ಮಾಡಿ, ವರದಿಯನ್ನು ನೀಡಲಿ. ಆ ವರದಿಯ ಆಧಾರದ ಮೇರೆಗೆ ನಿರ್ಣಯ ತೆಗೆದುಕೊಳ್ಳಲಿ. ಒಂದು ವೇಳೆ ತೆರಿಗೆ ಹೆಚ್ಚು ಸಂಗ್ರಹ ಮಾಡಬಹುದು ಎನ್ನುವುದನ್ನು ಹೊರತುಪಡಿಸುವುದು ಬಿಟ್ಟು, ಬೇರೆ ಉದ್ದೇಶ ಇದೆಯೇ? ಮಾನ್ಯ ಸಚಿವರ ಕುಟುಂಬ ಉತ್ತಮ ವಿದ್ಯಾವಂತರು ಹೌದು, ಉದ್ದಿಮೆದಾರರು ಹೌದು ಹಾಗೂ ಕೃಷಿಕರು ಹೌದು ಮತ್ತು ರಾಜಕಾರಣಿಗಳು ಹೌದು 'all in one' ಇರುವಂತಹವರು ಅವರು. ಎಲ್ಲದರಲ್ಲಿಯೂ ಇದ್ದಾರೆ. ಕೆಲವೇ ಕೆಲವು ಕುಟುಂಬಗಳು ಈ ರೀತಿ ಎಲ್ಲದರಲ್ಲಿಯೂ ಇರುತ್ತಾರೆ. ಆ ಕುಟುಂಬಗಳ ಪೈಕಿ ಮಾನ್ಯ ಸಚಿವರ ಕುಟುಂಬವೂ ಒಂದು. ಉದ್ದಿಮೆ ನಡೆಸುವುದಕ್ಕೆ ಆಗದೇ ಇರುವಂತಹ ಪರಿಸ್ಥಿತಿಯಲ್ಲಿ ಸ್ವಾಭಾವಿಕವಾಗಿ ಅವರು ಬಾಗಿಲು ಹಾಕುತ್ತಾರೆ. ಇದರ ಪರಿಣಾಮ ಉದ್ಯೋಗ ಸೃಷ್ಟಿ ಮೇಲೂ ಆಗುತ್ತದೆ. ನಿರುದ್ಯೋಗ ಸಮಸ್ಯೆಗೂ ಕೂಡ ಕಾರಣ ಆಗುತ್ತದೆ ತೆರಿಗೆ ಜಾಸ್ತಿ ಮಾಡಿದರೆ ಅದರ ಪರಿಣಾಮ ಬೆಲೆ ಏರಿಕೆಗೂ ಸಹ ಕಾರಣವಾಗುತ್ತದೆ. ಹಾಗಾಗಿ, ಇದರ ಬಗ್ಗೆ ಬೆಳಕು ಚೆಲ್ಲಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರನ್ನು ಹೇಳಬಯಸುತ್ತೇನೆ.

**ಶ್ರೀ ಎನ್. ರವಿಕುಮಾರ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಸರ್ಕಾರ ಒಂದು ನಿರ್ಧಾರ ಮಾಡಿಬಿಟ್ಟಿದೆ ಎಂದು ನನಗನ್ನಿಸುತ್ತದೆ. ಕರ್ನಾಟಕ ರಾಜ್ಯದಲ್ಲಿ ಯಾವ ವಸ್ತುಗಳ ಮೇಲೂ ಬೆಲೆ ಏರಿಕೆಯನ್ನು ತಡೆಗಟ್ಟುವುದು ಬೇಡ. ಎಲ್ಲಾ ವಸ್ತುಗಳ ಬೆಲೆ ಏರಿಕೆಯನ್ನು ಮಾಡೋಣ. ಅದರಂತೆ, ಹಾಲು, ಪೆಟ್ರೋಲ್-ಡಿಸೇಲ್, ನೋಂದಣಿ ಶುಲ್ಕ ಹಾಗೂ ಇತರೆ ಎಲ್ಲಾ ವಸ್ತುಗಳ ಮೇಲೆ ಬೆಲೆ ಏರಿಕೆ ಜಾಸ್ತಿ ಮಾಡಬೇಕೆಂದು ನಿರ್ಧಾರ ಮಾಡಿರುತ್ತದೆ. ಅದೇ ರೀತಿ, ಈ ವಿಚಾರದಲ್ಲಿಯೂ ಸಹ ತೆರಿಗೆಯನ್ನು ಹೆಚ್ಚು ಮಾಡತಕ್ಕಂತಹ ಕೆಲಸ ಮಾಡುತ್ತಿದೆ. ಒಂದು ಸಂಗತಿಯನ್ನು ಸರ್ಕಾರದ ಗಮನಕ್ಕೆ ತರಬಯಸುವುದೇನೆಂದರೆ. ಹೊರ ರಾಜ್ಯಗಳಲ್ಲಿ ನಮ್ಮ ರಾಜ್ಯಕ್ಕಿಂತಲೂ ಮೈನ್ಸ್ ಪ್ರೊಡಕ್ಷನ್ ಕಡಿಮೆಯಾದರೆ, ಅವರು ನಮ್ಮ ರಾಜ್ಯಕ್ಕೆ ಬರುತ್ತಾರೆ. ಈಗಾಗಲೇ ಬರುತ್ತಿದ್ದಾರೆ. There is a competition between the States. ಆದುದರಿಂದ, ತಮಿಳುನಾಡು, ತೆಲಂಗಾಣ ಹಾಗೂ ಮಹಾರಾಷ್ಟ್ರದಿಂದ ನಮ್ಮ ರಾಜ್ಯಕ್ಕೆ ದೊಡ್ಡ ಪ್ರಮಾಣದಲ್ಲಿ ಬರುತ್ತಿದ್ದಾರೆ. ಪೈಪೋಟಿ ಇರುವಂತಹ ಸಂದರ್ಭದಲ್ಲಿ ಅವರ ಬೆಲೆ ಕಡಿಮೆಯಾಗುತ್ತದೆ. ಆಗ ನಮ್ಮವರೆಲ್ಲರೂ ಪಾಪರ್ ಆಗುತ್ತಾರೆ. ಮಾನ್ಯ ಸದಸ್ಯರಾದ ಶ್ರೀ ವೈ.ಎಂ. ಸತೀಶ್‌ರವರು ಮಾತನಾಡುತ್ತಾ, ಉದ್ದಿಮೆದಾರರು ತಮ್ಮ ಉದ್ದಿಮೆಗಳನ್ನು ಕ್ಲೋಸ್ ಮಾಡಿಬಿಡುತ್ತಾರೆಂದು ಹೇಳಿದರು. ಆದ್ದರಿಂದ, ಈ ಕಡೆಗೂ ಕೂಡ ಒಂದು ಬಾರಿ ಗಮನ ಕೊಡುವುದು ಒಳ್ಳೆಯದು ಎಂದು ಮಾನ್ಯ ಸಚಿವರಲ್ಲಿ ಹಾಗೂ ಸರ್ಕಾರದಲ್ಲಿ ವಿನಂತಿ ಮಾಡುತ್ತೇನೆ. ಜೊತೆಗೆ, ಮಾನ್ಯ ಸಿ.ಟಿ. ರವಿಯವರು ಈಗಾಗಲೇ ಹೇಳಿದ ಹಾಗೆ, ಮುಂದಿನ ವರ್ಷ ಬಜೆಟ್ ಅಧಿವೇಶನ ಬರುತ್ತದೆ. ಆಗ ಈ ವಿಧೇಯಕದ ಮೇಲಿನ ತಿದ್ದುಪಡಿಯನ್ನು ತರಬಹುದು. ಅಲ್ಲಿಯವರೆಗೂ ಈ ವಿಷಯವನ್ನು ಸದನ ಸಮಿತಿಗೆ ಒಪ್ಪಿಸಿ, ಅಧ್ಯಯನ ಮಾಡುವುದಕ್ಕೆ ಬಿಡಲಿ. ಇದಕ್ಕೆ ಅಷ್ಟು ಅವಸರ ಇರುವುದಿಲ್ಲ. ಏಕೆಂದರೆ, ಉದ್ಯಮ ಸ್ನೇಹಿ ಸರ್ಕಾರ ಇರಬೇಕೆಂದು ಹೇಳಿ ನಾನು ಈ ಸಂದರ್ಭದಲ್ಲಿ ವಿನಂತಿ ಮಾಡುತ್ತೇನೆ.

**ಶ್ರೀ ಸಿ.ಟಿ. ರವಿ:-** ಮಾನ್ಯ ಸಭಾಪತಿಯವರೇ, ಬೇರೆ ರಾಜ್ಯಗಳು ಇದೇ ಪ್ರಮಾಣದಲ್ಲಿ ರಾಯಲ್ಟಿ ಹೆಚ್ಚು ಮಾಡಿದರೆ, ಪೈಪೋಟಿ ಇರುವುದಿಲ್ಲ. ಅಲ್ಲಿ ಕಡಿಮೆ ರಾಯಲ್ಟಿ ಇದ್ದು, ಇಲ್ಲಿ ಜಾಸ್ತಿಯಾಗಿದ್ದರೆ, ಅಲ್ಲಿ production cost ಕಡಿಮೆಯಾಗಿ, ಇಲ್ಲಿ production cost ಜಾಸ್ತಿಯಾಗುತ್ತದೆ. ಆಗ production cost ಜಾಸ್ತಿಯಾಗಿ... ಹಾಗಾಗಿ, ಬೇರೆ ರಾಜ್ಯಗಳ ವಿಚಾರವನ್ನು ಸಹ ಯೋಚನೆ ಮಾಡಬೇಕಾಗಿರುತ್ತದೆ.

**ಶ್ರೀ ಎನ್. ರವಿಕುಮಾರ್:-** ಮಾನ್ಯ ಸಭಾಪತಿಯವರೇ, ಈಗಾಗಲೇ ನೂರಾರು, ಸಾವಿರಾರು ಟನ್ ಹೊರ ರಾಜ್ಯಗಳಿಂದ ಪ್ರೊಡಕ್ಷನ್ ಬರುತ್ತಿದೆ.

**ಶ್ರೀ ಎಸ್. ಎಸ್. ಮಲ್ಲಿಕಾರ್ಜುನ (ಗಣಿ, ಭೂ ವಿಜ್ಞಾನ ಮತ್ತು ತೋಟಗಾರಿಕೆ ಸಚಿವರು):-** ಮಾನ್ಯ ಸಭಾಪತಿಯವರೇ, ಅನೇಕ ಮಾನ್ಯ ಸದಸ್ಯರು ಈ ವಿಧೇಯಕದ ಮೇಲಿನ ತಿದ್ದುಪಡಿ ಬಗ್ಗೆ ಸಾಕಷ್ಟು ಚರ್ಚೆ ಮಾಡಿದ್ದಾರೆ ಮತ್ತು ಹಲವು ಸಲಹೆಗಳನ್ನು ಸಹ ಕೊಟ್ಟಿದ್ದಾರೆ. ನಮ್ಮ ಇಲಾಖೆಯವರು ಮತ್ತು ನಾವೆಲ್ಲರೂ ಸಹ ಕುಳಿತುಕೊಂಡು ಈ ಬಗ್ಗೆ ಕೂಲಂಕಷವಾಗಿ ಪರಿಶೀಲನೆಯನ್ನು ಸಹ ಮಾಡಿರುತ್ತೇವೆ. ಮೊದಲನೆಯದಾಗಿ, ಕಳೆದ ಒಂದೆರಡು ದಿನಗಳ ಹಿಂದೆ ಮಾನ್ಯ ತಿಪ್ಪೇಸ್ವಾಮಿಯವರು ಪ್ರಶ್ನೋತ್ತರ ಅವಧಿಯಲ್ಲಿ ಈ ವಿಷಯದ ಬಗ್ಗೆ ಒಂದು ಪ್ರಶ್ನೆಯನ್ನು ಕೇಳಿದ್ದರು. ಅದೇನೆಂದರೆ, ಗಣಿ ಉದ್ದಿಮೆಯಿಂದ ಬರುವಂತಹ ತೆರಿಗೆ ಹಣ ಯಾವ ಇಲಾಖೆಗೆ ಹೋಗುತ್ತದೆ ಎಂದು ಪ್ರಶ್ನೆ ಕೇಳಿದ್ದರು. ಈ ಹಣ ನಮ್ಮ State Consolidated Fund ಗೆ ಹೋಗಿಬಿಟ್ಟು, ನಮ್ಮ ರಾಜ್ಯದ ಆದಾಯಕ್ಕೆ ಹಣ ಹೋಗುತ್ತದೆ. ಸಾಕಷ್ಟು ಗಂಭೀರವಾಗಿ ಈ ವಿಷಯದ ಬಗ್ಗೆ ಚರ್ಚೆಯಾಯಿತು. ಈ ಹಿಂದೆ ಮೈನಿಂಗ್ ಎಂದರೆ ಏನು ಎಂಬುದನ್ನು ಬಳ್ಳಾರಿ ಜಿಲ್ಲೆಯಲ್ಲಿ ನಾವು ನೋಡಿರುತ್ತೇವೆ. ಆಗ ಇನ್ನು ಸಣ್ಣ ಹುಡುಗರು ಇದ್ದೆವು. ಆಗ ಮೈನಿಂಗ್ ಓನರ್ ಟಿಫನ್ ಬಾಕ್ಸ್‌ನಲ್ಲಿ ಊಟ ಕಟ್ಟಿಕೊಂಡು ಮೈನಿಂಗ್ ನಡೆಯುವಂತಹ ಜಾಗಕ್ಕೆ ಹೋಗಿ, ಅಲ್ಲಿ ಒಂದು ದೊಡ್ಡ ಛತ್ರಿ ಹಿಡಿದುಕೊಂಡು ಕುಳಿತುಕೊಳ್ಳುತ್ತಿದ್ದನು. ಅಲ್ಲಿಗೆ 4-5 ಜನ ಕೂಲಿ ಕಾರ್ಮಿಕರನ್ನು ಮತ್ತು ವಾಹನ ಚಾಲಕರನ್ನು ಸಹ ಅವರೇ ಕರೆದುಕೊಂಡು ಬರಬೇಕಾಗಿತ್ತು. ಆಗ ಒಂದೆರಡು ಲಾರಿ ಲೋಡ್ ಮಾಡಬೇಕೆಂದರೆ, ಬೆಳಗ್ಗೆಯಿಂದ ಸಂಜೆಯವರೆಗೆ ಕುಳಿತುಕೊಂಡು ಪ್ರತಿ ಟನ್‌ಗೆ 50, 100, 200 ರೂಪಾಯಿ ತೆಗೆದುಕೊಂಡು ಮನೆಗೆ ಹೋಗುತ್ತಿದ್ದರು. ಅದು 2000 ದಿಂದ ಪ್ರಾರಂಭವಾಯಿತು. ಚೈನಾ ದೇಶದಿಂದ ನಮ್ಮ ಗಣಿ ಉದ್ದಿಮೆಗೆ ಬೇಡಿಕೆ ಬಂದ ಮೇಲೆ ಹೆಚ್ಚು ಹಣ ಸಿಕ್ಕಿರುತ್ತದೆ. ಆ ನಿಟ್ಟಿನಲ್ಲಿ ಮೈನ್ ಓನರ್‌ಗಳು ಸಾಕಷ್ಟು ರೀತಿಯಲ್ಲಿ ಅಭಿವೃದ್ಧಿ ಹೊಂದಿರುತ್ತಾರೆ. ಮೈನಿಂಗ್ ಬಹಳ ಚೆನ್ನಾಗಿ ಮಾಡಿಕೊಂಡವರು ಇದ್ದಾರೆ ಮತ್ತು ಅಷ್ಟೇ ದುರುಪಯೋಗ ಮಾಡಿಕೊಂಡವರು ಸಹ ಇದ್ದಾರೆ. ಮಾನ್ಯ ವೈ.ಎಂ. ಸತೀಶ್‌ರವರು ಮಾತನಾಡುತ್ತಾ, ಹೇಳಿದಂತಹ ವಿಚಾರವನ್ನು ನಾನು ಒಪ್ಪುತ್ತೇನೆ. ಇದು ಒಂದು ಅಚ್ಚುಕಟ್ಟಾದ ವಿಧೇಯಕ ಇದು. ನಮ್ಮ ರಾಜ್ಯದಲ್ಲಿ ಒಟ್ಟು 5 ರೀತಿಯ ಮೈನಿಂಗ್ ಇದೆ. ಒಬ್ಬರು 50 ವರ್ಷಗಳಿಂದಲೂ ಮೈನಿಂಗ್ ಮಾಡುತ್ತಿರುವವರಿಗೆ ಒಂದು ರೀತಿಯ ತೆರಿಗೆ ಇದೆ.

(ಮುಂದು)

**(978) 18.12.2024 6.40 ವೈಎಲ್-ಬಿಎನ್‌ಎಸ್ (ಸಭಾಪತಿಯವರ ಉಪಸ್ಥಿತಿ)**

**ಶ್ರೀ ಎಸ್.ಎಸ್.ಮಲ್ಲಿಕಾರ್ಜುನ್ (ಮುಂದು):**

ಅದೇ 2015ನೇ ಸಾಲಿಗೂ ಮುಂಚೆ ಇದ್ದ ಮೈನಿಂಗ್‌ರವರಿಗೆ ಶೇಕಡ 45 ರಷ್ಟು ತೆರಿಗೆ ವಿಧಿಸಲಾಗಿತ್ತು. 2015ರ ಪೂರ್ವಕ್ಕೆ ಶೇಕಡ 22.5 ತೆರಿಗೆ ವಿಧಿಸಲಾಗಿದೆ. Royalty, ಅದೇ ನಿಟ್ಟಿನಲ್ಲಿ auction mines ಬರುತ್ತಿದ್ದು, ಅದರಲ್ಲಿ ಹೆಚ್ಚು ಕಡಿಮೆ ಶೇಕಡ 130 ರಷ್ಟು, ಶೇಕಡ 140 ರಷ್ಟು ಅಥವಾ ಶೇಕಡ 150 ರಷ್ಟು ಹಣವನ್ನು ಕೊಟ್ಟು, ಫ್ಯಾಕ್ಟರಿಗೆ ಕಳುಹಿಸುತ್ತಿರಬಹುದು, ಎಕ್ಸ್‌ಪೋರ್ಟ್ ಮಾಡುತ್ತಿರಬಹುದು. ಇವತ್ತಿನ ದಿವಸ ಶೇಕಡ 100 ರಷ್ಟು, ಶೇಕಡ 130 ರಷ್ಟು ತೆರಿಗೆ ಭರಿಸುವವರಿಗೂ ಹಾಗೂ ಶೇಕಡ 25 ರಷ್ಟು ತೆರಿಗೆ ಭರಿಸುವವರಿಗೂ ವ್ಯತ್ಯಾಸ ಇಲ್ಲವೇ? ಆ ನಿಟ್ಟಿನಲ್ಲಿ ನಾವೆಲ್ಲರೂ ಸೇರಿ ಒಂದೇ ರೀತಿ ತೆರಿಗೆ ಇರುವಂತೆ ಮಾಡಬೇಕು. ಶೇಕಡ 25 ರಷ್ಟು ತೆರಿಗೆ ಕಟ್ಟುತ್ತಿರುವಂಥ ಗಣಿಗಾರಿಕೆದಾರರಿಗೆ ಹೆಚ್ಚಿನ ಲಾಭವಾಗುತ್ತಿದ್ದು, ಶೇಕಡ 100 ರಷ್ಟು, ಶೇಕಡ 130 ರಷ್ಟು ತೆರಿಗೆ ಭರಿಸುತ್ತಿರುವವರಿಗೆ ಕಡಿಮೆ ಲಾಭ ಸಿಗುತ್ತಿದೆ. ಮುಖ್ಯವಾಗಿ ಕೇಂದ್ರ ಸರ್ಕಾರದ Major Minerals ನ ಸುಪರ್ದಿಗೆ ಬರುತ್ತದೆ. ಹೊರದೇಶದಿಂದ ಹಾಗೂ ಹೊರರಾಜ್ಯದಲ್ಲಿ ಸಾಕಷ್ಟು ವರಮಾನ ಬರುತ್ತಿದೆ. ಒರಿಸ್ಸಾ ರಾಜ್ಯದವರಿಗೆ ಗಣಿಗಾರಿಕೆಯಿಂದ ರೂ.1,20,000 ಕೋಟಿ ವರಮಾನ ಇದೆ. ಅದೇ ರೀತಿ ತಮಿಳುನಾಡಿನಲ್ಲಿ ಸಹ ಇದೆ. ಹಾಗಾಗಿ, ನಮ್ಮ ರಾಜ್ಯದಲ್ಲಿರುವ ಎಲ್ಲಾ ಗಣಿಗಾರಿಕೆಯವರಿಗೆ ಸಮಾನವಾಗಿರಲಿ ಎಂಬ ಉದ್ದೇಶದಿಂದ ಈ ವಿಧೇಯಕವನ್ನು ತರಲಾಗಿದೆ. Final product and rate ನಲ್ಲಿ ಯಾವುದೇ ರೀತಿಯ ವ್ಯತ್ಯಾಸಗಳಾಗುವುದಿಲ್ಲ. Mines ನ rate ವ್ಯತ್ಯಾಸವನ್ನು ಸರಿಪಡಿಸಲಾಗುತ್ತದೆ. ಆ ನಿಟ್ಟಿನಲ್ಲಿ ಸರ್ವೋಚ್ಛ ನ್ಯಾಯಾಲಯವು ನೀಡಿರುವ ತೀರ್ಪಿನಂತೆ ಈ ವಿಧೇಯಕವನ್ನು ತರಲಾಗಿದೆ.

ಬಹುಮುಖ್ಯವಾಗಿ ಮಾನ್ಯ ಪಿ.ಹೆಚ್.ಪೂಜಾರ್‌ರವರು ಹಾಗೂ ಮಾನ್ಯ ಸತೀಶ್‌ರವರು ಮಾತನಾಡಿದ ಹಾಗೆ ಸಮಾನವಾಗಿ ಗಣಿದಾರರಿಗೆ ಕೊಡಬೇಕೆನ್ನುವಂಥ ದೃಷ್ಟಿಯನ್ನಿಟ್ಟುಕೊಂಡು ಈ ವಿಧೇಯಕವನ್ನು ತರಲಾಗಿದೆ. ಮಾನ್ಯ ಪಿ.ಹೆಚ್.ಪೂಜಾರ್‌ರವರು ಹೇಳಿದ ಹಾಗೆ ಕಲ್ಲಿನ ಗಣಿ, ಇತ್ಯಾದಿ ವಿಚಾರದ ಬಗ್ಗೆ ಹೇಳಿದರು. ಗೆ ಬರುತ್ತದೆ. Size stone, ಜಲ್ಲಿ ಕಲ್ಲು ಅದೆಲ್ಲವೂ minor minerals ವ್ಯಾಪ್ತಿಗೆ ಬರುತ್ತದೆ. ಹಿಂದಿನ ಸರ್ಕಾರ ಇದ್ದಾಗ ಚಿಕ್ಕಮಗಳೂರು, ಕಡೂರಿನಲ್ಲಿ ಕಲ್ಲಿನ ಕ್ವಾರಿ ಇದ್ದು, ಸರ್ವೆ ಮಾಡುವುದರ ಮೂಲಕ ಒಂದು ಕ್ವಾರಿಗೆ ಎಷ್ಟು ಏರಿಯಾ ಇದೆ, ಎಷ್ಟು ಕಲ್ಲಿನ ಗಣಿ ಮಾಡಿದ್ದಾರೆ ಎಂಬುದನ್ನು ನೋಡಿ, 5 to 7 times penalty ವಿಧಿಸಲಾಗಿದೆ. ನಾನು ಒಬ್ಬ ವ್ಯವಹಾರಸ್ಥನಾಗಿದ್ದು, ಆ ರೀತಿ penalty ಹಾಕುವ ಮೊದಲು ಸಾಮಾನ್ಯಜ್ಞಾನ ಇರಬೇಕು. ಇಂತಹ

penalty ಯಿಂದಾಗಿ ಮನೆ, ಮಠ ಮಾರಿಕೊಂಡರೂ ಅವರಿಗೆ ಇರುವ ಸಾಲವನ್ನು ತೀರಿಸಲು ಸಾಧ್ಯವಾಗುತ್ತಿಲ್ಲ. ಅಂತಹ ಒಂದು ಕೆಲಸವನ್ನು ಹಿಂದಿನ ಸರ್ಕಾರ ಮಾಡಿದೆ. ಈಗ ಅದೆಲ್ಲವನ್ನೂ ಕೂಲಂಕಷವಾಗಿ ಅಧ್ಯಯನ ಮಾಡಿ, ನಾವು one time penalty ಅಂದರೆ, 1:1 ರೀತಿಯಲ್ಲಿ ಮಾಡಿದ್ದೇವೆ. ಇದರಿಂದಾಗಿ ನಮ್ಮ ರೈತರಿಗೆ, ಕಲ್ಲಿನ ಕ್ವಾರಿಯವರಿಗೆ ಮತ್ತು construction activities ಜಾಸ್ತಿಯಾಗಲಿ ಎಂಬ ದೃಷ್ಟಿಕೋನವನ್ನಿಟ್ಟುಕೊಂಡು ಈ ವಿಧೇಯಕದ ಮೂಲಕ ಮುಂದಿನ ದಿನಗಳಲ್ಲಿ One Time Settlement Scheme ತರಲಾಗಿದೆ.

ಹಾಗೆಯೇ ಮಾನ್ಯ ಸಿ.ಟಿ.ರವಿರವರು ಈಗಾಗಲೇ ಬಹಳ ಚೆನ್ನಾಗಿ ಮಾತನಾಡಿದ್ದು, ಅವರಿಗೆ ಸಹ ಈಗಾಗಲೇ ತಿಳಿಸಿದ ವಿಚಾರವೇ ಅನ್ವಯಿಸುತ್ತದೆ. ಜಿಂದಾಲ್‌ನವರು final product ಮಾಡಿದ ಮೇಲೆ ಮಾರುಕಟ್ಟೆಯಲ್ಲಿನ ಬೆಲೆ ಏನಿದೆ, ಅದನ್ನೇ ತೆಗೆದುಕೊಳ್ಳುತ್ತಾರೆ. ಮಾರುಕಟ್ಟೆಯಲ್ಲಿನ ಬೆಲೆಯಂತೆ ಖರೀದಿಸಿ, ಮಾರುಕಟ್ಟೆಯಲ್ಲಿನ ಬೆಲೆಯಲ್ಲೇ ಕಬ್ಬಿಣವನ್ನು ಮಾರಾಟ ಮಾಡುತ್ತಾರೆ. ಆದರೆ, ಮಾರುಕಟ್ಟೆ ಬೆಲೆ ಏನಿದೆ, ಅದರಿಂದ ಮೈನ್ಸ್‌ನವರಿಗೆ ಲಾಭವಾಗುತ್ತದೆ. ಒಬ್ಬರಿಗೆ ಹೆಚ್ಚು ಲಾಭವಾದರೆ, ಒಬ್ಬರಿಗೆ ಕಡಿಮೆ ಲಾಭವಾಗುತ್ತದೆ. ಈ ವಿಧೇಯಕದಿಂದ ಯಾವುದೇ ಅನಾನುಕೂಲವಾಗಲೀ ಸಾರ್ವಜನಿಕರಿಗೆ ಹೊರೆಯಾಗಲೀ ಆಗುವುದಿಲ್ಲ. ಆ ನಿಟ್ಟಿನಲ್ಲಿ ರಾಜ್ಯ ಸರ್ಕಾರಕ್ಕೂ ಒಳ್ಳೆಯ ರೀತಿಯಲ್ಲಿ ವರಮಾನ ಬರುತ್ತದೆ. ಆ ನಿಟ್ಟಿನಲ್ಲಿ ತಾವೆಲ್ಲರೂ ಒಪ್ಪಿಗೆ ಸೂಚಿಸಿ ಈ ವಿಧೇಯಕಕ್ಕೆ ಅನುಮೋದನೆ ನೀಡಬೇಕೆಂದು ಸೂಚಿಸುತ್ತೇನೆ.

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ,
“ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2024ರ ಕರ್ನಾಟಕ (ಖನಿಜ ಹಕ್ಕುಗಳು ಮತ್ತು ಖನಿಜ ಹೊಂದಿರುವ ಭೂಮಿ) ತೆರಿಗೆ ವಿಧೇಯಕವನ್ನು ಪರ್ಯಾಲೋಚಿಸುವುದು.”

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**ವಿಧೇಯಕವನ್ನು ಖಂಡಖಂಡವಾಗಿ ಪರ್ಯಾಲೋಚಿಸುವುದು**

**ಖಂಡ 2 ರಿಂದ 11 ರವರೆಗೆ**

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ, “ಖಂಡ 2 ರಿಂದ 11 ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ”

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಖಂಡ 2 ರಿಂದ 11 ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)

**ಖಂಡ 1 ಇತ್ಯಾದಿ**

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ,
“ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ

ಭಾಗವಾಗಿರುತ್ತದೆ."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

**ಪ್ರಸ್ತಾವದ ಅಂಗೀಕಾರ**

**ಶ್ರೀ ಎಸ್.ಎಸ್.ಮಲ್ಲಿಕಾರ್ಜುನ್ (ಗಣಿ ಮತ್ತು ಭೂವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು):-** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2024ರ ಕರ್ನಾಟಕ (ಖನಿಜ ಹಕ್ಕುಗಳು ಮತ್ತು ಖನಿಜ ಹೊಂದಿರುವ ಭೂಮಿ) ತೆರಿಗೆ ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ;

"ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2024ರ ಕರ್ನಾಟಕ (ಖನಿಜ ಹಕ್ಕುಗಳು ಮತ್ತು ಖನಿಜ ಹೊಂದಿರುವ ಭೂಮಿ) ತೆರಿಗೆ ವಿಧೇಯಕವನ್ನು ಅಂಗೀಕರಿಸುವುದು."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು**

**10. ಚುನಾವಣಾ ಪ್ರಸ್ತಾವ**

**"ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಸೆನೆಟ್‌ಗೆ ಹಾಗೂ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಪ್ರಶಾಸನ ಸಭೆಗೆ ಚುನಾವಣೆ ನಡೆಸುವ ಬದಲು ಮಾನ್ಯ ಶಾಸಕರುಗಳನ್ನು ನಾಮನಿರ್ದೇಶಿಸುವ ಪ್ರಸ್ತಾವ"**

- - - - -

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಸೆನೆಟ್‌ಗೆ ಹಾಗೂ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಪ್ರಶಾಸನ ಸಭೆಗೆ ಚುನಾವಣೆ ನಡೆಸುವ ಬದಲು ಮಾನ್ಯ ಶಾಸಕರುಗಳನ್ನು ನಾಮನಿರ್ದೇಶಿಸಲು ಮಾನ್ಯ ಸಭಾಪತಿಯವರಿಗೆ ಅಧಿಕಾರ ನೀಡುವ ಬಗ್ಗೆ ಪ್ರಸ್ತಾವವನ್ನು ಮಂಡಿಸುತ್ತಿದ್ದೇನೆ.

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ;

"ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಸೆನೆಟ್‌ಗೆ ಹಾಗೂ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಪ್ರಶಾಸನ ಸಭೆಗೆ ಚುನಾವಣೆ ನಡೆಸುವ ಬದಲು ಮಾನ್ಯ ಶಾಸಕರುಗಳನ್ನು ನಾಮನಿರ್ದೇಶಿಸುವುದು"

**ಪ್ರಸ್ತಾವವು ಅಂಗೀಕರಿಸಲ್ಪಟ್ಟಿತು ಹಾಗೂ ಪ್ರಸ್ತಾವಕ್ಕೆ ಸದನದ ಅನುಮೋದನೆ ದೊರೆಯಿತು.**

**11. ಶಾಸನ ರಚನೆ**

**ವಿಧೇಯಕಗಳ ಪರ್ಯಾಲೋಚನೆ ಹಾಗೂ ಅಂಗೀಕಾರ**

**ಈ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಎರಡನೇ ತಿದ್ದುಪಡಿ) ವಿಧೇಯಕ, 2024**

**ಪರ್ಯಾಲೋಚನಾ ಪ್ರಸ್ತಾವ**

**ಶ್ರೀ ಡಿ.ಕೆ.ಶಿವಕುಮಾರ್ (ಉಪ ಮುಖ್ಯಮಂತ್ರಿಗಳು; ಬೃಹತ್ ಮತ್ತು ಮಧ್ಯಮ ನೀರಾವರಿ, ಬೆಂಗಳೂರು ನಗರಾಭಿವೃದ್ಧಿ ಸಚಿವರು):-** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2024ರ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಎರಡನೇ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

<u>**ಪ್ರಸ್ತಾವವನ್ನು ಮಂಡಿಸಲಾಯಿತು**</u>

**ಶ್ರೀ ಡಿ.ಕೆ.ಶಿವಕುಮಾರ್ (ಉಪ ಮುಖ್ಯಮಂತ್ರಿಗಳು; ಬೃಹತ್ ಮತ್ತು ಮಧ್ಯಮ ನೀರಾವರಿ, ಬೆಂಗಳೂರು ನಗರಾಭಿವೃದ್ಧಿ ಸಚಿವರು):-** ಮಾನ್ಯ ಸಭಾಪತಿಯವರೇ, ಬೆಂಗಳೂರು ಮಹಾನಗರದ ಶಾಸಕರನ್ನು ಕರೆಯಿಸಿ One Time Settlement of Tax ಗೆ ತೀರ್ಮಾನ ಮಾಡಬೇಕೆಂದು irrespective of political party ಮಾನ್ಯ ಶಾಸಕರೆಲ್ಲರೂ ಸಲಹೆಯನ್ನು ಕೊಟ್ಟಿದ್ದರು. ಸುಮಾರು 3,00,000 ಪ್ರಾಪರ್ಟೀಸ್‌ಗೆ One Time Settlement of tax ಭರಿಸುವಂತೆ ಮುಂದೆ ಬಂದಿದ್ದು, ಇನ್ನು 2,26,000 ಪ್ರಾಪರ್ಟೀಸ್ ಹಾಗೆಯೇ ಉಳಿದುಕೊಂಡಿವೆ. ಈಗಾಗಲೇ ಸುಮಾರು ರೂ.4,284 ಕೋಟಿಯಷ್ಟು record collection of tax ಆಗಿದೆ. ದಿನಾಂಕ 30.11.2024 ರವರೆಗೆ Ordinance ಮಾಡಿ ವಿಸ್ತರಿಸಲಾಗಿತ್ತು. ಈ ಹಿಂದೆ ಎಲ್ಲಾ ಪಕ್ಷದ ಶಾಸಕರು ಸಹ ಸಮಯವನ್ನು ವಿಸ್ತರಣೆ ಮಾಡಬೇಕೆಂದು ಮನವಿ ಮಾಡಿಕೊಂಡಿದ್ದರು. Ordinance ಮಾಡಿ time extend ಮಾಡಿದ್ದು ಅದನ್ನು ಕಾರ್ಯರೂಪಕ್ಕೆ ತರಲು ಈ ವಿಧೇಯಕವನ್ನು ತರಲಾಗಿದೆ. ಸಮಯವನ್ನು ವಿಸ್ತರಣೆ ಮಾಡಿರುವುದನ್ನು ಕಾನೂನಿನ ಪ್ರಕಾರ ಈ ವಿಧೇಯಕಕ್ಕೆ ಎರಡು ಮನೆಯಲ್ಲಿ ಅನುಮೋದನೆ ಪಡೆದು, ಘನತೆವೆತ್ತ ರಾಜ್ಯಪಾಲರಿಗೆ ಕಳುಹಿಸಿಕೊಡಬೇಕಾಗಿದೆ.

**ಶ್ರೀ ಟಿ.ಎ.ಶರವಣ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಉಪಮುಖ್ಯಮಂತ್ರಿಯವರು BBMP ಯ One Time Settlement of tax ಎಂಬ ತಿದ್ದುಪಡಿ ವಿಧೇಯಕವನ್ನು ತಂದಿದ್ದಾರೆ. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಸಂಬಂಧಿಸಿದಂತೆ ಈಗಾಗಲೇ ಸುಗ್ರೀವಾಜ್ಞೆಯನ್ನು ತಂದಿದ್ದಾರೆ.

(ಮುಂದು)

**(979) 18.12.2024 (6.50) ಎಸ್‌ಕೆ-ಬಿಎನ್‌ಎಸ್** **(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಟಿ.ಎ. ಶರವಣ (ಮುಂದು):**

ಇದರ ಮೂಲಕ ಇದನ್ನು regularise ಮಾಡಬೇಕೆಂದು ಹೇಳಿ, ಮಾನ್ಯ ಉಪ ಮುಖ್ಯಮಂತ್ರಿಗಳು ಒಂದು ಉದ್ದೇಶವನ್ನಿಟ್ಟುಕೊಂಡು ಮಾಡಿರುವ ಈ ಒಂದು ವಿಧೇಯಕವನ್ನು ನಾನು ಸ್ವಾಗತ ಮಾಡುತ್ತೇನೆ. ಇದರ ಜೊತೆಗೆ one time settlement (OTS) ಒಳ್ಳೆಯದು. ಮಾನ್ಯ ಉಪ ಮುಖ್ಯಮಂತ್ರಿಯವರು ನಮ್ಮನ್ನು ಸಭೆಗೆ ಕರೆದಿದ್ದರು. ಆ ಸಮಯದಲ್ಲಿ ನಾವು ಸಲಹೆಗಳನ್ನು ಕೊಟ್ಟಿದ್ದೇವೆ. ಸಾರ್ವಜನಿಕರಿಗೆ ಈ ಬಿ.ಬಿ.ಎಂ.ಪಿ., ಅಧಿಕಾರಿಗಳಿಂದ ದಿನನಿತ್ಯ ಕಾಟ-ಕಿರುಕುಳ ನಡೆಯುತ್ತಿರುವುದನ್ನು ತಪ್ಪಿಸಬೇಕು. ಈ ವಿಧೇಯಕವನ್ನು ಒಳ್ಳೆಯ ಉದ್ದೇಶದಿಂದ ತರುತ್ತಿದ್ದೀರಿ. ಅಧಿಕಾರಿ ಮಟ್ಟದಲ್ಲಿ ಒಬ್ಬ ಕಂದಾಯ ನಿರೀಕ್ಷಕರಿಂದ ARO (Assistant Revenue Officer) ನಿಂದ ಹಿಡಿದು, ಅವರು ಯಾವ ರೀತಿ ಅಲ್ಲಿ ಕಿರುಕುಳ ಕೊಡುತ್ತಾರೆ ಎಂಬ ಬಗ್ಗೆ ತಮ್ಮ ಗಮನಕ್ಕೆ ಬಂದಿದೆ ಎಂದು ನಾನು ಭಾವಿಸುತ್ತಿದ್ದೇನೆ. ಈಗಾಗಲೇ ನಾಗರಿಕರಿಗೆ ಅನುಕೂಲವಾಗಬೇಕು. ಬಿ.ಬಿ.ಎಂ.ಪಿ.ಗೂ ಕೂಡ ಆರ್ಥಿಕವಾಗಿ ಸಂಪನ್ಮೂಲ ಸಂಗ್ರಹ ಮತ್ತು revenue generation ಚೆನ್ನಾಗಿ ಆಗಬೇಕೆಂಬ ಉದ್ದೇಶವಿದೆ. ಭ್ರಷ್ಟಾಚಾರ ಈ ಒಂದು ಅಧಿಕಾರಿಗಳ ಮುಖಾಂತರ ತುಂಬಾ ದೊಡ್ಡ ಮಟ್ಟದಲ್ಲಿ ಇದು ಪಾರದರ್ಶಕವಾಗಿ ನಡೆಯುತ್ತಿಲ್ಲ. ಅವರು ಬೇರೆ ಬೇರೆ ರೀತಿಯಲ್ಲಿ ಯಾರು tax payers ಇದ್ದಾರೆ, ಅವರನ್ನು ದಾರಿ ತಪ್ಪಿಸುವಂತಹ ಕೆಲಸವಾಗುತ್ತಿದೆ. ಅದಕ್ಕೋಸ್ಕರ ಮಾನ್ಯ ಉಪ ಮುಖ್ಯಮಂತ್ರಿಗಳು ಈ ಹಿಂದೆ ಹತ್ತು ಲಕ್ಷ ಆಸ್ತಿ ತೆರಿಗೆ ಬಾಕಿ ಇತ್ತು. ಅದನ್ನು ಒಂದು ಲಕ್ಷ ತೆಗೆದುಕೊಂಡು, ಉಳಿದಿದ್ದನ್ನು ಬಿಟ್ಟುಬಿಡುತ್ತಾರೆ. ಅದು ಕೂಡ ನಡೆಯುತ್ತಿದೆ. ಇಂತಹ ಅಧಿಕಾರಿಗಳ ಮೇಲೆ ಯಾವ ರೀತಿ ಕ್ರಮ ಕೈಗೊಳ್ಳುತ್ತೀರಾ? ನಾನು proof ಸಮೇತವಾಗಿ ಕೊಡುವುದಕ್ಕೆ ತಯಾರಿದ್ದೇನೆ. ಮಾನ್ಯ ಸಚಿವರು ಕೇಳುತ್ತಾರೆ ಎನ್ನುವುದು ನನಗೆ ಗೊತ್ತಿದೆ. ಬೆಂಗಳೂರು ನಗರದಲ್ಲಿ ದೊಡ್ಡ ಮಟ್ಟದಲ್ಲಿ ನಡೆಯುತ್ತಿದೆ. ಅಧಿಕಾರಿಗಳಿಗೆ ವಸೂಲಿ ಮಾಡುವಂತಹ ಈ ಒಂದು ಪ್ರಕ್ರಿಯೆಯನ್ನು ತಡೆಗಟ್ಟಬೇಕು. ಯಾರು ಪ್ರಮಾಣಿಕವಾಗಿ tax pay ಮಾಡುತ್ತಾರೋ, ಅವರಿಗೆ ನ್ಯಾಯ ಕೊಡಿಸುವಂತಹ ಕೆಲಸವಾಗಬೇಕು. ಈ ಒಂದು penalty ತೆಗೆಯುತ್ತೇವೆಂದು ಹೇಳಿದ್ದೀರಿ. Interest waive ಮಾಡುತ್ತೇವೆಂದು ಹೇಳಿದ್ದೀರಿ. ಅದೆಲ್ಲವೂ ಕೂಡ ಸರಿ. ಆದರೆ, ಈ ಹಿಂದೆ ಕೆಲವರು with interest, penalty ಎಲ್ಲವನ್ನು ಕಟ್ಟಿಬಿಟ್ಟಿದ್ದಾರೆ. ಅವರಿಗೆ ಏನು ಮಾಡುತ್ತೀರಿ? ಈಗ ತೆರಿಗೆ ಕಟ್ಟದೇ ಇರುವವರಿಗೆ OTS ಎಂದು ಹೇಳುತ್ತಿದ್ದೀರಿ. ಅದನ್ನು ಏನು ಮಾಡುತ್ತೀರಾ? ಮಾನ್ಯ ಸಚಿವರು ಅದರ ಬಗ್ಗೆ ಸ್ವಲ್ಪ ಸ್ಪಷ್ಟನೆ ಕೊಡಬೇಕೆಂದು ಹೇಳಿ, ನಾನು ತಮ್ಮ ಮೂಲಕ ಕೇಳಿಕೊಳ್ಳುತ್ತಿದ್ದೇನೆ.

**ಶ್ರೀ ಡಿ.ಕೆ. ಶಿವಕುಮಾರ್ (ಉಪ ಮುಖ್ಯಮಂತ್ರಿಗಳು):-** ಮಾನ್ಯ ಸಭಾಪತಿಯವರೇ, ಇದು ಏತಕ್ಕೆ ಬಂತು ಎಂದು ಹೇಳಿದರೆ, ಶ್ರೀ ಎಸ್.ಎಂ. ಕೃಷ್ಣರವರ ಸರ್ಕಾರದಲ್ಲಿ ನಾನು Urban Development Minister ಆಗಿದ್ದಾಗ, ಬ್ಯಾಟರಾಯನಪುರ ಏರಿಯಾದಲ್ಲಿ ಮೊದಲು Self Assessment Scheme (SAS) ಅನ್ನು ತಾವೇ declare ಮಾಡಿಕೊಳ್ಳಿ ಎಂದು ಪ್ರಾರಂಭ ಮಾಡಿದೆವು. ಅನಂತರ ಬೇರೆ ಸರ್ಕಾರ ಬಂದು ಕಾನೂನು ತೆಗೆದುಕೊಂಡು ಬಂತು. ಅದು ಬಂದಾದ ಮೇಲೆ ಕೆಲವರು ಇದನ್ನು misuse ಮಾಡುವುದಕ್ಕೆ ಪ್ರಾರಂಭ ಮಾಡಿದರು. ಈಗ ಎರಡು floor ಕಟ್ಟಿದರೆ, ಎರಡು floor ಗಳನ್ನು declare ಮಾಡಿಕೊಳ್ಳುವುದು. ಮೂರನೇ floor ಅನ್ನು ಹಾಗೇ ಬಿಟ್ಟುಬಿಡುವುದು. 1,000 ಅಡಿ ಕಟ್ಟಿದರೆ, 500 ಅಡಿ declare ಮಾಡಿಕೊಳ್ಳುವುದು, ಆ

ರೀತಿಯಲ್ಲಿ ಆಗುತ್ತಿತ್ತು. ಆಗ ನಾವು ನೋಡಿದಾಗ, ಸುಮಾರು ಆರು-ಏಳು ಲಕ್ಷ properties, ಅವರು ಯಾರೂ tax ambit ಗೆ ಬರುತ್ತಿರಲಿಲ್ಲ. ಅದಕ್ಕೆ ಒಂದು ಅವಕಾಶ ಮಾಡಿಕೊಡೋಣ ಎಂದು ಹೇಳಿ ಒಂದು ಪ್ರಯತ್ನ ಮಾಡಿ tax ambit ಗೆ ಅದು ಪೂರ್ತಿ ಬಂದಿಲ್ಲ. ಶೇಕಡಾ 40-50 ರಷ್ಟು ಮಾತ್ರ ಬಂದಿದ್ದಾರೆ. 700 ಕೋಟಿ ರೂಪಾಯಿಗಳಷ್ಟು extra collection ಆಗಿದೆ. ನಮ್ಮ ಉದ್ದೇಶವೇನೆಂದರೆ, ಇದನ್ನು regularise ಮಾಡಬೇಕೆಂಬ ವಿಷಯ. ಜಾಸ್ತಿ ದುಬಾರಿ ಆಗುವಂತಹ ಸಂದರ್ಭ ಅಥವಾ ಅವಕಾಶ ಕೂಡ ಬೇಕಾದಷ್ಟಿತ್ತು. ದುಬಾರಿಯಾಗುವುದಕ್ಕಿಂತ ಮೊದಲು phone ನವರು ಮಾಡುತ್ತಾರಲ್ಲ, ಆ ರೀತಿ try ಮಾಡುತ್ತೇವೆ. ಒಂದು ಮೂರು ತಿಂಗಳು free ಆಗಿ ಕೊಡುವುದು. ನಂಬರ್ ಉಪಯೋಗಿಸಲಿ ಎಂದು ಹೇಳುವುದು. ಆ ರೀತಿ ಇದಕ್ಕೊಂದು small penalty impose ಮಾಡಿಬಿಟ್ಟು, ಅವರಿಗೆ ಅವಕಾಶ ಮಾಡಿಕೊಡುತ್ತೇವೆ. ಯಾರು ಪ್ರಮಾಣಿಕವಾಗಿ ಕಟ್ಟಿರುತ್ತಾರೆ ಎಂಬುದರ ಬಗ್ಗೆ ಹೇಳುತ್ತೀರಿ. ಅಂತಹವರಿಗೆ next time tax ಕಟ್ಟಬೇಕಾದರೆ, ಅವರಿಗೆ adjustment ಮಾಡುವಂತಹ ವ್ಯವಸ್ಥೆ ಮಾಡುತ್ತೇವೆ. ….. ಅದನ್ನು ಪ್ರಮಾಣಿಕವಾಗಿ ಕಟ್ಟುವವರಿಗೆ next time tax ಗೆ ಈ yardstick ಇದೆ. ಆ yardstick ಪ್ರಕಾರ ಲೆಕ್ಕಾಚಾರ ಹಾಕಿ, ಅವನ next time tax ಗೆ ಅವನ arrears ಗೆ adjustment ಮಾಡುತ್ತೇವೆ. ಇಲ್ಲವಾದರೆ, ತೆರಿಗೆಯನ್ನು ಪ್ರಮಾಣಿಕವಾಗಿ ಕಟ್ಟುವವನಿಗೆ ಬರೆ ಹಾಕಿಬಿಟ್ಟು, ಕಟ್ಟದೇ ಇರುವವನಿಗೆ ಪ್ರಶಸ್ತಿ ಕೊಟ್ಟಂತಾಗುತ್ತದೆ. ಈ ವಿಧೇಯಕದಲ್ಲಿ ನೂರು ರೂಪಾಯಿ ಅಂತಾ ಮಾಡಿ, ಉಳಿದಿದ್ದನ್ನು adjust ಮಾಡೋಣ ಎಂದು ಈ ವಿಧೇಯಕವನ್ನು ತೆಗೆದುಕೊಡು ಬಂದಿರುವಂತಹದ್ದು.

**ಶ್ರೀ ಸಿ.ಟಿ.ರವಿ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಚಿವರೇ, ತಾವು ನೂರು ರೂಪಾಯಿ ಎಂದು ಹೇಳಿದ್ದೀರಿ. ನೂರು ರೂಪಾಯಿ ದಂಡ ಪಾವತಿಸಬಹುದಾದ ದಂಡವು ಒಂದು ವರ್ಷಕ್ಕೆ ಒಂದು ನೂರು ರೂಪಾಯಿಗಳಾಗಿರತಕ್ಕದ್ದು ಎಂದು ವಿಧೇಯಕದಲ್ಲಿ ಹೇಳಿದ್ದೀರಿ. ಒಂದು ನೂರು ರೂಪಾಯಿಗಳು ಒಂದು ಕೇಸ್‌ಗೋ ಅಥವಾ ಒಂದು square feet ಗೋ ಅದು ಹೇಗೆ? ತಾವು ಅದರಲ್ಲಿ ಸ್ಪಷ್ಟಪಡಿಸಿಲ್ಲ.

**ಶ್ರೀ ಡಿ.ಕೆ. ಶಿವಕುಮಾರ್:-** ಒಂದು property ಗೆ ಒಂದು ಕೇಸ್ ಎಂಬುದು; ನಮ್ಮ ಉದ್ದೇಶವೇನೆಂದರೆ, tax collection ಜಾಸ್ತಿ ಮಾಡುವುದಕ್ಕಿಂತ we should bring them to the tax ambit. ಅವರನ್ನು tax ambit ಗೆ ತರಬೇಕು.

**ಶ್ರೀ ಸಿ.ಟಿ. ರವಿ:-** ನೂರು ರೂಪಾಯಿ ಒಂದು ಕೇಸ್‌ಗೆ ಎಂದರೆ, ಇವತ್ತಿನ ಲೆಕ್ಕದಲ್ಲಿ ನೂರು ರೂಪಾಯಿಯನ್ನು ಲೆಕ್ಕಕ್ಕೂ ತೆಗೆದುಕೊಳ್ಳುವುದಿಲ್ಲ.

**ಶ್ರೀ ಡಿ.ಕೆ.ಶಿವಕುಮಾರ್:-** ಅವರು ಒಟ್ಟು tax ambit ಗೆ ಬರುತ್ತಿಲ್ಲವಲ್ಲ. ಇವತ್ತು ಎಷ್ಟೋ ಜನ tax ambit ಗೆ ಬರುತ್ತಿಲ್ಲ. ಇನ್ನೂ ಹೆಚ್ಚು ಕಡಿಮೆ ಎರಡೂವರೆ ಲಕ್ಷ ಮೂರು ಲಕ್ಷ ಮನೆಗಳು tax ambit ಗೆ ಬರುತ್ತಿಲ್ಲ. ಇಡೀ ಬೆಂಗಳೂರನ್ನು scan ಮಾಡುತ್ತಿದ್ದೇವೆ. ಪ್ರತಿ ಮನೆಯನ್ನು scan ಮಾಡಿ, ಮನೆ ಮನೆ ಬಾಗಿಲುಗಳಿಗೆ ಹೋಗಿ ಖಾತಾ ಕೊಡಬೇಕೆಂಬುದರ ಬಗ್ಗೆ ತೀರ್ಮಾನ ಮಾಡಿದ್ದೇವೆ. ಅವರಿಗೆ ಒಂದು certificate ಕೊಟ್ಟುಬಿಟ್ಟು,

ನೀವು ಇನ್ನು ಮುಂದೆ ಇಷ್ಟು building ಗೆ ಇಂತಿಷ್ಟು ತೆರಿಗೆ ಕಟ್ಟಬೇಕು ಎಂಬ ಬಗ್ಗೆ ತೀರ್ಮಾನಕ್ಕೆ ಬಂದಿದ್ದೇವೆ. ಅದಕ್ಕೆ ಇದನ್ನೆಲ್ಲಾ measures ಅನ್ನು ತೆಗೆದುಕೊಂಡು ಬರುತ್ತಿದ್ದೇವೆ.

**ಶ್ರೀ ಕೇಶವ ಪ್ರಸಾದ್ ಎಸ್. (ವಿಧಾನಸಭಾ ಕ್ಷೇತ್ರ):-** ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ಧನ್ಯವಾದಗಳನ್ನರ್ಪಿಸುತ್ತೇನೆ. ಈ ಬೆಂಗಳೂರು ಮಹಾನಗರದಲ್ಲಿ ಈಗಾಗಲೇ ನಾವು tax ಕಟ್ಟುತ್ತಾ ಬಂದಿದ್ದೇವೆ. ಅಂದರೆ, Self Assessment Tax ನೊಳಗಡೆ ನಾವು ನಿರಂತರವಾಗಿ ಕಟ್ಟುತ್ತಿದ್ದೇವೆ. ಮಾನ್ಯ ಉಪ ಮುಖ್ಯಮಂತ್ರಿಯವರೇ, ತಾವು ತಂದಿರುವ ವಿಧೇಯಕದಲ್ಲಿ ಈ tax ಅನ್ನು ಮತ್ತೆ ಪುನರ್ ಪರಿಶೀಲಿಸುತ್ತೀರಾ? ಮತ್ತೆ ಪುನರ್ ಪರಿಶೀಲಿಸುವಾಗ ನಮ್ಮ ಪಾತ್ರವೇನಿದೆ? ಆಗ ನಾವು ಮಾಲೀಕರು ಪ್ರಮಾಣಿಕವಾಗಿ ತೆರಿಗೆಯನ್ನು ಕಟ್ಟಿದ್ದೇವೆ. ನಿಮ್ಮ assessment procedure ಪ್ರಕಾರ ನಾವು comply ಮಾಡಿದ್ದೇವೆ. ಈಗ ಮತ್ತೊಮ್ಮೆ tax ನೊಳಗಡೆ ಬರುವಾಗ, ನಮಗೂ ಏನಾದರೂ ಸ್ವಾತಂತ್ರ್ಯವನ್ನು ಕೊಡುತ್ತೀರಾ ಅಥವಾ ಅಧಿಕಾರಿಗಳೇ ಅದೆಲ್ಲವನ್ನು ನಿಶ್ಚಯ ಮಾಡುತ್ತಾರೋ, ಅಥವಾ ನಮಗೂ ಕೂಡ say ಗೆ ಅವಕಾಶ ಇರುತ್ತದೆಯೋ ಇದಕ್ಕೆ ಏನು ಮಾನದಂಡಗಳನ್ನು ತಂದಿದ್ದೀರಿ? ನಾವು ನಿರಂತರವಾಗಿ ಈ ತರಹ ಪ್ರಕ್ರಿಯೆಗಳಿಗೆ ಒಳಪಟ್ಟಿರುವಂತಹವರಿಗೆ ಬೆಂಗಳೂರು ಮಹಾನಗರದಲ್ಲಿ ಇರುವಂತಹ ಒಟ್ಟು ಸಂಖ್ಯೆಯಲ್ಲಿರುವಂತಹವರಿಗೆ ಏನಾದರೂ ವಿಶೇಷವಾದಂತಹ ಪ್ಯಾಕೇಜ್‌ನ್ನು ತರುವವರಿದ್ದೀರಾ ಎಂಬುದರ ಬಗ್ಗೆ ಸ್ಪಷ್ಟಪಡಿಸಬೇಕು.

**ಶ್ರೀ ಡಿ.ಕೆ. ಶಿವಕುಮಾರ್ (ಉಪ ಮುಖ್ಯಮಂತ್ರಿಗಳು):-** ಇದು 31ನೇ ತಾರೀಖಿಗೆ ಮುಗಿದು ಹೋಗಿತ್ತು. ಇದಕ್ಕೊಂದು extend ಮಾಡಿ ಎಂದು there was a demand by all the Legislators. ನವೆಂಬರ್ 30ನೇ ತಾರೀಖಿನವರೆಗೂ extend ಮಾಡಿದೆವು. ಏಕೆಂದರೆ ಅಧಿವೇಶನ ಇರಲಿಲ್ಲ. Ordinance ತಂದಿದ್ದೆವು. ಯಾರು ಪ್ರಮಾಣಿಕವಾಗಿ ತೆರಿಗೆಯನ್ನು ಕಟ್ಟಿರುತ್ತಾನೆ. ಯಾರು extra ಕಟ್ಟಿರುತ್ತಾರೆ ಅಂತಹವರಿಗೆಲ್ಲಾ ಮುಂದಕ್ಕೆ tax ಅನ್ನು ಸ್ವಲ್ಪ replace ಮಾಡುತ್ತೇವೆ.

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ,

"ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2024ರ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಎರಡನೇ ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದು**

**ಖಂಡ 2 ಮತ್ತು 3**

**ಸಭಾಪತಿಯವರು:- "ಖಂಡ 2 ಮತ್ತು 3 ಈ ವಿಧೇಕಯದ ಅಂಗವಾಗಿರುತ್ತದೆ"**

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**(ಖಂಡ 2 ಮತ್ತು 3 ನ್ನು ವಿಧೇಯಕಕ್ಕೆ ಸೇರಿಸಲಾಯಿತು)**

**ಖಂಡ-1 ಇತ್ಯಾದಿ**

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ,

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)**

**ಪ್ರಸ್ತಾವದ ಅಂಗೀಕಾರ**

**ಶ್ರೀ ಡಿ.ಕೆ. ಶಿವಕುಮಾರ್ (ಉಪ ಮುಖ್ಯಮಂತ್ರಿಗಳು):-** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2024ರ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಎರಡನೇ ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ,

"ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2024ರ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಎರಡನೇ ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು**

**ಉ) ಕರ್ನಾಟಕ ಪ್ರವಾಸೋದ್ಯಮ ರೋಪ್‌ವೇಗಳ ವಿಧೇಯಕ, 2024**

**ಪರ್ಯಾಲೋಚನಾ ಪ್ರಸ್ತಾವ**

**ಶ್ರೀ ಹೆಚ್.ಕೆ. ಪಾಟೀಲ್ (ಕಾನೂನು, ನ್ಯಾಯ, ಮಾನವ ಹಕ್ಕುಗಳು ಮತ್ತು ಸಂಸದೀಯರ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು):-** ಮಾನ್ಯ ಸಭಾಪತಿಯವರೇ, ವಿಧಾನ ಸಭೆಯಿಂದ ತಿದ್ದುಪಡಿಯೊಂದಿಗೆ ಅಂಗೀಕೃತ ರೂಪದಲ್ಲಿರುವ 2024ನೇ ಸಾಲಿನ ಕರ್ನಾಟಕ ಪ್ರವಾಸೋದ್ಯಮ ರೋಪ್‌ವೇಗಳ ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು**

(ಮುಂದು)

(980) 18.12.2024, 7.00 TCH-KS (ಉಪ ಸಭಾಪತಿಯವರ ಉಪಸ್ಥಿತಿ)

**ಶ್ರೀ ಹೆಚ್.ಕೆ. ಪಾಟೀಲ್ (ಕಾನೂನು, ನ್ಯಾಯ, ಮಾನವ ಹಕ್ಕುಗಳು ಮತ್ತು ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು):-** ಮಾನ್ಯ ಸಭಾಪತಿಯವರೇ, ಇದೊಂದು ಅಗತ್ಯ ಕಾರಣದಿಂದ ತಂದಿರತಕ್ಕಂಥ ವಿಧೇಯಕವಾಗಿದೆ. ತಮಗೆಲ್ಲರಿಗೂ ಗೊತ್ತಿರುವಂತೆ ರೋಪ್‌ವೇ ಬಹಳಷ್ಟು ಕಡೆ ಆಗಬೇಕು. ಅದರಲ್ಲೂ ಕೂಡ ವಿಶೇಷವಾಗಿ ಪ್ರವಾಸೋದ್ಯಮ ತಾಣಗಳೇನಿವೆ, ಆ ತಾಣಗಳಲ್ಲಿ ರೋಪ್‌ವೇ ಹಾಕಬೇಕಿದೆ. ಕೆಲವು ಪ್ರವಾಸಿ ತಾಣಗಳೇನಿವೆ, ಅವುಗಳನ್ನು ತಲುಪಬೇಕಾದರೆ ರೋಪ್‌ವೇ ನಂತಹ ಅನುಕೂಲತೆ ಅತ್ಯಂತ ಅವಶ್ಯಕತೆ ಇದೆ. ಉದಾಹರಣೆಗೆ ಹೇಳುವುದಾದರೆ, ನಂದಿಬೆಟ್ಟ, ಸವದತ್ತಿ ರೇಣುಕಾ ಎಲ್ಲಮ್ಮ ಗುಡ್ಡ, ಜೋಗ್‌ಫಾಲ್ಸ್, ಅಂಜನಾದ್ರಿ ಬೆಟ್ಟ ಮತ್ತು ತುಮಕೂರು ಜಿಲ್ಲೆಯ ಮಧುಗಿರಿ ಏಕಶಿಲಾ ಬೆಟ್ಟವನ್ನು ತೆಗೆದುಕೊಳ್ಳಬಹುದು, ಚಿತ್ರದುರ್ಗ ಕೂಡ ತೆಗೆದುಕೊಳ್ಳಬಹುದು. ಪ್ರಸ್ತುತ ಈ ರೀತಿಯ ಒಟ್ಟು ನಾವು 15 ಸ್ಥಳಗಳನ್ನು ಗುರುತಿಸಿದ್ದೇವೆ. ಅವುಗಳಿಗೆ DPR (Detailed Project Report) ಅನ್ನು ಮಾಡುವುದಕ್ಕೆ ಸೂಚನೆಗಳನ್ನು ಕೊಟ್ಟಿದ್ದೇವೆ. PPP (Public Private Partnership) model ನಲ್ಲಿ ಮಾಡಬೇಕು ಎನ್ನುವುದು ಪ್ರಸ್ತುತ ಸರ್ಕಾರದ ಚಿಂತನೆಯಾಗಿದೆ. ಇವುಗಳನ್ನು ಪ್ರಾರಂಭ ಮಾಡಬೇಕೆಂದರೆ, ಈ construction ಗೂ ಸಹಿತ ವಿಶೇಷವಾದ ರೀತಿಯಲ್ಲಿ ಷರತ್ತುಗಳನ್ನು ಹಾಕಬೇಕಾಗುತ್ತದೆ. ಅದರ ಜೊತೆಗೆ ನಿರ್ವಹಣಾ ಸಂದರ್ಭದಲ್ಲಿ ಏನಾದರೂ ಹೆಚ್ಚು-ಕಡಿಮೆಯಾದರೆ, ಅಲ್ಲಿ ಏನಾದರೂ ಒಂದು ಸಣ್ಣ accident ಆದರೂ ಕೂಡ ಅದು ದೊಡ್ಡ accident ಆಗಿಬಿಡುತ್ತದೆ. ಏಕೆಂದರೆ, ಅದು ಎಷ್ಟೋ ಎತ್ತರದಿಂದ ಕೆಳಗೆ ಬೀಳುವ ಸಂದರ್ಭ ಇರುತ್ತದೆ. ಆ ಎಲ್ಲಾ ಹಿನ್ನೆಲೆಗಳಲ್ಲಿ ಆ ಗಂಡಾಂತರಗಳನ್ನು, ಇದರ ಅಗತ್ಯತೆಯನ್ನು ಗಮನಿಸಿಕೊಂಡು ನಾವು ಒಂದು ಸಮರ್ಪಕವಾದಂತಹ ಕಾನೂನು ಮಾಡಬೇಕೆಂದು ಮನಗಂಡು ನಾನು ಈ ಸಂದರ್ಭದಲ್ಲಿ The Karnataka Tourism Ropeways Bill, 2024 ಅನ್ನು ತಂದಿದ್ದೇನೆ. ಇದನ್ನು ತಾವೆಲ್ಲರೂ ಕೂಡ ನೋಡಿ ಗಮನಿಸಿದ್ದೀರಿ.

ಈ ಬಿಲ್ ಸರಳವಾಗಿರತಕ್ಕಂಥದ್ದು. ಏನಾದರೂ ತಾಂತ್ರಿಕವಾಗಿ ಸಲಹೆಗಳಿದ್ದರೆ ಆ ಸಲಹೆಗಳನ್ನು ಕೊಡಬಹುದು. ಆದರೆ ಇದು ಇಲ್ಲದೇ ropeway ಮಾಡುವುದಕ್ಕೆ ನಮಗೆ ಸಾಧ್ಯವಾಗುವುದಿಲ್ಲ. ಮಾನ್ಯ ಗೋವಿಂದರಾಜುರವರು ಬಂದು ನಮ್ಮಲ್ಲೂ ಕೂಡ ಒಂದು ರೋಪ್‌ವೇ ಮಾಡಿ ಎಂದು ಕೇಳುತ್ತಿದ್ದರು. ನಾವು ಈ ಕಾನೂನು ಇಲ್ಲದೇ ಏನೂ ಮಾಡುವುದಕ್ಕೆ ಆಗುವುದಿಲ್ಲ. ಈ ಕಾನೂನು ಮಂಡನೆ ಮಾಡಿಕೊಡಿ. ಆಮೇಲೆ ಅದಕ್ಕೆ ಒಂದು study team ಅನ್ನು ಕಳುಹಿಸಲಾಗುವುದೆಂದು ಹೇಳಿದೆನು. ಸದ್ಯಕ್ಕೆ ಒಟ್ಟು 15 ಕಡೆಗಳಲ್ಲಿ ropeways ಅನ್ನು ಮಾಡಬೇಕೆಂದು ಚಿಂತನೆ ಮಾಡಿದ್ದೇವೆ. ಆ ಪ್ರಕ್ರಿಯೆಗೆ ತೀವ್ರವಾಗಿರತಕ್ಕಂಥ ಅನುಕೂಲತೆ ಆಗಲಿ ಎಂದು ಈ ಬಿಲ್ ಪಾಸ್ ಮಾಡಿಕೊಡಬೇಕೆಂದು ನಾನು ತಮ್ಮ ಮುಖಾಂತರ ಈ ಸದನಕ್ಕೆ ಕೇಳುತ್ತಿದ್ದೇನೆ.

**ಶ್ರೀ ಕೆ.ಎ.ತಿಪ್ಪೇಸ್ವಾಮಿ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು. ನಾನು ಮಾನ್ಯ ಮಂತ್ರಿಗಳಲ್ಲಿ ಕೇಳುವುದೇನೆಂದರೆ, ropeways ಗಳ inspection ಗೆ ಏನಾದರೂ Nodal Agency or Nodal Department ಯಾವುದು? ತಾವು ಮುಂದಿನ ದಿನಗಳಲ್ಲಿ Inspectorate of Ropeways ಎಂದು ಏನಾದರೂ ಮಾಡುತ್ತೀರಾ. ಏಕೆಂದರೆ ಇದರ construction ಮತ್ತು maintenance ಯಾವ ರೀತಿ ಇದೆಯೆಂದರೆ, ಈಗ ಮೆಟ್ರೋ ರೈಲ್ ಏನಿದೆಯೋ ಅದೇ ರೀತಿಯಲ್ಲೂ ಕೂಡ ಪ್ರತಿ ದಿವಸ ಇದನ್ನು ನೋಡಿಕೊಳ್ಳತಕ್ಕಂಥ ವ್ಯವಸ್ಥೆ ಆಗಬೇಕು. ತಾವು ಎಲ್ಲೋ ಒಂದು ಕಡೆ ಎಲ್ಲಾ ಜವಾಬ್ದಾರಿಯನ್ನು ಮ್ಯಾಜಿಸ್ಟ್ರೇಟ್‌ರವರಾದ ಜಿಲ್ಲಾಧಿಕಾರಿಗಳಿಗೆ ಕೊಟ್ಟಂತೆ ಕಾಣುತ್ತದೆ. ಇದರ ಬಗ್ಗೆ ಕೂಡ ತಾವೇನಾದರೂ ನೋಡಿದ್ದೀರಾ. ಈಗಾಗಲೇ ರಾಜಸ್ಥಾನದಲ್ಲಿ Rajasthan Ropeways Act ಇದೆ. ಅದೇ ರೀತಿ Bombay Aerial Ropeways Act ಇದೆ. ಆ ಪ್ರಕಾರವಾಗಿ ತಾವು ಏನಾದರೂ ಬೇರೆ line department ಎಂದು create ಮಾಡುತ್ತೀರಾ. ಮತ್ತೆ ಇದಕ್ಕೆ ಸಾಕಷ್ಟು ರೀತಿಯಲ್ಲಿ PRASAD ("Pilgrimage Rejuvenation and Spiritual Augmentation Drive") scheme ನಿಂದ Government of India ದಲ್ಲಿ ಸಾಕಷ್ಟು ದುಡ್ಡು ಕೊಡುತ್ತಾರೆ. ಅದು ಎಲ್ಲೆಲ್ಲಿ heritage ಹಾಗೂ spiritual sites ಗಳಿವೆ, ತಾವು ಎಲ್ಲೆಲ್ಲಿ ಅವುಗಳನ್ನು identify ಮಾಡುತ್ತೀರಿ. ಅದರಲ್ಲೂ ಕೂಡ ಸಾಕಷ್ಟು ರೀತಿಯಲ್ಲಿ ನೆರವು ತೆಗೆದುಕೊಂಡರೆ ಸರ್ಕಾರಕ್ಕೆ burden ಕಡಿಮೆಯಾಗುತ್ತದೆ. ಇದನ್ನು ಕೂಡ ತಾವು examine ಮಾಡಬೇಕೆಂದು ನಾನು ತಮ್ಮಲ್ಲಿ ಕೋರಿಕೊಳ್ಳುತ್ತೇನೆ.

**ಶ್ರೀ ಕೇಶವ್ ಪ್ರಸಾದ್.ಎಸ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು. ಕರ್ನಾಟಕ ಪ್ರವಾಸೋದ್ಯಮ ರೋಪ್‌ವೇಗಳ ವಿಧೇಯಕ 2024ನ್ನು ತಂದಿರುವಂಥದ್ದನ್ನು ನಾನು ಸ್ವಾಗತಿಸುತ್ತೇನೆ. ಇದು ನಮ್ಮ ಪ್ರವಾಸೋದ್ಯಮವನ್ನು ಜಾಸ್ತಿ ಮಾಡುತ್ತದೆ. ಹಾಗೆಯೇ, ಅಂತರರಾಷ್ಟ್ರೀಯ ಮಟ್ಟದಲ್ಲಿ, ವಿಶೇಷವಾಗಿ ಭಾರತ ಮತ್ತು ಕರ್ನಾಟಕ ಕೂಡ ಈ ropeway map ನೊಳಗೆ ಬರುವಂಥದ್ದು ಬಹಳ ಸಂತೋಷದ ಸಂಗತಿ. ಆದರೆ ropeways ಗಳದ್ದು ಕೆಲವು ಅನಾಹುತಗಳನ್ನು ನೋಡಿದಾಗ, ಇದರಲ್ಲಿ ಸಾಕಷ್ಟು ಮುಂಜಾತಾ ಕ್ರಮವನ್ನು ತೆಗೆದುಕೊಳ್ಳಬೇಕು? ಮತ್ತೆ ಇದಕ್ಕೆ international specifications ನಲ್ಲಿ monitor

ಮಾಡುವಂಥದ್ದಕ್ಕೆ ಒಂದು ವಿಶೇಷವಾದ ಪ್ರಾಧಿಕಾರವನ್ನು ಅಥವಾ ಅಧಿಕಾರವನ್ನು ಕೊಡಬೇಕು ಮತ್ತು ಇದನ್ನು online ನಲ್ಲೂ ಕೂಡ ಯಾರು ಬೇಕಾದರೂ ಚೆಕ್ ಮಾಡುವಂಥ facility ಇರಬೇಕು. ಏಕೆಂದರೆ ಇಡೀ ಭಾರತದಿಂದ ಪ್ರವಾಸಕ್ಕೆ ಬರುವಂಥವರು ಬರುತ್ತಾರೆ. ಕರ್ನಾಟಕ ಹಾಗೂ ವಿದೇಶಗಳಿಂದಲೂ ಕೂಡ ಈ online facility ಯನ್ನು ತೆಗೆದುಕೊಂಡು ಈ ropeway ಯನ್ನು ಉಪಯೋಗಿಸುತ್ತಾರೆ. ಹಾಗೆಯೇ, ಇದಕ್ಕೆ ಅತ್ಯಂತ stringent measures ಇರಬೇಕು. ಒಂದು lift ನ್ನು ನಾವು ಹೇಗೆ checks and measures ಹಾಕಿಕೊಂಡರೆ ಪ್ರತಿವರ್ಷ ಯಾವುದೇ objection ಇಲ್ಲವೆಂದು 'No Objection Certification' ಅನ್ನು ಕೊಡಬೇಕು ಮತ್ತು ಎಲ್ಲಾ compliance ಕೂಡ ಕೊಡಬೇಕು. ಪ್ರತಿ ತಿಂಗಳು lift operating company ಯವರು ಬಂದು ಹೇಗೆ checking ಮಾಡಿ, ಅಲ್ಲಿ ಸಹಿ ಮಾಡಿ ಹೋಗುತ್ತಾರೆ. ಹಾಗೆಯೇ ರೋಪ್‌ವೇಗಳನ್ನು ಪ್ರತಿ ತಿಂಗಳು monitor ಮಾಡುವಂತಹ ಕೆಲಸ ಆಗಬೇಕು. ಮತ್ತೆ every 6 months ಗೆ ಒಂದು ಬಾರಿ ಅದನ್ನು public domain ನಲ್ಲಿ ಈ ರೀತಿಯದ್ದು ಆಗಿದೆ ಎನ್ನುವಂಥದ್ದು ಆಗಬೇಕು. ಮತ್ತೆ ಪ್ರತಿ ತಿಂಗಳು ಸಹಿ ಮಾಡಿರುವುದು display ಆಗಬೇಕು. ಅದನ್ನು ಎಲ್ಲಾ websiteಗಳಲ್ಲೂ ನಾವು ಎಲ್ಲೆಲ್ಲಿ ರೋಪ್‌ವೇಗಳನ್ನು ಜಾರಿಗೆ ತರುತ್ತೇವೋ ಅಲ್ಲಿ display ಗೆ ಹಾಕಬೇಕು. ಯಾರು ಬೇಕಾದರೂ ಕೂಡ ಆ public domain ಗೆ ಹೋಗಿ confirm ಮಾಡಿಕೊಂಡು ಅದನ್ನು ಉಪಯೋಗಿಸುವಂತೆ ಆಗಬೇಕು. ಹಾಗಾಗಿ, ಈ ಬಿಲ್ ತರುತ್ತಿರುವುದನ್ನು ನಾನು ಸ್ವಾಗತಿಸುತ್ತೇನೆ. ಆದರೆ ತುಂಬಾ stringent measures ಇರಬೇಕು. ಆ compliance ಕೂಡ ಅಷ್ಟೇ stringent ಇರಬೇಕು. ಅಕಸ್ಮಾತ್ ಏನಾದರೂ ಅಲ್ಪಸ್ವಲ್ಪ ಲೋಪ ಬಂದರೆ ತಕ್ಷಣವೇ ಬಂದ್ ಮಾಡಿಬಿಡಬೇಕು ಎನ್ನುವಂಥದ್ದು ಈ ಬಿಲ್‌ನೊಳಗೆ ಬರಬೇಕು ಎಂದು ನಾನು ತಮ್ಮೂಲಕ ಸರ್ಕಾರವನ್ನು ವಿನಂತಿ ಮಾಡುತ್ತಿದ್ದೇನೆ.

**ಶ್ರೀ ಕೆ.ಎಸ್.ನವೀನ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಪ್ರವಾಸೋದ್ಯಮ ಸಚಿವರು ತಂದಿರತಕ್ಕಂಥ ರೋಪ್‌ವೇಗಳ ವಿಧೇಯಕಕ್ಕೆ ಸಂಬಂಧಪಟ್ಟಂತೆ ನಾನು ಎರಡ್ಮೂರು ಮಾಹಿತಿಗಳನ್ನು ಮಾನ್ಯ ಸಚಿವರಲ್ಲಿ ಕೇಳುವುದಕ್ಕೆ ಇಚ್ಛೇಪಡುತ್ತೇನೆ. ಮೊದಲನೆಯದಾಗಿ, ತಾವೇನು ಈ ಬಿಲ್‌ನಲ್ಲಿ ಹೇಳಿದ್ದೀರಿ, ಸರ್ಕಾರ ಏನು execute ಮಾಡುವುದಕ್ಕೋಸ್ಕರ ಈ ಒಂದು ಬಿಲ್‌ನ್ನು ಜಾರಿಗೆ ತರುತ್ತಿದ್ದೀರೋ ಅಥವಾ third-partyಗಳನ್ನು execute ಮಾಡಿ permission ಅನ್ನು ಕೊಡುವುದಕ್ಕೋಸ್ಕರ ಈ ಕಾನೂನು ತರುತ್ತಿದ್ದಾರೋ? ಎರಡನೆಯದಾಗಿ, ಈಗ ಏನು ನಮ್ಮ ರಾಜ್ಯದಲ್ಲಿ ಬೆಟ್ಟದ ಮೇಲೆ ಇರುವಂತಹ ಐತಿಹಾಸಿಕ ಸ್ಥಳಗಳು ಇವೆ. ಉದಾಹರಣೆಗೆ ಚಿತ್ರದುರ್ಗದ ಕೋಟೆ ಇದೆ. ಅನೇಕ ವರ್ಷಗಳಿಂದ ಚಿತ್ರದುರ್ಗದ ಕೋಟೆಗೆ ರೋಪ್‌ವೇಯನ್ನು ಮಾಡಬೇಕೆಂಬ ಬೇಡಿಕೆ ಇದೆ. ಅದೇ ರೀತಿ ನಮ್ಮ ಜೋಗ್‌ಫಾಲ್ಸ್ ಆಗಿರಬಹುದು ಇನ್ನೂ ಬೇರೆ ಬೇರೆ ಅತ್ಯಂತ ಅರಣ್ಯ ಮತ್ತು ಕಡಿದಾದ ಪ್ರದೇಶಗಳು ಅಂದರೆ ತುಂಬಾ ದುರ್ಗಮ ಪ್ರದೇಶಗಳಲ್ಲಿ ರೋಪ್‌ವೇಗಳನ್ನು ಅಳವಡಿಸಬೇಕಾದಂಥ ಅವಶ್ಯಕತೆ ಇದೆ. ಹಾಗಾಗಿ, ಇದರಲ್ಲಿ technical feasibility ಯ ಜೊತೆ ಜೊತೆಗೆ safety ಮತ್ತು security ಅನ್ನು ಸಹ ensure ಮಾಡಬೇಕಾಗಿರುವುದು ಅನಿವಾರ್ಯತೆ ಇದೆ. ನಮ್ಮ ದೇಶದಲ್ಲಿ

ಯಶಸ್ವಿಯಾಗಿ ಒಟ್ಟು 4 ರೋಪ್‌ವೇಗಳಿವೆ. ಗ್ಯಾಂಗ್‌ಟಾಕ್‌ನಲ್ಲಿದೆ, ರಾಜಸ್ಥಾನದಲ್ಲಿದೆ, ಈಶಾನ್ಯ ರಾಜ್ಯದಲ್ಲಿವೆ ಮತ್ತು ಹಿಮಾಚಲ ಪ್ರದೇಶದಲ್ಲಿದೆ. ಈ ರೀತಿ ಒಟ್ಟು 4 ಕಡೆಗಳಲ್ಲಿ ರೋಪ್‌ವೇ ಇದೆ. ಆದರೆ ನಮಗೆ ಗೊತ್ತಿರುವುದು ಏನೆಂದರೆ, ಅನೇಕ ಬಾರಿ ಏನಾದರೂ ದುರ್ಘಟನೆಗಳು ನಡೆದಾಗ ಅಲ್ಲಿ ಯಾರನ್ನು ಹೊಣೆಗಾರಿಕೆ ಮಾಡುವುದು ಸರಿಯಾದ ರೀತಿಯಲ್ಲಿ ಆಗುವುದಿಲ್ಲ. ಸಾವು- ನೋವು ಸಂಭವಿಸುವಂತಹ ಸಂದರ್ಭದಲ್ಲಿ, ಅಲ್ಲಿ ಅದರ authority ಯಾರು? ಇದನ್ನು safety and maintenance ಮಾಡುವವರು ಯಾರು? Private party ಗಳಿಗೆ ಕೊಟ್ಟರೆ, ನಾಳೆದಿವಸ ಏನಾದರು ಅಲ್ಲಿ ಅಪಘಾತಗಳಾಗಿ ಸಾವು-ನೋವುಗಳು ಸಂಭವಿಸಿದಂತಹ ಸಂದರ್ಭದಲ್ಲಿ ಸರ್ಕಾರ ಅದರ ಹೊಣೆಗಾರಿಕೆಯನ್ನು ಹೊರುತ್ತದೆಯೇ? ಇದೆಲ್ಲವೂ ಕೂಡ ಒಂದು ರೀತಿ ನಮ್ಮ ರಾಜ್ಯಕ್ಕೆ ಹೊಸ ವಿಷಯವಾಗಿರುವುದರಿಂದ, ಮಾನ್ಯ ಸಚಿವರು ಇದರಲ್ಲಿ ಅದಕ್ಕೆ ಏನೆಲ್ಲಾ ಯೋಜನೆ ಮತ್ತು ಆಲೋಚನೆಗಳಾಗಿದೆ ಎಂಬುದನ್ನು ತಿಳಿಸಬೇಕೆಂದು ಮಾನ್ಯ ಸಚಿವರನ್ನು ಕೇಳುತ್ತಿದ್ದೇನೆ.

**ಶ್ರೀ ಚಿದಾನಂದ್ ಎಂ.ಗೌಡ (ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು. ಕರ್ನಾಟಕ ಪ್ರವಾಸೋದ್ಯಮ ರೋಪ್‌ವೇ ವಿಧೇಯಕ, 2024 ಅನ್ನು ಮಾನ್ಯ ಸಚಿವರು ತಂದಿದ್ದಾರೆ ಅದನ್ನು ನಾನು ಸ್ವಾಗತ ಮಾಡುತ್ತೇನೆ. ನಮ್ಮ ರಾಜ್ಯಕ್ಕೆ ಇದು ಒಂದು ಹೊಸ concept. ಏನು ಮುಂದೆ ನಾವು ತರಬಹುದಾದಂಥ ಉದ್ದೇಶಿತ ರೋಪ್‌ಗಳನ್ನು ಕಾನೂನುಬದ್ಧ ಮಾಡುವುದಕ್ಕೆ ಮತ್ತು ಅದರ ಮೇಲೆ ನಿಬಂಧನೆಗಳನ್ನು ಹೇರುವುದಕ್ಕೆ ಸರಿಯಾಗಿ ನಿರ್ವಹಣೆ ಮಾಡುವುದಕ್ಕೆ ತರುತ್ತಿರುವಂತಹ ಈ ಒಂದು ವಿಧೇಯಕ ಸ್ವಾಗತಾರ್ಹ. ಆದರೆ, ಈ ವಿಧೇಯಕಕ್ಕೆ ಪೂರಕವಾಗಿ ಹೇಳುವುದಾದರೆ, ಏನೇನು ಅಧ್ಯಯನ ನಡೆದಿದೆಯೇ? ದೇಶದಲ್ಲಿ ಈಗಾಗಲೇ ನಾಲ್ಕೈದು ಕಡೆಗಳಲ್ಲಿ ರೋಪ್‌ವೇ ಇದೆ. ದೇಶದಲ್ಲಿ ಅಥವಾ ವಿದೇಶಗಳಲ್ಲಿ ಇರುವುದನ್ನು ಅಧ್ಯಯನ ಮಾಡಿ ಅದಕ್ಕೆ ಪೂರಕವಾಗಿ ಇಲ್ಲಿ ಕಾನೂನು ತರಲು ಹೊರಟಿದ್ದೀರಾ? ಇದರ ಜೊತೆಗೆ ಇದು ಪರಿಸರದ ಮೇಲೆ ಯಾವ ರೀತಿಯ ದುಷ್ಪರಿಣಾಮ ಬೀರುತ್ತದೆ? ಏಕೆಂದರೆ ಒಂದು ರೋಪ್‌ವೇ ನಿರ್ಮಾಣ ಮಾಡಬೇಕಾದರೆ ಆ ಮಾರ್ಗದಲ್ಲಿ ಸಾಕಷ್ಟು ಗಿಡ-ಮರಗಳನ್ನು ಕಡಿಯಬೇಕಾದಂಥ ಒಂದು ಪರಿಸ್ಥಿತಿ ಬರಬಹುದು. ಅವುಗಳನ್ನೆಲ್ಲಾ ಯಾವ ರೀತಿ ಮಾಡುತ್ತೀರಿ? ಒಂದುವೇಳೆ ನಾವು ಮುಂದಿನ ದಿನಗಳಲ್ಲಿ ಹೆಚ್ಚಿನ ಕಡೆಗಳಲ್ಲಿ ಮಾಡಿ, ಆ ಪರಿಸರದ ಮೇಲೆ ಏನಾದರೂ ದೊಡ್ಡ ಮಟ್ಟದ ಪರಿಣಾಮ ಬೀರುವುದಾದರೆ, ಅದಕ್ಕೆ ಯಾವ ರೀತಿಯ ಆಲೋಚನೆಗಳನ್ನು ತಾವು ಮಾಡಿದ್ದೀರಿ. ಈ ಎರಡ್ಮೂರು clarification ಅನ್ನು ನಾನು ತಮ್ಮಲ್ಲಿ ಕೇಳಬಯಸುತ್ತೇನೆ. ಇದರ ಜೊತೆಗೆ ಬಹಳ ಕಾಲದಿಂದ ನಮ್ಮ ತುಮಕೂರು ಜಿಲ್ಲೆ ಮಧುಗಿರಿಯಲ್ಲಿ ರೋಪ್‌ವೇ ಮಾಡಬೇಕೆಂದು ಒಂದು ಬೇಡಿಕೆ ಇದೆ. ಅದನ್ನೂ ಕೂಡ ಏನಾದರೂ ಮೊದಲನೇ ಹಂತದಲ್ಲಿ ತೆಗೆದುಕೊಳ್ಳುವ ಆಲೋಚನೆ ಇದೆಯೇ? ಈ ವಿಚಾರದ ಬಗ್ಗೆ ನನಗೆ clarification ಕೊಡಬೇಕು.

**(ಮುಂದು)**

**ಶ್ರೀಮತಿ ಹೇಮಲತಾ ನಾಯಕ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಕರ್ನಾಟಕ ಪ್ರವಾಸೋದ್ಯಮ ರೋಪ್ ವೇಗಳ ವಿಧೇಯಕ, 2024 ಅನ್ನು ನಾನು ಸ್ವಾಗತಿಸುತ್ತೇನೆ. ಕಾರಣ ನಮ್ಮ ಕೊಪ್ಪಳ ಜಿಲ್ಲೆಯಲ್ಲಿ ಬರುವಂತಹ 'ಅಂಜನಾದ್ರಿ ಬೆಟ್ಟ'ದ ಬಗ್ಗೆ ತಮಗೆ ಮಾಹಿತಿ ಇರಬಹುದು. ಇದು ಕಳೆದ ಬಿ.ಜೆ.ಪಿ. ಸರ್ಕಾರದಲ್ಲೂ ಕೂಡ mapping ಆಗಿತ್ತು. ಈಗಾಗಲೇ ಅದರ ಪ್ರಕ್ರಿಯೆಯನ್ನು ಪ್ರಾರಂಭ ಮಾಡಿದೆ ಎಂದು ಜಿಲ್ಲಾಡಳಿತದಿಂದ ಮಾಹಿತಿ ಬಂದಿತ್ತು. ಈಗಾಗಲೇ ಅದರ ರೂಪುರೇಷೆಗಳು ರೆಡಿಯಾಗಿದೆ. ಅಂಜನಾದ್ರಿ ಬೆಟ್ಟಕ್ಕೆ ಹೋಗಬೇಕಾದರೆ ಮುಂಭಾಗದಿಂದ ರೋಪ್ ವೇ ಮಾಡಿ ಹಿಂಭಾಗಕ್ಕೆ ಇಳಿಯುವಂತಹ ವ್ಯವಸ್ಥೆಗಳ ಬಗ್ಗೆ ಒಂದಿಷ್ಟು ಮಾಹಿತಿ ಇತ್ತು. ಅದರ ಬಗ್ಗೆ ಕೂಲಂಕಷವಾಗಿ ನೋಡಬೇಕಾಗಿದೆ. ಅಂಜನಾದ್ರಿ ಬೆಟ್ಟದಲ್ಲಿ ಗಿಡಗಳು ಇಲ್ಲ, ಬರೀ ಕಲ್ಲುಗಳಿಂದ ಕೂಡಿದೆ. ತಾವು ಅಲ್ಲಿ ರೋಪ್‌ವೇ ಮಾಡಬೇಕಾದಾಗ ಯಾವ ಮಾದರಿಯಲ್ಲಿ ಮಾಡುತ್ತೀರಿ? ಏಕೆಂದರೆ, ಬೇಸಿಗೆ, ಮಳೆಗಾಲ; ಅಲ್ಲಿರುವುದು ಬೆಟ್ಟ. ಅಲ್ಲಿ ಆಶ್ರಯ ತಾಣಗಳು ಎಲ್ಲಿಯೂ ಇಲ್ಲ ಇದು ಮೊದಲನೆಯದು. ಅಲ್ಲಿ ರೋಪ್ ವೇ ಮಾಡಬೇಕಾದರೆ ಬೆಟ್ಟದ ಕೆಳಗಡೆ ಪ್ರಾರಂಭವಾದರೆ ಬೆಟ್ಟದ ಮೇಲೆ ಹೋಗುವಂತಹ ವ್ಯವಸ್ಥೆ ಇದೆ. ಅಲ್ಲಿ ವ್ಯವಸ್ಥೆ ಮಾಡಬೇಕಾದರೆ ಸುರಕ್ಷತೆ ಬಗ್ಗೆ ನೀವು ಯಾವ ರೀತಿ ನಿರ್ಧಾರ ಮಾಡುತ್ತೀರಿ? ಕೆಳಗಡೆ ಇಳಿದರೆ ಹಿಟ್ನಾಳ್ ಭಾಗದಲ್ಲಿ ಬರುತ್ತದೆ. ನೇರವಾಗಿ ರಾಷ್ಟ್ರೀಯ ಹೆದ್ದಾರಿಗೆ ಅನುಕೂಲವಾಗುವಂತಹ ವ್ಯವಸ್ಥೆ ಇದೆ. ಅಲ್ಲಿ ಕೂಡ ತಾಣಗಳನ್ನು ವ್ಯವಸ್ಥೆ ಮಾಡಬೇಕಾಗಿದೆ. ಏಕೆಂದರೆ, ಇದು ಜಗತ್ಪ್ರಸಿದ್ಧವಾದಂತಹ ಅಂಜನಾದ್ರಿ ಬೆಟ್ಟ. ಕಳೆದ ಸಲ ಅಲ್ಲಿ ಹನುಮ ಮಾಲೆಯನ್ನು ಬದಲಾಯಿಸಬೇಕೆನ್ನುವುದರ ಜೊತೆಗೆ ಪ್ರತಿ ಸಲ ಅಲ್ಲಿ ಜನಜಾತ್ರೆಯಾಗುವಂತಹದ್ದು. ನೀವಿದನ್ನು ಆದಷ್ಟು ಬೇಗ ಕಾರ್ಯರೂಪಕ್ಕೆ ತಂದರೆ ಬಹಳ ಸಂತೋಷ ಎಂದು ಈ ಸಂದರ್ಭದಲ್ಲಿ ಹೇಳುತ್ತಾ ಈ ವಿಧೇಯಕಕ್ಕೆ ನನ್ನ ಸಂಪೂರ್ಣ ಒಪ್ಪಿಗೆಯನ್ನು ಸೂಚಿಸುತ್ತೇನೆ.

**ಶ್ರೀ ಸಿ.ಟಿ. ರವಿ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈ ವಿಧೇಯಕದಲ್ಲಿ ಪದನಿಮಿತ್ತ ಅಧ್ಯಕ್ಷರು, ಪರಿಸರದ ಕುರಿತು ಆಳವಾದ ಜ್ಞಾನವನ್ನು ಹೊಂದಿರುವ ಪರಿಸರವಾದಿಗಳನ್ನು ಅಥವಾ ಸಾಮಾಜಿಕ ಅಥವಾ ಆರ್ಥಿಕ ಅಥವಾ ಸಸ್ಯಸಂಕುಲ ಅಥವಾ ಪ್ರಾಣಿವರ್ಗಗಳ ಕುರಿತು ಆಳವಾದ ಜ್ಞಾನವನ್ನು ಹೊಂದಿರುವಂಥ ಇತರ ಪ್ರಖ್ಯಾತ ವ್ಯಕ್ತಿಗಳನ್ನು ಪದನಿಮಿತ್ತ ಸದಸ್ಯರನ್ನಾಗಿ ಆಹ್ವಾನಿಸಬಹುದು ಎಂದು ಕೊಟ್ಟಿದ್ದಾರೆ. ನಿಮ್ಮ ಸಲಹಾ ಪ್ರಾಧಿಕಾರದಲ್ಲಿಯೇ ಅವರಿಗೊಂದು ಕಡ್ಡಾಯ ನೇಮಕಾತಿಯನ್ನು ಮಾಡಿಕೊಳ್ಳುವುದು ಒಳ್ಳೆಯದೆಂದು ನನಗನಿಸುತ್ತದೆ. ಆಹ್ವಾನಿಸುವುದು ಎನ್ನುವ option ಗಿಂತ ಆ ರೀತಿ ಇರುವವರನ್ನು ಕಡ್ಡಾಯವಾಗಿ ನೇಮಕ ಮಾಡಿಕೊಳ್ಳುವುದು ಎನ್ನುವುದು ಒಂದು ಸಲಹೆ. ಇನ್ನೊಂದು ವಿಚಾರವೆಂದರೆ, ವಿಮಾ ವ್ಯಾಪ್ತಿಗೆ ಒಳಪಡಿಸಿರುವುದು ಒಳ್ಳೆಯ ಕೆಲಸ. ನಾನು ಇದನ್ನು ಸಮಗ್ರವಾಗಿ ಓದಿದೆ. ಆಳವಾಗಿ ಅಧ್ಯಯನ ಮಾಡಿ ವಿಸ್ತೃತವಾಗಿ ತಂದಿದ್ದೀರಿ. ಎಲ್ಲಾ ವಿಷಯವನ್ನೂ address ಮಾಡಿದ್ದೀರಿ. ವಿಮೆಯನ್ನು 10 ರೂಪಾಯಿಗೂ ಮಾಡಬಹುದು, 10 ಲಕ್ಷಕ್ಕೂ ಮಾಡಬಹುದು, 10 ಕೋಟಿಗೂ ಮಾಡಬಹುದು. Rules frame ಮಾಡಬೇಕಾದರೆ ಸಾಮರ್ಥ್ಯಕ್ಕನುಗುಣವಾಗಿ ಇವತ್ತಿನ ವಾಸ್ತವಿಕ ಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ವಿಮಾ ವ್ಯಾಪ್ತಿಗೆ ಒಳಪಡಿಸಬೇಕು. ಇಲ್ಲದಿದ್ದರೆ ಒಬ್ಬ ವ್ಯಕ್ತಿಗೆ

ರೂ. 50,000/- ದಿಂದ ರೂ. 1,00,000/- ಎಂದು ವಿಮಾ ವ್ಯಾಪ್ತಿಗೆ ಒಳಪಡಿಸಿಬಿಟ್ಟರೆ ದೊಡ್ಡ ಅನಾಹುತವಾದಾಗ ತೊಂದರೆಯಾಗುತ್ತದೆ. ಆದ್ದರಿಂದ ಅದನ್ನೂ ಗಮನದಲ್ಲಿಟ್ಟುಕೊಂಡು ವಿವರವಾಗಿ explain ಮಾಡಬೇಕೆನ್ನುವುದು ನನ್ನ ವಿನಂತಿ.

**ಶ್ರೀ ಹೆಚ್.ಕೆ. ಪಾಟೀಲ್ (ಕಾನೂನು, ನ್ಯಾಯ, ಮಾನವ ಹಕ್ಕುಗಳು ಮತ್ತು ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರುಗಳಾದ ತಿಪ್ಪೇಸ್ವಾಮಿಯವರು, ಕೇಶವ ಪ್ರಸಾದ್‌ರವರು, ಕೆ.ಎಸ್.ನವೀನ್‌ರವರು, ಚಿದಾನಂದ್‌ರವರು, ಸಹೋದರಿ ಹೇಮಲತಾರವರು ಮತ್ತು ಸಿ.ಟಿ. ರವಿಯವರು ಇವರೆಲ್ಲಾ ತಮ್ಮದೇ ಆದ ಸಲಹೆಗಳನ್ನು ನೀಡಿದ್ದಾರೆ. ಮಾನ್ಯ ಸದಸ್ಯರಾದ ತಿಪ್ಪೇಸ್ವಾಮಿಯವರಿಗೆ ಹೇಳುವುದಾದರೆ, basically, this Act will empower the Government to constitute an Authority. ಅಂದರೆ ಅವರು ಜಿಲ್ಲಾಧಿಕಾರಿಯವರಿಗೆ ಕೊಡುತ್ತೀರಾ ಅಥವಾ ಯಾರಿಗೆ ಕೊಡುತ್ತೀರಿ ಎಂದು ಕೇಳಿದರು ಆ ಹಿನ್ನೆಲೆಯೊಳಗೆ ಇದನ್ನು ಹೇಳಬಯಸುತ್ತೇನೆ. ಮಾನ್ಯ ಸದಸ್ಯರುಗಳಾದ ಕೇಶವ ಪ್ರಸಾದ್ ಮತ್ತು ನವೀನ್‌ರವರು ಮಾತನಾಡಿ ಯಾರಿಗೆ execute ಮಾಡುತ್ತಾರೆ ಎಂದು ಕೇಳಿದ್ದಾರೆ. Who executes it is a different matter. Whether the Government builds the ropeways, or we build them through a tender mode or under a PPP (Public-Private Partnership) model is a different matter. ಇದು ಯಾವ ರೀತಿಯಾಗಿ construction ಆಗಬೇಕು ಏನೇನು precautions ತೆಗೆದುಕೊಂಡಿರಬೇಕು ಅಂತಹ ಸ್ಥಳದಲ್ಲಿ ಮಾತ್ರ ಇರಬೇಕು. ಅವನ್ನೆಲ್ಲಾ ನೋಡಿಕೊಂಡು ಅತ್ಯಂತ... Safety measures are more important than comfort. ಅವುಗಳಿಗೆ ಒತ್ತು ಕೊಟ್ಟು ಈ ಪ್ರಾಧಿಕಾರ ತನ್ನ ಕಾರ್ಯವ್ಯಾಪ್ತಿಯನ್ನು ನೋಡಿಕೊಳ್ಳಬೇಕಾಗುತ್ತದೆ. ಶ್ರೀ ಚಿದಾನಂದ ಗೌಡರು ಕೆಲವು ಸಲಹೆಗಳನ್ನು ಕೊಟ್ಟಿದ್ದಾರೆ. ಅವರೇ ಇದಕ್ಕೆ ಬಹಳಷ್ಟು beneficiary ಆಗುತ್ತಾರೆ. ಏಕೆಂದರೆ, ಚಿತ್ರದುರ್ಗ ನಿಮ್ಮ constituency, ಚಿಕ್ಕಬಳ್ಳಾಪುರದಲ್ಲಿ ಇರುವ ಲೆಕ್ಕ, ಕೋಲಾರದಲ್ಲಿ ಇರುವ ಲೆಕ್ಕ,... You will be the major beneficiary from the creation of this Act and Authority. ಸಹೋದರಿ ಹೇಮಲತಾ ಅವರು ಅಂಜನಾದ್ರಿ ಗುಡ್ಡದ ಮೇಲಿರುವಂತಹ ಕೆಲವು ವಾಸ್ತವಿಕ ಅಂಶಗಳ ಬಗ್ಗೆ ಬೆಳಕು ಚೆಲ್ಲಿದರು. ಆದರೆ ಸದ್ಯ ಇದಕ್ಕೆ ಸಂಬಂಧ ಬರುವುದಿಲ್ಲ. ಆದರೆ DPR (Detailed Project Report) ತಯಾರು ಮಾಡುವಾಗ ಆ ಯೋಜನೆಯನ್ನು ಯಾರಿಗೆ ಕೊಡುತ್ತೇವೆ ಅಥವಾ ಯಾವ ಯೋಜನೆಯನ್ನು ಕೊಡುತ್ತೇವೆ ಅದನ್ನು ಮಾಡುವಾಗ ನೀವು ಹೇಳಿರುವಂತಹ ಸಲಹೆಗಳನ್ನು ಗಮನದಲ್ಲಿಟ್ಟುಕೊಂಡಿದ್ದೇವೆ. ಅಂಜನಾದ್ರಿ ಬೆಟ್ಟದ DPR ತಯಾರು ಮಾಡುವಾಗ ಬಹಳ ದೊಡ್ಡ exercise ಆಗುತ್ತದೆ. ಆ ಸಂದರ್ಭದಲ್ಲಿ ನಿಮ್ಮಿಂದ ಸಲಹೆ ಸೂಚನೆಗಳು ಇನ್ನೂ ಹೆಚ್ಚಾಗಿ ಬರಲಿ ಎಂದು ಕೇಳಿಕೊಳ್ಳುತ್ತೇನೆ. ರೂಲ್ಸ್ ಮಾಡುವಾಗ expert ಇರುವವರನ್ನು ಕಮಿಟಿಯ ಸದಸ್ಯರನ್ನಾಗಿ ಮಾಡಬಹುದಿತ್ತು ಎನ್ನುವುದು ಮಾನ್ಯ ಸಿ.ಟಿ. ರವಿಯವರ ಅನಿಸಿಕೆ. ಅವರ ಅನಿಸಿಕೆ ಸಹಜವಾಗಿ ಸರಿಯಾದುದೇ. ಆದರೆ ಇದರಲ್ಲಿ ಮಾಡಿಲ್ಲ. ರೂಲ್ಸ್ ಮಾಡುವಾಗ ಯಾವುದು ಬಿಟ್ಟು ಹೋಗಿದೆ ಅದನ್ನು ಗಮನಕ್ಕೆ

ತೆಗೆದುಕೊಳ್ಳುತ್ತೇವೆ. ಆದ್ದರಿಂದ ಈ ವಿಧೇಯಕವನ್ನು ದಯಮಾಡಿ ಅಂಗೀಕಾರ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ,

"ವಿಧಾನಸಭೆಯಿಂದ ತಿದ್ದುಪಡಿಯೊಂದಿಗೆ ಅಂಗೀಕೃತ ರೂಪದಲ್ಲಿರುವ 2024ರ ಕರ್ನಾಟಕ ಪ್ರವಾಸೋದ್ಯಮ ರೋಪ್ ವೇಗಳ ವಿಧೇಯಕವನ್ನು ಪರ್ಯಾಲೋಚಿಸುವುದು."

**ಪ್ರಸ್ತಾವವನ್ನು ಅಂಗೀಕರಿಸಲ್ಪಟ್ಟಿತು**

**ವಿಧೇಯಕವನ್ನು ಖಂಡಖಂಡವಾಗಿ ಪರ್ಯಾಲೋಚಿಸುವುದು**

**ಖಂಡ 2 ರಿಂದ 28ರವರೆಗೆ**

**ಸಭಾಪತಿಯವರು:-** "ಖಂಡ 2 ರಿಂದ 28ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಖಂಡ 2 ರಿಂದ 28 ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)

**ಖಂಡ 1 ಇತ್ಯಾದಿ**

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ,

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

**ಪ್ರಸ್ತಾವದ ಅಂಗೀಕಾರ**

**ಶ್ರೀ ಹೆಚ್.ಕೆ. ಪಾಟೀಲ್ (ಕಾನೂನು, ನ್ಯಾಯ, ಮಾನವ ಹಕ್ಕುಗಳು ಮತ್ತು ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು):-** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2024ರ ಕರ್ನಾಟಕ ಪ್ರವಾಸೋದ್ಯಮ ರೋಪ್ ವೇಗಳ ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ,

"ವಿಧಾನಸಭೆಯಿಂದ ತಿದ್ದುಪಡಿಯೊಂದಿಗೆ ಅಂಗೀಕೃತವಾದ ರೂಪದಲ್ಲಿರುವ 2024ರ ಕರ್ನಾಟಕ ಪ್ರವಾಸೋದ್ಯಮ ರೋಪ್ ವೇಗಳ ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು**

**ಊ) ಕರ್ನಾಟಕ ಕಾರ್ಮಿಕ ಕಲ್ಯಾಣ ನಿಧಿ (ತಿದ್ದುಪಡಿ) ವಿಧೇಯಕ 2024**

**ಪರ್ಯಾಲೋಚನಾ ಪ್ರಸ್ತಾವ**

**ಶ್ರೀ ಸಂತೋಷ್ ಎಸ್. ಲಾಡ್ (ಕಾರ್ಮಿಕ ಸಚಿವರು):-** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2024ನೇ ಸಾಲಿನ ಕರ್ನಾಟಕ ಕಾರ್ಮಿಕ ಕಲ್ಯಾಣ ನಿಧಿ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು**

**ಶ್ರೀ ಸಂತೋಷ್ ಎಸ್. ಲಾಡ್ (ಕಾರ್ಮಿಕ ಸಚಿವರು):-** ಮಾನ್ಯ ಸಭಾಪತಿಯವರೇ, ಈ ವಿಧೇಯಕಕ್ಕೆ 5ನೇ ಬಾರಿ amendment ತರುತ್ತಿದ್ದೇವೆ. The relevant portion of *"THE KARNATAKA LABOUR WELFARE FUND (AMENDMENT) BILL, 2024"* with respect to *"Amendment of section 7A"* reads as follows;

*"In the Karnataka Labour Welfare Fund Act, 1965 (Karnataka Act 15 of 1965), in Section 7A, in sub-section (2), for the words "twenty rupees, forty rupees and twenty rupees", the words, "fifty rupees, one hundred rupees and fifty rupees" shall respectively be substituted."*

ಅಂದರೆ 1965ನೇ ಇಸವಿಯಲ್ಲಿ ಈ contribution ಪ್ರಾರಂಭವಾದದ್ದು. ಅಂದರೆ, unorganized sector ನಲ್ಲಿ, ಈ contribution ನಲ್ಲಿ employee's contribution, employer's contribution and ರಾಜ್ಯ ಸರ್ಕಾರದಿಂದಲು ಕೂಡ contribution ಬರುತ್ತದೆ. 1969ರಲ್ಲಿ ಮೊದಲ ಬಾರಿಗೆ 1 ರೂಪಾಯಿಯನ್ನು employee ಕೊಡುತ್ತಿದ್ದರು, 2 ರೂಪಾಯಿ employer ಕೊಡುತ್ತಿದ್ದರು ಮತ್ತು 1 ರೂಪಾಯಿಯನ್ನು ರಾಜ್ಯ ಸರ್ಕಾರ ಕೊಡುತ್ತಿತ್ತು.

(ಮುಂದು)

**(982) 18.12.2024 7.20 ಹೆಚ್‌ವಿ. ಎಂಡಿ** **(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಸಂತೋಷ್ ಎಸ್.ಲಾಡ್(ಮುಂದು):**

ಸನ್ಮಾನ್ಯ ಸಭಾಪತಿಯವರೇ, ಅದರ ನಂತರ 1994ನೇ ಇಸವಿಯಲ್ಲಿ ಈ ಅನುಪಾತದಲ್ಲಿ ಬದಲಾವಣೆಗೊಂಡು, ಕಾರ್ಮಿಕ ಮೂರು ರೂಪಾಯಿಗಳನ್ನು, ನಿಯೋಜಿತರ ವಂತಿಕೆಯಾಗಿ ಆರು ರೂಪಾಯಿಗಳನ್ನು ಮತ್ತು ಸರ್ಕಾರ ಮೂರು ರೂಪಾಯಿಗಳನ್ನು ಕೊಡಬೇಕಾಗಿತ್ತು. ನಂತರ 2012ನೇ ಇಸವಿಯಲ್ಲಿ ಇದರ ಅನುಪಾತ ಕಾರ್ಮಿಕ ಆರು ರೂಪಾಯಿಗಳನ್ನು, ನಿಯೋಜಿತರ ವಂತಿಕೆಯಾಗಿ ಹನ್ನೆರಡು ರೂಪಾಯಿಗಳನ್ನು ಮತ್ತು ರಾಜ್ಯ ಸರ್ಕಾರ ಆರು ರೂಪಾಯಿಗಳನ್ನು ಪಾವತಿಸಬೇಕಾಗಿತ್ತು. ತದನಂತರ 2017ನೇ ಇಸವಿಯಲ್ಲಿ ಇದರ

ಅನುಪಾತದಲ್ಲಿ ಬದಲಾವಣೆಯಾಗಿ ಕಾರ್ಮಿಕ ಇಪ್ಪತ್ತು ರೂಪಾಯಿಗಳನ್ನು, ನಲವತ್ತು ರೂಪಾಯಿಗಳನ್ನು ನಿಯೋಜಿತರ ವಂತಿಕೆಯಾಗಿ ಮತ್ತು ರಾಜ್ಯ ಸರ್ಕಾರ ಇಪ್ಪತ್ತು ರೂಪಾಯಿಗಳನ್ನು ಪಾವತಿಸುವಂತೆ ತಿದ್ದುಪಡಿಯನ್ನು ತರಲಾಗಿತ್ತು.

ಸನ್ಮಾನ್ಯ ಸಭಾಪತಿಯವರೇ, ಈಗ ನಾವು ತಂದಿರುವಂತಹ ತಿದ್ದುಪಡಿಯಲ್ಲಿ ಐವತ್ತು ರೂಪಾಯಿಗಳನ್ನು ಕಾರ್ಮಿಕ ಕೊಡಬೇಕಾಗುತ್ತದೆ, ನೂರು ರೂಪಾಯಿಗಳನ್ನು ನಿಯೋಜಿತರ ವಂತಿಕೆಯಾಗಿನೀಡಬೇಕಾಗಿದೆ ಮತ್ತು ಐವತ್ತು ರೂಪಾಯಿಗಳನ್ನು ರಾಜ್ಯ ಸರ್ಕಾರ ಕೊಡಬೇಕಾಗುತ್ತದೆ ಎನ್ನುವ ಬದಲಾವಣೆಯನ್ನು ತರಲಾಗಿದೆ. ಇದರ ಉದ್ದೇಶವೇನೆಂದರೆ, ಈ ಕೊಡುಗೆಯನ್ನು only Organized Sector ನಲ್ಲಿ ಇರುವವರು; people who pay ESI, PF ಪಾವತಿಸುತ್ತಿರುತ್ತಾರೆ; ಯಾರು ಕೈಗಾರಿಕೆಗಳಲ್ಲಿ ಕೆಲಸ ಮಾಡುತ್ತಿರುತ್ತಾರೆ; ಐವತ್ತಕ್ಕಿಂತ ಹೆಚ್ಚು ಕಾರ್ಮಿಕರನ್ನೊಳಗೊಂಡಿರುವಂತಹ ಕೈಗಾರಿಕೆಗಳು ಈ ಕೊಡುಗೆಯ ಲಭ್ಯತೆಯನ್ನು ಪಡೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. 2022ನೇ ಸಾಲಿನಲ್ಲಿ ನಡೆದಂತಹ Welfare Board ನಲ್ಲಿ ಈ ನಿರ್ಣಯವನ್ನು ಅಂಗೀಕರಿಸಲಾಗಿರುತ್ತದೆ. ಈ ನಿಧಿಯ ವತಿಯಿಂದ ಹಲವಾರು ಕಾರ್ಯಕ್ರಮಗಳನ್ನು ಅಂದರೇ, ಕಾರ್ಮಿಕರಿಗೆ ಮತ್ತು ಕಾರ್ಮಿಕರ ಕುಟುಂಬ ಸದಸ್ಯರಿಗೆ ಶೈಕ್ಷಣಿಕ, ಆರೋಗ್ಯ, ಪ್ರಸೂತಿ ಮತ್ತು ಅಪಘಾತಕ್ಕೆ ಒಳಗಾದ ಸಂದರ್ಭದಲ್ಲಿ ಆರ್ಥಿಕ ಸಹಾಯವನ್ನು ಮತ್ತು funeral expenses ನೀಡಲಾಗುತ್ತಿದೆ.

ಸನ್ಮಾನ್ಯ ಸಭಾಪತಿಯವರೇ, 2022-23ನೇ ಸಾಲಿನಲ್ಲಿ ಕೊಡುಗೆಯ ರೂಪದಲ್ಲಿ ಬಂದಿರುವ ಹಣಕ್ಕೂ ಮತ್ತು ನಾವು ವೆಚ್ಚ ಮಾಡುತ್ತಿರುವ ಮೊತ್ತಕ್ಕೂ ಬಹಳಷ್ಟು ವ್ಯತ್ಯಾಸಗಳು ಕಂಡು ಬಂದಿವೆ. Expenditure is more than the receipts. ಶಾಸಕರು ಸಮುದಾಯ ಭವನದ ನಿರ್ಮಾಣಕ್ಕಾಗಿ ಬೇಡಿಕೆಯನ್ನು ಸಲ್ಲಿಸುತ್ತಿದ್ದಾರೆ. ಕಾರ್ಮಿಕರ ಸಂಖ್ಯೆ ಸುಮಾರು 52 ಲಕ್ಷಕ್ಕೂ ಹೆಚ್ಚಾಗಿದೆ ಮತ್ತು ಆಡಳಿತಾತ್ಮಕ ವೆಚ್ಚಗಳು ಸಹ ಹೆಚ್ಚಾಗಿವೆ. ಆದ್ದರಿಂದ ನಾನು ಈ ಸದನದ ಮೂಲಕ ಮನವಿ ಮಾಡಿಕೊಳ್ಳುತ್ತಿರುವುದೇನೆಂದರೆ, ಈ ತಿದ್ದುಪಡಿಯನ್ನು ತರುತ್ತಿರುವುದರಿಂದ ನಮ್ಮ ಸರ್ಕಾರಕ್ಕೆ ಅನುಕೂಲವಾಗುವುದರ ಜೊತೆಗೆ ಅಸಂಘಟಿತ ವಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಕಾರ್ಮಿಕರಿಗೆ ಹೆಚ್ಚಿನ ಪ್ರಮಾಣದಲ್ಲಿ ಸಹಾಯ ಮಾಡುವುದಕ್ಕೆ ಸಹಾಯಕವಾಗುತ್ತದೆ ಎನ್ನುವ ಮಾತನ್ನು ಹೇಳುವುದಕ್ಕೆ ಬಯಸುತ್ತಿದ್ದೇನೆ. ಈ ತಿದ್ದುಪಡಿಗಳಿಗೆ ಸದನವು ತನ್ನ ಒಪ್ಪಿಗೆಯನ್ನು ನೀಡಬೇಕೆಂದು ಮನವಿ ಮಾಡಿಕೊಳ್ಳುತ್ತಿದ್ದೇನೆ.

**ಶ್ರೀ ಕೆ.ಎ.ತಿಪ್ಪೇಸ್ವಾಮಿ(ನಾಮ ನಿರ್ದೇಶಿತರು):-** ಸನ್ಮಾನ್ಯ ಸಭಾಪತಿಯವರೇ, ಕಟ್ಟಡ ಕಾರ್ಮಿಕ ಕಲ್ಯಾಣ ನಿಧಿಗೂ ಇದಕ್ಕೂ ಏನಾದರೂ ವ್ಯತ್ಯಾಸವಿದೆಯೇ? ಅದೇ ಪ್ರತ್ಯೇಕವಾಗಿರುವ ನಿಧಿಯಾಗಿದೆ; ಇದೇ ಪ್ರತ್ಯೇಕವಾಗಿರುವ ನಿಧಿಯಾಗಿದೆ. , ಕಟ್ಟಡ ಕಾರ್ಮಿಕ ಕಲ್ಯಾಣ ನಿಧಿ ಹಾಗೂ ಇದನ್ನು ಮೇಲುಸ್ತುವಾರಿ ಮಾಡುವುದಕ್ಕೆ ಯಾವುದಾದರು ಪ್ರತ್ಯೇಕ ಸಮಿತಿ ಇದೆಯೇ ಎನ್ನುವುದು ನನ್ನ ಪ್ರಶ್ನೆಯಾಗಿದೆ.

**ಶ್ರೀ ಟಿ.ಎ.ಶರವಣ(ವಿಧಾನಸಭಾ ಕ್ಷೇತ್ರ):-** ಸನ್ಮಾನ್ಯ ಸಭಾಪತಿಯವರೇ, ಕರ್ನಾಟಕ ಕಾರ್ಮಿಕ ಕಲ್ಯಾಣ ನಿಧಿ(ತಿದ್ದುಪಡಿ) ವಿಧೇಯಕ, 2024ಅನ್ನು ಮಾನ್ಯ ಸಚಿವರು ತಿದ್ದುಪಡಿಗಾಗಿ ಈ ಸನದದ ಮುಂದೆ ಮಂಡಿಸಿದ್ದಾರೆ.

ಅದನ್ನು ಸ್ವಾಗತಿಸುತ್ತಾ, ಕೆಲವು ವಿಚಾರಗಳನ್ನು ಮಾನ್ಯ ಸಚಿವರ ಗಮನಕ್ಕೆ ತರಲು ಬಯಸುತ್ತಿದ್ದೇನೆ. ಕಾರ್ಮಿಕರ ಕಲ್ಯಾಣ ಕಾರ್ಯಕ್ರಮಗಳನ್ನು ಕೈಗೊಳ್ಳಲು ಅಗತ್ಯವಾಗಿರುವ ಹಣಕಾಸನ್ನು ಒದಗಿಸಲು ಇದು ಸಹಾಯಕವಾಗುತ್ತದೆ. ಅದರ ಬಗ್ಗೆ ಯಾವುದೇ ತಕರಾರಿಲ್ಲ. ಪ್ರತಿ ತಿಂಗಳು ಕಲ್ಯಾಣ ನಿಧಿಗೆ ಬರುವಂತಹ ಹಣವನ್ನು ನೋಡಿಕೊಳ್ಳುವುದಕ್ಕೆ ಒಂದು ವಿಶೇಷ ಸೆಲ್ ಅನ್ನು ಸ್ಥಾಪನೆ ಮಾಡಿದರೆ, ಇದು ಇನ್ನಷ್ಟು ಬಲಿಷ್ಠವಾಗುತ್ತದೆ ಎನ್ನುವುದು ನನ್ನ ಸಲಹೆಯಾಗಿದೆ. ಕಾರ್ಮಿಕರ ಕಲ್ಯಾಣ ನಿಧಿ ಇತ್ತೀಚಿನ ದಿನಗಳಲ್ಲಿ ದುರುಪಯೋಗವಾಗುತ್ತಿದೆ. ಅದನ್ನು ತಡೆಯುವುದಕ್ಕಾಗಿ ಸೂಕ್ತ ನಿಯಮಗಳನ್ನು ರಚನೆ ಮಾಡಬೇಕಾಗುತ್ತದೆ. ಇತ್ತೀಚಿನ ದಿನಗಳಲ್ಲಿ ಈ ಇಲಾಖೆಯಲ್ಲಿ ಎಷ್ಟು ದೊಡ್ಡ ಪ್ರಮಾಣದಲ್ಲಿ ಭ್ರಷ್ಟಾಚಾರ ನಡೆಯುತ್ತಿದೆ ಎನ್ನುವುದರ ಬಗ್ಗೆ ಪತ್ರಿಕೆಗಳಲ್ಲಿ ಮತ್ತು ದೂರದರ್ಶನ ಮಾಧ್ಯಮಗಳಲ್ಲಿ ವರದಿಯಾಗುತ್ತಿದೆ. ಇದರ ಬಗ್ಗೆ ದೂರದರ್ಶನದವರು ಮೈಕ್ ಹಿಡಿದು ಮಾನ್ಯ ಸಚಿವರನ್ನು ಕೇಳಿದಾಗ, "ಇದು ನನ್ನ ಗಮನಕ್ಕೆ ಬಂದಿಲ್ಲ; ನಾನು ಹೋಗಿ ವಿಚಾರಣೆ ಮಾಡುತ್ತೇನೆ ಮತ್ತು ಅಧಿಕಾರಿಗಳ ಹಂತದಲ್ಲಿ ಚರ್ಚೆ ಮಾಡುತ್ತೇನೆ" ಎನ್ನುವ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸಿರುತ್ತಾರೆ. ಅದನ್ನು ಸಹ ನಾವು ದೂರದರ್ಶನದಲ್ಲಿ ನೋಡಿದ್ದೇವೆ. ಇಲಾಖೆಯ ಸಚಿವರಾಗಿರುವ ಇವರ ಗಮನಕ್ಕೂ ಬರದೇ, ಅಧಿಕಾರಿಗಳ ಭ್ರಷ್ಟಾಚಾರ ಬಹಳ ದೊಡ್ಡ ಪ್ರಮಾಣದಲ್ಲಿ ನಡೆಯುತ್ತಿದೆ. ಒಬ್ಬ ಲೇಬರ್ ಇನ್ಸ್‌ಪೆಕ್ಟರ್ ಯಾವುದೋ ಒಂದು ಕಂಪನಿಯೊಳಗೆ ಹೋಗಿ; ಅಲ್ಲಿಯೇ ಕುಳಿತುಕೊಂಡು ಆ ಕಂಪನಿಯವರಿಗೆ ಹಿಂಸೆಯನ್ನು ನೀಡುತ್ತಾನೆ. ಅವರಿಗೆ ಕಾನೂನಿನ ಬಗ್ಗೆ ಅರಿವು ಇರುವುದಿಲ್ಲ ಮತ್ತು ಏನು ಮಾಡಬೇಕೆನ್ನುವ ತಿಳುವಳಿಕೆ ಸಹ ಇರುವುದಿಲ್ಲ.

ಸನ್ಮಾನ್ಯ ಸಭಾಪತಿಯವರೇ, ಇಲಾಖೆಯವರು ಕಾರ್ಮಿಕರ ಕುಂದುಕೊರತೆಗಳ ಬಗ್ಗೆ ಮತ್ತು ಅವರ ಕಲ್ಯಾಣವನ್ನು ಕೈಗೊಳ್ಳುವ ಬಗ್ಗೆ ಅರಿವು ಇರುವಂತಹ ಒಬ್ಬ ತಜ್ಞರನ್ನು ನೇಮಿಸಿಕೊಂಡಿರುತ್ತಾರೆ, ಇಲ್ಲವೆಂದು ಹೇಳುವುದಿಲ್ಲ. ಆದರೂ ಕೂಡ ಸಾರ್ವಜನಿಕವಾಗಿ ತಿಳುವಳಿಕೆಯನ್ನು ಮೂಡಿಸುವಂತಹ ಪ್ರತ್ಯೇಕ ಸೆಲ್ ಕಾರ್ಮಿಕ ಇಲಾಖೆಯಲ್ಲಿದೆಯೇ ಎನ್ನುವುದು ನನ್ನ ಪ್ರಶ್ನೆಯಾಗಿದೆ. ಮಾನ್ಯ ಸದಸ್ಯರಾದ ಶ್ರೀ ಕೆ.ಎ.ತಿಪ್ಪೇಸ್ವಾಮಿಯವರು "ಇದು ಕಟ್ಟಡ ಕಾರ್ಮಿಕ ಕಲ್ಯಾಣ ನಿಧಿಯೇ ಅಥವಾ ಬೇರೆಯೇ" ಎನ್ನುವ ಮಾತನ್ನು ಕೇಳಿದ್ದಾರೆ. ಇದರ ಬಗ್ಗೆ ಜಾಗೃತಿಯನ್ನು ಮೂಡಿಸುವಂತಹ ಕೆಲಸವನ್ನು ಮಾಡಬೇಕಾಗುತ್ತದೆ. ಒಂದು ಗಾರ್ಮೆಂಟ್ಸ್ ಆಗಿರಬಹುದು; ಒಂದು ಕಂಪನಿಯಾಗಿರಬಹುದು ಅಥವಾ ಯಾವುದಾದರೊಂದು ಕಾರ್ಯ ಸಂಸ್ಥೆಯಾಗಿರಬಹುದು ಅಲ್ಲಿ ಎಷ್ಟು ಜನ ಕಾರ್ಮಿಕರಿದ್ದಾರೆ, ಎಷ್ಟು ಜನ ಕಾರ್ಮಿಕರಿದ್ದರೆ ಏನು ಮಾಡಬೇಕು; ಪ್ರಾಥಮಿಕ ಹಂತದಲ್ಲಿ ಯಾವಯಾವ ನಿಯಮಗಳನ್ನು ಅನುಸರಿಸಬೇಕು ಎನ್ನುವುದರ ಬಗ್ಗೆ ಕಾರ್ಮಿಕ ಇಲಾಖೆಯ ಅಧಿಕಾರಿಗಳು ಸಾರ್ವಜನಿಕರಲ್ಲಿ ಅರಿವನ್ನುಂಟು ಮಾಡಬೇಕಾಗುತ್ತದೆ. ಆನಂತರ ಸರ್ಕಾರ ಕಾನೂನನ್ನು ಬಿಗಿ ಮಾಡಬಹುದು. ಅದರ ಬಗ್ಗೆ ನಮ್ಮ ತಕರಾರು ಇಲ್ಲ.

ಸನ್ಮಾನ್ಯ ಸಭಾಪತಿಯವರೇ, ಈ ತಿದ್ದುಪಡಿಯ ಮೂಲಕ ಸಂಗ್ರಹಿಸುವ ಈ ಹಣ ದುರುಪಯೋಗವಾಗದಂತೆ ನೋಡಿಕೊಳ್ಳಲು ಒಂದು ಸೆಲ್ ಅಥವಾ ಒಂದು ಟಾಸ್ಕ್‌ಫೋರ್ಸ್ ರಚನೆ ಮಾಡಬೇಕೆನ್ನುವುದು ನನ್ನ ಒತ್ತಾಯವಾಗಿದೆ.

ಸನ್ಮಾನ್ಯ ಸಭಾಪತಿಯವರೇ, ನಾನು ಈಗ ಭರವಸೆಗಳ ಸಮಿತಿಗೆ ಅಧ್ಯಕ್ಷನಾಗಿದ್ದೇನೆ. ಹಿಂದೆ PAC (Public Accounts Committee) ಕಮಿಟಿಯ ಸದಸ್ಯನಾಗಿ ಕಾರ್ಯವನ್ನು ನಿರ್ವಹಿಸಿದ್ದೆ. ಆ ಸಂದರ್ಭದಲ್ಲಿ ಬಂದಂತಹ ಒಂದು ಪ್ರಕರಣದ ಬಗ್ಗೆ ಇಲ್ಲಿ ಉಲ್ಲೇಖ ಮಾಡುವುದಕ್ಕೆ ಬಯಸುತ್ತಿದ್ದೇನೆ. ಕೆ.ಐ.ಎ.ಡಿ.ಬಿ.,ಯಲ್ಲಿರುವ ಇಲಾಖೆಯ ಅಧಿಕಾರಿಗಳು ತಮ್ಮಲ್ಲಿರುವ 12 ಕೋಟಿ ರೂಪಾಯಿಗಳಲ್ಲಿ ಆರು ಕೋಟಿ ರೂಪಾಯಿಗಳನ್ನು Fixed Deposit ಎಂದು ಒಂದು ಬ್ಯಾಂಕ್‌ನಲ್ಲಿಡುತ್ತಾರೆ; ಮತ್ತೊಂದು ಬ್ಯಾಂಕ್‌ನಲ್ಲಿ ಆರು ಕೋಟಿ ರೂಪಾಯಿಗಳನ್ನು ಬಡ್ಡಿ ಹೆಚ್ಚಿಗೆ ಬರುತ್ತದೆ ಎನ್ನುವ ಕಾರಣಕ್ಕಾಗಿ Fixed Deposit ಆಗಿ ಇಡುತ್ತಾರೆ. ಅವರುಗಳು ಎಫ್.ಡಿ., ಇಟ್ಟಿರುವ ಹಣಕ್ಕೆ ಬಾಂಡ್ ಅನ್ನು ತೆಗೆದುಕೊಂಡಿರುವುದಿಲ್ಲ; ಕಲರ್ ಜೆರಾಕ್ಸ್ ತೆಗೆದುಕೊಂಡಿರುತ್ತಾರೆ. ಈ ಘಟನೆ ನಡೆದು ಹತ್ತು ವರ್ಷಗಳಾದ ನಂತರ ಸಿ.ಎ.ಜಿ., ವರದಿ ಬಂದ ಮೇಲೆ ಇದು PAC ಸಮಿತಿಯ ಗಮನಕ್ಕೆ ಬರುತ್ತದೆ. ಪಂಜಾಬ್ ನ್ಯಾಷನಲ್ ಬ್ಯಾಂಕ್‌ನವರು ಈ ರೀತಿಯ ಕೆಲಸವನ್ನು ಮಾಡಿರುತ್ತಾರೆ. ಆಗ ಸಮಿತಿಯು ಎರಡು-ಮೂರು ಸಭೆಗಳನ್ನು ನಡೆಸಿ, ಬಹಳ ತೀಕ್ಷ್ಣವಾಗಿ ಸೂಚನೆಗಳನ್ನು ಕೊಟ್ಟಾಗ, ಆ ಬ್ಯಾಂಕ್‌ನ ವ್ಯವಸ್ಥಾಪಕ ನಿರ್ದೇಶಕ " ನೀವು ಏನು ಕಿತ್ತುಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ" ಎನ್ನುವ ಪದ ಬಳಕೆಯನ್ನು ಮಾಡಿರುತ್ತಾನೆ. ಇದನ್ನು ಮಾನ್ಯ ಮುಖ್ಯಮಂತ್ರಿಗಳ ಮತ್ತು ಹಣಕಾಸು ಇಲಾಖೆಯವರ ಗಮನಕ್ಕೆ ತಂದು ಆ ಬ್ಯಾಂಕ್‌ನ ವ್ಯವಹಾರಗಳನ್ನು ಸರ್ಕಾರದ ವತಿಯಿಂದ ಸ್ಥಗಿತಗೊಳಿಸಲಾಗುತ್ತದೆಂದು ಒಂದು ನೋಟೀಸ್ ಜಾರಿಗೊಳಿಸಿದ ಮೇಲೆ ಸದರಿ ಬ್ಯಾಂಕ್‌ನವರು ಸಮಿತಿಯ ಮುಂದೆ ಬರುತ್ತಾರೆ. ಇಂತಹ ಘಟನೆಗಳು ನಡೆಯುತ್ತವೆ ಎನ್ನುವುದಕ್ಕಾಗಿ ಈ ಮಾತುಗಳನ್ನು ಹೇಳುತ್ತಿದ್ದೇನೆ. ಮೋಸ ಹೋಗುವವರು ಇರುವವರೆವಿಗೂ ಮೋಸ ಮಾಡುವವರು ಇದ್ದೇ ಇರುತ್ತಾರೆ. ಈ ವ್ಯಾಪ್ತಿಗೆ ಬರುವಂತಹ ಕಾರ್ಮಿಕರು ಬಹಳ ಬಡವರಾಗಿರುತ್ತಾರೆ. ಅವರಿಗೆ ಯಾವ ಹಂತದಲ್ಲಿಯೂ ಮೋಸವಾಗಬಾರದು ಆ ರೀತಿಯಲ್ಲಿ ಇದನ್ನು ಎಚ್ಚರಿಕೆಯಿಂದ ನಿಭಾಯಿಸುವ ನಿಟ್ಟಿನಲ್ಲಿ ಒಂದು ಸೆಲ್ ಅನ್ನು ರಚನೆ ಮಾಡಬೇಕೆನ್ನುವುದು ನನ್ನ ಸಲಹೆಯಾಗಿದೆ.

**ಶ್ರೀ ಕೇಶವ ಪ್ರಸಾದ್ ಎಸ್. (ವಿಧಾನಸಭಾ ಕ್ಷೇತ್ರ):-** ಸನ್ಮಾನ್ಯ ಸಭಾಪತಿಯವರೇ, ಕರ್ನಾಟಕ ಕಾರ್ಮಿಕ ಕಲ್ಯಾಣ ನಿಧಿ(ತಿದ್ದುಪಡಿ) ವಿಧೇಯಕ, 2024ಅನ್ನು ನಾನು ಸ್ವಾಗತಿಸುತ್ತಿದ್ದೇನೆ. ಆದರೆ, ಕೆಲವೊಂದು ಸ್ಪಷ್ಟೀಕರಣಗಳನ್ನು ಮಾನ್ಯ ಸಚಿವರಿಂದ ನಿರೀಕ್ಷಿಸುತ್ತಿದ್ದೇನೆ. ಇದು ಒಳಗೊಂಡಿರುವ ಘಟಕಗಳ ಸಂಖ್ಯೆ ಎಷ್ಟು; ಇದರಲ್ಲಿ ಎಷ್ಟು ಜನ ಕಾರ್ಮಿಕರು ಇದ್ದಾರೆ ಮತ್ತು ಇವರುಗಳಿಂದ ಸಂಗ್ರಹವಾಗುವಂತಹ ಮೊತ್ತದ ಪ್ರಮಾಣವೆಷ್ಟು ಎನ್ನುವ ಪ್ರಶ್ನೆಗಳನ್ನು ಮಾನ್ಯ ಸಚಿವರಲ್ಲಿ ಕೇಳುವುದಕ್ಕೆ ಬಯಸುತ್ತಿದ್ದೇನೆ. ಕಾರ್ಮಿಕರಿಗೆ ನೀಡಲಾಗುವ ಅನುಕೂಲತೆಗಳನ್ನು ಹೆಚ್ಚು ಮಾಡಲಾಗುತ್ತದೆ ಎನ್ನುವ ವಿವರವನ್ನು ಮಾನ್ಯ ಸಚಿವರು ನೀಡಿದ್ದಾರೆ, ಯಾವಯಾವ ಸೌಲಭ್ಯಗಳನ್ನು ಹೆಚ್ಚು ಮಾಡಲಾಗುತ್ತದೆ ಅಥವಾ ಯಾವ ಅಂಶಗಳನ್ನು ಉನ್ನತೀಕರಣಗೊಳಸಲಾಗುತ್ತದೆ ಎನ್ನುವುದರ ಬಗ್ಗೆ ಮಾನ್ಯ ಸಚಿವರು ಸ್ಪಷ್ಟೀಕರಣವನ್ನು ನೀಡಬೇಕಾಗಿದೆ. ಆಸ್ಪತ್ರೆ ಸೌಲಭ್ಯಗಳನ್ನು ಉತ್ತಮಗೊಳಸಲಾಗುತ್ತದೆಂದು ಹೇಳುತ್ತಿದ್ದಾರೆ, ಆದರೆ, ನನ್ನ ಅರಿವಿಗೆ ಬಂದಂತೆ ಹೇಳುವುದಾದರೇ, ಇ.ಎಸ್.ಐ., ಆಸ್ಪತ್ರೆಗಳು 7X365 ಕಾಲ ಕೆಲಸ ಮಾಡುವುದಿಲ್ಲ. ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳ ರೀತಿಯಲ್ಲಿ ಅದು ಇಲ್ಲ. ಯಾವ

ಅನುಕೂಲತೆಗಳನ್ನು ಹೆಚ್ಚು ಮಾಡುವುದಕ್ಕಾಗಿ ಈ ಹಣವನ್ನು ಬಳಕೆ ಮಾಡಲಾಗುತ್ತದೆ ಮತ್ತು grievances redressal ಮಾಡುವುದಕ್ಕೆ ಯಾವುದಾದರು ಒಂದು ಸೆಲ್ ರಚನೆ ಮಾಡಲಾಗಿದೆಯೇ; ಆನ್‌ಲೈನ್ ದೂರುಗಳನ್ನು ನೀಡಬಹುದೇ; ಅದಕ್ಕಾಗಿ ಹೆಲ್ಪ್‌ಲೈನ್ ನಂಬರ್ ಕೊಡಲಾಗಿದೆಯೇ; ಅವರದೇ ಆಗಿರುವ ವೆಬ್‌ಸೈಟ್ ಇದೆಯೇ? ಯಾರಾದರು ಆ ಡೊಮೈನ್‌ಗೆ ಹೋಗಿ ಮಾಹಿತಿಯನ್ನು ಅಥವಾ ಸಲಹೆಗಳನ್ನು ನೀಡಬಹುದೇ ಎನ್ನುವುದರ ಬಗ್ಗೆ ಮಾನ್ಯ ಸಚಿವರಿಂದ ಸ್ಪಷ್ಟೀಕರಣವನ್ನು ಬಯಸುತ್ತಿದ್ದೇನೆ.

**ಶ್ರೀ ಐವನ್ ಡಿ'ಸೋಜಾ(ವಿಧಾನಸಭಾ ಕ್ಷೇತ್ರ):-** ಸನ್ಮಾನ್ಯ ಸಭಾಪತಿಯವರೇ, ಸುಮಾರು 15 ಕೋಟಿ ರೂಪಾಯಿಗಳಷ್ಟು ಹೆಚ್ಚು ವೆಚ್ಚ ಬರುತ್ತದೆಂದು ಮಾನ್ಯ ಸಚಿವರು ತಂದಿರುವ ತಿದ್ದುಪಡಿ ವಿಧೇಯಕದಲ್ಲಿ ತಿಳಿಸಿದ್ದಾರೆ. ಇತ್ತೀಚಿಗೆ ಸ್ಮಾರ್ಟ್ ಕಾರ್ಡ್‌ಗಳನ್ನು ನೀಡಿದಂತಹ ಸಂದರ್ಭದಲ್ಲಿ ಅತೀ ಹೆಚ್ಚು ಕಾರ್ಡ್‌ಗಳು ಬೋಗಸ್ ಎಂದು ಕಂಡು ಬಂದಿವೆ ಎನ್ನುವ ವಿಚಾರವನ್ನು ನಾನು ಪತ್ರಿಕೆಗಳಲ್ಲಿ ಓದಿ ಮತ್ತು ಕಾರ್ಮಿಕರ ಒಡನಾಟದಿಂದ ತಿಳಿದುಕೊಂಡಿದ್ದೇನೆ. ಹಿಂದೆ ಕೊಡುತ್ತಿದ್ದ ಹಣ ಸಹ ದುರುಪಯೋಗವಾಗುತ್ತಿತ್ತು. ಆದರೂ ಸಹ ಈಗ ಅದರ ಮೊತ್ತವನ್ನು ಹೆಚ್ಚು ಮಾಡಲಾಗಿದೆ. ಕಾರ್ಮಿಕರು ಮತ್ತು ಉದ್ಯೋಗದಾತ ಸಂಸ್ಥೆಯವರು ಹಾಗೂ ರಾಜ್ಯ ಸರ್ಕಾರದವರು ಮೂರೂ ಜನರು ಸೇರಿ ಕೊಡುವಂತಹ ಹಣ ಇದು. ಆದ್ದರಿಂದ ಕಲ್ಯಾಣ ಕಾರ್ಯಕ್ರಮಗಳನ್ನು ರೂಪಿಸುವಾಗ, ಶೇಕಡಾ 85ಕ್ಕೂ ಹೆಚ್ಚು ಜನರಿರುವ ಅಸಂಘಟಿತ ಕಾರ್ಮಿಕರಿಗೆ ಯಾವ ರೀತಿಯಲ್ಲಿ ಇದರ ಉಪಯೋಗವನ್ನು ತಲುಪಿಸಲಾಗುತ್ತದೆ ಎನ್ನುವುದು ನನ್ನ ಪ್ರಶ್ನೆಯಾಗಿದೆ. ಅಸಂಘಟಿತ ಕಾರ್ಮಿಕರಿಗೆ ಪಿಂಚಣಿಯನ್ನು ನೀಡಲಾಗುತ್ತಿತ್ತು. ರಾಜ್ಯ ಸರ್ಕಾರ, ಕಾರ್ಯ ಸಂಸ್ಥೆಯವರು ಮತ್ತು ಕಾರ್ಮಿಕ ಈ ಮೂರು ಜನರು ಒಂದಿಷ್ಟು ಪ್ರಮಾಣದಲ್ಲಿ ಹಣವನ್ನು ಹಾಕಿ ಪಿಂಚಣಿಯನ್ನು ನೀಡಲಾಗುತ್ತಿತ್ತು. ಈ ಕಾರ್ಯಕ್ರಮಕ್ಕಾಗಿ ಈಗ ಹೆಚ್ಚಿಗೆ ಬರುವಂತಹ ಹಣವನ್ನು ಬಳಕೆ ಮಾಡಿಕೊಳ್ಳಲಾಗುತ್ತದೆಯೇ; ಇದರಿಂದ ಅವರಿಗೇನಾದರೂ ಉಪಯೋಗವಾಗುತ್ತದೆಯೇ ಎನ್ನುವುದು ನನ್ನ ಮತ್ತೊಂದು ಪ್ರಶ್ನೆಯಾಗಿದೆ.

**ಶ್ರೀ ಸಂತೋಷ್ ಎಸ್.ಲಾಡ್ (ಕಾರ್ಮಿಕ ಸಚಿವರು):-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಕೆ.ಎ.ತಿಪ್ಪೇಸ್ವಾಮಿಯವರು ಇದು ಯಾವ ಬೋರ್ಡ್‌ನ ವ್ಯಾಪ್ತಿಗೆ ಬರುತ್ತದೆ ಎನ್ನುವ ಪ್ರಶ್ನೆಯನ್ನು ಕೇಳಿದ್ದಾರೆ.

(ಮುಂದು)

(983) 18.12.2024 7.30 ಪಿಕೆ:ಎಂಡಿ

**ಶ್ರೀ ಸಂತೋಷ್ ಎಸ್. ಲಾಡ್ (ಮುಂದು):**

ಇದು Construction Board ಗೆ ಬರುವುದಿಲ್ಲ. ನಮ್ಮಲ್ಲಿ ಇದು Labour Department Organized Board ಗೆ ಬರುತ್ತದೆ. ಈ Organized Board ನಲ್ಲಿ ವಿಶೇಷವಾಗಿ ಸುಮಾರು 52 ಲಕ್ಷ ಜನ ಸದಸ್ಯರಾಗಿದ್ದಾರೆ. ರೂ.50 ದುಡ್ಡನ್ನು ವರ್ಷಕ್ಕೊಂದು ಸಲ ಕೊಡುತ್ತಾರೆ. Employee Rs. 50/- Employer Rs. 100/- and State Government Rs. 50/- ಕೊಡಬೇಕು ಎನ್ನುವ ಉದ್ದೇಶದಿಂದ ಈ

ವಿಧೇಯಕವನ್ನು ತಂದಿದ್ದೇವೆ. Employer, Employee and State Government everybody pays together ಇದರ ಮುಖಾಂತರ ಎಲ್ಲವನ್ನೂ ಸೇರಿಸಿದರೆ ನಮಗೆ ವರ್ಷಕ್ಕೆ ರೂ. 105 ಕೋಟಿ ಹಣ ಬರುತ್ತದೆ. ಮಾನ್ಯ ಶರವಣರವರು, ಇದಕ್ಕೆ ಒಂದು ಸಮಿತಿ ಮಾಡಬೇಕು ಎಂದು ಹೇಳಿದರು. ಯಾರು ಇಎಸ್ಐ, ಪಿಎಫ್ ಕಟ್ಟುತ್ತಿದ್ದಾರೋ ಅವರ ಮಕ್ಕಳಿಗೆ ಸೌಲಭ್ಯ ಕೊಡುವುದಕ್ಕೆ ನಾವು DBT (Direct Benefit Transfer) ಮಾಡುತ್ತೇವೆ. ಅಂದರೆ, when any beneficiary makes an application, for example, if we have to give him educational benefits, ಯಾವ ಶಾಲೆಯಲ್ಲಿ ಓದುತ್ತಿದ್ದೇನೆ ಎಂದು ಹೇಳುತ್ತಾರೋ ಆ ಶಾಲೆಯಿಂದ ನಮಗೆ online ಮಾಹಿತಿ ಬರುತ್ತದೆ. ನಂತರ ಅದು ಬೋರ್ಡ್‌ಗೆ ಬರುತ್ತದೆ. ಬೋರ್ಡ್‌ನಲ್ಲಿ ಪರಿಶೀಲನೆ ಮಾಡಿ, ಇಎಸ್ಐ, ಪಿಎಫ್ ಕಟ್ಟುತ್ತಿದ್ದಾರೋ ಇಲ್ಲವೋ ಎನ್ನುವುದು ಗೊತ್ತಾಗುತ್ತದೆ. ಅಲ್ಲಿಂದ DBT ಆಗುತ್ತದೆ. ಈ ಹಣದಲ್ಲಿ ಯಾವುದೇ ರೀತಿಯಾದ ಅವ್ಯವಹಾರ ಆಗುವುದು, ಭ್ರಷ್ಟಾಚಾರ ಆಗುವಂಥದ್ದು ಆಗುವುದಿಲ್ಲ. As far as this bill is concerned, this is purely to the people who are working in Organized Sector. Organized Sector, ಅಂದರೆ ಯಾರು Industries, Advanced Industries ನಲ್ಲಿ ಕೆಲಸ ಮಾಡುತ್ತಿದ್ದಾರೋ, who pay ESI and PF, ಅವರಿಗೆ ಸಂಬಂಧಪಟ್ಟಂಥ ವಿಧೇಯಕ ಇದಾಗಿದೆ.

ಮಾನ್ಯ ಸದಸ್ಯರಾದ ಶ್ರೀ ಕೇಶವ ಪ್ರಸಾದ್‌ರವರು ಇಎಸ್ಐ ಬಗ್ಗೆ ಮಾತನಾಡಿದ್ದಾರೆ. ನಾನು ಮೊನ್ನೆ ತಾನೇ ಕೇಂದ್ರ ಸಚಿವರಾದ ಮಾನ್ಯ ಶೋಭಾ ಕರಂದ್ಲಾಜೆ ಅವರನ್ನು ಭೇಟಿಯಾಗಿದ್ದೆ. The people who are paying money come under ESI. ನಮ್ಮಲ್ಲಿರುವ ಇಎಸ್ಐ ಆಸ್ಪತ್ರೆಯನ್ನು Multi Speciality Hospital ಹಂತಕ್ಕೆ ತೆಗೆದುಕೊಂಡು ಹೋಗಬೇಕು ಇಲ್ಲದೇ ಇದ್ದರೆ ಆಸ್ಪತ್ರೆಯನ್ನು ಮುಚ್ಚಬೇಕಾಗುತ್ತದೆ. ಬಹಳಷ್ಟು ಜನ ಇಎಸ್ಐ IP holders ಇದ್ದಾರೆ, they prefer to go to Private Hospitals. ನಾವು ಒಟ್ಟು ರೂ. 150 ಕೋಟಿಯಷ್ಟು ಸಂಬಳ ಕೊಡುತ್ತೇವೆ, ರೂ. 150 ಕೋಟಿಯಷ್ಟು ಔಷಧಗಳನ್ನು ಕೊಡುತ್ತೇವೆ, ರೂ. 150 ಕೋಟಿಯಷ್ಟು reimbursement ಕೂಡ ಮಾಡುತ್ತಿದ್ದೇವೆ. ನಮ್ಮಲ್ಲಿ Accredited Hospitals ಇವೆ. ಕೇಂದ್ರದಲ್ಲಿರುವ ಸುಮಾರು ರೂ.1,35,000 ಕೋಟಿ ಪಿಎಫ್ ಮೊತ್ತ ಇದೆ. ನಾನು ಕೇಂದ್ರ ಸಚಿವರಿಗೆ, ನಮ್ಮಲ್ಲಿ 52 ಲಕ್ಷ ಜನ IP holders ಇದ್ದಾರೆ, ಅವರು ಕಡ್ಡಾಯವಾಗಿ ಹೊರಗೆ ಹೋಗ ಕೂಡದು ಎಂದರೆ ಇಲ್ಲಿರುವ ಆಸ್ಪತ್ರೆಗಳನ್ನು ಮೇಲ್ದರ್ಜೆಗೆ ತೆಗೆದುಕೊಂಡು ಹೋಗಬೇಕೆಂಬುದನ್ನು ಹೇಳಿದ್ದೇನೆ. 52 ಲಕ್ಷ x 4 ಅಂದರೆ ಸುಮಾರು 2 ಕೋಟಿ ಜನ ಆ ಕುಟುಂಬಗಳಲ್ಲಿ ಇರುತ್ತಾರೆ. ಯಾರೂ ಹೊರಗೆ ಹೋಗ ಕೂಡದು ಎಂದು ಆ ರೀತಿಯ ಆಸ್ಪತ್ರೆ ಮಾಡಬೇಕೆಂದು ಮಾನ್ಯ ಕೇಂದ್ರ ಸಚಿವರಿಗೆ ಮನವಿ ಮಾಡಿದ್ದೇನೆ. ಮಾನ್ಯ ಸದಸ್ಯರಾದ ಕೇಶವ ಪ್ರಸಾದ್‌ರವರು at any given point of time, they will not have any problem. ನಮ್ಮಲ್ಲಿ Accredited Hospitals ಇವೆ. ಎಲ್ಲಾ ಕಡೆ Accredited Hospitals ಇದ್ದಾಗ ವರ್ಷಕ್ಕೆ ರೂ. 150 ಕೋಟಿಯಷ್ಟು ರೀಎಂಬರ್ಸ್‌ಮೆಂಟ್ ಕೊಡುತ್ತಿದ್ದೇವೆ. Any person who has insured, ಯಾರು ಇಎಸ್ಐ, ಪಿಎಫ್ ಅನ್ನು ಕಟ್ಟುತ್ತಿದ್ದಾರೋ Accredited Hospitals ಇರುವುದರಿಂದ ಅವರು ನೇರವಾಗಿ ಎಲ್ಲಿ

ಬೇಕಾದರೂ ಹೋಗುತ್ತಾರೆ. ಬಹಳಷ್ಟು ಜನ ನಮ್ಮ ಹತ್ತಿರ ಬಂದು, ನಮಗೆ ಇಲ್ಲಿ ಬೇಡ; ಬೇರೆ ಕಡೆ ಹೋಗುತ್ತೇವೆ ಎಂದು ಸ್ಲಿಪ್ ಬರೆಸಿಕೊಂಡು ಹೋಗುತ್ತಾರೆ. ನಮ್ಮಲ್ಲಿರುವಂತಹ foot fall, occupancy ನೋಡಿದರೆ, our occupancy is not more than 50 to 52 percent. The reason is clinical surgeries, small issues ಬಿಟ್ಟರೆ, major arrangements, major diseases ಗಳಿಗೆ ಸಂಬಂಧಪಟ್ಟಂತೆ they always prefer to go to Private Hospitals. ಮಾನ್ಯ ಸಭಾಪತಿಗಳೆ, ನಮ್ಮಲ್ಲಿ Helpline number display ಕೂಡ ಇದೆ. There is Helpline number for Construction Board also. ESI related issues ನಮಗೆ ಯಾವುದೂ ಬರುವುದಿಲ್ಲ. Generally, we don't have issues. Helpline number ಕೂಡ ನಮ್ಮಲ್ಲಿ ಇದೆ. Whichever enquiries arrive we dispose it through online. ನಮ್ಮಲ್ಲಿರುವ Welfare Board ಏನಿದೆ, it is constituted. Welfare Board ನಲ್ಲಿ ಸಂಬಂಧಪಟ್ಟ ನಮ್ಮ ಇಲಾಖೆಯ ಅಧಿಕಾರಿಗಳು ಇರುತ್ತಾರೆ. ಬೇರೆ ಬೇರೆ Organized Boardನಲ್ಲಿರುವಂತಹ ನೌಕರರನ್ನು ತೆಗೆದುಕೊಂಡು board constitute ಮಾಡಿ ಈ ರೀತಿಯ ಸ್ಕೀಮ್‌ಗಳನ್ನು ಮಾಡುತ್ತಿದ್ದೇವೆ. ಮಾನ್ಯ ಸದಸ್ಯರಾದ ಶರವಣರವರು, ಭ್ರಷ್ಟಾಚಾರದ ಬಗ್ಗೆ ಮಾತನಾಡಿದರು. ನಾಳೆ ನೀವು ಮಂತ್ರಿಗಳಾಗುವಂತಹ ಸಂದರ್ಭದಲ್ಲಿ ಯಾರೋ ಒಬ್ಬರು ನಿಮ್ಮ ಎದುರಿಗೆ ಬಂದು ಮೈಕ್ ಹಿಡಿದು, ಏನಾಗಿದೆ ಎಂದು ಕೇಳುತ್ತಾರೆ. ಅವರು ಕೇವಲ ನಮ್ಮ ವಿಷಯಕ್ಕೆ ಸಂಬಂಧಪಟ್ಟಂತೆ ಮಾತ್ರ ಕೇಳುವುದಿಲ್ಲ. ಕರ್ನಾಟಕ ರಾಜ್ಯದಲ್ಲಿ ಆಗಿರಬಹುದಾದ ಯಾವುದಾದರೂ ವಿಷಯದ ಬಗ್ಗೆ sudden ಆಗಿ ಬಂದು ಕೇಳುತ್ತಾರೆ. ನನ್ನ ಇಲಾಖೆಯ ಬಗ್ಗೆ ಕೇಳಿದರೆ ನಾನು ಸಮರ್ಪಕವಾಗಿ ಉತ್ತರ ಕೊಡುತ್ತೇನೆ. ನನ್ನ ಇಲಾಖೆಗೆ ಸಂಬಂಧಪಟ್ಟಂತೆ 99 percent I am very aware. You can ask any questions about my department, whether it is Organized Board or Unorganized Board, Construction Board or any labour policies, anything you can ask me from Gratuity to Provident Fund. Anything you ask, I am ready to answer. As far as my department is concerned, 100 percent I will be answering them. ಬೇರೆ ಯಾವುದೋ ಇಲಾಖೆಯ ಬಗ್ಗೆ sudden ಆಗಿ ಕೇಳಿದಾಗ, ಆ ಕುರಿತು ಕೇಳಿ ಹೇಳುತ್ತೇನೆ ಎನ್ನುವ ಮಾತನ್ನು ಹೇಳಿರುತ್ತೇನೆ. ಈ ವಿಚಾರದಲ್ಲಿ ಮಾನ್ಯ ಸದಸ್ಯರಿಗೆ ಗೊಂದಲವಾಗಿರಬಹುದು. As far as my department is concerned, corruption ಇದೆ ಎಂದು ಹೇಳುತ್ತಿದ್ದೀರಿ. ಮಾನ್ಯ ಸಭಾಪತಿಗಳೆ, ನಾವು ಯಾವುದೂ developmental works, tender ಮಾಡುವುದಿಲ್ಲ, Construction Board ಬಿಟ್ಟರೆ, ಬಹುತೇಕ ನಾವು policy making ನಲ್ಲಿರುತ್ತೇವೆ. ಇಎಸ್‌ಐ ಕಟ್ಟಿದ್ದಾರೋ ಇಲ್ಲವೋ, ಪಿಎಫ್ ಕಟ್ಟಿದ್ದಾರೋ ಇಲ್ಲವೋ, minimum wages ಕಟ್ಟಿದ್ದಾರೋ ಇಲ್ಲವೋ ಎಂದು ನೋಡುವಂತಹ ಕೆಲಸವನ್ನು ನಮ್ಮ ಇಲಾಖೆ ಮಾಡುತ್ತದೆ. ಕಾರ್ಮಿಕ ಇಲಾಖೆಯಲ್ಲಿ ಇಂಥದ್ದು ನಡೆದಿದೆ ಎಂದು specific ಆಗಿ ಹೇಳಿದರೆ ಆ ಕುರಿತು ನಾನು ಸಂಪೂರ್ಣವಾದ ಉತ್ತರವನ್ನು ಕೊಡುತ್ತೇನೆ. If there is any specific question by the member,

I am able to answer it. Because, you made an allegation in the Assembly saying that ಬಹಳ ದೊಡ್ಡ ಭ್ರಷ್ಟಾಚಾರ ನಡೆದಿದೆ ಎಂದು ಹೇಳಿದಿರಿ. ಅಂಥದ್ದನ್ನು specific ಆಗಿ ಹೇಳಿದರೆ, I am ready to answer right now. ಇಂತಹ ಒಂದು ಕಾರ್ಯಕ್ರಮ ನಿಮ್ಮ ಇಲಾಖೆಯಿಂದ ಆಗಿದೆ, ಇಂತಹ ಭ್ರಷ್ಟಾಚಾರ ನಡೆದಿದೆ ಎಂದು ಹೇಳಿದರೆ I could have answered it. ಆದರೆ ನೀವು ಜನರಲ್ ಆಗಿ ಹೇಳಿದಿರಿ. If there are any specific questions, you let me know. I am ready to answer that. ಮಾನ್ಯ ಸಭಾಪತಿಗಳೆ, ಮಾನ್ಯ ಸದಸ್ಯರಾದ ಐವನ್ ಡಿ'ಸೋಜಾರವರು Unorganized Sector ಬಗ್ಗೆ ಕೇಳಿದರು. Organized and Unorganized Board ಗೆ ಬಹಳ ವ್ಯತ್ಯಾಸ ಇದೆ. ಇಡೀ ಭಾರತ ದೇಶದಲ್ಲಿ 90% ಅಷ್ಟು Unorganized Sector ಗೆ ಬರುತ್ತಾರೆ. In Karnataka 85 percent of the people come under the Unorganized Sector. ಮೊನ್ನೆ ಮುಖ್ಯಮಂತ್ರಿಯವರ ಅಪ್ಪಣೆ ಮೇರೆಗೆ ಅವರ ಜೊತೆ ಮಾತುಕತೆ ಮಾಡಿ, ನಮ್ಮ ಸರ್ಕಾರ ಬಂದ ನಂತರ 25 Unorganized Sector ನವರಿಗೆ ಕಾರ್ಡ್ ಕೊಡಬೇಕು ಎಂದು social security ಯಲ್ಲಿ ಮೊದಲನೆ ಬಾರಿಗೆ ಪ್ರಾರಂಭ ಮಾಡುತ್ತಿದ್ದೇವೆ. ಅ ಲೆಮಾರಿ ಜನಾಂಗದವರು, ಬೀದಿ ವ್ಯಾಪಾರಿಗಳು, ನೇಕಾರರು, ಸುಣ್ಣಗಾರರು, ಪೆಂಡಾಲ್‌ನಲ್ಲಿ ಕೆಲಸ ಮಾಡುವವರು, ಹೋಟೆಲ್‌ನಲ್ಲಿ ಕೆಲಸ ಮಾಡುವವರು ಹೀಗೆ 25 ಸೆಕ್ಟರ್‌ಗಳಲ್ಲಿ ಕೆಲಸ ಮಾಡುತ್ತಿದ್ದಾರೋ ಅವರನ್ನು ಗುರುತಿಸಿ, 25-30 ಲಕ್ಷ ಜನರಿಗೆ ಕಾರ್ಡ್ ಕೊಡುವ ವ್ಯವಸ್ಥೆ ಮಾಡುತ್ತಿದ್ದೇವೆ. ಇವತ್ತು ಪರ್ಯಾಯವಾಗಿ Transport Board ಕೂಡ ಮಾಡಿದ್ದೇವೆ. ಇದರಲ್ಲಿ Drivers, Cleaners, Washermen, logistics ನಲ್ಲಿ ಯಾರು ಕೆಲಸ ಮಾಡುತ್ತಿದ್ದಾರೆ, ವಿಶೇಷವಾಗಿ, Garage Mechanics, Tyre Puncture ಹಾಕುವವರು, Retreading, Body Building, Tinkering ಮಾಡುವವರು, Painters ಇರಬಹುದು, ಈ ರೀತಿ Transport Board ನಲ್ಲಿ ಬರತಕ್ಕಂಥ ಸುಮಾರು 25 ಲಕ್ಷ ಜನಕ್ಕೆ ಪ್ರತ್ಯೇಕ ಬೋರ್ಡ್ ಮಾಡಿದ್ದೇವೆ. ನಾವು extra cess collect ಮಾಡುತ್ತಿಲ್ಲ. Transport Board ನಲ್ಲಿ ಏನು cess ಸಂಗ್ರಹವಾಗುತ್ತದೆಯೋ ಅದನ್ನು recoup ಮಾಡಿ ನಮ್ಮ ಬೋರ್ಡಿಗೆ ಕೊಡವುದಕ್ಕೆ ಮಾನ್ಯ ಮುಖ್ಯಮಂತ್ರಿಯವರು ಮತ್ತು ಮಾನ್ಯ ರಾಮಲಿಂಗಾ ರೆಡ್ಡಿಯವರು ಒಪ್ಪಿದ್ದಾರೆ. ಅದಕ್ಕಾಗಿ ನಾವು Transport Board ಕೂಡ ಪ್ರಾರಂಭ ಮಾಡಿದ್ದೇವೆ. Gig Workers ಗೆ ನಮ್ಮ ಸರ್ಕಾರ ಬಂದ ಮೇಲೆ ಅವರಿಗೆ ಇನ್‌ಶ್ಯೂರೆನ್ಸ್, ಅಪಘಾತವಾದರೆ ಹೆಲ್ತ್ ಇನ್‌ಶ್ಯೂರೆನ್ಸ್‌ಗೆಂದು ಮುಖ್ಯಮಂತ್ರಿಗಳು ಈಗಾಗಲೇ ದುಡ್ಡನ್ನು ಕೊಟ್ಟಿದ್ದಾರೆ. ಈ ಸ್ಕೀಮ್ ಪ್ರಾರಂಭವಾಗಿದೆ. ಮುಂದೆ ಬರುವ ದಿನಗಳಲ್ಲಿ Gig Workers ವಿಧೇಯಕವನ್ನು ತರುತ್ತೇವೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ;

"2024ರ ಕರ್ನಾಟಕ ಕಾರ್ಮಿಕ ಕಲ್ಯಾಣ ನಿಧಿ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದು

ಖಂಡ 2 ಮತ್ತು 3

**ಸಭಾಪತಿಯವರು:-** "ಖಂಡ 2 ಮತ್ತು 3 ಈ ವಿಧೇಯಕದ ಅಂಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**(ಖಂಡ 2 ಮತ್ತು 3 ವಿಧೇಯಕಕ್ಕೆ ಸೇರಿಸಲಾಯಿತು)**

**ಖಂಡ 1 ಇತ್ಯಾದಿ**

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ;

"ಮೊದಲನೆ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)**

**ಪ್ರಸ್ತಾವದ ಅಂಗೀಕಾರ**

**ಶ್ರೀ ಸಂತೋಷ್ ಎಸ್. ಲಾಡ್ (ಕಾರ್ಮಿಕ ಸಚಿವರು):-** ಮಾನ್ಯ ಸಭಾಪತಿಗಳೆ, 2024ರ ಕರ್ನಾಟಕ ಕಾರ್ಮಿಕ ಕಲ್ಯಾಣ ನಿಧಿ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ;

"2024ರ ಕರ್ನಾಟಕ ಕಾರ್ಮಿಕ ಕಲ್ಯಾಣ ನಿಧಿ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು**

(ಮುಂದು)

(984) 18-12-2024 7.40 ಡಿಎಸ್-ಎಕೆ

ಖ) **ಸಿವಿಲ್ ಪ್ರಕ್ರಿಯಾ ಸಂಹಿತೆ (ಕರ್ನಾಟಕ ತಿದ್ದುಪಡಿ) ವಿಧೇಯಕ, 2024**

**ಪರ್ಯಾಲೋಚನಾ ಪ್ರಸ್ತಾವ**

**ಶ್ರೀ ಹೆಚ್.ಕೆ.ಪಾಟೀಲ್ (ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು):-** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕಾರವಾದ ರೂಪದಲ್ಲಿರುವ 2024ರ ಸಿವಿಲ್ ಪ್ರಕ್ರಿಯಾ ಸಂಹಿತೆ (ಕರ್ನಾಟಕ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು**

**ಶ್ರೀ ಹೆಚ್.ಕೆ.ಪಾಟೀಲ್:- ಶ್ರೀ ಹೆಚ್.ಕೆ.ಪಾಟೀಲ್ (ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು):-** ಮಾನ್ಯ ಸಭಾಪತಿಯವರೇ, ಸಿವಿಲ್ ಪ್ರಕ್ರಿಯಾ ಸಂಹಿತೆ 1908 ರಲ್ಲಿ ಮಾಡಿರುವಂತಹ ಕಾನೂನು. The Code of Civil Procedure is a Central Act, but the Constitution has given us all empowerment to make amendments limited to our state areas. ತಮಗೆಲ್ಲರಿಗೂ ಗೊತ್ತಿದೆ, ನಾನು ಇಂಥದ್ದೇ ಒಂದು Code of Civil Procedure ಗೆ ತಿದ್ದುಪಡಿಯನ್ನು ತಂದಿದ್ದೆ. ಬಡವರ ಪ್ರಕರಣಗಳು ಏನಿವೆ ಅವುಗಳನ್ನು 6 ತಿಂಗಳೊಳಗೆ ನ್ಯಾಯಾಲಯದವರು ವಿಲೇವಾರಿ ಮಾಡಬೇಕು. ಸಣ್ಣ ರೈತರ ಪ್ರಕರಣಗಳನ್ನು ಆದ್ಯತೆ ಮೇಲೆ ನ್ಯಾಯಾಲಯದಲ್ಲಿ ತೆಗೆದುಕೊಂಡು ಅವುಗಳನ್ನು ವಿಲೇವಾರಿ ಮಾಡಬೇಕು. ಆಗ ನಮ್ಮಲ್ಲಿಯೇ ಬಹಳಷ್ಟು ಸ್ನೇಹಿತರು, ವಕೀಲ ಬಂಧುಗಳು ನಮಗೆ ಮಾರ್ಗದರ್ಶನ ಮಾಡುತ್ತಿದ್ದರು. 'This may not be acceptable. The States have very limited role. This type of amendments will not be entertained', ಹಾಗೆ ಹೀಗೆ ಎಂದು ತಮ್ಮದೇ ಆಗಿರುವಂತಹ apprehension ವ್ಯಕ್ತ ಮಾಡುತ್ತಿದ್ದರು. ಆದರೆ, ಎರಡೂ ಸದನಗಳು ಸರ್ವಾನುಮತದಿಂದ ಪಾಸ್ ಮಾಡಿ ನಾವು ರಾಜ್ಯಪಾಲರ ಮುಖಾಂತರ ರಾಷ್ಟ್ರಪತಿಗಳಿಗೆ ಕಳುಹಿಸಿದ್ದೆವು. ಕೇಂದ್ರ ಸರ್ಕಾರವು ತನ್ನ ಅಭಿಪ್ರಾಯವನ್ನು ಕೊಡಬೇಕಾಗುತ್ತದೆ. ಅದೆಲ್ಲಾ ಆಗಿ, ರಾಷ್ಟ್ರಪತಿಗಳು ಅದಕ್ಕೆ ಅಂಕಿತ ಹಾಕುವುದರ ಮೂಲಕ ನಮ್ಮ ದೇಶದಲ್ಲೇ ಬಡವರ ಪ್ರಕರಣಗಳಿಗೆ ಆದ್ಯತೆ ಕೊಟ್ಟು ಅವುಗಳನ್ನು ವಿಲೇವಾರಿ ಮಾಡಬೇಕೆನ್ನುವ ಕಾನೂನು ಕರ್ನಾಟಕದಲ್ಲಿ ಬಂತು. ಇದು ದೇಶದಲ್ಲೇ ಮೊಟ್ಟ ಮೊದಲು. ಆದರೆ, ಮುಂದಿನ ಹೆಜ್ಜೆಯಾಗಿ ಈಗ ನಾವು ಪ್ರಕರಣಗಳನ್ನು ಲೆಕ್ಕ ಹಾಕಿದ್ದೇವೆಂದು ತಿಳಿದುಕೊಳ್ಳಿ, ಈ ಸದನದಲ್ಲಿ ಐದು ಜನ ವಕೀಲರು ಇದ್ದಾರೆ. ಮಾನ್ಯ ಪ್ರತಾಪ ಸಿಂಹ್ ನಾಯಕ್‌ರವರು, ಮಾನ್ಯ ಕೇಶವ ಪ್ರಸಾದ್‌ರವರು, ಮಾನ್ಯ

ಪಿ.ಹೆಚ್.ಪೂಜಾರ್‌ರವರು, ಮಾನ್ಯ ಭೋಜೇಗೌಡರವರು, ಇವತ್ತು ಮಾನ್ಯ ಭೋಜೇಗೌಡರವರು ಸದನದಲ್ಲಿ ಇಲ್ಲ, ಇತ್ತೀಚೆಗೆ ವಕೀಲರಾಗಿರುವಂಥ ಮಾನ್ಯ ಡಿ.ಟಿ.ಶ್ರೀನಿವಾಸ್‌ರವರು ಇದ್ದಾರೆ. ತಮಗೆಲ್ಲರಿಗೂ ಗೊತ್ತಿರುವ ಹಾಗೆ ನಮ್ಮ ರಾಜ್ಯದಲ್ಲಿ 9,85,320 ಸಿವಿಲ್ ಪ್ರಕರಣಗಳು ಪೆಂಡಿಂಗ್ ಇವೆ. ಅಂದರೆ, ಈ 9,85,320 ಪ್ರಕರಣಗಳು ಪೆಂಡಿಂಗ್ ಇರುವುದನ್ನು, ಈಗ pendency ಕೇವಲ 10 ಪರ್ಸೆಂಟ್ ಉಳಿದಿದೆ ಎಂದು ಲೆಕ್ಕ ಮಾಡಿಕೊಳ್ಳುತ್ತಿದ್ದೇವೆ, ಇದೇ ರೀತಿ ಹೋದೆವು ಎಂದರೆ ಈ ಎಲ್ಲಾ ಪ್ರಕರಣಗಳನ್ನು ಪೂರ್ಣವಾಗಿ ಇತ್ಯರ್ಥಗೊಳಿಸಬೇಕಾದರೆ 20 ವರ್ಷಗಳು ಬೇಕಾಗುತ್ತದೆ. ಅಂದರೆ, ನ್ಯಾಯದಾನ ಹೇಗೆ ಮಾಡುತ್ತಾರೆ? ಈ ನ್ಯಾಯದಾನ ವ್ಯವಸ್ಥೆಯಲ್ಲಿ ಬಹು ದೊಡ್ಡ ಸುಧಾರಣೆಯಾಗಬೇಕೆಂದು ಇವತ್ತು ಈ ಸಿವಿಲ್ ಪ್ರಕ್ರಿಯಾ ಸಂಹಿತೆಗೆ ನಾವು ತಿದ್ದುಪಡಿಯನ್ನು ತಂದಿದ್ದೇವೆ. ಇದು ಕಮರ್ಷಿಯಲ್ ಕೋರ್ಟ್ ಮಾದರಿ ಎಂದು ಹೇಳಿದರೆ ತಪ್ಪಾಗಲಾರದು. ಬಹಳಷ್ಟು ಬದಲಾವಣೆ ಇದೆ. ನಮ್ಮ ಕಾನೂನು ಕಾರ್ಯದರ್ಶಿಯವರು, ವಿಶೇಷವಾಗಿ ಸಂಸದೀಯ ವ್ಯವಹಾರಗಳ ಇಲಾಖೆಯ ಕಾರ್ಯದರ್ಶಿಯವರು, KILPAR (The Karnataka Institute for Law and Parliamentary Reform) ನಿರ್ದೇಶಕರಾದ ಶ್ರೀ ಚಿದಾನಂದ ಪಾಟೀಲ್‌ರವರು, ಹೀಗೆ ಹಲವಾರು ಜನ ಇದರ ಬಗ್ಗೆ ಬಹಳಷ್ಟು ಅಧ್ಯಯನ ಮಾಡಿದರು ಹಾಗೂ ಸಂಶೋಧನೆಯನ್ನು ಮಾಡಿ ಅದಕ್ಕೆ ತಕ್ಕಂಥೆ ತಮ್ಮದ್ದೇ ಆದ ಮಾರ್ಗದರ್ಶನವನ್ನು ಮಾಡಿದ್ದಾರೆ. ಇವತ್ತು ಒಂದೊಂದು ಜಿಲ್ಲೆಗಳನ್ನು ನಾವು ಹೋಲಿಕೆ ಮಾಡಿದಾಗ ಬೆಳಗಾವಿ ಜಿಲ್ಲೆಯಲ್ಲಿ 77,412 ಅರ್ಜಿಗಳು ಪೆಂಡಿಂಗ್ ಇವೆ. ಬೆಂಗಳೂರಿನಲ್ಲೇ ಒಟ್ಟು 1,04,245 ಪೆಂಡಿಂಗ್ ಇವೆ. ಎಷ್ಟು ಪೆಂಡಿಂಗ್ ಇವೆ ಎನ್ನುವುದಕ್ಕೆ ಇದನ್ನೆಲ್ಲ ಹೇಳಿದ್ದೇನೆ. ಈಗ ಕೋರ್ಟ್‌ನಲ್ಲಿ ಕೆಲವೊಂದು ಪ್ರಕರಣಗಳು silver jubilee ಮಾಡಿಬಿಟ್ಟಿವೆ. ಅದರಲ್ಲಿ ಯಾರಿಗೆ ನ್ಯಾಯ ಸಿಗುತ್ತದೆಯೋ ಗೊತ್ತಿಲ್ಲ. ಈ ಜನರೇಶನ್‌ನಲ್ಲಿ ಕೋರ್ಟ್‌ಗೆ ಹೋದರೆ ಮುಂದಿನ ಜನರೇಶನ್‌ನಲ್ಲಿರುವವರಿಗೆ ನ್ಯಾಯ ಸಿಗುತ್ತದೆ. ಅದು ಆ ರೀತಿ ಆಗಬಾರದೆಂದು ನಾವು ಈ ತಿದ್ದುಪಡಿಯಲ್ಲಿ ಏನು ತಂದಿದ್ದೇವೆಂದರೆ case management provision ಇದರಲ್ಲಿ ಮಾಡಿದ್ದೇವೆ. Case management provision ನಲ್ಲಿ ಮೊದಲ ದಿವಸವೇ ನ್ಯಾಯಾಧೀಶರು ಸ್ಪಷ್ಟವಾಗಿ ನಿರ್ಣಯ ಮಾಡಬೇಕಾಗಿದೆ. ಅವರು ಏನು ನಿರ್ಣಯ ಮಾಡಬೇಕೆಂದರೆ, ನೀವು ಯಾವಾಗ ಅಫಿಡವಿಟ್ ಹಾಕುತ್ತೀರಿ, ನೀವು ಯಾವಾಗ... Under "Order XV-AA under the heading "Case Management Hearing", orders will be passed in a Case Management Hearing when parties may be directed to submit draft issues. Further, as per Rule 2 of the same order, it is stated as follows: –

(b) listing witnesses to be examined by the parties;

(c) fixing the date by which affidavit of evidence to be filed by parties.

(d) fixing the date on which evidence of the witnesses of the parties to be recorded;

(e) fixing the date by which Written arguments are to be filed

before the Court by the parties;

(f) fixing the date on which oral arguments are to be heard by the Court; and

(g) setting time limits for parties and their advocates to address oral arguments.

In Rule 3 of the same order, which says about the "Time limit for the completion of a trial", it is stated as follows: -

"In fixing dates or setting time limits for the purposes of rule 2 of this order, the Court shall ensure that the arguments are closed not later than 24 months from the date of the first Case Management Hearing."

That means, the court will give the timetable, and it shall adhere to that. ಇದು ಒಂದು ಭಾಗವಾದರೆ, ಮತ್ತೊಂದು ಭಾಗದಲ್ಲಿ ಈಗ ಎಲ್ಲರೂ ಕೋರ್ಟ್ ಹೋಗುತ್ತಿರುತ್ತಾರೆ. ಆ ಕೋರ್ಟ್‌ಗೆ ಅವರ ಅಣ್ಣ-ತಮ್ಮಂದಿರು ಹೋಗಿರುತ್ತಾರೆ. ಅವರಿಗೆ ರಾಜಿಯಾಗಬೇಕೆಂದು ಇರುತ್ತದೆ, ಆದರೆ ಪ್ರತಿಷ್ಠೆ. "ಏ ನಾನೇಕೆ ರಾಜಿಯಾಗಲಿ, ನೀನು ಏಕೆ ರಾಜಿಯಾಗಬೇಕು", ಈ ರೀತಿ ಎಲ್ಲಾ ಇರುತ್ತವೆ. ಅದಕ್ಕೆ ಕೋರ್ಟ್‌ನವರಿಗೆ ಒಂದು ವೇಳೆ interim relief ಅತ್ಯಂತ ಅಗತ್ಯ ಇರದಿದ್ದರೆ, ಅಂದರೆ ಅವನು ಮನೆ ಕೆಡುವುತ್ತಿದ್ದಾನೆ ಎಂದು ಬಂದಿದ್ದರೆ, ಮನೆ ಕೆಡುವುದು ಬೇಡ ಎಂದು injunction ಕೊಡಬಹುದು. ತುರ್ತು ಏನು ಇರಲಿಲ್ಲವೆಂದರೆ ಅವರಿಗೆ mediation will be made compulsory. Both the parties will be asked to go and mediate. ಎರಡು ತಿಂಗಳೊಳಗೆ ನೀವು ರಾಜಿ ಮಾಡಿಕೊಂಡು ಬನ್ನಿ, ಸಂಧಾನ ಮಾಡಿಕೊಂಡು ಬನ್ನಿ ಎಂದು ಅವರಿಗೆ ಹೇಳುವುದರ ಮೂಲಕ mediation ಕೂಡ ಎಲ್ಲಿ emergency relief ಅವಶ್ಯಕತೆ ಇರುವುದಿಲ್ಲ ಅಂಥವರಿಗೆಲ್ಲರಿಗೂ mediation ಅವಕಾಶ ಕಲ್ಪಿಸುವುದರ ಮೂಲಕ ಒಟ್ಟಾರೆ ಈ ಕಾನೂನು ತಿದ್ದುಪಡಿಯಾದರೆ ನನಗೆ ವಿಶ್ವಾಸವಿದೆ, ನಮ್ಮ ನ್ಯಾಯದಾನ ವ್ಯವಸ್ಥೆಯಲ್ಲಿ ಬಹು ದೊಡ್ಡ ಸುಧಾರಣೆಯಾಗುತ್ತದೆ. ಇದೊಂದು ಕ್ರಾಂತಿಕಾರಕ ಬದಲಾವಣೆ ಸಿವಿಲ್ ಪ್ರಕ್ರಿಯಾ ಸಂಹಿತೆಯಿಂದ ಸಾಧ್ಯವಾಗುತ್ತದೆ. ಇದು ನಮ್ಮಲ್ಲಿ ಹೊಸ ಪ್ರಯೋಗವು ಹೌದು.

(ಮುಂದು)

**(985) 18/12/2024 7:50 ಎಸ್‌ಪಿಆರ್/ಎಕೆ (ಸಭಾಪತಿಯವರ ಉಪಸ್ಥಿತಿ)**

**ಶ್ರೀ ಹೆಚ್.ಕೆ.ಪಾಟೀಲ್(ಮುಂದು):**

ಇದಕ್ಕಾಗಿ ಅಲ್ಲಿ ಇಲ್ಲಿ ಅಪಸ್ವರಗಳು ಬರಬಹುದು, ಆದರೆ, ನಾನು ಅವರಲ್ಲಿ ಕೇಳಕೊಳ್ಳುವುದೇನೆಂದರೆ, ಇದನ್ನು ವಿರೋಧಿಸಿದರೆ, what is the remedy? ನಿರ್ದಿಷ್ಟ ಸಮಯದಲ್ಲಿ ಪ್ರಕರಣವನ್ನು ವಿಲೇ ಮಾಡಬೇಕೆಂದು ನಾವು ಕಾನೂನು ಮುಖಾಂತರ ಹೇಳುವುದು ಗುನ್ನೆಯೇ? ತಪ್ಪೇ ಎಂದು ನಾನು ಪ್ರಶ್ನಿಸುತ್ತೇನೆ. ಆದರೆ, ಅದು ಶ್ರೀಮಂತರ ಪ್ರಕರಣವಾದರೆ, ವಾಣಿಜ್ಯ ನ್ಯಾಯಾಲಯಗಳಲ್ಲಿ ನಿರ್ದಿಷ್ಟವಾಗಿ ಒಂದು ವರ್ಷದಿಂದ ಮೂರು ವರ್ಷಗಳ ಅವಧಿಯಲ್ಲಿಯೇ ಪ್ರಕರಣ ವಿಲೇಯಾಗಬೇಕು ಎಂದು ಹೇಳುತ್ತೇವೆ. ಇಲ್ಲಿ ದೊಡ್ಡ ದೊಡ್ಡ ಮೊತ್ತದ ಮತ್ತು ದೊಡ್ಡವರ ವ್ಯವಹಾರಗಳ ಪ್ರಕರಣಗಳ ವಿಚಾರಣೆಗಳಾಗುತ್ತವೆ. ಇವರುಗಳಿಗೆ ನಿಯಮಿತ ಸಮಯದಲ್ಲಿ ನ್ಯಾಯಾಲಯದಲ್ಲಿ ನ್ಯಾಯ ದೊರೆಯಬೇಕು. ಆದರೆ, ಉಳಿದವರಿಗೆ 5 ರಿಂದ 10 ವರ್ಷಗಳಾದರೂ ಪರವಾಗಿಲ್ಲವೇ? ನ್ಯಾಯಾಲಯದಲ್ಲಿ ನ್ಯಾಯ ದೊರೆಯುವುದು ಅನಿಶ್ಚಿತವಾದರೆ, ನಮ್ಮ ಜೀವನದ ಗುಣಮಟ್ಟ ಉಳಿಯುವುದಿಲ್ಲ. You can't plan your life. ಮುಂದಿನ ದಿನಗಳಲ್ಲಿ ನ್ಯಾಯಾಲಯದ ಆದೇಶದಿಂದಾಗಿ ಯಾವುದೋ ಆಸ್ತಿ ನಮಗೆ ಬರುವಂತಿದ್ದು, ಅದು ಐದು ವರ್ಷಗಳ ಅವಧಿಯಲ್ಲಿಯೇ ಬಂದರೆ, ಮಕ್ಕಳಿಗೆ ಮನೆಯನ್ನು ಕಟ್ಟಿಸಿಕೊಡಬಹುದು. ತಮ್ಮ ಮಕ್ಕಳ ಲಗ್ನವನ್ನು ಯಾವಾಗ ಮಾಡಬಹುದು ಎಂಬುದಾಗಿ ಯೋಚಿಸಬಹುದಾಗಿರುತ್ತದೆ. ಇದನ್ನು ಬಿಟ್ಟು ಆ ಆಸ್ತಿ ಇನ್ನು ಯಾವಾಗಲೋ ಮುಂದಿನ 15-20 ವರ್ಷಕ್ಕೆ ಬಂದರೆ ಏನು ಉಪಯಾಗುತ್ತದೆ? ಇವತ್ತಿನ ಪರಿಸ್ಥಿತಿಯನ್ನು ಎಲ್ಲರೂ ನೋಡುತ್ತಿದ್ದಾರೆ. ನ್ಯಾಯದಾನ ವ್ಯವಸ್ಥೆಯಲ್ಲಿ ದೊಡ್ಡ ದೊಡ್ಡ ಮತ್ತು ದುಬಾರಿ ವಕೀಲರುಗಳು ಕೇಸುಗಳನ್ನು ತೆಗೆದುಕೊಂಡರೆ, "ಟಕ್" ಎಂದು ನ್ಯಾಯ ದೊರೆಯುತ್ತದೆ. ಅಂದರೆ ಶೀಘ್ರದಲ್ಲಿ ಪ್ರಕರಣ ವಿಲೇವಾರಿಯಾಗುತ್ತದೆ. 15 ದಿನಗಳ ಅವಧಿಯಲ್ಲಿ ಪ್ರಕರಣವು ನಿಕಾಲಿಯಾಗುತ್ತದೆ. ಜನಸಾಮಾನ್ಯರಿಗೂ ಸಹ ಈ ರೀತಿಯಾಗಿ ಶೀಘ್ರದಲ್ಲಿ ನ್ಯಾಯದಾನ ದೊರೆಯುವುದನ್ನು ನಾವು ಇಲ್ಲಿ ನೋಡಿಲ್ಲ. ಈ ವ್ಯವಸ್ಥೆಯಲ್ಲಿ ಬದಲಾವಣೆಯಾಗಬೇಕು ಹಾಗೂ ಇವತ್ತಿನ ಅಗತ್ಯತೆಗೆ ತಕ್ಕಹಾಗೆ ಕಾನೂನುಗಳನ್ನು ಮಾಡಿ ನಾವುಗಳೆಲ್ಲರೂ ಕೈಗಳನ್ನು ಕಟ್ಟಬೇಕು. ಅಂದರೆ, ನಮ್ಮ, ನ್ಯಾಯಾಧೀಶರ, ವಕೀಲರ, ಕಕ್ಷಿದಾರರ ಹಾಗೂ ಸರ್ಕಾರದ ಕೈಗಳನ್ನು ಕಟ್ಟಬೇಕು. ಆಗ ಮಾತ್ರವೇ ಸಮಯಕ್ಕೆ ಸರಿಯಾಗಿ ಪ್ರಕರಣಗಳು ವಿಲೇವಾರಿಯಾಗುವುದಕ್ಕೆ ಹಾಗೂ ನ್ಯಾಯದಾನ ವ್ಯವಸ್ಥೆ ಸರಿಯಾಗುವುದಕ್ಕೆ ಸಾಧ್ಯವಿದೆ. ಈ ಹಿನ್ನೆಲೆಯಲ್ಲಿ ಸಿವಿಲ್ ಪ್ರಕ್ರಿಯಾ ಸಂಹಿತೆ (ಕರ್ನಾಟಕ ತಿದ್ದುಪಡಿ) ವಿಧೇಯಕ, 2024 ನ್ನು ನಾನು ಮಂಡಿಸಿದ್ದೇನೆ. ದಯಮಾಡಿ ಇದನ್ನು ಅನುಮೋದಿಸಬೇಕೆಂದು ಆ ಮೂಲಕ ಕ್ರಾಂತಿಕಾರಕವಾಗಿರುವ ಬದಲಾವಣೆಗೆ ಇದು ದೊಡ್ಡ ಅಸ್ತ್ರವಾಗುತ್ತದೆ; ಇದಕ್ಕಾಗಿ ಕರ್ನಾಟಕ ವಿಧಾನ ಪರಿಷತ್ತು ತನ್ನದೇ ಆದ ಪಾತ್ರವನ್ನು ವಹಿಸಬೇಕೆಂದು ಕೋರುತ್ತೇನೆ. ಈ ಸಂದರ್ಭದಲ್ಲಿ ನಾನು ಒಂದು ಮಾತನ್ನು ಹೇಳಬಯಸುತ್ತೇನೆ. ನಿನ್ನೆಯ ದಿನ ಸಮಯ ಬಹಳವಾಗಿತ್ತು. ಆದರೂ ಸಹ ವಿಧಾನಸಭೆಯಲ್ಲಿ ಈ ವಿಧೇಯಕವನ್ನು ಮಂಡಿಸಿದಾಗ, ಎಲ್ಲರೂ ಬಹಳ ಒಮ್ಮತದಿಂದ ಇದನ್ನು ಬೆಂಬಲಿಸಿ, ಪ್ರೋತ್ಸಾಹಿಸಿದರು ಎಂಬ ಮಾತನ್ನು ಹೇಳಿ, ಅವರಿಗೂ ನನ್ನ ಕೃತಜ್ಞತೆಯನ್ನು ತಿಳಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ ಪಿ.ಹೆಚ್.ಪೂಜಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಪ್ರಸ್ತುತ ಸರ್ಕಾರ ಮಂಡಿಸಿರುವ ಸಿವಿಲ್ ಪ್ರಕ್ರಿಯಾ ಸಂಹಿತೆ (ಕರ್ನಾಟಕ ತಿದ್ದುಪಡಿ) ವಿಧೇಯಕ, 2024 ನ್ನು ನಾನು ಸ್ವಾಗತಿಸುತ್ತೇನೆ. ನಮ್ಮಲ್ಲಿನ ಗ್ರಾಮೀಣ ಭಾಗದಲ್ಲಿ ಒಂದು ನಾಣ್ಣುಡಿ ಇದೆ. ನ್ಯಾಯಾಲಯದಲ್ಲಿನ ಪ್ರಕರಣಗಳ ವಿಲೇವಾರಿಯಲ್ಲಿ ವಿಳಂಬವಾಗುತ್ತಿರುವುದರಿಂದ ಬಡವರು ಬಹಳಷ್ಟು ಯಾತನೆಗಳನ್ನು ಅನುಭವಿಸುತ್ತಾರೆ. ವರ್ಷಗಳಗಟ್ಟಲೆ ಪ್ರಕರಣವು ಮುಂದೂಡಿ ಮುಂದೂಡಿ ಮುಂದಕ್ಕೆ ಹೋಗುತ್ತಿರುತ್ತದೆ. ಇದಕ್ಕೆ ಕಾರಣಗಳು ಹಲವಾರು. ಅಂದರೆ, ಮೇಲ್ಮನವಿ, ಮಧ್ಯಂತರ ಅರ್ಜಿ, ತಡೆಯಾಜ್ಞೆ ಇತ್ಯಾದಿ ಕಾರಣಗಳು ಒಂದೇ ಎರಡೇ ಹತ್ತು ಹಲವಾರು ರೀತಿಗಳಿಂದಾಗಿ ಆಗುತ್ತಿರುವುದನ್ನು ನಾವುಗಳೆಲ್ಲಾ ನೋಡುತ್ತಿದ್ದೇವೆ. ಕೊನೆಗೆ "ಕೇಸು ಗೆದ್ದವನು ಸೋತ; ಸೋತವನು ಸತ್ತ" ಎನ್ನುವಂತಾಗುತ್ತದೆ. ಈ ಗಾದೆ ಮಾತು ನಮ್ಮಲ್ಲಿ ಜನಜನಿತವಾಗಿದೆ. ನಮ್ಮಲ್ಲಿ ಆಂಗ್ಲ ಭಾಷೆಯ ಮತ್ತೊಂದು ನಾಣ್ಣುಡಿಯೂ ಸಹ ಚಾಲ್ತಿಯಲ್ಲಿದೆ ಅದೇನೆಂದರೆ, 'Justice delayed is justice denied'. ಇದು ಆಗಬಾರದು ಎನ್ನುವ ಉದ್ದೇಶದಿಂದಾಗಿ ಸಚಿವರು ವಿಧೇಯಕವನ್ನು ಮಂಡಿಸಿದ್ದಾರೆ. ಇದು ನಿಜವಾಗಿಯೂ ಸಹ ಸ್ವಾಗತಾರ್ಹವಾದುದು. ಪ್ರಸ್ತುತ ಮಂಡಿಸಿರುವ ವಿಧೇಯಕದಲ್ಲಿ ಸರ್ಕಾರವು 89ಎ ಎನ್ನುವುದನ್ನು ಸೇರಿಸಿದ್ದು, ಅದರಲ್ಲಿನ ಅಂಶಗಳು ಈ ಮುಂದಿನಂತಿವೆ:

> "89A. **Mediation and Settlement.-** (1)Notwithstanding anything contained in any provision under the Code of Civil Procedure, every suit that does not contemplate any urgent interim relief shall be…"

Here, instead of the word 'shall', the words 'should be' ಸೂಕ್ತವಾದುದು ಎಂದು ನನಗೆ ಅನ್ನಿಸುತ್ತದೆ. ಏಕೆಂದರೆ, ಪ್ರಕರಣಗಳಲ್ಲಿ ಮಧ್ಯಸ್ಥಿಕೆ ಮಾಡುವ ಹಂತಕ್ಕೆ ಬಂದಾಗ ultimately it should be mandatory. ಅಲ್ಲಿ ಕಡ್ಡಾಯ ಎನ್ನುವ ಅಂಶವನ್ನು ಸೇರಿಸಬೇಕು. ಏಕೆಂದರೆ, judicious ಆಗಿ ನ್ಯಾಯಾಧೀಶರುಗಳಿಗೆ ಅದು ಸರಿಯೋ, ತಪ್ಪೋ, ನೀಡಬೇಕೋ ಅಥವಾ ನೀಡಬಾರದೋ ಎಂಬ ಆಯ್ಕೆಗಳು ಅವರಿಗೆ ಇರಕೂಡದು. ಸಚಿವರು ಒಂದು ಉದಾಹರಣೆಯನ್ನು ಉಲ್ಲೇಖಿಸಿದರು. ಜರೂರು ಆದೇಶ ಬೇಕಾದ ಸಂದರ್ಭದಲ್ಲಿ, … ಅಲ್ಲಿ ಮನೆಯನ್ನು ಒಡೆಯುತ್ತಿದ್ದಾರೆ ಅಥವಾ ಅಲ್ಲಿನ ರಸ್ತೆಯು ಮನೆಯ ಮೇಲೆಯೇ ಬರುತ್ತಿದೆ ಇತ್ಯಾದಿ ಜರೂರು ಸಂದರ್ಭಗಳ ಪ್ರಕರಣಗಳು ಬರುತ್ತವೆ. ಅಂತಹ ಪ್ರಕರಣಗಳಲ್ಲಿ ಅವುಗಳನ್ನು ನ್ಯಾಯಾಧೀಶರ ವಿವೇಚನೆಗೆ ಬಿಡುವಂತಾಗಬೇಕು. ಮುಂದಿನ ದಿನಗಳಲ್ಲಿ ರಾಜಿ ಮಾಡುವುದು ಆಗುತ್ತದೆ. ಇದು ಆಗಲಿ. ಆದರೆ, ಒಟ್ಟಾರೆಯಾಗಿ ಪ್ರಕರಣಗಳ ಬಾಕಿಯನ್ನು ಕಡಿಮೆ ಮಾಡುವ ಉದ್ದೇಶದಿಂದ ಆರು ತಿಂಗಳ ಕಾಲಾವಧಿಯಲ್ಲಿ, ಲಿಖಿತ ಹೇಳಿಕೆಯನ್ನು ನೀಡುವಂತಹದ್ದು ಹಾಗೂ ಒಂದು ತಿಂಗಳ ಕಾಲಾವಧಿಯನ್ನು ಹೆಚ್ಚಳ ಮಾಡುವಂತಹದ್ದು 'ultimately the judge should dispose of the matter within six months' ಎನ್ನುವ

ಅಂಶವನ್ನು ವಿಧೇಯಕದಲ್ಲಿ ತಿಳಿಸಲಾಗಿದೆ. ನಿಜವಾಗಿಯೂ ಸಹ ಇದರಿಂದಾಗಿ ಬಡವರಿಗೆ, ದೀನ ದಲಿತರಿಗೆ ಹಾಗೂ ಸಣ್ಣ ಪುಟ್ಟ ಖರ್ಚುಗಳನ್ನು ಮಾಡಿಕೊಂಡು ನ್ಯಾಯಕ್ಕಾಗಿ ನ್ಯಾಯಾಲಯದ ಮೊರೆ ಹೋಗಿರುತ್ತಾರೆಯೋ ಅಂತಹವರಿಗೆ ಇದು ಸೂಕ್ತವಾದ ತಿದ್ದುಪಡಿ ಎಂದು ನಾನು ಹೇಳಬಯಸುತ್ತೇನೆ. ಕೇಂದ್ರ ಸರ್ಕಾರ ಮಾಡುವ ತಿದ್ದುಪಡಿಯಲ್ಲಿ ಈ ರೀತಿಯದಕ್ಕೆ ಅವಕಾಶವಿಲ್ಲ. ಬಹುಶಃ ಈ ಅಂಶ ಅವರ ಗಮನಕ್ಕೆ ಬಂದಿದೆಯೋ ಅಥವಾ ಇಲ್ಲವೋ ನನಗೆ ಗೊತ್ತಿಲ್ಲ. ಕೇಂದ್ರದಲ್ಲಿಯೇ ಈ ತಿದ್ದುಪಡಿಯನ್ನು ಮಾಡಬಹುದಾಗಿತ್ತು. ಬಾಕಿ ಪ್ರಕರಣಗಳ ಬಗ್ಗೆ ಸಚಿವರು ಉಲ್ಲೇಖಿಸಿದರು. ನಮ್ಮ ದೇಶದಲ್ಲಿ 9.85 ಲಕ್ಷದಷ್ಟು ಪ್ರಕರಣಗಳು ಬಾಕಿ ಇವೆ. ಬೆಳಗಾವಿ ಜಿಲ್ಲೆಯಲ್ಲಿ 77,000 ಪ್ರಕರಣಗಳು ಬಾಕಿ ಇವೆ. ನ್ಯಾಯದಾನ ಪದ್ಧತಿಯು ಇದೇ ರೀತಿಯಲ್ಲಿ ಮುಂದುವರೆದರೆ, ಪ್ರಕರಣಗಳ ವಿಲೇವಾರಿಯು ಮುಂದಿನ 20 ವರ್ಷಗಳವರೆಗೆ ಆಗುತ್ತದೆ. ಪ್ರತಿಯೊಂದು ಪ್ರಕರಣಗಳಲ್ಲಿ ಒಂದೆರೆಡು ತಿಂಗಳುಗಳ ಕಾಲ ಸಮಯಾವಕಾಶವನ್ನು ತೆಗೆದುಕೊಳ್ಳುತ್ತಿದ್ದರೆ, ಅವುಗಳ ವಿಲೇವಾರಿ ವಿಳಂಬವಾಗುತ್ತದೆ. ಉಚ್ಚ ನ್ಯಾಯಾಲಯದಲ್ಲಿಯೂ ಸಹ ರಿಟ್ ಪ್ರೊಸಿಡಿಂಗ್ ಅನ್ನು ಮಾಡಿದರೆ, ಇಲ್ಲಿಯೂ ಒಂದು ವ್ಯವಸ್ಥೆಯನ್ನು ಜಾರಿಗೊಳಿಸಬಹುದೇನೋ ಎಂಬ ಯೋಚನೆಯನ್ನು ಮಾಡುವ ದಿಸೆಯಲ್ಲಿ ನಾನು ಈ ಮಾತನ್ನು ಹೇಳುತ್ತಿದ್ದೇನೆ. ನನ್ನ ದೃಷ್ಟಿಯಲ್ಲಿ ನಾನು ಮಾತನಾಡಿದ್ದೇನೆ. At least, you should send some recommendation up to the Supreme Court in your own way. It is just a suggestion. How far it will be possible ಎನ್ನುವ ಬಗ್ಗೆ ಸರ್ಕಾರ ಚಿಂತನೆ ಮಾಡಬೇಕು. ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ಕಳೆದ 17-18 ವರ್ಷಗಳ ಹಿಂದೆ ಒಂದು ಸಣ್ಣ ರಿಟ್ ಅರ್ಜಿಯನ್ನು ಸಲ್ಲಿಸಿದ್ದು, ಈಗಲೂ ಸಹ ಇದು ಬಾಕಿ ಇದೆ. ಅರ್ಜಿದಾರರು ಆಗೊಮ್ಮೆ ಮತ್ತು ಈಗೊಮ್ಮೆ ಬಂದು ಅಲೆದಾಡುವುದು ಆಗಿದೆ. ಕೆಳ ಹಂತದ ಮತ್ತು ಉಚ್ಚ ನ್ಯಾಯಾಲಯಗಳಲ್ಲಾಗುವ ಪ್ರಕ್ರಿಯೆಗಳಲ್ಲಿ ಯಾವುದೇ ಬೇಧ ಭಾವವಿಲ್ಲವೆಂದು ನನಗನ್ನಿಸಿದೆ. ಉಚ್ಚ ನ್ಯಾಯಾಲಯದಲ್ಲಿ ಒಂದು ಬಾರಿ ಆದೇಶ ನೀಡಿ, ತಡೆಯಾಜ್ಞೆ ದೊರೆಯಿತು ಎಂದಾದರೆ, ಅದು ಸರಿಯಾಗಿ ಇರುತ್ತದೆಯೋ ಅಥವಾ ಇಲ್ಲವೋ, ಯಾವುದು stay warranted ಇರುತ್ತದೆಯೋ, ಯಾವುದು stay warranted ಇರುವುದಿಲ್ಲವೋ ಅದು ಗೊತ್ತಿಲ್ಲ. ಅದರ ಕಥೆಯು ಅಲ್ಲಿಗೆ ಮುಗಿದು ಹೋಗುತ್ತದೆ. ಅದನ್ನು ಅಲ್ಲಿಗೆ ಸಮಾಧಿ ಮಾಡಿದಂತಾಗುತ್ತದೆ. ಮುಂದೆ ಯಾರಿಗೆ ಅವಶ್ಯಕತೆ ಇದೆಯೋ ಅವರು ಅದನ್ನು ಪುನಃ ತೆರೆಯುತ್ತಾರೆ. ಉಚ್ಚ ನ್ಯಾಯಾಲಯದ ಬಹಳಷ್ಟು ಪ್ರಕರಣಗಳಲ್ಲಿ ಪರಿಹಾರ ದೊರೆಯುವುದು ಕನಸಿನ ಮಾತಾಗಿ ಹೋಗಿರುತ್ತದೆ. ಆದರೆ, ಕೆಳ ಹಂತದ ನ್ಯಾಯಾಲಯಗಳಲ್ಲಿ when we are having jurisdiction, ನಮಗೆ ಅಧಿಕಾರ ಇದ್ದಾಗ, our government can very well amend such provisions. ಸಚಿವರು ಒಳ್ಳೆಯ ವಿಧೇಯಕವನ್ನು ಪ್ರಸ್ತಾಪಿಸಿದ್ದಾರೆ. ಇಂತಹ ಸಂದರ್ಭದಲ್ಲಿಯೂ ಸಹ ನಾನು ಸಚಿವರ ಬಗ್ಗೆ ಪ್ರಸ್ತಾಪಿಸಬೇಕು. ಅವರು ಯಾವಾಗ ಯಾವುದೇ ಇಲಾಖೆಯ ಜವಾಬ್ದಾರಿಗಳನ್ನು ತೆಗೆದುಕೊಂಡಿದ್ದಾರೆಯೋ, ಅದನ್ನು ಸಮರ್ಥವಾಗಿ ನಿರ್ವಹಿಸಿದ್ದಾರೆ. ಹೀಗೆ ಕರ್ತವ್ಯ ನಿರ್ವಹಿಸಿದ ಕೆಲವೇ ಕೆಲವು ಮಂತ್ರಿಗಳಲ್ಲಿ ಇವರು ಒಬ್ಬರೊಬ್ಬರು ಎಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ.

**(ಈ ಹಂತದಲ್ಲಿ ಆಡಳಿತ ಪಕ್ಷದ ಸದಸ್ಯರು ಮೇಜನ್ನು ತಟ್ಟುವ ಮೂಲಕ ತಮ್ಮ ಹರ್ಷವನ್ನು ವ್ಯಕ್ತಪಡಿಸಿದರು)**

ದಿವಂಗತ ಎಸ್.ಎಂ.ಕೃಷ್ಣ ರವರ ಅಧಿಕಾರಾವಧಿಯಲ್ಲಿ ಸಚಿವರು ನೀರಾವರಿ ಸಚಿವರಾಗಿದ್ದು, ಕೃಷ್ಣಾ ಮೇಲ್ದಂಡೆ ಯೋಜನೆಗೆ ಸಂಬಂಧಪಟ್ಟಂತೆ ನಮ್ಮ ಬಾಗಲಕೋಟೆ ಜಿಲ್ಲೆಗೆ ಬಂದಿದ್ದರು. ಆಗಲೇ ನಮಗೆ ಮೊದಲ ಪರಿಹಾರ ದೊರೆತದ್ದು. ಇತ್ತೀಚೆಗೆ ಮುಖ್ಯಮಂತ್ರಿಗಳು ಮತ್ತು ಉಪ ಮುಖ್ಯಮಂತ್ರಿಗಳು ನಾವು ಹೇಳುವುದನ್ನು ಸಮಾಧಾನವಾಗಿ ಕೇಳಿದರು. ಇದಕ್ಕಾಗಿ ನಾನು ಅವರುಗಳಿಗೆ ಅಭಿನಂದನೆಗಳನ್ನು ಸಲ್ಲಿಸಿದೆನು. ಎಷ್ಟೋ ವರ್ಷಗಳಿಂದ ಬಾಕಿ ಇರುವ ಪ್ರಕರಣಗಳ ಬಗ್ಗೆ ನ್ಯಾಯಯುತವಾಗಿ ಮತ್ತು ಸಮಾಧಾನವಾಗಿ ಅವರುಗಳು ಕೇಳಿಸಿಕೊಂಡರು. ನಮ್ಮ ಮನಸ್ಸಿಗೆ ಸಮಾಧಾನವಾಗುವಷ್ಟು ಮಟ್ಟಿಗೆ ಅವರುಗಳು ಮಾತನಾಡಿದರು. ಇದು ಮೊಟ್ಟ ಮೊದಲ ಬಾರಿಗೆ ಆಗಿದ್ದು; ಇಲ್ಲಿಯವರೆಗೆ ಈ ರೀತಿಯಾಗಿ ಆಗಿರಲೇ ಇಲ್ಲ. ಅರ್ಧ ಗಂಟೆಗಳ ಕಾಲ ನಾವು ಹೇಳುವುದನ್ನು ಕೇಳಿ, ನುಣುಚಿಕೊಂಡು ಹೋಗುವ ಕೆಲಸವನ್ನು ಮಾಡುತ್ತಿದ್ದರು. ನನ್ನ ರಾಜಕೀಯ ಜೀವನದ ಇತಿಹಾಸದಲ್ಲಿ ನಾನು ಇದನ್ನು ಮೊದಲ ಬಾರಿಗೆ ನೋಡುತ್ತಿದ್ದೇನೆ. ಈ ಹಿಂದೆ ದಿವಂಗತ ಎಸ್.ಎಂ.ಕೃಷ್ಣ ಹಾಗೂ ಶ್ರೀ ಹೆಚ್.ಕೆ.ಪಾಟೀಲ್ ರವರ ಅಧಿಕಾರಾವಧಿಯಲ್ಲಿ 519.6 ಅಡಿಗಳಿಗೆ ಎತ್ತರಿಸಿದಾಗ ಏನು ಪರಿಹಾರ ಸಿಕ್ಕಿತ್ತೋ, ಅದರ ನಂತರ ಮೊದಲ ಬಾರಿಗೆ ಮೊನ್ನೆಯ ದಿನ ನಮ್ಮೆಲ್ಲರ ಸಂಧಾನವಾಯಿತು. ನಮ್ಮ ಮನವಿಗಳನ್ನು ಪರಿಗಣಿಸಿ, ನಮ್ಮೆಲ್ಲರ ಅಭಿಪ್ರಾಯಗಳನ್ನು ಸಮಾಧಾನದಿಂದ ಕೇಳಿಸಿಕೊಂಡರು. ಅವರು ನಮಗೆ ಪರಿಹಾರವನ್ನು ನೀಡುತ್ತಾರೆ ಎನ್ನುವ ಭರವಸೆಯನ್ನು ನಾವಿಂದು ಇಟ್ಟುಕೊಳ್ಳಬಹುದು. ಇದರ ಬಗ್ಗೆ ನಾನು ಇನ್ನು ಹೆಚ್ಚಿನದೇನೂ ಹೇಳುವುದಿಲ್ಲ. ಇದನ್ನು ಮುಂದಿನ ದಿನಗಳಲ್ಲಿ ನೋಡೋಣ. ಇಲ್ಲದಿದ್ದರೆ ಸಚಿವರು ಮತ್ತು ಸರ್ಕಾರದ ಬೇರೆ ಬೇರೆ ವ್ಯವಸ್ಥೆಗಳಿವೆ. ಅದು ಮುಂದಿನ ಮಾತು. ಇದನ್ನು ಸರ್ಕಾರವು ಮಾಡಲಿ ಎಂದು ನಾನು ಅಪೇಕ್ಷಿಸುತ್ತೇನೆ. ಇದರಲ್ಲಿ ಸರ್ಕಾರವು ಯಶಸ್ವಿಯಾಗಲಿ ಎಂದು ನಾನು ಶುಭ ಹಾರೈಸುತ್ತೇನೆ. ಮೂರು ವರ್ಷಗಳ ಭರವಸೆಯನ್ನು ಸರ್ಕಾರವು ನೀಡಿದ್ದು, ಅಷ್ಟರಲ್ಲಿ ಇದನ್ನು ಮಾಡಲಿ. ಬಾಕಿ ಇರುವ ಪ್ರಕರಣಗಳನ್ನು ವಿಲೇ ಮಾಡಬೇಕೆಂಬ ತೀರ್ಮಾನವನ್ನು ಸಚಿವರು ತೆಗೆದುಕೊಂಡಿದ್ದಕ್ಕಾಗಿ ನಾನು ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ. ವಿಧೇಯಕದಲ್ಲಿದ್ದ ಇನ್ನುಳಿದ ಪ್ರಾವಿಷನ್‌ಗಳನ್ನು ನಾನು ನೋಡುವುದಕ್ಕಾಗಲಿಲ್ಲ.

**(ಮುಂದು)**

986/18-12-2024/8-00/bkp-rn **(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಪಿ.ಹೆಚ್.ಪೂಜಾರ್(ಮುಂದು);**

ಒಟ್ಟಾರೆ, ಅವರು ಏನು ಮಾಡಿರುತ್ತಾರೆಂದು ನೋಡಿದಾಗ, ಇದನ್ನು ಸರಿಯಾದ ರೀತಿಯಲ್ಲಿ ತಿದ್ದುಪಡಿಯನ್ನು ತಂದಿದ್ದಾರೆಂದು ನಾನು ತಿಳಿದುಕೊಂಡಿದ್ದೇನೆ. ಯಾವುದೇ ದ್ವೇಷ, ಅಸೂಯೇ ಭಾವನೆ ಇರಲಾರದೇ, ಕೇಂದ್ರ ಸರ್ಕಾರ ಏನು ತಿದ್ದುಪಡಿ ಮಾಡಿ ತಂದಿದೆ, ಎಲ್ಲವೂ ಉತ್ತಮವಾದ ತಿದ್ದುಪಡಿಗಳನ್ನು ಮಾಡಿದೆ. ಅದರೊಳಗೆ

ಸಂಶೋಧನೆ ಮಾಡಿ, ಅಲ್ಲಿ ಏನೇನೂ ಇಲ್ಲ. ಅವುಗಳನ್ನು ನಮ್ಮ ರಾಜ್ಯದಲ್ಲಿ ಬಡವರ ಸಲುವಾಗಿ ಬೇಕೆಂದು ಸೇರಿಸಿದ್ದಾರೆ. ಹೀಗಾಗಿ ಈ ವಿಧೇಯಕವನ್ನು ಹೃತ್ಪೂರ್ವಕ ಮನಸ್ಸಿನಿಂದ ಸ್ವಾಗತ ಮಾಡುತ್ತೇನೆ.

**ಶ್ರೀ ಕೇಶವ ಪ್ರಸಾದ್ ಎಸ್. (ವಿಧಾನಸಭಾಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಅವಕಾಶಕ್ಕಾಗಿ ಧನ್ಯವಾದಗಳು. ಸಿವಿಲ್ ಪ್ರಕ್ರಯಾ ಸಂಹಿತೆ (ಕರ್ನಾಟಕ ತಿದ್ದುಪಡಿ) ವಿಧೇಯಕ, 2024 ಅನ್ನು ನಾನು ಸ್ವಾಗತ ಮಾಡುತ್ತೇನೆ. ಮಾನ್ಯ ಸಚಿವರು ಮಾತನಾಡುವಂತಹ ಸಂದರ್ಭದಲ್ಲಿ ಎಲ್ಲಾ ಸಂಗತಿಗಳನ್ನು ವಿವರಿಸಿ ಹೇಳಿದ್ದಾರೆ. ಇದು ಒಂದು timeframe ಒಳಗಡೆ ನ್ಯಾಯದಾನ ವ್ಯವಸ್ಥೆಯನ್ನು ತಂದಿರುವಂತಹದ್ದು ಶ್ಲಾಘನೀಯ ಮತ್ತು ಅಭಿನಂದನಾರ್ಹ. ಹಾಗೆಯೇ ಈ Justice process ಅನ್ನು ಎಲ್ಲೋ ಒಂದು ಕಡೆ monitor ಮಾಡಬೇಕು, ಯಾವುದೋ ಒಂದು ಕಾಲಮಿತಿಯೊಳಗಡೆ ಇದು ಆಚೆ ಬರಬೇಕು ಎನ್ನುವುದಕ್ಕೆ ಒಂದು ಅಂಕಿ-ಅಂಶ ಕೂಡ ಇರಬೇಕು, data ಸಹ ಬೇಕು, ನನ್ನದೇ ಒಂದು ಕೇಸ್ ಸುಮಾರು 52 ವರ್ಷಗಳಿಂದ ನಡೆಯುತ್ತಿದೆ. ನಮ್ಮ ತಂದೆಯವರ ಕೇಸ್ ಇನ್ನೂ ಸಹ ತೀರ್ಮಾನವಾಗಿರುವುದಿಲ್ಲ. 1978ರಿಂದ ನಾನು ಇನ್ನೂ ಕೇಸ್ ನಡೆಸುತ್ತಿದ್ದೇನೆ. ಸುಪ್ರೀಂ ಕೋರ್ಟ್‌ನಲ್ಲಿ ಗೆದ್ದು ಬಂದು ಸಿವಿಲ್ ಕೇಸ್‌ನಲ್ಲಿ ಇದಕ್ಕೆ vacate ಮಾಡಿಸಲು ಹಾಕಿಕೊಂಡಿದ್ದೇನೆ. ನನ್ನ ಕೇಸು ಇಷ್ಟು ದಿವಸಗಳಿಂದಲೂ ನಡೆಯುತ್ತಿದೆ. ಹಾಗೆಯೇ ಸರ್ಕಾರಕ್ಕೆ accountability ಇದ್ದಂತೆ ಕೋರ್ಟ್‌ಗೂ ಸಹ ಒಂದು accountability ಇರಬೇಕು. ಅಂದರೆ, ಅವರು ಮುಂದೆ ಎಷ್ಟು ದಾವೆಗಳನ್ನು ಹೂಡುತ್ತಾರೆ, ಏನು ತೀರ್ಮಾನವಾಯಿತು, ಎಷ್ಟು ದಿನಗಳಲ್ಲಿ ತೀರ್ಮಾನವಾಯಿತು, ಎನ್ನುವುದರ ಬಗ್ಗೆ ಗೊತ್ತಾಗಬೇಕು. Genuine case ಇದೆ, ಅದಕ್ಕೆ ಸಮಯ ಕೊಡಬೇಕೆನ್ನುವುದಕ್ಕೆ ಇರಲಿ. ಎಲ್ಲಿ time ಕೊಡಬೇಕೋ ಅಂತಹದ್ದಕ್ಕೆ ಇರಲಿ. ಹಾಗೆಯೇ ಎಲ್ಲಿ ನ್ಯಾಯ ವ್ಯವಸ್ಥೆಯಲ್ಲಿ ನಾವು ಮಾತುಕತೆಯಿಂದ ಬಗೆಹರಿಸಿಕೊಳ್ಳಬಹುದೋ, ಸಣ್ಣ ಸಣ್ಣ ವಿಚಾರಗಳವೆಯೋ ಅದಕ್ಕೂ ಕೂಡ ಲೋಕ್ ಅದಾಲತ್‌ಗಳವೆ. ಅವುಗಳಿಗೆ ತುಂಬಾ ಒತ್ತು ಕೊಡಬೇಕು, ಸರಿ ಮಾಡಬೇಕು ಎನ್ನುವಂತಹದ್ದನ್ನು ಸ್ವಾಗತಿಸುತ್ತೇನೆ. ಹಾಗೆಯೇ cases pending ಇರುವ ಬಗ್ಗೆ ಹೇಳಿದ್ದಾರೆ. Pendency ಯಾವ ಕಾರಣಕ್ಕೆ ಇದೆ ಎನ್ನುವುದನ್ನೂ ನೋಡಬೇಕು. ಕೆಲವು ಸಲ the show should go on ಎನ್ನುವಂತಹದ್ದು ಆಗಿಬಿಡುತ್ತದೆ. ಅಂದರೆ, ನನಗೆ ಕೆಲಸವಿಲ್ಲದಿದ್ದರೆ ಏನಪ್ಪ ಆಗುತ್ತದೆ ಎನ್ನುವಂತಹ ಭಯ, ಕೋರ್ಟ್‌ಗೂ ಇರಬಾರದು, ನನ್ನ ಮುಂದೆ ಕೇಸ್ ಬಂದರೆ ಇವತ್ತೇ ತೀರ್ಮಾನ ಮಾಡುತ್ತೇನೆ, ಈ ರೀತಿಯ ವ್ಯವಸ್ಥೆ ಹೋಗಬೇಕೇ ಹೊರತು ಕೇಸ್ ಪೆಂಡಿಂಗ್ ಇಡದೇ ಹೋದರೆ ನನ್ನ ಕೋರ್ಟ್ close ಆಗಿ ಬಿಡುತ್ತದೆ ಎನ್ನುವಂತಹ ಭಯವೇಕೆ ಇರಬೇಕು? ನಾನು ಈಗ ನಮ್ಮ ಮಾನ್ಯ ನಾಗರಾಜುರವರು ಅಧ್ಯಕ್ಷರಾಗಿರುವಂತಹ ಹಕ್ಕುಬಾಧ್ಯತಾ ಸಮಿತಿಯಲ್ಲಿ ಸದಸ್ಯನಾಗಿದ್ದೇನೆ. ಅದರಲ್ಲಿ application ಬರದೇ ಇದ್ದರೆ ನಮಗೆ ಕೆಲಸವೇ ಇಲ್ಲ. ಆಗ ನಾನು ಹೇಳಿದೆ, application permanent ಆಗಿ ನೀವೇ ಹೇಳಿ ಹಾಕಿಸಬೇಕೆಂದು ಹೇಳಿದೆ. ಇಲ್ಲದಿದ್ದರೆ, ನಮಗೆ ಇಲ್ಲಿ ಕೆಲಸ ಇಲ್ಲವೇ ಇಲ್ಲ. ನಮ್ಮನ್ನೆಲ್ಲಾ ಬೇರೆ ಕಡೆ ವರ್ಗ ಮಾಡಿಬಿಡಿ ಎಂದು ನಮ್ಮ ಹಕ್ಕುಬಾಧ್ಯತಾ ಸಮಿತಿಯ ಅಧ್ಯಕ್ಷರಾದ ಮಾನ್ಯ ನಾಗರಾಜುರವರಿಗೆ ಹೇಳಿದೆ.

ಅಂದರೆ ಆ ರೀತಿ ಏನೂ ಇರುವುದಿಲ್ಲ. ನ್ಯಾಯದಾನ ವ್ಯವಸ್ಥೆ ಎಂದರೆ ಇರುತ್ತದೆ. ಅವರು ಮುಂದೆ ಮುಂದೆ ಬಂದರೆ ತೀರ್ಮಾನ ಮಾಡುತ್ತಾರೆ. ಅದಕ್ಕಾಗಿ ಕೇಸ್ ಅನ್ನು ಪೆಂಡಿಂಗ್ ಇಡಬೇಕು. ಇಲ್ಲದಿದ್ದರೆ, ನಮ್ಮ ವ್ಯವಸ್ಥೆ ರನ್ ಆಗುವುದಿಲ್ಲವೆಂಬ ಮನಸ್ಥಿತಿಯಿಂದ ಕೋರ್ಟ್‌ಗಳು ಆಚೆಗೆ ಬರಬೇಕಾಗುತ್ತದೆ. ನಾವೂ ಅದಕ್ಕೆ ಪೂರಕವಾದ ವ್ಯವಸ್ಥೆಗಳನ್ನು ತಂದುಕೊಡಬೇಕಾಗುತ್ತದೆ. ಇದನ್ನು ನಾನು ಸ್ವಾಗತ ಮಾಡುತ್ತೇನೆ. ಸಚಿವರು ಮುಂದೆ ಅಂದರೆ ಅಕಸ್ಮಾತ್ ನಾವು ತಂದಿರುವಂತಹ ತಿದ್ದುಪಡಿಯಲ್ಲಿ ಸಣ್ಣ ಪುಟ್ಟ ಬದಲಾವಣೆ ಬಂದರೆ ತೆರೆದ ಮನಸ್ಸಿನಿಂದ ಅದನ್ನು ಸ್ವೀಕಾರ ಮಾಡಿ incorporate ಮಾಡಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಕೇಳಿಕೊಳ್ಳುತ್ತೇನೆ.

**ಸಭಾಪತಿಯವರು:-** ಮಾನ್ಯ ಕೇಶವ ಪ್ರಸಾದ್‌ರವರು ಇವರೋ ಅಲ್ಲವೋ ಎಂದು ನನಗೆ ಸಮಸ್ಯೆ ಬರುತ್ತಿದೆ. ಬೆಂಗಳೂರಿನಲ್ಲಿ ಮಾತನಾಡುವುದಕ್ಕೆ ನೀನು ಇಲ್ಲಿ ಬೆಳಗಾವಿಗೆ ಬಂದು ಎಷ್ಟು ಜಾಣ ಆಗಿದ್ದೀಯಾ ನೀನು!

**ಶ್ರೀ ಕೇಶವ ಪ್ರಸಾದ್ ಎಸ್.:-** ಮಾನ್ಯ ಸಭಾಪತಿಯವರೇ, ಆಮೇಲೆ ಇನ್ನೊಂದು ವಿಚಾರ ಇದೆ. ಆಗಲೇ ನಾನು ಹೇಳಬೇಕೆಂದಿರುವುದನ್ನು ಈಗಲೇ ಹೇಳಿಬಿಡುತ್ತೇನೆ. ಸರ್ ಒಂದೇ ಒಂದು ನಿಮಿಷ. ಸರ್ ಎಲ್ಲಾ ವಿಧೇಯಕಗಳನ್ನು ಈ ತರಹ ತಂದುಬಿಟ್ಟರೆ ಹೇಗೆ?

ಮಾನ್ಯ ಸಭಾಪತಿಯವರೇ, ಇವತ್ತು 14 ವಿಧೇಯಕಗಳನ್ನು ತಂದಿದ್ದಾರೆ. ದಿನಕ್ಕೆ ಒಂದೆರಡು-ಮೂರು ವಿಧೇಯಕಗಳು ಬಂದರೆ ಅವುಗಳನ್ನು ಒಂದು ಗುಣಮಟ್ಟದಲ್ಲಿ ಚರ್ಚಿಸಲು ಸಮಯವನ್ನು ಕೊಡುತ್ತೇವೆ. ಕೊನೆಯ ದಿನ rush ಮಾಡಿ ಯಾವುದನ್ನೂ ಸರಿಯಾಗಿ ಚರ್ಚೆಗೆ ಒಳಪಡಿಸದೇ ಅದಕ್ಕೆ ಸರಿಯಾದ ಗಮನ ಕೊಡದೇ; ಏಕೆಂದರೆ, ಎಲ್ಲರೂ ಇದರಲ್ಲಿ ಭಾಗವಹಿಸುವುದಿಲ್ಲ. ಆಸಕ್ತರು ಕೆಲವರು ಇರುತ್ತಾರೆ. ನಮ್ಮಂತಹವರ ಮೇಲೆ ಲೋಡ್ ಆಗಿಬಿಡುತ್ತದೆ. ದಯವಿಟ್ಟು, ತಮ್ಮ ಮೂಲಕ ಸರ್ಕಾರಕ್ಕೆ ಕೇಳುತ್ತೇನೆ. ಮೊದಲನೇ ದಿನದಿಂದಲೇ ದಿನಕ್ಕೆ ಒಂದೆರಡು ವಿಧೇಯಕಗಳನ್ನು ತರಲಿ ಎಂದು ಹೇಳಲಿಕ್ಕೆ ಬಯಸುತ್ತೇನೆ.

**ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ. (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೆ, ಸಿವಿಲ್ ಪ್ರಕ್ರಿಯಾ ಸಂಹಿತೆ (ಕರ್ನಾಟಕ ತಿದ್ದುಪಡಿ) ವಿಧೇಯಕ -2024 ಅನ್ನು ನಾನು ಸ್ವಾಗತಿಸುತ್ತೇನೆ. ಕೆಲವೊಂದು practical ನಮ್ಮ ನ್ಯಾಯಾಲಯದ ನಿತ್ಯದ ಜೀವನದಲ್ಲಿ ಆಗುವಂತಹ ಒಂದೆರಡು ಸಂಗತಿಗಳನ್ನು ಮಾನ್ಯ ಸಚಿವರ ಗಮನಕ್ಕೆ ತರುತ್ತೇನೆ. ಅವರ ಅನುಭವದಲ್ಲಿದೆ ಮತ್ತು ಅವರು ಈ ಬಗ್ಗೆ ಕೂಡ ತುಂಬಾ ವಿಸ್ತಾರವಾಗಿ ಮಾತನಾಡಿದ್ದಾರೆ. ಇದರಲ್ಲಿ ಬರುವಂತಹ ಏನು ನಿಬಂಧನೆಗಳನ್ನು ಹಾಕಿದ್ದಾರೆಯೋ ಬಹುಶ: ಅದು ಹೊರಗೆ ಸಾರ್ವಜನಿಕ ವಲಯದಲ್ಲಿ ಕೋರ್ಟ್‌ಗಳ ಬಗ್ಗೆ ಇರುವಂತಹ ಭಾವನೆಯನ್ನು ಹೋಗಲಾಡಿಸುವ ದೃಷ್ಟಿಯಲ್ಲಿ ತ್ವರಿತಗತಿಯಲ್ಲಿ ಇತ್ಯರ್ಥಗಳು, ತೀರ್ಮಾನಗಳು ಬರಬೇಕೆಂದು ಹೇಳುವ ಹಿನ್ನೆಲೆಯಲ್ಲಿ ಇದು ಒಳ್ಳೆಯ, ದಿಟ್ಟವಾದ ಹೆಜ್ಜೆ ಎಂದು ಹೇಳುವುದನ್ನು ಒಪ್ಪಿಕೊಂಡರೂ ಸಹ practical ಆಗಿ ಇದು ಎಷ್ಟರಮಟ್ಟಿಗೆ ಆಗುತ್ತದೆ ಎಂದು ಹೇಳುವುದು ಕೂಡ ನನಗೆ ಒಂದು ಸಣ್ಣ ಸಂಶಯವಿದೆ. ಬೇಗ ಆಗಬೇಕೆಂಬುದು ಸರಿ. ಆದರೆ, ಬೇಗ ಆಗುವ ರಭಸದಲ್ಲಿ ತೊಂದರೆಯೂ ಆಗದ ರೀತಿಯಲ್ಲಿ ಗಮನ ಇರಬೇಕಾಗುತ್ತದೆ. ಎಷ್ಟೋ ಬಾರಿಗೆ ಇದನ್ನು ಕೇಳಿದರೆ ಕೆಲವು Judges ಅಂದರೆ, ನಮ್ಮ

ಬೆಳ್ತಂಗಡಿಯಲ್ಲಿ Senior Civil Judge ಆಗಿ ಒಬ್ಬರು ಮಹಿಳೆ ಬಂದಿದ್ದರು. ಸುಮಾರು ನಮ್ಮ ಬಹಳ ಬೇಡಿಕೆಯ ನಂತರ ಆ ಕೋರ್ಟ್ ಪುತ್ತೂರಿನಿಂದ ಬೆಳ್ತಂಗಡಿಗೆ additional Court ಆಗಿ shift ಆಗಿತ್ತು. ಒಂದೇ ವರ್ಷದಲ್ಲಿ ಆ ತಾಯಿ adjournment ಕೊಡುವುದಿಲ್ಲವೆಂದು ಹೇಳಿದರೆ ಕೊಡುವುದೇ ಇಲ್ಲ. ಬೆಳಗ್ಗೆ ಇಟ್ಟರೆ ಮಧ್ಯಾಹ್ನ, ಮಧ್ಯಾಹ್ನ ಇಟ್ಟರೆ ಸಂಜೆ. ಸಿವಿಲ್ ಸಂಹಿತೆ ಏನಿದೆ, ಅದರ ಚೌಕಟ್ಟಿಗೆ ಒಳಪಟ್ಟು ಹೊರಗಡೆಗೆ ಹೋಗದೇ ಎಲ್ಲಿಯವರೆಗೆ ಒಂದು ವರ್ಷದ ಕೊನೆಯವರೆಗೆ ಬಂತು ಎಂದರೆ ನಮ್ಮ ಬೆಳ್ತಂಗಡಿಯಲ್ಲಿ Senior Civil Judge Court ಬೇಡ; ಎಂದರೆ ಏಕೆಂದರೆ, ಅಲ್ಲಿ ಕೇಸ್‌ಗಳೇ ಇಲ್ಲವೆಂದು ಹೇಳುವಷ್ಟರಮಟ್ಟಿಗೆ ಬಹಳ strict ಆಗಿ ಮಾಡಿದ್ದಾರೆ. ಹಾಗೆಂದು ಅವರ judgment ಏನೂ ಅವಸರದ judgment ಅಲ್ಲ. ಆ judgment ನಲ್ಲಿ ತೂಕವಿತ್ತು. ಅದನ್ನು ವಿಮರ್ಶೆ ಮಾಡುವ ರೀತಿ ಅಥವಾ ಯಾರಿಗಾದರೂ ಎಲ್ಲಿಯೇ ಹೋದರೂ ಆ judgment ನಿಲ್ಲುತ್ತದೆ ಎಂದು ಹೇಳುವಷ್ಟರಮಟ್ಟಿಗೆ ಪ್ರಬುದ್ಧತೆ ಅದರಲ್ಲಿತ್ತು. ಆ ರೀತಿಯ judgments ಸಹ ಇವೆ. ಆದರೆ, ಎಷ್ಟೋ ಬಾರಿಗೆ ಆಗುವುದು ಏನೆಂದರೆ, ಈ ತಿದ್ದುಪಡಿಯಲ್ಲಿರುವಂತಹ ಸಂಗತಿಗಳು, ಇಂತಿಷ್ಟು ದಿವಸಗಳಲ್ಲಿ ಹಾಕಬೇಕೆನ್ನುವುದು ಇದೆ. ಏನಿದ್ದರೂ ಕೂಡ ಕೋರ್ಟ್‌ನಲ್ಲಿ ಅವಕಾಶಗಳು ಇದ್ದೇ ಇರುತ್ತದೆ. ಈ statement ಹಾಕಲಿಲ್ಲವೆಂದು ಹೇಳಿದ ಕೂಡಲೇ ಒಂದು petition ಅನ್ನು ನಿಯಮ 151 ನಲ್ಲಿಯೋ ಅಥವಾ ಯಾವುದರಲ್ಲಿಯೋ ಹಾಕಿ ಮುಂದಕ್ಕೆ ಹೋಗುತ್ತದೆ. ಮುಂದಕ್ಕೆ ಹೋಗುತ್ತದೆ ಮಾತ್ರವಲ್ಲ, ಒಂದು ವೇಳೆ ಆದಷ್ಟುಬೇಗ ಅವಕಾಶ ಕೊಡಲಿಲ್ಲವೆಂದರೆ ಆ ಅವಕಾಶದ ಮೇಲೆ ಅಪೀಲು ಹಾಕುತ್ತಾರೆ. ಆ ಅಪೀಲು ಹಾಕಿ ಆ ಕಾರಣಕ್ಕೆ ಏನು ಒಮ್ಮೆ ಒಂದು ತಿಂಗಳು ಹೆಚ್ಚಿಗೆ ಅವಕಾಶ ಕೊಟ್ಟಿದ್ದರೆ ಎಷ್ಟು ಬೇಗ ಮುಗಿಯುತ್ತಿತ್ತೋ ಅದಕ್ಕಿಂತ ಹೆಚ್ಚು ಸಮಯ ಈ ಅಪೀಲು ಅಥವಾ ಬೇರೆ ಬೇರೆ ಕಡೆಗೆ ಹೋದಾಗ ಆಗುತ್ತದೆ ಎಂದು ಹೇಳುವಂತಹ ಭಾವನೆ ವ್ಯಕ್ತಪಡಿಸುತ್ತಾ, ಇದರಲ್ಲಿ ನಮೂದಿಸಿರುವ ಬದಲಾಣೆಗಳು ಖಂಡಿತವಾಗಿಯೂ ಕೋರ್ಟ್‌ನ ವ್ಯವಸ್ಥೆಗೆ ಹೆಚ್ಚಿನ ಶಕ್ತಿಯನ್ನು ಕೊಡುತ್ತದೆ, ಜನರಿಗೆ ಹೆಚ್ಚಿನ ವಿಶ್ವಾಸವನ್ನು ಕೊಡುತ್ತದೆ ಎಂದು ಹೇಳುತ್ತೇನೆ. ಮಾನ್ಯ ಎಸ್.ಕೇಶವ ಪ್ರಸಾದ್‌ರವರು ಹೇಳಿರುವ ಹಾಗೆ, ಈಗ ಇದರ ಬಗ್ಗೆ ಸಕಾಲ ಎಂದು ಬಂತು. ಎಲ್ಲಾ Sections ಇವೆ. ಆದರೆ, ಅದು practical ಆಗಿ ಆಗುತ್ತದೆಯೇ ಎಂದು ಕೇಳಿದರೆ ಇವತ್ತು ಸಕಾಲ ಹೆಚ್ಚು ಕಡಿಮೆ ಮರೆತು ಹೋದ ಹಾಗೆ ಆಗಿದೆ. ಸಕಾಲದಲ್ಲಿ ಅರ್ಜಿ ಕೊಟ್ಟ ಇಂತಿಷ್ಟು ದಿವಸಗಳಲ್ಲಿ ಕೊಡಬೇಕೆಂದು ಹೇಳುವುದು ಈಗ ತುಂಬಾ ಕಡೆಗಳಲ್ಲಿ ಇದು ಅನ್ವಯಕ್ಕೆ ಬರುತ್ತಿಲ್ಲ. ಈ ದೃಷ್ಟಿಯಲ್ಲಿ ಇದರ ಬಗ್ಗೆ ಒಂದು monitoring ಬೇಕಾಗಿದೆ. ಇದರ ಪ್ರಕಾರ ಕೋರ್ಟ್‌ಗಳು ನಡೆಯುತ್ತವೆಯೇ ಎಂದು ಹೇಳುವುದು ಎಲ್ಲೋ ಒಂದು ಕಡೆಯಲ್ಲಿ ನೋಡಬೇಕಾಗಿರುವ ಅವಶ್ಯಕತೆಯಿದೆ ಎಂದು ಹೇಳುತ್ತಾ ನಾನು ಈ ತಿದ್ದುಪಡಿಯನ್ನು ಸ್ವಾಗತಿಸುತ್ತೇನೆ.

**ಶ್ರೀ ಕೆ.ಎ.ತಿಪ್ಪೇಸ್ವಾಮಿ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೆ, ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು. ಮಾನ್ಯ ಸಚಿವರಲ್ಲಿ ಕೇಳುತ್ತೇನೆ. ಇತ್ತೀಚೆಗೆ ಕೇಂದ್ರ ಸರ್ಕಾರ ಕೂಡ ನಾಗರಿಕ ಸಂಹಿತೆಯಲ್ಲಿ ಕೆಲವೊಂದು ಬದಲಾವಣೆಗಳನ್ನು ತಂದಿದೆ. ಅಲ್ಲಿ ಕೂಡ ಸರಳೀಕರಣ ಮಾಡಿ ಯಾವ ರೀತಿಯಾಗಿ quick ಆಗಿ ಕೇಸ್‌ಗಳನ್ನು solve ಮಾಡಬೇಕೆಂದು ತರಲಾಗಿದೆ. ತಾವು ತಂದಿರುವುದು ಅದಕ್ಕೆ ಪೂರಕವಾಗಿ

complimentary ಯಾಗಿ ಇದೆ ಎಂದು ತಿಳಿದುಕೊಂಡಿದ್ದೇನೆ. ಯಾವುದು ಕೂಡ ವಿರುದ್ಧವಾಗಿರುವುದು ಅಥವಾ clash ಆಗುವಂತಹದ್ದು ಇಲ್ಲ.

**ಶ್ರೀ ಹೆಚ್.ಕೆ.ಪಾಟೀಲ್ (ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪ್ರವಾಸೋದ್ಯಮ ಸಚಿವರು):-** ಮಾನ್ಯ ಸಭಾಪತಿಯವರೆ, ಅದು Criminal Procedure Code, Evidence Act ಇವೆಲ್ಲಾ ಇವೆ. This is nothing to do with that. .... ಇದು Civil Procedure.

**ಶ್ರೀ ಕೆ.ಎ. ತಿಪ್ಪೇಸ್ವಾಮಿ:-** ತಾವು ಇಲ್ಲಿ ಒಂದು time frame ಅನ್ನು ತರುತ್ತಿದ್ದೀರಿ. Time frame ನಲ್ಲಿ ಯಾವ ರೀತಿಯಾಗಿ ಕೇಸ್‌ಗಳು ಎಷ್ಟು ಅವಧಿಯಲ್ಲಿ ಆಗಬೇಕೆನ್ನುವುದನ್ನೂ ಕೂಡ ಬಹುಶಃ ನಾಳೆ fix ಮಾಡುತ್ತೀರಿ ಎಂದು ಕಾಣುತ್ತದೆ. ಇದರ ಬಗ್ಗೆ ಏನಾದರೂ ತಾವು ಹೈಕೋರ್ಟ್, Chief Justice ಜೊತೆಗೆ discuss ಮಾಡುವಂತಹ ಅವಶ್ಯಕತೆಯಿದೆಯೇ? ಮಾಡಬೇಕೆಂದು ಏನೂ ಇಲ್ಲ. ಇದೆಯೇ? ಏಕೆಂದರೆ, Judges and Advocates ಇದಕ್ಕೆ stick on ಆಗಬೇಕಾಗುತ್ತದೆ. ಬಹುಶ: ತಾವು ಈಗಾಗಲೇ ಮುಂಚಿತವಾಗಿ ಹೇಳಿದ ಹಾಗೆ ಅವರದ್ದು ಯಾವುದೂ ವಿರೋಧಾಭಾಸವಾಗಿ ಬರುವಂತಹ ಹೇಳಿಕೆಗಳು ಬರುವಂತಹ ಅವಶ್ಯಕತೆಯಿರುವುದಿಲ್ಲ. ತಾವು ಏನಾದರೂ progressive ಆಗಿ ಏನಾದರೂ consultation ಮಾಡಿದ್ದೀರಾ? ಅವಶ್ಯಕತೆಯಿದೆಯೇ ಅಥವಾ ಮಾಡಿದ್ದೀರಾ ಎನ್ನುವುದನ್ನು ಕೇಳುತ್ತೇನೆ.

**ಶ್ರೀ ಹೆಚ್.ಕೆ.ಪಾಟೀಲ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರುಗಳು ಕೆಲವು ಸಲಹೆಗಳನ್ನು ಕೊಟ್ಟಿದ್ದಾರೆ.

**(ಮುಂದು)**

**(987) 18.12.2024 08.10 ಎಸ್‌ವಿ-ಆರ್‌ಎನ್** **(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಹೆಚ್.ಕೆ.ಪಾಟೀಲ್ (ಮುಂದು):**

ಮಾನ್ಯ ಪೂಜಾರ್‌ರವರು shall ಅನ್ನು should ಮಾಡಬೇಕೆಂದು ಸಲಹೆಯನ್ನು ಮಾಡಿದ್ದಾರೆ. ತಮ್ಮ benefit ಗಾಗಿ Section-89A. Mediation and Settlement.- ರಲ್ಲಿರುವ ಅಂಶಗಳನ್ನು ನಾನು ಮತ್ತೊಮ್ಮೆ ಓದುತ್ತೇನೆ. It reads: "*(1) Notwithstanding anything contained in any provision under the Code of Civil Procedure, every suit that does not contemplate any urgent interim relief shall be referred to mediation and notice shall be issued to defendants accordingly.*" 'Shall' is mandatory thing and it is already there. You are also aware that in legislative language we use 'shall' and 'should' is not used.

ಎರಡನೆಯದಾಗಿ, ಮಾನ್ಯ ತಿಪ್ಪೇಸ್ವಾಮಿಯವರು ನ್ಯಾಯಾಂಗ ಅಧಿಕಾರಿಗಳೊಂದಿಗೆ ಚರ್ಚೆ ಮಾಡಿದ್ದೀರಾ ಎಂದು ಕೇಳಿದರು. ನಾನು ಬಹಳ ಮಂದಿಯೊಂದಿಗೆ ಚರ್ಚೆ ಮಾಡಿದ್ದೇನೆ. Many legal luminaries

ಜೊತೆಗೆ ನಾನು ಚರ್ಚೆ ಮಾಡಿದ್ದೇನೆ. ಅಧಿಕೃತವಾಗಿ Supreme Court Judges, High Court Judges and District Court Judges ಇವರೆಲ್ಲರೂ ಇದ್ದ ವೇದಿಕೆಯಲ್ಲಿ ಈ ವಿಷಯವನ್ನು ಪ್ರಸ್ತಾಪ ಮಾಡಿದ್ದೇನೆ. ಕೆಲವಾರು ನ್ಯಾಯಾಧೀಶರು ಇದಕ್ಕೆ ಮೆಚ್ಚುಗೆಯನ್ನು ವ್ಯಕ್ತಪಡಿಸಿ, 'this alone can save our Judiciary' ಎನ್ನುವಂತಹ ಮಾತು ನಮ್ಮ ಕಿವಿಗೆ ಬೀಳುವ ಹಾಗೆ ಸ್ಪಂದಿಸಿದ್ದಾರೆ.

ಮಾನ್ಯ ಪ್ರತಾಪ ಸಿಂಹ ನಾಯಕ್ ಅವರು ಹೇಳಿದಂತೆ ಮತ್ತೊಂದು application ಕೊಡುತ್ತಲೇ ಇರುತ್ತಾರೆ. ಅದರ ಸಲುವಾಗಿ ನಾವು ಈ ವ್ಯವಸ್ಥೆಯನ್ನು ಹೀಗೆಯೇ ಬಿಡಲಿಕ್ಕಾಗುತ್ತದೆಯೇ? ತಾವು ಹೇಳಿದ ತಂತ್ರಗಾರಿಕೆಯನ್ನು ನಿಲ್ಲಿಸುವುದಕ್ಕೆ ಕಾನೂನಾತ್ಮಕವಾಗಿ ತಾವೇ ಮಾರ್ಗದರ್ಶನ ಮಾಡಿದರೆ ಅದನ್ನೂ ಮುಂದಿನ ದಿನಮಾನಗಳಲ್ಲಿ ಚಿಂತನೆ ಮಾಡಲಾಗುವುದು. ಆದರೆ ಅದು ಹೋಗಬೇಕು. 'Justice delayed is Justice denied' ಎಂದು ದೊಡ್ಡ ಬೋರ್ಡ್ ಹಾಕಿಕೊಂಡಿರುತ್ತೇವೆ. ಮಾನ್ಯ ಕೇಶವಪ್ರಸಾದ್ ಅವರು 1978ರಿಂದ ಒಂದು ಪ್ರಕರಣ ನಡೆಯುತ್ತಿದೆ ಎಂದು ಹೇಳಿದರು. How can Justice delayed is Justice denied makes any sense for him? Justice is denied for him. ಅಜ್ಜ ಹಾಕಿದ ಕೇಸ್, ಅಪ್ಪ, ಮಗನ ನಂತರ ಈಗ ಮೊಮ್ಮಗನ ಕಾಲಕ್ಕೂ ನ್ಯಾಯ ಸಿಗಲಿಲ್ಲ ಎಂದರೆ ನ್ಯಾಯದಾನ ವ್ಯವಸ್ಥೆಯಲ್ಲಿ ಆಮೂಲಾಗ್ರ ಬದಲಾವಣೆಯನ್ನು ತರಬೇಕು, ಸುಧಾರಣೆಯನ್ನು ತರಬೇಕು. ಕ್ರಾಂತಿಕಾರಕ ಹೆಜ್ಜೆಗಳನ್ನು ಇಡಬೇಕಾದುದು ಅನಿವಾರ್ಯ. What this man says, that man says is secondary. Ultimately, we have to look at those litigants. ಜನ ಸಾಮಾನ್ಯರನ್ನು ನಾವು ನೋಡಲೇಬೇಕಾದಂತಹ ಅನಿವಾರ್ಯ ಪರಿಸ್ಥಿತಿ ಇದ್ದು, ನ್ಯಾಯದಾನ ವ್ಯವಸ್ಥೆಯ ಮೂಲಕ ಜನರ ಬದುಕಿಗೆ ಒಳ್ಳೆಯದಾಗಬೇಕು. 'Justice is delayed is Justice denied' ಎನ್ನುವುದನ್ನು ವ್ಯವಸ್ಥೆಯೊಳಗಿರುವ ಎಲ್ಲರೂ ಅಂದರೆ ಕಾಯಿದೆ ಮಾಡುವವರು, interpret ಮಾಡುವ ನ್ಯಾಯಾಧೀಶರು, ಕಾನೂನನ್ನು ಜನರಿಗೆ ಮುಟ್ಟಿಸಬಹುದಾದ ವಕೀಲರು, ಅಧಿಕಾರಿಗಳು ಇವರೆಲ್ಲರನ್ನೂ ಸಹಿತ ಗಮನದಲ್ಲಿರಿಸಿಕೊಂಡು ಹೋದರೆ ಮಾತ್ರ ಜನ ಸಾಮಾನ್ಯರಿಗೆ ನ್ಯಾಯದಾನ ವ್ಯವಸ್ಥೆಯಲ್ಲಿ ವಿಶ್ವಾಸ ಮೂಡುತ್ತದೆ. ಅದು ಮೂಡುವುದರ ಸಲುವಾಗಿ ಈ ಪ್ರಯತ್ನ ಮಾಡುತ್ತೇನೆ.

**ಶ್ರೀ ಪಿ.ಹೆಚ್.ಪೂಜಾರ್:-** ಸರ್ಕಾರದ ಭರವಸೆಗಳ ಸಹಿತವಾಗಿ..

**ಶ್ರೀ ಹೆಚ್.ಕೆ.ಪಾಟೀಲ್:-** ತಾವೆಲ್ಲರೂ ಸ್ವಾಗತ ಮಾಡಿರುವುದಕ್ಕಾಗಿ ತಮಗೆಲ್ಲಾ ವಂದಿಸಿ ಈ ವಿಧೇಯಕವನ್ನು ಪಾಸ್ ಮಾಡಿಕೊಡಬೇಕೆಂದು ತಮ್ಮನ್ನು ಕೋರುತ್ತೇನೆ.

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ,

"ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2024ರ ಕರ್ನಾಟಕ ಸಿವಿಲ್ ಪ್ರಕ್ರಿಯಾ ಸಂಹಿತೆ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದು**

**ಖಂಡ 2 ರಿಂದ 8 ರವರೆಗೆ**

**ಸಭಾಪತಿಯವರು:- "ಖಂಡ 2 ರಿಂದ 8 ರವರೆಗೆ ಈ ವಿಧೇಯಕದ ಅಂಗವಾಗಿರುತ್ತದೆ"**
**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**(ಖಂಡ 2 ರಿಂದ 8 ರವರೆಗೆ ವಿಧೇಯಕಕ್ಕೆ ಸೇರಿಸಲಾಯಿತು)**

**ಖಂಡ-1 ಇತ್ಯಾದಿ**

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ,

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)**

**ಪ್ರಸ್ತಾವದ ಅಂಗೀಕಾರ**

**ಶ್ರೀ ಹೆಚ್.ಕೆ.ಪಾಟೀಲ್ (ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಮತ್ತು ಪ್ರವಾಸೋದ್ಯಮ ಸಚಿವರು):-** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2024ರ ಕರ್ನಾಟಕ ಸಿವಿಲ್ ಪ್ರಕ್ರಿಯಾ ಸಂಹಿತಿ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ,

"ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2024ರ ಕರ್ನಾಟಕ ಸಿವಿಲ್ ಪ್ರಕ್ರಿಯಾ ಸಂಹಿತೆ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು**

ಎ) **ಕರ್ನಾಟಕ ಮೋಟಾರು ವಾಹನಗಳ ತೆರಿಗೆ ನಿರ್ಧರಣೆ (ಎರಡನೆಯ ತಿದ್ದುಪಡಿ) ವಿಧೇಯಕ, 2024**

**ಪರ್ಯಾಲೋಚನಾ ಪ್ರಸ್ತಾವ**

**ಶ್ರೀ ಸಂತೋಷ್ ಎಸ್. ಲಾಡ್ (ಕಾರ್ಮಿಕ ಸಚಿವರು) (ಸಾರಿಗೆ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೆ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2024ನೇ ಸಾಲಿನ ಕರ್ನಾಟಕ ಮೋಟಾರು ವಾಹನಗಳ ತೆರಿಗೆ ನಿರ್ಧರಣೆ (ಎರಡನೆಯ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು**

**ಶ್ರೀ ಸಂತೋಷ್ ಎಸ್. ಲಾಡ್ (ಕಾರ್ಮಿಕ ಸಚಿವರು) (ಸಾರಿಗೆ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೆ, *Amendment of section 3A.- In the Karnataka Motor Vehicles Taxation Act, 1957 (Karnataka Act 35 of 1957) in section 3A, after sub-section (1A), the following shall be inserted, namely:- "(1B) In Addition to the existing cess of the tax levied under section 3 on the Motor Vehicles registered under the provisions of the Motor Vehicles Act, 1988 (Central Act 59 of 1988), additional cess of Rupees Five Hundred for two wheeler and Rupees One Thousand for Motor Cars shall be levied and collected on the non-transport vehicles at the time of registration for the purpose of the Karnataka Motor Transport and other Allied Workers Social Security and Welfare Fund.* ಈ ಹಿಂದಿನ ಬಿಲ್ ಪಾಸ್ ಮಾಡಿದ ಸಂದರ್ಭದಲ್ಲಿ Unorganized Sector ಬಗ್ಗೆ ತಾವೆಲ್ಲರೂ ಕೇಳುತ್ತಿದ್ದಿರಿ. ಈ two wheeler ಮತ್ತು four wheeler ದುಡ್ಡು ಸಂಗ್ರಹವಾಗುವುದು ಕೇವಲ ಒಂದು ಬಾರಿ ಮಾತ್ರ. It is at the time of registration for non-transport vehicles. ಮೋಟಾರ್ ಸೈಕಲ್‌ಗೆ ರೂ.500, four wheeler ಗೆ ರೂ.500 ಸಂಗ್ರಹಿಸುವುದು. ಇದರಿಂದ unorganized sector ಬಹಳ ಅನುಕೂಲವಾಗುತ್ತದೆ. ನಮ್ಮ Transport Board ಆಗುವುದಕ್ಕೆ ಕಾರಣಕರ್ತರಾದ ಮಾನ್ಯ ಮುಖ್ಯಮಂತ್ರಿಯವರಿಗೆ ಹಾಗೂ ಸಾರಿಗೆ ಸಚಿವರಾದ ಮಾನ್ಯ ರಾಮಲಿಂಗಾರೆಡ್ಡಿಯವರಿಗೆ ಈ ಸಂದರ್ಭದಲ್ಲಿ ನಾನು ಅಭಿನಂದನೆಗಳನ್ನು ಸಲ್ಲಿಸುತ್ತೇನೆ ಹಾಗೂ ಕೃತಜ್ಞತೆಗಳನ್ನೂ ಸಲ್ಲಿಸುತ್ತೇನೆ. ಏಕೆಂದರೆ ಅವರ ಪ್ರೋತ್ಸಾಹದಿಂದಾಗಿ ಇಂದು Transport Board ಆಗಿದೆ. This money will be used only for the scheme for the welfare of drivers, conductors, cleaners, station staffs, weigh-checking staffs, clerks, cash clerks, Depot clerks, time keepers, watchmen, attendants working in the tyre assembly and uncoupling units, motor garage,

loading and unloading workers, puncture repairers, wheel balancing and alignment units and water cleaning units, automobile body building units ಈ ರೀತಿಯಾಗಿ transport related ಇರುವ workers ಗಳಿಗೆ ಈ e-cess ಸಂಗ್ರಹವಾಗಿ ಇವರಿಗೆ ಮಾತ್ರ ಉಪಯೋಗವಾಗುವಂತಹ ಬಿಲ್ ಇದಾಗಿದೆ. ಈ ಹಣ ಸಂಗ್ರಹವಾದ ಮೇಲೆ Social Welfare Security, ಅಪಘಾತದಲ್ಲಿ ನಿಧನರಾದರೆ ಅವರ ಮಕ್ಕಳಿಗೆ ಹಣ ನೀಡುವುದು, based on to that money what we have collected number of programs can be made and I personally feel that we were collecting up to 150 crores. ರೂ.150 ಕೋಟಿಗಳವರೆಗೆ ಸಂಗ್ರಹವಾಗುತ್ತದೆ ಎನ್ನುವುದು ನನ್ನ ಅಂದಾಜು. ಸುಮಾರು 40 ಲಕ್ಷಕ್ಕೂ ಹೆಚ್ಚು ಜನ ಈ ವರ್ಗದಲ್ಲಿ ಕೆಲಸ ಮಾಡುವವರಿದ್ದಾರೆ. ಇದರಿಂದಾಗಿ unorganized sector ಗಳ ಆಟೋಚಾಲಕರು, 407 ವಾಹನ ಚಾಲಕರು, ಪಂಚರ್ ಹಾಕುವವರು, ಗ್ಯಾರೇಜ್‌ನಲ್ಲಿ ಕೆಲಸ ಮಾಡುವಂಥವರು ಇವರಿಗೆಲ್ಲಾ ಬಹಳಷ್ಟು ವರ್ಷಗಳಿಂದ ಯಾವುದೇ social security schemes ಗಳನ್ನಾಗಲೀ, social welfare reforms ಮಾಡಲಿಕ್ಕಾಗಲಿಲ್ಲ.

(ಮುಂದು)

(988) 18.12.2024 8.20 ಕೆಜಿ ಕೆಎಸ್ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಸಂತೋಷ್ ಎಸ್.ಲಾಡ್ (ಮುಂದು):**

ಈ ವಿಧೇಯಕದ ಮುಖಾಂತರ ಈ ತರಹ ಹಣ ಕೊಡುವುದರಿಂದ, ನಮಗೆ ಈ ಹಣ Transport Board ನಲ್ಲಿ unorganized sector ಗೆ collect ಆಗುವುದರಿಂದ ಅನುಕೂಲವಾಗುತ್ತದೆ. ಆದ್ದರಿಂದ ನಾನು ಈ ಸದನಕ್ಕೆ ಮನವಿಯನ್ನು ಮಾಡಿಕೊಳ್ಳುತ್ತೇನೆ, ದಯಮಾಡಿ ಈ ವಿಧೇಯಕಕ್ಕೆ ಅನುಮೋದನೆ ಮಾಡಬೇಕು ಹಾಗೂ ಈ ವಿಧೇಯಕವನ್ನು ಪಾಸ್ ಮಾಡುವುದಕ್ಕೆ ಸಹಕಾರ ಮಾಡಿಕೊಡಬೇಕೆಂದು ತಮ್ಮ ಮುಖಾಂತರ ಕಳಕಳಿಯ ಮನವಿಯನ್ನು ಮಾಡುತ್ತೇನೆ.

**ಶ್ರೀ ಕೆ.ಎ.ತಿಪ್ಪೇಸ್ವಾಮಿ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಅವಕಾಶ ನೀಡಿದ್ದಕ್ಕಾಗಿ ತಮಗೆ ಧನ್ಯವಾದಗಳು. 'Cess' ಉಪಕರ ಹಾಕುತ್ತಿದ್ದರು, ಇದು tax ಅಲ್ಲ. ಈಗಾಗಲೇ Karnataka Motor Vehicles Taxation Act ನಲ್ಲಿ cess ಅನ್ನು ಹಾಕಲಾಗುತ್ತಿದೆ. ಇದು ಸೇರಿ ಎಷ್ಟು percent cess ಆಗುತ್ತದೆ ಎಂಬುದನ್ನು ಮಾನ್ಯ ಸಚಿವರು ಹೇಳಬೇಕು.

**ಶ್ರೀ ಸಂತೋಷ್ ಎಸ್.ಲಾಡ್:-** ಮಾನ್ಯ ಸಭಾಪತಿಯವರೇ, the cess of Rupees Five Hundred for two-wheelers and Rupees One Thousand for Motor Cars shall be levied for a lifetime. ಇದು yearly or monthly ಹಾಕುವಂತಹದ್ದು ಅಲ್ಲ. ಒಬ್ಬ ವ್ಯಕ್ತಿ ಯಾವತ್ತು motorcycle ಖರೀದಿ ಮಾಡುತ್ತಾನೆ, ಆಗ 500 ರೂಪಾಯಿಗಳನ್ನು two-wheeler ಗೆ ಹಾಕುವಂತಹದ್ದು ಆಗಿದೆ. Motor Cars ಗೆ 1,000 ರೂಪಾಯಿಗಳನ್ನು ಹಾಕುವಂತಹದ್ದು ಆಗಿದೆ. The cess of Rupees

Five Hundred for two-wheelers and Rupees One Thousand for Motor Cars is levied for a lifetime.

**ಶ್ರೀ ಐವನ್ ಡಿ' ಸೋಜಾ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಇದರಿಂದ ವರ್ಷಕ್ಕೆ 150 ಕೋಟಿ ರೂಪಾಯಿಗಳು ಸಂಗ್ರಹವಾಗುತ್ತದೆ ಎಂದು ಹಾಗೂ it will be distributed to the unorganized sectors ಎಂದು ಹೇಳಿದ್ದಾರೆ. ಅಂದರೆ, rickshaw drivers ಗಳಿಗೆ, ಹೋಟೆಲ್‌ನಲ್ಲಿ ಕೆಲಸ ಮಾಡುವವರಿಗೆ, Transport Department ನಲ್ಲಿ ಕೆಲಸ ಮಾಡುವವರಿಗೆ, godown ನಲ್ಲಿ loading and unloading ಕೆಲಸ ಮಾಡುವ drivers, conductors ಹಾಗೂ cleaners ಇವರೆಲ್ಲರಿಗೂ ಕೊಡುತ್ತಾರೆ. Hon'ble Minister, you are collecting a huge amount of cess. ಈಗ ಅವರಿಗೆ ಇರುವಂತಹ scheme ಗಳು, ಮಾನ್ಯ ಸಚಿವರು ಈ ಹಣವನ್ನು ಯಾವ scheme ಗೆ ಬಳಸುತ್ತೇವೆಂದು ಹೇಳುವುದಿಲ್ಲ. ಅವರು ಕೇವಲ ಸಂಗ್ರಹಣೆ ಬಗ್ಗೆ ಹೇಳಿದ್ದಾರೆ. ಮತ್ತೆ distributing ಎಂದು ಹೇಳಿದ್ದಾರೆ. ಹೇಗೆ distribute ಮಾಡುತ್ತಾರೆ; ಏಕೆ ಮಾಡುತ್ತಾರೆ ಎಂಬುದನ್ನು ಮಾನ್ಯ ಸಚಿವರು ಹೇಳಬೇಕು. ಇದನ್ನು collect ಮಾಡುವುದು one-time achievement ಅಲ್ಲ. ಈ ಹಣವನ್ನು collect ಮಾಡಿ ಯಾವ ಯಾವ schemes ಗಳಿಗೆ ಕೊಡುತ್ತಾರೆ; ಈ ಹಣವನ್ನು collect ಮಾಡಿ ಯಾರಿಗೆ ಕೊಡುತ್ತಾರೆ, ಯಾವ scheme ಗೆ ಕೊಡುತ್ತೇವೆಂದು ಹೇಳಬೇಕಲ್ಲವೇ? I require an explanation from the Hon'ble Minister in this regard.

**ಶ್ರೀ ಕೆ.ಎಸ್.ನವೀನ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಸಾರಿಗೆ ಇಲಾಖೆಯಿಂದ ಈ ವಿಧೇಯಕವನ್ನು ತಂದಿದ್ದಾರೆ. ಸರ್ಕಾರದವರು ಎಲ್ಲೆಲ್ಲಿ ಸಿಗುತ್ತದೆಯೋ ಅಂತಹ ಕಡೆಗಳಲ್ಲಿ ಉಪಕರಗಳನ್ನು ಹಾಕುತ್ತಿದ್ದಾರೆ. ಈ ಉಪಕರ ಆಗುವಂತಹದ್ದನ್ನು ಆ ಇಲಾಖೆಯಿಂದ ಮತ್ತೊಂದು ಇಲಾಖೆಗೆ ವರ್ಗಾವಣೆಗೊಳಿಸುವ ಬಗ್ಗೆ ನಾವು ಸಮಿತಿ ಸಭೆಗಳಲ್ಲಿ ಸುಮಾರು ಬಾರಿ ಚರ್ಚೆ ಮಾಡಿದ್ದೇವೆ. ಎಷ್ಟೋ ಇಲಾಖೆಗಳಲ್ಲಿ ಉಪಕರ ಸಂಗ್ರಹಣೆ ಮಾಡಿರುವಂತಹದ್ದು ಆ ಸಂಬಂಧಪಟ್ಟ ಕೆಲಸಕ್ಕೆ ಬಳಕೆಯಾಗದೇ ಅಲ್ಲಿಯೇ ಇರುತ್ತದೆ. ಅದನ್ನು ಕೇಳಿದರೂ ಸಹ ಅದಕ್ಕೆ ಲೆಕ್ಕ ಕೊಡುವುದಿಲ್ಲ. ನಮ್ಮ ಬೆಂಗಳೂರಿನಲ್ಲಿ Beggary Cess ಎಂದು ಸಂಗ್ರಹಣೆ ಮಾಡುತ್ತಾರೆ. ಅದು ಎಷ್ಟು ಕೋಟಿ ರೂಪಾಯಿಗಳ ಹಣ ಇದೆ, ನಿಜವಾಗಲೂ ಯಾವ beggar ಗಳಿಗೂ ಅದರಿಂದ ಏನು ಉಪಯೋಗ ಆಗುತ್ತಿಲ್ಲ. ಈಗ ಮಾನ್ಯ ಸಚಿವರು ಕಾರಿಗೆ 1,000 ರೂಪಾಯಿಗಳು ಉಪಕರ ಎಂದು ಹೇಳಿದ್ದಾರೆ. ಪ್ರತಿದಿವಸ ಸಾವಿರಾರು ಕಾರುಗಳು registration ಆಗುತ್ತವೆ. ಸಾವಿರಾರೂ ಕೋಟಿ ರೂಪಾಯಿಗಳು ಸಂಗ್ರಹಣೆ ಆಗುತ್ತದೆ. ಅದನ್ನು ಯಾವ ರೀತಿ spend ಮಾಡಬೇಕೆಂದು planning ಇಲ್ಲ. ಸುಮ್ಮನೆ registration ಮಾಡಿಕೊಂಡು ಇದು ಒಂದನ್ನು ಹೊಸದಾಗಿ ಸೇರಿಸಿಬಿಟ್ಟು ಹಣವನ್ನು ವಸೂಲಿ ಮಾಡುವುದಕ್ಕೆ ಈ scheme ಅನ್ನು ತರುವುದಾದರೆ, ಸರ್ಕಾರ ಎಲ್ಲೆಲ್ಲಿ ಈ ತರಹದ... Two-wheeler ಖರೀದಿ ಮಾಡಿದವರಿಗೆ ಮತ್ತೆ 500 ರೂಪಾಯಿಗಳು ಹೆಚ್ಚುವರಿ ಆಗುತ್ತದೆ. ಅದೇರೀತಿ ಒಂದು ಸಣ್ಣ ಕಾರು

ತೆಗೆದುಕೊಂಡವರಿಗೆ 1,000 ರೂಪಾಯಿಗಳು ಹೆಚ್ಚುವರಿ ಆಗುತ್ತದೆ. ಈ ತರಹ ದಯವಿಟ್ಟು ಉಪಕರಗಳನ್ನು ವಿಧಿಸಬೇಡಿ. ತಾವು unorganized sector ಗೆ ವಿಶೇಷವಾಗಿ Transport Department ನಲ್ಲಿ ಕೆಲಸ ಮಾಡುವಂತಹವರು ಇದ್ದಾರೆ, ಅವರಿಗೆ insurance ಕೊಡುವಂತಹದ್ದು ಆ ತರಹದ ಏನಾದರೂ ಯೋಜನೆ ಇದ್ದರೆ, ಅದಕ್ಕೆ ದಯವಿಟ್ಟು ಒಂದು fund ಮಾಡಿಟ್ಟು ಎಲ್ಲರಿಗೂ insurance ಮಾಡಲಿ. ಅವರಿಗೆ ಏನಾದರೂ injury ಆದರೆ ಅಥವಾ ಅವರು ಏನಾದರೂ handicap ಆದರೆ ಅವರು ಕೆಲಸ ಮಾಡುವಂತಹ ಸಂದರ್ಭದಲ್ಲಿ ಅವರಿಗೆ ಏನಾದರೂ ಅಪಘಾತವಾದರೆ, ಈ ರೀತಿಯ ಏನಾದರೂ onsite ಅಪಘಾತವಾದರೆ ಅಂತಹದ್ದಕ್ಕೆ ಪರಿಹಾರ ಕೊಡುವುದಕ್ಕೆ ಹಣ ಸಂಗ್ರಹಣೆ ಮಾಡಲಿ. ಇದನ್ನು ಜೀವನ ಪರ್ಯಂತ ಸಂಗ್ರಹಣೆ ಮಾಡುವುದೇ ಒಂದು ಉಪಕರ ಎಂದು ಹಾಕಿಬಿಟ್ಟು, ಈ ಉಪಕರ ಎನ್ನುವಂತಹ ವ್ಯವಸ್ಥೆ ಸರಿ ಇಲ್ಲ. ಮಾನ್ಯ ಸಚಿವರು ಇದನ್ನು ದಯವಿಟ್ಟು ಆಲೋಚನೆ ಮಾಡಬೇಕೆಂದು ವಿನಂತಿ ಮಾಡುತ್ತೇನೆ.

**ಶ್ರೀ ಎನ್.ರವಿಕುಮಾರ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನಾನು ಆಗಲೇ ತಿಳಿಸಿರುವಂತೆ ಈ ಸರ್ಕಾರದವರು ನಾವು ಉಸಿರಾಟ ಮಾಡುವಂತಹ ಗಾಳಿಯನ್ನು ಬಿಟ್ಟು ಉಳಿದ ಎಲ್ಲದರ ಮೇಲೆ ತೆರಿಗೆ ಹಾಕುತ್ತಿದ್ದಾರೆ. ತಾವು ಯಾವುದನ್ನೇ ತೆಗೆದುಕೊಳ್ಳಿ. ತೆರಿಗೆ ಹಾಕುತ್ತಿದ್ದಾರೆ; ಬೆಲೆ ಹೆಚ್ಚಿಗೆ ಮಾಡುತ್ತಿದ್ದಾರೆ. (ಗೊಂದಲ) ಮಾನ್ಯ ಸಚಿವರಾದ ಶ್ರೀ ಹೆಚ್.ಕೆ.ಪಾಟೀಲ್‌ರವರೇ, ನಾನು ಇದನ್ನು ಉದ್ದೇಶಪೂರ್ವಕವಾಗಿ ಹೇಳುತ್ತಿದ್ದೇನೆ. From day one ರಿಂದ ತೆಗೆದುಕೊಳ್ಳಿ, ಎಲ್ಲದರ ಮೇಲೆ ತೆರಿಗೆ ಹೆಚ್ಚು ಮಾಡಿದ್ದಾರೆ. ಈಗ ಉದಾಹರಣೆಗೆ 10 ರೂಪಾಯಿ ಇದ್ದ tax ಅನ್ನು 20 ರೂಪಾಯಿ ಮಾಡಿದ್ದಾರೆ. 50 ರೂಪಾಯಿ ಇದ್ದ tax ಅನ್ನು 100 ರೂಪಾಯಿ ಮಾಡಿದ್ದಾರೆ. 100 ರೂಪಾಯಿ ಇದ್ದ stamp duty ಅನ್ನು 500 ರೂಪಾಯಿ ಮಾಡಿದ್ದಾರೆ. ತಾವು ಯಾವುದನ್ನೇ ತೆಗೆದುಕೊಳ್ಳಿ, ಯಾವುದಕ್ಕೂ ತೆರಿಗೆ ಹಾಕದೇ ಈ ಸರ್ಕಾರ ಬಿಡಲಿಲ್ಲ. ನಾನು ಅದಕ್ಕೆ ವಿನಂತಿ ಮಾಡಿಕೊಳ್ಳುವುದೇನೆಂದರೆ, ಮಾನ್ಯ ಸದಸ್ಯರಾದ ಶ್ರೀ ಕೆ.ಎಸ್.ನವೀನ್‌ರವರು ಬಹಳ ಚೆನ್ನಾಗಿ ಹೇಳಿದ್ದಾರೆ. Garage ನಲ್ಲಿ ಕೆಲಸ ಮಾಡುವಂತಹವರಿಗೆ ಉಪಯೋಗ ಮಾಡುತ್ತೇವೆ, ಆಟೋ ರಿಕ್ಷಾ ಚಾಲಕರಿಗೆ ಉಪಯೋಗ ಮಾಡುತ್ತೇವೆ ಎಂದು ಹೇಳಿದ್ದಾರೆ. ಆದರೆ, ಇಲ್ಲಿ specific ಆಗಿ ಯಾರಿಗೆ ಈ ಹಣವನ್ನು ಉಪಯೋಗ ಮಾಡುತ್ತೇವೆಂದು ಇಲ್ಲ. ಆದರೆ, ಇಲ್ಲಿ ಹಣ ಸಂಗ್ರಹಣೆಯಾಗುತ್ತದೆ. ಮಾನ್ಯ ಸಚಿವರು general ಆಗಿ ಎಲ್ಲರಿಗೂ ಇದರ ಉಪಯೋಗವಾಗುತ್ತದೆಂದು ಹೇಳಿದ್ದಾರೆ. ಈಗ ನಾನು ಒಂದು ಉದಾಹರಣೆಯನ್ನು ಹೇಳುತ್ತೇನೆ. ಇಲ್ಲಿ ಹೋರಾಟ ಮಾಡುತ್ತಿದ್ದಾರೆ. ಇಲ್ಲಿಗೆ ನಿನ್ನೆ ದಿವಸ deaf and dumb ಸಂಸ್ಥೆಯವರು ಬಂದಿದ್ದರು. ಅಂತಹ ಮೂರು ಲಕ್ಷ ಜನರು ಇದ್ದಾರಂತೆ. ಅವರ ಪರಿಸ್ಥಿತಿಯನ್ನು ನೋಡಿದರೆ, ಹೃದಯ, ಕರುಳು ಕಿತ್ತು ಬರುತ್ತದೆ. ಇಂತಹವರಿಗೆ ಏನಾದರೂ ಉಪಯೋಗ ಮಾಡುತ್ತಾರೆಯೇ? ಅದಕ್ಕೆ ಇದರ ಬಗ್ಗೆ ಮಾನ್ಯ ಸಚಿವರು specific ಆಗಿ ಹೇಳಬೇಕು.

ಮಾನ್ಯ ಸಭಾಪತಿಯವರೇ, ನಮಗೆ 100 ರೂಪಾಯಿ, 1,000 ರೂಪಾಯಿ ದೊಡ್ಡದು ಅಲ್ಲವೆಂದು ಅನಿಸುತ್ತದೆ. ಯಾರು ಕಾರನ್ನು ತೆಗೆದುಕೊಳ್ಳುತ್ತಿದ್ದಾರೆ, ಅವರು 10 ಲಕ್ಷ ರೂಪಾಯಿಗಳನ್ನು ಕಟ್ಟಿರುತ್ತಾರೆ. ಜೊತೆಗೆ

20 ಲಕ್ಷ ರೂಪಾಯಿಗಳ ಲೋನ್ ಇರುತ್ತದೆ. ಯಾರು two-wheeler and four-wheeler vehicles ಅನ್ನು ತೆಗೆದುಕೊಂಡಿರುತ್ತಾರೆ, ಅವರು ಒಂದು ಲಕ್ಷ ರೂಪಾಯಿಗಳನ್ನು ಕಟ್ಟಿರುತ್ತಾರೆ. ಇನ್ನು 50,000 ರೂಪಾಯಿ ಲೋನ್ ಇರುತ್ತದೆ. Even, ನನ್ನ ಪ್ರಕಾರ 75,000 ರೂಪಾಯಿ ಲೋನ್ ಇರುತ್ತದೆ. ಪ್ರತಿ ತಿಂಗಳು ಆ ಲೋನ್‌ನ ಮೊತ್ತ ಅವರ ವೇತನದಲ್ಲಿ ಕಟ್ ಆಗುತ್ತದೆ. ಅವರು ಬಹಳ ಕಷ್ಟಪಟ್ಟು ಹಣವನ್ನು ಹೊಂದಿಸುತ್ತಾರೆ. ಮಾನ್ಯ ಸಚಿವರಾದ ಶ್ರೀ ಸಂತೋಷ್ ಎಸ್.ಲಾಡ್‌ರವರಿಗೆ ಇದು ದೊಡ್ಡ ವಿಷಯ ಅಲ್ಲ. ಆದರೆ, ಯಾರು two-wheeler vehicle ಅನ್ನು ತೆಗೆದುಕೊಳ್ಳುತ್ತಿದ್ದಾರೆ, ಆ ಜನರು ಬಹಳ ಯೋಚನೆ ಮಾಡಿ ಕಷ್ಟುಪಟ್ಟು ತೆಗೆದುಕೊಳ್ಳುತ್ತಿದ್ದಾರೆ. ನಮಗೆ 500 ರೂಪಾಯಿ, 1,000 ರೂಪಾಯಿ ದೊಡ್ಡದು ಅನಿಸುವುದಿಲ್ಲ. ಯಾರು downtrodden ನಲ್ಲಿ ಇದ್ದಾರೆ, definitely ಅವರಿಗೆ ಹೊರೆ ಅನಿಸುತ್ತದೆ. ಸರ್ಕಾರ ಇಂತಹದ್ದರ ಬಗ್ಗೆ ಯೋಚನೆ ಮಾಡಬೇಕು. ಯಾರು ದೊಡ್ಡ ದೊಡ್ಡವರು ಇದ್ದಾರೆ, ಅಂತಹವರ ಮೇಲೆ ತೆರಿಗೆಯನ್ನು ಹಾಕಲಿ. ಇದರಿಂದ ಯಾರನ್ನು ಬಿಡಬಾರದು. ಸರ್ಕಾರ ತೆರಿಗೆಯನ್ನು ಸಂಗ್ರಹಣೆ ಮಾಡಬೇಕು ಅಷ್ಟೇ, ಸರ್ಕಾರ ಯಾವುದರಲ್ಲಿಯೂ ಬಿಡುತ್ತಿಲ್ಲ. ಮಾನ್ಯ ಉಪ ಮುಖ್ಯಮಂತ್ರಿಯವರು, ಮಾನ್ಯ ಸಚಿವರಾದ ಹೆಚ್.ಕೆ.ಪಾಟೀಲ್‌ರವರು ಹಾಗೂ ಶ್ರೀ ಕೃಷ್ಣಭೈರೇಗೌಡರವರು ಸದನದಲ್ಲಿ ಇದ್ದಾರೆ. ಇದರ ಬಗ್ಗೆ ಸರ್ಕಾರ ಏಕೆ ಇಷ್ಟೊಂದು ಹೆಚ್ಚಿನ ಪ್ರಮಾಣದಲ್ಲಿ ತೀರ್ಮಾನ ಮಾಡಿದೆ? ಯಾರನ್ನು ಬಿಡಬಾರದು ಎಲ್ಲರ ಮೇಲೆಯೂ ತೆರಿಗೆ ಹಾಕಬೇಕು ಅಷ್ಟೇ. ಇದು ಸರಿಯಲ್ಲ.

**ಶ್ರೀ ಎಂ.ನಾಗರಾಜು (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳು. ಕರ್ನಾಟಕ ಮೋಟಾರು ವಾಹನ ತೆರಿಗೆ ನಿರ್ಧರಣೆ ವಿಧೇಯಕ, 2024 ರ ಉದ್ದೇಶ ಸರಿ ಇದೆ. ಸಮಾಜಿಕ ನ್ಯಾಯ, ಸಮಾಜಿಕ ಭದ್ರತೆಯನ್ನು ಕೊಡಬೇಕು. ಮೋಟಾರು ಸಾರಿಗೆ ಮತ್ತು ಇತರ ಸಂಬಂಧಪಟ್ಟ ಕಾರ್ಮಿಕರಿಗೆ ಕೊಡುವಂತಹ welfare scheme ಗಳನ್ನು ಮಾಡಬೇಕು. ಅದಕ್ಕೆ ಒಂದು ನಿಧಿ ಸ್ಥಾಪನೆ ಮಾಡಬೇಕು. ಇದರಲ್ಲಿ ಸರ್ಕಾರದ ಉದ್ದೇಶ ಬಹಳ ಸ್ಪಷ್ಟವಾಗಿದೆ. ಹಾಗಾಗಿ, ನಾನು ಇದನ್ನು ಸ್ವಾಗತ ಮಾಡುತ್ತೇನೆ. ಮಾನ್ಯ ಮುಖ್ಯಮಂತ್ರಿಗಳಾದ ಸನ್ಮಾನ್ಯ ಸಿದ್ದರಾಮಯ್ಯನವರ ಹಾಗೂ ಉಪ ಮುಖ್ಯಮಂತ್ರಿಗಳಾದ ಶ್ರೀ ಡಿ.ಕೆ.ಶಿವಕುಮಾರ್‌ರವರ ನೇತೃತ್ವದಲ್ಲಿ ತಂದಿರುವಂತಹ ಸರ್ಕಾರದ ಆಲೋಚನೆಗಳನ್ನು ನೋಡಿದಾಗ, ಯಾವಾಗಲೂ ಸಮಾಜದಲ್ಲಿ ಇರುವಂತಹ ಕಟ್ಟಕಡೆಯ ನಾಗರಿಕರ ಪರವಾಗಿ ಕೆಲಸಗಳನ್ನು ಮಾಡುತ್ತಿರುತ್ತಾರೆ. ನಾನು ಇದನ್ನು ಸ್ವಾಗತ ಮಾಡುತ್ತೇನೆ. ಈ ವಿಧೇಯಕದಲ್ಲಿ ನನಗೆ ಬೇಕಾಗಿರುವಂತಹ clarification ಗಳು ಏನೆಂದರೆ, ನಾನು ಸಹ ಸಾರಿಗೆ ಇಲಾಖೆಯಲ್ಲಿ ಉಪಾಧ್ಯಕ್ಷನಾಗಿ ಕೆಲಸ ಮಾಡಿದ್ದೇನೆ. ಹಾಗಾಗಿ, ನನಗೆ ಇರುವಂತಹ ಅನುಭವದ ಆಧಾರದ ಮೇಲೆ ಹೇಳುವುದಾದರೆ, ಆ ಕಾರ್ಮಿಕರನ್ನು consider ಮಾಡುವುದಕ್ಕೆ separate ನಿಧಿ ಮಾಡುವುದಾದರೆ, ಈಗಾಗಲೇ ಕಾರ್ಮಿಕರ ನಿಧಿ ಇರುವಂತಹದ್ದರಲ್ಲಿ ಅವರಿಗೆ ಅವಕಾಶ ಇದೆಯೇ ಅಥವಾ ಇಲ್ಲವೇ ಎಂಬುದನ್ನು clarify ಮಾಡಬೇಕಾಗುತ್ತದೆ. The Hon'ble Minister needs to clarify that, there is a lot of money available in the labour fund as of today and why have you created another new fund? ಅಲ್ಲದೇ ಇವರು ಅಲ್ಲಿ ಕಾರ್ಮಿಕರಾಗಿ register

ಆಗಿದ್ದಾರೆಯೇ ಅಥವಾ ಇಲ್ಲವೇ ಎಂಬುದನ್ನು ನೋಡಬೇಕಾಗುತ್ತದೆ. ಏಕೆಂದರೆ, ಅವರು ಕಾರ್ಮಿಕರಾಗಿ ಕೆಲಸ ಮಾಡುತ್ತಿರುತ್ತಾರೆ. ಆ ಕಾರಣಕ್ಕಾಗಿ ನೋಡಬೇಕಾಗುತ್ತದೆ. That is one part. The second part is, two-wheeler ಗೆ ತೆಗೆದುಕೊಳ್ಳುವಂತಹ 500 ರೂಪಾಯಿಗಳನ್ನು cess ಎಂದು ಹಾಕಿದ್ದಾರೆ. ಏಕೆಂದರೆ, two-wheeler ಅನ್ನು ಮಧ್ಯಮ ವರ್ಗದವರು ಹಾಗೂ ಕೆಳಹಂತದ ಜನರು ಮಾತ್ರ ತೆಗೆದುಕೊಳ್ಳುತ್ತಾರೆ ಎಂದು ನಾನು ಅಂದುಕೊಂಡಿದ್ದೇನೆ. ಹಾಗಾಗಿ, ಇದಕ್ಕೆ 500 ರೂಪಾಯಿ ವಿಧಿಸುವುದು ಎಷ್ಟು ಸರಿ ಎನ್ನುವಂತಹ ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ. ಇದರ ಜೊತೆಗೆ ಕಾರುಗಳಿಗೆ ಹಾಕಿರುವಂತಹದ್ದನ್ನು ಒಪ್ಪುತ್ತೇನೆ. ಆದರೆ, Alto car ತೆಗೆದುಕೊಳ್ಳುವವರಿಗೂ ಒಂದೇ, Benz car ತೆಗೆದುಕೊಳ್ಳುವವರಿಗೂ ಒಂದೇ cess ಹಾಕಿರುವುದು ಹೇಗೆ ಎಂದು ಕೇಳುವುದಕ್ಕೆ ಬಯಸುತ್ತೇನೆ. ಇದನ್ನು ಏನಾದರೂ value-based ಎಂದು ಮಾಡಿ 'any car purchased above Rs. 10 lakhs will be subject to cess' ಎಂದು ಹಾಕಿದರೆ, ಉಳ್ಳವನು ಕಟ್ಟುವುದಕ್ಕೆ ಆಗುತ್ತದೆ. ಆದರೆ, ಇದನ್ನು ಬಡವರಿಗೆ ಮಾಡಿದ್ದು ಎಷ್ಟು ಸರಿ ಎನ್ನುವುದನ್ನು ಕೇಳುವುದಕ್ಕೆ ಬಯಸುತ್ತೇನೆ. ಒಟ್ಟಾರೆಯಾಗಿ ಸರ್ಕಾರದ ಉದ್ದೇಶ ಇರುವುದು, ಸಾಮಾಜಿಕ ನ್ಯಾಯ ಮತ್ತು ಸಾಮಾಜಿಕ ಭದ್ರತೆಯನ್ನು ಕೊಡಬೇಕು ಎನ್ನುವಂತಹದ್ದಾಗಿದೆ. ಇಡೀ ದೇಶದಲ್ಲಿ ಮೊಟ್ಟ ಮೊದಲಿಗೆ ತರುತ್ತಿರುವಂತಹ ವಿಧೇಯಕವನ್ನು ನಾವೆಲ್ಲರೂ ಸ್ವಾಗತ ಮಾಡಬೇಕಾಗುತ್ತದೆ. ಆದರೆ, ಇದನ್ನು ಮಾಡುವುದಕ್ಕೂ ಮೊದಲು ಸ್ವಲ್ಪ ವಿಶೇಷಣಗಳ ಅವಶ್ಯಕ ಇರುತ್ತವೆ. ಇದನ್ನು ಬಡವರ ಪರವಾಗಿ ಮಾಡುವಂತಹ ಸಂದರ್ಭದಲ್ಲಿ ಯಾರ pocket ನಿಂದ ಹಣವನ್ನು ತೆಗೆದುಕೊಳ್ಳುತ್ತಿದ್ದೇವೆ ಎಂಬುದನ್ನು ಯೋಚನೆ ಮಾಡಬೇಕಾಗುತ್ತದೆ. ಮಧ್ಯಮ ವರ್ಗದವರ ಹಾಗೂ ಬಡವರ pocket ನಿಂದ ತೆಗೆದುಕೊಳ್ಳುವುದು ಎಷ್ಟು ಸರಿ ಎನ್ನುವುದನ್ನು ಮಾನ್ಯ ಸಚಿವರು ಸದನಕ್ಕೆ ತಿಳಿಸಬೇಕೆಂದು ಮನವಿಯನ್ನು ಮಾಡುತ್ತಿದ್ದೇನೆ. ಧನ್ಯವಾದಗಳು.

**ಶ್ರೀ ಸಂತೋಷ್ ಎಸ್.ಲಾಡ್:-** ಮಾನ್ಯ ಸಭಾಪತಿಯವರೇ, ನಾನು ವಿಧೇಯಕವನ್ನು ತರುತ್ತಿರುವುದರ ಬಗ್ಗೆ ಈಗಷ್ಟೇ ಹೇಳಿದ್ದೇನೆ. ನಾವು unorganized board ನಲ್ಲಿ ಇರತಕ್ಕಂತಹ Labour Department. ಸುಮಾರು 85% ಜನರು unorganized board ನಲ್ಲಿದ್ದಾರೆ. Unorganized board ಗೆ ಯಾವುದೇ ರೀತಿಯಾದಂತಹ ಹಣ ಬರಲೇಬೇಕು. ಅದು ತೆರಿಗೆ ಮೂಲಕ ಬರುತ್ತದೆ ಎಂಬುದು ಇಡೀ ದೇಶಕ್ಕೆ ಹಾಗೂ ಇಡೀ ಪ್ರಪಂಚಕ್ಕೆ ಗೊತ್ತಿದೆ. ಅದನ್ನು ಮಾಡುತ್ತೇವೆ. ನಾವು two-wheeler ಗೆ Rs. 500 cess ಅನ್ನು lifetime ಗೆ ಮಾಡುವಂತಹದ್ದಾಗಿದೆ. ಇದು ತಿಂಗಳಿಗೆ ಅಲ್ಲ. Once again, I want to stress upon and convey that, ನಾವು two-wheeler ಗೆ Rs.500 cess ಹಾಗೂ motor car ಗೆ Rs.1,000 cess ಅನ್ನು lifetime ಗೆ ಮಾಡುವಂತಹದ್ದಾಗಿದೆ. ಇದು ಒಂದು ವಿಚಾರ.

(ಮುಂದು)

**ಶ್ರೀ ಎಂ.ನಾಗರಾಜು (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಬೈಕ್ ಅನ್ನು ತೆಗೆದುಕೊಳ್ಳುವಂಥದ್ದು ಅಲ್ಲ. ಬೈಕ್‌ಗಳನ್ನು ತೆಗೆದುಕೊಳ್ಳುವವರು ಯಾರು ಎಂದರೆ, ಮಧ್ಯಮ ವರ್ಗದವರು ಮತ್ತು ಕೆಳ ವರ್ಗದವರು. Hon'ble Minister, I want a clarification on this matter. Your concept is very good. But, it is……

**(ಗೊಂದಲ)**

**ಸಭಾಪತಿಯವರು:-** ಮಾನ್ಯ ಎಂ.ನಾಗರಾಜುರವರೆ, ತಾವು ಕುಳಿತುಕೊಳ್ಳಿ. ತಾವು ಮಾತನಾಡುವಾಗ ನನ್ನ ಕಡೆ ನೋಡಿಕೊಂಡು ಮಾತನಾಡಿ.

**(ಗೊಂದಲ)**

**ಶ್ರೀ ಸಂತೋಷ್ ಎಸ್. ಲಾಡ್:-** ಮಾನ್ಯ ಸಭಾಪತಿಯವರೇ, ಈಗ ಬೈಕ್ ತೆಗೆದುಕೊಳ್ಳುವವರು ಯಾರು ಎಂದು, ನಾನು ಹೇಗೆ ಹೇಳುವುದೆಂದು ತಾವು ಹೇಳಿ. ಮಾನ್ಯ ಸದಸ್ಯರು ಸಹ ನಾಳೆ ಬೈಕ್ ತೆಗೆದುಕೊಳ್ಳಬಹುದು. ಈಗ ಬೈಕ್ ಅನ್ನು ಯಾರ್ಯಾರು ತೆಗೆದುಕೊಳ್ಳುತ್ತಾರೆ ಅವರಿಗೆ ಐನೂರು ರೂಪಾಯಿಯಷ್ಟು ತೆರಿಗೆ ಹಾಕುತ್ತಿದ್ದೇವೆ.

**(ಗೊಂದಲ)**

**ಶ್ರೀ ಸಂತೋಷ್ ಎಸ್. ಲಾಡ್:-** ಮಾನ್ಯ ಸಭಾಪತಿಯವರೇ, ಇವತ್ತು ಬೈಕ್‌ಗೆ minimum cost ಎಂಬತ್ತು ಸಾವಿರದಿಂದ ಒಂದು ಲಕ್ಷ ರೂಪಾಯಿಗಳವರೆಗೆ ಇದೆ.

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರಿಗೆ ಒಂದು ವಿಷಯವನ್ನು ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ. The said cess is apart from the road tax.

**(ಗೊಂದಲ)**

**ಶ್ರೀ ಸಂತೋಷ್ ಎಸ್. ಲಾಡ್:-** ಮಾನ್ಯ ಸಭಾಪತಿಯವರೇ, ಅದನ್ನು ಬಿಟ್ಟು.

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಅದನ್ನು ಬಿಟ್ಟು ಎಂದರೆ, road tax ನಲ್ಲಿ ಸೆಸ್ ಎನ್ನುವುದು ಪೆಟ್ರೋಲ್ ಮತ್ತು ಎಲ್ಲದರ ಮೇಲೂ ಸಹ ಬರುತ್ತದೆ. ಈಗ ಎಲ್ಲಿಯಾದರೂ ರಸ್ತೆಗಳು ಸರಿಯಾಗಿವೆಯೇ ಎಂದು ನೋಡಬೇಕಾಗುತ್ತದೆ. ಅದರ ಜೊತೆಗೆ ಟೋಲ್ ಬೇರೆ ಇದೆ.

**(ಗೊಂದಲ)**

**ಶ್ರೀ ಕೆ.ಎ.ತಿಪ್ಪೇಸ್ವಾಮಿ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಶೇಕಡಾ 11ರಷ್ಟು ಸೆಸ್ ಇದೆ.

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಹೌದು ಶೇಕಡಾ 11ರಷ್ಟು ಸೆಸ್ ಇದೆ. ಮಾನ್ಯ ಸದಸ್ಯರಾದ ಶ್ರೀ ಎನ್.ರವಿಕುಮಾರ್ ರವರು ಹೇಳಿದ್ದು ಸರಿಯಿದೆ. ಈಗ ಜಿ.ಎಸ್.ಟಿ. ಜಾರಿಗೆ ಬಂದ ಮೇಲೆ ಒಬ್ಬ

ಭಿಕ್ಷುಕನ್ನು ಸಹ ತೆರಿಗೆ ಕಟ್ಟುತ್ತಿದ್ದಾನೆ. ಈಗ ಬೀಡಿ ತೆಗೆದುಕೊಂಡರೆ ಅದರಲ್ಲಿ ತೆರಿಗೆ ಬರುತ್ತದೆ. ಈಗ ಪ್ರತಿಯೊಬ್ಬರು ಸಹ tax net ನಲ್ಲಿದ್ದಾರೆ. ಮಾನ್ಯ ಉಪ ಮುಖ್ಯಮಂತ್ರಿಗಳು ಬೆಂಗಳೂರು ಸಿಟಿಯನ್ನು tax net ನಲ್ಲಿ ತರುತ್ತೇವೆಂದು ಹೇಳುತ್ತಿದ್ದರು. ಈಗ ಭಿಕ್ಷುಕನು ಸಹ tax net ನಲ್ಲಿದ್ದಾನೆ. ರಾಜ ಮಹಾರಾಜರು ಸಹ tax net ನಲ್ಲಿದ್ದಾರೆ. ಆದುದರಿಂದ, ಮಾನ್ಯ ಸಂತೋಷ್ ಲಾಡ್‌ರವರೆ, ದ್ವಿಚಕ್ರ ವಾಹನದವರು ತುಂಬಾ ಪಾಪಾದರು. tax net ಆದಾಗಲೂ ಸಹ ಅವರಿಗೆ ಹೇಳಿದ್ದೆ. ಈಗ ದಂಡವನ್ನು ಆಟೋರಿಕ್ಷಾ ಮತ್ತು ದ್ವಿಚಕ್ರ ವಾಹನದವರು ಜೀವನಪೂರ್ತಿ ಸಂಪಾದನೆ ಮಾಡಿದ್ದು, ಆ ದಂಡದಲ್ಲಿಯೇ ಹೋಗಿಬಿಡುತ್ತದೆ. ಈಗ ಯಾವುದೇ SUV ವಾಹನಗಳನ್ನು ಪೋಲೀಸ್ ನವರು ತಡೆದಿರುವುದನ್ನೇ ನೋಡಿಲ್ಲ. ಅವರು ತಪ್ಪು ಮಾಡಿದ್ದರೂ ಸಹ ಅವರಿಗೆ ಸೆಲ್ಯೂಟ್ ಹೊಡೆದು ಅವರನ್ನು ಕಳುಹಿಸುತ್ತಾರೆ. ನಾವು ಯಾವಾಗ ಈ ಬಡವರಿಗೆ ರಕ್ಷಣೆ ಕೊಡುವುದು. ಅದರ ಬಗ್ಗೆ ಸ್ವಲ್ಪ ದೊಡ್ಡ ಮನಸ್ಸು ಮಾಡಲಿ. ಏಕೆಂದರೆ, ಮಾನ್ಯ ಸಚಿವರಿಗೆ ಹೆಚ್ಚಿನ ಅನುಭವವಿದೆ.

**ಶ್ರೀ ಎನ್.ರವಿಕುಮಾರ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಈ ವಿಧೇಯಕವನ್ನು ಬಿಟ್ಟು ಬಿಡಲಿ. ಅವರು ಈ ವಿಧೇಯಕವನ್ನು ವಾಪಸ್ಸು ತೆಗೆದುಕೊಳ್ಳಲಿ.

**(ಗೊಂದಲ)**

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ನಾನು ವಿಧೇಯಕವನ್ನು ಬಿಡಿ ಎಂದು ಹೇಳುವುದಿಲ್ಲ. ಈಗ ಆಟೋರಿಕ್ಷಾ ಚಾಲಕರು, ಪಂಚರ್ ಹಾಕುವಂತಹವರು ಇರುತ್ತಾರೆಂದು ಹೇಳುತ್ತಾರೆ. ಅವರ ಉದ್ಯೋಗವೇ ಇದು. ಅವರಿಗೆ ಸರ್ಕಾರಿ ನೌಕರಿಯನ್ನು ಕೊಡುವುದಿಲ್ಲ. ಅವರು ಉದ್ಯೋಗ ಮಾಡಿ ತಮ್ಮ ಹೊಟ್ಟೆ ತುಂಬಿಸಿಕೊಳ್ಳಬೇಕು. ಅವರಿಗೆ ಏನಾದರೂ ಸಾಮಾಜಿಕ ರಕ್ಷಣೆ ಬೇಕಲ್ಲವೇ? Social security ಎನ್ನುವಂಥದ್ದು ಬೇಕಾಗುತ್ತದೆಯಲ್ಲವೇ? It is a good move. ಆದರೆ, ಇಷ್ಟೊಂದು ತೆರಿಗೆಯನ್ನು ದ್ವಿಚಕ್ರ ವಾಹನದವರ ಮೇಲೆ ಹಾಕಿದರೆ, ಆಗ ಅವರು ದ್ವಿಚಕ್ರ ವಾಹನವನ್ನೇ ಬಿಟ್ಟು ಬಿಡುತ್ತಾರೆ. ಅವರು ಮೆಟ್ರೋವನ್ನು ಉಪಯೋಗಿಸುವುದಕ್ಕೆ ಪ್ರಾರಂಭ ಮಾಡುತ್ತಾರೆ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಈಗಾಗಲೇ ಕಾನೂನು ಸಚಿವರು ಬಡವರಿಗೆ ಬೇಗ ನ್ಯಾಯ ಸಿಗುತ್ತದೆ ಎಂದು ವಿವರಣೆ ನೀಡಿದ್ದನ್ನು ನಾವೆಲ್ಲರೂ ಸಹ ಒಪ್ಪಿಕೊಂಡಿದ್ದೆವು. ಬಡವರಿಗೆ ನ್ಯಾಯ ಸಿಗಬೇಕು. ಮಾನ್ಯ ಕಾರ್ಮಿಕ ಸಚಿವರು ಕೂಡ ಬಡವರಿಗೆ ಮತ್ತು unorganized labourers' ಗೆ ಮಾಡುತ್ತಿದ್ದಾರೆ. ಇದು ಸಂತೋಷದ ವಿಷಯ, ನಾವು ಇದನ್ನು ಒಪ್ಪಿಕೊಳ್ಳೋಣ. ಇದು ಕೇವಲ one-time ಎಂದು ಹೇಳಿದ್ದಾರೆ.

**ಸಭಾಪತಿಯವರು:-** ಮಾನ್ಯ ಕಾರ್ಮಿಕ ಸಚಿವರ ಹೆಸರು ಸಹ ಸಂತೋಷ್ ಎಂದು ಇದೆ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಆಯಿತು, ನಾವು ಎರಡು ಸಂತೋಷವನ್ನು ಇಟ್ಟುಕೊಳ್ಳೋಣ. ಅದರಿಂದ ಏನೂ ತೊಂದರೆ ಇಲ್ಲ. ಆದರೆ, ನಾನು ಹೇಳುವಂಥದ್ದು ಏನೆಂದರೆ, ಅವರಿಗೆ ಸಿಗಬಹುದಾದ ಅನುಕೂಲಗಳು ಏನು ಎನ್ನುವಂಥದ್ದರ ವಿವರಣೆ ನೀಡಲಿ. ಇದಕ್ಕೆ ನಮಗೆ ಒಪ್ಪಿಗೆ ಇದೆ.

**ಶ್ರೀ ಸಂತೋಷ್ ಎಸ್. ಲಾಡ್:-** ಮಾನ್ಯ ಸಭಾಪತಿಯವರೇ, ನಾವು ಯಾವಾಗ ಸೆಸ್ ಅನ್ನು ಕಲೆಕ್ಟ್ ಮಾಡುತ್ತೇವೆ. ಅದು related ನವರಿಗೆ ಕೊಡಬೇಕು ಎನ್ನುವಂಥದ್ದಕ್ಕೆ ಕೇಂದ್ರ ಸರ್ಕಾರದ ಗೈಡ್‌ಲೈನ್ಸ್‌ಗಳಿವೆ. ನಾವು Construction Board ನಿಂದ ಸೆಸ್ ಕಲೆಕ್ಟ್ ಮಾಡುತ್ತಿದ್ದೇವೆ. ಮಾನ್ಯ ಸದಸ್ಯರು ಕೇಳಿದಂತೆ, ಈ Construction Board ನ ಸೆಸ್ ಏನಿದೆ, that money should only be utilized for the welfare of construction workers. ಅದನ್ನು ಬೇರೆ ಯಾವುದೂ unorganized sector ಗೆ ಕೊಡುವುದಕ್ಕೆ ಬರುವುದಿಲ್ಲ. ಈ unorganized sector ನ ಸಾರಿಗೆ ಇಲಾಖೆಯವರು ಸೆಸ್ ಕಲೆಕ್ಟ್ ಮಾಡಿ ನಮಗೆ ಕೊಡುತ್ತಿದ್ದಾರೆ. ಮಾನ್ಯ ಸಾರಿಗೆ ಸಚಿವರಾದ ಶ್ರೀ ರಾಮಲಿಂಗಾರೆಡ್ಡಿ ಸಾಹೇಬರಿಗೆ ಧನ್ಯವಾದಗಳನ್ನು ಏಕೆ ಹೇಳಬೇಕೆಂದರೆ, ಅವರು Transport Board ನಿಂದ ನಮಗೆ ಸೆಸ್ ಅನ್ನು ಕೊಟ್ಟ ತಕ್ಷಣ, ಅದನ್ನು transport related workers ಏನಿದ್ದಾರೆ, ಅವರು ಈ scheme ಅಡಿಯಲ್ಲಿ ಬರುತ್ತಾರೆ. Drivers, conductors, cleaners, station staff, checking staff, clerks, and other logistics-related personnel are covered under this scheme. ಈಗ ಯಾರ್ಯಾರು logistics related ಇರುತ್ತಾರೆ, ಅವರು ಸುಮಾರು ರೂ.40 ಲಕ್ಷದಷ್ಟು ಇದ್ದಾರೆಂದು ಸರ್ಕಾರದಲ್ಲಿ ಅಂದಾಜು ಇದೆ. ಈಗ tyre repair ಮಾಡುವಂತಹವರು, puncture ಹಾಕುವಂತಹವರು, garage mechanics ಗಳು, body builders, electricians, painters, ಆಟೋರಿಕ್ಷಾ ಚಾಲಕರು, 407 ವಾಹನಗಳನ್ನು ಓಡಿಸುವಂತಹವರು, ಬಸ್‌ಗಳನ್ನು ಓಡಿಸುವಂತಹರು ಈ ರೀತಿಯ ಹಲವಾರು ಜನರಿಗೆ ಯಾವುದೇ ರೀತಿಯ ಆದಾಯವಿಲ್ಲ. This is the only way we can collect money. Being the Minister for Labour Department.... ನಾನು ಎರಡನೇ ಬಾರಿಗೆ ಕಾರ್ಮಿಕ ಸಚಿವನಾಗಿದ್ದೇನೆ. ಇಲ್ಲಿ ಯಾವುದೇ ರೀತಿಯಾದಂತಹ ಆದಾಯವಿಲ್ಲ. I have to create more ways to earn money to ensure that, I am running this Board. If I don't have any work, I cannot provide social security benefits. ಇಲ್ಲವೆಂದರೆ, social security ಕೊಡುವುದಕ್ಕೆ chance ಇಲ್ಲ. This is the only way to collect the money, and we are not charging very much for it. ಮಾನ್ಯ ಸದಸ್ಯರಾದ ಶ್ರೀ ಎನ್.ರವಿಕುಮಾರ್‌ರವರು ಏನೋ ಬಹಳ ದೊಡ್ಡದಾಗಿ ಹೇಳಿದರು. ಎಲ್ಲದಕ್ಕೂ ಚಾರ್ಜ್ ಮಾಡುತ್ತಾರೆಂದು. ಅಂದರೆ, ಮೊಸರಿನ ಮೇಲೆ, ತುಪ್ಪದ ಮೇಲೆ, ಬಳೆ ಮೇಲೆ, ಹರಿಶಿಣನದ ಮೇಲೆ ಎಂದು. ಈಗ ಸುಡುಗಾಡಿಗೆ ಹೋಗಿ ಹೆಣ ಹೂಳುವುದಕ್ಕೂ ಕೂಡ ಈ ದೇಶದಲ್ಲಿ ಜಿ.ಎಸ್.ಟಿ. ಇದೆ. ಇವರು ಇವತ್ತು ತೆರಿಗೆಯ ಬಗ್ಗೆ ಮಾತನಾಡುತ್ತಿದ್ದಾರೆ.

**ಶ್ರೀಮತಿ ಭಾರತಿ ಶೆಟ್ಟಿ:-** ಮಾನ್ಯ ಸಭಾಪತಿಯವರೇ, ಇದಕ್ಕೂ ಸಹ ತೆರಿಗೆ.

**ಶ್ರೀ ಸಂತೋಷ್ ಎಸ್. ಲಾಡ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀಮತಿ ಭಾರತಿ ಶೆಟ್ಟಿಯವರು ನಾನು ಮಾತನಾಡುವವರೆಗೂ ದಯಮಾಡಿ ಸುಮ್ಮನೆ ಕುಳಿತುಕೊಳ್ಳುವಂತೆ ತಿಳಿಸಿ. ಅವರು ಬೇಕಾದರೆ ಆಮೇಲೆ ಮಾತನಾಡಲಿ. ಈಗ ಜಿ.ಎಸ್.ಟಿ. ಬಗ್ಗೆ ಹೇಳುವುದಾದರೆ, ಈ ದೇಶದಲ್ಲಿ ಯಾರಾದರೂ ಸುಮಾರು

ಇಪ್ಪತ್ತಮೂರು ಲಕ್ಷ ರೂಪಾಯಿಗಳಿಗೆ ವೇತನವನ್ನು ತೆಗೆದುಕೊಳ್ಳುತ್ತಿದ್ದು, ಅವರು ಏನಾದರೂ ವಾಹನವನ್ನು ತೆಗೆದುಕೊಂಡರೆ, ಅವರಿಗೆ ಒಂದು ರೂಪಾಯಿಯೂ ಸಹ ಉಳಿಯುವುದಿಲ್ಲ. ಸಾಧಾರಣವಾಗಿ ಹದಿನೈದು ಲಕ್ಷ ರೂಪಾಯಿಗಳ ವಾಹನವನ್ನು ಖರೀದಿ ಮಾಡಿದರೆ, ಶೇಕಡಾ 43 ರಷ್ಟು ಜಿ.ಎಸ್.ಟಿ. ಬರುತ್ತಿದೆ. ಇವತ್ತು ಇಡೀ ದೇಶದಲ್ಲಿ ರೈತಾಪಿ ವರ್ಗದ ಬಗ್ಗೆ ಮಾನ್ಯ ಸದಸ್ಯರೆಲ್ಲರೂ ಮಾತನಾಡುತ್ತಾರೆ. ಇವತ್ತು ಇಡೀ ಭಾರತ ದೇಶದಲ್ಲಿ ರೈತರು sprinklers, tractors ಮತ್ತೆ ಯಾವುದೆ ಯಂತ್ರೋಪಕರಣಗಳು ತೆಗೆದುಕೊಂಡರೂ ಸಹ ಅದಕ್ಕೆ ಜಿ.ಎಸ್.ಟಿ. ಹಾಕುತ್ತಾರೆ. ಸುಮ್ಮನೆ ಮಾತನಾಡುವುದಕ್ಕೆ ಬರುತ್ತದೆಂದು ಮಾತನಾಡಬಹುದು. ಅದು ಇಲ್ಲವೆಂದು ಅಲ್ಲ. ಇದು ಬಹಳ ದೊಡ್ಡ ಹೊರೆಯೂ ಆಗುವುದಿಲ್ಲ. I am ready to defend and debate on this. ಇದರಲ್ಲಿ, what are we charging is Rs. 500 of cess for two-wheeler. ಇವತ್ತು ಯಾವುದೇ ಬೈಕ್ ಎಂಬತ್ತು ಸಾವಿರದಿಂದ ಒಂದು ಲಕ್ಷದವರೆಗೆ ಕಡಿಮೆ ಇಲ್ಲ. It was an intelligent move made by the Hon'ble Transport Minister. ಅದ್ದರಿಂದ ಮಾನ್ಯ ಸಾರಿಗೆ ಸಚಿವರಾದ ಶ್ರೀ ರಾಮಲಿಂಗಾರೆಡ್ಡಿ ಸಾಹೇಬರಿಗೆ ಧನ್ಯವಾದಗಳನ್ನು ತಿಳಿಸುತ್ತೇನೆ. ಆ ಹಣ ಕಲೆಕ್ಟ್ ಆದರೆ, I will promise you here on this floor of the House that, this money will be used for social security and, welfare of Karnataka Motor Transport and Other Allied Workers.

**(ಈ ಹಂತದಲ್ಲಿ ಆಡಳಿತ ಪಕ್ಷದ ಸದಸ್ಯರು ಮೇಜು ತಟ್ಟುವ ಮೂಲಕ ತಮ್ಮ ಹರ್ಷವನ್ನು ವ್ಯಕ್ತಪಡಿಸಿದರು)**

ನಾನು ಒಬ್ಬ ಸಚಿವನಾಗಿ ಒಂದು promise ಮಾಡುತ್ತೇನೆ. ಈ ಹಣ ಬೇರೆ ಯಾವುದಕ್ಕೂ ಸಹ ಬಳಕೆಯಾಗುವುದಿಲ್ಲ. ಇದು ಇದಕ್ಕಾಗಿಯೇ ಆಗಬೇಕೆಂದು ಬೋರ್ಡ್ ಅನ್ನು ಮಾಡುತ್ತಿರುವುದು. ಮಾನ್ಯ ಕೆ.ಎ.ತಿಪ್ಪೇಸ್ವಾಮಿಯವರು ಮತ್ತು ಮಾನ್ಯ ಬಿ.ಕೆ.ಹರಿಪ್ರಸಾದ್ ಸಾಹೇಬರು ಏನು ಹೇಳುತ್ತಿದ್ದರು ಎಂದರೆ, ಬೇರೆ ರೀತಿಯಾದಂತಹ ಟ್ಯಾಕ್ಸ್ ಆಗುತ್ತದೆ. ನಾವು ಏನು ಶೇಕಡಾ 26ರಷ್ಟು ತೆರಿಗೆಯನ್ನು ಕಲೆಕ್ಟ್ ಮಾಡುತ್ತಿದ್ದೇವೆ. ಅದನ್ನು ಕೂಡ recoup ಮಾಡುತ್ತೇವೆ. ಅದೆಲ್ಲಾ ಸೇರಿದರೆ ಸುಮಾರು 150 ಕೋಟಿ ರೂಪಾಯಿಗಳಿಂದ 200 ಕೋಟಿ ರೂಪಾಯಿಗಳು ಬರುತ್ತದೆ. We have to cater this to 40 lakh people. ಈ ನಲವತ್ತು ಲಕ್ಷ ಜನರಿಗೆ ಈಗಾಗಲೇ ಸಾರಿಗೆ ಇಲಾಖೆಯಿಂದ ಯೋಜನೆಗಳನ್ನು ರೂಪಿಸಿದ್ದೇವೆ. ಅವರು ಯೋಜನೆಗಳ ಬಗ್ಗೆ ಕೇಳುತ್ತಿದ್ದರು. As long as I do not make up a Bill, form a Board and receive money, how can I tell you the programs right now? If I have funds, these are the social welfare programs ಎಂದು ಮುಂದೆ ಹೇಳಬಹುದು. Now, if you allow me to go through this Bill and, if the money is collected tomorrow, absolutely the Board will be formed. ಬೋರ್ಡ್ ರಚನೆಯಾದಾಗ ನಾವು ಒಬ್ಬರೆ ಇರುವುದಿಲ್ಲ. ಅದರಲ್ಲಿ ಎಲ್ಲಾ trade union leaders

ಇರುತ್ತಾರೆ. ಅವರನ್ನು ಕೂರಿಸಿಕೊಂಡು, ಯಾವ ರೀತಿ ಹಣವನ್ನು ಖರ್ಚು ಮಾಡಬೇಕು ಎಂದು more or less, social security schemes ಬಿಲ್ ಏನು ಇರುತ್ತವೆ, ಈಗ ಯಾರಿಗಾದರೂ ಅಪಘಾತವಾದರೆ ಮತ್ತೆ ಯಾರಾದರೂ ತೀರಿ ಹೋದರೆ ಅವರಿಗೆ relief ಕೊಡತಕ್ಕಂಥದ್ದು. ಅವರ ಮಕ್ಕಳಿಗೆ maternity leave ಇದೆ. Social security schemes ಏನು ಇದೆ ಅದನ್ನು ಕೊಡುವುದಕ್ಕೆ ಈ ಬೋರ್ಡ್ ಮಾಡುತ್ತಿದ್ದೇವೆ. Right now, if you ask me about the programs, currently we do not have any programs. I have to form a Board and after the formation of the board, definitely we will come up with the programs. As of now, workers related to transport ಯಾರು ಇದ್ದಾರೆ, ಈಗ Badge ಇರತಕ್ಕಂತಹ registered drivers ಇದ್ದಾರೆ ಸುಮಾರು ಎಂಟು ಲಕ್ಷದವರೆಗೆ ಅವರಿಗೆ ಏನೇ ಅನಾನುಕೂಲವಾಗಿ ತೀರಿ ಹೋದರೆ ಮತ್ತು ಅಪಘಾತಗಳಾದರೆ ಹಣವನ್ನು ಕೊಡುತ್ತೇವೆ. ಈಗ ಏನಾಗುತ್ತದೆಂದರೆ, ಒಟ್ಟಾರೆ transport related workers ಎಲ್ಲರೂ ಬರುವುದರಿಂದ, ನಾನು ಸದನಕ್ಕೆ ಮನವಿ ಮಾಡಿಕೊಳ್ಳುವುದೇನೆಂದರೆ, I know that this is the only means of collecting money. ನಮಗೆ ಬೇರೆ ಯಾವ ರೀತಿಯ reasons ಇಲ್ಲ. There is no other way. ಈಗ ಉದಾಹರಣೆಗೆ ಡೀಸೆಲ್ ಮತ್ತು ಪೆಟ್ರೋಲ್ ಬಗ್ಗೆ ಮಾತನಾಡಿದರು. ಅವರು ಕೇಳಿದ್ದಕ್ಕೆ ನಾನು ಈ ಸದನಕ್ಕೆ ಹೇಳಬೇಕಾಗುತ್ತದೆ. ಈಗ 2004 ರಿಂದ 2014ನೇ ಇಸವಿಯಲ್ಲಿ overall ಸುಮಾರು 103 ಡಾಲರ್‌ಗೆ ಆಯಿಲ್ ಅನ್ನು ಖರೀದಿ ಮಾಡಿದ್ದರು. ಈಗ ಇರತಕ್ಕಂತಹ ಸರ್ಕಾರದ average buying price of fuel is about 65 dollars per litre. ಆಗ ಮಾಜಿ ಪ್ರಧಾನ ಮಂತ್ರಿಗಳಾಗಿದ್ದ ಡಾ: ಮನಮೋಹನ್ ಸಿಂಗ್‌ರವರು ಸುಮಾರು 90,000 ಕೋಟಿ ಸಬ್ಸಿಡಿ ಕೊಟ್ಟಿದ್ದರು. ಅವರು 103 ಡಾಲರ್‌ನಲ್ಲಿ ಖರೀದಿ ಮಾಡಿ ನಮಗೆ ಸಬ್ಸಿಡಿ ಕೊಟ್ಟಿದ್ದಕ್ಕೆ. ನಮಗೆ ಒಂದು ಲೀಟರ್‌ಗೆ 55 ಡೀಸೆಲ್ ಮತ್ತು 65 ಪೆಟ್ರೋಲ್ ಸಿಗುತ್ತಿತ್ತು. ಆದರೆ, ಇವತ್ತು 65 ಡಾಲರ್‌ಗೆ ಖರೀದಿ ಮಾಡುತ್ತಿದ್ದೇವೆ. ಈಗ ಒಂದು ಲೀಟರ್ ನೂರು ರೂಪಾಯಿಗಳಿಗೆ ಡೀಸೆಲ್ ಮತ್ತು ಪೆಟ್ರೋಲ್ ಸಿಗುತ್ತಿದೆ. ಇವತ್ತು ಏನಾದರೂ 90,000 ಕೋಟಿ ಸಬ್ಸಿಡಿ ಕೊಟ್ಟರೆ, 20 ರೂಪಾಯಿಗಳಿಗೆ ಡೀಸೆಲ್ ಮತ್ತು 30 ರೂಪಾಯಿಗಳಿಗೆ ಪೆಟ್ರೋಲ್ ಸಿಗುತ್ತದೆ. ಇಂತಹವುಗಳ ಬಗ್ಗೆ ನಾವು ವಾದಗಳನ್ನು ಮಾಡಬೇಕಾಗುತ್ತದೆ. ಇದು holistic view ನಲ್ಲಿ ಇರತಕ್ಕಂಥದ್ದು. The common man is the one who is really shedding his blood and, sweat for the society in all walks of life ನಲ್ಲಿ ಅವರನ್ನು ಕಾಣಬಹುದು. ಅಂತಹವರಿಗೋಸ್ಕರ ಈ ವಿಧೇಯಕವನ್ನು ತಂದಿರುವಂಥದ್ದು. ನಾವು ಅವರಿಗೆ ಚಾರ್ಜ್ ಮಾಡುತ್ತಿದ್ದೇವೆ. Not to drag much, I kindly request all your good selves to allow this Bill to pass through ಎಂದು ಈ ಸಂದರ್ಭದಲ್ಲಿ ಕೇಳಿ, ನನ್ನ ಎರಡು ಮಾತನ್ನು ಮುಗಿಸುತ್ತೇನೆ.

**ಶ್ರೀಮತಿ ಭಾರತಿ ಶೆಟ್ಟಿ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಈಗ ಬಳೆ ಮೇಲೆ, ಹರಿಶಿಣದ ಮೇಲೆ, ಬಟ್ಟೆ ಮೇಲೆ, ಟ್ರ್ಯಾಕ್ಟರ್ ಮೇಲೆ ಸೆಸ್‌ಗಳನ್ನು ಕಲೆಕ್ಟ್ ಮಾಡುವುದು ಏಕೆಂದರೆ, ಅದನ್ನು ಜನರಿಗೆ spend

ಮಾಡುವುದಕ್ಕೆ. ಈಗ ಇವರು ಕಲೆಕ್ಟ್ ಮಾಡುವುದನ್ನು ಸಹ ಜನರಿಗೆ ಕೊಡುವುದು. ಅವರು ಕಲೆಕ್ಟ್ ಮಾಡುವುದನ್ನು ಮತ್ತು ಇವರು ಕಲೆಕ್ಟ್ ಮಾಡುವುದನ್ನು ಮನೆಗೆ ತೆಗೆದುಕೊಂಡು ಹೋಗುವುದಿಲ್ಲ. ನಾನು ಹೇಳುವುದು ದ್ವಿಚಕ್ರ ವಾಹನದವರಿಗೆ ಹಾಕುವುದು ಬೇಡವೆಂದು ಹೇಳುತ್ತೇನೆ. ಈಗ ದ್ವಿಚಕ್ರ ವಾಹನದವರಿಗೆ ಇದರಿಂದ ಒಂದು ತಿಂಗಳ ಇ.ಎಂ.ಐ. ಕಟ್ಟುವುದಕ್ಕೆ ಆಗುತ್ತದೆ. ದ್ವಿಚಕ್ರ ವಾಹನ ಖರೀದಿ ಮಾಡುವಂತಹವರು ಬಹಳ ಬಡವರಿದ್ದಾರೆ. ಕೆಲವರಿಗೆ ನಾನೇ ಪೂರ್ತಿ ಹಣವನ್ನು ನೀಡಿದೇನೆ..

**ಶ್ರೀ ಸಂತೋಷ್ ಎಸ್. ಲಾಡ್:-** ಮಾನ್ಯ ಸಭಾಪತಿಯವರೇ, ಇದು lifetime. ಇದು ಪ್ರತಿ ವರ್ಷ ಅಲ್ಲ.

**ಶ್ರೀಮತಿ ಭಾರತಿ ಶೆಟ್ಟಿ:-** ಮಾನ್ಯ ಸಭಾಪತಿಯವರೇ, ಒಬ್ಬ ಬಡವ 500 ರೂಪಾಯಿಗಳಿಗೆ ಒಂದು ಜೊತೆ ಬಟ್ಟೆ ತೆಗೆದುಕೊಳ್ಳುತ್ತಾನೆ. ಪ್ರತಿಯೊಬ್ಬರ ಬಳಿ ದ್ವಿಚಕ್ರ ವಾಹನವಿರುತ್ತದೆ.

**ಶ್ರೀ ಸಂತೋಷ್ ಎಸ್. ಲಾಡ್:-** ಮಾನ್ಯ ಸಭಾಪತಿಯವರೇ, ಈಗ ಒಂದು ಬೈಕ್‌ಗೆ ಜಿ.ಎಸ್.ಟಿ. ಇದೆ.

**ಶ್ರೀಮತಿ ಭಾರತಿ ಶೆಟ್ಟಿ:-** ಮಾನ್ಯ ಸಭಾಪತಿಯವರೇ, ಅವರು ಜಿ.ಎಸ್.ಟಿ. ಹಾಕುತ್ತಾರೆ. ಇವರು ಐದುನೂರು ರೂಪಾಯಿ ಹಾಕುತ್ತಾರೆ. ಅದು ಏಕೆ ಬೇಕು?

**ಶ್ರೀ ಸಂತೋಷ್ ಎಸ್. ಲಾಡ್:-** ಮಾನ್ಯ ಸಭಾಪತಿಯವರೇ, ಈಗ ಜಿ.ಎಸ್.ಟಿ. ಯನ್ನು ಕಡಿಮೆ ಮಾಡಿಬಿಡಲಿ. ಮಾನ್ಯ ಸದಸ್ಯರು ಏನೆಂದು ಮಾತನಾಡುತ್ತಾರೆ.

**ಶ್ರೀಮತಿ ಭಾರತಿ ಶೆಟ್ಟಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಡೀಸೆಲ್ ಮತ್ತು ಪೆಟ್ರೋಲ್ ಬಗ್ಗೆ ಮಾತನಾಡಿದರು. ಈಗ ರಾಜ್ಯ ಸರ್ಕಾರದವರು ಏಕೆ ಅದನ್ನು ಕಡಿಮೆ ಮಾಡುವುದಿಲ್ಲ. ಈಗ ರಾಜ್ಯ ಸರ್ಕಾರದವರು ಸಹ ತೆರಿಗೆಯನ್ನು ಜಾಸ್ತಿ ಮಾಡಿದ್ದಾರೆ. ಈಗ ನೀವು ಮತ್ತು ನಾವು ಎಂದು ಬೇಡ. ದಯಮಾಡಿ ದ್ವಿಚಕ್ರ ವಾಹನಗಳಿಗೆ ಹಾಕುವುದು ಬೇಡ. ನಾಲ್ಕು ಚಕ್ರದ ವಾಹನಗಳಿಗೆ ಒಂದು ಸಾವಿರ ರೂಪಾಯಿ ಅಲ್ಲದಿದ್ದರೆ ಎರಡು ಸಾವಿರ ರೂಪಾಯಿಗಳನ್ನು ಹಾಕಲಿ.

**ಸಭಾಪತಿಯವರು:-** ಮಾನ್ಯ ಭಾರತಿ ಶೆಟ್ಟಿಯವರೆ, ತಾವು ಏನು ಸೈಕಲ್‌ಗೆ ಹೇಳುತ್ತಿದ್ದೀರೋ ಅಥವಾ ಮೋಟಾರ್ ಸೈಕಲ್‌ಗೆ ಹೇಳುತ್ತಿದ್ದೀರೋ?

(ಮುಂದು)

**(990) 18.12.2024 08.40 LL-AK** **(ಸಭಾಪತಿಯವರ ಉಪಸ್ಥಿತಿ)**

**ಶ್ರೀಮತಿ ಭಾರತಿ ಶೆಟ್ಟಿ:- ಮಾನ್ಯ ಸಭಾಪತಿಯವರೇ,** ನಮ್ಮ ಮನೆಯಲ್ಲಿರುವ ಒಬ್ಬ ಕ್ಲೀನರ್ ಹುಡುಗ ಸುಮಾರು 70,000 ರೂಪಾಯಿ ಕೊಟ್ಟು ಒಂದು ಎಲೆಕ್ಟ್ರಿಕ್ ವಾಹನ ಖರೀದಿ ಮಾಡಿರುತ್ತಾನೆ. ಅವರ ಹತ್ತಿರ ಒಟ್ಟಿಗೆ ಅಷ್ಟು ಹಣ ಕೊಡುವುದಕ್ಕೆ ಇರಲಿಲ್ಲ. ಆದುದರಿಂದ, ಆತ ನನಗೆ ಪ್ರತಿ ತಿಂಗಳು 10,000 ರೂಪಾಯಿ ಕೊಡುತ್ತೇನೆಂದು ನನ್ನಿಂದ ಹಣ ಪಡೆದು ಎಲೆಕ್ಟ್ರಿಕ್ ವಾಹನ ತೆಗೆದುಕೊಂಡಿರುತ್ತಾನೆ. ಅಂತಹವನಿಗೆ 500 ರೂಪಾಯಿಗಳಷ್ಟು ತೆರಿಗೆ ಜಾಸ್ತಿ ಹಾಕಿದರೆ, ಆ ಹಣದಲ್ಲಿ ಆತ ವರ್ಷಕ್ಕೆ 2-3 ಜೊತೆ ಬಟ್ಟೆ ತೆಗೆದುಕೊಳ್ಳುತ್ತಾನೆ.

ಹಾಗಾಗಿ, ದ್ವಿಚಕ್ರ ವಾಹನ ಹೊಂದಿದವರಿಗೆ 500 ರೂಪಾಯಿಗಳಷ್ಟು ತೆರಿಗೆ ಜಾಸ್ತಿ ಮಾಡಬಾರದು. ಬೇಕಾದರೆ, ನಾಲ್ಕು ಚಕ್ರ ವಾಹನ ಹೊಂದಿದವರಿಗೆ 2,000 ರೂಪಾಯಿಗಳ ತೆರಿಗೆ ಜಾಸ್ತಿ ಹಾಕಬಹುದು ಎಂದು ಹೇಳುತ್ತೇನೆ.

**ಶ್ರೀ ಸಂತೋಷ್ ಎಸ್. ಲಾಡ್ (ಕಾರ್ಮಿಕ ಸಚಿವರು) (ಸಾರಿಗೆ ಮತ್ತು ಮುಜರಾಯಿ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಸಲಹೆ ನೀಡಿರುವಂತೆ ನಾವು ಬೇಕಾದರೆ ನಾಲ್ಕು ಚಕ್ರ ವಾಹನ ಹೊಂದಿದವರಿಗೆ ತೆರಿಗೆ ಜಾಸ್ತಿ ಮಾಡುತ್ತೇವೆ. ನಾನು ಕೂಡ ಮೈನಿಂಗ್ ಏರಿಯಾದಿಂದ ಬಂದಂತಹವನು. ಆಗ ನಾನು 20 ರೂಪಾಯಿ ಕೂಲಿ ಹಣವನ್ನು ಹೆಣ್ಣುಮಕ್ಕಳಿಗೆ ಕೊಟ್ಟು ಬೆಳೆದಂತಹವನು. ನನಗೆ ಸಂಪೂರ್ಣವಾಗಿ ಮಾಹಿತಿ ಇದೆ. I am not trying to defend this bill. The reason is, ಇವೊತ್ತಿನ ದಿವಸ average bike price ಒಂದು ಲಕ್ಷ ರೂಪಾಯಿ ಇದೆ. ಇದನ್ನು ಯಾರಿಗೆ ಬೇಕಾದರೂ ಕೇಳಬಹುದು. ಅದು ಎಲೆಕ್ಟ್ರಿಕ್ ಬೈಕ್ ಅಥವಾ ಯಾವುದೇ ರೀತಿಯ ಬೈಕ್ ಇರಬಹುದು. ಹಾಗಾಗಿ, ಒಂದು ಲಕ್ಷ ರೂಪಾಯಿ ಬೈಕ್ ಖರೀದಿಸುವವನಿಗೆ 500 ರೂಪಾಯಿ ಜೀವತಾವಧಿ ತೆರಿಗೆ ದೊಡ್ಡದು ಆಗುವುದಿಲ್ಲ ಎನ್ನುವುದು ನನ್ನ ವಾದ. ಇದನ್ನು ತಾವೆಲ್ಲರೂ ಅರ್ಥ ಮಾಡಿಕೊಳ್ಳಬೇಕೆಂದು ನಾನು ಹೇಳುತ್ತೇನೆ. But, furthermore, ನಾಲ್ಕುಚಕ್ರ ವಾಹನ ಹೊಂದಿದವರಿಗೆ ಹೆಚ್ಚು ತೆರಿಗೆ ಹಾಕುವ ಬಗ್ಗೆ ನಾವು ಮುಂದೆ ಚಿಂತನೆ ಮಾಡುತ್ತೇವೆ. But, right now, I request this August House just to agree on this Bill.

**ಶ್ರೀ ಎನ್. ರವಿಕುಮಾರ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಇನ್ನೊಂದು ವಿಷಯವನ್ನು ಹೇಳುವುದಕ್ಕೆ ಬಯಸುತ್ತೇನೆ. ಕೇಂದ್ರ ಸರ್ಕಾರ ಜಿಎಸ್‌ಟಿ ಕಲೆಕ್ಟ್ ಮಾಡುವುದು ಕೇವಲ ಕೇಂದ್ರ ಸರ್ಕಾರಕ್ಕೆ ಆಗುತ್ತದೆಯೇ ಅಥವಾ ಇಡೀ ದೇಶಕ್ಕೆ ಆಗುತ್ತದೆಯೇ?

**ಸಭಾಪತಿಯವರು:-** ಆಯಿತು, ಸಾಕು. ದಯಮಾಡಿ ಕುಳಿತುಕೊಳ್ಳಿ.

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ,

"ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ ಕರ್ನಾಟಕ ಮೋಟಾರು ವಾಹನಗಳ ತೆರಿಗೆ ನಿರ್ಧರಣೆ (ಎರಡನೇ ತಿದ್ದುಪಡಿ) ವಿಧೇಯಕ, 2024 ಅನ್ನು ಪರ್ಯಾಲೋಚಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದು**

**ಖಂಡ 2 ಮತ್ತು 3**

**ಸಭಾಪತಿಯವರು:-** "ಖಂಡ 2 ಮತ್ತು 3 ಈ ವಿಧೇಯಕದ ಅಂಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಖಂಡ 2 ಮತ್ತು 3 ವಿಧೇಯಕಕ್ಕೆ ಸೇರಿಸಲಾಯಿತು)

**ಖಂಡ-1 ಇತ್ಯಾದಿ**

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ;

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)**

**ಪ್ರಸ್ತಾವದ ಅಂಗೀಕಾರ**

**ಶ್ರೀ ಸಂತೋಷ್ ಎಸ್. ಲಾಡ್ (ಕಾರ್ಮಿಕ ಸಚಿವರು) (ಸಾರಿಗೆ ಮತ್ತು ಮುಜರಾಯಿ ಸಚಿವರ ಪರವಾಗಿ):-** ಮಾನ್ಯ ಸಭಾಪತಿಯವರೇ, ಕರ್ನಾಟಕ ಮೋಟಾರು ವಾಹನಗಳ ತೆರಿಗೆ ನಿರ್ಧರಣೆ (ಎರಡನೇ ತಿದ್ದುಪಡಿ) ವಿಧೇಯಕ, 2024 ಅನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ,

"ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ ಕರ್ನಾಟಕ ಮೋಟಾರು ವಾಹನಗಳ ತೆರಿಗೆ ನಿರ್ಧರಣೆ (ಎರಡನೇ ತಿದ್ದುಪಡಿ) ವಿಧೇಯಕ, 2024 ಅನ್ನು ಅಂಗೀಕರಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು**

**12. ಪ್ರಕಟಣೆ**

**"ಕರ್ನಾಟಕ ವಿಧಾನಸಭೆಯು ಅಂಗೀಕರಿಸಿರುವ 2024ನೇ ಸಾಲಿನ ಮೈಸೂರು ಅಭಿವೃದ್ಧಿ ಪ್ರಾಧಿಕಾರ ವಿಧೇಯಕಕ್ಕೆ ವಿಧಾನ ಪರಿಷತ್ತಿನ ಸಹಮತಿ ಕೋರಿರುವ ಬಗ್ಗೆ.**

- - - -

**ಸಭಾಪತಿಯವರು:-** ಮಾನ್ಯ ಸಭಾಧ್ಯಕ್ಷರಿಂದ ಈ ಮುಂದಿನ ಸಂದೇಶ ಬಂದಿರುತ್ತದೆ. ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಗಳ 104ನೇ ನಿಯಮದ ಮೇರೆಗೆ ವಿಧಾನಸಭೆಯು ದಿನಾಂಕ 18.12.2024ರಂದು 2024ನೇ ಸಾಲಿನ ಮೈಸೂರು ಅಭಿವೃದ್ಧಿ ಪ್ರಾಧಿಕಾರ ವಿಧೇಯಕವನ್ನು ಅಂಗೀಕರಿಸಿರುತ್ತದೆಯೆಂದು ಹಾಗೂ ಸದರಿ ವಿಧೇಯಕಕ್ಕೆ ವಿಧಾನ ಪರಿಷತ್ತಿನ ಅನುಮತಿ ನೀಡಬೇಕಾಗಿ ಕೋರಿರುತ್ತಾರೆ. ಸದನವು ಸರ್ವಾನುಮತದಿಂದ ಒಪ್ಪಿರುತ್ತದೆ ಎಂದು ಭಾವಿಸುತ್ತೇನೆ.

## 13. ಶಾಸನ ರಚನೆ

## ವಿಧೇಯಕಗಳ ಪರ್ಯಾಲೋಚನೆ ಹಾಗೂ ಅಂಗೀಕಾರ (ಮುಂದುವರೆದುದು)

### ಏ) ಬಸವನ ಬಾಗೇವಾಡಿ ಅಭಿವೃದ್ಧಿ ಪ್ರಾಧಿಕಾರ ವಿಧೇಯಕ, 2024

### ಪರ್ಯಾಲೋಚನಾ ಪ್ರಸ್ತಾವ

**ಶ್ರೀ ಕೃಷ್ಣಭೈರೇಗೌಡ (ಕಂದಾಯ ಸಚಿವರು):-** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ ಬಸವನ ಬಾಗೇವಾಡಿ ಅಭಿವೃದ್ಧಿ ಪ್ರಾಧಿಕಾರ ವಿಧೇಯಕ, 2024 ಅನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

### ಪ್ರಸ್ತಾವವನ್ನು ಮಂಡಿಸಲಾಯಿತು

**ಶ್ರೀ ಕೃಷ್ಣಭೈರೇಗೌಡ (ಕಂದಾಯ ಸಚಿವರು):-** ಮಾನ್ಯ ಸಭಾಪತಿಯವರೇ, ಬಸವನ ಬಾಗೇವಾಡಿ ಬಹಳ ಐತಿಹಾಸಿಕ ಹಿನ್ನೆಲೆ ಇರತಕ್ಕಂತಹ ಹಾಗೂ ಅದರ ಸುತ್ತಮುತ್ತಲು ಇರುವಂತಹ ಪ್ರದೇಶಗಳು ಬಸವಣ್ಣನವರಿಂದ ಬಹಳ ಪ್ರಾಮುಖ್ಯತೆಯನ್ನು ಹೊಂದಿರತಕ್ಕಂಥದ್ದು ಇದೆ. ಇವೆಲ್ಲವೂ ಸಹ ಕೂಡಲ ಸಂಗಮ ಪ್ರಾಧಿಕಾರದಡಿಯಲ್ಲಿ ಬರುತ್ತವೆ. ಆದರೆ, ಬಸವನ ಬಾಗೇವಾಡಿ ಮತ್ತು ಅದರ ಇತಿಹಾಸ, ಸಂಪ್ರದಾಯ ಮತ್ತು ಕೊಡುಗೆಯನ್ನು ನಾವು ಪ್ರತ್ಯೇಕವಾಗಿ ಪ್ರಚಾರ ಮಾಡಬೇಕು, ಸಂರಕ್ಷಣೆ ಮಾಡಬೇಕು, ಆ ಪ್ರದೇಶದ ಐತಿಹಾಸಿಕ ಹಿನ್ನೆಲೆಗೆ ಬಹಳ ಒತ್ತು ಕೊಟ್ಟು ಸಂರಕ್ಷಣೆ ಮಾಡಬೇಕೆಂದು ಒತ್ತಾಯ ಬಂದ ಹಿನ್ನೆಲೆಯಲ್ಲಿ ಬಸವನ ಬಾಗೇವಾಡಿ ಅಭಿವೃದ್ಧಿ ಪ್ರಾಧಿಕಾರ ಮಾಡುವುದಕ್ಕೆ ಈ ಒಂದು ವಿಧೇಯಕವನ್ನು ತಿದ್ದುಪಡಿಗೆ ತಂದಿರುತ್ತೇವೆ. ಈ ಹಿಂದೆ ಇದೇ ರೀತಿಯ ಅನೇಕ ಪ್ರಾಧಿಕಾರಿಗಳ ರಚನೆಯಾಗಿದ್ದು, ಹಾಲಿ ಅವುಗಳು ಕಾರ್ಯನಿರ್ವಹಣೆ ಮಾಡುತ್ತಿವೆ. ಅದರಂತೆ, ಕಿತ್ತೂರು ರಾಣಿ ಚೆನ್ನಮ್ಮ ಅಭಿವೃದ್ಧಿ ಪ್ರಾಧಿಕಾರ, ಕನಕದಾಸ ಅಭಿವೃದ್ಧಿ ಪ್ರಾಧಿಕಾರ, ಕೆಂಪೇಗೌಡ ಅಭಿವೃದ್ಧಿ ಪ್ರಾಧಿಕಾರ, ಸರ್ವಜ್ಞ ಅಭಿವೃದ್ಧಿ ಪ್ರಾಧಿಕಾರ, ಬನವಾಸಿ ಅಭಿವೃದ್ಧಿ ಪ್ರಾಧಿಕಾರ ಹಾಗೂ ಇತರೆ ಅನೇಕ ಪ್ರಾಧಿಕಾರಗಳು ಇವೆ. ಅವುಗಳ ಕಾನೂನುಗಳನ್ನು ನೋಡಿಕೊಂಡು ಅದರ ಆಧಾರದ ಮೇರೆಗೆ ಹಾಗೂ ಅದೇ ರೂಪುರೇಷೆಗಳೊಂದಿಗೆ ಈ ವಿಧೇಯಕವನ್ನು ತಿದ್ದುಪಡಿಗೆ ತಂದಿರುತ್ತೇವೆ. ಇದರ ಉದ್ದೇಶ ಬಸವನ ಬಾಗೇವಾಡಿಗೆ ಒತ್ತುಕೊಟ್ಟು ಅದರ ಅಭಿವೃದ್ಧಿ ಆಗಬೇಕು. ಐತಿಹಾಸಿಕ ಸ್ಥಳಗಳನ್ನು ಗುರುತಿಸಿ, ಅವುಗಳನ್ನು ಅಭಿವೃದ್ಧಿಪಡಿಸಬೇಕು ಮತ್ತು ಬಸವನ ಬಾಗೇವಾಡಿ ಬಸವಣ್ಣನವರ ವಿಚಾರಗಳನ್ನು ಪರಿಣಾಮಕಾರಿಯಾಗಿ ಇವೊತ್ತಿನ ಪೀಳಿಗೆಗೆ ಪರಿಚಯ ಮಾಡಿಸಬೇಕು ಎನ್ನುವ ಉದ್ದೇಶದಿಂದ ಈ ಪ್ರಾಧಿಕಾರದ ರಚನೆಗೆ ಸರ್ಕಾರ ಮುನ್ನುಡಿ ಇಟ್ಟಿದೆ. ಅಲ್ಲದೇ, ಈ ಪ್ರಾಧಿಕಾರದ ರಚನೆ ಬಗ್ಗೆ ಆಯವ್ಯಯದಲ್ಲಿ ಘೋಷಣೆಯಾಗಿದ್ದು, ಅದನ್ನು ಅನುಷ್ಠಾನಕ್ಕೆ ತಂದಿರುತ್ತೇವೆ. ಆಯವ್ಯಯದಲ್ಲಿ ಮೊದಲು ಈ ಪ್ರಾಧಿಕಾರದ ರಚನೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಆಗಿದ್ದು, ನಂತರ ಸರ್ಕಾರದಲ್ಲಿ ಇದನ್ನು ಕಂದಾಯ

ಇಲಾಖೆಯವರು ಮಾಡಿದರೆ ಸೂಕ್ತ ಎಂದು ನಮಗೆ ವಹಿಸಿರುತ್ತಾರೆ. ಇದು ಇಷ್ಟು ಈ ವಿಧೇಯಕದ ಹಿನ್ನೆಲೆಯಾಗಿದ್ದು, ಇದಕ್ಕೆ ಅನುಮೋದನೆ ನೀಡಬೇಕೆಂದು ತಮ್ಮ ಮೂಲಕ ಮಾನ್ಯ ಸದಸ್ಯರಲ್ಲಿ ವಿನಂತಿ ಮಾಡುತ್ತೇನೆ.

**ಶ್ರೀ ಕೆ.ಎ. ತಿಪ್ಪೇಸ್ವಾಮಿ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಈಗಾಗಲೇ ಕಂದಾಯ ಇಲಾಖೆಯಲ್ಲಿಯೇ ಬಸವ ಕಲ್ಯಾಣ ಅಭಿವೃದ್ಧಿ ಮಂಡಳ ಇದೆ. ಅದೇ ರೀತಿಯಾಗಿ, ಕೂಡಲ ಸಂಗಮ ಇದೆ. ಕೂಡಲ ಸಂಗಮ ಬಸವಣ್ಣನವರ ಐಕ್ಯಸ್ಥಾನವಾದರೆ, ಬಸವ ಕಲ್ಯಾಣದ ರಾಜ ಬಿಜ್ಜಳನ ಆಸ್ಥಾನದಲ್ಲಿ ಬಸವೇಶ್ವರ ಮಂತ್ರಿಯಾಗಿ ಸಾಮಾಜಿಕ ಸುಧಾರಣೆಗಳನ್ನು ತಂದಿರುವಂತಹ ಸ್ಥಾನವಾಗಿದೆ. ಈಗ ಬಸವನ ಬಾಗೇವಾಡಿ ಬಸವೇಶ್ವರರ ಜನ್ಮಸ್ಥಾನವಾಗಿದೆ. ಹಾಗಾಗಿ, ಇವೆಲ್ಲವನ್ನೂ ಕ್ರೋಡೀಕರಿಸಿ ಏಕರೂಪದ ಕಾಯಿದೆ ತರಬಾರದು. ಆಡಳಿತಾತ್ಮಕ ದೃಷ್ಟಿಯಿಂದ ಆ ಏಕರೂಪದ ಕಾಯಿದೆಚೆನ್ನಾಗಿರುತ್ತಿತ್ತು. ಒಟ್ಟಾರೆ ಬಸವ ತತ್ವದ ಅಭಿವೃದ್ಧಿಗೆ ಒಳ್ಳೆಯದಾಗುತ್ತಿತ್ತು ಎನ್ನುವುದು ನನ್ನ ಭಾವನೆ. ದಯಮಾಡಿ, ಅದರ ಬಗ್ಗೆ ಪರಿಶೀಲನೆ ಮಾಡಬೇಕು ಅಥವಾ ಮುಂದಿನ ದಿನಗಳಲ್ಲಾದರೂ ಸಹ ಇದನ್ನು ಮಾಡಬೇಕೆಂದು ಒತ್ತಾಯಿಸುತ್ತೇನೆ.

ಶೆಡ್ಯೂಲ್‌ನಲ್ಲಿ 8 ಪಟ್ಟಣಗಳು ಮತ್ತು ಗ್ರಾಮಗಳನ್ನು ಸೇರಿಸಿದ್ದಾರೆ. ಅವುಗಳೆಂದರೆ, ಬಸವನಬಾಗೇವಾಡಿ, ಹೊರಮಟ್ಟಿ ಗುಡ್ಡ, ಇಂಗಳೇಶ್ವರ, ಮಸಬಿನಾಳ, ದೇಗಿನಾಳ, ದೇವರಹಿಪ್ಪರಗಿ, ಶಿವನಾಗಿ ಮತ್ತು ತಂಗಡಗಿ ಎಂದು ಹೇಳಿದ್ದಾರೆ. ಇಷ್ಟು ಪಟ್ಟಣಗಳು ಅಥವಾ ತಾಣಗಳು ಸ್ಮಾರಕಗಳು ಎನ್ನುವುದಕ್ಕೆ ಏನಾದರೂ ಸಂಶೋಧನೆ ಆಗಲಿ ಅಥವಾ ಬೇರೆ ರೀತಿಯಾದರೂ explore ಮಾಡಿದ್ದೀರಾ ಅಥವಾ excavations ನಡೆಸಿದ್ದಾರೆಯೇ? ಏಕೆಂದರೆ, ಯಾವುದೇ ಸರ್ವೆ ನಂಬರ್‌ವೈಸ್ ಮಾಹಿತಿ ನೀಡಿರುವುದಿಲ್ಲ. ಅಲ್ಲದೇ, ಈ ಗ್ರಾಮಗಳಲ್ಲಿರತಕ್ಕಂತಹ ಸ್ಮಾರಕಗಳಾಗಲಿ, ತಾಣಗಳಾಗಲಿ ಯಾವುವು ಮುಖ್ಯವಾಗಿ ಬಸವೇಶ್ವರರಿಗೆ ಸೇರಿವೆ ಎಂದು ಹೇಳಿರುವುದಿಲ್ಲ. ಕಾರಣ ಏನೆಂದರೆ, ಒಂದು ಬಾರಿ ಇದನ್ನು ನೋಟಿಫೈ ಮಾಡಿದ ನಂತರ, ಆ ಜಾಗದಲ್ಲಿ ಏನೂ ಕೂಡ ರೈತರಾಗಲಿ ಅಥವಾ ಪಟ್ಟಣ ಪ್ರದೇಶಗಳಲ್ಲಿರುವ ನಿವಾಸಿಗಳು ಯಾವುದೇ ರೀತಿಯ ಅಭಿವೃದ್ಧಿ ಮಾಡುವುದಕ್ಕೆ ಆಗುವುದಿಲ್ಲ. ಈ ಸಮಸ್ಯೆ ಈ ಹಿಂದೆ ಹಂಪಿಯಲ್ಲಿ ಆಗಿರುತ್ತದೆ. ಅದಕ್ಕೋಸ್ಕರವಾಗಿ ದಯಮಾಡಿ ಯಾವುದಾದರೂ ಒಳ್ಳೆಯ ಏಜೆನ್ಸಿಯಿಂದ ಅಲ್ಲಿ ಸಂಶೋಧನೆ ಮತ್ತು exploration, excavation ಮಾಡಿಸಿ, ಅವರ ಜನ್ಮಸ್ಥಾನಕ್ಕೆ ಸಂಬಂಧಪಟ್ಟ ಜಾಗ ಹಾಗೂ ಅವರು ಎಲ್ಲೆಲ್ಲಿ ಯಾವ್ಯಾವ ಒಡನಾಟ ಇಟ್ಟುಕೊಂಡಿದ್ದರು ಅಂತಹ ಸ್ಥಳಗಳನ್ನು ಗುರುತಿಸಿ, ಆ ಸಂಬಂಧಪಟ್ಟ ಸರ್ವೆ ನಂಬರ್ ಅಥವಾ ಆ ಪಾರಂಪರಿಕ ತಾಣಗಳನ್ನು ಗುರುತಿಸಿದ ನಂತರ, ಅಭಿವೃದ್ಧಿ ಮಾಡುವುದು ಒಳ್ಳೆಯದು ಅಥವಾ ಆ ತಾಣಗಳು ಈಗಾಗಲೇ ಸಾಕಷ್ಟು ಅಭಿವೃದ್ಧಿಯಾಗಿದ್ದು, ಈಗ ಅವುಗಳನ್ನು ಸ್ವಾಧೀನ ಪಡಿಸಿಕೊಳ್ಳಬೇಕಾಗಬಹುದು. ಅಂತಹ ಜಾಗಗಳನ್ನು ಸ್ವಾಧೀನಪಡಿಸಿಕೊಂಡು ಸಂಬಂಧಪಟ್ಟವರಿಗೆ ಪರಿಹಾರ ಹಣ ಕೊಡಬೇಕು ಮತ್ತು ಅವರಿಗೆ ಪುನರ್ ವಸತಿ ಕಲ್ಪಿಸಬೇಕು ಎನ್ನುವುದನ್ನು ಸಹ ಗಮನದಲ್ಲಿಟ್ಟುಕೊಂಡು ಈ ವಿಧೇಯಕವನ್ನು ತಿದ್ದುಪಡಿಗೆ ತರಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ವಿನಂತಿ ಮಾಡುತ್ತೇನೆ.

**ಶ್ರೀ ಪಿ.ಹೆಚ್. ಪೂಜಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ಮಾನ್ಯ ತಿಪ್ಪೇಸ್ವಾಮಿಯವರು ಹೇಳಿರುವ ವಿಚಾರಕ್ಕೆ ಪೂರಕವಾಗಿ ನಾನು ಹೇಳುತ್ತೇನೆ. ಸುಮಾರು 9 ಸ್ಥಳಗಳಲ್ಲಿ ಬಸವೇಶ್ವರರು ಬಿಟ್ಟು ಹೋದಂತಹ ಕುರುಹುಗಳು ಮತ್ತು ಅಲ್ಲಿ ನಡೆದಾಡಿರುವಂಥದ್ದು, ಅಲ್ಲಿನ ಸ್ಮಾರಕಗಳು ಇವೆಲ್ಲವೂ ಸಹ ಬಹಳಷ್ಟು ಪ್ರಾಮುಖ್ಯತೆ ಪಡೆದುಕೊಂಡಿರುತ್ತವೆ. ಬಹಳ ವರ್ಷಗಳಿಂದ ಇದನ್ನು ನಾವು ಅಪೇಕ್ಷೆ ಮಾಡುತ್ತಿದ್ದೆವು. ಬಸವ ಕಲ್ಯಾಣ ಅಭಿವೃದ್ಧಿ ಮಂಡಳಿ ಸ್ಥಾಪನೆ ಮಾಡಿರುವಂಥದ್ದು ಒಂದು ಭಾಗವಾಗಿರುತ್ತದೆ. ಈಗ ಕೂಡಲ ಸಂಗಮದಲ್ಲಿ ದೊಡ್ಡ ರೀತಿಯ ಕಾರ್ಯಕ್ರಮಗಳು ಆದಂಥದ್ದು ಇದೆ. ಕಳೆದ 25 ವರ್ಷಗಳ ಹಿಂದೆ ಮಾನ್ಯ ಜೆ.ಹೆಚ್. ಪಟೇಲ್‌ರವರು ಮುಖ್ಯಮಂತ್ರಿಯಾಗಿದ್ದಂತಹ ಸಂದರ್ಭದಲ್ಲಿ ಈ ಕೂಡಲ ಸಂಗಮ ಅಭಿವೃದ್ಧಿ ಪ್ರಾಧಿಕಾರ ಮಾಡಿ ಒಳ್ಳೆಯ ಕೆಲಸಗಳನ್ನು ಅಲ್ಲಿ ಮಾಡಿರುತ್ತಾರೆ.

(ಮುಂದು)

**(991) 18.12.2024 8.50 ವೈಎಲ್-ಎಕೆ** **(ಸಭಾಪತಿಯವರ ಉಪಸ್ಥಿತಿ)**

ಶ್ರೀ ಪಿ.ಹೆಚ್.ಪೂಜಾರ್ (ಮುಂದು):

ಅಂತರರಾಷ್ಟ್ರೀಯ ಮಟ್ಟದ ಪ್ರವಾಸಿಗರು ಕೂಡ ಕೂಡಲಸಂಗಮಕ್ಕೆ ಆಗಮಿಸಿ ಶ್ರೀ ಜಗಜ್ಯೋತಿ ಬಸವೇಶ್ವರರ ಬಗ್ಗೆ ತಿಳಿದುಕೊಂಡು ಹೋಗುವಂಥ ಕಾರ್ಯಕ್ರಮಗಳು ಇವತ್ತಿಗೂ ನಡೆಯುತ್ತಿವೆ. ಈಗಾಗಲೇ ಬಸವನ ಬಾಗೇವಾಡಿ ಮತ್ತು ಕೂಡಲಸಂಗಮ ಇವೆರಡೂ ಕೂಡ ಸುಮಾರು 50 ರಿಂದ 55 ಕಿಲೋ ಮೀಟರ್ ವ್ಯಾಪ್ತಿಯ ಸಮೀಪದಲ್ಲಿದ್ದು, ಕೇವಲ ಒಂದು ಅಥವಾ ಒಂದೂವರೆ ಗಂಟೆಯೊಳಗೆ ತಲುಪುವಷ್ಟು ಅಂತರವಿದ್ದು, ಇವೆರಡನ್ನೂ ಸಹ ಸೇರಿಸಿಕೊಂಡು ಒಂದು ಮಾಡಲು ಸಾಧ್ಯತೆ ಇದೆಯೇ? ಏಕೆಂದರೆ, ಕೂಡಲಸಂಗಮಕ್ಕೆ ಬರುವಂಥ ಪ್ರವಾಸಿಗರು ಬಸವನ ಬಾಗೇವಾಡಿಗೂ ಹೋಗಬೇಕೆಂಬ ಭಾವನೆ ಮೂಡುವಂತೆ ಅವರನ್ನು ಜಾಗೃತಗೊಳಿಸುವ ರೀತಿ ಮಾಡಬೇಕು. ಬಸವ ಕಲ್ಯಾಣದ ಬಗ್ಗೆ ಸಹ ನಾನು ಹೇಳಬೇಕಾಗಿದ್ದು, ಸುಮಾರು 400, 500 ಕಿಲೋ ಮೀಟರ್ ದೂರದಲ್ಲಿದೆ. ಇವೆರಡೂ ಸಮೀಪದಲ್ಲಿರುವ ಕಾರಣ ಜನ್ಮ ಸ್ಥಳ ಹಾಗೂ ಐಕ್ಯ ಸ್ಥಳಗಳೆರಡೂ ಕೇವಲ 50 ಕಿಲೋ ಮೀಟರ್ ಅಂತದಲ್ಲಿರುವಂಥ ಹಿನ್ನಲೆಯಲ್ಲಿ ಜೊತೆಯಲ್ಲಿ ಸೇರಿಸಿ, ವಿಶೇಷವಾದ ಕಾರ್ಯಕ್ರಮವನ್ನು ಸರ್ಕಾರ ರೂಪಿಸಲು ಸಾಧ್ಯವೇ ಎನ್ನುವಂಥ ವಿಚಾರವನ್ನು ಕೇಳಬಯಸುತ್ತೇನೆ.

ಜೊತೆಗೆ ಬಸವನ ಬಾಗೇವಾಡಿ ಅಭಿವೃದ್ಧಿ ಪ್ರಾಧಿಕಾರಕ್ಕೆ ಸದಸ್ಯರು ಯಾರೆಂಬುದರ ವಿವರಣೆ ಸಹ ತಿಳಿಸಿದ್ದು, 24 ಸದಸ್ಯರನ್ನು ಸೇರ್ಪಡೆಗೊಳಿಸಲಾಗಿದ್ದು, ವಿಧೇಯಕದಲ್ಲಿ ಸ್ಪಷ್ಟವಾಗಿ ತಿಳಿಸಲಾಗಿದೆ. ಮುದ್ದೇನವಾಳ ಮತ್ತು ಬಸವನ ಬಾಗೇವಾಡಿ ಶಾಸಕರನ್ನು ವಿಧೇಯಕದಲ್ಲಿ ಸೇರಿಸಲಾಗಿದೆ. ಏಕೆಂದರೆ, ಅಕ್ಕಪಕ್ಕದ ರಸ್ತೆಗಳು ಕೂಡುತ್ತಿಲ್ಲ ಎಂಬ ಕಾರಣ. ಹಾಗೆಯೇ ಆ ಭಾಗದ ಲೋಕಸಭಾ ಸದಸ್ಯರನ್ನು ಸಹ ಸೇರಿಸಲಾಗಿದೆ. ಆದರೆ, ವಿಧಾನ ಪರಿಷತ್ತಿನ ಸದಸ್ಯರನ್ನು ಸೇರಿಸಿಲ್ಲ. ಏಕೆಂದರೆ, ನಾವೆಲ್ಲರೂ ಬಸವನಬಾಗೇವಾಡಿ ಪುರಸಭೆಯ ಪಟ್ಟಣ ಪಂಚಾಯ್ತಿ ಸದಸ್ಯರಿಂದ

ಆಯ್ಕೆಗೊಂಡಿರುವುದು. ಅಲ್ಲಿನವರು ನಮಗೆ ಮತ ಚಲಾಯಿಸಿದ್ದಾರೆ. ಹಾಗಾಗಿ, ಬಿಜಾಪುರ ಮತ್ತು ಬಾಗಲಕೋಟೆಯ ವಿಧಾನ ಪರಿಷತ್ತಿನ ಸದಸ್ಯರನ್ನು ಸಹ ಸೇರಿಸಬೇಕೆಂದು ವಿನಂತಿಸುತ್ತೇನೆ.

**ಶ್ರೀ ಕೇಶವ ಪ್ರಸಾದ್.ಎಸ್ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಬಸವನಬಾಗೇವಾಡಿ ಅಭಿವೃದ್ಧಿ ಪ್ರಾಧಿಕಾರ ವಿಧೇಯಕ, 2024 ಅನ್ನು ನಾನು ಸ್ವಾಗತಿಸುತ್ತೇನೆ. ಈಗಾಗಲೇ ವಿಸ್ಕೃತವಾಗಿ ಎಲ್ಲಾ ವಿಚಾರಗಳ ಬಗ್ಗೆ ಚರ್ಚೆಯಾಗಿದೆ. Public-Private participation ಗೆ, Public-Private Partnership (PPP) model ನಲ್ಲಿ ಅವಕಾಶ ಕಲ್ಪಿಸಿದರೆ ಅನುಕೂಲವಾಗುತ್ತದೆ ಎಂಬುದು ನನ್ನ ಅಭಿಪ್ರಾಯವಾಗಿದ್ದು, ಅದನ್ನು ಪರಿಗಣಿಸಬೇಕೆಂದು ತಮ್ಮ ಮೂಲಕ ಸರ್ಕಾರಕ್ಕೆ ಕೇಳಿಕೊಳ್ಳುತ್ತೇನೆ. ಹಾಗೆಯೇ ಸ್ಥಳೀಯ ಜನರಿಗೆ ವಿಫಲವಾದ ಅವಕಾಶ open up ಆಗುವಂಥ ದೃಷ್ಟಿಯ ಕಡೆಗೂ ಗಮನಕೊಡಬೇಕು. ಅಂದರೆ, ಎಲ್ಲಾ ಸಣ್ಣ ಉದ್ದಿಮೆಗಳು ಮತ್ತು transportation ಗೆ ಸಂಬಂಧಿಸಿದಂತೆ ಅಲ್ಲಿಯ ಸ್ಥಳೀಯರನ್ನು ಗಮನದಲ್ಲಿಟ್ಟುಕೊಂಡು tourism industry ಬೆಳವಣಿಗೆ ಮಾಡುವ ಕಡೆಯು ಹೆಚ್ಚು ಗಮನಕೊಡಬೇಕು. ಹಾಗೆಯೇ ಮಾನ್ಯ ಪಿ.ಹೆಚ್. ಪೂಜಾರ್‌ರವರು ಹೇಳಿದಂತೆ M.P. ಮತ್ತು ಎಂ.ಎಲ್.ಸಿ. ಯವರನ್ನು ಸಹ ಸೇರಿಸಿಕೊಂಡರೆ ಅನುಕೂಲವಾಗುತ್ತದೆ.

**ಶ್ರೀಮತಿ ಭಾರತಿ ಶೆಟ್ಟಿ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೇ, ಬಸವನಬಾಗೇವಾಡಿ ಅಭಿವೃದ್ಧಿ ಪ್ರಾಧಿಕಾರ ವಿಧೇಯಕ, 2024 ಅನ್ನು ನಾನು ಸ್ವಾಗತಿಸುತ್ತಾ, ಈಗಾಗಲೇ ಕೆಲವರು ಮಾನ್ಯ ಸದಸ್ಯರು ಮಾತನಾಡಿರುವುದನ್ನು ನಾನು ಮತ್ತೆ ಅದೇ ವಿಚಾರವನ್ನು ಉಲ್ಲೇಖ ಮಾಡಲು ಹೋಗುವುದಿಲ್ಲ. ಈ ವಿಧೇಯಕವು ಕೇವಲ ವಿಧೇಯಕಕ್ಕೆ ಸೀಮಿತವಾಗಬಾರದು. ಚಿತ್ರದುರ್ಗದಲ್ಲಿ ಒನಕೆ ಓಬವ್ವನ ಸ್ಮಾರಕ ನಿರ್ಮಾಣ ಮಾಡಲು ಜಾಗವೇ ಇಲ್ಲದಂತಾಗಿದೆ. ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್.ಯಡಿಯೂರಪ್ಪನವರ ಸರ್ಕಾರ ಅಸ್ತಿತ್ವದಲ್ಲಿದ್ದಾಗ ರೂ.10.00 ಕೋಟಿಯನ್ನು ಬಿಡುಗಡೆ ಮಾಡಿತ್ತು. ಇವತ್ತು ಸರ್ಕಾರವು ಆ ಹಣವನ್ನು ಕೊಡಲು ಸ್ಮಾರಕ ನಿರ್ಮಾಣಕ್ಕೆ ಜಾಗವೇ ಇಲ್ಲವಾಗಿದೆ. ಐತಿಹಾಸಿಕವಾಗಿ ಅಮರವಾಗಿ ನಿಂತಿರುವಂಥ ಒನಕೆ ಓಬವ್ವನ ಜಾಗವಾಗಿದೆ. ಅದೇ ರೀತಿ ಬಸವನ ಬಾಗೇವಾಡಿ ವಿಧೇಯಕ ಏನಿದೆ, ಅದು ವಿಧೇಯಕಕ್ಕೆ ಸೀಮಿತಗೊಳಿಸದೇ ಸ್ಥಳ ಅವಕಾಶ ಕಲ್ಪಿಸಬೇಕು ಮತ್ತು ಒನಕೆ ಓಬವ್ವನ ಸ್ಮಾರಕ ನಿರ್ಮಾಣದ ಕಡೆ ಸಹ ಗಮನಹರಿಸಬೇಕೆಂದು ಕೇಳಿಕೊಳ್ಳುತ್ತೇನೆ.

**ಶ್ರೀ ಕೃಷ್ಣಭೈರೇಗೌಡ (ಕಂದಾಯ ಸಚಿವರು):-** ಮಾನ್ಯ ಸಭಾಪತಿಯವರೇ, ಯಾವ ಆಧಾರದ ಮೇಲೆ ಈ ವಿಧೇಯಕವನ್ನು ತರಲಾಗಿದೆ ಎಂಬುದಕ್ಕಿಂತ ಇದರ ಮೂಲ ಉದ್ದೇಶವೇನೆಂದರೆ,... ಈಗಾಗಲೇ ಎರಡ್ಮೂರು ಸದಸ್ಯರು ಮಾತನಾಡಿದಂತೆ ನಾನು ಸಹ ಒಬ್ಬ ಸಚಿವ ಎಂಬುದನ್ನು ಬದಿಗಿಟ್ಟು ಈ ಕುರ್ಚಿಯಿಂದ ಮೇಲಕ್ಕೆ ಎದ್ದು ವೈಯಕ್ತಿಕವಾಗಿ ಹೇಳುವುದಾದರೆ, ಅದು ನನ್ನ personal opinion. ಇವೆಲ್ಲವೂ ಕೂಡ ಸಂಘಟಿತವಾಗಿ ಒಂದು ಪ್ರಾಧಿಕಾರದ ಕೆಳಗೆ ಇದ್ದರೆ ಒಳ್ಳೆಯದು. ಅದೇ ರೀತಿ ಕುರ್ಚಿಯಲ್ಲಿ ಕುಳಿತುಕೊಂಡಾಗ ನನ್ನ ಅಭಿಪ್ರಾಯವೇ

ಅಂತಿಮವಾಗುವುದಿಲ್ಲ, ಸಾರ್ವಜನಿಕರ ಅಭಿಪ್ರಾಯಕ್ಕೆ ನಾನು ಗೌರವ ಕೊಡಬೇಕಾಗುತ್ತದೆ. ಅದರಂತೆ ಈಗಾಗಲೇ ಮಾನ್ಯ ಸದಸ್ಯರು ಹೇಳಿದ ಹಾಗೆ ನಿಜವಾಗಿ ಅಭಿವೃದ್ಧಿಯಾಗಬೇಕೆಂದರೆ, ಒಂದು ಪ್ರಾಧಿಕಾರವನ್ನು ನಿರ್ಮಾಣ ಮಾಡಿ, ಮಾನವ ಸಂಪನ್ಮೂಲ ಕೊಡುವುದರ ಮೂಲಕ ಅಲ್ಲಿ ಒಳ್ಳೆಯ ಆಫಿಸರ್ ಆಯ್ಕೆ ಮಾಡಿದರೆ ಅಭಿವೃದ್ಧಿಯಾಗುತ್ತದೆ. ಆದರೆ, ಪ್ರತ್ಯೇಕ ಭಾಗಗಳಾಗಿ ವಿಂಗಡಿಸಿದರೆ ಒಳ್ಳೆಯ ಅಧಿಕಾರಿಯನ್ನು ನೇಮಕ ಮಾಡಲು ಆಗುವುದಿಲ್ಲ. ಆದರೆ, ಚಿಕ್ಕ ಪ್ರಾಧಿಕಾರದ ಕಡೆಗೆ ಗಮನಕೊಡಲು ಆಗುವುದಿಲ್ಲ. ಏಕೆಂದರೆ, ನನ್ನ ಇಲಾಖೆ ವ್ಯಾಪ್ತಿಯಲ್ಲಿಯೇ ಸುಮಾರು 16 ಪ್ರಾಧಿಕಾರಗಳು ಹಾಗೂ ಮಂಡಳಿಗಳಿವೆ. ನಾನು ಕಂದಾಯ ಇಲಾಖೆ ಕಡೆ ಗಮನಹರಿಸುವುದಕ್ಕೆ 24 ಗಂಟೆ ಸಮಯ ಕೊಡಬೇಕಾಗಿದ್ದು, ಪ್ರಾಧಿಕಾರ ಹಾಗೂ ಮಂಡಳಿ ಕಡೆ ಗಮನಹರಿಸಲು ಆಗದೇ ಇರುವಂತಹ ಸಮಸ್ಯೆಗಳಿವೆ. ಹಾಗಾಗಿ, ಪ್ರತ್ಯೇಕಗೊಳಿಸದೇ ಒಟ್ಟಾರೆಯಾಗಿ ಇದ್ದರೆ ನಿಜವಾಗಿ ಆ ಕಡೆ focus ಕೊಟ್ಟು, ಒಳ್ಳೆಯ ಆಫೀಸರ್ ನೇಮಿಸಿ, human resource strength ಮತ್ತು financial strength ಕೊಟ್ಟಾಗ ಅಭಿವೃದ್ಧಿ ಮಾಡಬಹುದೆಂಬುದು ಸದಸ್ಯರೆಲ್ಲರ ಯೋಚನೆಯಾಗಿದೆ.

ಆದರೆ, ಇವತ್ತು ಆ ಭಾಗದ ಜನರ ಭಾವನೆಗಳಿಗೂ ನಾವು ಗೌರವ ಕೊಡಬೇಕಾಗುತ್ತದೆ. ಜೊತೆಗೆ ಪ್ರಾದೇಶಿಕ ಭಾವನೆಗಳಿರುತ್ತವೆ. ಒಂದು ಕಡೆ ಕೂಡಲಸಂಗಮ ಇದ್ದರೆ ಮತ್ತೊಂದು ಕಡೆ ಅನುಭವ ಮಂಟಪ ಇದ್ದು, ಮಧ್ಯೆ ಬಸವನಬಾಗೇವಾಡಿ ಇದೆ. ಹಾಗಾಗಿ, ಸ್ಥಳೀಯರ ಒತ್ತಡಕ್ಕೆ ಸರ್ಕಾರ ಗೌರವ ಕೊಟ್ಟು, ಬಸವನಬಾಗೇವಾಡಿ ಪ್ರಾಧಿಕಾರ ವಿಧೇಯಕವನ್ನು ಜಾರಿಗೆ ತರಲಾಗಿದೆ. ಇದುವರೆವಿಗೂ ಕೂಡಲಸಂಗಮ ಪ್ರಾಧಿಕಾರದ ವ್ಯಾಪ್ತಿಗೆ ಬರುತ್ತಿದ್ದು, ಈಗ ಅದನ್ನು ಪ್ರತ್ಯೇಕಿಸಿ ಒಂದು ವ್ಯಾಪ್ತಿಗೆ ತರಲಾಗಿದೆ. ಈಗಾಗಲೇ indicative list ಮಾಡಿಕೊಂಡಿದ್ದು; it is only an indicative list. ಇದರಲ್ಲಿ ಸಂಶೋಧನೆ ಆಧಾರದ ಮೇಲೆ ಯಾವ್ಯಾವ ಸ್ಥಳಗಳು, ಗ್ರಾಮಗಳು ಬಸವಣ್ಣನವರಿಗೆ ಸಂಬಂಧಿಸಿದ್ದಾಗಿರುತ್ತದೆ, ಅವುಗಳನ್ನು ಸಹ ಅದರ ವ್ಯಾಪ್ತಿಯೊಳಗೆ ತರಲು ಈ ವಿಧೇಯಕದಲ್ಲಿ ಅವಕಾಶ ಮಾಡಿಕೊಳ್ಳಲಾಗಿದೆ. ಹಾಗಾಗಿ, indicative list ಅನ್ನು ಈ ಹಿಂದೆ ಸಂಶೋಧನೆ ಆಗಿರುವಂಥ ಆಧಾರದ ಮೇಲೆ preamble ನಲ್ಲಿ indicative list ಕೊಡಲಾಗಿದೆ. But it is not limited to that. ನಾವು ಸಂಶೋಧನೆ ಆಧಾರದ ಮೇಲೆ ಹೆಚ್ಚು ಗ್ರಾಮಗಳನ್ನು ಇದರಲ್ಲಿ ನೋಟಿಫೈ ಮಾಡಬಹುದು ಎಂಬುದನ್ನು ಸಹ ಗಮನಕ್ಕೆ ತರಬಯಸುತ್ತೇನೆ.

ಎರಡನೆಯದಾಗಿ, ಹಂಪಿಯಲ್ಲಿ ಆದ ರೀತಿ ಸಮಸ್ಯೆ ಆಗಬಾರದೆಂಬ ಕಾರಣದಿಂದಾಗಿ ಅಷ್ಟು ಕಟ್ಟುನಿಟ್ಟಿನ ನಿಬಂಧನೆ ವಿಧಿಸಲು ಹೋಗುತ್ತಿಲ್ಲ. ನಾವು ಸ್ಥಳೀಯ ಜೊತೆ ಬದುಕಬೇಕೇ ಹೊರತು, ಸ್ಥಳೀಯರ ಹಿತಕ್ಕೆ,... ಒಳ್ಳೆಯ ಉದ್ದೇಶದಿಂದ ಮಾಡಬೇಕಾಗಿದೆ. ಹಾಗೆಂದು ಹಂಪಿಯಲ್ಲಿ ಮಾಡಿರುವುದು ತಪ್ಪು ಎಂದು ಹೋಗುವುದಿಲ್ಲ. ಮಹದುದ್ದೇಶದಿಂದ ಕೆಲವೊಂದು ಕಡಿವಾಣ ಹಾಕಲಾಗಿದೆ. ಆದರೆ, ಎಲ್ಲೋ ಒಂದು ಕಡೆ ಸ್ಥಳೀಯರಿಗೂ ಹಾಗೂ ಪುರಾತನ ಸಂರಕ್ಷಣೆಗಳೆರಡಕ್ಕೂ ಸಂಘರ್ಷವಾಗಬಾರದೆಂಬ ಉದ್ದೇಶದಿಂದ ಅಂತಹ ಕಡಿವಾಣ ವಿಧಿಸಲು ಹೋಗಿಲ್ಲ. Inclusive ಆಗಿ ಜೊತೆಯಲ್ಲಿಯೇ ಅಭಿವೃದ್ಧಿ ಮಾಡಬೇಕೆಂಬ ಉದ್ದೇಶದಿಂದ ಮಾಡಲಾಗಿದೆ. ಖಂಡಿತವಾಗಿ ಇದರ

ಭೂಸ್ವಾದೀನಪಡಿಸಿಕೊಳ್ಳಲು ಅವಕಾಶ ಇದೆ. ಏಕೆಂದರೆ, ಬೇರೆ ಪ್ರಾಧಿಕಾರಗಳನ್ನು ಸಹ ಭೂಸ್ವಾಧೀನಪಡಿಸಿಯೇ ಅಭಿವೃದ್ಧಿ ಮಾಡುತ್ತಿರುವುದು. ಮುಂದಿನ ದಿನಗಳಲ್ಲಿ ಪ್ರವಾಸಿ ತಾಣವಾಗಬೇಕೆಂಬ ಉದ್ದೇಶದಿಂದ ಇತ್ತೀಚೆಗೆ ನಾಡಪ್ರಭು ಕೆಂಪೇಗೌಡರವರ ಸಮಾಧಿಯ ಸ್ಥಳದಲ್ಲಿ ಈಗಾಗಲೇ ಸುಮಾರು 6 ಎಕರೆ ಜಾಗವನ್ನು ಭೂಸ್ವಾಧೀನಪಡಿಸಿಕೊಂಡಿದ್ದು, ಇನ್ನು 10 ಎಕರೆ ಜಾಗವನ್ನು ಭೂಸ್ವಾಧೀನಪಡಿಸಿಕೊಳ್ಳಲು ಜಿಲ್ಲಾಧಿಕಾರಿಯವರಿಗೆ ನಿರ್ದೇಶನ ನೀಡಲಾಗಿದೆ. Consent purchase ಅಥವಾ ಬೇರೆ ಸೆಕ್ಷನ್‌ಗಳ ಅಡಿಯಲ್ಲಿ ಭೂಸ್ವಾಧೀನಪಡಿಸಲು ಅವಕಾಶ ಇದೆ. ಅದರಂತೆ ಭೂಸ್ವಾಧೀನಪಡಿಸಿಕೊಂಡು, ಸರಿಯಾದ ರೀತಿ ಪರಿಹಾರ ಕೊಟ್ಟು, if necessary, acquisition ಮಾಡಲಾಗುತ್ತದೆ ವಿನಃ ಭೂಸ್ವಾಧೀನಪಡಿಸಿಯೇ ಅಭಿವೃದ್ಧಿ ಮಾಡುತ್ತೇವೆ ಎಂದು ಹೇಳುತ್ತಿಲ್ಲ. ಅವಶ್ಯಕತೆ ಇದ್ದ ಪಕ್ಷದಲ್ಲಿ ಭೂಸ್ವಾಧೀನ ಪಡಿಸಿಕೊಳ್ಳಲಾಗುವುದು. ಮುಖ್ಯವಾಗಿ ಈ ವಿಧೇಯಕದೊಳಗೆ ಮಾನ್ಯ ವಿಧಾನ ಪರಿಷತ್ತಿನ ಸದಸ್ಯರನ್ನು ಸಹ ಸೇರಿಸಬೇಕೆಂಬ ಸಲಹೆ ಬಂದಿದೆ.

**ಸಭಾಪತಿಯವರು:-** ಹೌದು, ವಿಧಾನ ಪರಿಷತ್ತಿನ ಸದಸ್ಯರನ್ನು ಸಹ ಸೇರಿಸಬೇಕು.

**ಶ್ರೀ ಕೃಷ್ಣಭೈರೇಗೌಡ:-** ಮಾನ್ಯ ಸಭಾಪತಿಯವರೇ, ನಾನು ಅಧ್ಯಯನ ಮಾಡದೇ ಹೇಳಲು ಆಗುವುದಿಲ್ಲ. ಏಕೆಂದರೆ, ಆ ರೀತಿ ಬೇರೆ ಪ್ರಾಧಿಕಾರದಲ್ಲಿ ವಿಧಾನ ಪರಿಷತ್ತಿನ ಸದಸ್ಯರನ್ನು ಸೇರಿಸಲು ಅವಕಾಶ ಇರುವುದಿಲ್ಲ.

**ಶ್ರೀ ಪಿ.ಹೆಚ್.ಪೂಜಾರ್:-** ಮಾನ್ಯ ಸಭಾಪತಿಯವರೇ, ಕೂಡಲ ಸಂಗಮ ಅಭಿವೃದ್ಧಿ ಪ್ರಾಧಿಕಾರದಲ್ಲಿ ವಿಧಾನ ಪರಿಷತ್ತಿನ ಸದಸ್ಯರನ್ನು ಸೇರಿಸಲು ಅವಕಾಶ ಇದೆ.

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೇ, ಅಭಿವೃದ್ಧಿ ಪ್ರಾಧಿಕಾರದಲ್ಲಿ ವಿಧಾನ ಪರಿಷತ್ತಿನ ಸದಸ್ಯರನ್ನು...

**(ಗೊಂದಲ)**

**ಶ್ರೀ ಕೃಷ್ಣಭೈರೇಗೌಡ:-** ನಮ್ಮ ಇಲಾಖೆಗೆ ಸಂಬಂಧಿಸಿದಂತೆ ನಾನು ಹೇಳುತ್ತಿದ್ದೇನೆ.

**ಸಭಾಪತಿಯವರು:-** ಮಾನ್ಯ ಐವನ್ ಡಿ'ಸೋಜಾರವರೇ ದಯವಿಟ್ಟು ಕುಳಿತುಕೊಳ್ಳಿ. ಮಾನ್ಯ ಕೃಷ್ಣ ಬೈರೇಗೌಡರವರೇ, ಹಿಂದೆ ಪ್ರಾಧಿಕಾರದಲ್ಲಿ ವಿಧಾನ ಪರಿಷತ್ತಿನ ಸದಸ್ಯರನ್ನು ಸೇರಿಸಿಲ್ಲ ಎಂದಾಕ್ಷಣ ಮೇಲ್ಮನೆ ಸದಸ್ಯರನ್ನು ಕೆಳಮಟ್ಟದಲ್ಲಿ ನೋಡಬಾರದು. ಎಲ್ಲಿ Assembly Members ಇರುತ್ತಾರೋ ಅಲ್ಲಿ ವಿಧಾನ ಪರಿಷತ್ತಿನ ಸದಸ್ಯರನ್ನು ಸಹ ಅಬಿವೃದ್ಧಿ ಪ್ರಾಧಿಕಾರದ ಸದಸ್ಯರನ್ನಾಗಿ ನೇಮಕ ಮಾಡಬೇಕೆಂದು ನಾನು ಸಹ ಹೇಳಲಿಚ್ಛಿಸುತ್ತೇನೆ.

**ಶ್ರೀ ಪಿ.ಹೆಚ್.ಪೂಜಾರ್:-** ಮಾನ್ಯ ಸಭಾಪತಿಯವರೇ, ಕೂಡಲ ಸಂಗಮ ಅಭಿವೃದ್ಧಿ ಪ್ರಾಧಿಕಾರದಲ್ಲಿ ವಿಧಾನ ಪರಿಷತ್ತಿನ ಸದಸ್ಯರನ್ನು ಸೇರಿಸಲಾಗಿದೆ.

**ಸಭಾಪತಿಯವರು:-** ಆಗಲಿ, ಈಗ ನಾನು ಸಹ ಹೇಳಿದ್ದೇನೆ. ಅದರಂತೆ ಮಾನ್ಯ ಸಚಿವರು ವಿಧಾನ ಪರಿಷತ್ತಿನ ಸದಸ್ಯರನ್ನು ಸೇರಿಸಬೇಕು.

**ಶ್ರೀ ಕೃಷ್ಣಭೈರೇಗೌಡ:-** ಮಾನ್ಯ ಸಭಾಪತಿಯವರೇ, ತಮ್ಮ ಹೇಳಿಕೆಯನ್ನು ನಾನು ತೆಗೆದುಕೊಳ್ಳುತ್ತೇನೆ ಹಾಗೂ ಅದರ ಬಗ್ಗೆ ಸಮಗ್ರವಾಗಿ ಪರಿಷ್ಕರಣೆ ಮಾಡುತ್ತೇನೆ.

**ಸಭಾಪತಿಯವರು:-** ಪಾರ್ಲಿಮೆಂಟ್ ಸದಸ್ಯರನ್ನು ನೇಮಕ ಮಾಡಲಾಗಿದೆ. ಹಾಗೆಯೇ ಸಂಬಂಧಪಟ್ಟ constituency ಯ voters ಇರುತ್ತಾರೆ. ದಯವಿಟ್ಟು ಸಂಬಂಧಪಟ್ಟ ವಿಧಾನ ಪರಿಷತ್ತಿನ ಸದಸ್ಯರನ್ನು ಅಭಿವೃದ್ಧಿ ಪ್ರಾಧಿಕಾರಕ್ಕೆ ಸೇರಿಸಬೇಕೆಂದು ನಾನು ಸಹ ಒತ್ತಾಯ ಮಾಡುತ್ತೇನೆ.

**ಶ್ರೀ ಕೃಷ್ಣಭೈರೇಗೌಡ:-** ಮಾನ್ಯ ಸಭಾಪತಿಯವರೇ, ಆಗಬಹುದು. ನಾನು ತಮ್ಮಲ್ಲಿ ಮನವಿ ಮಾಡುವುದೇನೆಂದರೆ, ಮತ್ತೆ ಈ ವಿಧೇಯಕವನ್ನು ಕೆಳಮನೆಗೆ ತೆಗೆದುಕೊಂಡು ಹೋಗಬೇಕಾಗುತ್ತದೆ.

**ಸಭಾಪತಿಯವರು:-** ಮುಂದಿನ ಅಧಿವೇಶನದಲ್ಲಿ ತಿದ್ದುಪಡಿ ಮಾಡಿ ತೆಗೆದುಕೊಂಡು ಬನ್ನಿ.

**ಶ್ರೀ ಕೃಷ್ಣಭೈರೇಗೌಡ:-** ಮಾನ್ಯ ಸಭಾಪತಿಯವರೇ, ಮತ್ತೆ ಈ ವಿಧೇಯಕವನ್ನು ವಿಧಾನಸಭೆಗೆ ತೆಗೆದುಕೊಂಡು ಹೋಗಿ ಬರಬೇಕಾಗುತ್ತದೆ ಎಂಬುದನ್ನು ಹೇಳಬಯಸುತ್ತೇನೆ. ಈಗಾಗಲೇ ತಾವು ಹೇಳಿದಂತೆ ಸಂಬಂಧಪಟ್ಟ ವಿಧಾನ ಪರಿಷತ್ತಿನ ಸದಸ್ಯರ ಹೆಸರನ್ನು ಸಹ ಅಭಿವೃದ್ಧಿ ಪ್ರಾಧಿಕಾರದೊಳಗೆ ಸೇರಿಸಿಕೊಳ್ಳೋಣ. ಖಂಡಿತ ಅದಕ್ಕೆ ನಾನು ವಿರೋಧ ಮಾಡುತ್ತಿಲ್ಲ.

**ಸಭಾಪತಿಯವರು:-** ವಿಧಾನಸಭೆಗೆ ಈ ವಿಧೇಯಕ ಹೋಗಬೇಕಾಗಿಲ್ಲ.

**ಶ್ರೀ ಕೃಷ್ಣಭೈರೇಗೌಡ:-** ಮಾನ್ಯ ಸಭಾಪತಿಯವರೇ, ಈಗಾಗಲೇ 24 ಸದಸ್ಯರನ್ನು ನೇಮಕ ಮಾಡಲಾಗಿದ್ದು, ಇನ್ನೊಬ್ಬರನ್ನು ಸೇರಿಸುವುದರಿಂದ ನಷ್ಟವೇನು ಆಗುವುದಿಲ್ಲ. ನಾನು ಗೌರವಯುತವಾಗಿ ವಿಶ್ವಾಸದಿಂದ ತಮ್ಮಲ್ಲಿ ಮನವಿ ಮಾಡುವುದೇನೆಂದರೆ, ಈ ವಿಧೇಯಕವನ್ನು ಕೆಳಮನೆಗೆ ತೆಗೆದುಕೊಂಡು ಹೋಗಿ ಮತ್ತೆ ಅಲ್ಲಿಂದ ಮೇಲ್ಮನೆಗೆ ಬರಬೇಕು. Back and forth ಆಗುತ್ತದೆ. ಅದಕ್ಕಾಗಿ ಈ ವಿಧೇಯಕಕ್ಕೆ ಒಪ್ಪಿಗೆಯನ್ನು ಮಾಡಿಕೊಟ್ಟರೆ, ಮುಂದಿನ ಅಧಿವೇಶನದೊಳಗೆ ತಿದ್ದುಪಡಿ ಮಾಡಿ, ಸೇರ್ಪಡೆ ಮಾಡಿಸುತ್ತೇನೆ. That is my promise.

**ಸಭಾಪತಿಯವರು:-** ಆ ರೀತಿಯೇ ಮಾಡಿ. ತಾವು ಹೇಳುವುದು ಸಹ ಸರಿಯಾಗಿದೆ.

**ಶ್ರೀ ಕೃಷ್ಣಭೈರೇಗೌಡ:-** ಮಾನ್ಯ ಸಭಾಪತಿಯವರೇ, ಇದರಿಂದಾಗಿ ನಮ್ಮಗಾಗಲೀ, ಅವರಿಗಾಗಲೀ time save ಆಗುತ್ತದೆ. A promise is made by me; I will try to keep my promise. Under normal circumstances, I believe in keeping my word. ಹಾಗಾಗಿ, ಈ ವಿಧೇಯಕಕ್ಕೆ ಒಪ್ಪಿಗೆ ಸೂಚಿಸಬೇಕೆಂದು ತಮ್ಮ ಮೂಲಕ ಮನವಿ ಮಾಡುತ್ತೇನೆ.

**(ಮುಂದು)**

**(992) 18.12.2024 (9.00) ಎಸ್‌ಕೆ-ಆರ್‌ಎನ್** **(ಸಭಾಪತಿಯವರ ಉಪಸ್ಥಿತಿ)**

**ಸಭಾಪತಿಯವರು:-** ಮಾನ್ಯ ಸಭಾನಾಯಕರೇ, ಈ ಹಿಂದೆ ಹಲವಾರು ಬಾರಿ ವಿಧಾನ ಪರಿಷತ್ತಿನ ಸದಸ್ಯರನ್ನು, ಸದಸ್ಯರನ್ನಾಗಿ ನೇಮಕ ಮಾಡುವ ಬಗ್ಗೆ ಹೇಳುತ್ತಲೇ ಬಂದಿದ್ದೇವೆ.

**ಶ್ರೀ ಕೃಷ್ಣಭೈರೇಗೌಡ:-** ಅದಕ್ಕೆ ಪ್ರಾವಿಷನ್ ಇದೆ. ಈಗಾಗಲೇ ಬೇರೆ ಕಡೆ ಮಾಡುತ್ತಿದ್ದೇವೆ. ಪ್ರಾವಿಷನ್ ಇಲ್ಲವೆಂದರೆ, ಮಾಡಿಕೊಳ್ಳೋಣ. We are open to Private Public Partnership.

**ಸಭಾಪತಿಯವರು:-** ಮಾನ್ಯ ಸಭಾನಾಯಕರೇ, ಪ್ರತಿಯೊಂದರಲ್ಲಿ ವಿಧಾನ ಪರಿಷತ್ತಿನ ಸದಸ್ಯರನ್ನು ಕಡೆಗಣಿಸಬಾರದು ಎಂಬುದು ನಿಮ್ಮ ಮೂಲಕ ಸರ್ಕಾರಕ್ಕೆ ತಿಳಿಸಬಯಸುತ್ತೇನೆ.

**ಶ್ರೀ ಕೇಶವ್ ಪ್ರಸಾದ್ ಎಸ್. (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರಿಗೆ ಇಪ್ಪತ್ನಾಲ್ಕು ಗಂಟೆ ಕೆಲಸ ಕೊಟ್ಟುಬಿಟ್ಟು, ಅವರನ್ನು ಇಷ್ಟು ಸಣ್ಣ ಮಾಡಿಬಿಟ್ಟರೆ ಹೇಗೆ ಎಂದು ನಾನು ತಮ್ಮ ಮೂಲಕ ಸರ್ಕಾರಕ್ಕೆ ಕೇಳಿಕೊಳ್ಳುತ್ತೇನೆ. ಮಾನ್ಯ ಕೃಷ್ಣಭೈರೇಗೌಡರಿಗೆ ಕೆಲಸ ಕಡಿಮೆ ಮಾಡಬೇಕು. ಅವರು ನಮ್ಮ ರಾಜ್ಯದ ಆಸ್ತಿ.

**ಶ್ರೀ ಕೃಷ್ಣ ಭೈರೇಗೌಡ (ಕಂದಾಯ ಸಚಿವರು):-** ಮಾನ್ಯ ಸಭಾಪತಿಯವರೇ, ನಾವು ಹುಟ್ಟಿರುವುದೇ ಕೆಲಸ ಮಾಡುವುದಕ್ಕೆ, ಕೆಲಸ ಮಾಡುವುದು ನನಗೆ ಸಿಕ್ಕಿರುವ ಸೌಭಾಗ್ಯ. ನಾನು ಇಷ್ಟೊಂದು ಆರೋಗ್ಯವಾಗಿದ್ದೇನೆ ಎಂದರೆ, ಕೆಲಸ ಮಾಡುವುದರಿಂದ ಆರೋಗ್ಯವಾಗಿದ್ದೇನೆ. ಕೆಲಸ ಕಡಿಮೆಯಾದರೆ, ನನಗೆ ಇಲ್ಲದೇ ಇರುವ ಕಾಯಿಲೆ ಬರುತ್ತದೆ. ಕೆಲಸ ಮಾಡಿದಷ್ಟು, ನನಗೆ ಒಳ್ಳೆಯ ಭಾವನೆ ಬರುತ್ತದೆ ಮತ್ತು ಒಳ್ಳೆಯ ಆರೋಗ್ಯವಾಗಿ ಚೆನ್ನಾಗಿ ಇರುತ್ತೇನೆ.

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ,

"ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2024ರ ಬಸವನ ಬಾಗೇವಾಡಿ ಅಭಿವೃದ್ಧಿ ಪ್ರಾಧಿಕಾರ ವಿಧೇಯಕವನ್ನು ಅಂಗೀಕರಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದು**

**ಖಂಡ 2 ರಿಂದ 45 ರವರೆಗೆ**

**ಸಭಾಪತಿಯವರು:- "ಖಂಡ 2 ರಿಂದ 45 ರವರೆಗೆ ಎರಡೂ ಸೇರಿದಂತೆ ಈ ವಿಧೇಕಯದ ಅಂಗವಾಗಿರುತ್ತದೆ"**

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**(ಖಂಡ 2 ರಿಂದ 45 ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)**

**ಖಂಡ-1 ಇತ್ಯಾದಿ**

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ,

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)**

**ಪ್ರಸ್ತಾವದ ಅಂಗೀಕಾರ**

**ಶ್ರೀ ಕೃಷ್ಣಭೈರೇಗೌಡ (ಕಂದಾಯ ಸಚಿವರು):-** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2024ರ ಬಸವನ ಬಾಗೇವಾಡಿ ಅಭಿವೃದ್ಧಿ ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ,

"ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2024ರ ಬಸವನ ಬಾಗೇವಾಡಿ ಅಭಿವೃದ್ಧಿ ಪ್ರಾಧಿಕಾರ ವಿಧೇಯಕವನ್ನು ಅಂಗೀಕರಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು**

**ಐ) ಕರ್ನಾಟಕ ಭೂ ಕಂದಾಯ (ಮೂರನೇ ತಿದ್ದುಪಡಿ) ವಿಧೇಯಕ, 2024**

**ಪರ್ಯಾಲೋಚನಾ ಪ್ರಸ್ತಾವ**

**ಶ್ರೀ ಕೃಷ್ಣಭೈರೇಗೌಡ (ಕಂದಾಯ ಸಚಿವರು):-** ಮಾನ್ಯ ಸಭಾಪತಿಯವರೇ, ವಿಧಾನ ಸಭೆಯಿಂದ ತಿದ್ದುಪಡಿಯೊಂದಿಗೆ ಅಂಗೀಕೃತ ರೂಪದಲ್ಲಿರುವ 2024ನೇ ಸಾಲಿನ ಕರ್ನಾಟಕ ಭೂ ಕಂದಾಯ (ಮೂರನೇ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು.**

**ಶ್ರೀ ಕೃಷ್ಣಭೈರೇಗೌಡ (ಕಂದಾಯ ಸಚಿವರು):-** ಈ ವಿಧೇಯಕ ನಾಲ್ಕು ತಿದ್ದುಪಡಿಗಳನ್ನು ಒಳಗೊಂಡಿದೆ. ಅದರಲ್ಲಿ ಮೂರು ಅಂಶಗಳನ್ನು ಸೇರಿದ್ದಾಗಿದೆ. ಇದರಲ್ಲಿ ಸರ್ಕಾರಿ ಜಾಗಗಳ ಒತ್ತುವರಿಯನ್ನು ತೆರವು ಮಾಡುವಂತಹ ಸಂದರ್ಭದಲ್ಲಿ ಸರ್ಕಾರ ಏನು ನಿಲುವು ತೆಗೆದುಕೊಂಡಿದೆ ಎಂದರೆ, ನಮ್ಮ Section 104 of Karnataka Land Revenue Act ನಲ್ಲಿ ತಹಶೀಲ್ದಾರ್‌ರಗೆ ಅಧಿಕಾರ ಇದೆ ಎಂದು ನಾವು ಒತ್ತುವರಿ ತೆರವು ಮಾಡುವಂತಹದ್ದನ್ನು ತಹಶೀಲ್ದಾರ್‌ಗೆ ಜವಾಬ್ದಾರಿಯನ್ನು ಕೊಟ್ಟಿದ್ದೇವೆ. ಉದಾಹರಣೆಗೆ ಬೆಂಗಳೂರು ರಾಜಕಾಲುವೆ ಆಗಬಹುದು ಬೇರೆ ಕಡೆ ಈ ತರಹ ಸರ್ಕಾರಿ ಜಮೀನುಗಳ ಒತ್ತುವರಿ ಇರಬಹುದು. ಆದರೆ ಕೆಲವರು ಕೋರ್ಟ್‌ನಲ್ಲಿ ಅದನ್ನು challenge ಮಾಡಿ, ಈ Section 104 ನಲ್ಲಿ ತಹಶೀಲ್ದಾರ್‌ಗೆ ಅಧಿಕಾರ ಇಲ್ಲ. ಇದನ್ನು ಜಿಲ್ಲಾಧಿಕಾರಿಗಳೇ Under Section 49 ನಲ್ಲಿ ಮಾಡಬೇಕು ಎನ್ನುವಂತಹ ರೀತಿಯಲ್ಲಿ ಕೋರ್ಟ್‌ನಲ್ಲಿ ವಾದ-ವಿವಾದಗಳು ನಡೆಯುತ್ತಿದೆ. ಇಲ್ಲಿಯವರೆಗೂ ನಡೆದು ಬಂದಿರುವ ನಮ್ಮ ನಡವಳಿಕೆ ಕಾನೂನಿನ ಪ್ರಕಾರ Section 104 of Karnataka Land Revenue Act ನಲ್ಲಿ ತಹಶೀಲ್ದಾರ್‌ಗೆ ಅಧಿಕಾರ ಇದೆ. Eviction ಅನ್ನು ಮಾಡುವಂತಹ ಜವಾಬ್ದಾರಿ ತಹಶೀಲ್ದಾರ್‌ಗೆ ಇದೆ. ಕಾನೂನಿನಲ್ಲಿ ಬಹಳ ಉದ್ದ ಉದ್ದ ಪದಗಳನ್ನು ಬಳಸಿ ಬರೆದಿರುವುದರಿಂದ, ಅದನ್ನು ವಿಶ್ಲೇಷಣೆ ಮಾಡುವಾಗ ಈ ಅಧಿಕಾರಕ್ಕೆ ಬಹಳ ಸೀಮಿತವಾಗಿರಬೇಕಾದಂತಹ ಅಧಿಕಾರ ತಹಶೀಲ್ದಾರ್‌ಗೆ ಇದೆ ಎನ್ನುವ ವ್ಯಾಖ್ಯಾನಗಳು ನಡೆದಿವೆ. ಹಾಗಾಗಿ ಇದಕ್ಕೆ ಸ್ಪಷ್ಟೀಕರಣ ತರುವುದಕ್ಕೋಸ್ಕರ ಈ ರೀತಿಯಾದಂತಹ ಒತ್ತುವರಿಗಳನ್ನು ತೆರವು ಮಾಡುವಂತಹ ಅಧಿಕಾರ ತಹಶೀಲ್ದಾರ್‌ಗೆ ಇದೆ ಎನ್ನುವಂತಹದ್ದನ್ನು ಸ್ಪಷ್ಟವಾಗಿ ಯಾವುದೇ ಗೊಂದಲ ಇಲ್ಲದಂತೆ ಹೇಳುವಂತಹ ಒಂದು ತಿದ್ದುಪಡಿಯನ್ನು ತಂದಿದ್ದೇವೆ. ಇದು ಮೊದಲ ಪ್ರಮುಖವಾದಂತಹ ವಿಷಯ. So that, ನಾಳೆ ಕಾನೂನಿನಲ್ಲಿ ನಮ್ಮ ದೃಷ್ಟಿಯಲ್ಲಿ clarity ಇದೆ. But, ಬೇರೆಯವರು interpret ಮಾಡುವಾಗ, ಇಲ್ಲಿ ಗೊಂದಲ ಸೃಷ್ಟಿ ಮಾಡುತ್ತಿದ್ದಾರೆ. ಗೊಂದಲಕ್ಕೆ ಅವಕಾಶ ಇರಬಾರದು. ತಹಶೀಲ್ದಾರ್ ಜವಾಬ್ದಾರಿಯಿಂದ ತಪ್ಪಿಸಿಕೊಳ್ಳಬಾರದು ಅಥವಾ ನಾಳೆ ಯಾರೋ ಹೋಗಿ ಇನ್ನೊಂದನ್ನು challenge ಮಾಡಬಾರದು ಎಂದು ಹೇಳಿ, ಅದು eviction ಮಾಡುವುದಕ್ಕೆ ಅಧಿಕಾರ ಬಲಪಡಿಸುವಂತಹದ್ದು ತಿದ್ದುಪಡಿಯಲ್ಲಿದೆ. ಎರಡನೆಯದಾಗಿ, Section 67 ನಲ್ಲಿ ಈ ಕೆಲವು ಸರ್ಕಾರಿ ಜಾಗಗಳಿಗೆ ಸಂಬಂಧಪಟ್ಟ ಹಾಗೇ ಆದೇಶವನ್ನು ಹೊರಡಿಸುವಂತಹ ಅಧಿಕಾರ ಜಿಲ್ಲಾಧಿಕಾರಿಗೆ ಇದೆ.

ಜಿಲ್ಲಾಧಿಕಾರಿಗಳು ಸರ್ಕಾರಿ ಜಾಗವಾಗಿದ್ದರೂ ಕೂಡ ಅವರು ಗೊತ್ತಿದ್ದೋ, ಗೊತ್ತಿಲ್ಲದೇ ಆದೇಶ ಮಾಡಿದರೆ, ಅದನ್ನು ನಾವು ಮುಂದೆ ಹೈಕೋರ್ಟ್‌ಗೆ ಹೋಗಿ challenge ಮಾಡಬೇಕು. ಹೈಕೋರ್ಟ್‌ಗೆ ಹೋದಾಗ, ಅಲ್ಲಿ ಎಷ್ಟು ವರ್ಷಗಳು ತೆಗೆದುಕೊಳ್ಳುತ್ತದೆ ಎಂಬುದನ್ನು ಹೇಳುವುದಕ್ಕೆ ಆಗುವುದಿಲ್ಲ. ಹಾಗಾಗಿ ಸರ್ಕಾರದಲ್ಲಿ ಇದು ಸ್ವಲ್ಪ ಹೆಚ್ಚಿನ ಅವಕಾಶ ಇರಬೇಕೆಂದು ಹೇಳಿ, first case ಅನ್ನು hear ಮಾಡುವಂತಹ ಅಧಿಕಾರವನ್ನು Assistant Commissioner ಗೆ ಕೊಡುತ್ತಿದ್ದೇವೆ. Assistant Commissioner ಅವರ ವಿರುದ್ಧ challenge ಮಾಡುವಂತಹ ಅಧಿಕಾರವನ್ನು Deputy Commissioner ಅವರಿಗೆ ಕೊಡುತ್ತಿದ್ದೇವೆ. Deputy Commissioner. ಅವರ ವಿರುದ್ಧ challenge ಮಾಡುವಂತಹ ಅಧಿಕಾರವನ್ನು Karnataka Land Appellate Tribunal ಎಂಬುದು ಇದೆ. ಅದು KAT ಅಲ್ಲ. ಅದು Appellate Tribunal ಬೇರೆ ಇದೆ. Appellate Tribunal ಗೆ ಕೊಡುತ್ತಿದ್ದೇವೆ. Appellate Tribunal ಆದೇಶದ ವಿರುದ್ಧವಾಗಿ ಹೈಕೋರ್ಟ್‌ಗೆ ಹೋಗಬಹುದು. ಈಗ ಏನಾಗುತ್ತದೆ ಎಂದರೆ, Deputy Commissioner ಹತ್ತಿರ ಆದೇಶವಾದರೆ, ಕೂಡಲೇ ಖಾತೆ ಬದಲಾವಣೆಯಾಗಿ ಬಿಡುತ್ತದೆ. ಆಮೇಲೆ ನಾವು ಆಗ ಜಾಗವನ್ನು ವಾಪಸ್ಸು ತೆಗೆದುಕೊಳ್ಳುವುದಕ್ಕೆ 20-30 ವರ್ಷ ಹೋರಾಟ ಮಾಡಬೇಕು. ಅನೇಕ ಕೇಸ್‌ಗಳಲ್ಲಿ ವಿಶೇಷವಾಗಿ ನಗರ ಪ್ರದೇಶದ ಸುತ್ತಮುತ್ತ ಅಧಿಕಾರಿಗಳಲ್ಲಿ ಒಳ್ಳೆಯವರಿದ್ದಾರೆ. ಕೆಲವರು ಗೊತ್ತಿಲ್ಲದೇ ತಪ್ಪಾಗುವಂತಹ ಪ್ರಕರಣಗಳು ನಮ್ಮ ಕಣ್ಮುಂದೆ ತುಂಬಾ ಇದ್ದಾವೆ. ಆ ತರಹ ಅತಾಚುರ್ಯವಾದಾಗ ಸರ್ಕಾರ ಸರ್ಕಾರಿ ಆಸ್ತಿಯನ್ನು ಸಂರಕ್ಷಣೆ ಮಾಡುವುದಕ್ಕೆ ಸ್ವಲ್ಪ ಹೆಚ್ಚಿನ ಅವಕಾಶ ಇರಬೇಕೆಂದು ಮೂರು level ಅನ್ನು create ಮಾಡುತ್ತಿದ್ದೇವೆ. Assistant Commissioner, Deputy Commissioner, Appellate Tribunal. Appellate Tribunal independent ಇದೆ. ಆದರೆ ಒಂದು Appellate Tribunal ಆಗಿ ಆಮೇಲೆ ಕೋರ್ಟ್‌ಗೆ ಹೋಗಬೇಕು ಎನ್ನುವಂತಹ ತಿದ್ದುಪಡಿಯನ್ನು ತಂದಿದ್ದೇವೆ. ಸರ್ಕಾರಿ ಆಸ್ತಿಗಳು ಸಂರಕ್ಷಣೆ ಮಾಡುವುದಕ್ಕೆ ನಮಗೆ ಸ್ವಲ್ಪ ಹೆಚ್ಚಿನ ಅವಕಾಶ ಸಿಕ್ಕಿದಂತಾಗುತ್ತದೆ. ಇನ್ನೊಂದು ವಿಷಯವೇನೆಂದರೆ, ಈ Planned Area ಇರುತ್ತದೆಯೆಲ್ಲಾ, ಎಲ್ಲಿ Masterplan ಆಗಿದೆ. ಅಂತಹ ಕಡೆ ಒಂದು ಏರಿಯಾದಲ್ಲಿ Industrial Zone ಎಂದು planning ನಲ್ಲಿ mark ಆಗಿ ಹೋಗಿದೆ. Industrial Zone ನಲ್ಲಿ ಯಾರಾದರೂ ಸಣ್ಣ ಕೈಗಾರಿಕೆಗಳನ್ನು ಸ್ಥಾಪನೆ ಮಾಡಬೇಕೆಂದರೆ, ಅಂದರೆ ಎರಡು ಎಕರೆಗಿಂತ ಕಡಿಮೆ ಪ್ರದೇಶದಲ್ಲಿ ಸಣ್ಣ ಕೈಗಾರಿಕೆ ಮಾಡಬೇಕಾದರೆ, ಅವರು conversion ತೆಗೆದುಕೊಳ್ಳುವ ಅವಶ್ಯಕತೆ ಇಲ್ಲ. ಅವರನ್ನು conversion ನಿಂದ exempt ಮಾಡುತ್ತಿದ್ದೇವೆ. ಸಣ್ಣ ಕೈಗಾರಿಕೆಗಳಿಗೆ ಈ ಕಛೇರಿಗೆ ಬರಬೇಕು. ಇಲ್ಲವೆಂದರೆ ನಮ್ಮ ಹತ್ತಿರ ಬಂದು conversion ತೆಗೆದುಕೊಳ್ಳಬೇಕು. ಆನಂತರ ಕೈಗಾರಿಕಾ ಇಲಾಖೆಗೆ ಹೋಗಿ ಪರವಾನಿಗೆ ತೆಗೆದುಕೊಳ್ಳಬೇಕು. Planning Authority ಗೆ ಹೋಗಿ plan approval ತೆಗೆದುಕೊಳ್ಳಬೇಕು. ಹಾಗಾಗಿ, ಅವರೇ ಸಣ್ಣ ಕೈಗಾರಿಕೆಗಳ ಕಾರ್ಯ ಚಟುವಟಿಕೆ ಸರಳೀಕರಣ ಮಾಡುವುದಕ್ಕೆ ಅವರಿಗೆ ease of doing business ಮತ್ತು east of governance ಮಾಡುವುದಕ್ಕೋಸ್ಕರ ಎರಡು ಎಕರೆವರೆಗೆ planned area ದಲ್ಲಿ Industrial Zone ನಲ್ಲಿ conversion ಅವಶ್ಯಕತೆಯನ್ನು ತೆಗೆದು ಹಾಕುತ್ತಿದ್ದೇವೆ. So that ಅವರು ಬಂದು

ನಮ್ಮ ಇಲಾಖೆಯಲ್ಲಿ conversion ಗೆ ಕಾಯ್ದುಕೊಂಡು ಕುಳಿತುಕೊಂಡು ಅದಕ್ಕೆ ಮೂರು ತಿಂಗಳು, ಆರು ತಿಂಗಳು ಆ ಕುರ್ಚಿ, ಈ ಟೇಬಲ್ ಅಂತಾ ಹೇಳಿ, ಇವೆಲ್ಲಾ ಏನಾಗುತ್ತದೆ. At least ಸಣ್ಣ ಕೈಗಾರಿಕೆಗಳಿಗಾದರೂ ಇದರಿಂದ ಸ್ವಲ್ಪ ವಿನಾಯಿತಿ ಕೊಡಬೇಕೆಂದು ಹೇಳಿ, ಆ ಎರಡು ಎಕರೆಗಿಂತ ಕಡಿಮೆ ಪ್ರದೇಶದಲ್ಲಿ conversion ತೆಗೆದು ಹಾಕುತ್ತಿದ್ದೇವೆ. ಈ ಮೂರು ಸಾರಾಂಶವನ್ನು ಒಳಗೊಂಡಿರುವ ತಿದ್ದುಪಡಿಗಳಿವೆ. ಇವೆಲ್ಲವೂ ಕೂಡ ಜನಪರವಾಗಿದೆ ಮತ್ತು ಸರ್ಕಾರಿ ಆಸ್ತಿಗಳನ್ನು ಸಂರಕ್ಷಣೆ ಮಾಡುವ ಉದ್ದೇಶದಿಂದ ಕೂಡಿದೆ. ಈ ವಿಧೇಯಕಕ್ಕೆ ತಿದ್ದುಪಡಿ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತಿದ್ದೇನೆ.

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ,

"ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2024ರ ಕರ್ನಾಟಕ ಭೂ ಕಂದಾಯ (ಮೂರನೇ ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದು**

**ಖಂಡ 2 ರಿಂದ 5 ರವರೆಗೆ**

**ಸಭಾಪತಿಯವರು:- "ಖಂಡ 2 ರಿಂದ 5 ರವರೆಗೆ ಎರಡೂ ಸೇರಿದಂತೆ ಈ ವಿಧೇಕಯದ ಅಂಗವಾಗಿರುತ್ತದೆ"**

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**(ಖಂಡ 2 ರಿಂದ 5 ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)**

**ಖಂಡ-1 ಇತ್ಯಾದಿ**

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ,

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)**

**ಪ್ರಸ್ತಾವದ ಅಂಗೀಕಾರ**

**ಶ್ರೀ ಕೃಷ್ಣಭೈರೇಗೌಡ (ಕಂದಾಯ ಸಚಿವರು):-** ಮಾನ್ಯ ಸಭಾಪತಿಯವರೇ, ವಿಧಾನ ಸಭೆಯಿಂದ ತಿದ್ದುಪಡಿಯೊಂದಿಗೆ ಅಂಗೀಕೃತ ರೂಪದಲ್ಲಿರುವ 2024ರ ಕರ್ನಾಟಕ ಭೂ ಕಂದಾಯ (ಮೂರನೇ ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:-** ಪ್ರಸ್ತಾವ ಏನೆಂದರೆ,

> "ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2024ರ ಕರ್ನಾಟಕ ಭೂ ಕಂದಾಯ (ಮೂರನೇ ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು**

**ಶ್ರೀ ಕೃಷ್ಣಭೈರೇಗೌಡ (ಕಂದಾಯ ಸಚಿವರು):-** ಮಾನ್ಯ ಸಭಾಪತಿಯವರೇ, ತಮಗೆ ಮತ್ತು ಸದನಕ್ಕೆ ಧನ್ಯವಾದಗಳು.

(ಮುಂದು)

(993) 18.12.2024, 9.10 TCH-RN (ಸಭಾಪತಿಯವರ ಉಪಸ್ಥಿತಿ)

**ಸಭಾಪತಿಯವರು:-** ಮಾನ್ಯ ಐವನ್ ಡಿ'ಸೋಜಾ ರವರೇ, ಮಕ್ಕಳ ಹಕ್ಕುಗಳ ಬಗ್ಗೆ ವಿಶೇಷ ಚರ್ಚೆಯನ್ನು ಪ್ರಾರಂಭ ಮಾಡುವುದಕ್ಕಿಂತ ಮುಂಚೆ ಶ್ರೀ ಬಸನಗೌಡ ಬಾದರ್ಲಿಯವರ ಗಮನ ಸೆಳೆಯುವ ಸೂಚನೆ ಇದೆ. ಅವರು ಮತ್ತು ಕಂದಾಯ ಸಚಿವರು ಕೂಡ ಇದ್ದಾರೆ. ಒಂದೆರಡು Calling Attention Notices ಇವೆ ಅವುಗಳನ್ನು ತೆಗೆದುಕೊಳ್ಳಬಹುದೇ? ಈಗ ಶ್ರೀ ಬಸನಗೌಡ ಬಾದರ್ಲಿಯವರೇ, Call ಮಾಡಬೇಕು. ನೀವು ಅದನ್ನಷ್ಟೇ ಓದಿಬಿಡಿ.

## 14. ಗಮನ ಸೆಳೆಯುವ ಸೂಚನೆಗಳು

**ವಿಷಯ:- ಸಿಂಧನೂರು ತಾಲ್ಲೂಕನ್ನು ಜಿಲ್ಲಾ ಕೇಂದ್ರ ಸ್ಥಾನವನ್ನಾಗಿ ಮೇಲ್ದರ್ಜೆಗೇರಿಸಲು ಸಮಿತಿ ರಚಿಸುವ ಕುರಿತು.**

- - -

**ಶ್ರೀ ಬಸನಗೌಡ ಬಾದರ್ಲಿ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಸಿಂಧನೂರು ತಾಲ್ಲೂಕ್ ಅನ್ನು ಜಿಲ್ಲಾ ಕೇಂದ್ರ ಸ್ಥಾನವನ್ನಾಗಿ ಮೇಲ್ದರ್ಜೆಗೇರಿಸಲು ಸಮಿತಿ ಸಚಿಸುವ ಕುರಿತು ಮಾನ್ಯ ಕಂದಾಯ ಸಚಿವರ ಗಮನವನ್ನು ಸೆಳೆಯಬಯಸುತ್ತೇನೆ.

**ಶ್ರೀ ಕೃಷ್ಣಭೈರೇಗೌಡ (ಕಂದಾಯ ಸಚಿವರು):-** ಮಾನ್ಯ ಸಭಾಪತಿಯವರೇ,

**(ಉತ್ತರವನ್ನು ಲಗತ್ತಿಸಿದೆ)**

**ಶ್ರೀ ಕೃಷ್ಣಭೈರೇಗೌಡ (ಕಂದಾಯ ಸಚಿವರು):-** ಮಾನ್ಯ ಸಭಾಪತಿಯವರೇ, ಗೌರವಾನ್ವಿತ ಸದಸ್ಯರಿಗೆ ಉತ್ತರವನ್ನು ಕೊಟ್ಟಿದ್ದೇವೆ. ಅದರ ಮೇಲೆ ಇನ್ನೂ ಏನಾದರೂ ಸ್ಪಷ್ಟೀಕರಣ ಇದ್ದರೆ ಕೇಳಬಹುದು.

**ಶ್ರೀ ಬಸನಗೌಡ ಬಾದರ್ಲಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರೇ ನನಗೆ ಉತ್ತರ ಇನ್ನೂ ಬಂದಿಲ್ಲ.

**ಸಭಾಪತಿಯವರು:-** ಮಾನ್ಯ ಸದಸ್ಯರಿಗೆ ಆ ಉತ್ತರವನ್ನು ತೆಗೆದುಕೊಂಡು ಹೋಗಿ ಕೊಡಿ.

**ಶ್ರೀ ಬಸನಗೌಡ ಬಾದರ್ಲಿ:-** ಮಾನ್ಯ ಸಭಾಪತಿಯವರೇ, 2,40,000 ಮತದಾರರು ಇರತಕ್ಕಂಥ ಕ್ಷೇತ್ರವಾಗಿದೆ. ಅದರಲ್ಲಿ 3 ಲಕ್ಷ ದಿಂದ 4 ಲಕ್ಷ ಜನಸಂಖ್ಯೆ ಹೊಂದಿರತಕ್ಕಂಥ ಸಿಂಧನೂರು ತಾಲ್ಲೂಕ್, ರಾಯಚೂರು ಜಿಲ್ಲೆಯಲ್ಲಿ ಅತಿ ದೊಡ್ಡ ತಾಲ್ಲೂಕ್ ಆಗಿರುವುದರಿಂದ ಜಿಲ್ಲಾ ಕೇಂದ್ರಕ್ಕೆ ತಾಲ್ಲೂಕಿನ ಕೊನೆಯ ಗ್ರಾಮ ಇವತ್ತಿನ ದಿವಸ ಜಿಲ್ಲಾ ಕೇಂದ್ರದಿಂದ 130 ಕಿ.ಮೀ ದೂರದಲ್ಲಿರುತ್ತದೆ. ಇವತ್ತಿನ ದಿವಸ ಸಿಂಧನೂರು ಜಿಲ್ಲಾ ಕೇಂದ್ರದಿಂದ ಸುಮಾರು 90 ಕಿ.ಮೀ. ದೂರ ಇರುತ್ತದೆ.

**ಸಭಾಪತಿಯವರು:-** ಶ್ರೀ ಬಸನಗೌಡ ಬಾದರ್ಲಿ ಯವರೇ, ಓದಬೇಡಿ, ಈಗ ನಿಮಗೆ ಏನಾಗಬೇಕು ಹೇಳಿ?

**ಶ್ರೀ ಬಸನಗೌಡ ಬಾದರ್ಲಿ:-** ಮಾನ್ಯ ಸಭಾಪತಿಯವರೇ, ಇದಕ್ಕೆ ಒಂದು ಸಮಿತಿ ರಚನೆ ಮಾಡಬೇಕೆಂದು ಮಾನ್ಯ ಕಂದಾಯ ಸಚಿವರಿಗೆ ಕೇಳುವುದಕ್ಕೆ ಬಯಸುತ್ತೇನೆ.

**ಶ್ರೀ ಕೃಷ್ಣಭೈರೇಗೌಡ:-** ಮಾನ್ಯ ಸಭಾಪತಿಯವರೇ, ತಮಗೆ ನನಗಿಂತಲೂ ಚೆನ್ನಾಗಿ ಇತಿಹಾಸ ಗೊತ್ತಿದೆ. ಈಗಾಗಲೇ ರಾಯಚೂರು ಜಿಲ್ಲೆಯನ್ನು ವಿಭಜನೆ ಮಾಡಿ, ಕೊಪ್ಪಳ ಜಿಲ್ಲೆಯನ್ನು ಹೊಸದಾಗಿ ಮಾಡಲಾಗಿದೆ. ಈಗ ನಾವು ಒಂದೊಂದು ತಾಲ್ಲೂಕನ್ನೇ ಒಂದೊಂದು ಜಿಲ್ಲೆ ಮಾಡುವುದಕ್ಕೆ ಕಷ್ಟವಾಗುತ್ತದೆ. ಅವರ ಭಾವನೆಗೆ ನನ್ನ ಗೌರವ

ಇದೆ. ಅವರು ಕೇಳುವುದಕ್ಕೆ ಹಕ್ಕಿದೆ ಕೇಳಬಹುದು. ಆದರೆ ಈಗ ಒಂದೊಂದು ತಾಲ್ಲೂಕಿನಲ್ಲಿ ಜನಸಂಖ್ಯೆ ಜಾಸ್ತಿ ಆಗಿದೆ ಎಂದು ಜಿಲ್ಲೆ ಮಾಡುವುದಕ್ಕೆ ಆಗುವುದಿಲ್ಲ. ಅಷ್ಟಕ್ಕೂ ಕೂಡ ಹೊಸ ಜಿಲ್ಲೆಗಳನ್ನು ಮಾಡುವಂತಹ ಪ್ರಸ್ತಾವನೆ ಸದ್ಯಕ್ಕೆ ಸರ್ಕಾರದಲ್ಲಿ ಇಲ್ಲ. ಇದ್ದರೂ ಕೂಡ ಇದೆಲ್ಲದಕ್ಕೂ ಮೀರಿ ಭಾರತ ಸರ್ಕಾರ ಒಂದು ಸೂಚನೆಯನ್ನು ನಮಗೆ ಕೊಟ್ಟಿದೆ. Census ಪ್ರಕ್ರಿಯೆ ಆರಂಭವಾಗುತ್ತಿರುವುದರಿಂದ ಹೊಸದಾದಂತಹ ಯಾವುದೇ ಘಟಕಗಳನ್ನು ರಚನೆ ಮಾಡಬಾರದೆಂದು Census ಮುಗಿಯುವವರೆಗೆ ಸೂಚನೆಯನ್ನು ಕೂಡ ಕೊಟ್ಟಿದ್ದಾರೆ. ಆಕಸ್ಮಾತ್ ನಾವೇನಾದರೂ ಮಾನ್ಯ ಸದಸ್ಯರಿಗೆ ಗೌರವ ಕೊಟ್ಟು ಮಾಡಬೇಕೆಂದು ವಿಚಾರ ಮಾಡಿದ್ದಲ್ಲಿ ಭಾರತ ಸರ್ಕಾರದ ಸೂಚನೆ ಇರುವುದರಿಂದ ಸದ್ಯಕ್ಕೆ ಆ ಕೆಲಸವನ್ನು ನಾವು ಮಾಡುವುದಕ್ಕೂ ಸಹ ಸಾಧ್ಯವಾಗುವುದಿಲ್ಲ. ಮುಂದಿನ ದಿನಗಳಲ್ಲಿ ಜಿಲ್ಲೆಗಳನ್ನು ಮತ್ತೆ ಏನಾದರೂ ಹೆಚ್ಚಿಗೆ ಮಾಡಬೇಕು ಎನ್ನುವಂಥ ಪ್ರಸಂಗ ಬಂದಾಗ ಖಂಡಿತವಾಗಿಯು ಇದನ್ನು ಪರಿಶೀಲನೆ ಮಾಡುತ್ತೇವೆ.

**ಸಭಾಪತಿಯವರು:-** ಶ್ರೀ ಬಸನಗೌಡ ಬಾದರ್ಲಿಯವರೇ, ತಾವು ಮಾನ್ಯ ಕಂದಾಯ ಸಚಿವರಿಗೆ clarification ಕೇಳಿ.

**ಶ್ರೀ ಬಸನಗೌಡ ಬಾದರ್ಲಿ:-** ಮಾನ್ಯ ಸಭಾಪತಿಯವರೇ, ಈಗಾಗಲೇ ಅನೇಕ ಜಿಲ್ಲೆಗಳು ರಾಜ್ಯದಲ್ಲಿ ಸುಮಾರು . . .

**ಸಭಾಪತಿಯವರು:-** ಶ್ರೀ ಬಸನಗೌಡ ಬಾದರ್ಲಿ ಯವರೇ, ಈಗ ಮಾನ್ಯ ಕಂದಾಯ ಸಚಿವರು ಭಾರತ ಸರ್ಕಾರದಿಂದ ಇದು ಬರುವವರೆಗೂ ಇನ್ನು ಮಾಡುವುದಕ್ಕೆ ಆಗುವುದಿಲ್ಲವೆಂದು ಸ್ಪಷ್ಟವಾಗಿ ಹೇಳಿದ್ದಾರೆ. ಮುಂದಿನ ದಿನಗಳಲ್ಲಿ ಜಿಲ್ಲೆಗಳನ್ನು ಹೆಚ್ಚಿಗೆ ಮಾಡಬೇಕು ಎನ್ನುವಂಥ ಪ್ರಸಂಗ ಬಂದಾಗ ಅದನ್ನು consider ಮಾಡುತ್ತೇವೆಂದು ಹೇಳಿದ್ದಾರೆ. ಮತ್ತೆ ಏನಾದರೂ ಇದ್ದರೆ ಕೇಳಿ.

**ಶ್ರೀ ಬಸನಗೌಡ ಬಾದರ್ಲಿ:-** ಮಾನ್ಯ ಸಭಾಪತಿಯವರೇ, ಯಾವಾಗ ಅದನ್ನು ಪರಿಗಣಿಸಬೇಕೆಂದು ಬರುತ್ತದೋ, ಅವೊತ್ತು ನಮ್ಮ ಈ ಜಿಲ್ಲೆಗೆ ಅವಕಾಶ ಮಾಡಿಕೊಡಬೇಕೆಂದು ತಮ್ಮ ಮುಖಾಂತರ ಸರ್ಕಾರಕ್ಕೆ ಹಾಗೂ ಮಾನ್ಯ ಕಂದಾಯ ಸಚಿವರಿಗೆ ವಿನಂತಿ ಮಾಡುತ್ತಿದ್ದೇನೆ.

**ಸಭಾಪತಿಯವರು:-** ಸರಿ. ಈಗ ಮಾನ್ಯ ಐವನ್ ಡಿ'ಸೋಜಾರವರ 8ನೇ ವಿಷಯ.

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೇ, ನಾನು ಮಕ್ಕಳ ಬಗ್ಗೆ . . .

**ಆ) ವಿಷಯ:- ಕೇಂದ್ರ ಮತ್ತು ರಾಜ್ಯ ಸರ್ಕಾರ ಸಾರ್ವಜನಿಕರಿಗೆ ವಿವಿಧ ಪಿಂಚಣಿ ಯೋಜನೆಗಾಗಿ ನಿಗದಿಪಡಿಸಿದ ಮಾನದಂಡಗಳ ವ್ಯವಸ್ಥೆಯಿಂದ ಲಕ್ಷಾಂತರ ಪಿಂಚಣಿ ಅರ್ಹರಿರುವ ಕುಟುಂಬಗಳಿಗೆ ಪಿಂಚಣಿ ಪಡೆಯಲು ಅಸಾಧ್ಯವಾಗಿರುವ ಕುರಿತು.**

-----

**ಶ್ರೀ ಐವನ್ ಡಿ'ಸೋಜಾ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಕೇಂದ್ರ ಮತ್ತು ರಾಜ್ಯ ಸರ್ಕಾರ ಸಾರ್ವಜನಿಕರಿಗೆ ವಿವಿಧ ಪಿಂಚಣಿ ಯೋಜನೆಗಾಗಿ ನಿಗದಿಪಡಿಸಿದ ಮಾನದಂಡಗಳ ವ್ಯವಸ್ಥೆಯಿಂದ ಲಕ್ಷಾಂತರ ಪಿಂಚಣಿ ಅರ್ಹರಿರುವ ಕುಟುಂಬಗಳಿಗೆ ಪಿಂಚಣಿ ಪಡೆಯಲು ಅಸಾಧ್ಯವಾಗಿರುವ ಕುರಿತು ಮಾನ್ಯ ಕಂದಾಯ ಸಚಿವರ ಗಮನ ಸೆಳೆಯುತ್ತಿದ್ದೇನೆ.

**(ಮಾನ್ಯ ಕಂದಾಯ ಸಚಿವರು ಮೌಖಿಕವಾಗಿ ಉತ್ತರಿಸಿರುತ್ತಾರೆ)**

**ಶ್ರೀ ಕೃಷ್ಣಭೈರೇಗೌಡ (ಕಂದಾಯ ಸಚಿವರು):-** ಮಾನ್ಯ ಸಭಾಪತಿಯವರೇ, ನಾನೇ ಹೇಳಬಿಡುತ್ತೇನೆ. ಅವರು NPCI (National Payments Corporation of India) mapping ಮಾಡಿರುವುದರಿಂದ, ಕೆಲವರಿಗೆ ಪಿಂಚಣಿಯು ತೊಂದರೆಯಾಗುತ್ತಿದೆಯೆಂದು ಅವರು ನಮ್ಮ ರಾಜ್ಯಕ್ಕೆ ಹೇಳಿದ್ದಾರೆ. NPCI mapping ಮಾಡುತ್ತಿರುವುದು ಕೇಂದ್ರ ಸರ್ಕಾರದವರು ನಮಗೆ ಸೂಚನೆ ಕೊಟ್ಟಿದ್ದಾರೆ. ನಮ್ಮ ರಾಜ್ಯದಲ್ಲಿ ಸಾಮಾಜಿಕ ಪಿಂಚಣಿದಾರರು ಯಾರ್ಯಾರು ಇದ್ದಾರೆ, ಅದರಲ್ಲಿ ಕೆಲವರು ನಿಧನ ಹೊಂದಿದವರಿಗೂ ಕೂಡ ಪಿಂಚಣಿ ಹೋಗುತ್ತಿದೆ. ಇನ್ನೂ ಕೆಲವರು ಎರಡೆರಡು ಅಥವಾ ಮೂರು ಮೂರು ಕಡೆ ಪೆನ್ಷನ್ ತೆಗೆದುಕೊಳ್ಳುತ್ತಿದ್ದಾರೆ. ಇಂತಹ ದೂರುಗಳ ಆಧಾರದ ಮೇಲೆ ಕೇಂದ್ರ ಸರ್ಕಾರದವರು ಇವರೆಲ್ಲರಿಗೂ ಕೂಡ NPCI mapping ಆಗಬೇಕೆಂದು ಸೂಚನೆ ಕೊಟ್ಟಿದ್ದಾರೆ. ಅದು ಅನುಷ್ಠಾನ ಆಗಿದೆ. ರಾಜ್ಯದಲ್ಲಿ almost 99.9% ರಷ್ಟು NPCI mapping ಮುಗಿದಿದೆ. ಬೆಂಗಳೂರು ನಗರದಲ್ಲಿ ಮಾತ್ರ ನಮ್ಮ ಕೈಗೆ ಸಿಗದೇ ಇರತಕ್ಕಂಥವರು ಒಂದಷ್ಟು ಜನ ಇದ್ದಾರೆ. ಏಕೆಂದರೆ, ಒಂದೂವರೆ ಕೋಟಿ ಜನರಲ್ಲಿ ಸುಮಾರು 2,000 ರಿಂದ 3,000 ಜನ ಅವರು ಎಲ್ಲಿದ್ದಾರೋ ನಮ್ಮ ಕೈಗೆ ಸಿಗುತ್ತಿಲ್ಲ. ಬ್ಯಾಂಕುಗಳವರನ್ನು ಹಿಡಿಕೊಂಡು ಅವರನ್ನು ಹುಡುಕಲು try ಮಾಡುತ್ತಿದ್ದೇವೆ. ಉಳಿದಂತೆ ರಾಜ್ಯದಲ್ಲಿ 99.9 percent ಮಾಡಿದ್ದೇವೆ. ಎಲ್ಲಿಯಾದರು ಇನ್ನು ಯಾರಿಗಾದರು ತೊಂದರೆಯಾಗಿದೆ ಎಂದು ನಮ್ಮ ಗಮನಕ್ಕೆ ತೆಗೆದುಕೊಂಡು ಬಂದರೆ ಅದನ್ನು ನಾವು ಸರಿಮಾಡಿ ಕೊಡುತ್ತೇವೆ.

**ಸಭಾಪತಿಯವರು:-** ಶ್ರೀ ಐವನ್ ಡಿ'ಸೋಜಾ clarification ಕೇಳಿ.

**ಶ್ರೀ ಐವನ್ ಡಿ'ಸೋಜಾ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಎರಡು ಉದ್ದೇಶಕ್ಕಾಗಿ ನಾನು Calling Attention Notice ತಂದಿದ್ದೇನೆ. ಮೊದಲನೆಯದಾಗಿ ಪಿಂಚಣಿದಾರರಿಗೆ minimum income ಎಷ್ಟಿರಬೇಕೆಂದು ಆದಾಯ ಮಿತಿ ಇದೆ. B.P.L Ration card ನವರಿಗೆ ರೂ.1,20,000ಗಳ ಆದಾಯದ ಮಿತಿ

ಇದೆ. ಆದರೆ ವಿಧವಾ ವೇತನ ಇರಬಹುದು, old age pension ಇರಬಹುದು, ಮನಸ್ವಿನಿ ಇರಬಹುದು, ಬೇರೆ ಬೇರೆ ಯೋಜನೆಗಳನ್ನು ಪಡೆಯುವುದಕ್ಕೆ income limit is Rs.32,000/- ಅವರಿಗೆ ಅದಕ್ಕಿಂತ ಜಾಸ್ತಿ income ಇದ್ದರೆ they are not eligible. ಈಗ ನಾನು ಹೇಳುವುದೇನೆಂದರೆ, ಈಗ B.P.L Ration card ನವರು below poverty line ನಲ್ಲಿ ಇರುತ್ತಾರೆ. ಒಂದು ಮನೆಯಲ್ಲಿ ಗಂಡ-ಹೆಂಡತಿ ಇಬ್ಬರು ಇರುತ್ತಾರೆ. ಆ ಮನೆಯಲ್ಲಿ ಗಂಡ ಮರಣ ಹೊಂದಿದರೆ automatically wife becomes BPL. ಅವರು below poverty line ಗೆ ಬರುತ್ತಾರೆ. ಆದರೆ income earn ಮಾಡುವವರು ಮರಣ ಹೊಂದುತ್ತಾರೆ. ಆದರೆ ಅದನ್ನು ತಾವು ಏಕೆ change ಮಾಡುವುದಿಲ್ಲ. ಎಲ್ಲಾ schemeಗಳಲ್ಲೂ ಕೂಡ ರೂ.32,000ಗಳ ಆದಾಯ ಮಿತಿ ಮೀರಿರಬಾರದು ಎಂದು ಇದೆ. ಅದನ್ನು ತಾವು ಕನಿಷ್ಠ ರೂ.1,20,000ಗಳಿಗೆ ಅಥವಾ BPL ಕಾರ್ಡ್‌ದಾರರಿಗೆ ಎಂದು ಮಾಡಬೇಕು. ಎರಡನೆಯದಾಗಿ, ಈ pension ಕೊಡತಕ್ಕಂಥ Social Security Scheme ಏನಿವೆ, ಇದನ್ನು ಗ್ರಾಮ ಆಡಳಿತಾಧಿಕಾರಿಯವರ ಹತ್ತಿರ ಒಂದು family ಯಲ್ಲಿ ಎಷ್ಟು ಮಕ್ಕಳಿದ್ದಾರೆ, ಅವರಿಗೆ ಎಷ್ಟು ಜಾಗ ಇದೆ, ಅವರಿಗೆ income ಎಷ್ಟಿದೆ, ಯಾರು ಮರಣ ಹೊಂದಿದ್ದಾರೆ ಮತ್ತು ಏನು ಜನನ ಆಗುತ್ತದೆ ಎಂಬ ಎಲ್ಲಾ ದಾಖಲೆಗಳು ಇರುತ್ತದೆ. He is the custodian of that documents. Documents ಇಡತಕ್ಕಂಥವರು ಈ Village Accountant. ಈ form ಅನ್ನು, ಒಬ್ಬರ ಗಂಡ ತೀರಿ ಹೋದಲ್ಲಿ, ಅವರ ಹೆಂಡತಿಗೆ automatic ಆಗಿ Village Accountant ಅವರಿಂದ ಅರ್ಜಿ ಬರೆಸಿ, ಅದನ್ನು fill-up ಮಾಡಿಕೊಂಡು ಹೋಗಿ pension ಕೊಡುವುದಕ್ಕೆ ತಾವು ಏಕೆ ಕ್ರಮ ತೆಗೆದುಕೊಳ್ಳಬಾರದು? ನಾನು ಸನ್ಮಾನ್ಯ ಮುಖ್ಯಮಂತ್ರಿಯವರ ಸಂಸದೀಯ ಕಾರ್ಯದರ್ಶಿಗಳಾಗಿದ್ದಾಗ, ನನಗೆ Revenue Department ನೋಡಿಕೊಳ್ಳುವುದಕ್ಕೆ ಹೇಳುತ್ತಿದ್ದರು. ಆಗ ಮಾನ್ಯ ಆರ್.ವಿ.ದೇಶಪಾಂಡೆ ರವರು ಸಚಿವರಾಗಿದ್ದರು. ನಾನು ಎಲ್ಲಾ ಗ್ರಾಮಗಳಿಗೂ ಹೋಗಿ pension ಅದಾಲತ್‌ಗಳನ್ನು ನಡೆಸಿ Village Accountant ರವರ ಮುಖಾಂತರವೇ ಅರ್ಜಿ ತೆಗೆದುಕೊಳ್ಳುತ್ತಿದ್ದೆನು. ನಿಮ್ಮ ಗಂಡ ತೀರಿ ಹೋಗಿದ್ದಾರೆ, ನೀವು eligible ಇದ್ದೀರಿ. Below income ಇದ್ದೀರಿ. ಹಾಗಾಗಿ, ನಿಮ್ಮ ಅರ್ಜಿಗಳನ್ನು ನನ್ನ ಹತ್ತಿರ ಕೊಡಿ ಎಂದು ಅವರಿಂದ ಅದನ್ನು ತೆಗೆದುಕೊಂಡು ಹೋಗಿ, ಅವರಿಗೆ pension ಕೊಡತಕ್ಕಂಥ ಕಾರ್ಯಕ್ರಮಗಳನ್ನು ಹಾಕಿಕೊಳ್ಳುತ್ತಿದ್ದರು. ಇದಕ್ಕೆ ತಾವು ಒಂದು reforms ತರಬೇಕು. ಇದು ಕಾನೂನು ರೂಪದಲ್ಲಿ ತರಬೇಕೆಂದು ನಾನು ಹೇಳುವುದಕ್ಕೆ ಬಯಸುತ್ತಿದ್ದೇನೆ. ಇತ್ತೀಚೆಗೆ ನಾನು ಒಂದು ಪತ್ರಿಕೆಯನ್ನು ಓದುವಾಗ ಅದರಲ್ಲಿ **'ವೃದ್ಧಾಪ್ಯ ವೇತನಕ್ಕೆ ಅರ್ಜಿ ಸಲ್ಲಿಸಲು ಬಂದ ವ್ಯಕ್ತಿ ಕುಸಿದು ಬಿದ್ದು ಸಾವು'** ಎಂದು ವರದಿ ಬಂದಿತ್ತು. ಅಡ್ಯಾರಿನ ಶ್ರೀ ರಾಘವಾಚಾರ್ಯ ಎಂಬುವರು ವೃದ್ಧಾಪ್ಯ ವೇತನದ ಅರ್ಜಿ ತೆಗೆದುಕೊಂಡು ತಾಲ್ಲೂಕು ಕಚೇರಿಗೆ ಬಂದಿದ್ದಾರೆ, ಅವರಿಗೆ ಸುಮಾರು 65 ವರ್ಷ. ವೃದ್ಧಾಪ್ಯ ವೇತನಕ್ಕೆ ಅರ್ಜಿ ಸಲ್ಲಿಸಲೆಂದು ಬುಧವಾರ ಸುಳ್ಯ ತಾಲ್ಲೂಕು ಕಚೇರಿಗೆ ಬಂದು ಅಲ್ಲಿಯೇ ಬಿದ್ದು ಮರಣ ಹೊಂದಿದ್ದಾರೆ. ಹಾಗಾಗಿ, ನಾನು ಏನು ಹೇಳುತ್ತೇನೆಂದರೆ, . . .

**ಸಭಾಪತಿಯವರು:-** ಮಾನ್ಯ ಶ್ರೀ ಐವನ್ ಡಿ'ಸೋಜಾ ರವರೇ, ಈಗ ಏನು ಮಾಡಬೇಕು ಹೇಳಿ?

**ಶ್ರೀ ಐವನ್ ಡಿ'ಸೋಜಾ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈ Social Security Scheme ಗೆ ಅರ್ಜಿಗಳನ್ನು ಕೊಡತಕ್ಕಂಥದ್ದು village accountant ತನ್ನ ಪರಿಮಿತಿಯಲ್ಲಿಯೇ ಸರ್ವೇ ಮಾಡಿ ಕೊಡಬೇಕು ಎಂದು ಹೇಳುಂಥದ್ದು. Income limit ಅನ್ನು ಸರ್ಕಾರ BPL ಗೆ ತೆಗೆದುಕೊಂಡು ಹೋಗಬೇಕು. ಅಂದರೆ ರೂ.32,000 ಕ್ಕಿಂತ ಜಾಸ್ತಿ ಎಂದು ಇದೆ, ಅದನ್ನು ತೆಗೆದು ಹಾಕಬೇಕು ಎಂದು ಹೇಳುವುದಕ್ಕೆ ಬಯಸುತ್ತಿದ್ದೇನೆ.

**ಶ್ರೀ ಕೃಷ್ಣಭೈರೇಗೌಡ:-** ಮಾನ್ಯ ಸಭಾಪತಿಯವರೇ, ನಾನು ತಮ್ಮ ಗಮನಕ್ಕೆ ತರಲು ಬಯಸುವುದೇನೆಂದರೆ, ಮಾನ್ಯ ಸದಸ್ಯರು ಕೇಳಿರುವುದೇನೆಂದರೆ, ಕೇಂದ್ರ ಮತ್ತು ರಾಜ್ಯ ಸರ್ಕಾರಿ ನೌಕರರಿಗೆ ಪಿಂಚಣಿ ಯೋಜನೆಗಾಗಿ ಎಂದು ಕೇಳಿದ್ದಾರೆ.

**ಸಭಾಪತಿಯವರು:-** ಹೌದು.

**ಶ್ರೀ ಕೃಷ್ಣಭೈರೇಗೌಡ:-** ಮಾನ್ಯ ಸಭಾಪತಿಯವರೇ, ಈಗ ಅವರು ಕೇಳಿರುವ ವಿಷಯಕ್ಕೂ ಇಲ್ಲಿ ಮಾತನಾಡಿದ ವಿಷಯಕ್ಕೂ ಬಹಳ ಅಂತರವಿದೆ. ಸರ್ಕಾರಿ ನೌಕರರ ಪಿಂಚಣಿಯು ಹಣಕಾಸು ಇಲಾಖೆಗೆ ಬರುತ್ತದೆ. ಎರಡನೇ ವಿಷಯ ಅವರು ರೂ.32,000ಗಳನ್ನು relax ಮಾಡಬೇಕೆಂದು ಕೇಳಿದ್ದಾರೆ. ಅವರು ಗಮನ ಸೆಳೆಯುವಾಗ ಆ ವಿಷಯವನ್ನು ನಮೂದು ಮಾಡಿದ್ದರೆ ನಾನು ತಯಾರಾಗಿ ಬರುತ್ತಿದ್ದೆನು. ಈ ನಾನು ಆ ವಿಷಯದಲ್ಲಿ ನಾನು ತಯಾರಾಗಿ ಬಂದಿಲ್ಲ. ಇನ್ನು ಮೂರನೆಯ ವಿಷಯ, ಇದು ಇನ್ನೂ ವಿಕೇಂದ್ರೀಕರಣ ಮಾಡಬೇಕೆಂದು ಕೇಳಿದ್ದಾರೆ. ಮಾನ್ಯ ಸಭಾಪತಿಯವರೇ, ತಮ್ಮ ಮುಖಾಂತರ ಈ ಸದನಕ್ಕೆ ಮಾನ್ಯ ಸದಸ್ಯರಿಗೆ ತಿಳಿಸಲಿಕ್ಕೆ ಬಯಸುವುದೇನೆಂದರೆ, ಬಹುಶಃ ಇಡೀ ದೇಶದಲ್ಲಿಯೇ ಅತಿ ಹೆಚ್ಚು ಸಂಖ್ಯೆ ನಮ್ಮ ಕರ್ನಾಟಕದಲ್ಲಿ social security pensions ಕೊಡುತ್ತಿದ್ದೇವೆ.

**(ಮುಂದು)**

**(994)18.12.2024/9.20/ಎಂ.ಎಂ-ವಿ.ಕೆ** **(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಕೃಷ್ಣ ಬೈರೇಗೌಡ (ಕಂದಾಯ ಸಚಿವರು) (ಮುಂದು):**

ನಾವು 77,00,000 ಜನಗಳಿಗೆ ಕೊಡುತ್ತಿದ್ದೇವೆ. ನಮ್ಮಲ್ಲಿ 6½ ಕೋಟಿ ಜನಸಂಖ್ಯೆ ಇದ್ದರೆ ತಮಿಳುನಾಡಿನಲ್ಲಿ 8-9 ಕೋಟಿ ಜನಸಂಖ್ಯೆ ಇದೆ. ತಮಿಳುನಾಡಿನಲ್ಲಿ Social Security Pension ಅನ್ನು ಕೊಡುತ್ತಿರುವುದು ಬರೀ 47,00,000 ಜನರಿಗೆ. ಕರ್ನಾಟಕದಲ್ಲಿ ಅವರಿಗಿಂತ ಶೇ.25 ರಿಂದ ಶೇ.30ರಷ್ಟು ಜನಸಂಖ್ಯೆ ಕಡಿಮೆ ಇದೆ. 77,00,000 ಜನರಿಗೆ ನಾವು Social Security pension ಕೊಡುತ್ತಿದ್ದೇವೆ. So, it is one of the highest percentages in the whole Country. ನಮ್ಮದು last mile connectivity ಏನಿದೆ, almost we can say hundred percent ಕೊನೆಯವರೆಗೂ ನಾವು ಮುಟ್ಟಿದ್ದೇವೆ ಎಂದು ಹೇಳಬಹುದು. ಇದನ್ನು ನಾನು comparison with other States ಹೇಳುತ್ತಿದ್ದೇನೆ. ತಮಿಳುನಾಡು, ಗುಜರಾತ್ ಅಲ್ಲ. Tamil Nadu is also a welfare State. ಬೇರೆ ರಾಜ್ಯಗಳಿಗೆ ಸರ್ಕಾರ ಇವೆಲ್ಲಾ ಮಾಡುವುದು ಅಪರಾಧ

ಎಂದು ಯೋಚನೆ ಮಾಡುವಂತಹ ರಾಜ್ಯಗಳಿಗೆ ನಾನು ಹೋಲಿಕೆ ಮಾಡುತ್ತಿಲ್ಲ. I am comparing to one of the most welfare States, which is Tamil Nadu. ಅವರು 47 ಲಕ್ಷ ಜನರಿಗೆ ಕೊಡುತ್ತಿದ್ದರೆ ಅವರಿಗಿಂತ ಶೇ. ೩೦ರಷ್ಟು ಕಡಿಮೆ ಜನಸಂಖ್ಯೆ ಇರುವ ನಾವು 77 ಲಕ್ಷ ಜನರಿಗೆ ಕೊಡುತ್ತಿದ್ದೇವೆ. ಮುಂದುವರೆದು, ನಾವು ಒಂದು ವರ್ಷಕ್ಕೆ Social Security Pensions ಗೆ 10,500 ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೇವೆ. ಇದು ಕೇಂದ್ರದಿಂದ ಬರುತ್ತದೆ ಎಂದು ತಾವು ತಿಳಿದರೆ, ಕೇಂದ್ರದಿಂದ ನಮಗೆ ಬರುವುದು ಬರೀ 500 ಕೋಟಿ ರೂಪಾಯಿಗಳು ಮಾತ್ರ. Social Security Pensions ನಲ್ಲಿ ಕೇಂದ್ರದಿಂದ ಬರುವುದು ಬರೀ 500 ಕೋಟಿ ರೂಪಾಯಿಗಳು, ಒಟ್ಟು ಖರ್ಚಾಗುವುದು 10,500 ಕೋಟಿ ರೂಪಾಯಿಗಳು. So, State Government is spending 10,000 crores ಪ್ರತಿ ವರ್ಷ just for ವಿಧವಾ ವೇತನ, ವೃದ್ಧಾಪ್ಯ ವೇತನ, ಅಂಗವಿಕಲರ ವೇತನ ಇಂತಹವುಗಳಿಗೆ 10,000 ಕೋಟಿ ರೂಪಾಯಿಗಳನ್ನು ರಾಜ್ಯ ಸರ್ಕಾರ, 500 ಕೋಟಿ ರೂಪಾಯಿಗಳನ್ನು ಕೇಂದ್ರ ಸರ್ಕಾರ ಕೊಡುತ್ತದೆ. ನಾನು ಅವರಿಗೆ ಏನನ್ನು convince ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇನೆಂದರೆ, ನಮ್ಮ ರೀಚ್ ಚೆನ್ನಾಗಿದೆ. ಬಹುತೇಕ ಕಟ್ಟಕಡೆಯ ವ್ಯಕ್ತಿಗೆ ತಲುಪಿದ್ದೇವೆ. ತುಂಬಾ ನಿರ್ಗತಿಕರಿದ್ದಾರೆ, ಅವರಿಗೆ ಇಂತಹ ಸೌಲಭ್ಯಗಳಿವೆ ಎಂದು ಗೊತ್ತಿಲ್ಲದವರೂ ಸಹ ಇದ್ದಾರೆ. ಇಲ್ಲವೆಂದು ನಾನು ಹೇಳುತ್ತಿಲ್ಲ. ಪಾಪ! ಯಾರಿಗೆ ನಿಜವಾಗಿ 'ಅಂತ್ಯೋದಯ ಯೋಜನೆ' ಅಂತಹವರಿಗೆ ತಲುಪುವುದಕ್ಕೆ ಆಗಿಲ್ಲದೇ ಇರಬಹುದು. ನಾನು ಇಲ್ಲವೆಂದು ಹೇಳುತ್ತಿಲ್ಲ. ಅಂತಹ ಪ್ರಕರಣಗಳಿದ್ದರೆ ನಾವು ವಿಶೇಷ ಪ್ರಯತ್ನ ಮಾಡುತ್ತೇವೆ. ಆದರೆ ನಮ್ಮ ರೀಚ್ ಚೆನ್ನಾಗಿದೆ. We must acknowledge that. ಕಳೆದ ಸರ್ಕಾರದಲ್ಲಿಯೂ ಕೂಡ ಅವರು ಸ್ವಲ್ಪ ಪ್ರಯತ್ನ ಮಾಡಿದ್ದರು. ತಾವು ಏನು ಹೇಳುತ್ತಿದ್ದೀರಿ Social Security Pension automatic ಆಗಿ ಮಾಡುವ ರೀತಿ ಕಳೆದ ಸರ್ಕಾರದಲ್ಲಿಯೂ ಕೂಡ ಕಂದಾಯ ಸಚಿವರು ಆಸಕ್ತಿ ತೆಗೆದುಕೊಂಡು ಮಾಡಿದ್ದಾರೆ. ಇನ್ನೂ ಏನಾದರೂ ಬಿಟ್ಟು ಹೋಗಿದ್ದರೆ ಖಂಡಿತವಾಗಿಯೂ we will have an open mind.

**ಸಭಾಪತಿಯವರು:-** ಈಗ ಮಕ್ಕಳ ಹಕ್ಕುಗಳ ಬಗ್ಗೆ ವಿಶೇಷ ಚರ್ಚೆ.

**ಶ್ರೀಮತಿ ಹೇಮಲತಾ ನಾಯಕ್:-** ಮಾನ್ಯ ಸಭಾಪತಿಯವರೇ, ನಾನು ನೀಡಿರುವ ಗಮನ ಸೆಳೆಯುವ ಸೂಚನೆ ಬಂದಿಲ್ಲ.

**ಸಭಾಪತಿಯವರು:-** ನಾನು ನೋಡಿದ್ದೇನೆ, ಆದರೆ ಸಚಿವರು ಇಲ್ಲ, ಅದಕ್ಕಾಗಿ ಮುಂದಿನ ವಿಷಯ ತೆಗೆದುಕೊಂಡಿದ್ದೇನೆ.

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ನಿಯಮ ೩೩೦ರಡಿ ನನ್ನ ವಿಷಯ ಇದೆ, ಅದು ಎರಡು ವಾರದಿಂದಲೂ ಬರುತ್ತಿದೆ. ಅದನ್ನು ನಾಳೆಯ ಶೂನ್ಯವೇಳೆಯಲ್ಲಿ ತೆಗೆದುಕೊಳ್ಳುವುದಕ್ಕೆ ದಯವಿಟ್ಟು ಅವಕಾಶ ಮಾಡಿಕೊಡಿ.

**ಸಭಾಪತಿಯವರು:-** ಮನವಿ ಕೊಡಿ, ಆಗ ನಾನು ಹೇಳುತ್ತೇನೆ.

**(ಈ ಹಂತದಲ್ಲಿ ವೈಸ್ ಛೇರ್ಮನ್‌ರವರಾದ ಶ್ರೀ ಮಂಜುನಾಥ ಭಂಡಾರಿ ರವರು ಪೀಠವನ್ನಲಂಕರಿಸಿದರು)**

## 15. ಮಕ್ಕಳ ಹಕ್ಕುಗಳ ಬಗ್ಗೆ ವಿಶೇಷ ಚರ್ಚೆ

**ವಿಷಯ:- ಮಕ್ಕಳಲ್ಲಿ ಪೌಷ್ಟಿಕಾಂಶ ಕೊರತೆ, ಶಿಕ್ಷಣ ಮತ್ತು ಹದಿ ಹರೆಯದ ಮಕ್ಕಳು ಅನುಭವಿಸುತ್ತಿರುವ ಸವಾಲುಗಳು ಹಾಗೂ ಪರಿಹಾರೋಪಾಯಗಳ ಕುರಿತು.**

- - - - -

**ಶ್ರೀ ಐವನ್ ಡಿ'ಸೋಜಾ (ವಿಧಾನಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ಮಕ್ಕಳ ರಕ್ಷಣೆ, ಮಕ್ಕಳ ಬೆಳವಣಿಗೆ ಮತ್ತು ಮಕ್ಕಳಿಗೆ ಆಗುವಂತಹ ತೊಂದರೆಗಳ ಬಗ್ಗೆ ಈ ಸದನದಲ್ಲಿ ವಿಷಯವನ್ನು ಪ್ರಸ್ತಾಪಿಸಿ ಆ ವಿಚಾರವನ್ನು ತಂದು ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ತಮ್ಮನ್ನು ಅಭಿನಂದಿಸುತ್ತೇನೆ. ಸದನದಲ್ಲಿ ಮತ್ತು ಸದನದ ಹೊರಗಡೆ, ನಾನು 2013 ರಿಂದ 2018, 2020ರ ವರೆಗೆ ಶಾಸಕನಾಗಿದ್ದೆ. ಪ್ರಥಮಬಾರಿಗೆ ಚುನಾಯಿತನಾಗಿ ಬಂದಾಗ ಮಕ್ಕಳಿಗಾಗಿ ಶಾಸಕರ ವೇದಿಕೆ ಎಂದು ನಾವು formation ಮಾಡಿದ್ದೆವು. ಅದರಲ್ಲಿ ಎರಡೂ ಸದನದ ಸದಸ್ಯರು ಸೇರಿ ಮಕ್ಕಳ ರಕ್ಷಣೆಗಾಗಿ ಏನು ಮಾಡಬಹುದು; ಮಕ್ಕಳಿಗೋಸ್ಕರ ಈಗಿನ ಸಮಾಜದಲ್ಲಿ ಆಗುವಂತಹ ತೊಂದರೆಗಳೇನಿವೆ, ಅದರಿಂದ ಅವರನ್ನು ಹೇಗೆ ರಕ್ಷಣೆ ಮಾಡಬಹುದು; ಮಕ್ಕಳ ಅಪೌಷ್ಟಿಕತೆಗೆ ಏನು ಮಾಡಬಹುದು, ಮಕ್ಕಳ ರಕ್ಷಣೆಗಾಗಿ ಯಾವ ಕಾನೂನನ್ನು ತಂದರೆ ಹೆಚ್ಚು ಬಲವನ್ನು ಕೊಡಬಹುದು ಇದರ ಬಗ್ಗೆ ಚಿಂತನೆ ಮಾಡುವುದಕ್ಕೆ ಶಾಸಕರ ವೇದಿಕೆಯೊಂದನ್ನು ರಚನೆ ಮಾಡಲಾಗಿತ್ತು. ಅದರಲ್ಲಿ ನಾವೆಲ್ಲರೂ ಸೇರಿ ಒಟ್ಟಾಗಿ ಕೆಲಸ ಮಾಡುತ್ತಿದ್ದೆವು. ಅದರಲ್ಲಿ ಆ ಒಂದು ವಿಚಾರದ ಮೂಲಕ;

**ಶ್ರೀಮತಿ ಭಾರತಿ ಶೆಟ್ಟಿ:-** ಮಾನ್ಯ ಸಭಾಪತಿಯವರೇ, ಇದು ಬಹಳ ಪ್ರಮುಖವಾದ ವಿಚಾರವಾಗಿದೆ, ಇಲ್ಲಿ ಯಾರೂ ಇಲ್ಲ. ಮಾನ್ಯ ಐವನ್ ಡಿ'ಸೋಜಾರವರೇ ಯಾರಿಗೆ ಹೇಳುತ್ತಿದ್ದೀರಿ? ಈ ವಿಷಯವನ್ನು ನಾಳೆಗಾದರೂ ಚರ್ಚೆಗೆ ತೆಗೆದುಕೊಳ್ಳಿ. ಈಗಾಗಲೇ ರಾತ್ರಿ ಒಂಭತ್ತೂವರೆ ಸಮಯವಾಯಿತು.

**ವೈಸ್ ಛೇರ್ಮನ್:-** ಬರುತ್ತಾರೆ, ಕರೆಸುತ್ತೇನೆ.

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೇ, ನಾನು ರೆಡಿ ಇದ್ದೇನೆ. ತುಂಬಾ ಜನರಿಗೆ ಮಾತನಾಡುವುದಕ್ಕೆ ಹೇಳಿದ್ದೇನೆ ಆದರೆ ಅವರು ಯಾರೂ ಕಾಣುತ್ತಿಲ್ಲ. ಹಾಗಾಗಿ ನಾಳೆ ಮಾಡಿದರೆ ಉತ್ತಮ.

**ಶ್ರೀಮತಿ ಭಾರತಿ ಶೆಟ್ಟಿ:-** ಮಾನ್ಯ ಸಭಾಪತಿಯವರೇ, ನಾನು ಮಾತನಾಡುತ್ತೇನೆ. ಬಹಳ ಪ್ರಮುಖವಾದ ವಿಷಯವಿದು. ಹದಿಹರೆಯದ ಮಕ್ಕಳ ಭವಿಷ್ಯದ ಪ್ರಶ್ನೆ ಇದು. ಇದರ ಬಗ್ಗೆ ನಾವು ಚರ್ಚೆ ಮಾಡಬೇಕು, ಮಾತನಾಡಬೇಕು. ಆದರೆ ಇಲ್ಲಿ ಸರ್ಕಾರ ಇಲ್ಲ, ದಯಮಾಡಿ ನಾಳೆಗೆ ಅವಕಾಶ ಮಾಡಿಕೊಡಿ.

**ವೈಸ್ ಛೇರ್ಮನ್:-** ಇಲ್ಲ, ಮಂತ್ರಿಗಳನ್ನು ಕರೆಸುತ್ತೇನೆ.

**ಶ್ರೀಮತಿ ಭಾರತಿ ಶೆಟ್ಟಿ:-** ಸಮಯ ರಾತ್ರಿ 9.30 ಆಯಿತು, ನಾಳೆಗೆ ಮಾಡಲಿ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು)**:- ಮಾನ್ಯ ಸಭಾಪತಿಯವರೇ, ಬಹಳ ಸದಸ್ಯರುಗಳು ಆ ವಿಚಾರದಲ್ಲಿ ಮಾತನಾಡಬೇಕೆಂದಿದ್ದಾರೆ. ಈಗ ಈ ವಿಷಯ ಚರ್ಚೆಗೆ ಬರುತ್ತದೆಂದು ಯಾರಿಗೂ ಗೊತ್ತಿರಲಿಲ್ಲ. ಆ ಕಡೆ ಆಗಿರಬಹುದು, ಈ ಕಡೆ ಆಗಿರಬಹುದು; ಬಹಳ ಸದಸ್ಯರು ಹೊರಟು ಹೋಗಿದ್ದಾರೆ. ಆದ್ದರಿಂದ ಈ ವಿಷಯವನ್ನು ನಾಳೆಗೆ ಇಟ್ಟುಕೊಳ್ಳಿ ಚರ್ಚೆ ಮಾಡೋಣ. ನಾಳೆಗೆ ನೀವೇ ಚರ್ಚೆಯನ್ನು ಮಾಡಿ.

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೇ, ಈಗ ಚರ್ಚೆ ಪ್ರಾರಂಭವಾಯಿತು, ನಾಳೆಗೆ ಮತ್ತೆ ತೆಗೆದುಕೊಳ್ಳೋಣ. It will continue tomorrow.

**ಶ್ರೀ ಎನ್.ಎಸ್. ಬೋಸರಾಜು (ಸಭಾನಾಯಕರು)**:- ಮಾನ್ಯ ಸಭಾಪತಿಯವರೇ, (ಗೊಂದಲ) ಅದಕ್ಕೆ ಇವತ್ತಿನ ವಿಷಯಗಳೇನಿವೆ ಅವುಗಳನ್ನು ಮಾಡಿದರೆ ಒಳ್ಳೆಯದು. ಕೆಳಮನೆಯವರು ರಾತ್ರಿ 12 ಗಂಟೆ 55 ನಿಮಿಷದವರೆಗೆ ಕಲಾಪವನ್ನು ನಡೆಸಿದ್ದಾರೆ.

**ಶ್ರೀ ಐವನ್ ಡಿ'ಸೋಜಾ:-** ಊಟ ಸಿಗಬೇಕಲ್ಲಾ . . .

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ಅವರು ಮಾಡಿದರೆಂದು ನಾವು ಚಾಲೆಂಜ್ ತೆಗೆದುಕೊಂಡು . . .

**ಶ್ರೀ ಎನ್.ಎಸ್. ಬೋಸರಾಜು:-** ಅವರು ಮಾಡಿದರು ಅಂತಲ್ಲ. ಎಲ್ಲರೂ ಒಪ್ಪಿದ್ದೇವೆ.

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ:-** ನಮ್ಮದೇನೂ ಇಲ್ಲ, ನೀವು ರಾತ್ರಿಯೆಲ್ಲಾ ಮಾಡಿ, ನಾವು ಕುಳಿತುಕೊಳ್ಳುತ್ತೇವೆ. ಆ ಕಡೆಯಾಗಲೀ, ಈ ಕಡೆಯಾಗಲೀ; ನಿಮ್ಮಲ್ಲಿಯೆ ಕಡಿಮೆ ಸದಸ್ಯರುಗಳಿದ್ದಾರೆ.

**ಶ್ರೀ ಎನ್.ಎಸ್. ಬೋಸರಾಜು:-** ಇಲ್ಲ, ಬರುತ್ತಾರೆ.

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಕಳೆದ ನವೆಂಬರ್ ತಿಂಗಳ 26ನೇ ತಾರೀಖಿನಂದು ಪತ್ರಿಕೆಯಲ್ಲಿ ಐದು ಕಾಲಂನಲ್ಲಿ ಬಂದಿದೆ. '1.3 lakh children malnourished in Karnataka'. ನೀವು ಮಲಗುವ ಸಮಯದಲ್ಲಿ ಚರ್ಚೆ ಮಾಡಿಸಿದರೆ ಹೇಗೆ? Serious problem ಇದು.

**ಶ್ರೀ ಡಿ.ಟಿ. ಶ್ರೀನಿವಾಸ್ (ಡಿಟಿಎಸ್):-** ಮಾನ್ಯ ಸಭಾಪತಿಯವರೇ, ಇದೊಂದು ತುಂಬಾ ಪ್ರಮುಖವಾದ ವಿಚಾರವಾಗಿರುವುದರಿಂದ ಇದರ ಬಗ್ಗೆ ಚರ್ಚೆ ಮಾಡುವುದಕ್ಕೆ ದೀರ್ಘ ಕಾಲ ಬೇಕಾಗುತ್ತದೆ. ಇತ್ತೀಚೆಗೆ ಮಕ್ಕಳ ಹಕ್ಕುಗಳ ಉಲ್ಲಂಘನೆಯಾಗುತ್ತಿದೆ. ಇದಕ್ಕೆ ಪ್ರತ್ಯೇಕವಾಗಿ ಅವಕಾಶ ಕಲ್ಪಿಸಿಕೊಡುವುದು ಒಳ್ಳೆಯದು.

**ವೈಸ್ ಛೇರ್ಮನ್:-** ಮಾನ್ಯ ಐವನ್ ಡಿ'ಸೋಜಾರವರೇ, ಮಂತ್ರಿಗಳನ್ನು ಕರೆಸುತ್ತಾರೆ. ಛೇರ್ಮನ್‌ರವರು ಬರುತ್ತಾರೆ ನೀವು ಮಾತನಾಡಿ.

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೇ, ಇದೊಂದು ಪ್ರಮುಖವಾದ ವಿಚಾರವಾಗಿದ್ದು, ಈ ಸದನದಲ್ಲಿ 2017-18ನೇ ಸಾಲಿನಲ್ಲಿ ಮೂರು ದಿವಸಗಳ ಕಾಲ ಚರ್ಚೆಯಾಗಿತ್ತು. ಮಕ್ಕಳ ಸಂರಕ್ಷಣೆ ಬಗ್ಗೆ ಏನು ಮಾಡಬೇಕು? ಹೊಸ ಕಾನೂನುಗಳನ್ನು ಯಾವಾಗ ರಚನೆ ಮಾಡಬೇಕು? ಹದಿಹರೆಯದ ಮಕ್ಕಳ ದಾರಿ ತಪ್ಪುವ ವಿಚಾರದ ಬಗ್ಗೆ ಈ ಸದನವು ಅತ್ಯಂತ ಗಂಭೀರವಾಗಿ ಮೂರು ದಿವಸಗಳ ಕಾಲ ಅಂದಿನ ಸಭಾಪತಿಗಳಾಗಿದ್ದಂತಹ

ಶ್ರೀ ಡಿ.ಹೆಚ್. ಶಂಕರಮೂರ್ತಿಯವರು ನಮ್ಮನ್ನೆಲ್ಲಾ ಒಟ್ಟು ಸೇರಿಸಿ ಈ ವಿಚಾರದಲ್ಲಿ ಶಾಸಕರು ತಮ್ಮ ತಮ್ಮ ಕ್ಷೇತ್ರದಲ್ಲಿ ಹೆಚ್ಚು ಆಸಕ್ತಿ ವಹಿಸಬೇಕು, ತಮ್ಮ ತಮ್ಮ ಕ್ಷೇತ್ರಗಳಲ್ಲಿರುವ ಶಾಲೆಗಳಿಗೆ ಭೇಟಿ ನೀಡಿ ಮಕ್ಕಳಿಗೆ ಅಪೌಷ್ಟಿಕತೆ ಬಗ್ಗೆ, drop out ಬಗ್ಗೆ ಆರೋಗ್ಯದ ಬಗ್ಗೆ ಹಾಗೂ ಅವರಿಗೆ ನಿಯಮಿತವಾಗಿ ಆರೋಗ್ಯವನ್ನು ತಪಾಸಣೆ ಮಾಡುವ ಬಗ್ಗೆ ಚರ್ಚೆ ಮಾಡಬೇಕೆಂಬ ಬಗ್ಗೆ ಬಹಳಷ್ಟು ಚರ್ಚೆಗಳು ಈ ಸದನದಲ್ಲಿ ಆಯಿತು. ಎಲ್ಲಾ ಸದಸ್ಯರುಗಳು ೮೦ percent of the Members ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಇದರ ಬಗ್ಗೆ ಕಾಳಜಿ ವ್ಯಕ್ತಪಡಿಸಿದರು. ಅಂದಿನ ಸಚಿವರು ಮತ್ತು ಮುಖ್ಯಮಂತ್ರಿಗಳೇ ಸದನಕ್ಕೆ ಬಂದು ಉತ್ತರ ಕೊಟ್ಟರು. ಈ ಬಗ್ಗೆ ಒಂದು ನಿರ್ದಿಷ್ಟವಾದ ಕಾನೂನನ್ನು ತರುವುದಕ್ಕೆ ನಾವು ಮುಂದಾಗುತ್ತೇವೆ ಎಂದು ಆಶ್ವಾಸನೆ ನೀಡಿದರು. ಅದರ ಫಲವಾಗಿ POCSO Act ತರುವುದಕ್ಕೆ ಸಾಧ್ಯತೆಯಾಯಿತು. ಅನೇಕ remand home ಗಳಲ್ಲಿ consultor ಗಳ ನೇಮಕವಾಯಿತು. ಶಾಲಾ-ಕಾಲೇಜುಗಳ ಹತ್ತಿರ ಮಾದಕ ದ್ರವ್ಯಗಳನ್ನು ಮಾರಾಟ ಮಾಡಬಾರದು ಎನ್ನುವ ನಿಯಮವಿದೆ. ಇದರ ಬಗ್ಗೆ ಅನೇಕ ಕಡೆ ಪೊಲೀಸ್ ರೇಡ್ ಆಯಿತು. ಇದರ ಬಗ್ಗೆ ಅನೇಕ ಕ್ರಮಗಳು ಜಾರಿಗೆ ಬಂದಿದ್ದನ್ನು ನಾವು ಕಂಡಿದ್ದೇವೆ. ಹಾಗಾಗಿ ಇದೊಂದು ಅತ್ಯಂತ ಪ್ರಮುಖವಾದ ವಿಚಾರವೆಂದು ಹೇಳುವುದಕ್ಕೆ ಬಯಸುತ್ತೇನೆ. ಈ ಬಾರಿ ಕೂಡ ಮಾನ್ಯ ಸಭಾಪತಿಗಳಿಗೆ ಒಂದು ಪತ್ರ ಬರೆದು, ಹಿಂದೆ ಇದ್ದಂತಹ ಶಾಸಕರ ರಕ್ಷಣಾ ವೇದಿಕೆ, ಮಕ್ಕಳಿಗಾಗಿ ಶಾಸಕರ ವೇದಿಕೆ ಏನಿತ್ತು, ಅದನ್ನು ಮತ್ತೆ ಮರುಸ್ಥಾಪನೆ ಮಾಡಬೇಕು.

(ಮುಂದು)

**(೯೯೫) 18.12.2024 9.30 ಹೆಚ್‌ವಿ.ವಿಕೆ** **(ವೈಸ್ ಛೇರ್ಮನ್‌ರವರ ಉಪಸ್ಥಿತಿ)**

**ಶ್ರೀ ಐವನ್ ಡಿ'ಸೋಜಾ(ಮುಂದು):**

ಸನ್ಮಾನ್ಯ ಸಭಾಪತಿಯವರೇ, ಯಾವ ಶಾಸಕರಿಗೆ ಇದರಲ್ಲಿ ಆಸಕ್ತಿ ಇದೆ ಅವರುಗಳನ್ನು ಕರೆಯಿಸಿ, ಮಾತನಾಡಿಸಿ ಅದಕ್ಕೊಂದು recognition ಕೊಡುವ ಮೂಲಕ ಮಕ್ಕಳ ಬಗ್ಗೆ ಕಾಳಜಿ ವಹಿಸುವುದಕ್ಕೆ ತಂದೆ-ತಾಯಿಗಳು ಮಾತ್ರವಲ್ಲ ಒಬ್ಬ ಶಾಸಕರಾಗಿ ಮಕ್ಕಳಿಗೆ ರಕ್ಷಣೆಯನ್ನು ಕೊಡುವಂತಹ ಜವಾಬ್ದಾರಿಯನ್ನು ನಾವೂ ಕೂಡ ತೆಗೆದುಕೊಳ್ಳಬೇಕು ಎನ್ನುವ ರೀತಿಯಲ್ಲಿ ಮಾನ್ಯ ಸಭಾಪತಿಯವರಿಗೆ ಒಂದು ಪತ್ರವನ್ನು ಬರೆದಿದ್ದೆ, ಕಳೆದ ಬಿ.ಎ.ಸಿ.,ಯಲ್ಲಿ ಅದರ ಬಗ್ಗೆ ಚರ್ಚೆ ಆಗಿತ್ತು. ಮಾನ್ಯ ವಿರೋಧ ಪಕ್ಷದ ನಾಯಕರು ಆ ಸಭೆಯಲ್ಲಿ ಹಾಜರಿದ್ದರು. ಸದನದಲ್ಲಿ ಈ ವಿಚಾರದ ಬಗ್ಗೆ ಚರ್ಚೆ ಮಾಡಲು ಒಂದು ದಿನವನ್ನು ಮೀಡಲಿಡಬೇಕೆಂದು ತೀರ್ಮಾನಿಸಲಾಗಿತ್ತು. ಅಧಿವೇಶನದ ಕೊನೆಯ ಘಟ್ಟಕ್ಕೆ ನಾವು ಈಗ ಬಂದಿದ್ದೇವೆ. ಈಗ ಈ ವಿಚಾರದ ಮೇಲಿನ ಚರ್ಚೆಯನ್ನು ತೆಗೆದುಕೊಂಡಿರುವುದು ನಿಜಕ್ಕೂ ಸಂತೋಷದ ವಿಚಾರವಾಗಿದೆ.

ಸನ್ಮಾನ್ಯ ಸಭಾಪತಿಯವರೇ, ಈ ವಿಚಾರದ ಬಗ್ಗೆ ಅನೇಕ ಮಾನ್ಯ ಸದಸ್ಯರುಗಳೊಂದಿಗೆ ಚರ್ಚೆ ಮಾಡಿದಂತಹ ಸಂದರ್ಭದಲ್ಲಿ ಎಲ್ಲ ಸದಸ್ಯರುಗಳು ನಾವು ಇದರ ಬಗ್ಗೆ ಮಾತನಾಡುತ್ತೇವೆ, ಅದರ ಬಗ್ಗೆ ಮಾತನಾಡುವುದಕ್ಕೆ ನಮಗೂ ಅವಕಾಶ ಬೇಕು, ಈ ವಿಚಾರದ ಮೇಲಿನ ಚರ್ಚೆಯಲ್ಲಿ ನಾವು ಸಹ

ಭಾಗಿಗಳಾಗುತ್ತೇವೆ ಎನ್ನುವ ಮಾತನ್ನು ಹೇಳಿ, ಆ ಮೂಲಕ ಉತ್ತೇಜನವನ್ನು ನೀಡಿರುವುದು ಸಂತೋಷದ ವಿಚಾರವಾಗಿದೆ.

ಸನ್ಮಾನ್ಯ ಸಭಾಪತಿಯವರೇ, ಸಾಮಾನ್ಯವಾಗಿ ನಾವು 1ನೇ ತರಗತಿಯಿಂದ 5ನೇ ತರಗತಿ, 5ನೇ ತರಗತಿಯಿಂದ 10ನೇ ತರಗತಿ ಮತ್ತು 10ನೇ ತರಗತಿಯಿಂದ ಪಿ.ಯು., ತರಗತಿಗಳಲ್ಲಿ ಓದುತ್ತಿರುವ ಮಕ್ಕಳು ಎಂದು ವರ್ಗೀಕರಣ ಮಾಡುತ್ತೇವೆ. ಹಿಂದೆ ನಾವು ಚಿಕ್ಕ ಮಕ್ಕಳಾಗಿದ್ದಾಗ, ಸಂಬಂಧಿಕರ ಅಥವಾ ಸ್ನೇಹಿತರ ಮದುವೆಗಳಿಗೆ ನಮ್ಮ ಪೋಷಕರ ಜೊತೆಗೆ ಹೋಗುತ್ತಿದ್ದೆವು; ಅಲ್ಲಿ ಸಾಮಾಜಿಕ ಅಥವಾ ಸಮುದಾಯಿಕ ಕೂಟಗಳಲ್ಲಿ ಭಾಗವಹಿಸುತ್ತಿದ್ದೆವು. ಜೊತೆಗೆ ಬೇರೆಯವರೊಂದಿಗೆ ಮಾತನಾಡುತ್ತಿದ್ದೆವು ಮತ್ತು ಹೊಸಬರ ಪರಿಚಯವನ್ನು ಮಾಡಿಕೊಳ್ಳುತ್ತಿದ್ದೆವು. ಆದರೆ, ಇವತ್ತು ನಮ್ಮ ಮಕ್ಕಳನ್ನು ಮದುವೆ ಸಮಾರಂಭಗಳಿಗೆ ಕರೆದರೆ, "ನೀವು ಹೋಗಿ ಬನ್ನಿ. ನಾವು ಮನೆಯಲ್ಲಿ ನಮ್ಮ ಕೆಲಸಗಳನ್ನು ಮಾಡಿಕೊಳ್ಳುತ್ತೇವೆ" ಎನ್ನುವ ಮಾತನ್ನು ಹೇಳುತ್ತಾರೆ. ಈಗ ಮಕ್ಕಳಲ್ಲಿ ಏಕಾಂಗಿತನ ಎನ್ನುವುದು ಪ್ರಾರಂಭವಾಗಿದೆ. ಒಬ್ಬೊಬ್ಬರೇ ಕುಳಿತುಕೊಂಡು ತಮ್ಮ ಜೀವನದ ರೂಪುರೇಷೆಗಳ ಬಗ್ಗೆ ಅವರೇ ತೀರ್ಮಾನ ಮಾಡುವ ರೀತಿಯಾಗಿದೆ. ಮೊನ್ನೆ ಯಾರೋ, "ಮಕ್ಕಳಿಗೆ ಈಗ ಮೊಬೈಲ್ ಇದ್ದರೆ ಸಾಕು; ಬೇರೆ ಯಾರೂ ಬೇಕಾಗಿಲ್ಲ" ಎನ್ನುವ ಮಾತನ್ನು ಹೇಳುತ್ತಿದ್ದರು. ಹೌದು, ಈಗ ಮಕ್ಕಳಿಗೆ ಮೊಬೈಲ್ ಇದ್ದರೆ ಸಾಕಾಗಿದೆ. ಮೊಬೈಲ್ ಅನ್ನು ಒಳ್ಳೆಯದಕ್ಕೆ ಉಪಯೋಗ ಮಾಡಿದರೆ ಅದು ಒಳ್ಳೆಯದು; ಅದರಿಂದ ಪ್ರಯೋಜನವಿದೆ. ಅದರಿಂದ ಬಹಳಷ್ಟು ವಿಚಾರಗಳನ್ನು ತಿಳಿದುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ಆದರೆ, ಅದನ್ನು ದುರುಪಯೋಗಪಡಿಸಿಕೊಂಡರೆ ಅಥವಾ ಅತೀಯಾಗಿ ಅದನ್ನು ಬಳಕೆ ಮಾಡಿಕೊಂಡರೆ ಅದು ಜೀವನದ ದಿಕ್ಕನ್ನೇ ಬದಲಾವಣೆ ಮಾಡುತ್ತದೆ ಎನ್ನುವ ಮಾತನ್ನು ಹೇಳುವುದಕ್ಕೆ ಬಯಸುತ್ತಿದ್ದೇನೆ. ಉದಾಹರಣೆಗೆ ಹೇಳಬೇಕಾದರೆ, knife ಅಥವಾ ಚೂರಿಯನ್ನು ಒಳ್ಳೆಯ ಕೆಲಸಕ್ಕೂ ಉಪಯೋಗ ಮಾಡಿಕೊಳ್ಳಬಹುದು, ಅದನ್ನು ಕುತ್ತಿಗೆ ಕೊಯ್ಯುವುದಕ್ಕೂ ಬಳಕೆ ಮಾಡಿಕೊಳ್ಳಬಹುದಾಗಿದೆ. ವಸ್ತುಗಳನ್ನು ಸರಿಯಾಗಿ ಬಳಕೆ ಮಾಡುವುದರ ಬಗ್ಗೆ ಮಕ್ಕಳಿಗೆ ಶಾಲಾ ಮಟ್ಟದಲ್ಲಿಯೇ ನಾವು ಸರಿಯಾದಂತಹ ಶಿಕ್ಷಣವನ್ನು ಕೊಡಬೇಕಾಗುತ್ತದೆ. ಇವತ್ತು drop out ಆಗಿರುವ ಮಕ್ಕಳು ಮತ್ತು ವಯಸ್ಸಿಗೆ ಬಂದಂತಹ ಮಕ್ಕಳು ಶಾಲೆಗಳಲ್ಲಿಯೂ ಮಾತನಾಡುವುದಿಲ್ಲ, ಹೊರಗೆ ಹೋದರೂ ಮಾತನಾಡುವುದಿಲ್ಲ ಮತ್ತು ತಂದೆ ತಾಯಂದಿರ ಜೊತೆಗೂ ಮಾತನಾಡುವುದಿಲ್ಲ; ಯಾರ ಜೊತೆಗೂ ಮಾತನಾಡುವುದಿಲ್ಲ.

ಸನ್ಮಾನ್ಯ ಸಭಾಪತಿಯವರೇ, ಪೋಷಕರಿಗೆ ತಮ್ಮದೇ ಆಗಿರುವಂತಹ ಜವಾಬ್ದಾರಿಗಳು ಇರುತ್ತವೆ. ಆ ಒತ್ತಡದ ಹಿನ್ನೆಲೆಯಲ್ಲಿ ಮಕ್ಕಳೊಂದಿಗೆ ಅವರು ಮಾತನಾಡುವುದೇ ಇಲ್ಲ. ರಾಷ್ಟ್ರೀಯ ಶಿಕ್ಷಣ ನೀತಿಯನ್ವಯ ಪ್ರತಿ ಶಾಲೆಗಳಲ್ಲಿಯೂ consultor ಇರಬೇಕೆಂದು ಇದೆ. ಯಾರು ಎಂ.ಎಸ್.ಡಬ್ಲ್ಯೂ., ಪದವೀಧರರಾಗಿರುತ್ತಾರೆ ಮತ್ತು ಯಾರು ಸಾಮಾಜಿಕ ಸಂವಹನ ಜ್ಞಾನವನ್ನು ಹೊಂದಿರುತ್ತಾರೆ ಅಂತಹವರನ್ನು ಪ್ರತಿ ಶಾಲೆ ಮತ್ತು ಕಾಲೇಜುಗಳಲ್ಲಿ consultor ಗಳನ್ನಾಗಿ ನೇಮಕ ಮಾಡಬೇಕೆಂದು ಇದೆ. ಇವತ್ತು ಎಷ್ಟು ಕಾಲೇಜುಗಳಲ್ಲಿ ಅಥವಾ ಶಾಲೆಗಳಲ್ಲಿ consultors ಇದ್ದಾರೆ? ಎಲ್ಲಿ ಹೆಣ್ಣು ಮಕ್ಕಳ ಸಂಖ್ಯೆ ಹೆಚ್ಚಾಗಿದೆ ಅಂತಹ ಶಾಲಾಕಾಲೇಜುಗಳಲ್ಲಿ consultors ನೇಮಕ ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಸರ್ಕಾರದವರಲ್ಲಿ ಮನವಿ ಮಾಡಿಕೊಳ್ಳುತ್ತಿದ್ದೇನೆ. Consultors

ಇದ್ದರೇ ಮಕ್ಕಳು ಮುಕ್ತ ಮನಸ್ಸಿನಿಂದ ಮಾತನಾಡಿ ತಮ್ಮ ವಿಚಾರಗಳನ್ನು ವಿನಿಮಯ ಮಾಡಿಕೊಳ್ಳುತ್ತಾರೆ. ಎಲ್ಲಿ ತೊಂದರೆಯಾಗುತ್ತಿದೆ; ಯಾವುದರ ಬಗ್ಗೆ ಚಿಂತನೆ ಇದೆ ಎನ್ನುವ ನಿಟ್ಟಿನಲ್ಲಿ ಮಕ್ಕಳ ಜೊತೆಗೆ ವಿಚಾರ ವಿನಿಮಯ ಮಾಡಿಕೊಳ್ಳುವ ಸಂಸ್ಕೃತಿಯನ್ನು ಬೆಳಸಿಕೊಳ್ಳುವ ಅವಶ್ಯಕತೆ ಇದೆ. ಬದಲಾದ ಸನ್ನಿವೇಶದಲ್ಲಿ ಸಾರ್ವಜನಿಕ ಸಭೆ ಸಮಾರಂಭಗಳಲ್ಲಿ ಭಾಗವಹಿಸುವುದು, ಹಿರಿಯರ ಜೊತೆಗೆ ಬೆರೆಯುವಂತಹ ಸಂಸ್ಕೃತಿ ಕಡಿಮೆಯಾಗಿದೆ. ವಯಸ್ಸಿಗೆ ಬಂದಂತಹ ಮಕ್ಕಳು ತಪ್ಪು ದಾರಿಗೆ ಹೋಗುತ್ತಿದ್ದಾರೆಂದು ನಾವು ಹೇಳುತ್ತೇವೆ. ಇವತ್ತಿನ ದಿನಮಾನಗಳಲ್ಲಿ ಸೋಷಿಯಲ್ ಮೀಡಿಯಾಗಳಿಂದ ಉಂಟಾಗುತ್ತಿರುವ ಪರಿಣಾಮಗಳನ್ನು ನಾವು ಗಮನಿಸಬೇಕಾಗಿದೆ. ಉದಾಹರಣೆಗೆ ಹೇಳಬೇಕಾದರೆ, ನಮ್ಮ ಊರಿನಲ್ಲಿ ಒಬ್ಬ ಹುಡುಗ ಪಿ.ಯು.ಸಿ., ಓದಿ ಮನೆಯಲ್ಲಿರುತ್ತಾರೆ. ತಂದೆ-ತಾಯಿ ಬಹಳಷ್ಟು ಶ್ರೀಮಂತರಾಗಿರುತ್ತಾರೆ. ಅವರ ಬಳಿ ಸಾಕಷ್ಟು ಹಣವಿರುತ್ತದೆ-ಸೌಲಭ್ಯಗಳಿರುತ್ತವೆ. ಆ ಹುಡುಗ ಮೊಬೈಲ್‌ನಲ್ಲಿ ಯಾವುದೋ ಒಂದು online gambling game ಎನ್ನುವ ಆಟದಲ್ಲಿ ಇಷ್ಟು ಪಾಯಿಂಟ್ ಗಳಿಸುವುದರಲ್ಲಿ ಯಶಸ್ವಿಯಾಗಲಿಲ್ಲವೆಂದು ತನ್ನ ರೂಂಗೆ ಹೋಗಿ ಆತ್ಮಹತ್ಯೆಯನ್ನು ಮಾಡಿಕೊಳ್ಳುತ್ತಾನೆ. ಇದೊಂದು ಶೌರ್ಯದ ಗೇಮ್ ಆಗಿರುತ್ತದೆ. ಆ ಗೇಮ್‌ನಲ್ಲಿ ಇಷ್ಟು ಪಾಯಿಂಟ್‌ಗಳನ್ನು ರೀಚ್ ಮಾಡುವುದಕ್ಕೆ ಆಗಲಿಲ್ಲವೆಂದು ಆತ್ಮಹತ್ಯೆ ಮಾಡಿಕೊಳ್ಳುತ್ತಾನೆ. ಇದೊಂದು ಅತ್ಯಂತ ಬೇಸರ ಮತ್ತು ದುಃಖದ ವಿಚಾರವಾಗಿದೆ. ಇದನ್ನು ಸರಿ ಮಾಡಬೇಕಾಗಿರುವವರು ಯಾರು ಎನ್ನುವುದರ ಬಗ್ಗೆ ನಾವು ಆಲೋಚನೆ ಮಾಡಬೇಕಾಗುತ್ತದೆ. ಮೊಬೈಲ್‌ನಲ್ಲಿ ಬರುವಂತಹ ಗೇಮ್‌ಗಳಲ್ಲಿ ಯಾವುದು ಬರಬೇಕು, ಯಾವುದು ಬರಬಾರದು ಎನ್ನುವುದನ್ನು ತೀರ್ಮಾನ ಮಾಡುವವರು ಯಾರು? ಯಾವುದು ಒಳ್ಳೆಯದು; ಯಾವುದು ಕೆಟ್ಟದ್ದು ಎನ್ನುವುದನ್ನು ತೀರ್ಮಾನ ಮಾಡುವುದಕ್ಕೆ ಸರ್ಕಾರ ಒಂದು ಸಮಿತಿಯನ್ನು ರಚನೆ ಮಾಡಬೇಕಾಗುತ್ತದೆ.

**ಶ್ರೀಮತಿ ಭಾರತಿ ಶೆಟ್ಟಿ(ನಾಮನಿರ್ದೇಶಿತರು):-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಐವನ್ ಡಿ'ಸೋಜಾರವರು ಬಹಳ ಚೆನ್ನಾಗಿ ಮಾತನಾಡುತ್ತಿದ್ದಾರೆ. ಅವರು ಮಹಿಳೆಯರ ಬಗ್ಗೆ ಮತ್ತು ಮಕ್ಕಳ ಬಗ್ಗೆ ಮಾತನಾಡುತ್ತಿರುವಾಗ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಸದನದಲ್ಲಿ ಹಾಜರಿಲ್ಲದಿದ್ದರೆ ಹೇಗೆ? ಇದೊಂದು ಬಹಳ ಪ್ರಮುಖವಾಗಿರುವ ವಿಚಾರವಾಗಿದೆ. ವಸ್ತುಸ್ಥಿತಿಯನ್ನು ಮಾನ್ಯ ಸದಸ್ಯರು ಬಿಡಿಸಿ ಹೇಳುತ್ತಿದ್ದಾರೆ. ಇದನ್ನು ಕೇಳುವವರು ಯಾರು? ನಾವು ಯಾರಿಗೆ ಹೇಳಬೇಕು? ಇದು ಸಂಪೂರ್ಣವಾಗಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆಯವರಿಗೆ ಸೇರಿದೆ.

**ಶ್ರೀ ಎನ್.ರವಿಕುಮಾರ್(ವಿಧಾನಸಭಾ ಕ್ಷೇತ್ರ):-** ಸನ್ಮಾನ್ಯ ಸಭಾಪತಿಯವರೇ, ಈಗ ಸದನದಲ್ಲಿ ಶಾಸಕರು ಎಂಟು-ಹತ್ತು ಜನ ಇದ್ದೇವೆ. ಪತ್ರಕರ್ತರು ಇಬ್ಬರು-ಮೂರು ಜನ ಇದ್ದಾರೆ. ಅಧಿಕಾರಿಗಳು ಸ್ವಲ್ಪ ಜನ ಇದ್ದಾರೆ. ಈ ಸದನದ ಮೂಲಕ ನಾವು ಯಾರಿಗೆ ಅರಿವನ್ನು ಮೂಡಿಸಬೇಕಾಗಿದೆ? For example, underweight children, under height children, deaf and dumb children, malnutrition children, ಇವರುಗಳ ಸಂಖ್ಯೆ ಬಹಳ ದೊಡ್ಡ ಪ್ರಮಾಣದಲ್ಲಿದೆ. ಇಂತಹ ಸಮಸ್ಯೆಗಳ ಬಗ್ಗೆ ನಿಜವಾಗಿಯೂ ಅರಿವನ್ನು ಮೂಡಿಸಬೇಕೆನ್ನುವ ಕಾಳಜಿ ಇದ್ದರೆ, ಮಾನ್ಯ ಸಚಿವೆಯವರು ಈ ಸದನದಲ್ಲಿದ್ದಾಗ ಮಾತ್ರ ಮಾತನಾಡಬೇಕಾಗುತ್ತದೆ.

ಇಲ್ಲದಿದ್ದರೆ, ದಾಖಲೆಗೋಸ್ಕರ ಮಾತನಾಡಬೇಕು ಎಂದರೆ, ನಮ್ಮ ಅಭ್ಯಂತರವೇನೂ ಇಲ್ಲ. ಬೇಕಾದರೆ, ಹನ್ನೊಂದು-ಹನ್ನೆರಡು ಗಂಟೆಗಳವರೆಗೆ ಸದನದಲ್ಲಿ ಕುಳಿತುಕೊಳ್ಳುವುದಕ್ಕೆ ನಾವು ತಯಾರಿದ್ದೇವೆ. ಈ ವಿಚಾರದ ಬಗ್ಗೆ ಕರ್ನಾಟಕ ರಾಜ್ಯದ ವಿಧಾನ ಪರಿಷತ್ತಿನ ಚರ್ಚೆಯನ್ನು ಮಾಡಿದ್ದೆವು ಎನ್ನುವ ದಾಖಲೆಗಾಗಿ ಬೇಕಾದರೆ ಖಂಡಿತವಾಗಿಯೂ ನಾವು ಸದನದಲ್ಲಿ ಕುಳಿತುಕೊಳ್ಳುವುದಕ್ಕೆ ಸಿದ್ಧರಿದ್ದೇವೆ, ನಮಗೇನೂ ತೊಂದರೆಯಿಲ್ಲ. ಪತ್ರಿಕೆಯ ಮೂಲಕ ದೂರದರ್ಶನದ ಮೂಲಕ ಯಾರಿಗೆ ಈ ಸುದ್ದಿ ಮುಟ್ಟಬೇಕಾಗಿತ್ತು, ಅದು ಮುಟ್ಟದಿದ್ದರೇ ಚರ್ಚೆ ಮಾಡುವುದರಿಂದ ಏನು ಪ್ರಯೋಜನ? ದಾಖಲೆಗೋಸ್ಕರ ಚರ್ಚೆ ಮಾಡೋಣ ಎನ್ನುವುದಾದರೇ ನಮ್ಮ ಅಭ್ಯಂತರವೇನೂ ಇಲ್ಲ.

**ವೈಸ್ ಛೇರ್ಮನ್:-** ಈಗಾಗಲೇ ಮಾನ್ಯ ಸದಸ್ಯರು ಈ ವಿಚಾರದ ಮೇಲೆ ಮಾತನಾಡುವುದಕ್ಕೆ ಪ್ರಾರಂಭ ಮಾಡಿದ್ದಾರೆ.

**ಶ್ರೀಮತಿ ಭಾರತಿ ಶೆಟ್ಟಿ:-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆಯವರನ್ನು ಸದನಕ್ಕೆ ಕರೆಯಿಸಿ.

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ವಿರೋಧ ಪಕ್ಷದ ನಾಯಕರು):-** ಸನ್ಮಾನ್ಯ ಸಭಾಪತಿಯವರೇ, ಏಳು ಜನ ಸಚಿವರು ಕಡ್ಡಾಯವಾಗಿ ಸದನದಲ್ಲಿ ಹಾಜರಿರಬೇಕೆಂದು ಇದೆ. ಈಗ ಮಾನ್ಯ ಸಭಾ ನಾಯಕರನ್ನು ಹೊರತುಪಡಿಸಿದರೆ ಬೇರೆ ಯಾರೂ ಇಲ್ಲ. ಸಂಬಂಧಪಟ್ಟ ಸಚಿವೆಯವರು ಸದನದಲ್ಲಿ ಹಾಜರಿದ್ದರೆ ನಾವು ಮಾತನಾಡಬಹುದಾಗಿತ್ತು. ಮಾನ್ಯ ರವಿಕುಮಾರ್‌ರವರು ಹೇಳಿದಂತೆ ದಾಖಲೆಗೋಸ್ಕರ ಚರ್ಚೆ ಮಾಡುವುದು ಸರಿಯಾದ ಕ್ರಮವಲ್ಲ. ಆ ಕಡೆಯ ಗ್ಯಾಲರಿ ನೋಡಿ ಅಲ್ಲಿ ಯಾವ ಸಚಿವರು, ಸದಸ್ಯರು ಇಲ್ಲ.

**ವೈಸ್ ಛೇರ್ಮನ್:-** ಮಾನ್ಯ ವಿರೋಧ ಪಕ್ಷದ ನಾಯಕರೇ, ಈ ವಿಚಾರದ ಬಗ್ಗೆ ಸಾಕಷ್ಟು ಜನ ಸದಸ್ಯರು ಮಾತನಾಡುವವರಿದ್ದಾರೆ. ನಾಳೆ ಅಧಿವೇಶನ ಕೊನೆಗೊಳ್ಳುವುದರಿಂದ ಕೆಲವು ಸದಸ್ಯರಿಗೆ ಮಾತನಾಡುವುದಕ್ಕೆ ಅವಕಾಶ ಸಿಗುವುದಿಲ್ಲ.

**ಶ್ರೀಮತಿ ಭಾರತಿ ಶೆಟ್ಟಿ:-** ಸನ್ಮಾನ್ಯ ಸಭಾಪತಿಯವರೇ, ಸಂಬಂಧಪಟ್ಟ ಮಂತ್ರಿಗಳನ್ನಾದರೂ ಕರೆಯಿಸಿ.

**ವೈಸ್ ಛೇರ್ಮನ್:-** ಮಾನ್ಯ ಸಭಾನಾಯಕರೇ, ಸಂಬಂಧಪಟ್ಟ ಮಂತ್ರಿಗಳನ್ನು ಕರೆಯಿಸಿ.

**ಶ್ರೀ ಬಿ.ಕೆ.ಹರಿಪ್ರಸಾದ್(ವಿಧಾನಸಭಾ ಕ್ಷೇತ್ರ):-** ಸನ್ಮಾನ್ಯ ಸಭಾಪತಿಯವರೇ, ಸಂಬಂಧಪಟ್ಟ ಮಂತ್ರಿಗಳನ್ನು ಕರೆಯಿಸಬೇಕಾಗುತ್ತದೆ. ಇದೊಂದು ಬಹಳ ಗಂಭೀರವಾಗಿರುವ ವಿಚಾರವಾಗಿದೆ. ನಾವು ಅವರು ಸುಮ್ಮನೆ ಕುಳಿತುಕೊಂಡು ಮಾತನಾಡಿದರೆ ಆಗುವುದಿಲ್ಲ. ನಾವು ಇಂದಿನ "ಮಕ್ಕಳೇ ಮುಂದಿನ ಪ್ರಜೆಗಳು" ಎನ್ನುವ ಮಾತನ್ನು ಹೇಳುತ್ತೇವೆ.

**ವೈಸ್ ಛೇರ್ಮನ್:-** ಇವತ್ತು ಸುಮಾರು 10 ಸೂಚನೆಗಳಿವೆ. ಅನಂತರ ನಿಯಮ ೩೩೦ರ ಮೇರೆಗೆ ವಿಷಯಗಳ ಪ್ರಸ್ತಾಪ ಆಗಬೇಕಾಗಿದೆ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಸನ್ಮಾನ್ಯ ಸಭಾಪತಿಯವರೇ, ಅದರಲ್ಲಿ ನನ್ನದು ಒಂದಿದೆ.

**ಶ್ರೀಮತಿ ಭಾರತಿ ಶೆಟ್ಟಿ:-** ಸನ್ಮಾನ್ಯ ಸಭಾಪತಿಯವರೇ, ರಾಜ್ಯದಲ್ಲಿ ಸುಮಾರು ಒಂದೂವರೆ ಕೋಟಿ ಜನಸಂಖ್ಯೆಯಷ್ಟು ಹದಿಹರೆಯದ ಮಕ್ಕಳಿದ್ದಾರೆ. ಅವರ ಬಗ್ಗೆ ನಾವು ಮೊದಲು ಗಮನಹರಿಸಬೇಕಾಗಿದೆ. ಈ ವಿಚಾರದ ಮೇಲೆ ಚರ್ಚೆಗೆ ಅವಕಾಶ ಸಿಕ್ಕಿರುವಾಗ, ನಾವು ಚರ್ಚೆ ಮಾಡುವಂತಹ ಸಂದರ್ಭದಲ್ಲಿ ಸಂಬಂಧಪಟ್ಟ ಸಚಿವರು ಇಲ್ಲದಿದ್ದರೆ ಏನು ಪ್ರಯೋಜನ? ಈ ವಿಚಾರದ ಮೇಲಿನ ಮುಂದುವರೆದ ಚರ್ಚೆಯನ್ನು ನಾಳೆಗೆ ತೆಗೆದುಕೊಳ್ಳಿ.

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):-** ಸನ್ಮಾನ್ಯ ಸಭಾಪತಿಯವರೇ, ಅಧಿಕಾರಿಗಳು ನೋಟ್ ಮಾಡಿಕೊಳ್ಳುತ್ತಿದ್ದಾರೆ.

**ಶ್ರೀಮತಿ ಭಾರತಿ ಶೆಟ್ಟಿ:-** ಸನ್ಮಾನ್ಯ ಸಭಾಪತಿಯವರೇ, ಗಮನಸೆಳೆಯುವ ಸೂಚನೆಗೆ ಸಂಬಂಧಪಟ್ಟ ಸಚಿವರು ಹಾಜರಿಲ್ಲದಿದ್ದರೆ, ಆ ವಿಷಯ ಕ್ಲೋಸ್ ಆಗುತ್ತದೆ. ಸಂಬಂಧಪಟ್ಟ ಸಚಿವರು ಸದನದಲ್ಲಿ ಇರಬೇಕೆಂದು ಇಲ್ಲವೇ? ಇದೇನು ವ್ಯವಸ್ಥೆ? ಯಾರ ಗಮನವನ್ನು ಸೆಳೆಯಬೇಕು?

**ಶ್ರೀ ಎನ್.ಎಸ್.ಬೋಸರಾಜು:-** ಸನ್ಮಾನ್ಯ ಸಭಾಪತಿಯವರೇ, ಸಂಬಂಧಪಟ್ಟ ಮಾನ್ಯ ಸದಸ್ಯರು ಚರ್ಚೆಯನ್ನು ಪ್ರಾರಂಭ ಮಾಡಿದ್ದಾರೆ. ಉಳಿದವರು ನಾಳೆ ಮಾತನಾಡುತ್ತಾರೆ. ಈಗ ಸದ್ಯಕ್ಕೆ ಅಧಿಕಾರಿಗಳು ಗ್ಯಾಲರಿಯಲ್ಲಿದ್ದಾರೆ. ಅವರು ನೋಟ್ ಮಾಡಿಕೊಳ್ಳುತ್ತಿದ್ದಾರೆ. ಸಂಬಂಧಪಟ್ಟ ಮಂತ್ರಿಗಳು ಬಂದರೆ ಈಗ ಬರುತ್ತಾರೆ. ಇಲ್ಲದಿದ್ದರೇ ನಾಳೆ ಬಂದು ಉತ್ತರವನ್ನು ಕೊಡುತ್ತಾರೆ.

**ಶ್ರೀ ಕೇಶವ ಪ್ರಸಾದ್.ಎಸ್.(ವಿಧಾನಸಭಾ ಕ್ಷೇತ್ರ):-** ಸನ್ಮಾನ್ಯ ಸಭಾಪತಿಯವರೇ, ಮಂತ್ರಿಗಳಿಗೆ ವಿಧೆಯಕಗಳ ಅಂಗೀಕಾರವಾದರೇ ಮುಗಿಯಿತು. ಅವರ ವಿಧೇಯಕ ಅಂಗೀಕಾರವಾದ ಮೇಲೆ ಈ ಸದನ ನಡೆದರೆಷ್ಟು ಬಿಟ್ಟರೆಷ್ಟು? ಈ ಧೋರಣೆ ಸರಿಯಾದುದಲ್ಲ. ಇದು ಎರಡನೆಯ ದಿನ ನಮಗೆ ಊಟ ಮಿಸ್ ಆಗುತ್ತಿದೆ. ನಾವು ಎಂಟು ಗಂಟೆಯಾದ ಮೇಲೆ ಊಟ ಮಾಡುವವರಲ್ಲ. ಒಂದು ದಿನ ರಾತ್ರಿ 10 ಗಂಟೆ 15 ನಿಮಿಷಗಳವರೆಗೆ ಸದನ ನಡೆದು ಆ ದಿನವೂ ಊಟ ಮಿಸ್ ಆಗಿತ್ತು. ಈ ದಿನವೂ ಊಟ ಮಿಸ್ ಆಗಿದೆ.

**ಶ್ರೀ ಎನ್.ಎಸ್.ಬೋಸರಾಜು:-** ಸನ್ಮಾನ್ಯ ಸಭಾಪತಿಯವರೇ, ಕರ್ನಾಟಕ ವಿಧಾನ ಪರಿಷತ್ತಿನಲ್ಲಿ ಕಾರ್ಯಕಲಾಪಗಳ ಪಟ್ಟಿಯಲ್ಲಿ ಲಿಸ್ಟ್ ಆಗಿರುವ ವಿಷಯಗಳ ಬಗ್ಗೆ ಚರ್ಚೆ ಆಗಿದೆ.

(ಮುಂದುವರಿದಿದೆ)

(996) 18.12.2024 9.40 ಪಿಕೆ:ಬಿಎನ್ಎಸ್ (ವೈಸ್ ಛೇರ್ಮನ್‌ರವರ ಉಪಸ್ಥಿತಿ)

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು);-** ಮಾನ್ಯ ಸಭಾಪತಿಗಳೆ, ಪ್ರತಿ ದಿನ ಅಜೆಂಡಾದಲ್ಲಿ ಏನೇನು ವಿಷಯಗಳು ಬರುತ್ತಿದ್ದವೋ ಅವೆಲ್ಲವನ್ನೂ ಸಮಯಕ್ಕೆ ತಕ್ಕಂತೆ ಮುಗಿಸಿದ್ದೇವೆ. ಸಂಬಂಧಪಟ್ಟ ಸಚಿವರು ಸದನದಲ್ಲಿದ್ದು ಅವೆಲ್ಲಕ್ಕೂ ಉತ್ತರಗಳನ್ನು ಕೊಟ್ಟಿದ್ದಾರೆ.

**ಶ್ರೀಮತಿ ಭಾರತಿ ಶೆಟ್ಟಿ:-** ಮಾನ್ಯ ಸಭಾಪತಿಗಳೆ, ಈಗ ಮಾತನಾಡುತ್ತಿರುವುದು ಮಂತ್ರಿಗಳಿಗೆ ಸಂಬಂಧಪಟ್ಟಿದ್ದಲ್ಲವೇ?

**ಶ್ರೀ ಎನ್.ಎಸ್.ಬೋಸರಾಜು:-** ಈಗ ವಿಷಯವನ್ನು ಮಾತನಾಡಲಿ. ಅದಕ್ಕೆ ಸಂಬಂಧಪಟ್ಟಂತೆ ಸಚಿವರಿಂದ ಉತ್ತರ ಕೊಡಿಸುತ್ತೇವೆ.

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಗಳೆ, ಈ ವಿಚಾರದಲ್ಲಿ ಚರ್ಚೆ ಆಗುವಾಗ ಎಲ್ಲರೂ ಉಪಸ್ಥಿತರಿದ್ದಿದ್ದರೆ ಒಳ್ಳೆದಿತ್ತು. ಈ ವಿಷಯವನ್ನು ಗಂಭೀರವಾಗಿ ತೆಗೆದುಕೊಳ್ಳಬೇಕು ಎನ್ನುವುದು ನನ್ನ ಅಭಿಪ್ರಾಯವಾಗಿದೆ. ಈಗ ಸಮಯ ರಾತ್ರಿ 9.45 ಗಂಟೆ ಆಗಿದೆ. ಮಾನ್ಯ ಉಮಾಶ್ರೀಯವರೂ ಸಹ ಈ ವಿಚಾರವಾಗಿ ಮಾತನಾಡುವವರಿದ್ದರು. ಹಿಂದೆ ಅವರು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಮಂತ್ರಿಯಾಗಿದ್ದರು. ನಾವು ಕಳೆದ ಬಾರಿ ಮಾತನಾಡಬೇಕಾದರೆ ಈ ವಿಚಾರವಾಗಿ ಬೆಳಕು ಚೆಲ್ಲಿದ್ದೆವು. ಈ ವಿಚಾರದಲ್ಲಿ ರಾಜಕಾರಣವನ್ನು ಬದಿಗಿಟ್ಟು, ಮಕ್ಕಳ ರಕ್ಷಣೆ ಬಗ್ಗೆ ಏನು ಮಾಡಬಹುದು ಎಂದು ಪಕ್ಷಾತೀತವಾಗಿ ಮಾತನಾಡಿದಾಗ ಅನೇಕ ಒಳ್ಳೆಯ ವಿಚಾರಗಳು ಈ ಸದನದ ಮುಂದೆ ಬರುವುದಕ್ಕೆ ಸಾಧ್ಯತೆ ಇದೆ. ಎಲ್ಲೋ ಒಂದು ಕಡೆ ಮಂತ್ರಿಗಳು, ಸರ್ಕಾರ ಒಂದು ಕನ್‌ಕ್ಲೂಷನ್‌ಗೆ ಬರುವುದಕ್ಕೆ ಅನುಕೂಲವಾಗುತ್ತದೆ. POCSO (Protection of Children from Sexual Offences) ಕಾಯಿದೆಗೆ ಸಂಬಂಧಪಟ್ಟಂತೆ ನಾವು ಶಾಲಾ-ಕಾಲೇಜುಗಳ ಮಕ್ಕಳಿಗೆ ತಿಳಿ ಹೇಳಿದ್ದೇವೆಯೇ? ಇಂತಹ ರಕ್ಷಣೆ ನಿಮಗಿದೆ, ನಿನ್ನ ಕೈಯನ್ನು ಎಳೆದರೆ, ಮೈ ಮುಟ್ಟಿದರೆ ಅದು ಇಂತಹ ಕಾನೂನಿನ ವ್ಯಾಪ್ತಿಗೆ ಬರುತ್ತದೆ ಎಂದು ನಾವು ಅವರಿಗೆ ಹೇಳಲಿಲ್ಲ. ಒಂದು ವೇಳೆ ಅವರ ಮೇಲೆ ಕೇಸ್ ಆದರೆ, ಅದನ್ನು ತಪ್ಪಿಸಿ, ಕೇಸ್ ಮಾಡಬೇಡಿ ನಮ್ಮ ಸಂಸ್ಥೆಯ ಹೆಸರು ಹಾಳಾಗುತ್ತದೆ ಎಂದು ಹೇಳುವವರು ಬಹಳಷ್ಟು ಜನ ಇಲ್ಲವೇ? ಮಕ್ಕಳಿಗೆ ರಕ್ಷಣೆ ಮಾಡುವುದಕ್ಕೆ ನಾವು ಕಾನೂನು ತಂದರೆ ಅದೂ ಕೂಡ ಪ್ರಯೋಜನವಾಗುವುದಕ್ಕೆ ಬಿಡುತ್ತಿಲ್ಲ. ಇವತ್ತು, ಶಾಲೆಯ ಕಾಂಪೌಂಡ್‌ನಿಂದ 200 ಮೀಟರ್ ಒಳಗೆ ನಿಷೇದಿತ ವಸ್ತುಗಳನ್ನು ಮಾರಬಾರದು ಎನ್ನುವ ನಿಯಮ ಇದೆ. ಆದರೆ ಇವತ್ತು ಕೆಲವು ಕಡೆ ಶಾಲೆ ಗ್ರೌಂಡ್ ಫ್ಲೋರ್‌ನಲ್ಲಿದ್ದರೆ, ಮೊದಲನೆ ಮಹಡಿಯಲ್ಲಿ ಬಾರ್ & ರೆಸ್ಟೋರೆಂಟ್ ಇವೆ. ನಾವು ಚಿಕ್ಕವರಿದ್ದಾಗ, 18 ವರ್ಷದಿಂದ ಕೆಳಗಿರುವವರಿಗೆ ಬಾರ್ & ರೆಸ್ಟೋರೆಂಟ್‌ನಲ್ಲಿ ಪ್ರವೇಶವಿಲ್ಲ ಎಂದು ಫಲಕ ಹಾಕುತ್ತಿದ್ದುದನ್ನು ನೋಡಿದ್ದೇವೆ.

**ವೈಸ್ ಛೇರ್ಮನ್:-** ಮಾನ್ಯ ಸದಸ್ಯರೇ, ಕೆಳಗಡೆ ಶಾಲೆ, ಮೇಲೆ ಬಾರ್ & ರೆಸ್ಟೋರೆಂಟ್ ಇರುತ್ತದೆ ಎಂದು ಹೇಳುವುದಾದರೆ ಅದು ಎಲ್ಲಿದೆ ಎನ್ನುವುದನ್ನು ಹೇಳಬೇಕಾಗುತ್ತದೆ. ಸದನದಿಂದ ಸರಿಯಾದ ಸಂದೇಶ ಹೋಗಬೇಕು.

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಗಳೆ, ಅನೇಕ ಕಡೆಗಳಲ್ಲಿ ಈ ರೀತಿ ಇದೆ.

**ವೈಸ್ ಛೇರ್ಮನ್:-** ನಮಗೆ ಗೊತ್ತಿರುವ ಮಟ್ಟಿಗೆ ಶಾಲೆಯಿಂದ 500 ಮೀಟರ್ ದೂರದಲ್ಲಿ ಬಾರ್ & ರೆಸ್ಟೋರೆಂಟ್ ಇರಬೇಕು ಎನ್ನುವ ಕಾನೂನು ಇದೆ. ಅದೇರೀತಿ ನಡೆಯುತ್ತಿದೆ.

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಗಳೆ, ಎಷ್ಟೋ ಟ್ಯುಟೋರಿಯಲ್‌ಗಳ ಹತ್ತಿರವೇ ಈ ರೀತಿಯ ಬಾರ್ & ರೆಸ್ಟೋರೆಂಟ್ ಇರುವ ಉದಾಹರಣೆಗಳಿವೆ.

**ವೈಸ್ ಛೇರ್ಮನ್:-** ಟ್ಯುಟೋರಿಯಲ್‌ಗಳೇ ಬೇರೆ ಶಾಲೆಯೇ ಬೇರೆ. ಶಾಲೆಗಳಿಗೆ ಅನುಮತಿಯನ್ನು ಕೊಡುವಾಗ ಸರ್ಕಾರ ನೀತಿ ನಿಯಮಗಳ ಪ್ರಕಾರವೇ ಕೊಡುತ್ತದೆ. ಟ್ಯುಟೋರಿಯಲ್‌ಗಳನ್ನು ನಡೆಸುವವರ ವಿಷಯ ಬಂದಾಗ ಅದು ಸಂಬಂಧ ಪಡುವುದಿಲ್ಲ.

**ಶ್ರೀ ಐವನ್ ಡಿ'ಸೋಜಾ:-** ಟ್ಯುಟೋರಿಯಲ್‌ಗಳೂ ಕೂಡ ಶಿಕ್ಷಣ ಸಂಸ್ಥೆಗಳಾಗಿರುತ್ತವೆ. ಈ ರೀತಿಯ ಅನೇಕ ಟ್ಯುಟೋರಿಯಲ್‌ಗಳು ನಡೆಯುತ್ತಿವೆ.

**ವೈಸ್ ಛೇರ್ಮನ್:-** ನೀವು ಟ್ಯುಟೋರಿಯಲ್ ಬಗ್ಗೆ ಹೇಳುತ್ತಿದ್ದೀರಿ, ಆದರೆ ಶಾಲಾ-ಕಾಲೇಜುಗಳಿಗೆ ಸಂಬಂಧಪಟ್ಟಂತೆ ಹೇಳಿ. ದಯವಿಟ್ಟು ಇದನ್ನು ಕರೆಕ್ಟ್ ಮಾಡಿಕೊಳ್ಳಬೇಕು.

**ಶ್ರೀ ಐವನ್ ಡಿ'ಸೋಜಾ:-** ನಾನು ಮಕ್ಕಳ ಬಗ್ಗೆ ಮಾತನಾಡುತ್ತಿದ್ದೇನೆ. ಮಕ್ಕಳು ಎಲ್ಲಿ ಕಲಿಯುತ್ತಾರೋ ಅದು ಶಿಕ್ಷಣ ಸಂಸ್ಥೆಯೇ ಆಗಿರುತ್ತದೆ. ಶಿಕ್ಷಣ ಸಂಸ್ಥೆ ಎನ್ನುವುದಕ್ಕೆ ಬೇರೆ ಅರ್ಥ ಇದೆಯೇ? ಶಿಕ್ಷಣ ಪಡಯುವಂತಹ ಯಾವುದೇ ಜಾಗ ಶಿಕ್ಷಣ ಸಂಸ್ಥೆಯಾಗಿರುತ್ತದೆ. In respect of recognition, ತಾವು ಹೇಳಿದ್ದು ಸರಿಯಿದೆ. ಸರ್ಕಾರದ recognition ಎಂದು ಬರುವಾಗ ಇಷ್ಟು ಮೀಟರ್ ದೂರದಲ್ಲಿ ಇರಬೇಕು ಎನ್ನುವ ಕಾನೂನು ಇದೆ. ಅದನ್ನೂ ಉಲ್ಲಂಘನೆ ಮಾಡುತ್ತಾರೆ. ರಸ್ತೆ ಆಚೆ ಬದಿ-ಈಚೆ ಬದಿ, ಮಧ್ಯದಲ್ಲಿ ಒಂದು ಡಿವೈಡರ್ ಇದ್ದರೆ, ಆ ಡಿವೈಡರ್‌ನಿಂದ 500 ಮೀಟರ್ ದೂರ ಇರಬೇಕು ಎಂದು ಕಾಲೇಜುಗಳ ಎದುರಿಗೆಯೇ ನಿಷೇದಿತ ಅಂಗಡಿಗಳು ಇರುವುದೂ ಇದೆ. ಆ ರೀತಿ ನನ್ನ ಜಿಲ್ಲೆಯಲ್ಲಿ ಎಷ್ಟೋ ಕಡೆಗಳಲ್ಲಿ ಇದೆ. ಇಂಥದ್ದನ್ನು ನಾನು ಸದನದ ಗಮನಕ್ಕೆ ತರುತ್ತಿದ್ದೇನೆ. ಮಕ್ಕಳ ರಕ್ಷಣೆ ಮಾಡಲು ಅನೇಕ ಎನ್‌ಜಿಓಗಳು ಕಾರ್ಯನಿರತವಾಗಿವೆ. ಮಕ್ಕಳಿಗೆ ಆಗುವ ತೊಂದರೆಗಳ ಬಗ್ಗೆ ಜಾಗೃತಿ ಮೂಡಿಸುತ್ತಿದ್ದಾರೆ. ಮಾನ್ಯ ಸಭಾಪತಿಗಳೆ, ಅನೇಕ ಕಡೆಗಳಲ್ಲಿ ಡ್ರೈವಿಂಗ್ ಲೈಸೆನ್ಸ್ ಇಲ್ಲದೇ, ಮೈನರ್ ಆಗಿರುವಂಥವರು ವೀಲಿಂಗ್ ಮಾಡುತ್ತಾರೆ. ಆ ರೀತಿ ವಾಹನ ಚಾಲನೆ ಮಾಡಿ ತಾವೂ ತೊಂದರೆಗೆ ಒಳಪಡುತ್ತಾರೆ ಮತ್ತು ರಸ್ತೆಯಲ್ಲಿ ಬೆಳಗ್ಗೆ ನಡೆದುಕೊಂಡು ಹೋಗುತ್ತಿದ್ದವರೂ ಸಹ ಅಪಘಾತಕ್ಕೆ ಒಳಗಾದ, ಜೀವಬಲಿಯಾದ ಉದಾಹರಣೆಗಳು ಬಹಳಷ್ಟಿವೆ. ಇಂಥದ್ದು ಇವತ್ತು ನಮ್ಮ ಕಣ್ಣಿನ ಮುಂದೆ ನಡೆಯುತ್ತಿವೆ. ಇಂಥದ್ದನ್ನು ತಡೆಗಟ್ಟಲು ಮಕ್ಕಳಿಗೆ ಯಾವರೀತಿ ತಿಳುವಳಿಕೆ ಕೊಡಬೇಕು, ಹೇಗೆ ಅವರಲ್ಲಿ ಜಾಗೃತಿ ಮೂಡಿಸಬೇಕು ಎನ್ನುವುದರ ಬಗ್ಗೆ ಆಲೋಚನೆ ಮಾಡಬೇಕಿದೆ. ನಾವು ಚಿಕ್ಕವರಾಗಿದ್ದಾಗ, ಶಾಲಾ-ಕಾಲೇಜು ದಿನಗಳಲ್ಲಿ ಮಕ್ಕಳು ಗಲಾಟೆ ಮಾಡುವುದು, ಮಕ್ಕಳು ಶಾಲೆಗಳಲ್ಲಿ ಹೊಡೆದಾಡಿದರು ಎನ್ನುವ ವಿಚಾರ ಪತ್ರಿಕೆಯಲ್ಲಿ ಬರುತ್ತಿತ್ತು. ಆದರೆ ಇವತ್ತು, ಗಾಂಜಾ ಸೇವನೆ ಅಥವಾ ಮಾದಕ ದ್ರವ್ಯ ಸೇವನೆ, ಸರಬರಾಜು, ಅಷ್ಟು ಜನರ ಬಂಧನ, ಇಷ್ಟು ಜನರ ಬಂಧನ ಎನ್ನುವ ವಿಚಾರಗಳು ಬರುತ್ತವೆ. ಎಷ್ಟೋ ಕಾಲೇಜಿನ ಮಕ್ಕಳು ಇಂಥದ್ದನ್ನು ಸೇವನೆ ಮಾಡಿದ್ದರಿಂದ ಅವರ ಮೇಲೆ ದುಷ್ಪರಿಣಾವಾಗಿವೆ, ಅವರ ಮೇಲೆ ಕೇಸ್ ರಿಜಿಸ್ಟರ್ ಆಗಿದೆ ಎನ್ನುವ ವಿಚಾರ ಬರುತ್ತದೆ. ಅನೇಕ ಕಡೆ ಇಂತಹ ವಿಚಾರಗಳು ಗೊತ್ತಾಗಿ ಪೋಷಕರು depression ಗೆ ಒಳಗಾಗಿರುವಂತಹ ಪ್ರಕರಣಗಳಿವೆ. ಇದನ್ನು ಓಪನ್ ಆಗಿ ಮಾತನಾಡುವುದಿಲ್ಲ; ಹೇಳುವುದಿಲ್ಲ. ಇದು ಗೌರವದ ಪ್ರಶ್ನೆ ಎಂದು ಮುಚ್ಚಿ ಇಡುತ್ತಾರೆ. ಈ ರೀತಿ ಮುಚ್ಚಿಡುವುದರಿಂದ ಇಂತಹ ಕ್ರೈಮ್‌ಗಳು ಜಾಸ್ತಿಯಾಗುತ್ತಿವೆ ಎನ್ನುವುದು ನನ್ನ ಅಭಿಪ್ರಾಯವಾಗಿದೆ. ಇದರ

ಬಗ್ಗೆ ನಾವು ಪೋಷಕರಲ್ಲಿ ಜಾಗೃತಿ ಮೂಡಿಸುವುದು ಇಂದಿನ ಅವಶ್ಯಕತೆಯಾಗಿದೆ. ಹಿಂದೆ, ಬಾರ್‌ಗಳಿಗೆ ಹೋಗುವಂಥದ್ದು, ಮಾದಕ ದ್ರವ್ಯಗಳನ್ನು ತೆಗೆದುಕೊಳ್ಳುವಂಥದ್ದು ಜಾಸ್ತಿ ಇತ್ತು. ಆದರೆ ಇವತ್ತು ಅಂತಹ ಮಕ್ಕಳು ಕಾಣಲಿಕ್ಕೆ ಸಿಗುವುದಿಲ್ಲ. ಇನ್ನೂ ಬೇರೆ ಏನೇನೋ ರೀತಿಯಲ್ಲಿ ಅವರ ವರ್ತನೆಗಳು ಇರುತ್ತವೆ. ಇವತ್ತು ಕ್ರೈಮ್ ದರವನ್ನು ನೋಡಿದರೆ, ಅನೇಕ ಕೇಸ್‌ಗಳಲ್ಲಿ ಭಾಗಿಯಾದ ಮಕ್ಕಳು ಅಥವಾ ಹದಿಹರೆಯದವರನ್ನು ಟೆಸ್ಟ್ ಮಾಡಿದರೆ ಅವರಲ್ಲಿ ಶೇಕಡ 50 ರಷ್ಟು ಮಕ್ಕಳು ಮಾದಕ ವಸ್ತುಗಳ ಸೇವನೆಯ ಕಾರಣದಿಂದಲೇ ಗಲಾಟೆ ಮಾಡುವುದಕ್ಕೆ ಕಾರಣ ಎನ್ನುವುದು ಗೊತ್ತಾಗುತ್ತದೆ. ಸರ್ಕಾರ ಕೂಡ ಇವತ್ತು ಕಣ್ಣು ತೆರೆಯುವ ಅವಶ್ಯಕತೆ ಇದೆ, ಚಿಂತನೆ ಮಾಡುವ ಅವಶ್ಯಕತೆ ಇದೆ. ಹಿಂದೆ, ಮಕ್ಕಳಲ್ಲಿ ಅಪೌಷ್ಟಿಕತೆ ಇರುತ್ತಿತ್ತು, ಕೈ-ಕಾಲು ಊನತ್ವ, ಸರಿಯಾಗಿ ನಡೆಯದೇ ಇರುವಂತಹ ಸ್ಥಿತಿ ಇತ್ತು. ಆದರೆ ಇವತ್ತು ಅಂತಹ ಪರಿಸ್ಥಿತಿ ಇಲ್ಲ. ನಾನು ಇತ್ತೀಚೆಗೆ ಒಂದು ಶಾಲೆಗೆ ಹೋಗಿದ್ದೆ. ಮಧ್ಯಾಹ್ನದ ಹೊತ್ತು ಮಕ್ಕಳು ನೆಲದ ಮೇಲೆ ಕುಳಿತುಕೊಂಡು ಊಟ ಮಾಡುತ್ತಿದ್ದರು. ಊಟದಲ್ಲಿ ಒಂದು ಮೊಟ್ಟೆ, ಮೊಟ್ಟೆ ತಿನ್ನದೇ ಇರುವವರಿಗೆ ಒಂದು ಬಾಳೆ ಹಣ್ಣು, ಮಜ್ಜಿಗೆ, ಹಾಲು ಇಷ್ಟೆಲ್ಲವನ್ನೂ ಕೊಡುವಂತಹ ಸೌಕರ್ಯಗಳಿವೆ. ಈ ಸೌಕರ್ಯಗಳನ್ನು ಮಕ್ಕಳಿಗೆ ಕೊಟ್ಟಿರುವುದರಿಂದ ಅವರ ಜ್ಞಾನವೃದ್ಧಿಯಾಗುವುದಕ್ಕೆ ಕಾರಣವಾಗಿದೆ. ಹಿಂದೆ ಮಕ್ಕಳಲ್ಲಿ ಇದ್ದ ಅಪೌಷ್ಟಿಕತೆ ಪ್ರಮೇಯ ಇಂದಿಲ್ಲ. ಈಗ ನಾವು ಬೇಕಾದಷ್ಟು ಕೊಡುತ್ತೇವೆ. ಆದರೆ ಮಕ್ಕಳ ರಕ್ಷಣೆ ಮಾಡುವುದರಲ್ಲಿ ನಾವು ಸ್ವಲ್ಪ ಹಿಂದೆ ಬಿದ್ದಿದ್ದೇವೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಶಾಲೆಗಳಲ್ಲಿ ಕಲಿಯುವಂತಹ ಇಂದಿನ ಮಕ್ಕಳು ಎದುರಿಸುತ್ತಿರುವ ಸಮಸ್ಯೆಗೆ ಪರಿಹಾರ ಏನು ಎಂದು ಕೇಳಬಹುದು. ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ಸೋಶಿಯಲ್ ವರ್ಕರನ್ನು ಪ್ರತಿ ಶಾಲೆಗೆ ನೇಮಕ ಮಾಡಬೇಕು ಎನ್ನುವ ನಿಯಮ ಇದೆ. ಅದೇರೀತಿ ರಾಜ್ಯ ಶಿಕ್ಷಣ ನೀತಿಯಲ್ಲಿ ಕೂಡ ನಾವು ಸೋಶಿಯಲ್ ವರ್ಕರ್‌ಗಳನ್ನು ಶಾಲೆಗಳಲ್ಲಿ ನೇಮಕ ಮಾಡಬೇಕು. ಶಿಕ್ಷಕರರು ಹದಿಹರೆಯದ ಮಕ್ಕಳೊಂದಿಗೆ ಹೇಗೆ ವ್ಯವಹಾರ ಮಾಡಬೇಕು ಅಥವಾ ಅವರಿಗೆ ಹೇಗೆ ತಿಳಿ ಹೇಳಬೇಕು ಎಂದು ಅವರಿಗೂ ತರಬೇತಿ ಕೊಡಬೇಕಿದೆ. ಆದರೆ ಈಗಿನ ಶಿಕ್ಷಕರು ಗುತ್ತಿಗೆ ಆಧಾರದ ಮೇಲೆ ಕೆಲಸ ಮಾಡುತ್ತಿರುತ್ತಾರೆ; ತಮ್ಮ ಅವಧಿ ಮುಗಿದ ಮೇಲೆ ಅಲ್ಲಿಂದ ತೆರಳುತ್ತಾರೆ. ಅವರು ವಿದ್ಯಾರ್ಥಿಗಳ ಜೊತೆ ಮಾತನಾಡುವುದಿಲ್ಲ. ಅವರ ಸಮಸ್ಯೆಗಳನ್ನು ಕೇಳುವುದಿಲ್ಲ, ಅವರ ತೊಂದರೆ ಏನು ಎನ್ನುವುದರ ಬಗ್ಗೆ ವಿಚಾರಿಸುವುದಿಲ್ಲ. ಹಾಗಾಗಿ ನಾವು ಶಿಕ್ಷಕರಿಗೆ ಈ ನಿಟ್ಟಿನಲ್ಲಿ ತರಬೇತಿ ಕೊಡುವ ಅವಶ್ಯಕತೆ ಇದೆ. ಮಾನ್ಯ ಸಭಾಪತಿಗಳೆ, ನಾನು ಈಗಾಗಲೇ POCSO ಕಾನೂನಿನ ಬಗ್ಗೆ ಮಾತನಾಡಿದೆ. ಪ್ರತಿ ಪಠ್ಯ ಪುಸ್ತಕದಲ್ಲಿ ಈ ಕುರಿತು ಮಾಹಿತಿ ಇರಬೇಕು, ಒಂದು ಪಾಠ ಇರಬೇಕು. ಏನು ಮಾಡಿದರೆ ಏನಾಗುತ್ತದೆ ಎನ್ನುವ ಅರಿವು ಮೂಡಿಸಬೇಕು. POCSO ಕಾನೂನಿನ ಅಡಿಯಲ್ಲಿ, ವಿದ್ಯಾರ್ಥಿಗಳಿಗೆ ತೊಂದರೆ ಆದಾಗ ಆ ಕುರಿತು ತಮ್ಮ ಮುಖ್ಯ ಶಿಕ್ಷಕರ ಬಳಿ ಅದನ್ನು ಯಾವರೀತಿ ಅಪ್ರೋಚ್ ಮಾಡಬಹುದು ಎನ್ನುವ ಅಂಶ ಕೂಡ ಇರುತ್ತದೆ. ಇಂಥದ್ದನ್ನು ಪಠ್ಯ ಪುಸ್ತಕದಲ್ಲಿ ಅಳವಡಿಸುವುದಕ್ಕೆ ಆಗುತ್ತದೆಯೇ ಎನ್ನುವುದರ ಬಗ್ಗೆ ನಾವು ಆಲೋಚನೆ ಮಾಡುವ ಅವಶ್ಯಕತೆ ಇದೆ. ಅದೇರೀತಿ ಮಕ್ಕಳಿಗೆ ವೃತ್ತಿ ಮಾರ್ಗದರ್ಶನದ ಬಗ್ಗೆ career guidance ಕೊಡುವ ಕೆಲಸ ಮಾಡಬೇಕು.

(ಮುಂದು)

(997)18-12-2024 9.50 ಡಿಎಸ್-ಬಿಎನ್‌ಎಸ್

**ಶ್ರೀ ಐವನ್ ಡಿ'ಸೋಜಾ (ಮುಂದು):**

ಅವರು ಹದಿಹರೆಯಕ್ಕೆ ಬಂದಾಗ ಮುಂದೆ ಏನಾಗಬೇಕು, ಎಲ್ಲಾ ಮಕ್ಕಳು ಸ್ಥಿತಿವಂಥರಾಗಿರುವುದಿಲ್ಲ. ಬಹಳಷ್ಟು ಬಡ ಮಕ್ಕಳಾಗಿರುತ್ತಾರೆ. ಅವರಿಗೆ ವೃತ್ತಿ ಮಾರ್ಗದರ್ಶನ ಮಾಡುವಂಥದ್ದು ಅವಶ್ಯಕತೆ ಇದೆ. ಅದೇ ರೀತಿ ನಾನು ಅಂಕಿ-ಅಂಶಗಳನ್ನು ಕೊಡುವುದಕ್ಕೆ ಬಯಸುತ್ತೇನೆ. 18 ವರ್ಷದ ಮಕ್ಕಳು ಕರ್ನಾಟಕ ರಾಜ್ಯದಲ್ಲಿ ಎಷ್ಟಿದ್ದಾರೆ ಎಂದರೆ, 2011ರ ಜನಗಣತಿ ಪ್ರಕಾರ 6.1 ಕೋಟಿ ಜನಸಂಖ್ಯೆ ಇದೆ. 2.34 ಕೋಟಿ, ಅಂದರೆ 2 ಕೋಟಿ 34 ಲಕ್ಷ ಜನ 18 ವರ್ಷದೊಳಗೆ ಇದ್ದಾರೆ. ಅಂದರೆ, ಒಟ್ಟಾರೆ ಜನಸಂಖ್ಯೆಯಲ್ಲಿ ಶೇಕಡ 38.3 ರಷ್ಟು ಇದ್ದಾರೆ. 2020-21ರ ಜನಗಣತಿ ಪ್ರಕಾರ 6 ಕೋಟಿ 74 ಲಕ್ಷ ಜನಸಂಖ್ಯೆಯಲ್ಲಿ 1 ಕೋಟಿ 80 ಲಕ್ಷ ಮಕ್ಕಳು 18 ವರ್ಷದೊಳಗೆ ಇದ್ದಾರೆ. ಶೇಕಡ 26.8 ರಷ್ಟು ಇದ್ದಾರೆ. ಅಂದರೆ, ಮಕ್ಕಳ ಸಂಖ್ಯೆ ಕಡಿಮೆಯಾಗಿದೆ ಎಂದು ಹೇಳುವುದಕ್ಕೆ ಬಯಸುತ್ತಿದ್ದೇನೆ. 1979ರಲ್ಲಿ 18 ವರ್ಷದೊಳಗಿನ ಮಕ್ಕಳು ಶೇಕಡ 48.8 ರಷ್ಟು ಇತ್ತು. ತದನಂತರ 2011 ರಲ್ಲಿ ಶೇಕಡ 38 ರಷ್ಟು ಆಯಿತು. 2020-21 ರಲ್ಲಿ ಅದು ಶೇಕಡ 26 ರಷ್ಟು ಆಯಿತು. National Family Health Survey (NFHS) report ಪ್ರಕಾರ ಮಕ್ಕಳ ಸಂಖ್ಯೆ ಈಗ ಕಡಿಮೆಯಾಗುತ್ತಿದೆ. ಒಟ್ಟು fertility rate ಏನಿದೆ, 1950ರಲ್ಲಿ ಒಂದು ತಾಯಿ ಮಕ್ಕಳನ್ನು ಎಷ್ಟು ಪಡೆಯುತ್ತಿದ್ದರು ಎಂದರೆ ಶೇಕಡ 5.73 ರಷ್ಟು ಇತ್ತು. 2023-24ಕ್ಕೆ ಬಂದಾಗ ಅದು ಶೇಕಡ 1.96 ಆಗಿದೆ. ಅಂದರೆ Total Fertility Rate (TFR) ಕೂಡ ಕಡಿಮೆಯಾಗಿದೆ. ಇದೊಂದು ಆರೋಗ್ಯಕರ ಬೆಳವಣಿಗೆಯಲ್ಲ ಎಂದು ಇತ್ತೀಚಿನ ಸರ್ವೆಯಲ್ಲಿ ಹೇಳಿದ್ದಾರೆ. ಅದೇ ರೀತಿ ಕರ್ನಾಟಕದಲ್ಲಿ actually ಆರೋಗ್ಯಕರ TFR ಎಷ್ಟಿರಬೇಕೆಂದರೆ ಶೇಕಡ 2.1 ರಷ್ಟು ಇರಬೇಕು ಎಂದು NFHS report ಹೇಳುತ್ತಿದೆ. ಒಂದು ತಾಯಿ ಎಷ್ಟು ಮಕ್ಕಳನ್ನು ಹೆರಬಹುದು ಎಂದು ಹೇಳುವಂಥದ್ದು. 2021-22ರಲ್ಲಿ ಅಂದಾಜು ಕರ್ನಾಟಕದಲ್ಲಿ ಶೇಕಡ 1.7 ರಷ್ಟು TFR ಇದೆ. ಬಿಹಾರ್‌ನಲ್ಲಿ ಶೇಕಡ 2.98 ರಷ್ಟಿದೆ. ಉತ್ತರ ಪ್ರದೇಶದಲ್ಲಿ ಶೇಕಡ 2.35 ರಷ್ಟಿದೆ. ಅಂದರೆ, ನಮ್ಮ ರಾಜ್ಯದಲ್ಲಿ ಮಕ್ಕಳ ಸಂಖ್ಯೆ ಕಡಿಮೆಯಾಗುತ್ತಿದೆ.

**ಶ್ರೀಮತಿ ಹೇಮಲತಾ ನಾಯಕ್:-** ಮಾನ್ಯ ಸಭಾಪತಿಯವರೇ, ಗಂಡು ಮಕ್ಕಳ ಸಂಖ್ಯೆ ಜಾಸ್ತಿಯಾಗುತ್ತಿದೆ. ಗಂಡು ಬೇಕು ಎಂದು ಹೆಣ್ಣುಮಕ್ಕಳನ್ನು ಅಬಾರ್ಶನ್ ಮಾಡುವಂತಹ ಪ್ರಕರಣಗಳು ಜಾಸ್ತಿಯಾಗುತ್ತಿವೆ. ಹೆಣ್ಣು ಮಗು ಬೇಡ ಗಂಡು ಮಗು ಬೇಕು ಎಂದು ಗಂಡು ಮಕ್ಕಳ ಸಂಖ್ಯೆ ಜಾಸ್ತಿಯಾಗುತ್ತಿದೆ. ಹೆಣ್ಣುಮಕ್ಕಳ ಸಂಖ್ಯೆ ಕಡಿಮೆಯಾಗುತ್ತಿದೆ, ಇದು ಗಂಭೀರವಾಗಿರುವಂಥದ್ದು. ನಮ್ಮ ಭಾಗದಲ್ಲಿ ಈ ರೀತಿಯಾಗುತ್ತಿದೆ ಎಂದು ವರದಿ ಹೇಳುತ್ತಿದೆ.

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೇ, ಲೈಂಗಿಕ ಸಂಪರ್ಕ ಎಂದರೆ ಏನು, ನಾವು ಸೆಕ್ಸ್ ಬಗ್ಗೆ ಮಾತನಾಡದೆ ಮುಚ್ಚಿಡುವುದಕ್ಕೆ ಪ್ರಯತ್ನ ಮಾಡುತ್ತೇವೆ. ಅದರ ಬಗ್ಗೆ ಹೇಳುವುದಿಲ್ಲ. ಶಾಲೆಗಳಲ್ಲಿ ಓಪನ್ ಆಗಿ ಮಾತನಾಡುವುದಿಲ್ಲ. ಗುಟ್ಟಾಗಿ ಇಟ್ಟರೆ ಅದು ಒಂದು ದಿವಸ ಮರವಾಗಿ ಬೆಳೆಯುತ್ತದೆ ಎಂದು ನಾನು ಹೇಳುವುದಕ್ಕೆ ಬಯಸುತ್ತಿದ್ದೇನೆ. ಹಾಗಾಗಿ ಇದರ ಬಗ್ಗೆ ಕೂಡ ಶಾಲೆಗಳಲ್ಲಿ ಪಠ್ಯಪುಸ್ತಕಗಳಲ್ಲಿ ಅಳವಡಿಸಬೇಕಾಗುತ್ತದೆ. ನನ್ನ

ದೇಹವನ್ನು ನಾನು ಹೇಗೆ ಕಾಪಾಡಿಕೊಳ್ಳಬೇಕು, what is my duty in protecting myself? ಇದನ್ನು ಮಕ್ಕಳಿಗೆ ಹೇಳಿ ಕೊಡುವಂತಹ ಅವಶ್ಯಕತೆ ಇದೆ ಎಂದು ನಾನು ಹೇಳುವುದಕ್ಕೆ ಬಯಸುತ್ತಿದ್ದೇನೆ. ಅನೇಕ ಶಾಲೆಗಳಲ್ಲಿ ಮಕ್ಕಳ ರಕ್ಷಣೆ ಮತ್ತು ಅಭಿವೃದ್ಧಿಯಲ್ಲಿ ವಿವಿಧ ಕಾರಣಗಳಿಂದ ಎಷ್ಟೋ ಮಕ್ಕಳಿಗೆ ಅವರ ತಂದೆಯ ಹೆಸರು ತಿಳಿದಿರುವುದಿಲ್ಲ. ಇದು ವಾಸ್ತವ. ಎಲ್ಲಾ ರೀತಿಯ ಅರ್ಜಿಗಳಲ್ಲಿ ಶಿಕ್ಷಣ, ತರಬೇತಿ, ಉದ್ಯೋಗ ಇತ್ಯಾದಿಗಳಲ್ಲಿ ತಂದೆಯ ಹೆಸರು ಬರೆಯುವುದು ಕಡ್ಡಾಯವಲ್ಲ ಎಂದು ನಿರ್ದೇಶನ ನೀಡಬೇಕೆಂದು ನಾನು ಸರ್ಕಾರಕ್ಕೆ ಒತ್ತಾಯ ಮಾಡುತ್ತಿದ್ದೇನೆ. ಅನೇಕ ಕಡೆಗಳಲ್ಲಿ ಮಕ್ಕಳಿಗೆ ತಾಯಿ ತಂದೆಯ ಹೆಸರು ಹೇಳುವುದಿಲ್ಲ. ಯಾರಾದರು ಅರ್ಜಿ ಹಾಕಬೇಕೆಂದರೆ ತಂದೆಯ ಹೆಸರು ಭರ್ತಿ ಮಾಡದಿದ್ದರೆ ಆ ಅರ್ಜಿ ಮುಂದಕ್ಕೆ ಹೋಗುವುದಿಲ್ಲ.

**ಶ್ರೀ ಕೆ.ಎ.ತಿಪ್ಪೇಸ್ವಾಮಿ:-** ಮಾನ್ಯ ಸಭಾಪತಿಯವರೇ, ಅದನ್ನು ಕಡ್ಡಾಯ ಮಾಡುವುದಕ್ಕೆ ಬರುವುದಿಲ್ಲ. ತಾಯಿ ಹೆಸರು ಮುಖ್ಯ, ತಂದೆಯ ಹೆಸರನ್ನು optional ಮಾಡಬಹುದು. ತಾಯಿಯಾದವಳು ಇರಲಿ ಅಥವಾ ಬೇರೆ ಯಾರಾದರೂ ಕೂಡ ಮೆಜಾರಿಟಿ ಬಂದಂತಹ ಮಗು ತಂದೆಯ ಹೆಸರನ್ನು ಹೇಳಬೇಕು, ಹೇಳಬಾರದು ಎನ್ನತಕ್ಕಂಥದ್ದು, ಎಲ್ಲಾ ದಾಖಲೆಗಳಲ್ಲೂ ತಾಯಿಯ ಹೆಸರು ಕಡ್ಡಾಯವಿದೆ. ನನಗೆ ತಿಳಿದ ಮಟ್ಟಿಗೆ ಇದು optional ಇದೆ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಮಾನ್ಯ ತಿಪ್ಪೇಸ್ವಾಮಿಯವರು ಹೇಳಿರುವಂಥದ್ದು ನಿಜ. ಈಗ ಆನ್‌ಲೈನ್‌ನಲ್ಲಿ ಅರ್ಜಿ ಹಾಕುವುದಕ್ಕೆ ಹೋದಾಗ ತಾಯಿಯ ಹೆಸರು ಹಾಕಿದ ಮೇಲೆ ತಂದೆಯ ಹೆಸರು ಹಾಕಲಿಲ್ಲವೆಂದರೆ ಅದು ಅರ್ಜಿಯನ್ನೇ ತೆಗೆದುಕೊಳ್ಳುವುದಿಲ್ಲ. ಅದೊಂದು ಸಮಸ್ಯೆ ಇದೆ.

**ಶ್ರೀ ಐವನ್ ಡಿ'ಸೋಜಾ:-** ಮಾನ್ಯ ಸಭಾಪತಿಯವರೇ, ನಾನು ಆನ್‌ಲೈನ್ ನಲ್ಲಿ ಅರ್ಜಿಯನ್ನು ಭರ್ತಿ ಮಾಡುವುದಕ್ಕೆ ಹೋದರೆ ತಂದೆಯ ಹೆಸರನ್ನು ಹಾಕದಿದ್ದರೆ ಮುಂದಕ್ಕೆ ಹೋಗುವುದಿಲ್ಲ. ಅದು ವಿದ್ಯಾರ್ಥಿ ವೇತನ ಇರಬಹುದು, ಮಕ್ಕಳ ಬೇರೆ ಬೇರೆ ಅವಶ್ಯಕತೆಗಳಿಗೆ ತಂದೆಯ ಹೆಸರು ಕಡ್ಡಾಯವಲ್ಲ ಎಂದು ತೀರ್ಮಾನಕ್ಕೆ ಬಂದು ಅದನ್ನು ವಿತ್‌ಡ್ರಾ ಮಾಡಿಸುವುದಕ್ಕೆ ಸರ್ಕಾರ ಕ್ರಮ ತೆಗೆದುಕೊಳ್ಳಬೇಕೆಂದು ನಾನು ತಮ್ಮ ಮೂಲಕ ಸರ್ಕಾರಕ್ಕೆ ವಿನಂತಿ ಮಾಡುತ್ತೇನೆ. ಸೈಬರ್ ಶೋಷಣೆ, ಗ್ರಾಮೀಣ ಮತ್ತು ನಗರದಲ್ಲಿರುವ ಹದಿಹರೆಯದ ವಯಸ್ಕರು ಸಾಮಾಜಿಕ ಜಾಲತಾಣಗಳನ್ನು ಅತಿ ಹೆಚ್ಚಾಗಿ ಬಳಸುವುದರಿಂದ ಅದರಲ್ಲಿ ಮೋಸ, ತೊಂದರೆಗೆ ಒಳಗಾಗುತ್ತಿದ್ದಾರೆ. ಅವರ ರಕ್ಷಣೆಗಾಗಿ ಈ ನಿರ್ದಿಷ್ಟ ವಿಚಾರದ ಕುರಿತು ಅರಿವು ಮತ್ತು ಶಿಕ್ಷಣ ತುರ್ತಾಗಿ ನೀಡಬೇಕಾಗಿದೆ. ಇದರ ಬಗ್ಗೆ ಸರ್ಕಾರ ಕ್ರಮ ತೆಗೆದುಕೊಳ್ಳಬೇಕು. ಅಪಾಯಕಾರಿ ನಡವಳಿಕೆ ಸಾಮಾಜಿಕ ಜಾಲತಾಣಗಳಲ್ಲಿ ರೀಲ್ಸ್ ಹಾಕಲು ಹದಿಹರೆಯದವರು ಅನೇಕ ದುಸ್ಸಾಹಸಗಳಲ್ಲಿ ತೊಡಗುತ್ತಿದ್ದಾರೆ. ಕೆಲವೊಮ್ಮೆ ಇದರಿಂದ ಪ್ರಾಣಾಪಾಯವಾಗಿರುವ ಉದಾಹರಣೆಗಳಿವೆ. ನಾನು ಈಗಾಗಲೇ ಒಂದು ಉದಾಹರಣೆಯನ್ನು ಹೇಳಿದ್ದೇನೆ. ಸಾಮಾಜಿಕ ಜಾಲತಾಣಗಳಲ್ಲಿ ರೀಲ್ಸ್ ವೀಡಿಯೋ ಮಾಡಲು ಮಾರ್ಗಸೂಚಿಗಳನ್ನು ಸಿದ್ಧಪಡಿಸಬೇಕು. ಇದನ್ನು ಸಾಮಾಜಿಕ ಜಾಲತಾಣಗಳನ್ನು ನಿರ್ವಹಿಸುವವರ ಮೇಲೆ ಪ್ರಭಾವ ಬೀರಿ ನೀತಿ ನಿಯಮಗಳನ್ನು ಜಾರಿಗೊಳಿಸುವಂಥಾಗಬೇಕು. ಈಗ ಅಮೆಜಾನ್, ಇತ್ಯಾದಿಗಳಿವೆ. ಅವುಗಳ ಮೇಲೂ ಕೂಡ ನಿಯಂತ್ರಣವಿಡಬೇಕಾಗುತ್ತದೆ. ಯಾವುದು ನೋಡಬೇಕು, ಯಾವುದು

ನೋಡಬಾರದು ಎಂಬುದರ ಬಗ್ಗೆ ನಿಯಂತ್ರಣವನ್ನು ತರಬೇಕಾಗುತ್ತದೆ. ಹದಿವಯಸ್ಕರ ರಕ್ಷಣೆ ಮತ್ತು ಮಕ್ಕಳ ಸ್ಥಿತಿಯಿಂದಲೇ ಆರಂಭವಾಗಬೇಕು. ಎಲ್ಲಾ ಸಂಸ್ಥೆಗಳಲ್ಲಿ ಮಕ್ಕಳ ರಕ್ಷಣಾ ನೀತಿ ಜಾರಿಯಾಗಲೇಬೇಕು. ಅಂಗವಿಕಲತೆಯಿರುವ ಹದಿವಯಸ್ಕರಿಗೆ ಶಿಕ್ಷಣ ಮತ್ತು ಉದ್ಯೋಗಾವಕಾಶಗಳು, ದೈಹಿಕ, ಮಾನಸಿಕ ಅಂಗವಿಕಲತೆಯಿರುವ ಮಕ್ಕಳನ್ನು ಹೇಗೋ ಸಂಭಾಳಿಸಲು ಸಾಧ್ಯ. ಆದರೆ ಹದಿವಯಸ್ಕರಾಗುತ್ತಾ ಯೌವನದ ಹಂತಕ್ಕೆ ಬಂದಾಗ ಬದುಕು ಅಸಾಧ್ಯವಾಗುತ್ತದೆ. ಇದನ್ನು ಎದುರಿಸಲು ಅವರು ತಮ್ಮ ನಿರ್ವಹಣೆಯನ್ನು ತಾವೇ ಮಾಡಲಾಗುವಂತೆ ಸಹಾಯ ಒದಗಿಸುವ ವ್ಯವಸ್ಥೆಗಳು ಹೆಚ್ಚಾಗಬೇಕೆಂದು ನಾನು ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ. ಈ ಒಂದು ವಿಚಾರದಲ್ಲಿ ನಾನು ನನ್ನ ಕೆಲವು ವಿಚಾರಗಳನ್ನು ಸರ್ಕಾರದ ಗಮನಕ್ಕೆ ತಂದಿದ್ದೇನೆ. ಇದರ ಬಗ್ಗೆ ಬಹಳಷ್ಟು ಜನ ಮಾತನಾಡಬೇಕು ಮತ್ತು ಇದರ ಬಗ್ಗೆ ಒಳ್ಳೆಯ ವಿಚಾರಗಳನ್ನು ತರಬೇಕೆಂದು ಕೇಳಿಕೊಂಡು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸುತ್ತೇನೆ.

**ಶ್ರೀ ಡಿ.ಟಿ.ಶ್ರೀನಿವಾಸ್ (ಡಿ.ಟಿ.ಎಸ್.) (ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಕ್ಕಳ ಹಕ್ಕುಗಳ ಬಗ್ಗೆ ವಿಶೇಷ ಚರ್ಚೆಯನ್ನು ಮಾಡುತ್ತಿದ್ದೇವೆ.

**ವೈಸ್ ಛೇರ್ಮನ್:-** ಮಾನ್ಯ ಶ್ರೀನಿವಾಸ್‌ರವರೇ, ತಾವು ಈ ವಿಷಯದ ಬಗ್ಗೆ ಮಾತನಾಡುತ್ತಿದ್ದೀರಾ? ಈಗ ಶ್ರೀಮತಿ ಭಾರತಿ ಶೆಟ್ಟಿಯವರು ಮಾತನಾಡುತ್ತೇನೆಂದು ಕೇಳಿಕೊಂಡಿದ್ದಾರೆ. ಆಮೇಲೆ ನೀವು ಮಾತನಾಡಿ.

**ಶ್ರೀ ಡಿ.ಟಿ.ಶ್ರೀನಿವಾಸ್ (ಡಿ.ಟಿ.ಎಸ್.):-** ಮಾನ್ಯ ಸಭಾಪತಿಯವರೇ, ನಾನು ಈ ವಿಷಯದ ಬಗ್ಗೆ ಸಂಕ್ಷಿಪ್ತವಾಗಿ ಹೇಳಿ ಇವತ್ತು ಚರ್ಚೆ ಮಾಡುವುದಕ್ಕಾಗುತ್ತದೆಯೋ ಇಲ್ಲವೋ ಎಂಬುದನ್ನು ಹೇಳುತ್ತೇನೆ. ಅದರ ಮೇಲೆ ತಾವು ನಿರ್ಣಯವನ್ನು ಮಾಡಿಕೊಳ್ಳಿ. ಈ ಮಕ್ಕಳ ಹಕ್ಕುಗಳ ಬಗ್ಗೆ ಮಾತನಾಡಬೇಕೆಂದರೆ ಇದೊಂದು ಸಣ್ಣ ವಿಚಾರವಲ್ಲ. ಏಕೆಂದರೆ, ಇವರು ಸಮಗ್ರ ಭಾರತವನ್ನು ಗಟ್ಟಿಯಾಗಿ ಕಟ್ಟಬೇಕಾದರೆ ಇದೊಂದು ಬುನಾದಿ ವಿಚಾರ. ಈ ಬುನಾದಿ ವಿಚಾರವನ್ನು ನಾವು ಮಾತನಾಡಬೇಕೆಂದರೆ ಮೊದಲಿಗೆ ಮಕ್ಕಳ ಪ್ರಮುಖ ಹಕ್ಕುಗಳ ಬಗ್ಗೆ ನಾವು ಹೇಳುವುದಾದರೆ ಬದುಕುವ ಹಕ್ಕು, ರಕ್ಷಣೆ ಹಕ್ಕು, ವಿಕಾಸ ಹೊಂದುವ ಹಕ್ಕು, ಭಾಗವಹಿಸುವ ಹಕ್ಕುಗಳು. ಇದರ ಜೊತೆಗೆ ಮಕ್ಕಳ ಹಕ್ಕುಗಳ ಘೋಷಣೆಗಳು ಯಾವುದೆಂದರೆ, ಇಂದಿನ ಮಕ್ಕಳೇ ನಾಳಿನ ಪ್ರಜೆಗಳು, ಮಕ್ಕಳು ಸ್ವರ್ಗದ ಕೀಲಿಕೈ, ಮಕ್ಕಳು ಚಿಟ್ಟೆಯಂತೆ ಹಾರಲು ಬಿಡಿ, ಮಕ್ಕಳು ಅಮೂಲ್ಯ ಸಂಪನ್ಮೂಲ ಅವರನ್ನು ಸಂರಕ್ಷಿಸಿ, ಮಗುವಿನ ಬಾಲ್ಯ ಕಲಿಕೆಗಾಗಿ, ಆದರೆ ಗಳಿಕೆಗಾಗಿ ಅಲ್ಲ ಎಂದು ಘೋಷ ವಾಕ್ಯಗಳಿವೆ. ಪ್ರತಿಯೊಂದನ್ನು ತೆಗೆದುಕೊಂಡರೂ ಕೂಡ ಇಲ್ಲಿ ಐದು ಇಲಾಖೆಗಳಿರಬೇಕಾಗುತ್ತದೆ. ರಕ್ಷಣೆ ವಿಚಾರಕ್ಕೆ ಬಂದರೆ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಇರಬೇಕಾಗುತ್ತದೆ, ಮಕ್ಕಳ ಇಲಾಖೆಗೆ ತೆಗೆದುಕೊಂಡರೆ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಇರಬೇಕಾಗುತ್ತದೆ, ವಸತಿ ನಿಲಯಗಳ ಬಗ್ಗೆ ತೆಗೆದುಕೊಂಡರೆ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಇಲಾಖೆ ಇರಬೇಕಾಗುತ್ತದೆ. ಅದೇ ರೀತಿ juvenile ವಿಚಾರ ತೆಗೆದುಕೊಂಡರೆ ಇವರು ಬರಬೇಕಾಗುತ್ತದೆ. ಬಾಲ ಕಾರ್ಮಿಕರು ಎಲ್ಲಿ ಕೆಲಸ ಮಾಡುತ್ತಿದ್ದಾರೆ ಎಂದಾಗ ಕಾರ್ಮಿಕ ಇಲಾಖೆ ಇರಬೇಕಾಗುತ್ತದೆ. ಹೀಗಾಗಿ ಇದೊಂದು ಐದಾರು ಇಲಾಖೆಗಳಿಗೆ ಸಂಬಂಧಿಸಿದ ವಿಚಾರವಾಗಿರುವುದರಿಂದ ಇದು ಖಂಡಿತವಾಗಿಯೂ

ತುಂಬಾ ಒಳ್ಳೆಯ ವಿಚಾರವಾಗಿದೆ. ನಮಗೆ ಇದರ ಬಗ್ಗೆ ಮಾತನಾಡಬೇಕೆಂದರೆ ಒಬ್ಬೊಬ್ಬರು ಕನಿಷ್ಠ ಒಂದೊಂದು ಗಂಟೆ ಮಾತನಾಡಬಹುದು. ಆಮೇಲೆ ಪ್ರತ್ಯೇಕವಾಗಿ ಮಾತನಾಡಬಹುದು. ವಿಭಿನ್ನವಾಗಿ ಮಾತನಾಡಬಹುದು.

**(ಮುಂದು)**

**(998) 18/12/2024 10:00 ಎಸ್‌ಪಿಆರ್/ಕೆಎಸ್** **(ವೈಸ್ ಛೇರ್ಮನ್‌ರವರ ಉಪಸ್ಥಿತಿ)**

**ಶ್ರೀ ಡಿ.ಟಿ.ಶ್ರೀನಿವಾಸ್(ಡಿ.ಟಿ.ಎಸ್.)(ಮುಂದು):**

ಈಗಿನ ಪರಿಸ್ಥಿತಿಗನುಗುಣವಾಗಿ ಮಾತನಾಡುವುದಾದರೆ, ಸಾಮಾಜಿಕ ಜಾಲತಾಣದಿಂದಾಗಿ ಆಗುತ್ತಿರುವ ವ್ಯತ್ಯಾಸಗಳು, ... ಸರ್ಕಾರ ಕೈಗೊಂಡಿರುವ ಕ್ರಮಗಳ ಬಗ್ಗೆ ಮಾತನಾಡುವುದಾದರೆ, ಅಪೌಷ್ಟಿಕ ಮಕ್ಕಳಿಗಾಗಿ ಅವರನ್ನು ಕಾಪಾಡುವುದಕ್ಕೋಸ್ಕರ ಇವತ್ತಿನ ದಿವಸ ಸರ್ಕಾರವು ಯಾವ ಯಾವ ಮಟ್ಟದಲ್ಲಿ ಮಕ್ಕಳಿಗೆ ಯಾವ ಯಾವ ಸೌಲಭ್ಯಗಳನ್ನು ನೀಡುತ್ತಿದೆ ಎಂದರೆ, ಮಕ್ಕಳ ಶಿಕ್ಷಣದ ಹಕ್ಕನ್ನು ಕಾಪಾಡುವುದಕ್ಕಾಗಿ ಶಿಕ್ಷಣ ಹಕ್ಕು ಕಾಯ್ದೆಯನ್ನು ಜಾರಿಗೊಳಿಸಿದ್ದಾರೆ. ಇದರಿಂದಾಗಿ ಪ್ರತಿಯೊಂದು ಮಕ್ಕಳಿಗೂ ಕಲಿಕೆ ಕಡ್ಡಾಯ ಎನ್ನುವಂತಾಗಿದೆ. ಶಾಲೆಯಿಂದ ಹೊರಗುಳಿಯುವ ಮಕ್ಕಳಿಗಾಗಿ ಬಿಸಿಯೂಟದ ಯೋಜನೆಯನ್ನು ಜಾರಿಗೊಳಿಸಿದರು. ಈ ರೀತಿಯಾಗಿರುವ ಎಲ್ಲಾ ವಿಚಾರಗಳ ಬಗ್ಗೆ ನಾವು ಚರ್ಚೆ ಮಾಡಿದಾಗ ಖಂಡಿತವಾಗಿಯೂ ಸಹ ಇದು ಒಳ್ಳೆಯ ವಿಚಾರವಾಗುತ್ತದೆ. ಈ ವಿಚಾರದ ಬಗ್ಗೆ ನಾವು ಇವತ್ತು ಕೆಲವೊಂದು ಅಂಕಿ ಅಂಶಗಳ ಬಗ್ಗೆ ಕೇಳುವುದಾದರೆ ಯಾರನ್ನು ಕೇಳುವುದು ಎನ್ನುವುದೇ ನಮ್ಮ ಮುಂದಿರುವ ಪ್ರಶ್ನೆಯಾಗಿಬಿಡುತ್ತದೆ. ನಮ್ಮ ರಾಜ್ಯದಲ್ಲಿ ಒಟ್ಟು ಬಾಲಾಪರಾಧಿಗಳ ಕೇಂದ್ರಗಳು ಎಷ್ಟಿವೆ, ಅಲ್ಲಿರುವ ....,

**ವೈಸ್ ಛೇರ್ಮನ್:-** ಶ್ರೀ ಶ್ರೀನಿವಾಸ್‌ರವರೇ, ನೀವು ಮಾತನಾಡುವುದಾದರೆ, ಆಮೇಲೆ ಮಾತನಾಡಿ. ಏಕೆಂದರೆ ಈಗಾಗಲೇ ಶ್ರೀಮತಿ ಭಾರತಿ ಶೆಟ್ಟಿಯವರು ಹೇಳಿದ್ದಾರೆ.

**ಶ್ರೀಮತಿ ಭಾರತಿ ಶೆಟ್ಟಿ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೆ, ಸದಸ್ಯರು ಮಾತನಾಡುತ್ತಿರುವ ವಿಷಯಕ್ಕೆ ಸಂಬಂಧಪಟ್ಟಂತೆ, ಹಲವಾರು ಇಲಾಖೆಗಳು ಸಂಬಂಧಪಡುತ್ತವೆ. ಇದಕ್ಕೆ ಸಂಬಂಧಪಟ್ಟಂತೆ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಇದೆ. ಮಕ್ಕಳಿಗೆ ಸಂಬಂಧಿತ ಕಾನೂನು ಮತ್ತು ಶಿಕ್ಷಣ ಆಗಿರಬಹುದು. ಎಲ್ಲವೂ ಸಹ ಅದರೊಳಗೆ ಬರುತ್ತದೆ. ಕಡೆಯ ಪಕ್ಷ ಪ್ರಸ್ತುತ ಸದನಕ್ಕೆ ಇಲಾಖೆಯ ಮಂತ್ರಿಗಳನ್ನು ಕರೆಸಿದರೆ, ನಮಗೆ ಮಾತನಾಡಲು ಸುಲಭವಾಗುತ್ತದೆ. ಅವರು ನೀಡುವ ಹೇಳಿಕೆಯಿಂದ ಒಳ್ಳೆಯದಾಗುತ್ತದೆ. ಸಚಿವರು ಇಲ್ಲದಿದ್ದರೆ, ಇದನ್ನು ನಾವು ಯಾರಿಗೆ ಅಂತ ಮತ್ತು ಏನಂತ ಹೇಳಬೇಕು. ಕೇವಲ ದಾಖಲೆಗಾಗಿ ನಾನು ಮಾತನಾಡಬೇಕೆ?

**ವೈಸ್ ಛೇರ್ಮನ್:-** ನೀವು ಮಾತನಾಡುವುದನ್ನೆಲ್ಲವನ್ನೂ ಇಲಾಖೆಯ ಅಧಿಕಾರಿಗಳು ಬರೆದುಕೊಳ್ಳುತ್ತಾರೆ.

**ಶ್ರೀಮತಿ ಭಾರತಿ ಶೆಟ್ಟಿ:-** ಮಾನ್ಯ ಸಭಾಪತಿಯವರೆ, ಸದಸ್ಯರು ಸಭಾನಾಯಕರು ಇದರ ಬಗ್ಗೆ ಹೇಳಬೇಕು. ಸದಸ್ಯರಾದ ಶ್ರೀ ಶ್ರೀನಿವಾಸ್ ರವರು ಮಾತನಾಡುವುದಾದರೆ ಮಾತನಾಡಲಿ.

**ಶ್ರೀ ಎನ್.ಎಸ್.ಬೋಸರಾಜು (ಸಭಾನಾಯಕರು):-** ಮಾನ್ಯ ಸಭಾಪತಿಯವರೆ, ಸದಸ್ಯರು ಮಾತನಾಡುವುದನ್ನು ಮುಂದುವರೆಸಬೇಕೇ ಅಥವಾ ಮುಂದೂಡಬೇಕೇ ಎನ್ನುವುದಕ್ಕೆ ಪೀಠ ಏನು ತೀರ್ಮಾನ ನೀಡುತ್ತದೆಯೋ, ಅದಕ್ಕೆ ನಾವು ಬದ್ಧರಿದ್ದೇವೆ.

**ಶ್ರೀಮತಿ ಭಾರತಿ ಶೆಟ್ಟಿ:-** ಮಾನ್ಯ ಸಭಾಪತಿಯವರೆ, ಸಭಾನಾಯಕರು ಈ ಬಗ್ಗೆ ಸಲಹೆಯನ್ನು ನೀಡಬೇಕು.

**ಶ್ರೀ ಎನ್.ಎಸ್.ಬೋಸರಾಜು:-** ಮಾನ್ಯ ಸಭಾಪತಿಯವರೆ, ಸದಸ್ಯರು ಮಾತನಾಡುವುದನ್ನು ಇಲಾಖಾಧಿಕಾರಿಗಳು ನೋಟ್ ಮಾಡಿಕೊಳ್ಳುತ್ತಿದ್ದಾರೆ. ನಾಳೆಯ ದಿನ ಈ ಬಗ್ಗೆ ಸಚಿವರಿಂದ ಕೂಲಂಕಷವಾದ ವಿವರಣೆಯನ್ನು ಕೊಡಿಸಲಾಗುತ್ತದೆ.

**ಶ್ರೀಮತಿ ಭಾರತಿ ಶೆಟ್ಟಿ:-** ಮಾನ್ಯ ಸಭಾಪತಿಯವರೆ, ಸಭಾನಾಯಕರು ಈ ಬಗ್ಗೆ ಸಲಹೆಯನ್ನು ನೀಡಬೇಕು.

**ವೈಸ್ ಛೇರ್ಮನ್:-** ಶ್ರೀಮತಿ ಭಾರತಿ ಶೆಟ್ಟಿಯವರೆ, ತಾವು ಮಾತನಾಡುವುದಾದರೆ ಮಾತನಾಡಿ.

**ಶ್ರೀಮತಿ ಭಾರತಿ ಶೆಟ್ಟಿ:-** ಮಾನ್ಯ ಸಭಾಪತಿಯವರೆ, ಅನ್ನ ಆಗಿದೆಯೋ ಇಲ್ಲವೋ ಎಂದು ಪರೀಕ್ಷಿಸಲು ಒಂದು ಅಗಳು ಸಾಕು. ಒಬ್ಬೊಬ್ಬರಿಗೆ ಮಾತನಾಡಲು ಒಂದು ತಾಸುಗಳಷ್ಟು ಕಾಲಾವಕಾಶ ಬೇಕಿಲ್ಲ. ಸದಸ್ಯರು ಸರಿಯಾಗಿ ಮಾತನಾಡಿದರೆ, ಸರಿಯಾದ ವಿಷಯವನ್ನೇ ಹೇಳಬಹುದು. ಮಕ್ಕಳು ಎಲ್ಲರಿಗೂ ಹೊಸಬರಲ್ಲ; ಅದೇ ರೀತಿಯಾಗಿ ಈ ವಿಷಯ ಎಲ್ಲರಿಗೂ ಹೊಸದಲ್ಲ. ವಿಷಯದ ಬಗ್ಗೆ ಬೆಳಕನ್ನು ಚೆಲ್ಲಿ ಅದಕ್ಕೆ ನ್ಯಾಯವನ್ನು ಒದಗಿಸುವ ಕೆಲಸ ಈ ಸದನದಲ್ಲಾಗಬೇಕು.

**ಶ್ರೀ ಡಿ.ಟಿ.ಶ್ರೀನಿವಾಸ್(ಡಿ.ಟಿ.ಎಸ್.):-** ಮಾನ್ಯ ಸಭಾಪತಿಯವರೆ, ಒಟ್ಟು ಅನ್ನ ಆಗಿದೆಯೋ ಇಲ್ಲವೋ ಎಂದು ಪರೀಕ್ಷಿಸಲು ಒಂದು ಕಾಳನ್ನು ಮುಟ್ಟಿದರೆ ಸಾಕು ಎಂಬುದಾಗಿ ಸದಸ್ಯರು ಈಗಷ್ಟೇ ಹೇಳಿದರು. ಆದರೆ ಎಲ್ಲಾ ವಿಚಾರಗಳನ್ನು ನಾವೇ ಮಾತನಾಡಿದರೆ, ಬೇರೆಯವರಿಗೆ ಏನು ವಿಚಾರವಿರುತ್ತದೆ ಎನ್ನುವುದು ಇಲ್ಲಿನ ಮೂಲ ಪ್ರಶ್ನೆಯಾಗಿದೆ. ಸದಸ್ಯರುಗಳು ಮಾತನಾಡಿರುವುದನ್ನೇ ನಾನು ಪುನರಾವರ್ತಿಸಬೇಕೇ ಅಥವಾ ಬೇರೆ ವಿಷಯವನ್ನು ಮಾತನಾಡಬೇಕೇ?

**ವೈಸ್ ಛೇರ್ಮನ್:-** ಬೇರೆ ವಿಷಯವನ್ನು ಮಾತನಾಡಿ.

**ಶ್ರೀ ಡಿ.ಟಿ.ಶ್ರೀನಿವಾಸ್(ಡಿ.ಟಿ.ಎಸ್.):-** ಮಾನ್ಯ ಸಭಾಪತಿಯವರೆ, ಇವತ್ತಿನ ದಿವಸ ನಮ್ಮ ರಾಜ್ಯದಲ್ಲಿ ಇಲ್ಲಿಯವರೆಗೆ ಎಷ್ಟು ಬಾಲಾಪರಾಧ ಕೇಂದ್ರಗಳಿವೆ ಮತ್ತು ಅದರಲ್ಲಿ ಎಷ್ಟು ಬಾಲಾಪರಾಧಿಗಳಿದ್ದಾರೆ; ಇವರ ಮೇಲೆ ಯಾವ ರೀತಿಯ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ ಅಥವಾ ಇವರುಗಳನ್ನು ಪುನರ್ವಸತಿ ಕೇಂದ್ರಗಳಿಗೆ ಕಳುಹಿಸಿ ಇವರಿಗೆ ವಿದ್ಯಾಭ್ಯಾಸವನ್ನು ಕೊಡಿಸುವ ವ್ಯವಸ್ಥೆಗಳಾಗುತ್ತಿವೆಯೇ ಎನ್ನುವ ಅಂಶಗಳು ಇವತ್ತಿನ ದಿವಸ ಸಮಗ್ರವಾಗಿ ಚರ್ಚಿಸಬೇಕಾದ ವಿಚಾರಗಳಾಗಿವೆ. ಇವತ್ತಿನ ದಿವಸ ಮಕ್ಕಳ ಸಂಖ್ಯೆಯು ಕ್ಷೀಣಿಸುತ್ತಿದೆ; ಆದರೆ ಇದು ಏಕೆ ಎನ್ನುವ ವಿಚಾರವನ್ನು ತೆಗೆದುಕೊಂಡಾಗ..., ಈ ಹಿಂದೆ ಕುಟುಂಬಗಳು 2-3 ಮಕ್ಕಳನ್ನು ಬಯಸುವ ಸಂದರ್ಭವಿತ್ತು. ಆದರೆ, ಇವತ್ತಿನ ದಿವಸ ಕುಟುಂಬಗಳು ಕೇವಲ ಒಂದು ಮಗು ಸಾಕು ಎನ್ನುವ ಪರಿಸ್ಥಿತಿಗೆ ಬಂದಿವೆ. ಹೀಗಾಗಿ ಸಹಜವಾಗಿಯೇ ಮಕ್ಕಳ ಸಂಖ್ಯೆ ಇಳಿಮುಖವಾಗುತ್ತಿದೆ ಎಂದು ನಾವು ಹೇಳಬಹುದು.

ಇವತ್ತಿನ ದಿವಸ ಪೊಲೀಸ್ ಇಲಾಖೆಯಲ್ಲಿ ಎಷ್ಟು ಪ್ರಕರಣಗಳು ದಾಖಲಾಗುತ್ತಿವೆ; ಆ ಪೈಕಿ ಮಕ್ಕಳ ಸಂಖ್ಯೆ ಎಷ್ಟು ಇದೆ ಎನ್ನುವ ಮಾಹಿತಿಯನ್ನು ತೆಗೆದುಕೊಂಡಾಗ ನಾವು ಇದರಲ್ಲಿ ಸುಧಾರಣೆಗಳನ್ನು ತಂದಾಗ ಖಂಡಿತವಾಗಿಯೂ ಸಹ ಮಕ್ಕಳಲ್ಲಿ ಸುಧಾರಣೆ ಸಾಧ್ಯವಾಗುತ್ತದೆ. ಇದು ಮೂಲ ಪ್ರಶ್ನೆಯಾಗಿದೆ. ಎಲ್ಲೆಲ್ಲಿ ಮಕ್ಕಳ ಮೇಲೆ ದೌರ್ಜನ್ಯ, ಅನ್ಯಾಯಗಳಾಗುತ್ತಿವೆ ಅದರಲ್ಲಿ ಸುಧಾರಣೆ ತರುವುದಕ್ಕೆ ನಾವು ನಮ್ಮ ರಾಜ್ಯದಲ್ಲಿ ಏನೇನು ಕ್ರಮಗಳನ್ನು ಕೈಗೊಳ್ಳುತ್ತಿದ್ದೇವೆ ಎನ್ನುವುದನ್ನೂ ಸಹ ಗಮನಿಸಬೇಕಾಗುತ್ತದೆ. ಇವತ್ತಿನ ದಿವಸ ಶಾಲೆಯನ್ನು ತೊರೆಯುವ ಮಕ್ಕಳ ಸಂಖ್ಯೆಯೂ ಸಹ ಕ್ಷೀಣಿಸುತ್ತಿದೆ. ನೂರಕ್ಕೆ ನೂರರಷ್ಟು ಎಲ್ಲಾ ಮಕ್ಕಳಿಗೆ ಶಿಕ್ಷಣವನ್ನು ನೀಡುವ ಬಗ್ಗೆ ಸರ್ಕಾರವು ಯಾವ ರೀತಿಯ ಕ್ರಮಗಳನ್ನು ತೆಗೆದುಕೊಂಡಿದೆ? ಇಂದಿನ ದಿನ ಸಾಮಾಜಿಕ ಜಾಲ ತಾಣ ಹಾಗೂ ಅಂಡ್ರ್ಯಾಡ್ಡ್ ಮೊಬೈಲ್ ಫೋನ್‌ಗಳಿಂದಾಗಿ ಯಾವ ರೀತಿಯಾದ ಪರಿಣಾಮಗಳುಂಟಾಗುತ್ತಿವೆ ಎನ್ನುವುದನ್ನು ಗಮನಿಸಬೇಕು. ಇವುಗಳೆಲ್ಲವೂ ಒಂದೇ ವಿಚಾರವಾಗಿದ್ದು, ಈ ಬಗ್ಗೆ ನಾವು ಒಂದು ಗಂಟೆಗಳ ಕಾಲ ಎಷ್ಟೇ ಮಾತನಾಡಿದರೂ ಸಹ ....,

**(ಈ ಹಂತದಲ್ಲಿ ಸಭಾಪತಿಯವರು ಪೀಠವನ್ನು ಅಲಂಕರಿಸಿದರು)**

**ಶ್ರೀಮತಿ ಭಾರತಿ ಶೆಟ್ಟಿ:-** ಮಾನ್ಯ ಸಭಾಪತಿಯವರೆ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಸಚಿವರನ್ನು ಇಲ್ಲಿಗೆ ಕರೆಸಿ. ನಾವು ಯಾರಿಗೆ ಮಾತನಾಡಬೇಕು?

**ಶ್ರೀ ಎನ್.ಎಸ್.ಬೋಸರಾಜು:-** ಮಾನ್ಯ ಸಭಾಪತಿಯವರೆ, ಈಗಾಗಲೇ ಸಚಿವರಿಗೆ ತಿಳಿಸಲಾಗಿದೆ. ಆದರೆ, ಈಗ ಅವರು ಸದನಕ್ಕೆ ಬರುವ ಪರಿಸ್ಥಿತಿಯಲ್ಲಿ ಇಲ್ಲ. ಇಲಾಖೆಯವರು ಈ ಬಗ್ಗೆ ನೋಟ್ ಮಾಡಿಕೊಳ್ಳುತ್ತಿದ್ದಾರೆ. ನಾಳೆಯ ದಿನ ಅವರಿಗೆ ಸಚಿವರಿಂದ ಉತ್ತರವನ್ನು ಕೊಡಿಸುತ್ತೇನೆಂದು ಹೇಳಿದ್ದೇನೆ.

**ಶ್ರೀಮತಿ ಭಾರತಿ ಶೆಟ್ಟಿ:-** ಮಾನ್ಯ ಸಭಾಪತಿಯವರೆ, ನೈಜವಾಗಿ ಈಗ ಸದನದಲ್ಲಿ 7 ಸಚಿವರು ಉಪಸ್ಥಿತರಿರಬೇಕು. ಸರ್ಕಾರಕ್ಕೆ ಜವಾಬ್ದಾರಿ ಇಲ್ಲವೇ?

**ಸಭಾಪತಿಯವರು:-** ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರ ಗಂಟಲಿಗೆ ಏನೋ ಸಮಸ್ಯೆಯಾಗಿ, ಬಹಳ ನೋವಾಗಿದೆ ಎಂದು ತಿಳಿಸಿ, ನನ್ನ ಅನುಮತಿಯನ್ನು ಪಡೆದುಕೊಂಡಿದ್ದಾರೆ.

**ಶ್ರೀಮತಿ ಭಾರತಿ ಶೆಟ್ಟಿ:-** ಮಾನ್ಯ ಸಭಾಪತಿಯವರೆ, ಬೇರೆ ಸಚಿವರಾದರೂ ಸಹ ಉಪಸ್ಥಿತರಿರಬೇಕಲ್ಲವೇ? ನನಗೂ ಸಹ ಗಂಟಲಿನ ಸಮಸ್ಯೆಯಾಗಿದೆ.

**ಸಭಾಪತಿಯವರು:-** ಶ್ರೀ ಶ್ರೀನಿವಾಸ ರವರೇ ನೀವು ಮುಂದುವರೆಸಿ. ನಂತರದಲ್ಲಿ ಶ್ರೀಮತಿ ಭಾರತಿ ಶೆಟ್ಟಿಯವರು ಮಾತನಾಡಲಿ.

**ಶ್ರೀಮತಿ ಭಾರತಿ ಶೆಟ್ಟಿ:-** ಮಾನ್ಯ ಸಭಾಪತಿಯವರೆ, ನನಗೆ ನಾಳೆಯ ದಿನ ಅವಕಾಶವನ್ನು ನೀಡಿ.

**ಶ್ರೀ ಡಿ.ಟಿ.ಶ್ರೀನಿವಾಸ್:-** ಮಾನ್ಯ ಸಭಾಪತಿಯವರೆ, ಮಕ್ಕಳ ಹಕ್ಕುಗಳಲ್ಲಿ ಪ್ರಮುಖವಾಗಿ ....,

**ಸಭಾಪತಿಯವರು:-** ಶ್ರೀ ಶ್ರೀನಿವಾಸ್ ರವರೇ ಒಂದು ನಿಮಿಷ. ವಿರೋಧ ಪಕ್ಷದ ನಾಯಕರೇ, ನಿಮ್ಮ ಸದಸ್ಯರುಗಳು ಎಲ್ಲಾ ಕಾಯ್ದೆಗಳ ಬಗ್ಗೆ ಮಾತನಾಡುತ್ತಾರೆ. ಆದರೆ ಅಜೆಂಡಾದಲ್ಲಿ ಕಾರ್ಯಕಲಾಪಗಳ

ವಿವರಗಳಿರುತ್ತವೆ. ಮೊನ್ನೆಯ ದಿನ ನೀವು ಅಜೆಂಡಾದ ರೀತ್ಯ ಕಾರ್ಯಕಲಾಪಗಳನ್ನು ತೆಗೆದುಕೊಳ್ಳಬೇಡಿ ಎಂಬುದಾಗಿ ತಿಳಿಸಿದ್ದೀರಿ. ಅಜೆಂಡಾದ ರೀತ್ಯ ಸದನವನ್ನು ನಡೆಸಬೇಕೆಂದರೆ, ವಿರೋಧ ಪಕ್ಷದ ಸದಸ್ಯರುಗಳು ಸದನದಲ್ಲಿ ಉಪಸ್ಥಿತರಿರುವುದಿಲ್ಲವೆಂದಾದರೆ, ನಾವು ಏನು ಮಾಡಬೇಕು? ಸದನ ನಡೆಯುವ ಸಮಯದಲ್ಲಿ ಅವರುಗಳು ಉಪಸ್ಥಿತರಿರಬೇಕಲ್ಲವೇ? ಈ ಬಗ್ಗೆ ನೀವಾದರೂ ಸಹ ಅವರುಗಳಿಗೆ ತಿಳಿಸಬೇಕಲ್ಲವೇ?

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೆ, ನಾನೂ ಸಹ ಹೇಳಿದ್ದೇನೆ.

**ಶ್ರೀಮತಿ ಭಾರತಿ ಶೆಟ್ಟಿ:-** ಮಾನ್ಯ ಸಭಾಪತಿಯವರೆ, ಅಲ್ಲಿ ಸಚಿವರುಗಳಿಲ್ಲ ಎಂದು ಎಲ್ಲರೂ ಎದ್ದು ಹೋಗಿದ್ದಾರೆ.

**ಸಭಾಪತಿಯವರು:-** ಸಚಿವರುಗಳು ಸದನದಲ್ಲಿ ಉಪಸ್ಥಿತರಿರಲಿ ಅಥವಾ ಬಿಡಲಿ; ಸರ್ಕಾರದ ಜವಾಬ್ದಾರಿ ಇರುತ್ತದೆ. ಹೀಗಾಗಿ ಸದಸ್ಯರುಗಳು ಸದನದಲ್ಲಿ ಉಪಸ್ಥಿತರಿರಬೇಕು. ಸಚಿವರು ಉಪಸ್ಥಿತರಿಲ್ಲ ಎಂದು ಹೇಳಿದರೆ ಹೇಗೆ? ಶ್ರೀ ಶ್ರೀನಿವಾಸ್ ರವರೇ ನೀವು ಮುಂದುವರೆಸಿ.

**ಶ್ರೀ ಡಿ.ಟಿ.ಶ್ರೀನಿವಾಸ್(ಡಿ.ಟಿ.ಎಸ್.):-** ಮಾನ್ಯ ಸಭಾಪತಿಯವರೆ, ಇವತ್ತಿನ ದಿವಸ ನಾವು ಮಕ್ಕಳ ಹಕ್ಕಿನ ರಕ್ಷಣೆಯ ಬಗ್ಗೆ ಚರ್ಚೆಯನ್ನು ತೆಗೆದುಕೊಂಡಾಗ, ಕೆಲವೊಂದು ವಾರ್ಡನ್‌ಗಳು ಮಕ್ಕಳನ್ನು ಎಷ್ಟು ಕಠಿಣವಾಗಿ ಮತ್ತು ಕ್ರೂರವಾಗಿ ಹೊಡೆಯುತ್ತಿರುವುದನ್ನು ನಾವು ಸಾಮಾಜಿಕ ಜಾಲತಾಣ, ಟಿ.ವಿ.ಮಾಧ್ಯಮಗಳಲ್ಲಿ ನೋಡಿರುತ್ತೇವೆ. ಈ ರೀತಿಯ ವಿಚಾರಗಳು ಬಂದಾಗ ಖಂಡಿತವಾಗಿಯೂ ಸಹ ನಾವು ಯಾವ ರೀತಿಯಾಗಿ ಮಕ್ಕಳ ರಕ್ಷಣೆ ಮಾಡಬೇಕು ಎನ್ನುವುದು ನಮ್ಮ ಮುಂದಿರುವ ದೊಡ್ಡ ಸವಾಲಾಗಿದೆ. ಶ್ರೀ ಐವನ್ ಡಿ'ಸೋಜಾ ರವರು ಮಾತನಾಡುವ ಸಂದರ್ಭದಲ್ಲಿ ಆಗಿಂದಾಗ್ಗೆ ನಮ್ಮ ರಾಜ್ಯದಲ್ಲಿ ಮಕ್ಕಳ ಸಂಖ್ಯೆಯು ಕುಸಿಯುತ್ತಿರುವ ಬಗ್ಗೆ ಪ್ರಸ್ತಾಪಿಸಿದರು. ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣದಿಂದ ವಂಚಿತರಾದವರು ಎಷ್ಟು ಜನ ಎನ್ನುವುದೂ ಸಹ ಚರ್ಚೆಯ ವಿಷಯವಾಗಿದೆ. ಸರ್ಕಾರದ ವತಿಯಿಂದ ಮಕ್ಕಳನ್ನು ರಕ್ಷಿಸುವ ನಿಟ್ಟಿನಲ್ಲಿ ಕೈಗೊಂಡ ಕ್ರಮಗಳಲ್ಲಿ..., ಶಿಕ್ಷಣದ ಹಕ್ಕನ್ನು ರಕ್ಷಿಸಬೇಕೆನ್ನುವ ಕಾರಣಕ್ಕಾಗಿ ಶಿಕ್ಷಣ ಹಕ್ಕು ಕಾಯ್ದೆಯನ್ನು ಜಾರಿಗೊಳಿಸಿದ್ದಾರೆ. ಇದರಡಿ ಪ್ರತಿಯೊಬ್ಬರು ಮಕ್ಕಳೂ ಸಹ ವಿದ್ಯಾಭ್ಯಾಸವನ್ನು ಪಡೆದುಕೊಳ್ಳಬೇಕೆಂದು ಇದನ್ನು ಕಡ್ಡಾಯಗೊಳಿಸಿದ್ದಾರೆ. ಇವತ್ತಿನ ದಿವಸ ಮಕ್ಕಳಲ್ಲಿ ಪೌಷ್ಟಿಕತೆಯ ಕೊರತೆ ಇರುವುದರಿಂದ, ಅಪೌಷ್ಟಿಕತೆಯನ್ನು ಹೋಗಲಾಡಿಸಲು ಶಾಲಾ ಮಕ್ಕಳಿಗೆ ಮೊಟ್ಟೆ, ಹಾಲು, ಚಿಕ್ಕಿ ಇತ್ಯಾದಿಗಳನ್ನು ನೀಡಲಾಗುತ್ತಿದೆ. ಇದು ಸರ್ಕಾರ ಕೈಗೊಂಡಿರುವ ಕ್ರಮಗಳಲ್ಲಿ ಒಂದಾಗಿದೆ. ಉಚಿತ ಶಿಕ್ಷಣಕ್ಕಾಗಿ ಸರ್ಕಾರವು ಸಂಪೂರ್ಣವಾಗಿ 1 ರಿಂದ 10 ನೇ ತರಗತಿವರೆಗೆ ಎಲ್ಲಾ ರೀತಿಯ ಸವಲತ್ತು ಹಾಗೂ ಸೌಲಭ್ಯಗಳನ್ನು ಕಲ್ಪಿಸುತ್ತಿದೆ. ಈ ವಿಚಾರದಲ್ಲಿ ಸರ್ಕಾರವು ಕೆಲವೊಂದು ಕ್ರಮಗಳನ್ನು ಕೈಗೊಳ್ಳುತ್ತಿದ್ದರೂ ನೂರಕ್ಕೆ ನೂರರಷ್ಟು ಸಾಕ್ಷರತೆಯನ್ನು ಹೊಂದಲು ವಿಫಲರಾಗಿದ್ದು, ಇದು ಮುಖ್ಯವಾದ ವಿಚಾರವಾಗಿದೆ. ಏಕೆಂದರೆ, ಸರ್ಕಾರವು ಎಲ್ಲಾ ರೀತಿಯ ಕ್ರಮಗಳನ್ನು ಕೈಗೊಂಡಿದ್ದರೂ ಸಹ.., ಶಾಲೆಯಿಂದ ಹೊರಗುಳಿದ ವಿದ್ಯಾರ್ಥಿಗಳನ್ನು ಗುರ್ತಿಸಿ, ಅವರಿಗೆ ಬಿಸಿಯೂಟದ ವ್ಯವಸ್ಥೆಯನ್ನು ಮಾಡುವಂತಹ ಕಾರ್ಯಕ್ರಮಗಳನ್ನು ರೂಪಿಸಿದ್ದರೂ ಸಹ ಸಂಪೂರ್ಣ ಸಾಕ್ಷರತೆಯನ್ನು ಹೊಂದಲು ನಾವು ವಿಫಲರಾಗಿದ್ದೇವೆ. ಬಾಲ ಕಾರ್ಮಿಕರನ್ನೂ ಸಹ

ಗುರ್ತಿಸಲಾಗುತ್ತಿದೆ. ಆದರೆ ಇದು ಏತಕ್ಕಾಗಿ ಎಂದು ನಾನು ಪ್ರಶ್ನಿಸಬಯಸುತ್ತೇನೆ. ಇವುಗಳೂ ಸಹ ನಮ್ಮ ಮುಂದಿರುವ ಸವಾಲುಗಳಲ್ಲಿ ಒಂದಾಗಿದೆ. ಸರ್ಕಾರ ಕೈಗೊಂಡ ಕ್ರಮಗಳು ನಿಖರವಾಗಿಲ್ಲ. ಮಕ್ಕಳ ಹಕ್ಕುಗಳು ಮತ್ತು ಇವುಗಳ ಬಗ್ಗೆ ಇರುವ ಘೋಷವಾಕ್ಯಗಳ ಬಗ್ಗೆ ನಾನು ಈಗಾಗಲೇ ಪ್ರಸ್ತಾಪಿಸಿದ್ದೇನೆ. "ಮಗು ಬಾಲ್ಯದ ಕಲಿಕೆಗಾಗಿಯೇ ಹೊರತು ಸಂಪಾದನೆಗಾಗಿ ಅಲ್ಲ" ಎನ್ನುವುದು ಇದು ಬಾಲ ಕಾರ್ಮಿಕರಿಗೆ ಸಂಬಂಧಪಟ್ಟ ವಿಚಾರವಾಗಿದೆ. "ಮಕ್ಕಳು ಅತ್ಯಮೂಲ್ಯ ಸಂಪನ್ಮೂಲ, ಸಂರಕ್ಷಿಸಿ" ಎನ್ನುವ ಘೋಷವಾಕ್ಯವು ಮುಂದಿನ ಭವಿಷ್ಯದಲ್ಲಿ ಇವರು ನಮ್ಮ ರಾಷ್ಟ್ರವನ್ನು ಕಟ್ಟುವ ಬುನಾದಿಯಾಗಿರುವುದರಿಂದ ಇವರನ್ನು ಸಂರಕ್ಷಿಸಬೇಕು ಎನ್ನುವುದಾಗಿರುತ್ತದೆ.

**(ಮುಂದು)**

(999) 18.12.2024 10.10 ಬಿಕೆಪಿ/ಕೆಎಸ್ (ಸಭಾಪತಿಯವರ ಉಪಸ್ಥಿತಿ)

**ಶ್ರೀ ಡಿ.ಟಿ.ಶ್ರೀನಿವಾಸ್(ಮುಂದು):**

ಮಕ್ಕಳನ್ನು ಚಿಟ್ಟೆಯಂತೆ ಹಾರಲು ಬಿಡಿ ಎಂದು ಹೇಳುತ್ತಾರೆ. ಅಂದರೆ, ಮಕ್ಕಳನಲ್ಲಿರುವ ಪ್ರತಿಭೆಯನ್ನು ಗುರುತಿಸಿ, ಅದಕ್ಕೆ ಪೂರಕವಾದ ವಾತಾವರಣವನ್ನು ಕಲ್ಪಸಿಕೊಟ್ಟು ಶಿಕ್ಷಣವನ್ನು ಕೊಡುವುದೇ ಆಗಿರುತ್ತದೆ. ಅದೇ ನಿಟ್ಟಿನಲ್ಲಿ ಮಕ್ಕಳು ಸ್ವರ್ಗದ ಕೀಲಿಕೈ ಎನ್ನುತ್ತಾರೆ. ಖಂಡಿತ ಪ್ರತಿಯೊಂದು ಕುಟುಂಬದಲ್ಲಿ ಮಕ್ಕಳು ತಂದೆ ತಾಯಿಗಳು ಜೊತೆ ಹೇಗೆ ಇರುತ್ತಾರೆಂದರೆ, ಅವರಿಗೆ ಸ್ವರ್ಗವೇ ಸಿಕ್ಕಿದಂತಾಗುತ್ತದೆ. ಇಂದಿನ ಮಕ್ಕಳೇ ನಾಳಿನ ಪ್ರಜೆಗಳು. ಹಾಗಾಗಿ, ಈ ಘೋಷವಾಕ್ಯಗಳನ್ನು ತೆಗೆದುಕೊಂಡು ನಾವು ಚರ್ಚೆಗೆ ಇಟ್ಟಂತ ಸಂದರ್ಭದಲ್ಲಿ, ಈ ಕಾಲಗಟ್ಟದಲ್ಲೂ ಸಹ ಪೂರ್ಣ ಪ್ರಮಾಣದಲ್ಲಿ ಯಾವುದೇ ಸರ್ಕಾರಗಳು ಬಂದು ಹೋಗಿರಬಹುದು, ಆದರೆ ಮಕ್ಕಳ ಮೇಲಿನ ದೌರ್ಜನ್ಯವನ್ನು ತಡೆಗಟ್ಟುವುದರಲ್ಲಿ ವಿಫಲರಾಗಿದ್ದೇವೆ. ಜೊತೆ-ಜೊತೆಯಲ್ಲಿ 100 ಕ್ಕೆ 100 ರಷ್ಟು ಸಾಕ್ಷರತೆಯನ್ನು ಕೊಡುವುದರಲ್ಲಿ ನಾವು ವಿಫಲರಾಗಿದ್ದೇವೆ. ಆ ನಿಟ್ಟಿನಲ್ಲಿ ಇನ್ನೂ ಹತ್ತು ಹಲವಾರು ಕ್ರಮಗಳನ್ನು ಕೈಗೊಂಡರೆ, ಮುಂದಕ್ಕೆ ಖಂಡಿತವಾಗಿ ಈ ರೀತಿಯ ಚರ್ಚೆಯನ್ನು ಇಟ್ಟಂತಹ ಸಂದರ್ಭದಲ್ಲಿ ಪೂರ್ವಕವಾದಂತಹ ಅಂಶಗಳು, ಪರ ಹಾಗೂ ವಿರೋಧ ಎರಡು ಚರ್ಚೆಯಾಗಿ, ವಿರೋಧದಡಿಯಲ್ಲಿ ಅದನ್ನು ಪರ ಮಾಡುವುದಕ್ಕೆ ಸರ್ಕಾರವು ಯಾವ ರೀತಿ ಕ್ರಮಕೈಗೊಳ್ಳುತ್ತದೆ ಎಂಬುದು ಚರ್ಚೆಯ ಮುಖಾಂತರ ಹೊರಹೊಮ್ಮಿದಾಗ ಮಾತ್ರ ಖಂಡಿತ ಒಂದು ಒಳ್ಳೆಯ ದಿಕ್ಕು ಸಿಕ್ಕಿದಂತಾಗುತ್ತದೆ ಎಂದು ಹೇಳುತ್ತಾ, ನನಗೆ ಮಾತನಾಡಲೂ ಇನ್ನೂ ಹತ್ತು ಹಲವಾರು ವಿಚಾರಗಳಿವೆ, ಆದರೆ, ಇನ್ನೂ ಸಾಕಷ್ಟು ಸದಸ್ಯರುಗಳು ಮಾತನಾಡ ಬೇಕಾಗಿರುವುದರಿಂದ, ನನಗೆ ಮಾತನಾಡಲೂ ಅವಕಾಶಕೊಟ್ಟಂತಹ ಮಾನ್ಯ ಸಭಾಪತಿಯವರಿಗೆ ವಂದಿಸುತ್ತಾ ನನ್ನ ಮಾತನ್ನು ಮುಗಿಸುತ್ತೇನೆ. ಧನ್ಯವಾದಗಳು.

**ಶ್ರೀಮತಿ ಭಾರತಿ ಶೆಟ್ಟಿ (ನಾಮನಿರ್ದೇಶಿತರು):-** ಮಾನ್ಯ ಸಭಾಪತಿಯವರೆ, ಅಧಿಕಾರಿಗಳ ಗ್ಯಾಲರಿಯಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಅಧಿಕಾರಿಗಳು ಸಹ ಯಾರು ಇಲ್ಲವೆಂದು ಕಾಣುತ್ತದೆ.

**ಸಭಾಪತಿಯವರು:-** ಇಲಾಖೆಯ ಅಧಿಕಾರಿಗಳು ಗ್ಯಾಲರಿಯಲ್ಲಿ ಇದ್ದಾರೆ.

**ಶ್ರೀಮತಿ ಭಾರತಿ ಶೆಟ್ಟಿ :-** ಮಾನ್ಯ ಸಭಾಪತಿಯವರೆ, ಮಕ್ಕಳ ಹುಕ್ಕಗಳ ಬಗ್ಗೆ ಮಾತನಾಡಲೂ ಯಾರು ಇಲ್ಲ, ನಾಳೆ ಮಾತನಾಡಲು ಅವಕಾಶ ಕೊಡಿ.

**ಸಭಾಪತಿಯವರು:-** ಆದರೆ ನಾಳೆ ಅವಸರ ಮಾಡಬೇಡಿ. ಈಗ quorum ನ ಕೊರತೆಯಾಗುವ ಲಕ್ಷಣವಿದೆ.

**ಶ್ರೀಮತಿ ಭಾರತಿ ಶೆಟ್ಟಿ:-** ಮಾನ್ಯ ಸಭಾಪತಿಯವರೆ, ಆಗಲಿ.

**ಸಭಾಪತಿಯವರು:-** ಈಗ ಸಭೆಯು ಮುಕ್ತಾಯವಾಗಿ ನಾಳೆ ಬೆಳಗ್ಗೆ 10 ಗಂಟೆಗೆ ಸೇರುವುದು.

**(ಸದನವು ರಾತ್ರಿ 10 ಗಂಟೆ 12 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ದಿನಾಂಕ 19ನೇ ಡಿಸೆಂಬರ್ ಮಾಹೆ 2024ರ ಗುರುವಾರದಂದು ಬೆಳಗ್ಗೆ 10-00 ಗಂಟೆಗೆ ಸೇರಲು ನಿಶ್ಚಯಿಸಿತು)**